ಮಿಥ್ಯೆಯ ಮಣಿಸುವ ಮಾನವ

ಬ್ಯಾರೋಸ್ ಡನ್‌ಹ್ಯಾಮ್

ಕನ್ನಡಕ್ಕೆ : ಡಾ॥ ಜಿ. ರಾಮಕೃಷ್ಣ



ಮಾ-ಲೆ ಪ್ರಕಾಶನ, ಬೆಂಗಳೂರು - 560 085

ಬ್ಯಾರೋಸ್ ಡನ್‌ಹ್ಯಾಮ್

ಮಿಥ್ಯೆಯ ಮಣಿಸುವ ಮಾನವ

ಕನ್ನಡಕ್ಕೆ
ಡಾ॥ ಜಿ. ರಾಮಕೃಷ್ಣ

ಮಾ–ಲೆ ಪ್ರಕಾಶನ, ಬೆಂಗಳೂರು – 560 085

MITHYEYA MANISUVA MAANAVA
by Dr. G. Ramakrishna being an adapted version in Kannada of "Man Against Myth" by Barrows Dunham, first published in 1947. Also published by the National Book Trust, India, in 2007

First Edition : 2017 **Pages : 212** **Price : ₹ 160**

Paper used for this book : 70 gsm NS Maplitho 18.6 Kgs (1/8 Demy Size)

ಮೊದಲ ಮುದ್ರಣ : 2017

ಪ್ರತಿಗಳ ಸಂಖ್ಯೆ : 500

ಬೆಲೆ : **₹ 160**

ಮುಖಪುಟ : ಮಾಧುರಿ ರಾವ್ ಮತ್ತು ನವಕರ್ನಾಟಕ ವಿನ್ಯಾಸ

ಪ್ರಕಾಶಕರು
ಮಾ–ಲೆ ಪ್ರಕಾಶನ
2–ಎಫ್, ಪವನ ಪರಂಜ್ಯೋತಿ ವಸತಿ ಸಮುಚ್ಚಯ
22/1, 4ನೇ ಅಡ್ಡ ರಸ್ತೆ, ಕಾವೇರಿನಗರ
ಬನಶಂಕರಿ 3ನೇ ಹಂತ, ಬೆಂಗಳೂರು – 560 085
ದೂರವಾಣಿ : 080–26793951
ಈ–ಮೇಲ್ : dgrkrishna@gmail.com

ಮುದ್ರಕರು
ಶೋಭಾ ಪ್ರಿಂಟರ್ಸ್, ಬೆಂಗಳೂರು–560 021

ಅಧಿಕೃತ ಮಾರಾಟಗಾರರು
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು–560 001, ಫೋನ್ : 080–22161900/01
E-mail : navakarnataka@gmail.com

ಓದುಗರೊಂದಿಗೆ ...

ಸೆಪ್ಟೆಂಬರ್ 1994ರಲ್ಲಿ ಅಮೆರಿಕಾದ ಫಿಲಡೆಲ್ಫಿಯಾಕ್ಕೆ ಹೋಗಿದ್ದಾಗ ಸ್ನೇಹಿತ ಶ್ರೀ. ನಟರಾಜ ಅವರು ತಾವು ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದ ವಿಲನೋವ ವಿಶ್ವವಿದ್ಯಾನಿಲಯಕ್ಕೆ ಕರೆದುಕೊಂಡು ಹೋಗಿದ್ದರು. ಹಿಂದಿರುಗುವಾಗ ಹಾದಿಯಲ್ಲಿ ಕುತೂಹಲ ಕೆರಳಿಸುವ ಪ್ರದೇಶವೊಂದರ ಹೆಸರು ನೋಡಿದೆ. ನಾವು ನಗರದ 'ಬಾಲಾ ಕಿನ್ವಿದ್' ಎಂಬ ಭಾಗದಲ್ಲಿದ್ದೆವು. ತಕ್ಷಣ ಬ್ಯಾರೋಸ್ ಡನ್‌ಹ್ಯಾಂ ನೆನಪಿಗೆ ಬಂದರು. 'ಹೀರೋಸ್ ಅಂಡ್ ಹೆರೆಟಿಕ್ಸ್' ಎಂಬ ಅವರ ಪುಸ್ತಕದಲ್ಲಿ ತಮ್ಮ ನಿವಾಸ ಈ ಬಾಲಾ ಕಿನ್ವಿದ್‌ನಲ್ಲಿದೆ ಎಂದು ನಮೂದಿಸಿದ್ದರು. ಆ ಗ್ರಂಥವಲ್ಲದೆ ಅವರ ಬೇರೆ ಕೆಲವು ಗ್ರಂಥಗಳೂ ನನಗೆ ಪರಿಚಿತವಾಗಿದ್ದವು. ಮ್ಯಾನ್ ಎಗೆನ್ಸ್ಟ್ ಮಿತ್, ಎ ಜಯಂಟ್ ಇನ್ ಚೇನ್ಸ್, ಥಿಂಕರ್ಸ್ ಅಂಡ್ ಟ್ರೆಷರರ್ಸ್, ಮುಂತಾದ ಅವರ ಎಲ್ಲ ಪುಸ್ತಕಗಳಲ್ಲೂ 'ಬಾಲಾ ಕಿನ್‌ವಿದ್' ಕಾಣಿಸಿಕೊಂಡಿದೆ. ಮೇಲೆ ಹೇಳಿದ ಮೂರು ಪುಸ್ತಕಗಳ ಪೈಕಿ ಮೂರನೆಯದನ್ನು ಪ್ರೊಫೆಸರ್ ಎಚ್. ಕೆ. ರಾಮಚಂದ್ರ ಮೂರ್ತಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ ಮತ್ತು ಮಾ – ಲೆ ಪ್ರಕಾಶನ ಅದನ್ನು 2011ರಲ್ಲಿ ಪ್ರಕಟಿಸಿದ್ದಿತು. ಡನ್‌ಹ್ಯಾಮ್ ಅವರ ಎಲ್ಲ ಪುಸ್ತಕಗಳನ್ನೂ ನಾನು ಬಹುವಾಗಿ ಇಷ್ಟಪಟ್ಟಿದ್ದೆ. ಅವುಗಳ ಶೈಲಿ ಬಹಳ ಆಕರ್ಷಕವಾಗಿದೆ ಮತ್ತು ಅವರು ಪ್ರತಿಪಾದಿಸುವ ವಿಚಾರಗಳಂತೂ ಅತ್ಯಂತ ಪ್ರಸ್ತುತವಾದುವು ಮತ್ತು ವಿದ್ವತ್ಪೂರ್ಣವಾದುವು. ಈ ಮೇಧಾವಿ ತತ್ವಶಾಸ್ತ್ರಜ್ಞರನ್ನು ಕಾಣಬೇಕೆಂದು ತೀರ್ಮಾನಿಸಿ ದೂರವಾಣಿ ಡೈರೆಕ್ಟರಿಯಲ್ಲಿ ಅವರ ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಪತ್ತೆಮಾಡಿಕೊಂಡೆ. ಫೋನಿನಲ್ಲಿ ಮಾತನಾಡಿ 'ನಾನು ಭಾರತದವನು, ನನ್ನೂರು ಬೆಂಗಳೂರು, ನಾನು ನಿಮ್ಮನ್ನು ಭೇಟಿಯಾಗಬೇಕೆಂದು ಆಶಿಸುತ್ತೇನೆ' ಎಂದು ಹೇಳಿದೆ. 'ನಾನು ನಿನಗೆ ಹೇಗೆ ಗೊತ್ತು?' ಎಂದು ಸಹ ಕೇಳದೆ 'ಯಾವಾಗ ಬೇಕಾದರೂ ಭೇಟಿಯಾಗಲು ಸ್ವಾಗತವಿದೆ' ಎಂದರು. ಅವರ ಮಾತಿನ ಸೊಗಸು ಕೂಡಲೆ ಅವರ ಆತ್ಮೀಯತೆಯನ್ನು ಸಹಜವಾಗಿ ಪ್ರಕಟಿಸಿತ್ತು. ಎಷ್ಟೋ ದಿನಗಳ ಸ್ನೇಹಿತರು ನಾವು ಎಂಬಂತೆ ಲೋಕಾಭಿರಾಮವಾಗಿ ನಾಲ್ಕಾರು ವಿಷಯಗಳನ್ನು ಹಂಚಿ ಕೊಂಡೆವು. ಆಗ ಅವರ ವಯಸ್ಸು 89. (ಅವರ 90ನೆಯ ವಯಸ್ಸಿನಲ್ಲಿ ಅವರು ಕಾಲವಾದರು). ದೂರವಾಣಿಯಲ್ಲಿ ನನ್ನ ವಯಸ್ಸಿನವರೇ ಏನೋ ಎನಿಸುವಂತಿತ್ತು. ವಿಳಾಸ ನೀಡಿ ನಾನಿದ್ದ ಜಾಗದಿಂದ ಅವರ ಮನೆಗೆ ಹೋಗುವ ದಾರಿಯನ್ನು ವಿವರವಾಗಿ ತಿಳಿಸಿದರು. ನನ್ನ ಸ್ನೇಹಿತ ರೇಮಂಡ್‌ಗೆ ಹೇಳಿದಾಗ ತಾನು ಅವರಲ್ಲಿಗೆ ನನ್ನನ್ನು ಕರೆದುಕೊಂಡು ಹೋಗಲು ಖುಷಿಪಡುವುದಾಗಿ ಹೇಳಿದ. ಆತ ಮತ್ತು ನನ್ನ ಇನ್ನೊಬ್ಬ ಸ್ನೇಹಿತ ಡಾ॥ ವಿಜಯೇಂದ್ರ ಪ್ರತಾಪ್ (ನನಗೆ ಸುಮ್ಮನೆ 'ವಿಜಯ್') ಸೇರಿ ಮೂರೂ ಜನ ಒಂದು ಮಧ್ಯಾಹ್ನ ಅವರಲ್ಲಿಗೆ ಹೋದೆವು. ಮನೆ ತಲುಪುವ ಮುನ್ನ ರೇಮಂಡ್ ಅವರಿಗೆ

ಮಾತನಾಡಿ ಇನ್ನು ಕೆಲವೇ ನಿಮಿಷಗಳಲ್ಲಿ ಅವರಲ್ಲಿಗೆ ಮೂರು ಮಂದಿ ಬರುವುದಾಗಿ ತಿಳಿಸಿದ. 'ಮುದಿಯುವಕ' ಮನೆಯ ಮುಂದೆಯೇ ನಿಂತಿದ್ದು ನಮ್ಮನ್ನು ಹಸನ್ಮುಖದಿಂದ ಸ್ವಾಗತಿಸಿದರು. ಸುಮಾರು ಮೂರು ಗಂಟೆಗಳ ಕಾಲ ಅವರೊಡನೆ ಕಳೆದ ಸಮಯವು ಅಮೆರಿಕಾದ ಅನುಭವಗಳಲ್ಲಿ ಅತಿ ಪ್ರಶಸ್ತವಾದ ಘಳಿಗೆಗಳು ಎಂದು ಇಂದಿಗೂ ಸ್ಮರಿಸಿಕೊಳ್ಳುತ್ತೇನೆ. ತನ್ನೂರಿನಲ್ಲಿ ಇಂಥವರೊಬ್ಬರಿದ್ದಾರೆಂದು ತನಗೆ ತಿಳಿದೇ ಇರಲಿಲ್ಲವೆಂದು ರೇಮಂಡ್ ಪುಲಕಿತನಾದ. ತತ್ವಶಾಸ್ತ್ರಜ್ಞರು ಹೀಗೆಲ್ಲಾ ಏನೇನೋ ಮಾತನಾಡುತ್ತಾ ಹರಟುತ್ತಾರೆಯೇ ಎಂದು ವಿಜಯ್ ಮೂಕನಾಗಿಬಿಟ್ಟ.

ಬ್ಯಾರೋಸ್ ಡನ್‌ಹ್ಯಾಮ್ ಪ್ರಸಿದ್ಧವಾದ ಪ್ರಖರ ಮಾರ್ಕ್ಸ್‌ವಾದಿ ಚಿಂತಕ, ಪ್ರಾಧ್ಯಾಪಕ ಮತ್ತು ಬರಹಗಾರ. ಅಂತೆಯೇ ಆತ ಇತಿಹಾಸತಜ್ಞ, ಅಮೆರಿಕಾದ ಕಮ್ಯುನಿಸ್ಟ್ ಪಕ್ಷದ ಸದಸ್ಯ ಮತ್ತು ಸಕ್ರಿಯ ಕಾರ್ಯಕರ್ತ. ಪಿಎಚ್.ಡಿ. ಪ್ರಿನ್ಸ್‌ಟನ್‌ನಲ್ಲಿ ಪಡೆದಿದ್ದರು. ಟೆಂಪಲ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾಗ 1950ರ ದಶಕದ "ಮೆಕಾರ್ತಿ ತಲೆಬೇಟೆ"ಗೆ ಅವರು ಬಲಿಯಾಗಬೇಕಾಗಿ ಬಂತು. ಕೆಲಸ ಕಳೆದುಕೊಂಡರು. 28 ವರ್ಷಗಳ ನಂತರ ಮತ್ತೆ ಅಲ್ಲೇ ಅವರು ನೇಮಕಗೊಂಡರು. ಪತ್ನಿ ಆಲಿಸ್ ಅಲ್ಲೇ ಲಲಿತಕಲೆಗಳ ಇತಿಹಾಸದ ಪ್ರಾಧ್ಯಾಪಕಿ. ಆಕೆಯನ್ನೂ ಕೆಲಸದಿಂದ ವಜಾ ಮಾಡಿದ್ದರು, ಆದರೆ ಮತ್ತೆ ನೇಮಕ ಮಾಡಿಕೊಂಡರು. ಇಬ್ಬರೂ ಕಮ್ಯುನಿಸ್ಟ್ ಕಾರ್ಯಕರ್ತರಾಗಿದ್ದುದು ಈ ಎಲ್ಲ ರಂಪಾಟಕ್ಕೆ ಕಾರಣ. "ಅಮೆರಿಕಾ ವಿರೋಧಿ ಚಟುವಟಿಕೆಗಳ ತನಿಖಾ ಸಮಿತಿ"ಯೆದುರು ಡನ್‌ಹ್ಯಾಮ್ ಸಾಕ್ಷ್ಯ ನೀಡಲು ನಿರಾಕರಿಸಿದರು. ಸಂವಿಧಾನದ ಮೊದಲ ತಿದ್ದುಪಡಿಯ ಪ್ರಕಾರ ಯಾವ ಸಾಕ್ಷ್ಯವನ್ನೂ ನೀಡದಿರುವುದು ತಮ್ಮ ಹಕ್ಕು ಎಂದು ಅವರು ಪಟ್ಟು ಹಿಡಿದರು ಮತ್ತು ತಮ್ಮ ಸ್ವತಂತ್ರ ಚಿಂತನೆಗಳನ್ನು ಮೊಟಕುಗೊಳಿಸಲು ಯಾರಿಗೂ ಅವಕಾಶ ನೀಡುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿಕೆ ಕೊಟ್ಟರು. ಆ ವೇಳೆಗಾಗಲೆ ಅವರ ಪುಸ್ತಕ 'ಮ್ಯಾನ್ ಎಗೆನ್‌ಸ್ಟ್ ಮಿತ್' ಪ್ರಕಟಗೊಂಡಿತ್ತು. ಅದಕ್ಕೆ ಖ್ಯಾತ ಶಿಕ್ಷಣತಜ್ಞ ಜಾನ್ ಡ್ಯೂಯಿ ಬ್ಲರ್ಬ್ ಬರೆದಿದ್ದರು. ಪುಸ್ತಕವು ಆಲ್ಬರ್ಟ್ ಐನ್‌ಸ್ಟೈನರ ಗಮನಕ್ಕೆ ಬಂದು ಅವರು ಅದನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಪುಸ್ತಕದಲ್ಲಿ ಅವರು ಬೇಕಾದಷ್ಟು ಟಿಪ್ಪಣಿಗಳನ್ನು ಮಾಡಿಕೊಂಡಿದ್ದರು ಕೂಡ. ಅದನ್ನು ತಿಳಿದ ಡನ್‌ಹ್ಯಾಮ್ ಬೇರೊಂದು ಪ್ರತಿಯನ್ನು ಅವರಿಗೆ ನೀಡಿ ಐನ್‌ಸ್ಟೈನರ ಟಿಪ್ಪಣಿಗಳಿದ್ದ ಪ್ರತಿಯನ್ನು ತಮ್ಮಲ್ಲಿ ಇರಿಸಿಕೊಂಡಿದ್ದರು. ಅದನ್ನು ನನಗೆ ತೋರಿಸಿ ಆತ ಹೇಳಿದರು: "ಇದನ್ನು ಯಾರಿಗೂ ಕೊಡುವುದಿಲ್ಲ; ನೋಡಲು ಮಾತ್ರ ನಿನಗೆ ತೋರಿಸುತ್ತಿದ್ದೇನೆ. ಆದರೆ ಪುಸ್ತಕದ ಮೊದಲ ಮುದ್ರಣದ ಪ್ರತಿಯೊಂದನ್ನು ನಿನಗೆ ಕೊಡುತ್ತೇನೆ." ಅವರು ಕೊಟ್ಟ ಪ್ರತಿ ಈಗಲೂ ನನ್ನ ಬಳಿ ಇದೆ.

ಕೆಲಸ ಕಳೆದುಕೊಂಡಿದ್ದ ಡನ್‌ಹ್ಯಾಮ್ ಒಮ್ಮೆ ಫೋರ್ಡ್ ಫೌಂಡೇಶನ್‌ನ ಒಂದು ಶಿಷ್ಯವೇತನಕ್ಕೆ ಅರ್ಜಿ ಹಾಕಿಕೊಂಡಿದ್ದರು. ಅದಕ್ಕೆ ಮೂರು ಹಿರಿಯ ಪ್ರಾಧ್ಯಾಪಕರ ಹೆಸರುಗಳನ್ನು ಕೊಡುವ ಅಗತ್ಯವಿತ್ತು. ಫೌಂಡೇಶನ್‌ನವರು ಅವರಿಗೆ ಪತ್ರಗಳನ್ನು ಬರೆದು ಅಭ್ಯರ್ಥಿಯ ಬಗ್ಗೆ ಅಭಿಪ್ರಾಯಗಳನ್ನು ಪಡೆಯುವುದಿತ್ತು. ಬರ್ಟ್ರಂಡ್ ರಸೆಲ್ ಮತ್ತು ಜಾನ್ ಡ್ಯೂಯಿ ಇಬ್ಬರೂ ಅವರಿಗೆ ಅಧ್ಯಾಪಕರಾಗಿದ್ದವರು. ಆದರೆ ಇಬ್ಬರೂ ತಮ್ಮ ಹೆಸರುಗಳನ್ನು ಬರೆಯಕೂಡದೆಂದು ಹೇಳಿಬಿಟ್ಟರು. "ನಾನು ಈ ದೇಶದವನಲ್ಲ" ಎಂದು

ರಸೆಲ್ ಕಳಚಿಕೊಂಡರು ಮತ್ತು ಡನ್‌ಹ್ಯಾಮ್‌ನ ಪ್ರಸ್ತುತ ಪುಸ್ತಕಕ್ಕೆ ಬ್ಲರ್ಬ್ ಬರೆದಿದ್ದ ಡ್ಯೂಯಿ ಯಾವ ಕಾರಣವನ್ನೂ ಕೊಡಲಿಲ್ಲ. ಬದಲಾಗಿ ಪುಸ್ತಕದ ಪ್ರಕಾಶಕರಿಗೆ ಪತ್ರ ಬರೆದು ಮುಂದಿನ ಮುದ್ರಣದಲ್ಲಿ ತಮ್ಮ ಬ್ಲರ್ಬ್‌ಅನ್ನು ಬಳಸಕೂಡದೆಂಬ ಸೂಚನೆ ನೀಡಿದರು! ಡನ್‌ಹ್ಯಾಮ್ ಪ್ರಿನ್ಸ್‌ಟನ್‌ಗೆ ತೆರಳಿ ಐನ್‌ಸ್ಟೈನರನ್ನು ಭೇಟಿಯಾಗಲು ಸಿದ್ಧರಾದರು. ಮನೆಯಲ್ಲೇ ಇದ್ದ ಐನ್‌ಸ್ಟೈನ್ ಮಹಡಿಯ ಮೇಲೆ ತಮ್ಮ ಓದುವ ಕೊಠಡಿಯಲ್ಲಿ ಏನೋ ಕೆಲಸದಲ್ಲಿ ನಿರತರಾಗಿದ್ದರು. ಭೇಟಿಗಾಗಿ ಬಂದಿದ್ದ ವ್ಯಕ್ತಿಯ ಬಗ್ಗೆ ಅವರ ಕಾರ್ಯದರ್ಶಿ ಹೋಗಿ ತಿಳಿಸಿದರು. ಐನ್‌ಸ್ಟೈನ್ ಮಹಡಿಯ ಮೆಟ್ಟಿಲುಗಳ ಬಳಿ ಬಂದು ನಿಂತರು ಮತ್ತು ಅಲ್ಲಿಂದಲೇ 'ಏನು ಸಮಾಚಾರ?' ಎಂದರು. ವಿಚಾರ ತಿಳಿಸಲಾಗಿ ಅವರೆಂದರು: "ಕ್ಷಮಿಸಿ, ನಾನೀಗ ಸ್ವಲ್ಪ ತುರ್ತು ಕೆಲಸದಲ್ಲಿದ್ದೇನೆ. ಆದರೆ ಶಿಫಾರಸ್ಸಿಗೆ ನನ್ನ ಹೆಸರು ಬೇಕಾದರೆ ಧಾರಾಳವಾಗಿ ಕೊಡಿ, ಏನೂ ಅಡ್ಡಿಯಿಲ್ಲ." ಅಳುಕಿನಿಂದ ಡನ್‌ಹ್ಯಾಮ್ ತಾವಿದ್ದ ಕಡೆಯಿಂದಲೇ ಹೇಳಿದರು: "ಅದೇನೋ ಸರಿ, ಆದರೆ ತಮಗೆ ಗೊತ್ತು ತಾನೆ ನಾನು ಮೆಕಾರ್ತಿ ತಲೆಬೇಟೆಯ ಪ್ರಸಂಗದಲ್ಲಿ ವಿಶ್ವವಿದ್ಯಾಲಯದಿಂದ ಹೊರಹಾಕಲ್ಪಟ್ಟಿದ್ದೇನೆ ಎಂದು? ನಾನದನ್ನು ತಮಗೆ ತಿಳಿಸಬೇಕಾಗಿದೆ." ಐನ್‌ಸ್ಟೈನ್ ಅಲ್ಲೇ ನಿಂತು ಕೈಕೊಡವುತ್ತಾ ಹೇಳಿದರು: "ಅದೆಲ್ಲಾ ಕಟ್ಟಿಕೊಂಡು ನನಗೇನಾಗಬೇಕು? ನಿಮ್ಮನ್ನು ಕುರಿತು ಯಾವಾಗ ಬೇಕಾದರೂ ನನ್ನ ಖಚಿತ ಅಭಿಪ್ರಾಯವನ್ನು ಹೇಳಲು ಯಾವುದೂ ಅಡ್ಡಿ ಬರಬೇಕಾಗಿಲ್ಲ. ಹೋಗಿ, ನನ್ನ ಹೆಸರು ಬರೆದು ಕಳಿಸಿ."

ಇದನ್ನೆಲ್ಲಾ ನಸುನಗುತ್ತಾ ಡನ್‌ಹ್ಯಾಮ್ ವಿವರವಾಗಿ ಹೇಳಿದರು. "ವ್ಯಕ್ತಿಸ್ವಾತಂತ್ರ್ಯವನ್ನು ಯಾವಾಗಲೂ ಎತ್ತಿಹಿಡಿಯಬೇಕೆಂದು ಪ್ರತಿಪಾದಿಸುತ್ತಿದ್ದ ಡ್ಯೂಯಿ ಮತ್ತು ರಸೆಲ್ ಇಬ್ಬರಿಗೂ ಏನು ಅಂಜಿಕೆ ಇತ್ತು? ಆ ಸ್ವಾತಂತ್ರ್ಯವು ಕಮ್ಯುನಿಸ್ಟರಿಗೆ ಇಲ್ಲವೆಂದೇನಾದರೂ ಅವರು ಭಾವಿಸಿದ್ದರೆ?" ಎಂದೆ. "ಅವರಿಬ್ಬರೂ ನನ್ನ ನೆಚ್ಚಿನ ಅಧ್ಯಾಪಕರು. ಅವರ ಬಗ್ಗೆ ಊಹಾಪೋಹ ಮಾಡಲು ನಾನು ಇಚ್ಛಿಸುವುದಿಲ್ಲ. ಐನ್‌ಸ್ಟೈನ್ ಅವರು ನನಗೆ ಉಪಾಧ್ಯಾಯರಾಗಿರಲಿಲ್ಲ, ಅವರ ಬಗ್ಗೆ ನನಗೆ ಅತಿಯಾದ ಆದರವಿತ್ತು ಮತ್ತು ಈಗಲೂ ಇದೆ" ಎಂದಷ್ಟೇ ಹೇಳಿ ಸುಮ್ಮನಾದರು. ಮೆಕಾರ್ತಿ ಯುಗದಲ್ಲಿ ಏನೆಲ್ಲಾ ನಡೆದು ಹೋಯಿತು, ಅಭಿಪ್ರಾಯಗಳ ಅಭಿವ್ಯಕ್ತಿಗೆ ಎಂತೆಂಥವರೆಲ್ಲಾ ಹಿಂದೇಟು ಹಾಕುವ ಸನ್ನಿವೇಶವುಂಟಾಗಿತ್ತು, ಎಂಬುದನ್ನಷ್ಟೆ ನಾವು ನಮ್ಮ ಇಂದಿನ ಸನ್ನಿವೇಶದಲ್ಲಿ ನೆನಪಿನಲ್ಲಿ ಇಡಬೇಕಾದ್ದು ಎಂದು ತೋರುತ್ತದೆ. ಡನ್‌ಹ್ಯಾಮ್‌ರ ಪತ್ನಿ ಪಕ್ಕದಲ್ಲೇ ಕುಳಿತಿದ್ದರು. ನಾನು ಮತ್ತು ನನ್ನಿಬ್ಬರು ಸ್ನೇಹಿತರು ಹತ್ತಿರದಲ್ಲೇ ಎದುರಾಗಿ ಕುಳಿತಿದ್ದೆವು. ಡನ್‌ಹ್ಯಾಮ್ ಹೇಳಿದರು: "ನೋಡಿ, ನಾವಿಬ್ಬರೂ ಅಂದು ಹೀಗೆಯೇ ಕುಳಿತಿದ್ದೆವು. ನಮ್ಮ ಹಿಂದೆ ಇಬ್ಬರು ಪೊಲೀಸರು ನಿಂತಿದ್ದರು. ಯಾವ ಪ್ರಶ್ನೆಗೂ ಉತ್ತರ ನೀಡುವುದಿಲ್ಲವೆಂದು ನಾವಿಬ್ಬರೂ ಹೇಳಿದೆವು. ಅವರು ನಮ್ಮನ್ನು ಕೇಳುತ್ತಿದ್ದುದೇನು ಗೊತ್ತೆ? 'ಹೆಸರುಗಳನ್ನು ಹೇಳಿ. ನೀವು ಯಾರಾರೆಲ್ಲಾ ಜೊತೆಯಾಗಿ ಕೆಲಸ ಮಾಡುತ್ತೀರಿ ಅದಷ್ಟನ್ನು ಹೇಳಿ ಸಾಕು' ಎನ್ನುತ್ತಿದ್ದರು. ನನಗಿನ್ನೂ ಒಂದು ವಿಷಯ ಅರ್ಥವಾಗಿಲ್ಲ. ಮೆಕಾರ್ತಿ ಉಪಟಳದ ಕಾಲದಲ್ಲಿ ವಿಚಾರಣೆಗೆ ಗುರಿಯಾದ ಇತರರು ಏಕೆ ಸಂವಿಧಾನದ ಮೊದಲ ತಿದ್ದುಪಡಿಯಡಿ ಸಾಕ್ಷ್ಯಗಳನ್ನು ನೀಡಲು ನಿರಾಕರಿಸಲಿಲ್ಲ ಎಂದು."

ಇಂತಹ ವಿದ್ವಾಂಸರ "ಮ್ಯಾನ್ ಎಗೆನ್‌ಸ್ಟ್ ಮಿತ್" ಎಂಬ ಪುಸ್ತಕವನ್ನು ಸಂಗ್ರಹವಾಗಿ

ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಲು ಹರ್ಷವೆನಿಸುತ್ತದೆ. ಕನ್ನಡದ ಓದುಗರು ಇದನ್ನು ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ. ಲೇಖಕರು ಅನೇಕ ಸಂಗತಿಗಳನ್ನು ಚರ್ಚಿಸುವಾಗ ಅಮೆರಿಕಾದ ಹಿನ್ನೆಲೆಯನ್ನು ಪ್ರಸ್ತಾಪಿಸುತ್ತಾರೆ. ಆ ಸಂಗತಿಗಳಿಗೆ ಪರ್ಯಾಯವಾಗಿ ನಮ್ಮ ದೇಶದ ವರ್ತಮಾನದ ಇಲ್ಲವೆ ಹಿಂದಿನ ಕೆಲವು ಸಂಗತಿಗಳು ಓದುಗರ ಮನಸ್ಸಿಗೆ ಬರುತ್ತವೆಂದು ನಿರೀಕ್ಷಿಸುತ್ತೇನೆ. ನಿರ್ದಿಷ್ಟ ಸಂಗತಿಗಳಿಗಿಂತಲೂ ಅವನ್ನು ಚಾರಿತ್ರಿಕ ಮತ್ತು ವೈಚಾರಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಹೇಗೆ ಮತ್ತು ಯಾವ ಉದ್ದೇಶದಿಂದ ಎಂಬುದು ಹೆಚ್ಚು ಪ್ರಸ್ತುತ. ಹಾಗೆ ಮಾಡಿದಾಗ ಲೇಖಕರ ಚಿಂತನೆಯನ್ನು ನಮ್ಮ ಸನ್ನಿವೇಶಕ್ಕೆ ಅನ್ವಯಿಸಿಕೊಳ್ಳುವುದು ಮತ್ತು ಸರಿಯಾದ ದಿಕ್ಕಿನಲ್ಲಿ ಕ್ರಿಯಾಶೀಲರಾಗುವುದು ಸಾಧ್ಯ. ಅದರ ಅಗತ್ಯ ಎಷ್ಟಿದೆಯೆಂಬುದನ್ನು ಒತ್ತಿ ಹೇಳಬೇಕಾಗಿಲ್ಲವೆಂದು ಭಾವಿಸುತ್ತೇನೆ. ನಮ್ಮ ದೇಶದ ತತ್ತ್ವಶಾಸ್ತ್ರದ ಪರಿಧಿಯಲ್ಲಿ ಇಲ್ಲಿ ಪ್ರಸ್ತಾಪಕ್ಕೆ ಬಂದಿರುವ ಬಹುತೇಕ ಎಲ್ಲ ವಿಷಯಗಳೂ ಒಂದಲ್ಲ ಒಂದು ರೀತಿಯಲ್ಲಿ ಚರ್ಚೆಗೆ ಒಳಗಾಗಿವೆ. ಅದು ಸಾಹಿತ್ಯದಲ್ಲಿರಬಹುದು, ತತ್ತ್ವಶಾಸ್ತ್ರ ಪ್ರಣಾಳಿಕೆಗಳಲ್ಲಿರಬಹುದು, ದಿನನಿತ್ಯದ ಸಂಭಾಷಣೆಗಳಲ್ಲಿರಬಹುದು, ಪುರಾಣಕತೆಗಳಲ್ಲಿರಬಹುದು, ಭಗವದ್ಗೀತೆಯಲ್ಲಿರಬಹುದು ಇಲ್ಲವೆ ಸಮಕಾಲೀನ ಗ್ರಂಥಗಳಲ್ಲಿರಬಹುದು. ಅವನ್ನು ವೈಚಾರಿಕವಾಗಿ ಮತ್ತು ಐತಿಹಾಸಿಕ ದೃಷ್ಟಿಯಿಂದ ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ವಾಸ್ತವಗಳ ವಿಶ್ಲೇಷಣೆಗೆ ಅನ್ವಯಿಸಿಕೊಳ್ಳುವುದು ಆರೋಗ್ಯಕರವೆನಿಸುತ್ತದೆ. ವೈಜ್ಞಾನಿಕ ಮತ್ತು ತಾರ್ಕಿಕ ಬುದ್ಧಿ ಎಷ್ಟು ಪ್ರಶಸ್ತವೆಂಬುದನ್ನು ಡನ್‌ಹ್ಯಾಮ್ ಪ್ರತಿಯೊಂದು ಚರ್ಚೆಯಲ್ಲೂ ಮನದಟ್ಟು ಮಾಡಿಕೊಡುತ್ತಾರೆ. ಅಂತಹ ಪ್ರಯತ್ನ ನಮ್ಮಲ್ಲಿ ವಿರಳವೆಂದೇನೂ ಇಲ್ಲ. ಕನ್ನಡದಲ್ಲಿ ಪಂಡಿತ ತಾರಾನಾಥ, ಶಿವರಾಮ ಕಾರಂತ, ಕುವೆಂಪು, ಗೌರೀಶ ಕಾಯ್ಕಿಣಿ ಮುಂತಾದವರು ಇದನ್ನು ಸಾಕಷ್ಟು ಸಮಗ್ರವಾಗಿಯೇ ಮಾಡಿದ್ದಾರೆ. ಅವರೆಲ್ಲರ ಗ್ರಂಥಗಳನ್ನು ಓದಿರುವವರೇ ಕೆಲವೇಳೆ ಅಸಂಬದ್ಧವಾಗಿ ಅತ್ಯಂತ ಅಸಂಗತ ಅಭಿಪ್ರಾಯಗಳನ್ನು ಪ್ರಕಟಿಸುತ್ತಾರೆ ಮತ್ತು ತಮ್ಮ ಪೂರ್ವಗ್ರಹಗಳನ್ನು ಅಂತಿಮ ಅಧಿಕಾರಯುತ ತೀರ್ಮಾನಗಳೆಂದು ಬೀಗುತ್ತಾರೆ. 1947–50ರ ವರ್ಷಗಳಲ್ಲಿ ನಾನು ಮಾಗಡಿ ತಾಲ್ಲೂಕಿನ ಕೆಂಪಸಾಗರದ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿ. ಎಲ್ಲ ವಿದ್ಯಾರ್ಥಿಗಳೂ ಹಳ್ಳಿಗಳವರೇ. ಅವರಲ್ಲಿ ಹಲವರು ಅವರವರ ಕುಟುಂಬಗಳಲ್ಲಿ ಮೊದಲ ಪೀಳಿಗೆಯ ಅಕ್ಷರಸ್ಥರು, ವಿದ್ಯಾಭ್ಯಾಸ ಪಡೆಯಬೇಕೆಂಬ ಹಂಬಲ ಉಳ್ಳವರು. ನಮ್ಮ ಮುಖ್ಯೋಪಾಧ್ಯಾಯರು ಮಾಗಡಿ ಬಳಿಯ ತಿರುಮಲೆಯಿಂದ ಬರುತ್ತಿದ್ದರು. ಒಳ್ಳೆಯ ಅಧ್ಯಾಪಕರು, ಆದರೆ ವಿದ್ಯಾರ್ಥಿಗಳನ್ನು ವಿಪರೀತವಾಗಿ ಹಂಗಿಸುತ್ತಿದ್ದರು. ಅವರ ಪಾಠಕ್ಕಿಂತಲೂ ನನಗೆ ಅವರ ಈ ಕುಚೋದ್ಯದ ಮಾತುಗಳೇ ಹೆಚ್ಚು ನೆನಪಿನಲ್ಲಿ ಉಳಿದಿವೆ. ಅವರು ಯಾವಾಗಲೂ ಹೇಳುತ್ತಿದ್ದ ಮಾತು ಇದು: "ನಿಮಗೆ ಯಾಕ್ರೋ ವಿದ್ಯೆ? ಹೋಗಿ ಉಳ್ಳೀಕಜ್ಜಾಯ ತಿಂದುಕೊಂಡಿರಿ." ಬೆಂಗಳೂರು ನಗರದಲ್ಲಿ ಇಂದಿಗೂ ಅಂತಹ ಭಾವನೆಗಳಿರುವವರು ಇದ್ದಾರೆ. ಅಂಥವರಲ್ಲಿ ಒಬ್ಬ ಮಹನೀಯರು ಯಾವಾಗಲೂ ಹೇಳುತ್ತಿರುತ್ತಾರೆ: "ನಮ್ಮ ದೇಶದಲ್ಲಿ ಎಲ್ಲ ಕೆಲಸಗಳಿಗೂ ಯೋಗ್ಯರಿದ್ದಾರೆ, ಆದರೆ ಯಾರು ಯಾವ ಸ್ಥಾನಗಳಲ್ಲಿರಬೇಕೋ ಆ ಸ್ಥಾನಗಳಲ್ಲಿಲ್ಲ; ಅದರಿಂದಲೇ ನಮ್ಮ ಸಮಸ್ಯೆಗಳು ಪರಿಹಾರ ಕಾಣುತ್ತಿಲ್ಲ." ಇದು ಮೀಸಲಾತಿಯ ಬಗೆಗಿನ ಅವರ

ಅಸಮಾಧಾನವೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ. ಅರ್ಹರು, ಬುದ್ಧಿವಂತರು,ಯೋಗ್ಯರು ಎಂದರೆ ಯಾರೆಂಬುದರ ಬಗ್ಗೆ ಓಬೀರಾಯನ ಕಾಲದ ಅನಿಸಿಕೆಗಳು ತುಂಬಿಕೊಂಡಿರುವುದು ವಿರಳವಲ್ಲ. ತತ್ತ್ವಶಾಸ್ತ್ರ ಗ್ರಂಥಗಳಿಂದ ಹಿಡಿದು ಹರಿಕತೆ ದಾಸರವರೆಗೆ ಹಣೆಬರಹ, ಕರ್ಮ ಸಿದ್ಧಾಂತ, ಆಯಾ ವರ್ಣಗಳಿಗೆ ನಿಗದಿತವಾದ ಕಾರ್ಯಗಳು, ವಿದ್ಯೆ ಗಳಿಸಲು ಯಾರು ಅರ್ಹರು, ಯಾರಿಂದಾಗಿ ಸಮಾಜದಲ್ಲಿ ಎಲ್ಲವೂ ಅಸ್ತವ್ಯಸ್ತವಾಗಿದೆ, ಯಾರ ಕೈಯ್ಯಲ್ಲಿ ಅಧಿಕಾರ ವಿದ್ದರೆ ಎಲ್ಲವೂ ಉತ್ತಮವಾಗಿರುತ್ತದೆ, ಎಂಬಿತ್ಯಾದಿ ಪ್ರಶ್ನೆಗಳಿಗೆ ಸಿದ್ಧ ಉತ್ತರಗಳಿವೆ. ಅವನ್ನು ನಿಧಾನವಾಗಿ ತರ್ಕ ಬುದ್ಧಿಯಿಂದ ವಿವೇಚಿಸುವ ಸಹನೆಯೂ ಅವರಿಗಿರುವುದಿಲ್ಲ. ನಮ್ಮ ಪರಂಪರಾಗತವಾದ ಶಾಸ್ತ್ರ ಗ್ರಂಥ 'ಗಳಲ್ಲಿ ಕೆಲವುಗಳಲ್ಲಿಯಾದರೂ ಇಂತಹ ಪ್ರಶ್ನೆಗಳನ್ನೆತ್ತಿ ವಿಮರ್ಶೆ ಮಾಡಿರುವುದುಂಟು. ಅದನ್ನು ತಿಳಿಯುವ ಗೋಜಿಗೆ ಹೋಗದೆ ಹಳಸಿದ ಗಿಳಿಪಾಠ ಒಪ್ಪಿಸುವವರಿಗೆ ತರ್ಕದ ಅವಶ್ಯಕತೆಯೇ ಕಂಡಿಲ್ಲ. ಇದನ್ನು ಏಕೆ ಪ್ರಸ್ತಾಪಿಸಿದ್ದೆಂದರೆ ಡನ್‌ಹ್ಯಾಮ್ ಏನೋ ಯಾರೂ ಹೇಳಿಲ್ಲದಿದ್ದುದನ್ನು ಇಲ್ಲಿ ಸಮರ್ಥವಾಗಿ ನಿರುಪಿಸಿದ್ದಾನೆ ಎಂಬ ತಪ್ಪು ಗ್ರಹಿಕೆ ಬೇಡವೆಂದು ಸೂಚಿಸಲು, ಅಷ್ಟೆ. ಆದರೆ ಆತನ ವಿಧಾನ, ಶುದ್ಧ ತಾರ್ಕಿಕ ಸಾಮಂಜಸ್ಯ, ತಿಳಿ ಹಾಸ್ಯ ಪ್ರಜ್ಞೆ, ಇತಿಹಾಸದ ಘಟನೆಗಳನ್ನು ಅಚ್ಚುಕಟ್ಟಾಗಿ ವ್ಯಾಖ್ಯಾನಿಸುವುದು, ಭಾಷಾ ಪ್ರಭುತ್ವ, ಇವೆಲ್ಲಾ ಒಂದು ರೀತಿಯಲ್ಲಿ ಅನನ್ಯ. ಆ ಕಾರಣದಿಂದಲೇ ಅವರ ಪುಸ್ತಕವನ್ನು ಕನ್ನಡದಲ್ಲಿ ತರಬೇಕೆಂಬ ಇಚ್ಛೆ ಪ್ರಬಲವಾಗಿದ್ದು. ನಮ್ಮ ಸಮಕಾಲೀನ ಪೂರ್ವಗ್ರಹಗಳಿಗೆ ಮತ್ತು ಅವೈಚಾರಿಕ ತೀರ್ಮಾನಗಳಿಗೆ ಯಾವ ಉದ್ವೇಗ ಅಥವಾ ಹಮ್ಮು ಇಲ್ಲದೆ ವಸ್ತುನಿಷ್ಠ ನಿಲುವು ತಾಳಲು ಕಾಲ ಮಿಂಚಿಲ್ಲ. ವರ್ಗದೃಷ್ಟಿಯಿಂದ ಸಮಸ್ಯೆಗಳನ್ನು ವಿಶ್ಲೇಷಿಸಿಕೊಳ್ಳುವುದು ಅಪಥ್ಯವಲ್ಲ, ಬದಲಾಗಿ ಅದು ನಿಷ್ಕೃಷ್ಟವಾದ ತಿಳಿವಳಿಕೆಯನ್ನು ಪಡೆಯಲು ಮೂಲಸಾಧನ. ಅದು ವಾಸ್ತವದ ಗ್ರಹಿಕೆ, ಅಷ್ಟೆ. ಈಗಂತೂ ನಮ್ಮಲ್ಲಿ ಎಡವೂ ಬೇಡ, ಬಲವೂ ಬೇಡ, ಮಧ್ಯಮ ಮಾರ್ಗವೇ ಸರಿ ಎಂದು ಉಚ್ಚರಿಸುವುದು ರೂಢಿಗೆ ಬರುತ್ತಿದೆ. ತರ್ಕಕ್ಕೆ ಎಡ-ಬಲ ಎಂಬ ಆಯ್ಕೆ ಇಲ್ಲ. ಅದಕ್ಕೆ ಕಾರ್ಯ-ಕಾರಣ ಭಾವದ ವಿಚಾರವೇ ಪ್ರಮುಖ. ಬುದ್ಧನು 'ಪ್ರತೀತ್ಯ ಸಮುತ್ಪಾದ' ಸಿದ್ಧಾಂತವನ್ನು ಮಂಡಿಸಿದಾಗ ಅವನು ಎಡ-ಬಲ ಎಂಬ ಭೇದವನ್ನು ತಿಳಿದಿರಲಿಲ್ಲ, ತಿಳಿಯುವ ಅಗತ್ಯವೂ ಇರಲಿಲ್ಲ. ಆದರೆ ಇಂದಿನ ಎಡ-ಬಲಗಳ ವ್ಯವಹಾರದ ದೃಷ್ಟಿಯಿಂದ ನೋಡಿದರೆ ಅವನ ಹೃದಯ ಎಡಕ್ಕೇ ಇತ್ತು. ಶರೀರಶಾಸ್ತ್ರದಲ್ಲಿ ಹೃದಯವನ್ನು ದೇಹದ ಎಡಭಾಗದಲ್ಲಿ ಇರಿಸಿ ದೇಹಾರೋಗ್ಯದ ವಿಚಾರ ಮಾಡಲಾಗುತ್ತದೆ. ಸಮಾಜದ ರೀತಿನೀತಿಗಳಲ್ಲಿಯೂ ಹೃದಯವು ಎಡಕ್ಕಿದ್ದರೆ ಅನಾಹುತವೇನೂ ಆಗದು. ಡನ್‌ಹ್ಯಾಮ್ ಸಮಗ್ರ ದೃಷ್ಟಿ ಮತ್ತು ತರ್ಕ ಇವೆರಡಕ್ಕೆ ಹೆಚ್ಚು ಒತ್ತುಕೊಡುತ್ತಾನೆ. ನಮ್ಮ ಸಮಕಾಲೀನ ಸಾಮಾಜಿಕ ವ್ಯಾಕುಲ ಗಳನ್ನು ಗಮನಿಸಿದರೆ ಜನಸಮುದಾಯವು ಪ್ರಜ್ಞಾಪೂರ್ವಕವಾಗಿ ಮಧ್ಯಪ್ರವೇಶ ಮಾಡಿ ಜನಪರವಾಗಿ ಬದಲಾವಣೆಗಳನ್ನು ತರಲು ಐಕ್ಯತೆಯಿಂದ ಶ್ರಮಿಸಬೇಕಾಗಿರುವುದು ಬಹಳ ಪ್ರಮುಖ ಕಾರ್ಯಕ್ರಮವೆಂದು ಗೋಚರಿಸುತ್ತದೆ. ಅದಕ್ಕೆ ಪ್ರಸ್ತುತ ಗ್ರಂಥದ ಚಿಂತನೆ ಸಹಾಯಕವಾಗಬಲ್ಲದು ಎಂಬ ನಂಬಿಕೆ ನನ್ನದು. ಡನ್‌ಹ್ಯಾಮ್ ಅನುಸರಿಸುವ ವಿಶ್ಲೇಷಣಾ ಮಾರ್ಗ ಸಾರ್ವಕಾಲಿಕವಾದ್ದು ಮತ್ತು ಸಾರ್ವತ್ರಿಕವಾದ್ದು. ಬುದ್ಧನ ಮೊಟ್ಟಮೊದಲ ಪ್ರಮೇಯವು ಡನ್‌ಹ್ಯಾಮ್‌ಗೆ ಸಹ ಮಾನ್ಯವಾದ್ದು. ಏನದು ಪ್ರಮೇಯ?

ಪ್ರಪಂಚದಲ್ಲಿ ದುಃಖವಿದೆ, ದುಃಖಕ್ಕೆ ಕಾರಣಗಳಿವೆ. ಕಾರಣವನ್ನು ಅರಿತು ಅದನ್ನು ನಿರ್ಮೂಲನಗೊಳಿಸಿ, ನೀವು ನಿರೀಕ್ಷಿಸುವ ಫಲವನ್ನು ಪಡೆಯಿರಿ. ಆ ಫಲವೇ ಉದ್ದೇಶಿತ ಕಾರ್ಯ; ಅಂದರೆ ದುಃಖದ ನಿವಾರಣೆ. ಈ ಸತ್ಯವನ್ನು ಡನ್‌ಹ್ಯಾಮ್ ವಿಶ್ವದ ತತ್ತ್ವಶಾಸ್ತ್ರ ಮೀಮಾಂಸೆಗಳ ಹಿನ್ನೆಲೆಯಲ್ಲಿ ಮತ್ತು ಸಮಕಾಲೀನ ಇತಿಹಾಸದ ಘಟನೆಗಳ ಸಂದರ್ಭದಲ್ಲಿ ಚರ್ಚಿಸಿದ್ದಾನೆ. ನಮ್ಮ ಸಂದರ್ಭಕ್ಕೆ ಅನುವಾಗುವಂತೆ ಅದನ್ನು ಬಳಸಿಕೊಳ್ಳಲು ಅಡ್ಡಿಯಿಲ್ಲ ಮತ್ತು ನಮ್ಮ ಶಾಸ್ತ್ರಗ್ರಂಥಗಳ ಮೂಸೆಯಿಂದ ಅವನ್ನು ವ್ಯಾಖ್ಯಾನಿಸಿಕೊಳ್ಳಲು ನಾವು ಸ್ವತಂತ್ರರು. ಈ ನಿಟ್ಟಿನಲ್ಲಿ ಪ್ರಸ್ತುತ ಸಂಗ್ರಹಾನುವಾದವನ್ನು ಪರಿಶೀಲಿಸಿ ಸ್ವಾಗತಿಸಬೇಕೆಂದು ಓದುಗರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಬ್ಯಾರೋಸ್ ಡನ್‌ಹ್ಯಾಮ್‌ನ "ಹೀರೋಸ್ ಅಂಡ್ ಹೆರೆಟಿಕ್ಸ್" ಎಂಬ ಪುಸ್ತಕವನ್ನು ಮೊದಲಿಗೆ ನನಗೆ ಪರಿಚಯಿಸಿದವರು ನನ್ನ ಹಿರಿಯ ಸಂಗಾತಿ ದೇವಿಪ್ರಸಾದ ಚಟ್ಟೋಪಾಧ್ಯಾಯ ಅವರು. ಆಗ ನಾವಿಬ್ಬರೂ ಎರಡು ವಾರಗಳ ಕಾಲ ವಿಶಾಖಪಟ್ಟಣದಲ್ಲಿ ಆಂಧ್ರ ವಿಶ್ವವಿದ್ಯಾನಿಲಯದಲ್ಲಿ ಒಟ್ಟಿಗಿದ್ದೆವು. ಡನ್‌ಹ್ಯಾಮ್ ಅವರನ್ನು ನಾನು ಭೇಟಿಯಾದ್ದು ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ. ಆಗ ಅವರಿಗೆ ಮಾತುಕೊಟ್ಟಿದ್ದೆ, "ಮ್ಯಾನ್ ಎಗೆನ್ಸ್ಟ್ ಮಿತ್" ಪುಸ್ತಕವನ್ನು ಕನ್ನಡದ ಓದುಗರಿಗೆ ಪರಿಚಯಿಸುವ ಪ್ರಯತ್ನ ಮಾಡುತ್ತೇನೆ, ಎಂದು. ತಡವಾಗಿಯಾದರೂ ಅದನ್ನು ಪೂರೈಸಿರುವುದು ಸಂತಸವನ್ನು ತಂದಿದೆ. ಓದುಗಮಿತ್ರರಿಗೆ ಪುಸ್ತಕವು ಹಿಡಿಸಿದರೆ ಧನ್ಯ. ಅವರ ಸಲಹೆ ಮತ್ತು ವಿಮರ್ಶೆಗಳನ್ನು ಎಂದಿನಂತೆ ಸ್ವಾಗತಿಸುತ್ತೇನೆ.

ಈ ಪುಸ್ತಕದಲ್ಲಿ ಹನ್ನೊಂದು ಅಧ್ಯಾಯಗಳಿವೆ. ಸಾಮಾನ್ಯವಾಗಿ ಪ್ರಚಲಿತವಾಗಿರುವ ಹನ್ನೊಂದು ಸುಳ್ಳು ಭಾವನೆಗಳನ್ನು ಅವು ವಿಶದವಾಗಿ ಚರ್ಚಿಸಿವೆ. ಆ ಪೈಕಿ ಆರು 'ಕೆಂಬಾವುಟ' ವಾರಪತ್ರಿಕೆಯ ವಾರ್ಷಿಕ ಸಂಚಿಕೆಗಳಲ್ಲಿ ಪ್ರಕಟವಾಗಿದ್ದವು. ಅವನ್ನು ಪ್ರಕಟಿಸಿದ್ದ ಸಂಪಾದಕ ಬಂಧುಗಳಿಗೆ, ವಿಶೇಷವಾಗಿ ಸಂಗಾತಿ ಶಿವರಾಜ ಬಿರಾದಾರ ಅವರಿಗೆ, ನಾನು ಋಣಿಯಾಗಿದ್ದೇನೆ. ಲೇಖನಗಳನ್ನು ಡಿಟಿಪಿ ಮಾಡಿಸಿದ್ದ ಅವರು ಆರೂ ಲೇಖನಗಳನ್ನು ಆ ರೂಪದಲ್ಲಿ ಈ ಪುಸ್ತಕಕ್ಕಾಗಿ ಒದಗಿಸಿ ಉಪಕರಿಸಿದ್ದಾರೆ. ಅದಕ್ಕಾಗಿಯೂ ನಾನವರಿಗೆ ಕೃತಜ್ಞ. ಉಳಿದ ಐದು ಲೇಖನಗಳನ್ನು ಆತ್ಮೀಯರಾದ ಡಾ॥ ಎನ್. ಗಾಯತ್ರಿ ಮತ್ತು ಶ್ರೀ ಬಿ. ಎನ್. ವೇಣುಗೋಪಾಲ್ ಬೆರಳಚ್ಚು ಮಾಡಿಕೊಟ್ಟಿದ್ದಾರೆ. ಅದಲ್ಲದೆ ಎಂದಿನಂತೆ ಪುಸ್ತಕವನ್ನು ಹೊರತರುವುದರಲ್ಲಿ ಹಲವು ಬೇರೆ ರೀತಿಗಳಲ್ಲೂ ಸಹಾಯ ಮಾಡಿದ್ದಾರೆ. ಆದರದಿಂದ ನಾನದನ್ನು ನೆನೆಯುತ್ತೇನೆ. ಮುಖಪುಟವನ್ನು ವಿನ್ಯಾಸ ಮಾಡಿರುವ ಆತ್ಮೀಯ ಮಾಧುರಿ ರಾವ್ ಅವರಿಗೆ ನಾನು ಋಣಿ.

ನವಕರ್ನಾಟಕ ಪ್ರಕಾಶನದ ಬಂಧುಗಳು, ವಿಶೇಷವಾಗಿ ಶ್ರೀ. ಎ. ಆರ್. ಉಡುಪ ಮತ್ತು ಶ್ರೀಮತಿ. ಅನಿತಾ ಶಾಮ್ ಅವರು, ಯಥಾಪ್ರಕಾರ ಸಹಾಯಹಸ್ತ ಚಾಚಿದ್ದಾರೆ. ಅವರಿಗೆಲ್ಲಾ ನನ್ನ ಹೃತ್ಪೂರ್ವಕ ವಂದನೆಗಳು. ಇನ್ನೊಬ್ಬ ಸ್ನೇಹಿತರ ಅತಿಶಯ ಸಹಾಯವನ್ನು ಆತ್ಮೀಯವಾಗಿ ಸ್ಮರಿಸುತ್ತೇನೆ, ಆದರೆ ಅವರ ಇಚ್ಛೆಯಂತೆ ಅವರ ಹೆಸರನ್ನು ಇಲ್ಲಿ ದಾಖಲಿಸುವುದಿಲ್ಲ. ಪುಸ್ತಕದ ಓದುಗರಿಗೆ ಮತ್ತು ಎಲ್ಲ ಕ್ರಿಯಾಶೀಲ ಮಿತ್ರವರ್ಗಕ್ಕೆ ನನ್ನ ನಮಸ್ಕಾರಗಳು.

ಬೆಂಗಳೂರು — ***ಜಿ. ರಾಮಕೃಷ್ಣ***

ಪರಿವಿಡಿ

1.	ಪ್ರವೇಶ: ಐತಿಹ್ಯಗಳು ಮತ್ತು ತತ್ತ್ವಜ್ಞಾನಿಗಳು	...	11
2.	ಮಾನವ ಸ್ವಭಾವ ಬದಲಾಗದೆಂಬ ಮಿಥ್ಯೆ	...	36
3.	ಶ್ರೀಮಂತನು ಸಮರ್ಥ, ಬಡವನು ಅದಕ್ಷ, ಎಂಬ ಮಿಥ್ಯೆ	...	47
4.	ಜನಾಂಗೀಯ ತಾರತಮ್ಯವು ಸಹಜವೆಂಬ ಅವಿವೇಕ	...	61
5.	ಪ್ರಶ್ನೆಗಳಿಗೆಲ್ಲಾ ಎರಡು ಮಗ್ಗುಲುಗಳೆಂಬ ಮಿಥ್ಯೆ	...	82
6.	ಯದ್ಭಾವಂ ತದ್ಭವತಿ	...	102
7.	ಕಲೆ ಮತ್ತು ರಾಜಕೀಯ ಬೆರೆಯುವುದುಂಟೆ!	...	122
8.	ಉದ್ಧರೇತ್ ಆತ್ಮನಾ ಆತ್ಮಾನಂ	...	135
9.	ಸಮಸ್ಯೆಗಳು ಎಂಬುವೆಲ್ಲಾ ಬಾಯಿಮಾತು ಅಷ್ಟೆ!	...	157
10.	ಹಣೆಪಟ್ಟಿಗೆ ಅಂಜಿದೊಡೆಂತಯ್ಯ	...	176
11.	ಸ್ವಾತಂತ್ರ್ಯ ಮತ್ತು ಕ್ಷೇಮ ಎರಡೂ ಜೊತೆ	...	191

ಮಾನವ ಜೀವನವನ್ನು
ಸಮಾನತೆಯ ನೆಲೆಯಲ್ಲಿ
ಸಹ್ಯವನ್ನಾಗಿಸಲು ಶ್ರಮಿಸುವ
ಎಲ್ಲ ಬಂಧುಗಳಿಗೆ
ಈ ಗ್ರಂಥ ಅರ್ಪಿತ

1. ಪ್ರವೇಶ: ಐತಿಹ್ಯಗಳು ಮತ್ತು ತತ್ತ್ವಜ್ಞಾನಿಗಳು

ವಿಶ್ವೇಶ್ವರ ತೀರ್ಥ, ನಾರಾಯಣಾಚಾರ್ಯ, ಶ್ರೀಪತಿಭಟ್ಟ, ನಾಗೇಶ ಪ್ರಭು, ರಾಮಾಶಾಸ್ತ್ರಿ, ಪಂಡಿತಾಚಾರ್ಯ, ಹೀಗೆ ತತ್ತ್ವಜ್ಞಾನಿಗಳಿಗೇನು ಕೊರತೆ! ಅವರಲ್ಲೊಬ್ಬರ ಬಳಿಗೆ ಗಿರಿಧರನೋ ಮುರಳಿಧರನೋ ಹೋಗಿ ತತ್ತ್ವಶಾಸ್ತ್ರದ ಸಿದ್ಧಾಂತಗಳನ್ನು ಕುರಿತು ಪ್ರಶ್ನೆಯೊಂದನ್ನು ಕೇಳಿದರೆ ಸಾಕು, ಅವನು ಸುಸ್ತು ಹೊಡೆದುಬಿಡುತ್ತಾನೆ. ಅಷ್ಟು ಪ್ರಬಲವೂ, ಜಟಿಲವೂ ಆಗಿರುತ್ತದೆ ಆಚಾರ್ಯರ ವಾಗ್ಝರಿ. ಮೋಕ್ಷಮಾರ್ಗವನ್ನು ತೋರಿಸಲು ಏನೆಲ್ಲಾ ಹೇಳಿಬಿಟ್ಟರೆಂದು ಈ ನಮ್ಮ 'ಧರ' ಮೂಕನಾಗಿಬಿಡುತ್ತಾನೆ. ಏನೋ ಇದೆಲ್ಲಾ ಶ್ರೀಭಗವಾನನು ಭಗವದ್ಗೀತೆಯಲ್ಲಿ ಬೋಧಿಸಿದ ಗುಹ್ಯಜ್ಞಾನವಿರಬೇಕೆಂದು ತಲೆ ತುರಿಸಿಕೊಂಡು ಜಾಗ ಖಾಲಿಮಾಡುತ್ತಾನೆ. ಎಂತಹ ಪ್ರಗಲ್ಭಮತಿ, ಎಷ್ಟು ಆಳವಾದ ಜ್ಞಾನ, ಏನು ದಿವ್ಯದೃಷ್ಟಿ, ಎಂದು ಮೂಕನಾದರೂ ಆಶ್ಚರ್ಯವಿಲ್ಲ. ಹೋದದ್ದು ತನ್ನ ಪ್ರಕೃತದ ಜಂಜಾಟವನ್ನು ಕುರಿತಂತೆ ಒಂದು ಮಾತು ಕೇಳಲು, ಆದರೆ ಈ ಜ್ಞಾನಿಗಳು ಆಕಾಶದೆತ್ತರಕ್ಕೆ ಹಾರಿ ಪರಂಧಾಮವನ್ನೇ ತೆರೆದಿರಿಸಿಬಿಟ್ಟರಲ್ಲಾ ಎಂದು ಭ್ರಾಂತನಾಗಿ ನಮ್ಮ 'ಧರ' ಅಂತರ್ಮುಖಿಯಾಗಿಬಿಟ್ಟಾನು. ಹಾಗೆ ಅಂತರ್ಮುಖಿಯಾದಾಗಲೂ ಅವನಿಗೆ ಬಾಹ್ಯ ಜಗತ್ತಿನ ಬಾಧೆಯೇ ಬಹುವಾಗಿ ಕಾಡುತ್ತದೇನೊ! ಗಿರಿಧರ ಮತ್ತು ಮುರಳಿಧರರಂತಹವರು ಜಗತ್ತಿನ ಬೇರೆಡೆಗಳಲ್ಲೂ ಇದ್ದಾರೆ, ಅವರ ಫಜೀತಿಯೂ ಇಂಥದೇ, ಪಾಪ. ತತ್ತ್ವಜ್ಞಾನಿಗಳ ತಳಿಯ ಹಣೆಬರಹ ಒಂದೇ ತೆರನಾದದ್ದೆಂಬ ಭಾವನೆ ದಟ್ಟವಾಗಿಬಿಟ್ಟೀತು. ಆಕಾಶದಲ್ಲಿ ವಿಹರಿಸುವುದಷ್ಟೆ ತತ್ತ್ವಶಾಸ್ತ್ರದ ಜಾಯಮಾನವಲ್ಲ, ಗಟ್ಟಿ ನೆಲದ ಮೇಲೂ ಅದು ನಿಲ್ಲಬಹುದು ಮತ್ತು ನಿಲ್ಲಬೇಕು. ಐತಿಹ್ಯಗಳ ಬೆನ್ನತ್ತಿ ಬಸವಳಿಯುವುದನ್ನು ಬಿಟ್ಟು ವಾಸ್ತವವನ್ನು ತೆರೆದ ಕಣ್ಣಿನಿಂದ ಗ್ರಹಿಸುವುದು ಶ್ರೇಯಸ್ಸಿನ ಹಾದಿಯೆಂದು ರಂಗಣ್ಣ, ಭೀಮಯ್ಯ, ಡೇವಿಡ್ ಮತ್ತು ರಸೂಲ್ ತೀರ್ಮಾನಿಸಿದ್ದಾರೆ.

ಆಲಿವರ್ ಏಡ್ವರ್ಡ್ಸ್ ಒಮ್ಮೆ ಡಾ॥ ಜಾನ್ಸನ್ ಎಂಬ ತತ್ತ್ವಜ್ಞಾನಿಯನ್ನು ಭೇಟಿಯಾದಾಗ ಹೇಳಿದ: "ಸ್ವಾಮಿ, ನೀವು ತತ್ತ್ವಜ್ಞಾನಿಗಳಂತೆ, ಬಹಳ ಸಂತೋಷ, ಆದರೆ ನೋಡಿ, ನಾನೂ ತತ್ತ್ವಜ್ಞಾನಿಯಾಗಬೇಕೆಂದು ಹೊರಟಿದ್ದೆ. ಅದೇಕೊ ಅದು ಕೂಡಿಬರಲಿಲ್ಲ. ತತ್ತ್ವಜ್ಞಾನಿಯಾಗಲು ತವಕಿಸಿದಾಗೆಲ್ಲಾ ಏನಾಗಿಬಿಡುತ್ತಿತ್ತು ಗೊತ್ತೆ? ಹೇಗೋ ಏನೋ, ನನ್ನ ಸ್ವಾಭಾವಿಕ ಸಂತೋಷಚಿತ್ತವು ಪರದೆಯ ಹಿಂದೆ ಸರಿಯದೆ ಧುತ್ತೆಂದು ಪ್ರತ್ಯಕ್ಷವಾಗಿಬಿಡುತ್ತಿತ್ತು." ಏಡ್ವರ್ಡ್ ಮತ್ತು ಜಾನ್ಸನ್ ಖಾಸಾ ಸ್ನೇಹಿತರು. ಅರವತ್ತೈದು ಮತ್ತು ಅರವತ್ತೇಳು ವಯಸ್ಸಿನವರು. ಕಾರಣಾಂತರಗಳಿಂದ ಬಹಳ ದಿನ ಅವರಿಬ್ಬರ ಭೇಟಿಯಾಗಿರಲಿಲ್ಲ. ಅವರ ಕಾಲೇಜಿನ ದಿನಗಳನ್ನು ನೆನಪಿಸಿಕೊಳ್ಳುವುದೆಂದರೆ ಇಬ್ಬರಿಗೂ ಎಂಥದೋ ಖುಷಿ, ಉಲ್ಲಾಸ. ಡಾಕ್ಟರ್ ಜಾನ್ಸನ್ ಮಹಾ ಪ್ರತಿಭಾವಂತನಾಗಿ

ಬೆಳೆದುಬಿಟ್ಟಿದ್ದ, ಅವನ ಜ್ಞಾನದ ಸುತ್ತ ಕೋಟೆಯನ್ನು ಕಟ್ಟಿಕೊಂಡುಬಿಟ್ಟಿದ್ದನೋ ಏನೋ, ಅದರಿಂದಾಗಿ ಅವನ ಗಾಂಭೀರ್ಯ ವಿಪರೀತವಾಗಿಬಿಟ್ಟಿತ್ತು. ಪಾಪ, ನಮ್ಮ ಪಾಪದ ಪ್ರಾಣಿ ಆಲಿವರ್ "ಯಾವ ಗಾಢ ಅನುಭವವೂ ಇಲ್ಲದೆ ಜೀವನವನ್ನು ಸವೆಸಿಬಿಟ್ಟಿದ್ದ," ಹಾಗಾಗಿ ತತ್ತ್ವಶಾಸ್ತ್ರವೆಂದರೆ ಒಂದು ಥರಾ ಅನ್ಯಮನಸ್ಕನಾಗಿರಬೇಕು, ಮುಖದ ಮೇಲೆಲ್ಲಾ ದುಗುಡ ತುಂಬಿಕೊಂಡಿರಬೇಕು, ಎಂದು ಭಾವಿಸಿಕೊಂಡುಬಿಟ್ಟಿದ್ದ. ಅವನಿಗೆ ಅದು ಹೇಗೋ ಒಂದು ವಿಷಯ ತಿಳಿದುಬಿಟ್ಟಿತು: ತತ್ತ್ವಜ್ಞಾನಿಗಳಲ್ಲಿ ಒಂದಿಷ್ಟು ಮಂದಿ ಪಂಡಿತರಿದ್ದಾರಲ್ಲ, ಅವರದೆಲ್ಲಾ ಒಂದೇ ಗೀಳು; ದುಃಖಮಯ ಪ್ರಪಂಚದಲ್ಲಿ ಹೇಗೋ ಈಜಾಡಿಕೊಂಡು ಹೋಗುವುದು ಹೇಗೆ ಎಂಬುದನ್ನು ಪರಿಪರಿಯಾಗಿ ವಿವರಿಸಿ ಹೇಳುವುದು, ಶ್ರೀಮದ್ಗಾಂಭೀರ್ಯದಿಂದ ಉಪದೇಶ ನೀಡುವುದು.

ಹಾಗೆ ನೋಡಿದರೆ ಡಾ॥ ಜಾನ್ಸನ್ ಸಹ ಅಂತಹ ತತ್ತ್ವಶಾಸ್ತ್ರ ಉದ್ಯೋಗಿಗಳ ಬಣಕ್ಕೆ ದಾಖಲಾದವನಲ್ಲ. ಆ ಉದ್ಯೋಗಿಗಳ ಮಾದರಿ ವಿಚಿತ್ರವಾದ್ದು. ಜಾನ್ಸನ್‌ಅನ್ನೇ ತೆಗೆದುಕೊಳ್ಳಿ, ಅವನು ಮಹಾಜ್ಞಾನಿ, ಆದರೆ ಕೆಲವೇಳೆ ಆಲಿವರ್‌ನಷ್ಟು ತಿಳಿದವನಲ್ಲ. ಈ ಆಲಿವರ್ ಏಕೆ ತತ್ತ್ವಜ್ಞಾನಿಯಾಗಲಿಲ್ಲ? ಬಹುಶಃ ಅವನ ಸಹಜ ಸಂತೋಷಚಿತ್ತ ಒಂದೇ ಅದಕ್ಕೆ ಕಾರಣವಾಗಿರಲಾರದು. 'ತತ್ತ್ವಜ್ಞಾನಿ' ಎಂಬ ಉದಾತ್ತ ಬಿರುದು ಲಗತ್ತಿಸಿ ಕೊಂಡಿರುತ್ತಾರಲ್ಲ, ಅವರ ಶ್ಲಾಘನೀಯ ಪರಂಪರೆಯೊಂದರಲ್ಲಿ ಪ್ರತಿಷ್ಠಿತ ಸ್ಥಾನ ಪಡೆದುಕೊಂಡಿರುತ್ತಾರೆ. ಆ ಪರಂಪರೆಯಲ್ಲಿ ಎಂತೆಂತಹ ಮಹಾಮಹೋಪಾಧ್ಯಾಯರು ಆಗಿಹೋಗಿದ್ದಾರೆ. ಆದಿಯಲ್ಲಿ ಗ್ರೀಸಿನ ಥೇಲಿಸ್ ಎಂಬೊಬ್ಬ. ಅವನಿಗಿಂತಲೂ ಮುಂಚೆ ಪ್ರಾಚೀನ ಭಾರತದಲ್ಲಿ ಉದ್ದಾಲಕ ಎಂಬ ಮಹಾಪುರುಷ. ನಮ್ಮ ಸಮಕಾಲೀನರಲ್ಲೇ ಅಂತಹವರು ಯಾರು? ಒಂದು ರೀತಿಯಲ್ಲಿ ಅವರು ಹಿಂದಿನವರ ನೆರಳಿನಂತೆ, ಅಷ್ಟೆ. ಪಾಶ್ಚಾತ್ಯರಲ್ಲಿ ಡ್ಯೂಯಿ, ರಸೆಲ್, ಸಾಂತಾಯನ, ವಿಡ್‌ಗೆನ್‌ಸ್ಟೈನ್, ಮುಂತಾದವರು. ನಮ್ಮಲ್ಲಿ ಬೇಕಾದರೆ ಅರವಿಂದ ಘೋಷ್, ರಾಧಾಕೃಷ್ಣನ್, ಆನಂದ ಕುಮಾರಸ್ವಾಮಿ, ಮುಂತಾದವರು. ಅಬ್ಬಾ, ಅವರೆಲ್ಲರ ಹೆಸರು ಹೇಳಹೋದರೆ ನಾಲಿಗೆ ತಿರುಗದೆ ಹೋಗಬಹುದೇನೋ. ಏಕೆಂದರೆ, ಅವರೆಲ್ಲಾ ನೆರಳಿನ ಆಕಾರ ಹೊಂದಿದ್ದರೂ ಅದು ಒಬ್ಬ ವ್ಯಕ್ತಿಯ ನೆರಳಲ್ಲ; ಇಡೀ ಪ್ರಪಂಚದ ನೆರಳೇ ಅವರಾಗಿದ್ದಾರೆ.

ಆದರೆ ಸೋಜಿಗ ಹೇಗಿದೆ ನೋಡಿ: ಪ್ರಪಂಚದ ನೆರಳೆಂದರೆ ನಮಗೆ ರಾತ್ರಿಯ ಭಾಸವಾಗಿಬಿಡುತ್ತದೆ. ಆದ್ದರಿಂದ ಈ ರೂಪಕವನ್ನು ಬೆಳೆಸುವುದು ಬೇಡ. ಏಕೆಂದರೆ ತತ್ತ್ವಶಾಸ್ತ್ರದ ಮತ್ತು ಸಮಕಾಲೀನ ಚಿಂತನೆಯ ಸ್ವರೂಪವು ಕತ್ತಲಿನಿಂದ ಆವರಿಸಿಬಿಟ್ಟಿಲ್ಲ. "ಏನಪ್ಪಾ ಇದು ಕಾರ್ಗತ್ತಲೆ, ಮಿಣುಗುವ ನಕ್ಷತ್ರವು ಕೂಡ ಕಾಣುತ್ತಿಲ್ಲ; ಕೊರೆಯುವ ಚಳಿಯ ರಾತ್ರಿಯಲ್ಲಿ ಏನಿದು ಭಯಂಕರ ಗೋಡೆ!" ಎನ್ನಬಹುದಾದ ಆತಂಕಕ್ಕೆ, ಹತಾಶೆಗೆ ಎಡೆಯಿಲ್ಲ.

ಬಿಡಿಸಿ ಹೇಳಬೇಕೆಂದರೆ, ನಮ್ಮನ್ನಾವರಿಸಿರುವ ನಸುಗತ್ತಲೆಯು ಏಕಾರ್ಥವಾದುದಲ್ಲ; ಅದು ಮುಸ್ಸಂಜೆಯಂತೆಯೂ ಆಗಿರಬಹುದು, ಅಥವಾ ಮುಂಜಾವವೋ? ತತ್ತ್ವಶಾಸ್ತ್ರವನ್ನು ಉದ್ಯೋಗ ಮಾಡಿಕೊಂಡಿರುವವರು ತಮ್ಮ ಅಭಿಪ್ರಾಯಗಳ ಬಗ್ಗೆ ಮಹಾನ್ ಭರವಸೆ ಮತ್ತು ಆದರ ಇರಿಸಿಕೊಂಡಿದ್ದಾರೆ; ಆದರೆ ಆ ಭರವಸೆ ಮತ್ತು ಆದರ ತತ್ತ್ವಶಾಸ್ತ್ರದ ಬಗೆಗೆ ಅವರಿಗಿರುವುದು ಕಮ್ಮಿ. ಅವರಲ್ಲಿ ಕೆಲವರಂತೂ ಯಾವ

ಮುಜುಗರವೂ ಇಲ್ಲದೆ ತತ್ತ್ವಶಾಸ್ತ್ರವೆಂದರೆ ಏನೆಂದು ತಮಗೆ ತಿಳಿಯದೆಂದು ಹೇಳುತ್ತಾರೆ. ಈ ಭಾವನೆಯು ಆಶ್ಚರ್ಯಕರವೆಂದು ತೋರಬಹುದು, ಆದರೆ ಅದಕ್ಕಿಂತಲೂ ಹೆಚ್ಚು ಆಶ್ಚರ್ಯಕರವಾದ್ದು ಜನರು ಹಾಗೆನ್ನಲು ಸಿದ್ಧರಿದ್ದಾರೆಂಬುದು. ಜೀವನವಿಡೀ ಬೌದ್ಧಿಕವಾಗಿ ಶ್ರಮಿಸಿ, ಕಡೆಗೆ ಆ ಶ್ರಮವೆಲ್ಲಾ ಯಾವುದರ ಬಗೆಗೆಂದು ತಿಳಿಯದೆಂದು ಒಪ್ಪಿಕೊಳ್ಳುವುದಕ್ಕಿಂತಲೂ ಅಸಂಗತವಾದ್ದು ಬೇರೇನಿದ್ದೀತು?

ತತ್ತ್ವಶಾಸ್ತ್ರದ ಪರಿಧಿಯಲ್ಲಿ ಇಂತಹ ಕುತೂಹಲಕರ ಸಂಗತಿ ಇರುವುದಕ್ಕೆ ಕಾರಣವಾದರೂ ಏನು? ಬಹುಶಃ ಅದರ ಅಧಿಕೃತ ಅರ್ಥದ ವ್ಯಾಪ್ತಿಯೇ ಇರಬಹುದೆ? ಏಕೆಂದರೆ ಅದರ ಪರಂಪರೆಯಲ್ಲಿ ತನ್ನನ್ನು ತಾನು ಪುನರುದ್ಭವಿಸಿಕೊಳ್ಳುತ್ತಾ ಹೋಗುವ ಪದ್ಧತಿ ಇದೆ. ಪ್ರತಿಯೊಬ್ಬ ತತ್ತ್ವಜ್ಞಾನಿಯೂ ತನ್ನ ಹಿಂದಿನವರಿಂದ ಪುಷ್ಟಿ ಹೊಂದುತ್ತಾನೆ. ಇದರ ಅಡ್ಡ ಪರಿಣಾಮವೇನೆಂದರೆ ಆತನಿಗೆ ಹೆಗೆಲ್ ಮತ್ತು ಕಾಂಟ್ ಸುಪರಿಚಿತರಿರುವಷ್ಟು ತನ್ನ ಕಾಲದ ಸತ್ವದ ಅರಿವಿರುವುದಿಲ್ಲ. ಅಂದರೆ, ಸಂಪ್ರದಾಯದಿಂದ ಬಂದಿರುವ ಪಾರಂಪರಿಕ ಸಂಗತಿಗಳನ್ನು ಹೆಚ್ಚೆಚ್ಚು ವಿಸ್ತರಿಸುತ್ತಾ ಹೋಗುವುದು, ಭಿನ್ನ ಚಿಂತನಾ ಶಾಖೆಗಳ ನಡುವೆ ಕಲಹ ಕಲ್ಪಿಸುವುದು, ಮತ್ತು ವೈಯ್ಯಕ್ತಿಕ ಊಹನೆಗಳನ್ನು ಎಚ್ಚರದಿಂದ ಮಂಡಿಸುವುದು, ಇವೇ ಪ್ರಧಾನವಾಗಿಬಿಡುತ್ತವೆ. ಈ ಪ್ರಕ್ರಿಯೆಯಲ್ಲಿ ಕೆಲವು ಸಿದ್ಧಾಂತಗಳು ಉತ್ತಮ ಪರಿಷ್ಕಾರ ಹೊಂದುತ್ತವೆ, ಇನ್ನು ಕೆಲವು ನಾಶಹೊಂದುತ್ತವೆ. ಎರಡರಲ್ಲಿ ಯಾವುದನ್ನು ಮಾಡಬೇಕಿದ್ದರೂ ಹೆಚ್ಚುಕಡಿಮೆ ಸಮಾನ ಪ್ರಮಾಣದ ತತ್ತ್ವಶಾಸ್ತ್ರೀಯ ಪ್ರಯತ್ನ ಅಗತ್ಯವಾಗುತ್ತದೆ.

ಇನ್ನು ಎರಡನೆಯ ಕಾರಣ: ತತ್ತ್ವಶಾಸ್ತ್ರವು ವಿಶಾಲ ಸಾಮಾನ್ಯೀಕರಣದಲ್ಲಿ ಆಸಕ್ತಿ ತೋರುತ್ತದೆ. ಅದರಿಂದಾಗಿ ಅದೇನೋ ದೂರದ ಸಂಗತಿ, ಇಲ್ಲವೆ ಬೆದರಿಕೆ ಒಡ್ಡುವ ಸಂಗತಿ ಎಂಬ ಭಾವ ಮೂಡುತ್ತದೆ. ಹೀಗೊಂದು ಸನ್ನಿವೇಶ ನಿಮ್ಮ ಮುಂದಿದೆಯೆಂದು ಇಟ್ಟುಕೊಳ್ಳೋಣ: "ಇಂದು ಊಟಕ್ಕೆ ನಾನು ಒಳ್ಳೆಯ ರೊಟ್ಟಿ ತಿನ್ನುತ್ತೇನೆ" ಎಂದುಕೊಂಡಿರಿ. ಸರಿ, ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳುತ್ತೀರಿ. ಆಂದರೆ, ಅದು ನಿರ್ದಿಷ್ಟವಾದೊಂದು ರೊಟ್ಟಿ ಮತ್ತು ನಿರ್ದಿಷ್ಟವಾದ ಒಂದು ಹೊತ್ತಿನ ರೊಟ್ಟಿ, ಇದು ಯಾರಿಗೆ ಅರ್ಥವಾಗುವುದಿಲ್ಲ, ಹೇಳಿ. ಮೊದಲಿನ ನಿಮ್ಮ ವಾಕ್ಯವನ್ನು ಸ್ವಲ್ಪ ಬದಲಿಸಿ ಹೇಳಿದಿರಿ ಎಂದಿಟ್ಟುಕೊಳ್ಳಿ: "ಪೋಷಕಾಂಶವು ಹೆಚ್ಚಾಗಿರುವುದರಿಂದ ನಾನಿಂದು ಊಟಕ್ಕೆ ರೊಟ್ಟಿ ತಿನ್ನುತ್ತೇನೆ". ಇದು ತಾನೆ ಯಾರಿಗಾದರೂ ಅರ್ಥವಾಗದ ವಿಷಯವೆ? ಒಂದು ಮಾತು ನಿಜ, ನೀವೀಗ ಆಹಾರದ ಅನ್ನಾಂಗದ ಮಾತಾಡುತ್ತಿದ್ದೀರಿ. ಮುಂದುವರೆದು, ನೀವು ತಿನ್ನುವ ರೊಟ್ಟಿಯ ಪೋಷಕಾಂಶ ಹೇಗೆ ಉತ್ತಮವಾದುದೆಂಬುದಕ್ಕೆ ಕಾರಣ ಗಳನ್ನು ಕೊಡಲು ಹೊರಟಿರೆನ್ನೋಣ. ಆಗ ನೀವು ರಸಾಯನಶಾಸ್ತ್ರ, ಶರೀರಶಾಸ್ತ್ರ, ಮುಂತಾದವನ್ನೆಲ್ಲ ತಂದುಬಿಟ್ಟಿರುತ್ತೀರಿ. ಈ ಶಾಸ್ತ್ರಗಳಿಂದಾಗಿ ನಿಮ್ಮ ಮಾತು ಅಷ್ಟು ಚೆನ್ನಾಗಿ ತಿಳಿಯುವುದಿಲ್ಲ. ಅದು ಎಲ್ಲರಿಗೂ ಪರಿಚಿತವಾದ ವಿಷಯವಲ್ಲ. ಓಹೋ, ಹೀಗಾಯಿತೋ, ಎಂದು ಒಂದು ಕ್ಷಣ ನಿಲ್ಲಿಸಿ ಬೇರೊಂದು ಮಾತು ಹೇಳುತ್ತೀರೆನ್ನಿ: "ನನ್ನ ಆಹಾರದಲ್ಲಿ ಪೋಷಕಾಂಶಗಳು ಹೆಚ್ಚಾಗಿದ್ದಷ್ಟೂ ನಾನು ಹೆಚ್ಚು ಆರೋಗ್ಯವಂತನಾಗಿರುತ್ತೇನೆ". ಈಗೇನು ಮಾಡಿದಿರಿ? ವೈದ್ಯಕೀಯ ಶಾಸ್ತ್ರವನ್ನು ಬೇರೆ ಶಾಸ್ತ್ರಗಳ ಜೊತೆಗೆ ಎಳೆದುತಂದಿರಿ! ಈಗಿನ ನಿಮ್ಮ ಸಾಮಾನ್ಯೀಕೃತ ಮಾತು ಇನ್ನೂ

ಹೆಚ್ಚು ವ್ಯಾಪಕವಾಯಿತು. ಆ ನಿಮ್ಮ ಸಾಮಾನ್ಯೀಕೃತ ಮಾತನ್ನು ಎಲ್ಲರೂ ಒಪ್ಪುತ್ತಾರೆ. ಅದು ಕೇವಲ ಅಜ್ಞಾನದಿಂದೇನೂ ಅಲ್ಲ. ನಿಮಗೋ ಅಥವಾ ಬೇರಾರಿಗೋ ಈ ಹಂತದಲ್ಲಿ ಒಂದು ಪ್ರಶ್ನೆ ಕೇಳಬೇಕೆನ್ನಿಸಿತು ಎನ್ನಿ: "ಅಯ್ಯಾ ಮಹಾರಾಯ, ನೀನೇನು ಹೇಳುತ್ತಿದ್ದೀಯೆ? ಆ ಹಿಟ್ಟು ಒಂದಿಷ್ಟು ಕಾಳುಗಳಿಂದ ಬಂದಿದ್ದು ಮತ್ತು ಕಾಳುಗಳು ಯಾವುದೋ ಸಸ್ಯದಿಂದ ಎಲ್ಲೋ ಬೆಳೆದಿದ್ದು. ಆ ಕಾಳನ್ನು ತೂರಿ, ಹಿಟ್ಟು ಮಾಡಿದರು; ನೀನು ಅದರಿಂದ ರೊಟ್ಟಿ ಮಾಡಿಕೊಂಡೆ. ಅದನ್ನು ಪೌಷ್ಟಿಕಾಂಶ ಎನ್ನುತ್ತಿದ್ದೀಯೆ. ಹೇಗೆ ತಾನೆ ಆ ಹಿಟ್ಟು ನಿನ್ನ ಮೂಳೆ ಮತ್ತು ಅಂಗಾಂಶಗಳಾಗಿ ಪರಿವರ್ತನೆ ಹೊಂದುತ್ತದೆ!" ಎಂತಹ ಸ್ವಾರಸ್ಯಕರವಾದ ಪ್ರಶ್ನೆ ಇದು, ಗೊತ್ತೆ? ಅಂಥದೇ ಪ್ರಶ್ನೆಯನ್ನು ಪ್ರಾಚೀನ ಗ್ರೀಸಿನಲ್ಲಿ ಅನಾಕ್ಸಗೋರಸ್ ಮತ್ತು ಪ್ರಾಚೀನ ಭಾರತದಲ್ಲಿ ಉದ್ದಾಲಕ ಆರುಣಿ ಕೇಳಿಕೊಂಡಿದ್ದರು. ಅದು 2500 ವರ್ಷಗಳ ಹಿಂದೆ: "ಕೂದಲಲ್ಲದ್ದರಿಂದ ಕೂದಲು ಹೇಗೆ ಉಂಟಾಗುತ್ತದೆ ಮತ್ತು ಮಾಂಸವಲ್ಲದ್ದರಿಂದ ಮಾಂಸ ಹೇಗುಂಟಾಗುತ್ತದೆ?" ಅಲ್ಲವೆ, ಹೇಗೆ ತಾನೆ ಶಕ್ಯ! ಆದರೆ ವಿಜ್ಞಾನ ಶಾಖೆಗಳು ಬೇಕಾದಷ್ಟು ಪುರಾವೆಗಳನ್ನು ಕಲೆಹಾಕಿವೆ ಮತ್ತು ಅದೆಲ್ಲಾ ಸಾಧ್ಯವೆಂದು ತೋರಿಸಿಕೊಟ್ಟಿವೆ. ಆದಾಗ್ಯೂ, ಅದು ಉಂಟಾಗುವುದು ಹೇಗೆ? ಅದಕ್ಕೆ ವಿಜ್ಞಾನದಲ್ಲಿ ಉತ್ತರವಿಲ್ಲ, ಅದರಾಚೆ ತತ್ತ್ವಶಾಸ್ತ್ರದಲ್ಲಿ ಉತ್ತರ ಹುಡುಕಬೇಕು.

ಈ ವಿಚಾರವನ್ನು ಬೇರೊಂದು ಮಗ್ಗುಲಿನಿಂದ ಪರಾಮರ್ಶಿಸೋಣ: ನೀನು ಹೇಳಿದ್ದೇನು? "ಹೆಚ್ಚು ಪೌಷ್ಟಿಕಾಂಶ ಸೇವಿಸಿದಷ್ಟೂ ನಾನು ಹೆಚ್ಚು ಆರೋಗ್ಯವಂತ ನಾಗುತ್ತೇನೆ ಎಂದಲ್ಲವೆ?" ಹೀಗೆ ಯೋಚಿಸಿ: ಅವನು ಆ ಮಾತು ಹೇಳುವ ಸಂದರ್ಭದಲ್ಲಿ ಒಬ್ಬ ಸ್ನೇಹಿತ ಅಲ್ಲೇ ಇದ್ದಾನೆ, ಅವನೋ ಬಹಳ ಸಲಿಗೆಯ ವ್ಯಕ್ತಿ. ಅವನೆನ್ನುತ್ತಾನೆ: "ಓ! ಏನದಕ್ಕೆ?" ಎಲಾ ಇವನ, ಹೀಗೆ ಲೇವಡಿ ಮಾಡಬಹುದೆ. ಭಾಷಣ ಮಾಡಲು ಹೋಗುತ್ತಾರಲ್ಲ, ಅವರು ಅದನ್ನು ಆರಂಭ ಮಾಡಿದ ಕಾಲದಲ್ಲಿ ಇಂತಹ ಪ್ರತಿಕ್ರಿಯೆಗಳನ್ನು "ಸವಾಲು" ಎಂದೇ ಭಾವಿಸಿಬಿಡುತ್ತಿದ್ದರು. (ನಾನೀಗ ಪುಸ್ತಕ ಬರೆಯ ಹೊರಟಿದ್ದೇನೆ ಮತ್ತು ಇಪ್ಪತ್ತೈದು ವರ್ಷಗಳಿಂದ ಇಂತಹ ಸವಾಲುಗಳನ್ನೆಸೆಯುತ್ತಾ ಬಂದಿದ್ದಾರೆ ಕೆಲವರು. ಅವರ ಆ ಧ್ವನಿ, ಆ ಗುದ್ದು, ಅಬ್ಬಾ ಎನಿಸುತ್ತದೆ). "ಏನದಕ್ಕೆ?" ಎಂಬುದಕ್ಕೆ ನೀವು ನಿಮ್ಮ ಉತ್ತರ ಕೊಡಬೇಕಲ್ಲ. ಸರಿ, ಉತ್ತರ ಕೊಡುತ್ತೀರಿ: "ಅಯ್ಯಾ, ಅದು ತಿಳಿಯದೆ? ಆರೋಗ್ಯದಿಂದಿರುವುದು ಒಳ್ಳೆಯದು, ಅದಕ್ಕೆ." ಅವನು ಸುಮ್ಮನಾಗುವುದಿಲ್ಲ. "ಓಹೋ! ಒಳ್ಳೆಯದೋ? ನಿನಗೋ ಅಥವಾ ಎಲ್ಲರಿಗಾಗೊ?" "ಮತ್ತಿನ್ನೇನು? ಎಲ್ಲರಿಗೂ ಹೌದು". ಪಾಪ, ನಿಮ್ಮ ನಿಸ್ವಾರ್ಥ ಬುದ್ಧಿ ಎಲ್ಲರ ಪರವಾಗಿ ಮಾತನಾಡಿದೆ! "ಎಲ್ಲರಿಗೂ" ಎಂದಾಗ, ನೀವು ನಿಮಗರಿವಿಲ್ಲದಂತೆ ನೀತಿಶಾಸ್ತ್ರದ ತುಣುಕೊಂದನ್ನು ತಂದುಬಿಟ್ಟಿದ್ದೀರಿ. ಅದೂ ಎರಡನೆಯ ಬಾರಿ! "ಓ! ಏನದಕ್ಕೆ?" ಎನ್ನುವ ಉದ್ಗಾರಕ್ಕೆ ಉತ್ತರಿಸುವಾಗ "ಎಲ್ಲರಿಗೂ" ಎಂದಾಗಲೂ ನೀತಿಶಾಸ್ತ್ರದ ಛಾಯೆಯಿತ್ತು. ನೀತಿಶಾಸ್ತ್ರವು ತತ್ತ್ವಶಾಸ್ತ್ರದ ಒಂದು ಭಾಗ. ಆದ್ದರಿಂದ, ರೊಟ್ಟಿಯ ತುಣುಕೊಂದು ನಿಮ್ಮ ಬಾಯಿ ಸೇರುವ ಮೊದಲೇ ನೀವು ತತ್ತ್ವಜಿಜ್ಞಾಸೆಯಲ್ಲಿ ತೊಡಗಿಬಿಟ್ಟಿದ್ದೀರಿ!

ಸಂವಾದವೇನಾದರೂ ಹೀಗೆಯೇ ಮುಂದುವರಿದರೆ ಸಂಶಯವಿಲ್ಲದೆ ಎಲ್ಲೆಲ್ಲಿಗೋ ತಿರುಗಿಬಿಡುತ್ತದೆ. ತಾನೊಬ್ಬ ಸಾಕ್ರೆಟೀಸ್‌ನ ಪ್ರತಿರೂಪವೋ ಎಂಬಂತೆ ಅವನು

ಇನ್ನೊಂದು ಪ್ರಶ್ನೆ ಎಸೆಯುತ್ತಾನೆ: "ಏಕಯ್ಯಾ, ಆರೋಗ್ಯವು ಎಲ್ಲರಿಗೂ ಒಳ್ಳೆಯದೆನ್ನುತ್ತೀಯಲ್ಲಾ, ಅದು ಹೇಗೆ?" ನಿಮ್ಮ ಉತ್ತರ: "ಅಯ್ಯೋ ಮಂಕೆ, ಅದೂ ತಿಳಿಯದೆ? ಆರೋಗ್ಯದಿಂದಿದ್ದಾಗ ನೀನು ಖುಷಿಯಿಂದಿರುತ್ತೀಯೆ, ಅದಕ್ಕೆ". ಈಗವನು ಸಾಕ್ರೆಟೀಸ್ ಭಾವವನ್ನು ಬಿಟ್ಟು ಅಮೆರಿಕಾದ ಕಾಲೇಜು ಪ್ರಾಧ್ಯಾಪಕನಂತೆ ಮುಖ ಸಿಂಡರಿಸಿಕೊಂಡು ಹೇಳುತ್ತಾನೆ: "ಓ! ಹಾಗಾದರೆ ನೀನೊಬ್ಬ ಸುಖಲೋಲುಪ ಅನ್ನು. ಅಲ್ಲದೆ ಬಹುಜನ ಹಿತಾಯ ಎಂಬ ಘೋಷಣೆ ಬೇರೆ. ಅತಿ ಹೆಚ್ಚು ಮಂದಿಗೆ ಅತಿ ಹೆಚ್ಚು ಸೌಖ್ಯ, ಅಲ್ಲವೆ? ಹಾಗಾದರೆ ನೀನೊಬ್ಬ ಪ್ರಯೋಜನಾಪೇಕ್ಷಿ ತತ್ತ್ವಜ್ಞಾನಿಯಾದೆ". ನಿಮಗೆ ಇರಿಸುಮುರಿಸು. "ಅಲ್ಲಪ್ಪಾ, ಅದರಲ್ಲಿ ತಪ್ಪೇನಿದೆ?" ಎನ್ನುತ್ತೀರಿ. ಅವನು ಗಹಗಹಿಸಿ ನಕ್ಕು ಹೇಳುತ್ತಾನೆ: " ತಪ್ಪೇ? ಒಂದೇನು, ಬೇಕಾದಷ್ಟು ತಪ್ಪುಗಳಿವೆ. ಉದಾಹರಣೆಗೆ, ಸುಖಲೋಲುಪತ್ವ ಎಂಬುದರಲ್ಲಿ ಎಂತಹ ವಿರೋಧಾಭಾಸವಿದೆ ಗೊತ್ತೆ?" ನಿಮ್ಮ ಕಾಲಕೆಳಗಿನ ಚಾಪೆ ಎಳೆಯುತ್ತಿದ್ದಾನೋ ಎಂಬ ಆತಂಕ ನಿಮಗೆ. ಸ್ಥಿರವಾದ ಕಲ್ಲುಚಪ್ಪಡಿಯ ಮೇಲೆ ನಿಲ್ಲಬೇಕೆನ್ನುವ ತವಕ. ಸರಿ, ಉತ್ತರ ಸಿಕ್ಕಿತೆಂದು ಉಬ್ಬಿಹೋಗುತ್ತೀರಿ: "ಹೌದು, ಅದೇನು ನಿನ್ನ ಕುಹಕ? ಆರೋಗ್ಯವಂತರಾಗಿರಬೇಕಾದ್ದು ಎಲ್ಲರ ಕರ್ತವ್ಯವೂ ಹೌದು." ಅಯ್ಯೋ ಪಾಪ, ನಿಮ್ಮ ಕಲ್ಲುಚಪ್ಪಡಿ ಸೀಳಿ ಹೋಳಾಗಿಬಿಟ್ಟಿತು, ನೋಡಿ. ಆ ನಿಮ್ಮ ಪ್ರಾಧ್ಯಾಪಕ ಹೇಳುತ್ತನೆ: "ರೀ ಸ್ವಾಮಿ, ನಿಮ್ಮ ನಿಲುವನ್ನು ಬದಲಾಯಿಸಿಕೊಂಡುಬಿಟ್ಟಿರಲ್ಲ. ಈಗ ನೀವೊಬ್ಬ ಕಾಂಟ್ ಪಂಥದವರಾಗಿಬಿಟ್ಟಿರಿ. ಅವನು ಗೊತ್ತಲ್ಲ ನಿಮಗೆ, ಜರ್ಮನಿಯ ತತ್ತ್ವಜ್ಞಾನಿ, 18 ನೆಯ ಶತಮಾನದವನು. ಅವನ ಸಿದ್ಧಾಂತ ಗೊತ್ತಲ್ಲ: "ಅತ್ಯಗತ್ಯವಾಗಿ ನಾವು ಬದ್ಧರಾಗಿರಲೇ ಬೇಕಾದ ನಿಯಮ. ಅಂದರೆ, ನಮ್ಮ ನಡತೆಯ ಹಿಂದಿನ ನೀತಿಯು ಸಾರ್ವತ್ರಿಕವಾಗಿ ಅನುಸರಣೆಗೆ ಯೋಗ್ಯವಾಗಿರಬೇಕೆಂಬ ನಿರೀಕ್ಷೆ. ಕ್ಯಾಟಿಗಾರಿಕಲ್ ಇಂಪರೆಟಿವ್ ಎನ್ನುತ್ತಾರೆ ಅದನ್ನು. ಈಗ ಹೇಳಿ, ಆರೋಗ್ಯವನ್ನು ಅರಸುವುದು ಈ 'ಕ್ಯಾಟಗಾರಿಕಲ್ ಇಂಪರೆಟಿವ್' ನಿಂದ ಸೂಚಿತವಾಗುತ್ತದೆಯೆ?" ಇದೇಕೋ ಮೂಲಕ್ಕೆ ಬಂತೆಂದು ನಿಮಗೆ ಉದ್ವೇಗ. ಇರಲಿ, ಬೇರೊಂದು ಹಾದಿ ಹಿಡಿಯೋಣ ಎನ್ನುತ್ತಾ ನೀವು ಹೇಳುತ್ತೀರಿ: " ಸುಖವಿರಲಿ ಬಿಡಲಿ, ಕರ್ತವ್ಯವೋ ಅಲ್ಲವೋ ಹೇಗೇ ಇರಲಿ, ಆದರೆ ಎಲ್ಲರೂ ಆರೋಗ್ಯದಿಂದಿರಲು ಆಶಿಸುತ್ತಾರೆ". ಆ ಪ್ರಾಧ್ಯಾಪಕನಿಗೆ ನಿಮ್ಮ ಮೇಲೆ ಕನಿಕರ ಉಕ್ಕಿಬರುತ್ತದೆ, ಎಂಥ ಪೆದ್ದಂಭಟ್ಟ ಇವನು, ಎಂದು. ಬಿರುಗಾಳಿಗೆ ಸಿಲುಕಿ ಹಿಮದ ಬಂಡೆಗಳು ಹಿಗ್ಗಾಮುಗ್ಗಾ ಉರುಳುವಂತೆ ಅವನು ಮಾತಿನ ಮುತ್ತು ಹೊರಸೂಸುತ್ತಾನೆ: "ಅಯ್ಯೋ, ಅಯ್ಯೋ! ಎಂತಹ ತಪ್ಪು ಮಾಡಿಬಿಟ್ಟೆ ನೀನು, ಯಾರಾದರೂ ಹಾಗೆ ಸತ್ಯ ಮತ್ತು ಮೌಲ್ಯದ ಬೆರಕೆ ಮಾಡುವುದುಂಟೆ? ಅದು ಅತ್ಯಂತ ಪ್ರಾಥಮಿಕ ಹಂತದ ತಪ್ಪು ಎಂದು ನಿನಗೆ ತಿಳಿಯದಲ್ಲ!" ಸಂವಾದ ಮುಗಿಸಲು ನೀವು ಹೇಳುತ್ತೀರಿ: "ಪ್ರಾಧ್ಯಾಪಕ ಮಹಾಶಯರೆ, ತೆಗೆದುಕೊಳ್ಳಿ, ಇನ್ನೊಂದು ರೊಟ್ಟಿಯ ತುಣುಕು, ಆಯಿತೆ?"

ನಾನೀಗ ನಿಮಗೆ ಹೇಳುತ್ತೇನೆ ನೋಡಿ, ನೀವು ವಾದವನ್ನು ಹೇಗೆ ಹೂಡಬೇಕಿತ್ತು ಎಂದು. ಮೊಟ್ಟಮೊದಲು ನೀವು ಮಾಡಬೇಕಾದ್ದು ಏನೆಂದರೆ ವಾದದ ಪ್ರಾರಂಭ ನಿಮ್ಮಿಂದಾಗಬೇಕು ಎಂಬುದನ್ನು ತಿಳಿಯಬೇಕು. ಆ ಪ್ರಾಧ್ಯಾಪಕ ನಿಮ್ಮನ್ನೇನು ಕೇಳಿದ? "ಎಲ್ಲರಿಗೂ ಆರೋಗ್ಯವು ಏಕೆ ಒಳ್ಳೆಯದು" ಎಂದಲ್ಲವೆ? ಆಗ ನೀವೇನು ಹೇಳಬೇಕಿತ್ತು

ಗೊತ್ತೆ? "ಆ ಅಭಿಪ್ರಾಯದ ಬಗೆಗೆ ಎಲ್ಲೆಡೆ ಒಪ್ಪಿಗೆಯ ಪೂರ್ವಭಾವನೆ ಇದೆ. ಅದೇಕೆ ತಪ್ಪು ಎಂಬುದನ್ನು ಬೇಕಾದರೆ ನೀನು ತೋರಿಸು", ಎಂದು. ಆಗ ನೋಡಿ, ಪಾತ್ರಗಳು ಬೇರೆಯಾಗಿಬಿಟ್ಟವು. ಪ್ರಶ್ನೆ ಹಾಕುವವರು ನೀವು, ಉತ್ತರ ಕೊಡಬೇಕಾದ್ದು ಅವನು. ಆಗ ಪ್ರಾಧ್ಯಾಪಕ ಏನು ಮಾಡುತ್ತಿದ್ದನೆಂದು ಊಹಿಸಿ. ರಣರಂಗವು ಬಿಸಿಯಾಗುತ್ತಿದೆ ಎಂದು ಕಸಿವಿಸಿ ಅವನಿಗೆ. ಏನುತ್ತರ ಕೊಡಬೇಕೆಂದು ಗಹನವಾಗಿ ಯೋಚಿಸುತ್ತಿದ್ದಾನೆ. ಅವನನ್ನು ತಿವಿದು ಕೇಳಿ, "ಏನು ಸ್ವಾಮಿ, ಏನು ಹೇಳುತ್ತೀರಿ?" ಎಂದು.

ಆ ಪ್ರಾಧ್ಯಾಪಕರಿಗೆ ನೀತಿಸಿದ್ಧಾಂತಗಳ ಒಳ–ಹೊರಗುಗಳೆಲ್ಲಾ ಚೆನ್ನಾಗಿ ತಿಳಿದಿರುತ್ತದೆ, ಆದ್ದರಿಂದ ಸುಲಭವಾಗಿ ಸಿಕ್ಕಿಹಾಕಿಕೊಳ್ಳುವಂತಹ ನಿಲುವುಗಳನ್ನಾತ ಉಚ್ಚರಿಸುವುದಿಲ್ಲ. ಆದ್ದರಿಂದ ಲೋಕಾಭಿರಾಮವಾಗಿ ನಿಧಾನಗತಿಯಲ್ಲಿ ಹೇಳುತ್ತಾನೆ: "ನೋಡಿ, 'ಒಳಿತು' ಎಂದರೇನೆಂಬುದನ್ನು ಅಷ್ಟು ಸುಲಭವಾಗಿ ಹೇಳಲಾಗುವುದಿಲ್ಲ." ನಿಮ್ಮ ಪ್ರತಿಕ್ರಿಯೆ: "ಅದು ತಿಳಿದಿದ್ದೇ ಬಿಡಿ, ಆದರೆ ಒಳಿತೆಂದರೇನೆಂದು ಹೇಳಲು ಪ್ರಯತ್ನಿಸದಿರಲು ಅದು ಸಕಾರಣವೆ?" ಇವನೇನೋ ಗಟ್ಟಿಗ ಎನಿಸಿ ಪ್ರಾಧ್ಯಾಪಕ ಹೇಳುತ್ತಾನೆ: "ನೀವು ಹೇಳುವುದು ಸರಿ. ಆದರೆ ನನ್ನ ಪ್ರಕಾರ ಪ್ರೊಫೆಸರ್ ಜಿ.ಇ. ಮೂರ್ ಹೇಳುವಂತೆ 'ಒಳಿತು' ಎಂಬುದಕ್ಕೆ ಇದಮಿತ್ಥಂ ಎಂಬಂತೆ ಲಕ್ಷಣ ಹೇಳಬರುವುದಿಲ್ಲ." ಯಾರಿವನು ಮೂರ್ ಎಂಬುದು ನಿಮಗೆ ತಿಳಿಯದು, ಆದರೆ ಗುಟ್ಟು ಬಿಟ್ಟುಕೊಡದೆ ನಿಮ್ಮ ತಂತ್ರವನ್ನು ಮುಂದುವರಿಸುತ್ತೀರಿ: "ಅಂದರೆ, ನೀವು ಹೇಳುತ್ತಿರುವುದೇನು? 'ಒಳಿತು' ಎಂದರೆ ಏನೋ ಅರ್ಥವಿದೆ, ಆದರೆ ಅದೇನೆಂದು ಹೇಳಲಾಗುವುದಿಲ್ಲ, ಎಂದೆ?" ನಿಟ್ಟುಸಿರು ಬಿಡುತ್ತಾ ಪ್ರಾಧ್ಯಾಪಕ ಹೇಳುತ್ತಾನೆ: "ನೋಡಿ, ಈ ಬಗ್ಗೆ ವಿರೋಧಾಭಾಸವಿದೆ. ನೀವು ಯಾವುದನ್ನಾದರೂ 'ಒಳಿತು' ಎಂದು ಹೆಸರಿಸಿದಾಗ ಅದರ ಬಗ್ಗೆ ನಿಮ್ಮ ವೈಯ್ಯಕ್ತಿಕ ಒಪ್ಪಿಗೆ ಸೂಚಿಸುತ್ತೀರಲ್ಲಾ, ಹಾಗೆ." ನೀವು ಬಿಡುತ್ತೀರಾ? ಒಗ್ಗರಣೆ ಹಾಕುತ್ತೀರಿ: "ಬಾನೆಯಲ್ಲಿ ಆಹಾರ ಹಾಕಿದಾಗ ಹಂದಿಯು ಶಬ್ದ ಮಾಡುತ್ತದಲ್ಲಾ, ಹಾಗೆ ತಾನೆ," ಎಂದು. ಅವರೆನ್ನುತ್ತಾರೆ: "ಸ್ವಲ್ಪ ಹಾಗೇ ಎನ್ನಿ, ಆದರೆ ಆ ನಿಮ್ಮ ಉಪಮೆಯನ್ನು ನಾನಾದರೆ ಬಳಸುತ್ತಿರಲಿಲ್ಲ, ನೋಡಿ."

ಈಗ ನಿಮ್ಮ ಹೊಡೆತಕ್ಕೆ ತಕ್ಕ ಸಮಯ: "ಅಂದರೆ ಏನು ನಿಮ್ಮರ್ಥ? ಎಲ್ಲರಿಗೂ ಆರೋಗ್ಯವು ಒಳ್ಳೆಯದು ಎಂದು ನಾನು ಹೇಳಿದರೆ ಸುಮ್ಮನೆ 'ಡುರುಕ್' ಎಂದು ಗುರುಗುಟ್ಟುತ್ತಿದ್ದೇನೆ ಎಂದೆ?" ಅವರ ಪ್ರತಿಕ್ರಿಯೆ: "ನೀವು ಹಾಗೆ ಭಾವಿಸಿಕೊಳ್ಳುವುದಾದರೆ ನನ್ನದೇನೂ ಅಡ್ಡಿಯಿಲ್ಲ." ಪಟ್ಟು ಸಡಿಲಿಸಿ ನೀವು ಮತ್ತೆ ಹೇಳುತ್ತೀರಿ: "ಯಾರೋ ಅನಾರೋಗ್ಯವು ಒಳ್ಳೆಯದೆಂದು ಭಾವಿಸುತ್ತಾನೆಂದು ಇಟ್ಟುಕೊಳ್ಳಿ, ಅವನೂ ಸುಮ್ಮನೆ 'ಡುರುಕ್' ಎಂದು ಗುರುಗುಟ್ಟುತ್ತಿದ್ದಾನೆ ಎನ್ನುತ್ತೀರಾ?" "ಹೌದು." ಈಗ ನಿಮ್ಮ ಮೇರುಕಾಲ : "ಪ್ರೊಫೆಸರ್ ಸಾಹೇಬರೆ, ಆ ರೊಟ್ಟಿಯ ತುಣುಕ ಕೊಟ್ಟೆನಲ್ಲ, ಅದನ್ನಿಲ್ಲಿ ಕೊಡಿ." "ಅದನ್ನು ಈಗಷ್ಟೆ ನೀವೇ ಕೊಟ್ಟಿದ್ದಲ್ಲವೆ?" "ಹೌದು, ಕೊಟ್ಟಿದ್ದೆ; ಆದರೆ ನನ್ನ ಮನಸ್ಸು ಬದಲಾಯಿಸಿದ್ದೇನೆ."

ಆ ಪ್ರಾಧ್ಯಾಪಕನನ್ನು ಯಾವ ಗುಂಪಿಗೆ ಸೇರಿಸಬೇಕೆಂದು ನಿಮಗೆ ತಿಳಿಯುವುದಿಲ್ಲ. ಅವನು 'ತಾರ್ಕಿಕ ಪ್ರತ್ಯಕ್ಷ ಪ್ರಮಾಣವಾದಿ' ಎನಿಸಿಕೊಳ್ಳುತ್ತಾನೆ. ಆಂಗ್ಲಭಾಷೆಯಲ್ಲಿ ಅದನ್ನು 'ಲಾಜಿಕಲ್ ಪಾಜಿಟಿವಿಜ಼ಂ' ಎನ್ನುತ್ತಾರೆ. ಅದೊಂದು ಅತಿವಿಚಿತ್ರವಾದ

ತತ್ತ್ವಶಾಸ್ತ್ರ ನಿರೂಪಣೆ. ಮುಂದಿನ ಒಂದು ಅಧ್ಯಾಯದಲ್ಲಿ ಅದನ್ನು ತಿಳಿಯೋಣ. ಸದ್ಯದಲ್ಲಿ ಇಷ್ಟನ್ನು ಗ್ರಹಿಸೋಣ: ಅವನು ನಿಮಗೆ ಪ್ರಶ್ನೆಗಳ ಸುರಿಮಳೆ ಸುರಿಸಿದ, ನೀವು ಅವನಿಗೆ ಅದನ್ನೇ ಸುರಿಸಿದಿರಿ. ಇಬ್ಬರೂ ಸಂಕಷ್ಟಕ್ಕೆ ಸಿಲುಕಿದ್ದಿರಿ. ಪರಸ್ಪರರಿಗೆ ಏನು ಹೇಳಬೇಕೆಂದಿದ್ದಿರಿ, ಏನು ಹೇಳಿದಿರಿ, ಎಂಬುದು ಗೋಜಲಾಗಿಯೇ ಉಳಿಯಿತು. ಕಡೆಗೂ ನೀವು ಏನು ಹೇಳುತ್ತಿದ್ದಿರೆಂದು ಅವನಿಗೆ ಗೊತ್ತಾಗಲಿಲ್ಲ; ಅವನು ಏನು ಹೇಳುತ್ತಿದ್ದನೆಂದು ಅವನಿಗೂ ತಿಳಿದಿರಲಿಲ್ಲವೆಂಬುದು ನಿಮಗೆ ತಿಳಿದಂತಾಯಿತು.

ಅತ್ಯುಚ್ಚ ಮಟ್ಟದ ತತ್ತ್ವಶಾಸ್ತ್ರ ಪ್ರಕ್ರಿಯೆ ಎಂದರೆ ಇದೇ. ಅದು ಪರಿಕಲ್ಪನೆಗಳ ವಿಶ್ಲೇಷಣೆ. ಅದರಿಂದ ಮೂರು ಫಲಿತಾಂಶಗಳು ಸಾಧ್ಯ: (ಅ) ಯಾವುದಾದರೂ ಪದ ಅಥವಾ ಹೇಳಿಕೆಗೆ ಏನಾದರೂ ಅರ್ಥವಿದೆಯೇ ಎಂಬುದು ತಿಳಿಯುತ್ತದೆ; (ಆ) ಅಂತಿಮವಾಗಿ ಆ ಅರ್ಥವೇನೆಂಬುದನ್ನು ತಿಳಿಯುತ್ತೇವೆ, ಮತ್ತು (ಇ) ನೀಡಲಾಗಿರುವ ಹೇಳಿಕೆಯು ನಿಜವಾಗಬೇಕಾದರೆ ಬೇರಾವ ಹೇಳಿಕೆಗಳನ್ನು ಪೂರ್ವಭಾವಿಯಾಗಿ ಕಲ್ಪಿಸಿಕೊಳ್ಳಬೇಕೆಂಬುದು ತಿಳಿಯುತ್ತದೆ. ಈ ಪ್ರಕ್ರಿಯೆಯಲ್ಲಿ ಬಹಳ ಉತ್ಸಾಹದಿಂದ ನಿರತರಾಗಲು ಸಾಧ್ಯ; ಆಗ ಪ್ರಕ್ರಿಯೆಯು ಕೂದಲು ಸೀಳುವ ಮತ್ತು ಕುತರ್ಕದ ಕೆಲಸವಾಗಿಬಿಡುತ್ತದೆ. ವೇಳೆ ಮತ್ತು ಸಹನೆ ಇವೆಯೆಂದು ಪ್ರಕ್ರಿಯೆಯನ್ನು ಹಿಗ್ಗಾಮುಗ್ಗಾ ಎಳೆದುಕೊಂಡು ಹೋದರೆ, ಪ್ರಪಂಚವನ್ನು ಮತ್ತು ಅದರೊಡನೆ ನಿಮ್ಮ ಸಂಬಂಧವನ್ನು ಅರಿಯುವುದರಲ್ಲಿ ನೀವು ಸೋತುಹೋಗುತ್ತೀರಿ.

ಉದಾಹರಣೆಗೆ, ಈವರೆಗೆ ನೋಡಿದ ಆರೋಗ್ಯದ ವಿಚಾರವನ್ನೇ ನೋಡಿ; ನಿಮಗೆ ಹಾಗೂ ಬೇರೆಲ್ಲರಿಗೆ ಆರೋಗ್ಯವು ಒಳ್ಳೆಯದೆಂದು ತೋರುತ್ತದೆ, ಆದರೆ ಅದು ಅಷ್ಟು ಸ್ವಯಂಸಿದ್ಧವಲ್ಲ. ಒಂದರ್ಥದಲ್ಲಿ ಆ ಹೇಳಿಕೆಯು ನಿಜವೆಂದು ತಿಳಿಯಲು ಸಾಧ್ಯ. ಯಾವುದು ಆ ಅರ್ಥ? ಅನೇಕ ಮೌಲ್ಯಗಳ ಪೈಕಿ ಆರೋಗ್ಯವೂ ಒಂದು, ಎಂಬುದು ಆ ಅರ್ಥ. ಮೌಲ್ಯಗಳಲ್ಲೆಲ್ಲಾ ಆರೋಗ್ಯವೇ ಅತ್ಯಂತ ಶ್ರೇಷ್ಠವೆಂದೇನಾದರೂ ಹೇಳಿದರೆ ಆಗ ಬಹುಶಃ ಅದು ತಪ್ಪು ಹೇಳಿಕೆಯಾಗುತ್ತದೆ. ಆರೋಗ್ಯಕ್ಕೆ ಮೌಲ್ಯ ಬರುವುದು ಅದು ಬೇರಿನ್ನಾವ "ಇನ್ನೂ ಹೆಚ್ಚು ಮೌಲ್ಯಯುತವಾದುವನ್ನು" ಸೇವಿಸುತ್ತದೆ ಎಂಬುದರಿಂದ. ಆರೋಗ್ಯವಂತನಾಗಿ ಒಬ್ಬ ಮಾನವ ಏನು ಮಾಡುತ್ತಾನೆಂಬುದನ್ನು ತಿಳಿದ ನಂತರವೇ ಅವನ ಆರೋಗ್ಯಕ್ಕೆ ನಾವು ಅಭಿನಂದನೆ ಹೇಳಬಹುದು. ಕೆಲವು ಭಾರಿ ಆರೋಗ್ಯವಂತ ಜನರಿದ್ದಾರೆ, ಅವರ ಕ್ರಿಯೆಗಳು ಎಷ್ಟು ನೀಚತನದಿಂದ ತುಂಬಿರುತ್ತವೆಂದರೆ ಅವರು ಜೀವಂತವಾಗಿ ಮುಂದುವರಿಯುವುದಕ್ಕೆ ಅಪಾತ್ರರೆನಿಸಿಬಿಡುತ್ತದೆ. ಅಂಥವರಿಗೆ ಆರೋಗ್ಯ ಯಾವ ಪುರುಷಾರ್ಥಕ್ಕೆ!

ಒಟ್ಟಿನಲ್ಲಿ, ಹೇಳಿಕೆಗಳ ಅರ್ಥ ಮತ್ತು ಅವುಗಳ ಹಿಂದಿನ ಪೂರ್ವಕಲ್ಪನೆಗಳನ್ನು ತಿಳಿಯುವ ಪ್ರಯತ್ನಗಳೆಲ್ಲಾ ಚಿಂತನೆಗೆ ಸಾಮಗ್ರಿ ಒದಗಿಸುತ್ತವೆ; ಅದು ತತ್ತ್ವಶಾಸ್ತ್ರೀಯ ಚಿಂತನೆಯಾಗುತ್ತದೆ. ಇದನ್ನು ಮಾಡಲು ತತ್ತ್ವಶಾಸ್ತ್ರವು ನಿಮ್ಮ ಉದ್ಯೋಗವಾಗಬೇಕಿಲ್ಲ. ಅದನ್ನು ಯಾರು ಬೇಕಾದರೂ ಮಾಡಬಲ್ಲರು; ವಿಶ್ಲೇಷಣಾ ವಿಧಾನ, ಅಗತ್ಯವಾದ ಬುದ್ಧಿಮತ್ತೆ, ಅವೆರಡಿದ್ದರೆ ಸಾಕು. ಪ್ರತಿಯೊಬ್ಬರೂ ಇಂತಹ ಪ್ರಯತ್ನದಲ್ಲಿ ಪಾಲ್ಗೊಳ್ಳುವುದು ಅಪೇಕ್ಷಣೀಯ. ಆಗ ತತ್ತ್ವಶಾಸ್ತ್ರವನ್ನೇ ಉದ್ಯೋಗ ಮಾಡಿಕೊಂಡಿರುವವರು ತಮ್ಮದೇ ಸಂಪ್ರದಾಯದಿಂದಾಚೆಗೆ ಹೊರಳಬೇಕಾಗುತ್ತದೆ; ಅಂತೆಯೇ, ಮಾನವ

ಜನಾಂಗದ ಇನ್ನೊಂದು ವಿಶಾಲವಾದ ಭಾಗವು ತತ್ತ್ವಶಾಸ್ತ್ರದತ್ತ ಗಮನ ಹರಿಸುತ್ತದೆ. ಈ ರೀತಿಯ ಸಹಕಾರಿ ಪ್ರಕ್ರಿಯೆ ಉಂಟಾದಾಗ ನಾವೆಲ್ಲಾ ಕೊನೆಗೆ ತತ್ತ್ವಶಾಸ್ತ್ರವನ್ನು ಅರಗಿಸಿಕೊಳ್ಳಬಲ್ಲವರಾಗುತ್ತೇವೆ.

ತತ್ತ್ವಶಾಸ್ತ್ರ ಮತ್ತು ವಿಜ್ಞಾನ ಶಾಖೆಗಳು

ಪ್ರಪಂಚದ ಬಗೆಗಿನ ಮಾನವನ ಎಲ್ಲಾ ಜ್ಞಾನದ ಸಂಘಟಿತ ರೂಪವೇ ತತ್ತ್ವಶಾಸ್ತ್ರವೆಂದು ಪ್ರಾಚೀನ ಗ್ರೀಸ್‌ನಲ್ಲಿ ಭಾವಿಸಲಾಗಿತ್ತು. ಅದನ್ನು ವಿವಿಧ ಶಾಖೆಗಳಾಗಿ ವಿಂಗಡಿಸಲಾಗಿತ್ತು ಕೂಡ. ಪ್ರಕೃತಿ, ನೀತಿಶಾಸ್ತ್ರ, ರಾಜಕೀಯ, ತರ್ಕ, "ಆತ್ಮ", ದ್ಯುಲೋಕದ ಭಾಗಗಳು, ಹೀಗೆ ಎಲ್ಲದಕ್ಕೂ ತತ್ತ್ವಶಾಸ್ತ್ರವಿತ್ತು. ಕಡೆಗೆ ವೈದ್ಯಕೀಯಕ್ಕೆ ಸಹ ಅದಿತ್ತು. ಸಾಕಷ್ಟು ಅಧ್ಯಯನಶೀಲನಾಗಿದ್ದರೆ ಒಬ್ಬನೇ ವ್ಯಕ್ತಿಯು ಈ ಎಲ್ಲವುಗಳ ಬಗೆಗೂ ಅಧಿಕೃತವಾಗಿ ಮಾತನಾಡಬಲ್ಲವನಾಗಿರುತ್ತಿದ್ದ. ಉದಾಹರಣೆಗೆ, ಪ್ಲೇಟೊ. ಕಡೇಪಕ್ಷ ಎರಡು ಗ್ರಂಥಗಳಲ್ಲಿ (ರಿಪಬ್ಲಿಕ್ ಮತ್ತು ಟಿಮೇಯುಸ್) ಎಲ್ಲ ಜ್ಞಾನದ ಮತ್ತು ಊಹೆಗಳ ನಿಧಿಯನ್ನವನು ತುಂಬಿಟ್ಟಿದ್ದಾನೆ. ಅಂತೆಯೇ, ಅರಿಸ್ಟಾಟಲನ ಸಂಕಲಿತ ಕೃತಿಗಳು ಏಕವ್ಯಕ್ತಿಯ ವಿಶ್ವಕೋಶಗಳೇ ಆಗಿಬಿಟ್ಟಿವೆ.

ಇಂಥದೆಲ್ಲಾ ಈಗ ಸಾಧ್ಯವಿಲ್ಲ, ಏಕೆಂದರೆ ತಿಳಿಯಬಹುದಾದ್ದು ಅಗಾಧವಾಗಿ ಬೆಳೆದುಬಿಟ್ಟಿದೆ. ಉದಾಹರಣೆಗೆ, ಇಂದಿನ ದಿನಗಳಲ್ಲಿ ಒಬ್ಬ ಜೀವಶಾಸ್ತ್ರಜ್ಞಳು ವಿಜ್ಞಾನದ ಶಿಸ್ತಿನ ಎಲ್ಲವನ್ನೂ ತಿಳಿದಿರಲಾರಳು; ಹೋಗಲಿ, ಜೀವಶಾಸ್ತ್ರವನ್ನೆಲ್ಲಾ ತಿಳಿದಿರುತ್ತಾಳೆಯೇ ಅಂದರೆ, ಅದು ಕೂಡ ಪೂರ್ತಿ ಸಾಧ್ಯವಿಲ್ಲ. ಅವರವರ ಕ್ಷೇತಗಳನ್ನು ಪೂರ್ತಿ ತಿಳಿಯಲು ಸಾಧ್ಯವಾದರೆ ಅಷ್ಟೇ ಸಾಕು. ಉದಾಹರಣೆಗೆ, ಸಸ್ಯಶಾಸ್ತ್ರ, ಪರತಂತ್ರಶಾಸ್ತ್ರ, ತಳಿವಿಜ್ಞಾನ, ಇತ್ಯಾದಿ. ಅವುಗಳಲ್ಲೂ ಉಪಭಾಗಗಳ ವಿಶೇಷಜ್ಞರೇ ಜಾಸ್ತಿ. ಇದೇನು ಬೇಕೆಂದೇ ಶಿಸ್ತುಗಳನ್ನೆಲ್ಲಾ ಸಂಕುಚಿತಗೊಳಿಸುತ್ತಿದ್ದಾರೋ ಎನಿಸಿದರೆ ಆಶ್ಚರ್ಯವಿಲ್ಲ. ಆದರೆ ನಿಜಕ್ಕೂ ಅಂಥದೇನೂ ಇಲ್ಲ. ವಿಜ್ಞಾನಿಯ ವೈಯ್ಯಕ್ತಿಕ ಜ್ಞಾನದೃಷ್ಟಿಯಲ್ಲಿ ಬದಲಾವಣೆಯಾಗಿಲ್ಲ, ಆದರೆ ಅವನು ನಿರ್ದಿಷ್ಟ ಕ್ಷೇತ್ರಕ್ಕೆ ಸೀಮಿತಗೊಳ್ಳುತ್ತಿದ್ದಾನೆ. ಏಕೆಂದರೆ, ಅವನ ಕ್ಷೇತ್ರದ ಹರಹು ಅಷ್ಟು ವಿಶಾಲವಾಗಿಬಿಟ್ಟಿದೆ. ವಿಜ್ಞಾನಿಯ ಮನಸ್ಸಿನ ಗ್ರಹಣಶಕ್ತಿ ಕಡಿಮೆಯಾಗಿಲ್ಲ, ಆದರೆ ಇಡೀ ವಿಜ್ಞಾನವನ್ನು ಮನಸ್ಸಿನೊಳಗೆ ತುಂಬಿಕೊಳ್ಳಲಾಗುತ್ತಿಲ್ಲ, ಅಷ್ಟೆ. ಮೊದಲಿಗೆ ಮಾನವನ ಎಲ್ಲಾ ಜ್ಞಾನವನ್ನೂ ಒಂದು ಸೀಸೆಯಲ್ಲಿ ತುಂಬಿಡಲು ಸಾಧ್ಯವಿತ್ತು. ಆದರೆ ಈಗಿನ ಜ್ಞಾನಸಮುದ್ರಕ್ಕೆ ಹೋಲಿಸಿದರೆ ಅದು ಒಂದು ಬಿಂದುವಿನಂತೆ ಆಗಿಬಿಟ್ಟಿದೆ.

ವಿಶೇಷ ಕ್ಷೇತ್ರಗಳಿಗೆ ಸೀಮಿತಗೊಳ್ಳುವುದನ್ನು ಕೆಲವರು ಮೂದಲಿಸುತ್ತಾರೆ; ಎಲ್ಲವೂ 'ವಿಶಾಲ ದೃಷ್ಟಿ' ಯಂತಿರಬೇಕೆಂದು ಆಗ್ರಹಿಸುತ್ತಾರೆ, ವಿಶ್ಲೇಷಣೆಯನ್ನು ಕಡೆಗಣ್ಣಿನಿಂದ ನೋಡುತ್ತಾರೆ ಮತ್ತು ಸಂಶ್ಲೇಷಣೆಯನ್ನು ಆದರಿಸುತ್ತಾರೆ. ನಿಜವೋ ಅಲ್ಲವೋ ಎಂದು ಪರೀಕ್ಷಿಸಬೇಕೆ, ಕೆಲವು ವೇಳೆ ಏನನಿಸುತ್ತದೆಯೆಂದರೆ 'ವಿಶಾಲ ದೃಷ್ಟಿ'ಯ ಶ್ಲಾಘನೆ ಮಾಡುವವರು ಇಂದು ವೈಶಾಲ್ಯವನ್ನೇನೋ ಹೊಂದಿರಬಹುದು, ಆದರೆ ವೈಶಾಲ್ಯದಲ್ಲಿ ಖಾಲಿತನ ಇದೆ. ಅಂತೆಯೇ, ಸಂಶ್ಲೇಷಣೆಯನ್ನು ಹಾಡಿಹೊಗಳುವವರಿಗೆ ಸಂಶ್ಲೇಷಣೆಗೆ ಗುರಿಮಾಡಲು ಅಷ್ಟೇನೂ ಸಾರವತ್ತಾದ ಸಾಮಗ್ರಿಯೇ ಇಲ್ಲವೇನೋ! ವಿಜ್ಞಾನಿಯೊಬ್ಬ ಏನನ್ನಾದರೂ ಆಳವಾಗಿ ಅರಿಯಬೇಕಾದರೆ ಇಂದು ವಿಶೇಷಜ್ಞನಾಗಬೇಕಾದ್ದು

ಅನಿವಾರ್ಯ. ಅವನ ವಿಶಿಷ್ಟ ಕ್ಷೇತ್ರವನ್ನು ಬಿಟ್ಟುಕೊಡುವುದೆಂದರೆ ಅವನ ಜ್ಞಾನವನ್ನು ಬಿಟ್ಟುಕೊಟ್ಟಂತಾಗಿಬಿಡುತ್ತದೆ. ಆಗ ಹೊಸ ಜ್ಞಾನದ ಶೇಖರಣೆ ಹೇಗೆ ತಾನೆ ಸಾಧ್ಯ!

ಒಂದೊಂದು ಕ್ಷೇತ್ರದಲ್ಲೂ ಪರಿಣತಿಯು ಸೂಕ್ಷ್ಮಗೊಳ್ಳುತ್ತಾ ಹೋಗುವುದು ಸ್ತುತ್ಯರ್ಹವಾದ ಜಯವೇ ವಿನಾ ಸೋಲಲ್ಲ. ಮಾನವನ ಜ್ಞಾನಭಂಡಾರದ ಆಗಾಧತೆಯನ್ನು ಅದು ತೋರಿಸುತ್ತದೆ. ಅದರಲ್ಲಿ ದುಃಖಿಸಬೇಕಾದ್ದೇನಿದೆ? ಒಂದೊಂದು ಕ್ಷೇತ್ರವೂ ಅಷ್ಟು ಸೂಕ್ಷ್ಮವಾಗಿ ಬೆಳೆಯುತ್ತಿರುವುದು ಹೆಮ್ಮೆಯ ಸಂಗತಿ. ತತ್ತ್ವಶಾಸ್ತ್ರವು ಎಲ್ಲಾ ಜ್ಞಾನ ಶಾಖೆಗಳ ಖನಿ ಎಂಬ ಭಾವನೆ ಪ್ರಾಚೀನ ಕಾಲದಲ್ಲಿ ಹಲವು ಶತಮಾನಗಳ ಕಾಲ ಇದ್ದಿತು, ನಿಜ. ಆದರೆ ಅದೇನನ್ನು ತೋರಿಸುತ್ತದೆ? ಲಭ್ಯವಿದ್ದ ಜ್ಞಾನವು ತೀರ ಕಡಿಮೆ ಎಂಬುದನ್ನು. ಕ್ರಮೇಣ ಯುವ ವಿಜ್ಞಾನ ಕ್ಷೇತ್ರಗಳು ತೆರೆದುಕೊಂಡವು, ಅವು ತಮ್ಮ ತವರುಮನೆಯನ್ನು ಬಿಟ್ಟು ಹೊರಬಂದು ಸ್ವತಂತ್ರವಾದವು. ತವರುಮನೆಯಲ್ಲಿ ಅವು ಬಿಟ್ಟುಬಂದದ್ದು ತತ್ತ್ವಶಾಸ್ತ್ರವಾಗಿಯೇ ಉಳಿಯಿತು. ಹೀಗಾಗಿ "ಪ್ರಾಕೃತಿಕ ತತ್ತ್ವಶಾಸ್ತ್ರ"ವು ಭೌತಶಾಸ್ತ್ರ, ರಸಾಯನಶಾಸ್ತ್ರ, ಖಗೋಳಶಾಸ್ತ್ರ, ಇತ್ಯಾದಿಯಾಗಿ ವಿಕಾಸಗೊಂಡಿತು; "ರಾಜಕೀಯ ತತ್ತ್ವಶಾಸ್ತ್ರ"ವು ಸಮಾಜಶಾಸ್ತ್ರವಾಯಿತು, ಮತ್ತು "ಮಾನಸಿಕ ತತ್ತ್ವಶಾಸ್ತ್ರ"ವು ಮನಃಶಾಸ್ತ್ರವಾಯಿತು. ಮನಃಶಾಸ್ತ್ರದ ಇತಿಹಾಸವು ನೂರು ವರ್ಷಗಳಿಗಿಂತ ಈಚಿನದು. ಅದಕ್ಕೆ ಮುನ್ನ ಈ ಶಾಸ್ತ್ರದ ಸ್ಥಿತಿ ಏನಾಗಿತ್ತು? ಹೆದರಿಕೆ, ಬೆದರಿಕೆ, ಮಾಟ, ಮಂತ್ರ, ಮನಸ್ಸಿನ ಮೇಲೆ ನಿರಂತರವಾಗಿ ಬರೆ ಎಳೆಯುವುದು, ಇತ್ಯಾದಿ. ಇವಿನ್ನೂ ಪೂರ್ಣವಾಗಿ ನಿಂತಿಲ್ಲ.

ಚಾರಿತ್ರಿಕವಾಗಿ ಹೇಳುವುದಾದರೆ, ತತ್ತ್ವಶಾಸ್ತ್ರದ ಕ್ಷೇತ್ರದಲ್ಲಿ ಉಳಿದಿರುವುದೆಲ್ಲವೂ ವಿಜ್ಞಾನಗಳು ತಮ್ಮತಮ್ಮ ಸ್ವತಂತ್ರ ವಿಸ್ತರಣೆಗಳನ್ನು ಪಡೆದುಕೊಂಡು, ಒಂದಿಷ್ಟು ಬಿಟ್ಟುಹೋಗಿರುವ ಸಾಮಗ್ರಿ. ನೀತಿಶಾಸ್ತ್ರವನ್ನು ಯಾರೂ ತೆಗೆದುಕೊಳ್ಳಲಿಲ್ಲ; ಸಮಾಜ ವಿಜ್ಞಾನ ಸಹ ಅದನ್ನು ತನ್ನದನ್ನಾಗಿಸಿಕೊಳ್ಳಲಿಲ್ಲ. ಹಾಗೆಯೇ, ತರ್ಕಶಾಸ್ತ್ರ, ಸೌಂದರ್ಯಶಾಸ್ತ್ರ, ಆಧ್ಯಾತ್ಮಶಾಸ್ತ್ರ. ಈ ಕಡೆಯದನ್ನು ಯಾರು ತಾನೆ ತೆಗೆದುಕೊಳ್ಳ ಬಯಸುತ್ತಾರೆ! ಆದ್ದರಿಂದ ಅವೆಲ್ಲಾ ತತ್ತ್ವಶಾಸ್ತ್ರದ ಬುಟ್ಟಿಯಲ್ಲೇ ಕುಳಿತಿವೆ. ಗಣಿತಶಾಸ್ತ್ರವು ಸ್ವಲ್ಪಮಟ್ಟಿಗೆ ತರ್ಕಶಾಸ್ತ್ರವನ್ನು ಸೆಳೆಯುವ ದೃಷ್ಟಿ ಹೊಂದಿದೆ ಮತ್ತು ಲಲಿತ ಕಲೆಗಳು ಸೌಂದರ್ಯ ಶಾಸ್ತ್ರವನ್ನು ಅಪ್ಪಿಕೊಳ್ಳಲು ತವಕದಿಂದಿವೆ. ಆದರೆ ತರ್ಕಶಾಸ್ತ್ರ ಮತ್ತು ಸೌಂದರ್ಯಶಾಸ್ತ್ರ ಮಾತ್ರ ಅವುಗಳ ಆಮಿಷಗಳಿಗೆ ಬಲಿಯಾಗದೆ ಸ್ವತಂತ್ರವಾಗಿಯೇ ಉಳಿದಿವೆ.

ಇದನ್ನೆಲ್ಲಾ ಬೇರೊಂದು ರೀತಿಯಲ್ಲಿ ಪರಿಭಾವಿಸಿಕೊಳ್ಳಲು ಸಾಧ್ಯ. ಪ್ರತಿಯೊಂದು ವಿಜ್ಞಾನ ಶಿಸ್ತಿಗೂ ಸೀಮಾರೇಖೆಗಳಿವೆ. ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರಗಳು ಹತ್ತಿರದ ಸಂಬಂಧ ಹೊಂದಿವೆ; ಆದರೆ ಮುಂದೊಂದು ದಿನ ಭೌತಶಾಸ್ತ್ರವನ್ನು ಬದಿಗಿರಿಸಿ ರಸಾಯನಶಾಸ್ತ್ರವೊಂದನ್ನೇ ಮಾನ್ಯಮಾಡಬೇಕಾಗುತ್ತದೇನೊ! ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ಪರಸ್ಪರ ಸಂಬಂಧ ಹೊಂದಿವೆ. ಆದರೆ ಮುಂದೊಂದು ದಿನ ರಸಾಯನ ಶಾಸ್ತ್ರವನ್ನು ಬಿಟ್ಟು ಕೇವಲ ಜೀವಶಾಸ್ತ್ರವನ್ನು ಕುರಿತು ಮಾತ್ರವೇ ಹೇಳಬೇಕಾಗುತ್ತದೇನೊ! ಪ್ರತಿ ವಿಜ್ಞಾನಕ್ಷೇತ್ರವೂ ದೊಡ್ಡ ಮತ್ತು ಚಿಕ್ಕ ಸಾಮಾನ್ಯೀಕರಣಗಳನ್ನು ಹೊಂದಿದೆ; ಅವುಗಳಲ್ಲಡಗಿರುವ ಇಡೀ ಜ್ಞಾನಭಂಡಾರವನ್ನು ಸಂಘಟಿಸಿ ಹೇಳುವುವು ದೊಡ್ಡ ಸಾಮಾನ್ಯೀಕರಣಗಳು. ಈಗ ಗಣಿತಶಾಸ್ತ್ರ ಮತ್ತು ಭೌತಶಾಸ್ತ್ರ ಅಥವಾ ರಸಾಯನಶಾಸ್ತ್ರ

ಮತ್ತು ಜೀವಶಾಸ್ತ್ರಕ್ಕಿಂತಲೂ ಬೃಹತ್ತಾದ ಸಾಮಾನ್ಯೀಕರಣಗಳಿವೆಯಲ್ಲ, ಅವನ್ನೇನು ಮಾಡುವುದು? ಆಯಾ ವಿಜ್ಞಾನಿಗಳ ಸುಪರ್ದಿನಲ್ಲಿ ಬಿಟ್ಟರಬೇಕು, ಅಷ್ಟೆ. ಅಂದರೆ, ವಿಜ್ಞಾನ ಶಾಖೆಗಳ ನಡುವಣ ಎಲ್ಲೆಯ ಗುರುತುಗಳು ಅಳಿಸಿಹೋಗುತ್ತಿವೆ; ಆದ್ದರಿಂದಲೇ ನಾವಿಂದು ಗಣಿತೀಯ ಭೌತಶಾಸ್ತ್ರ ಮತ್ತು ಜೀವ-ರಸಾಯನಶಾಸ್ತ್ರಗಳನ್ನು ಪಡೆದು ಕೊಂಡಿದ್ದೇವೆ. ಆದರೆ ಒಂದು ಪ್ರಶ್ನೆ ಹಾಗೇ ಉಳಿದಿದೆ: ಎಲ್ಲ ವಿಜ್ಞಾನಗಳನ್ನೂ ಮೀರಿನಿಲ್ಲುವ ಸಾಮಾನ್ಯೀಕರಣಗಳಿವೆಯಲ್ಲ, ಅವುಗಳ ಸಮಾಚಾರವೇನು? ಅವುಗಳ ಬಗ್ಗೆ ಎಲ್ಲ ವಿಜ್ಞಾನಿಗಳೂ ಏನಾದರೊಂದನ್ನು ಹೇಳಬಯಸಿಯಾರು, ಆದರೆ ಯಾರೊಬ್ಬರೂ ನಿರ್ಣಾಯಕವಾಗಿ ಅವುಗಳ ಬಗ್ಗೆ ಹೇಳಲಾರರು; ಏಕೆಂದರೆ, ಅವು ಆಯಾ ವಿಜ್ಞಾನಗಳ ಕ್ಷೇತ್ರಗಳಿಗೆ ಮಾತ್ರವೇ ಸಂಬಂಧಿಸಿದಂತಹವಲ್ಲ.

ಅಂತಹ ಸಾಮಾನ್ಯೀಕರಣಗಳುಂಟೆ? ಖಂಡಿತ ಇವೆ ಮತ್ತು ಮಾನವರಾದ ನಾವು ಅವನ್ನು ದಿನಂಪ್ರತಿ ಕ್ಷಣಕ್ಷಣವೂ ಕಾಣುತ್ತಿದ್ದೇವೆ. ಒಂದು ಉದಾಹರಣೆ ಬೇಕಾದರೆ ಎರಡನೆಯ ಮಹಾಯುದ್ಧವನ್ನು ಗಮನಿಸಿ (ಅಥವಾ ವಿಶ್ವವ್ಯಾಪಿಯಾದ ಸಾಮ್ರಾಜ್ಯಶಾಹಿಯ ಉಪಟಳವನ್ನು ನೋಡಿ). ಅದೆಷ್ಟು ವರ್ಷಗಳ ಕಾಲ ಸತತವಾಗಿ ಇವು ನಮ್ಮ ಎಲ್ಲಾ ವಲಯಗಳನ್ನೂ ಆಕ್ರಮಿಸಿವೆ! ಯುದ್ಧದ ಬಗ್ಗೆ ನಾವೇನು ತಿರ್ಮಾನಿಸಬೇಕಿತ್ತು? ಅದು ಒಳ್ಳೆಯದೋ ಅಲ್ಲವೋ ಎಂದು. ಅಂತೆಯೇ, ಇಂದಿನ ಸಾಮ್ರಾಜ್ಯಶಾಹಿ: ಅದು ಸ್ವಾಗತಾರ್ಹವೋ ಅಥವಾ ದುಷ್ಟತನದಿಂದ ಸಾಂದ್ರವಾದ ಕೆಡುಕೋ? ಎರಡನೆಯ ಮಹಾಯುದ್ಧವನ್ನು ಅತಿರೇಕವೆಂದು ಭಾವಿಸಲಾಯಿತು, ಏಕೆಂದರೆ ಅದು ಮೊದಲ ಯುದ್ಧದಂತೆಯೇ ಇತ್ತು. ಸಾಮ್ರಾಜ್ಯಶಾಹಿಯು ಕೂಡ ಹಿಂದಿನ ವಸಾಹತುಶಾಹಿಯ ಪ್ರತಿರೂಪವೇ ಆಗಿದೆ. ಜನರನ್ನು ನೀವೊಂದು ಪ್ರಶ್ನೆ ಕೇಳಿದ್ದಿರೆನ್ನಿ: "ನಿಮ್ಮ ತೀರ್ಮಾನಕ್ಕೆ ಪುರಾವೆ ಏನು?" ಎಂದು. ಅದಕ್ಕೆ ಉತ್ತರ ಬಹುಶಃ ಹೀಗಿರುತ್ತಿತ್ತು: "ನೋಡಿ, ಇತಿಹಾಸವು ಮರುಕಳಿಸುತ್ತಿರುತ್ತದೆ ಮತ್ತು ಅದೀಗ ಜರುಗುತ್ತಿದೆ." ನೀವೆನ್ನುತ್ತೀರಿ, "ಆಯಿತು ಸ್ವಾಮಿ, ಅದಕ್ಕೇನು ಪುರಾವೆ?" ಅವರೇನು ಹೇಳಿದ್ದಿರಬಹುದು? "ನೋಡಿ, ಹಾಗೆ ಪರಾಮರ್ಶಿಸಿದರೆ ಇಡೀ ಜಗತ್ತು ಒಂದು ಯಂತ್ರದಂತೆ ನಡೆದುಕೊಳ್ಳುತ್ತದೆ, ಅದು ಪದೇಪದೇ ಮಾಡಿದ್ದನ್ನೇ ಮಾಡುತ್ತಿರುತ್ತದೆ."

ಇದೊಂದು ಸಾಮಾನ್ಯೀಕರಣ, ಬಹಳ ಪರಿಚಿತವಾದ್ದು: "ಎಲ್ಲ ಬದಲಾವಣೆಗಳೂ ಯಾಂತ್ರಿಕವಾದವು, ಮರುಕಳಿಸುತ್ತಿರುವಂಥವು." ಈಗ ನೋಡಿ, "ಬದಲಾವಣೆ" ಎಂಬುದಿದೆಯಲ್ಲ, ಅದರ ಪ್ರತಿಪಾದನೆಯನ್ನು ಯಾವುದಾದರೂ ವಿಜ್ಞಾನ ಕ್ಷೇತ್ರವು ಪರಿಸಮಾಪ್ತಿ ಮಾಡಬಲ್ಲುದೆ? ಇಲ್ಲ, ಏಕೆಂದರೆ ಅದು ಬೇರೆಲ್ಲ ವಿಜ್ಞಾನ ಕ್ಷೇತ್ರಗಳು ಸಹ ಪರೀಕ್ಷಿಸಬೇಕಾದ ಸಂಗತಿ; ಅದು ಯಾವೊಂದು ಕ್ಷೇತ್ರಕ್ಕೂ ಸೀಮಿತವಾದುದಲ್ಲ. ಜೊತೆಗೆ ಇನ್ನೊಂದು ಇಬ್ಬಂದಿ ಇದೆ: ವಿವಿಧ ವಿಜ್ಞಾನ ಶಾಖೆಗಳು ಬದಲಾವಣೆಯನ್ನು ಸ್ವಲ್ಪ ಭಿನ್ನತೆಯಿಂದ ವ್ಯಾಖ್ಯಾನಿಸುತ್ತವೆ. ನಿರವಯವ ವಸ್ತುಗಳ ಸಂಬಂಧದಲ್ಲಿ ಬದಲಾವಣೆಯು ಶಕ್ತಿ ಅಥವಾ ಊರ್ಜೆಯ ರೂಪದಲ್ಲಿ ಕಾಣುತ್ತದೆ; ಅದೇ ಸಾವಯವ ದ್ರವ್ಯಗಳಲ್ಲಿ ಬದಲಾವಣೆಯು ಜೀವದ ರೂಪ ತಾಳುತ್ತದೆ. ಎರಡನೆಯ ಮಹಾಯುದ್ಧವನ್ನು ವಿರೋಧಿಸಿದ್ದವರು ಪ್ರಶ್ನೆಯನ್ನು ನಿಜವಾಗಿಯೂ ಎತ್ತಿದ್ದು ಹೀಗೆ: ಬದಲಾವಣೆಯು ಕೇವಲ ಪುನರಾವರ್ತನೆಗೊಳ್ಳುವಂಥದೋ ಅಥವಾ ವಿಶ್ವದಲ್ಲಿ ಸದಾ ಏನಾದರೊಂದು

ಹೊಸತನವನ್ನು ಪರಿಚಯಿಸುವಂಥದೋ? ಎರಡನೆಯ ಸಾಧ್ಯತೆಯು ಸರಿ ಎನ್ನುವುದಾದರೆ ಎರಡನೆಯ ಮಹಾಯುದ್ಧವು ಮೊದಲನೆಯದಕ್ಕಿಂತ ಬಹಳ ಭಿನ್ನವಾಗಿದ್ದಿರಬೇಕು. ಹಾಗಿದ್ದಾಗ ನಮ್ಮ ಮಾಪನವು ಪೂರ್ಣವಾಗಿ ಭಿನ್ನವಾಗಿಹೋಗುತ್ತದೆ.

ಸಾಮಾಜಿಕ ವಿಷಯದ ಬಗೆಗೆ ಎತ್ತಲಾದ ತಕರಾರು ಈಗ ಪೂರ್ಣವಾಗಿ ತತ್ತ್ವಶಾಸ್ತ್ರದ ಪ್ರಶ್ನೆಯಾಗಿಹೋಯಿತು. ಯಾವೊಂದು ವಿಜ್ಞಾನವೂ ಈ ಪ್ರಶ್ನೆಗೆ ಉತ್ತರ ನೀಡಲಾರದು. ವಿಜ್ಞಾನ ಶಾಖೆಗಳೆಲ್ಲಾ ಒಟ್ಟಾಗಿಯೂ ಪ್ರಶ್ನೆಯನ್ನು ಉತ್ತರಿಸಲಾರವು, ಆದರೆ ಅವು ನೀಡುವ ಪುರಾವೆ ಬಹಳ ಪ್ರಮುಖವಾಗಿರುತ್ತದೆ. ಪ್ರಶ್ನೆಯನ್ನು ಉತ್ತರಿಸುವವನು ಯಾರೇ ಆಗಿರಲಿ, ಎಲ್ಲ ಪುರಾವೆಗಳನ್ನೂ ಪರೀಕ್ಷಿಸಲು ಆತ ಸಮರ್ಥನಾಗಿರಬೇಕು; ಮತ್ತು ಎಲ್ಲ ಪುರಾವೆಗಳನ್ನೂ ಒಳಗೊಳ್ಳುವಂತಹ ಒಂದು ದೃಷ್ಟಿಕೋನದಿಂದ ನೋಡಲು ಅವನು ಸಮರ್ಥನಾಗಿರಬೇಕು. ಆ ದೃಷ್ಟಿಕೋನವು ಅಪ್ಪಟವಾಗಿ ತತ್ತ್ವಶಾಸ್ತ್ರೀಯ ವಾಗಿರುತ್ತದೆ ಎನಿಸುತ್ತದೆ. ಅದು ಸರಿಯಾದರೆ, ಮಾನವನ ಜೀವನದಲ್ಲಿ ತತ್ತ್ವಶಾಸ್ತ್ರೀಯ ಕ್ರಿಯೆಗಳು ಎಂದಿಗೂ ಪೂರ್ತಿ ಅಪ್ರಸ್ತುತವಲ್ಲ ಎಂಬುದು ನಿಜವಿರುತ್ತದೆ.

ಇದರ ಮಥಿತಾರ್ಥವಿಷ್ಟೆ: ಯಾವಾಗ ನಾವೆತ್ತುವ ಪ್ರಶ್ನೆಗಳು ಅಥವಾ ನಮ್ಮ ಪರಾಮರ್ಶೆ ತತ್ತ್ವಶಾಸ್ತ್ರೀಯವೆಂಬುದನ್ನು ತೀರ್ಮಾನಿಸುವುದು ಕಷ್ಟವಲ್ಲ. ಯಾವುದೇ ಒಂದು ವಿಜ್ಞಾನ ಶಾಖೆ ಅಥವಾ ಹಲವು ಶಾಖೆಗಳು ಜಂಟಿಯಾಗಿ ನಮ್ಮ ಮುಂದೆ ಬರುವ ಸಾಮಾನ್ಯೀಕರಣಗಳನ್ನು ವಿವರಿಸಲಾಗುವುದಿಲ್ಲವೋ ಆಗ ಪರಾಮರ್ಶೆಯು ತತ್ತ್ವಶಾಸ್ತ್ರೀಯವಾಗಿರುತ್ತದೆ. ತರ್ಕಶಾಸ್ತ್ರ ಮತ್ತು ವೈಜ್ಞಾನಿಕ ವಿಧಾನ, ಇವೆರಡನ್ನೂ ಒಳಗೊಂಡಂತಿರುವ ಸಮಸ್ಯೆಗಳನ್ನು ಕುರಿತು ಪರಾಮರ್ಶೆಯು ತತ್ತ್ವಶಾಸ್ತ್ರೀಯವಾಗಿರುತ್ತದೆ. ಅಂತೆಯೇ, ನೈತಿಕ ಮೌಲ್ಯಗಳನ್ನು ನಿರ್ಧರಿಸುವ ಸಮಸ್ಯೆಗಳ ಸಂದರ್ಭದಲ್ಲಿ ಸಹ. ನಮ್ಮ ಬಹುತೇಕ ಸಮಸ್ಯೆಗಳು ಒಂದಲ್ಲ ಒಂದು ರೀತಿಯಲ್ಲಿ ಈ ಬಗೆಯವೇ ಆಗಿರುತ್ತವೆ. ಸಾರಾಂಶರೂಪದಲ್ಲಿ ಹೇಳುವುದಾದರೆ, ನಾವೇನೆಲ್ಲಾ ಹೇಳುತ್ತೇವೆಯೋ ಅದರರ್ಥವೇನೆಂದು ತಿಳಿಸುವುದು ತತ್ತ್ವಶಾಸ್ತ್ರ ಎನ್ನಬಹುದು; ಇನ್ನೂ ಹೆಚ್ಚಾಗಿ, ಹಾಗೆಲ್ಲಾ ಮಾತನಾಡುತ್ತಿರುವಾಗ ನಿಜಕ್ಕೂ ನಾವೇನಾದರೂ ಹೇಳುತ್ತಿರುತ್ತೇವೆಯೆ ಎಂಬುದನ್ನು ತಿಳಿಸುವುದು ತತ್ತ್ವಶಾಸ್ತ್ರ.

ಐತಿಹ್ಯಗಳ ಪ್ರಯೋಜನ

ಬರೋನ್ ದೋಲ್ಬಾಕ್ ಒಂದೆಡೆ ಬರೆಯುತ್ತಾನೆ: "ಮಾನವನ ಅಸಂತೋಷಕ್ಕೆ ಕಾರಣ ಪ್ರಕೃತಿಯ ಬಗೆಗಿನ ಅವನ ಅಜ್ಞಾನ." ಇದೊಂದು ಪರಮಸತ್ಯ ಮತ್ತು ಮಾನವನ ಭವಿಷ್ಯವು ಖಂಡಿತವಾಗಿಯೂ ಅದನ್ನಾಧರಿಸಿರುತ್ತದೆ. ಬೇರೇನು ಕಾಣಿಕೆಯನ್ನು ನೀಡದಿದ್ದರೂ ಜ್ಞಾನವು ತೃಪ್ತಿ ತರುವುದು ಖಂಡಿತ. ನಮ್ಮ ಸುತ್ತಮುತ್ತಣ ಸಂದರ್ಭವು ಆಗಾಗ ಪೆಟ್ಟು ನೀಡುತ್ತಿರುತ್ತದೆ. ಅದನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗದಿದ್ದರೂ ನಮಗೆ ನಿಜಕ್ಕೂ ಪೆಟ್ಟು ಬಿದ್ದದ್ದು ಯಾವುದರಿಂದ ಎಂಬುದನ್ನು ತಿಳಿಯುವುದರಲ್ಲಿ ಏನೋ ಸಮಾಧಾನವಿದೆ. ಈಗ ಯೋಚಿಸಿ, ಅಂತಹ ಸಮಾಧಾನದ ಅವಶ್ಯಕತೆಯೇ ಇಲ್ಲದಿದ್ದರೆ ಹೇಗಿರುತ್ತದೆ! ಅಂದರೆ, ಆಯಾ ಸಂದರ್ಭಗಳ ಬಗೆಗಿನ ಜ್ಞಾನವು ಬದಲಾಯಿತೆನ್ನಿ; ಹಾಗೆ ಮುಂದುವರಿದು ಸಂದರ್ಭಗಳು ನಮ್ಮ ಹತೋಟಿಗೆ ಬರುವಂತಾದರೆ ಏನದ್ಭುತ!

ಭೌತಿಕ ಪ್ರಪಂಚವನ್ನು ಕುರಿತಂತೆ ಇಂತಹ ತಿಳಿವಳಿಕೆ ಸಾಕಷ್ಟು ಲಭ್ಯವಾಗಿದೆ. ಕಳೆದ ಮುನ್ನೂರು ವರ್ಷಗಳಲ್ಲಿ ಆ ಜ್ಞಾನದ ರಾಶಿ ನಮ್ಮದಾಗಲು ಸಾಧ್ಯವಾಯಿತು. ಪ್ರಕೃತಿಯ ಮೇಲೆ ಮಾನವನು ಸಾಧಿಸಿದ ಹಿಡಿತದ ವಿಶಾಲ ಆಯಾಮದ ಇತಿಹಾಸವನ್ನು ಲಂಬಿಸುವ ಅವಶ್ಯಕತೆ ಇಲ್ಲ. ಇಷ್ಟು ಹೇಳಿದರೆ ಸಾಕು: ಇಂದಿನ ಆ ಹಿಡಿತವು ಎಷ್ಟು ಅಗಾಧವಾಗಿದೆಯೆಂದರೆ ನಾವು ಸರಿಯಾಗಿ ಸಂಯೋಜನೆ ಮಾಡಿಕೊಂಡರೆ ಇಡೀ ಮನುಕುಲದ ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಳ್ಳಬಹುದು. ಸಹಜವಾಗಿಯೇ ಪ್ರಕೃತಿಯ ವಿಕೋಪಗಳು ನಮ್ಮನ್ನು ತಟ್ಟುತ್ತವೆ, ಆದರೆ ಅವುಗಳ ದಟ್ಟ ಪರಿಣಾಮಗಳನ್ನು ನಿವಾರಿಸಿಕೊಳ್ಳಲು ಸಾಧ್ಯ. ಇಂದಿನ ತಂತ್ರಜ್ಞಾನವು ಎಲ್ಲೆಯಿಲ್ಲದಷ್ಟು ಉತ್ಪನ್ನಗಳನ್ನು ನಮಗೆ ನೀಡಬಲ್ಲದು. ಅದೆಲ್ಲಾ ಸಾಧ್ಯವಾದದ್ದು ಆಧುನಿಕ ಮಾನವನ ಜ್ಞಾನ ವಿಸ್ತರಣೆಯಿಂದಲೇ ಹೊರತು ಎಂಥದೋ ನಂಬಿಕೆಯ ಪರಿಣಾಮವಾಗಿ ಅಲ್ಲ. ಜ್ಞಾನವು ಬೆಟ್ಟಗಳನ್ನು ಬೇಕಾದರೂ ಚಲಿಸುವಂತೆ ಮಾಡಿಬಿಟ್ಟೀತು, ಆದರೆ ಕೇವಲ ನಂಬಿಕೆ ಅದನ್ನು ಮಾಡಲಾರದು.

ಈಗ ಸಮಾಜದ ಕೆಲವು ವಿಭಾಗಗಳು ನೀಡುವ ಹೇಳಿಕೆ ನೋಡಿ: ಮಾನವನು ತನ್ನ ಸಹಮಾನವರೊಂದಿಗೆ ಹೊಂದಿರುವ ಸಂಬಂಧವನ್ನೇನಾದರೂ ಅನುಕೂಲಕರವಾಗಿ ನಿಯಂತ್ರಿಸಲು ಬರುತ್ತದೆಯೆ? ಪ್ರಕೃತಿಯಿಂದ ಎಷ್ಟು ಅಪಾರ ಸಂಪತ್ತನ್ನು ಕೊಡುಗೆಯಾಗಿ ಪಡೆಯುತ್ತೇವೆ, ಅಲ್ಲವೆ? ಅದಕ್ಕೆ ಮಾನವನ ಕೌಶಲ್ಯವೂ ಒಂದು ಕಾರಣ. ಆದರೆ ಆ ಸಂಪತ್ತನ್ನು ಹಂಚಿಕೊಳ್ಳುವುದರಲ್ಲಿ ನಾವು ಯಶಸ್ಸು ಗಳಿಸಿಲ್ಲ. ಈ ಸೋಲು ವಿಪತ್ಕಾರಿ ಪರಿಣಾಮವನ್ನುಂಟುಮಾಡಿ ಕಡೆಗೆ ಸಂಪತ್ತಿನ ಸೃಷ್ಟಿಗೇ ಸಂಚಕಾರ ತರಬಹುದು. ಆರ್ಥಿಕ ಕುಸಿತ ಉಂಟಾದಾಗ ನಾವು ನೋಡುವುದೇನು? ಬೇಕಾದಷ್ಟು ಉತ್ಪಾದನೆ ಮಾಡಿ ಬಡತನಕ್ಕೆ ಬಲಿಯಾಗುತ್ತೇವೆ! ನಮ್ಮ ಯಂತ್ರಗಳು ಸಕಲರ ದುಡಿಮೆಯನ್ನು ಉಳಿತಾಯ ಮಾಡುವ ಬದಲು ಕೆಲವರಿಗೆ ಸಂಪತ್ತು ಮತ್ತು ವಿರಾಮ ಎರಡನ್ನೂ ಕೊಡಮಾಡುತ್ತವೆ ಮತ್ತು ಇನ್ನು ಬೇರೆ ಅನೇಕರಿಗೆ ವಿರಾಮ ಮತ್ತು ಬಡತನಗಳನ್ನು ಹೇರುತ್ತವೆ.

ಯುದ್ಧಗಳು ನಮ್ಮನ್ನು ನುಂಗಿಹಾಕಿಬಿಡುತ್ತವೆ, ನಾಶಮಾಡಿಬಿಡುತ್ತವೆ. ಅಪಾರ ಜನಸಂಖ್ಯೆಯ ಸಮುದಾಯಗಳು ಕಿರುಕುಳ ಮತ್ತು ದಾಸ್ಯಕ್ಕೆ ಸಿಲುಕುತ್ತವೆ. ಅದಕ್ಕೆ ಕಾರಣವೇನು? ಅವರು ಮತ್ತು ಅವರ ಭೌಗೋಳಿಕ ಪ್ರದೇಶಗಳು ಆಕರ್ಷಕ ಸಾಮಗ್ರಿಗಳ ಖಜಾನೆಗಳಾಗಿರುವುದು. ಎಲ್ಲೋ ಒಂದೆಡೆ ಫ್ಯಾಸಿಸ್ಟ್ ಆಡಳಿತವು ನೆಲೆಗೊಂಡರೆ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಲ್ಲಿ ಕೆಲವೊಮ್ಮೆ ವಿಚಿತ್ರ ಪ್ರಕ್ರಿಯೆ ಮೂಡುತ್ತದೆ; ಆ ರಾಷ್ಟ್ರಗಳ ಒಂದಷ್ಟು 'ಗೌರವಾನ್ವಿತ' ನಾಗರಿಕರು ಫ್ಯಾಸಿಜ಼ಂನ ಕ್ರೂರ ದೌರ್ಜನ್ಯಗಳನ್ನು ತಮ್ಮ ದೇಶದಲ್ಲಿ ಕಾಣಲು ಹಾತೊರೆಯುತ್ತಾರೆ. ಅಲ್ಲದೆ, ಫ್ಯಾಸಿಜ಼ಂನ ದಬ್ಬಾಳಿಕೆಯಲ್ಲಿ ವಿಜ್ಞಾನ ಮತ್ತು ಅದರ ನಿಷ್ಪಕ್ಷಪಾತ ತಂತ್ರಗಳ ಅಧ್ಯಯನವನ್ನು ಕಟ್ಟಾ ಶತ್ರುವಿನಂತೆ ಭಾವಿಸಲಾಗುತ್ತದೆ. ಅದರ ಪರಿಣಾಮವಾಗಿ ಮೋಸಗಾರಿಕೆ ಮತ್ತು ತಪ್ಪುಗಳು ಸಹಜವಾಗಿ ಉಲ್ಬಣಿಸುತ್ತವೆ.

ಮಾನವ ಸ್ವಭಾವ ಮತ್ತು ಸಮಾಜದ ಬಗ್ಗೆ ನಮಗೆ ಸ್ವಲ್ಪ ಜ್ಞಾನ ಇದೆ. ಸಾಕಷ್ಟು ಹೆಚ್ಚಾಗಿಯೇ ತಿಳಿದಿದೆ ಎನ್ನಬಹುದು. ಆದರೆ ಅದು ಸೀಮಿತಗೊಳ್ಳುತ್ತದೆ, ಅಡಚಣೆಗಳನ್ನೆದುರಿಸುತ್ತದೆ ಮತ್ತು ಕೆಲ ವೇಳೆ ಭ್ರಷ್ಟವಾಗಿಹೋಗುತ್ತದೆ. ಅದಕ್ಕೆ ಕಾರಣ,

ಸವಲತ್ತುಗಳನ್ನು ಅನುಭೋಗಿಸುತ್ತಿರುವ ಸಣ್ಣಸಣ್ಣ ಗುಂಪುಗಳು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಮಾಡುವ ಯತ್ನ. ವಿಶಾಲ ಸಮುದಾಯದ ಕಣ್ಣಿಗೆ ಮಣ್ಣೆರಚುವುದು ಅವಕ್ಕೆ ಅಗತ್ಯ. ಆದ್ದರಿಂದ ಕೆಲವು ಆಯ್ದ ನಂಬಿಕೆಗಳನ್ನು ಪ್ರಚಾರ ಮಾಡಲಾಗುತ್ತದೆ. ಆ ನಂಬಿಕೆಗಳು ವಿಜ್ಞಾನವು ತೋರಿಸಿಕೊಡುವ ಸತ್ಯಕ್ಕೆ ಹೊಂದಿಕೊಳ್ಳುವುದಿಲ್ಲವಾದರೂ ಅವನ್ನೇ ಆಯ್ದುಕೊಳ್ಳುವುದು ಮಾನವನ ನಡವಳಿಕೆಯನ್ನು ನಿಯಂತ್ರಿಸಲು ಅವು ಸಹಾಯ ಮಾಡುತ್ತವೆಂಬ ಕಾರಣಕ್ಕೆ. ಸಾಮಾನ್ಯತಃ ಹೇಳುವುದಾದರೆ ಸಮಾಜವನ್ನು ಆಳುವವರಿಗೆ ಎಷ್ಟು ಮಾತ್ರದ ಸತ್ಯವು ಅನುಕೂಲಕರವೋ ಅಷ್ಟನ್ನು ಮಾತ್ರವೇ ನಮ್ಮ ನಡುವೆ ಪ್ರಚಲಿತವಾಗಿರಲು ಬಿಡಲಾಗುತ್ತದೆ. ಭೂಮಿಯು ಗುಂಡಾಗಿದೆಯೆಂಬ ಸತ್ಯವನ್ನು ಸಹ ಈ ಆಳುವ ಜನ ಇತ್ತೀಚಿನ ಶತಮಾನಗಳವರೆವಿಗೆ ಸಹಿಸಲು ಸಿದ್ಧವಿರಲಿಲ್ಲ.

ವಿದ್ವತ್ಪ್ರಪಂಚದಲ್ಲಿ ವಿಜ್ಞಾನ ಶಾಖೆಗಳನ್ನು ಶ್ರೇಣೀಕರಿಸಲಾಗಿದೆ: ಗಣಿತ ಮತ್ತು ಭೌತಶಾಸ್ತ್ರಗಳು ಮೇಲ್ಪಂಕ್ತಿಯವು; ಮನೋವಿಜ್ಞಾನ ಮತ್ತು ಸಮಾಜವಿಜ್ಞಾನ ಕೆಳಗಿನ ಮೆಟ್ಟಿಲುಗಳವು. ಮೇಲಿನ ಮೆಟ್ಟಿಲುಗಳ ವಿಜ್ಞಾನಿಗಳು ಮಹಿಮಾವಂತರು, ಸುರಕ್ಷಿತರು; ಕೆಳಗಿನ ಮೆಟ್ಟಿಲುಗಳವರು ದೈನ್ಯದಿಂದಿರಬೇಕು! ಆದರೆ ಅವರು ಸ್ವಲ್ಪ ದಂಗೆಕೋರರು! ಈ ರೀತಿಯ ಶ್ರೇಣೀಕರಣಕ್ಕೆ ಸಮರ್ಥನೆ ಏನು? ಯಾವುದು ನಿಶ್ಚಿತ ಸತ್ಯವನ್ನು ಸಾರುತ್ತದೋ ಅದು ಶ್ರೇಷ್ಠ ಎಂಬುದು. ಇಲ್ಲಿ ಒಂದು ಊಹೆಯು ಕೆಲಸ ಮಾಡುತ್ತದೆ: ಯಾವ ಶಿಸ್ತು ಹೆಚ್ಚಾಗಿ ಗಣಿತಶಾಸ್ತ್ರೀಯವಾಗುತ್ತಾ ಹೋಗುತ್ತದೋ ಅದು ನಿಖರವಾದ್ದು ಮತ್ತು ನಿಖರತೆಯು ಸತ್ಯದೊಡನೆ ಹೊಂದಿಕೊಂಡಿರುತ್ತದೆ. ಈ ರೀತಿಯ ಕಲ್ಪನೆಯು ಸಂದಿಗ್ಧತೆಯಿಂದ ಕೂಡಿದೆ; ಆದಾಗ್ಗ್ಯೂ ಶ್ರೇಣೀಕರಣಕ್ಕೆ ಅದನ್ನು ಮಾನ್ಯ ಮಾಡಲಾಗಿದೆ. ಭೌತಿಕ ವಿಜ್ಞಾನಗಳಿಗೆ ಶ್ರೇಷ್ಠ ಪದವಿ ನೀಡಲು ನಿಜವಾದ ಕಾರಣ, ಅವು ರಾಜಕೀಯವಾಗಿ ತಟಸ್ಥಭಾವ ಹೊಂದಿರುತ್ತವೆ ಎಂಬುದು; ಆದರೆ ಸಮಾಜವಿಜ್ಞಾನಗಳು ಡೈನಮೈಟ್‌ನಂತಿವೆ. ಆದ್ದರಿಂದ ಇವಕ್ಕೆ ಗೌರವಾನ್ವಿತ ಸ್ಥಾನ ದೊರಕದಂತೆ ಮಾಡುವುದು ಅಪೇಕ್ಷಣೀಯ. ಅಷ್ಟೇ ಏಕೆ, ಸಮಾಜವಿಜ್ಞಾನವೆಂಬ ಶಿಸ್ತೊಂದು ಇರಲು ಸಹ ಸಾಧ್ಯವಿಲ್ಲವೆಂದು ಪ್ರತಿಪಾದಿಸಿಬಿಟ್ಟರೆ ಇನ್ನೂ ಹೆಚ್ಚು ಅನುಕೂಲ. ನಿಖರತೆ ಎಂಬ ಮಾಪನಸಾಧನದ ಮಾಂತ್ರಿಕತೆಯಿಂದಾಗಿ ಅನೇಕ ಭೌತಿಕ ವಿಜ್ಞಾನಿಗಳು ಇದೇ ಅಭಿಪ್ರಾಯವನ್ನು ಪ್ರಚಾರ ಮಾಡುತ್ತಾ ಬಂದಿದ್ದಾರೆ.

ಸಮಾಜವಿಜ್ಞಾನಗಳಲ್ಲಿ ಸಹ ಎಂಥದೋ ಸೋಂಕು ಮನೆಮಾಡಿಕೊಳ್ಳಲು ಸಾಧ್ಯ. ಕೆಲವು ವಿದ್ವಾಂಸರಿರುತ್ತಾರೆ: ಅವರ ಆರ್ಥಿಕ ಆಶಯಗಳನ್ನು ಪೂರೈಸಿಕೊಂಡ ನಂತರ ಬಹಳ ವಿಧೇಯರಾಗಿ ಕಾಲಕಾಲಕ್ಕೆ ಹಂಗಾಮಿಯಾಗಿರುವಂತೆ ಎಂಥವೋ ವಾದಗಳನ್ನು ಉತ್ಪಾದಿಸುವುದು ಅವರ ಜಾಯಮಾನ. ಅವರನ್ನು ಬಿಡಿ, ನಿಜಕ್ಕೂ ಗಣನೆಗೆ ಬರುವವರು ಒತ್ತಡಗಳಿಗೆ ಸಿಲುಕುವಂತಹ ವಿದ್ವಾಂಸರು. ಅರುಚಿಕರವಾದ ಸತ್ಯಗಳಿಗೆ ಅವರು ಸಿಹಿಯ ಲೇಪ ಹಚ್ಚುತ್ತಾರೆ. ಅದರ ಪರಿಣಾಮವಾಗಿ, ಸಮಾಜದ ಅಧ್ಯಯನ ಕೈಗೊಂಡಾಗ ಎಂತಹ ಚಮತ್ಕಾರ ಮಾಡುತ್ತಾರೆಂದರೆ ಯಾವ ಸಮಾಜದ ಅಧ್ಯಯನ ಮಾಡುತ್ತಾರೋ ಅಲ್ಲಿ ಆಗಲೆ ಬೇರುಬಿಟ್ಟಿರುವ ಅಭಿಪ್ರಾಯಗಳಿಗೆ ಸಮರ್ಥನೆ ನೀಡುವಂತಹ ಸಂಶೋಧನೆ ಮಾಡಿಬಿಡುತ್ತಾರೆ. ಇವೆಲ್ಲಾ ಪರಿಹಾರ ಇಲ್ಲದವೇನಲ್ಲ; ಕಡೇಪಕ್ಷ ಅವುಗಳ ದುಷ್ಪ್ರಭಾವ ಇಲ್ಲದಂತಾದರೂ ಮಾಡಲು ಸಾಧ್ಯ.

ಆದರೆ ಅವನ್ನು ಎಷ್ಟು ಅವೈಜ್ಞಾನಿಕಗೊಳಿಸಬಹುದೋ ಅಷ್ಟನ್ನು ಮಾಡುವ ವಿದ್ವಾಂಸರಿದ್ದಾರೆ. ಉದಾಹರಣೆಗೆ, ಮನೋವಿಜ್ಞಾನವನ್ನು ನೋಡಿ. ಆ ಕ್ಷೇತ್ರದ ಕೆಲವು ವಿಜ್ಞಾನಿಗಳ ಉದ್ಯೋಗ ವಿಜ್ಞಾನಕ್ಕೆ ಮಸಿ ಬಳಿಯುವುದಾಗಿದೆ. ಮಹಿಳೆಯರಲ್ಲಿ ಎಡಭಾಗದ ಮಿದುಳು ಕುಬ್ಜವಾದ್ದರಿಂದ ಗಣಿತಶಾಸ್ತ್ರ ಅವರಿಗೆ ದಕ್ಕುವುದಿಲ್ಲ, ದುಡಿಯುವ ಜನರ ಬುದ್ಧಿಯ ಅಂಕ ಇತರರಲ್ಲಿರುವುದಕ್ಕಿಂತ ಕಡಿಮೆ, ವಸಾಹತು ದೇಶಗಳ ಜನಕ್ಕೆ ಸ್ವಯಮಾಡಳಿತ ಸಾಧ್ಯವಾಗುವುದಿಲ್ಲ, ಎಂಬಿತ್ಯಾದಿ ಸೂತ್ರಗಳನ್ನು ಅವರು ಉಸುರುತ್ತಾರೆ. ಇಂತಹ ವಿದ್ವಾಂಸರಿಲ್ಲದಿದ್ದರೆ ಮನೋವಿಜ್ಞಾನದ ಘನತೆ ಹೆಚ್ಚುತ್ತಿರುತ್ತಿತ್ತು. ಸಮಾಜಶಾಸ್ತ್ರವನ್ನು ಪರಿಗಣಿಸಿ: ಆರ್ಥಿಕ ಸನ್ನಿವೇಶವು ಸಾಮಾಜಿಕ ನಡತೆಯನ್ನು ಪ್ರಭಾವಿಸುತ್ತದೆಂಬುದನ್ನು ಗೌಣವಾಗಿಸುವ ಹೊರೆ ಅದರ ಮೇಲಿಲ್ಲದಿದ್ದರೆ ಅದು ಇನ್ನೂ ಉಚ್ಚಮಟ್ಟದ ವಿಜ್ಞಾನವಾಗಿರಬಹುದಿತ್ತು. ಆದರೆ ಎಲ್ಲವನ್ನೂ ತನ್ನ ಸ್ವ-ಪ್ರಯೋಜನಕ್ಕೆ ಬಳಸಿಕೊಳ್ಳುವ ಪ್ರವೃತ್ತಿ ಇರುವ ಬಣವೊಂದಿದ್ದರೆ ವಿಜ್ಞಾನವು ತನ್ನ ದನಿಯನ್ನು ಕಳೆದುಕೊಳ್ಳುತ್ತದೆ.

ಭೌತಿಕ ವಿಜ್ಞಾನಗಳು ಬಹಳ ಶ್ಲಾಘನೀಯ ವ್ರತಧಾರಿಗಳೇ ಆಗಿವೆಯೆಂದು ಬೀಗುವಂತಿಲ್ಲ. ಈಗೇನೋ ಅವಕ್ಕೆ ವಿಶೇಷ ಮರ್ಯಾದೆ ಇದೆ, ನಮ್ಮನ್ನು ಬೆರಗುಗೊಳಿಸುತ್ತವೆ. ಆದರೆ ಇತಿಹಾಸದ ಒಂದು ಘಟ್ಟದಲ್ಲಿ ಇಂದು ಸಮಾಜ ವಿಜ್ಞಾನಗಳು ಹೊಂದಿರುವ ಅವಮರ್ಯಾದೆಗೆ ಅವೂ ಗುರಿಯಾಗಿದ್ದವು. ಊಳಿಗಮಾನ್ಯ ಪದ್ಧತಿಯ ಸಮಾಜದಲ್ಲಿ ಶ್ರೀಮಂತರದೇ ಕಾರುಬಾರು. ಅದು ದೈವದಿಂದಲೇ ವಿಧಿಸಲಾಗಿತ್ತೆಂದು ನಂಬಲಾಗಿತ್ತು! ಈ ಶ್ರೀಮಂತರು ತಮ್ಮ ಪಾಳೆಯಗಳನ್ನು ಸುಭದ್ರಗೊಳಿಕೊಳ್ಳಲು ಭೌತ ಪ್ರಪಂಚದ ಸ್ವರೂಪದ ಬಗ್ಗೆ ತಮ್ಮದೇ ಕಟ್ಟುಕತೆಗಳನ್ನು ಕಟ್ಟಿಕೊಟ್ಟಿದ್ದರು. ಆರಂಭಿಕ ಹಂತದ ವೈಜ್ಞಾನಿಕ ಆವಿಷ್ಕಾರಗಳನ್ನು ಒಪ್ಪುವುದು ಅವರಿಗೆ ಸಾಧ್ಯವಿರಲಿಲ್ಲ. ಜೋರ್ಡಿನೊ ಬ್ರೂನೋನನ್ನು ಜೀವಂತ ಸುಟ್ಟರು, ಗೆಲಿಲಿಯೋಗೆ ಬೆದರಿಕೆಗಳನ್ನು ಒಡ್ಡಿದರು. ಅದಕ್ಕೆ ಕಾರಣ ವಿಶ್ವದ ಬಗ್ಗೆ ಅವರು ಸತ್ಯವನ್ನು ಅರುಹಿದರೆಂಬುದಲ್ಲ; ಬದಲಾಗಿ, ವಿಶ್ವದ ಬಗ್ಗೆ ಸತ್ಯಗಳ ಉಚ್ಚಾರಣೆಯು ಶ್ರೀಮಂತರ ಇರುವಿಗೆ ಹೊಂದಿಕೊಳ್ಳುವಂತಿರಲಿಲ್ಲವೆಂಬ ಕಾರಣಕ್ಕೆ. ಶ್ರೀಮಂತವರ್ಗದ ವಿರುದ್ಧ ಮಧ್ಯಮ ವರ್ಗವು ರೂಪಿಸಿದ ಒಂದು ಹರಿತವಾದ ಆಯುಧ ಭೌತವಿಜ್ಞಾನ. ಆ ಆಯುಧದ ಬಳಕೆಯನ್ನು ಹೇಗಾದರೂ ತಪ್ಪಿಸುವುದು ಶ್ರೀಮಂತವರ್ಗದ ಅಗತ್ಯವಾಗಿತ್ತು ಮತ್ತು ಅದಕ್ಕಾಗಿ ತನ್ನೆಲ್ಲ ಶಕಿಯನ್ನೂ ಪ್ರದರ್ಶಿಸಲು ಅದು ಸಿದ್ಧವಾಗಿತ್ತು. ಗೆಲಿಲಿಯೊ ನಿರೂಪಿಸಿದ ಸತ್ಯಗಳಲ್ಲಿ ಒಂದು ಭೂಮಿಯ ಚಲನೆಗೆ ಸಂಬಂಧಿಸಿದ್ದು. ತನ್ನ ಅಕ್ಷದಲ್ಲಿ ಸುತ್ತುವ ಗೋಳ ಅದು ಎಂದವನು ಹೇಳಿದ, ಆದರೆ ಊಳಿಗಮಾನ್ಯ ವ್ಯವಸ್ಥೆಯು ಪ್ರಚಾರ ಮಾಡಿದ್ದುದು ಅದು ಸ್ಥಿರವಾಗಿ ನೆಲೆಸಿದೆ ಎಂದು, ಚಪ್ಪಟೆಯಾಗಿದೆ ಎಂದು. ಇದು ವ್ಯವಸ್ಥೆಯನ್ನು ಪಲ್ಲಟ ಮಾಡುವ ಸತ್ಯ. ಇಂದಿನ ಸಮಾಜ ವಿಜ್ಞಾನಿಯು ಯುದ್ಧಗಳು ಬಂಡವಾಳಶಾಹಿಯ ಸ್ವಭಾವದಿಂದಾಗಿ ಘಟಿಸುತ್ತಲೇ ಇರುತ್ತವೆಂದು ನಿರೂಪಿಸಿದರೆ ಹೇಗಿರುತ್ತದೋ ಹಾಗೆ. ಗೆಲಿಲಿಯೊ ವಿರುದ್ಧ ಚರ್ಚಿನ ತನಿಖಾ ಮಂಡಲಿಯನ್ನು ಛೂಬಿಡಲಾಯಿತು. ಅದಕ್ಕೆ ಘೋರ ಶಕ್ತಿ ತುಂಬಲಾಗಿತ್ತು. ಇಂದಿನ ಸಮಾಜ ವಿಜ್ಞಾನಿಯು ಅಪ್ಪಿತಪ್ಪಿ ಯುದ್ಧದ ಬಗೆಗಿನ ಸತ್ಯವನ್ನು ಹೊರಗೆಡಹಿದರೆ ಅವನ

ವಿರುದ್ಧ ಹರಿಹಾಯಲು ಆಡಳಿತಗಾರರು ಎಂತೆಂಥವೋ ಸಮಿತಿಗಳನ್ನು ರಚಿಸಿಕೊಳ್ಳುತ್ತಾರೆ: ಉದಾಹರಣೆಗೆ, "ಅಮೆರಿಕಾಕ್ಕೆ ಹೊರತಾದ ನಿಲುವುಗಳ ವಿರುದ್ಧದ" ಸಮಿತಿಯೋ, ಇನ್ನಾವುದೋ ಮಣ್ಣಿನ ಇಲ್ಲವೇ ಮಸಣದ ಸಮಿತಿಯೋ ಇರುತ್ತದೆ.

"ನಿನ್ನ ಗತಿ ಇಂದೇನಾಗಿದೆಯೋ ಹಿಂದೆ ಅದು ನಮ್ಮದಾಗಿತ್ತು" ಎಂಬ ಆರೋಗ್ಯಕರ ಪಾಠವನ್ನು ಇಂದಿನ ಭೌತಿಕ ವಿಜ್ಞಾನಿಗಳು ಇಂದಿನ ಸಮಾಜವಿಜ್ಞಾನದಿಂದ ಕಲಿಯಬೇಕು. ಆಗ ಅವರಿಗೆ ಇನ್ನೊಂದು ಸತ್ಯ ಗೋಚರಿಸುತ್ತದೆ: ಸ್ವತಃ ತಮ್ಮ ಸಂಶೋಧನೆಗಳಿಗೆ ಸಹ ಸೂಕ್ಷ್ಮವಾಗಿ ಆರ್ಥಿಕ ಹಿತಾಸಕ್ತಿಗಳ ನಿಯಂತ್ರಣವಿದೆ, ಎಂದು. ಇಂದಿನ ವಿಜ್ಞಾನಿಗಳು ಕಟ್ಟುಕತೆಗಳನ್ನು ಕಟ್ಟಬೇಕೆಂಬ ಒತ್ತಾಯಕ್ಕೆ ಸಿಲುಕಿಲ್ಲ. ಅವರಲ್ಲಿ ಯಾರೂ "ಪರಮಾಣುಗಳು ವ್ಯವಸ್ಥಿತವಾಗಿ ಒಂದು ಮಾನವ ಸ್ವರೂಪವನ್ನು ಪಡೆದಾಗ ಆ ಸ್ವರೂಪದ ವ್ಯಕ್ತಿಯು ಲಾಭಕೋರತನದ ಪುತ್ಥಳಿಯಾಗಿರುತ್ತಾನೆ," ಎಂಬಂತಹ ವಾದವನ್ನು ಮಂಡಿಸಿರುವುದು ನನ್ನ ಗಮನಕ್ಕೆ ಬಂದಿಲ್ಲ. ಆದಾಗ್ಯೂ, ಪರಮಾಣು ಸಂಶೋಧನೆಗೆ ಸಂಬಂಧಸಿದ ವಿವಾದದ ಸಂದರ್ಭದಲ್ಲಿ ಪರಮಾಣು ವಿಜ್ಞಾನದ ಶಾಖೆಯ ಪ್ರಯೋಗಗಳನ್ನು ನಿಯಂತ್ರಿಸಬೇಕು ಇಲ್ಲವೆ ನಿಲ್ಲಿಸಬೇಕು ಎಂದು ಆಗ್ರಹಿಸಲು ಮುಂದಾಗಿದ್ದವರ ವಿರುದ್ಧ ವಿಜ್ಞಾನಿಗಳು ಒಟ್ಟಾಗಿ ಮುಗಿಬೀಳಬೇಕಾದ ಪ್ರಮೇಯವೊಂದು ಒದಗಿಬಂದಿತ್ತು. ಅಂದರೆ, ಸತ್ಯದ ಆವಿಷ್ಕಾರ, ವಿಶೇಷತಃ ಸತ್ಯದ ಪ್ರಚಾರ, ಯಾವಾಗಲೂ ಏನಾದರೊಂದು ಆಂತಕವನ್ನು ಎದುರಿಸುತ್ತಲೇ ಇರುತ್ತದೆ. ವಿಜ್ಞಾನವು ಇಡಿಯಾಗಿ ಪ್ರವರ್ಧಮಾನಕ್ಕೆ ಬರಬೇಕಾದರೆ ಮೊದಲು ವಿಜ್ಞಾನಗಳ ಶ್ರೇಣೀಕರಣವನ್ನು ತಡೆಗಟ್ಟುವ ಅವಶ್ಯಕತೆ ಇದೆ; ವಿಜ್ಞಾನಗಳ ಪಾಲುಗಾರಿಕೆಯಲ್ಲಿ ಸಮಾನತೆಯನ್ನು ಸ್ಥಾಪಿಸಬೇಕಾದ್ದು ಅಗತ್ಯ.

ವಿಶ್ವದ ಸ್ವಭಾವದ ಬಗ್ಗೆ ಇಂದಿಗೂ ಹಲವಾರು ಕಟ್ಟುಕತೆಗಳು ಪ್ರಚಲಿತವಾಗಿವೆ. ಏಣಿಯೊಂದನ್ನು ಆನಿಸಿ ಇಟ್ಟಿದ್ದರೆ ಅದನ್ನು ಬಳಸಿಕೊಂಡು ಹೋಗಬೇಕೇ ವಿನಾ ಸುಮ್ಮನೆ ದಾಟಿ ಹೋಗಬಾರದು, ಮುಖದ ಮೇಲಿನ ಮೊಡವೆ ಹೋಗಲಾಡಿಸ ಬೇಕಾದರೆ ಮಾಂಸದ ಚೂರನ್ನು ಹುರಿದು ಹುಣ್ಣಿಮೆಯಂದು ಅದನ್ನು ಮೊಡವೆಯ ಮೇಲಿಡಬೇಕು, ಬೇವಿನಸೊಪ್ಪು ಮಂತ್ರ ಹಾಕಿದರೆ ದೆವ್ವ ಬಿಡಿಸಬಹುದು, ಇತ್ಯಾದಿ. ವರ್ತಮಾನ ಪತ್ರಿಕೆಗಳು ವಸ್ತುನಿಷ್ಠ ಸತ್ಯವನ್ನು ಯಾವ ಪಕ್ಷಪಾತವೂ ಇಲ್ಲದೆ ಜನರಿಗೆ ತಲುಪಿಸುತ್ತವೆಂದು ಹೇಳಲಾಗುತ್ತದೆ, ಆದರೆ "ಎಂದೂ ಸುಳ್ಳಾಗದ" ನಿತ್ಯಭವಿಷ್ಯ ಮತ್ತು ವಾರಭವಿಷ್ಯವನ್ನು ಅವು ಉಣಬಡಿಸುತ್ತವೆ. ಇಂತಹ ನವಿರಾದ ಸುಳ್ಳುಗಳಿಗೆ ಭೌತಿಕ ವಿಜ್ಞಾನದಲ್ಲಿ ಸ್ಥಾನವಿಲ್ಲ. ಆದರೆ ಸಾಮಾಜಿಕ ಅಧ್ಯಯನಗಳಲ್ಲಿ ಅವು ತುಂಬಿಕೊಂಡಿವೆ. ಸಮಾಜದ ಸ್ವಭಾವದ ಬಗ್ಗೆ ಅದೆಷ್ಟು ಕಗ್ಗಗಳಿವೆ! ಅವನ್ನು ಅನೇಕ ದಪ್ಪದಪ್ಪ ಸಂಪುಟಗಳಲ್ಲಿ ಅಚ್ಚುಮಾಡಿಟ್ಟಿದ್ದಾರೆ. ವಿಜ್ಞಾನ ಕ್ಷೇತ್ರದಲ್ಲಿ ನುಸುಳಿಕೊಳ್ಳಲು ಅವಕ್ಕೆ ಭಾರಿ ಅವಕಾಶಗಳಿವೆ. ಇಂತಹ ಕಟ್ಟುಕತೆಗಳನ್ನು ಹೊರದೂಡುವುದಕ್ಕಿಂತಲೂ ಹೆಚ್ಚು ಮುಖ್ಯವಾದ ಕೆಲಸ ಏನಿದ್ದೀತು! ಮಾನವನು ತನ್ನ ಬಗ್ಗೆ, ತನ್ನ ಸ್ವಭಾವದ ಬಗ್ಗೆ, ತನ್ನ ಸಮಾಜದ ಬಗ್ಗೆ ಆರೋಗ್ಯಕರವಾದ ಸತ್ಯಗಳನ್ನು ಮನದಟ್ಟುಮಾಡಿಕೊಳ್ಳಬೇಕಾದ್ದು ಬಹಳ ಮುಖ್ಯ.

ಕಟ್ಟುಕತೆಗಳು ಇಡೀ ಮನುಕುಲಕ್ಕೆ ಲಾಭದಾಯಕವಲ್ಲ. ಅವನ್ನು ಕೈಬಿಟ್ಟು ದುಃಖದ ನಿವಾರಣೆಗೆ ಅಗತ್ಯವಾದ ಜ್ಞಾನವನ್ನು ಮೈಗೂಡಿಸಿಕೊಳ್ಳುವುದು ಹೆಚ್ಚು ಮುಖ್ಯ.

ದುಃಖಕ್ಕೆ ಕಾರಣವನ್ನು ತಿಳಿಯದೆ ಅದನ್ನು ನಿವಾರಿಸಲಾದೀತೆ? ಈ ಪ್ರಶ್ನೆಯನ್ನು ಬುದ್ಧ 2500 ವರ್ಷಗಳ ಹಿಂದೆಯೇ ಎತ್ತಿದ್ದ, ಆದರೆ ಬುದ್ಧನನ್ನು ಆದರಿಸುವವರಲ್ಲಿ ಅನೇಕರು ಅದನ್ನು ನೆನೆಯುವುದೇ ಇಲ್ಲ. ಸಮಾಜದ ಯಾವುದೇ ವಿಭಾಗಕ್ಕೂ ಕಟ್ಟುಕತೆಗಳಲ್ಲಿನ ನಂಬಿಕೆಯು ಲಾಭದಾಯಕವಲ್ಲ. ಆದರೆ ಇಡೀ ಸಮುದಾಯದಲ್ಲಿ ಕಟ್ಟುಕತೆಗಳಲ್ಲಿ ಆಳವಾದ ನಂಬಿಕೆ ಬೇರೂರಿದರೆ ಸಮಾಜದ ಯಾವುದೋ ವಿಭಾಗಕ್ಕೆ ಖಂಡಿತಕ್ಕೂ ಲಾಭವಿದೆ. ಭೂಮಿಯು ಗುಂಡಾಗಿದ್ದರೇನು, ಚಪ್ಪಟೆಯಾಗಿದ್ದರೇನು, ಶ್ರೀಮಂತನಿಗೆ ಅದು ಅಪ್ರಸ್ತುತ; ಆದರೆ ವರ್ತಕನಿಗೆ ಅದು ಗುಂಡಾಗಿದೆಯೆಂದು ತಿಳಿಯದಂತಿರುವುದು ಶ್ರೀಮಂತನ ದೃಷ್ಟಿಯಿಂದ ಬಹಳ ಮುಖ್ಯ. ಅದು ಗೊತ್ತಾಗಿಬಿಟ್ಟರೆ ಆ ವರ್ತಕನು ಜಾಗತಿಕ ವ್ಯಾಪಾರದಲ್ಲಿ ತೊಡಗಿ ಶ್ರೀಮಂತನಿಗೆ ಇತಿಶ್ರೀ ಹಾಡಿಬಿಡುತ್ತಾನೆ. ಸಮಕಾಲೀನ ಸಮಾಜದಲ್ಲಿ ಸಹ ಮೂಲಪ್ರೇರಣೆ ಅದೇ, ಸಂದರ್ಭಗಳು ಭಿನ್ನತೆಯಿಂದ ಕೂಡಿರಬಹುದು, ಅಷ್ಟೆ.

ಆಧುನಿಕ ಸಮಾಜದಲ್ಲಿ ಮೂರು ಪ್ರಧಾನ ಲಕ್ಷಣಗಳಿವೆ: ಅವನ್ನು ಮುಚ್ಚಿಡುವುದು ಇಲ್ಲವೇ ತೇಲಿಸಿಬಿಡುವುದು ಕಟ್ಟುಕತೆಗಳ ಉದ್ದೇಶ.

ಒಂದು: ಹೇರಳವಾಗಿ ಲಭ್ಯವಾಗಿರುವುದನ್ನು ಬೇಕೆಂದೇ ಇಲ್ಲವೆನ್ನುವುದು. ಯುದ್ಧದ ಸಂದರ್ಭವನ್ನುಳಿದು ಬೇರೆ ಕಾಲಗಳಲ್ಲಿ ನಮ್ಮ ತಂತ್ರಜ್ಞಾನವನ್ನು ಎಷ್ಟು ಗರಿಷ್ಠ ಉತ್ಪಾದನೆಗೆ ಬಳಸಬಹುದೋ ಅಷ್ಟು ಪ್ರಮಾಣದಲ್ಲಿ ಬಳಸುವುದಿಲ್ಲ. ಅಂತೆಯೇ, ಆ ಮಟ್ಟಕ್ಕೆ ತಂತ್ರಜ್ಞಾನವನ್ನು ತ್ವರಿತವಾಗಿ ಬೆಳೆಸುವುದಿಲ್ಲ. ಅಂದರೆ, ಸರಕುಗಳನ್ನು ಹೇರಳವಾಗಿ ಉತ್ಪಾದಿಸುವುದು ಅವುಗಳನ್ನು ವೇಗವಾಗಿ ನಾಶಕಾರ್ಯಗಳಿಗೆ ತೊಡಗಿಸುವಂತಹ ಸಂದರ್ಭಗಳಲ್ಲಿ ಮಾತ್ರ; ಉದ್ದೇಶವು ಸೃಷ್ಟ್ಯಾತ್ಮಕವಾಗಿದ್ದಾಗ ನಮ್ಮ ಆರ್ಥಿಕತೆಯು ಬಿರುಕು ಬಿಡುತ್ತದೆ, ಛಟ್-ಛಟ್ ಎಂದು ಸ್ಥಗಿತಗೊಳ್ಳುತ್ತದೆ.

ಎರಡು: ನಾವು ಉತ್ಪಾದಿಸಿದ್ದನ್ನು ವಿತರಣೆ ಮಾಡುವುದರಲ್ಲಿ ಅಪಾರ ಅಸಮಾನತೆ ಇದೆ. ಒಂದು ತುದಿಯಲ್ಲಿ ಸಂಪತ್ತಿನ ಅಗಾಧ ಕೇಂದ್ರೀಕರಣ, ಇನ್ನೊಂದು ತುದಿಯಲ್ಲಿ ಅತಿ ವಿಪರೀತವೆನಿಸುವಷ್ಟು ಬಡತನದ ಕೇಂದ್ರೀಕರಣ: ಇದು ನಮ್ಮ ಸಾಮಾಜಿಕ ತಕ್ಕಡಿಯ ವಿಪರ್ಯಾಸ. ನಗರಗಳ ಶ್ರೀಮಂತಿಕೆ ಝುಗಝುಗಿಸುವಷ್ಟು ಕಣ್ಣು ಕೋರೈಸುತ್ತದೆ. ಆದರೆ ವಸಾಹತು ದೇಶಗಳಲ್ಲಿ ಮತ್ತು ಅಮೆರಿಕಾದಂತಹ ಅತ್ಯಂತ ಅಭಿವೃದ್ಧ ದೇಶದಲ್ಲಿ ಸಾಮಾಜಿಕ ತುಳಿತಕ್ಕೆ ಸಿಲುಕಿರುವವರ ಹೀನಸ್ಥಿತಿ ಹೃದಯವಿದ್ರಾವಕವಾಗಿದೆ. ಅದನ್ನು ಮುಚ್ಚಿಡುವ ಎಲ್ಲಾ ಪ್ರಯತ್ನಗಳೂ ವ್ಯರ್ಥವೇ. ಕಣ್ತೆರದ ಯಾರಿಗಾದರೂ ಇದು ಸ್ವಯಂ ಗೋಚರ; ಅಕ್ಷಮ್ಯವಾದ ಅನ್ಯಾಯ ಮತ್ತು ಮೋಸ ಇಷ್ಟೊಂದಿರುವಾಗ ಅಂಥದೇನೂ ಇಲ್ಲವೆಂದು ಕಣ್ಣುಮುಚ್ಚಿರಲು ಸಾಧ್ಯವೆ?

ಮೂರು: ಅಮೆರಿಕಾದಂತಹ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವದ ರಾಜಕೀಯ ಸಂಸ್ಥೆಗಳಿವೆ, ಆದರೆ ಅಮೆರಿಕಾದ ಜನತೆಗೆ ತನ್ನ ದೇಶದ ರಾಷ್ಟ್ರೀಯ ಆರ್ಥಿಕತೆಯ ಮೇಲೆ ಹಿಡಿತವಿಲ್ಲ. ಅಂತಹ ಸನ್ನಿವೇಶವು ಎಲ್ಲ ಬಂಡವಾಳಶಾಹಿ ದೇಶಗಳಲ್ಲಿಯೂ ಇದೆ. ಅಲ್ಲೆಲ್ಲಾ ಆರ್ಥಿಕತೆಯನ್ನು ಒಂದು ಚಿಕ್ಕ ಬಣದ ಜನ ತಮ್ಮ ಹತೋಟಿಯಲ್ಲಿರಿಸಿ ಕೊಂಡಿದ್ದಾರೆ. ಅದನ್ನು ಆಡಳಿತಾತ್ಮಕವಾಗಿ ಹೇಗೆ ಹತೋಟಿಯಲ್ಲಿಟ್ಟುಕೊಳ್ಳಬೇಕೆಂಬುದು

ಆಯಾ ಆರ್ಥಿಕತೆಗಳ ಸ್ವರೂಪದಿಂದ ನಿರ್ಧಾರವಾಗಿರುತ್ತದೆ. ಆಂದರೆ, ಸರಕುಗಳ ಉತ್ಪಾದನೆಯಾಗುತ್ತದೆ, ಆದರೆ ಉತ್ಪಾದನೆಯು ಲಾಭದಾಯಕವಾಗಿ ಕಂಡಾಗ ಮಾತ್ರ ಉತ್ಪಾದನೆ ಮಾಡಲಾಗುತ್ತದೆ. ಆರ್ಥಿಕತೆಯು ಆಡಳಿತ ನಡೆಸುವ ರಾಜಕೀಯ ಸಂಸ್ಥೆಗಳಿಗೆ ಆದೇಶ ನೀಡುತ್ತದೆ, ಅದನ್ನು ವಿಧೇಯತೆಯಿಂದ ಒಪ್ಪಿಕೊಳ್ಳಲಾಗುತ್ತದೆ. ರಾಜಕೀಯ ಸಂಸ್ಥೆಗಳು ಆರ್ಥಿಕತೆಯ ಮೇಲೆ ಅಧಿಕಾರ ಚಲಾಯಿಸಲಾರವು.

ಈ ಮೂರು ಸಮಸ್ಯೆಗಳನ್ನು ಎಚ್ಚರಿಕೆಯಿಂದ ಪರಾಮರ್ಶೆ ಮಾಡಿಕೊಂಡರೆ ಒಂದು ವಿಷಯ ಸ್ಪಷ್ಟವಾಗುತ್ತದೆ: ಕಟ್ಟುಕತೆಗಳು ಏಕೆ ಬೇಕಾಗುತ್ತವೆಂಬುದೇ ಆ ವಿಷಯ. ಯೋಚನೆ ಮಾಡಿ: ಯಾರೊಬ್ಬರಿಗೂ ಹೇರಳವಾದ ಉತ್ಪನ್ನವನ್ನು ಪ್ರಜ್ಞಾಪೂರ್ವಕವಾಗಿ ನಿರಾಕರಿಸಬೇಕೆಂದೆನಿಸುವುದಿಲ್ಲ. ಏಕೆಂದರೆ, ಅದು ಒಳ್ಳೆಯ ಆಹಾರ, ವಸತಿ, ಉಡುಪು, ವೈದ್ಯಕೀಯ ಸೌಲಭ್ಯ, ಶಿಕ್ಷಣ, ಆಟಪಾಟ, ಮುಂತಾದುವನ್ನೆಲ್ಲಾ ನಿರಾಕರಿಸಿದಂತೆಯೇ ಸರಿ. ಈ ಸೌಲಭ್ಯಗಳನ್ನು ತನಗೆ ಮತ್ತು ತನ್ನ ಕುಟುಂಬಕ್ಕೆ ಪಡೆದುಕೊಳ್ಳಲು ತಾನೆ ದುಡಿಯುವ ಜನ ಜೀವವನ್ನು ತೇಯುವುದು! ಹೇರಳ ಉತ್ಪನ್ನಗಳಿರುವಂತಹ ಸಮಾಜಕ್ಕೆ ಕಾಲಿರಿಸಲು ನಿರಾಕರಿಸದಂತಹ ಪ್ರಜ್ಞೆಯನ್ನು ಸೃಷ್ಟಿಸಬೇಕಾದರೆ ಏನೆಲ್ಲಾ ಧೋರಣೆಗಳನ್ನು ಕಸಿ ಮಾಡಬೇಕಲ್ಲವೆ? ಅಂತಹ ಗುರಿಯನ್ನು ಸಾಧಿಸುವುದು ಸರ್ವಥಾ ಸಾಧ್ಯವಿಲ್ಲವೆಂದೋ ಅಥವಾ ಅದು ಅಪೇಕ್ಷಣೀಯವಲ್ಲವೆಂದೋ ಪ್ರಜ್ಞೆಯಲ್ಲಿ ಸ್ಥಿರವಾದ ಭಾವನೆ ಬೇರೂರುವಂತೆ ಮಾಡಬೇಕು. ಅದು ಸಮಾಜವನ್ನು ಯಥಾಸ್ಥಿತಿಯಲ್ಲಿ ಇರಿಸಲು ಸಾಧನವಾಗುತ್ತದೆ.

ಹೇರಳ ಉತ್ಪಾದನೆ ಸರ್ವಥಾ ಸಾಧ್ಯವಿಲ್ಲವೆಂದು ಸಾಧಿಸಿ ತೋರಿಸಲು ಯತ್ನಿಸುತ್ತೀರೆನ್ನಿ. ತಾಂತ್ರಿಕ ಅಭಿವೃದ್ಧಿಯ ಅಭಾವವನ್ನು ಕಾರಣವೆಂದು ಹೇಳಿ ಹೇರಳ ಉತ್ಪಾದನೆ ಅಸಾಧ್ಯವೆಂದು ವಾದಿಸಲಾಗುವುದಿಲ್ಲ, ಏಕೆಂದರೆ ಅದನ್ನು ಆಗುಮಾಡಲು ನಮ್ಮಲ್ಲಿ ಸಾಕಷ್ಟು ಸಾಧನಗಳಿವೆ ಮತ್ತು ಅವು ಹೆಚ್ಚುತ್ತಾ ಹೋಗುತ್ತವೆ. ಮಾಲ್ತಸ್‌ನಂತಹ ಯಾವನೂ ಬಂದು ಜನಸಂಖ್ಯೆಯು ಆಹಾರದ ಸರಬರಾಜನ್ನು ಸದಾ ಮೀರುತ್ತಲೇ ಇರುತ್ತದೆಂದು ನಮ್ಮನ್ನು ಒಪ್ಪಿಸಲಾರ. ಆದ್ದರಿಂದ, ಹೇರಳ ಉತ್ಪಾದನೆಯು ಅಸಾಧ್ಯವೆಂದು ಸಾಧಿಸಲು ಬೇರಾವುದಾದರೂ ಹಾದಿ ಹಿಡಿಯಬೇಕು. ಉದಾಹರಣೆಗೆ, ನೀವು ಹೀಗೆ ವಾದಿಸಬಹುದು: ಮಾನವ ಸ್ವಭಾವವು ಸ್ವಾರ್ಥದಿಂದ ಕೂಡಿದೆ ಮತ್ತು ಅದನ್ನು ಹೋಗಲಾಡಿಸಲಾಗುವುದಿಲ್ಲ; ಅಥವಾ ಮಾನವನು ಯುದ್ಧಕಾಮಿ, ಆದ್ದರಿಂದ ಮಾನವನೆಂದೂ ಹೇರಳವೆಂಬುದನ್ನು ಎಲ್ಲರಿಗೂ ಕಲ್ಪಿಸಿಕೊಡಲಾರ, ಅದಕ್ಕಾಗಿ ವೃಥಾ ಶ್ರಮವನ್ನು ಹಾಕಲಾರ. ಅಂದರೆ, ಹಸಿದಿರುವವರು ಹಾಗೇ ಉಳಿಯಬೇಕು, ಸಮಾಜದಲ್ಲಿ ಒಬ್ಬರನ್ನೊಬ್ಬರು ಹಿಂಸಿಸುತ್ತಿರಬೇಕು, ಕೊಲ್ಲುತ್ತಿರಬೇಕು. ಇದು ನಿರಂತರವಾಗಿ ನಡೆಯುತ್ತದೆ, ಮಾನವ ಜನಾಂಗ ಇರುವವರೆಗೂ ಈ ಸನ್ನಿವೇಶವು ಹಾಗೇ ಉಳಿಯುತ್ತದೆ. ಈ ವಾದವನ್ನಲ್ಲದೆ ಬೇರೇನು ಹೇಳಬಹುದು? ಬಹುಶಃ ಹೀಗೆ: ಮಾನವ ಸ್ವಭಾವ ಎಂತಹದ್ದೆಂದರೆ ಹೇರಳ ಉತ್ಪಾದನೆ ಇರುವ ಸಮಾಜವನ್ನು ಎಂದಿಗೂ ಯೋಜಿಸಲಾಗದು. ಸಮಾಜದಲ್ಲಿ "ಕೀಳು" ಮನಸ್ಸುಗಳಿವೆ, ಆದ್ದರಿಂದ "ಅತ್ಯುತ್ತಮ" ಮನಸ್ಸುಗಳು ಸಹ ಅಷ್ಟು ಅಗಾಧವಾದ ಸಮಸ್ಯೆಯನ್ನು ಬಿಡಿಸಲಾರವು. – ಹೀಗೆಲ್ಲಾ

ಹೇಳುವಾಗ ಒಂದಂಶವನ್ನು ಒಪ್ಪಿರುತ್ತೀರಿ: ತಾಂತ್ರಿಕ ಕೌಶಲ್ಯವು ಅದನ್ನು ಸಾಧಿಸಲು ಸಮರ್ಥವಾಗಿದೆ, ಆದರೆ ಅದಕ್ಕೆ ಅಗತ್ಯವಾದ ಮನೋಭೂಮಿಕೆ ಇಲ್ಲ, ಎಂದು. ಹೇಗೇ ಇರಲಿ, ಅದು ಅಸಾಧ್ಯವೆಂದಾಯಿತು.

ಎರಡನೆಯ ಅಂಶ: ಹೇರಳ ಉತ್ಪನ್ನಗಳಿರುವ ಸಮಾಜವು ಅಪೇಕ್ಷಣೀಯವಲ್ಲವೆಂದು ತೋರಿಸಲು ಯತ್ನಿಸುತ್ತೀರೆನ್ನಿ. ಹೇರಳ ಉತ್ಪಾದನೆಯ ಗುರಿ, ಅದರಿಂದ ಸುಖ–ಶಾಂತಿಗಳು ನೆಲೆಸಬಹುದು; ಆದ್ದರಿಂದ ಅದು ಅಪೇಕ್ಷಣೀಯ ಎಂಬುದು ಸ್ವತಸ್ಸಿದ್ಧ. ಹೇಗೆ ತಾನೆ ಇದಕ್ಕೆ ವಿರುದ್ಧವಾದುದನ್ನು ಕಲ್ಪಿಸಿಕೊಳ್ಳಲು ಸಾಧ್ಯ? ಕಲ್ಪಿಸಿಕೊಳ್ಳಬೇಕೆನಿಸಿದರೆ ಬೇಕಾದಷ್ಟು ಸಂಗತಿಗಳಿವೆ. ಉದಾಹರಣೆಗೆ, "ಸ್ವಾತಂತ್ರ್ಯ"ಕ್ಕಿಂತಲೂ "ಸುಭದ್ರತೆ"ಯು ಹೆಚ್ಚು ಸ್ವಾಗತಾರ್ಹ ಎನ್ನಬಹುದು; ಅಥವಾ, ಕೆಲಸಕ್ಕೆ ಬಾರದ ಕ್ಷುದ್ರಕ್ರಿಮಿಗಳಂತಹ ಅತಿಸಾಮಾನ್ಯರನ್ನು ಹೊಂದಿರುವುದಕ್ಕಿಂತ ಕೆಲವೇ ಕೆಲವು ಗಟ್ಟಿಮುಟ್ಟಾದ ಪ್ರಬಲರನ್ನು ಹೊಂದುವುದು ಹೆಚ್ಚು ಒಳ್ಳೆಯದು ಎನ್ನಬಹುದು. "ಹೀನಮಟ್ಟ"ದ ವ್ಯಕ್ತಿಗಳು ಹೇರಳವಾದ್ದೇನನ್ನೂ ಪಡೆಯಲು ಅರ್ಹರಲ್ಲ, ಅವರಿಗೆ ಅದರ ಮೌಲ್ಯ ತಿಳಿಯುವುದಿಲ್ಲ, ಮತ್ತು ಅಂಥವರಿಗೆ ಅದು ಬೇಕಾಗಿಯೂ ಇಲ್ಲ. ಈ ರೀತಿಯ ವಾದವೂ ಸಾಧ್ಯ. ಇನ್ನೊಂದು ಪರ್ಯಾಯ: ಪ್ರತಿಯೊಂದು ಪ್ರಶ್ನೆಗೂ ಎರಡು ಮಗ್ಗುಲುಗಳಿರುತ್ತವೆ; ಆದ್ದರಿಂದ ಹೇರಳ ಉತ್ಪನ್ನಗಳಿರುವುದು ಸಹ ಸಮಸ್ಯೆಯಾಗುತ್ತದೆ. ಉದಾಹರಣೆಗೆ, "ಆತ್ಮ" ಎಂಬುದು ಐಂದ್ರಿಯಕ ಸುಖದಲ್ಲಿ ಮೀಯಲಾರಂಭಿಸುತ್ತದೆ ಎನ್ನಿ; ಅದನ್ನು ಉಳಿಸಿಕೊಂಡು ಸುಖಿಸುವುದು ಕಷ್ಟವೇ. ಸ್ವಾರಸ್ಯ ಹೇಗಿದೆ ನೋಡಿ: ಸರ್ವರಿಗೂ ಹೇರಳ ಉತ್ಪನ್ನಗಳ ಲಭ್ಯತೆಯನ್ನು ಆಕ್ಷೇಪಿಸುವವರಿಗೆ ಸೌಲಭ್ಯವಂಚಿತರ ಆಧ್ಯಾತ್ಮಿಕ ಕಲ್ಯಾಣದ ಬಗ್ಗೆ ಕಾಳಜಿ!

ಆಧುನಿಕ ಸಮಾಜದ ಇನ್ನೆರಡು ಲಕ್ಷಣಗಳು ಅಸಮಾನತೆ ಮತ್ತು ಆರ್ಥಿಕ ಸವಲತ್ತು. ಅವುಗಳ ಸಂದರ್ಭದಲ್ಲಿಯೂ ಕಟ್ಟುಕತೆಗಳನ್ನು ಇದೇ ಪರಿಯಲ್ಲಿ ಕಟ್ಟಲಾಗಿದೆ. ಕೆಳಮಟ್ಟದ ಜನಾಂಗಗಳು ಮತ್ತು ಜೈವಿಕವಾಗಿ ಕುರೂಪಿಗಳು ಎಂಬುದನ್ನು ಕುರಿತು ಕಟ್ಟುಕತೆಗಳಿಗೆ ನಿರ್ದಿಷ್ಟ ಉದ್ದೇಶಗಳಿವೆ: ಸಾಮಾಜಿಕವಾಗಿ ಅಂತೆಯೇ ಆರ್ಥಿಕವಾಗಿ ಮಾನವ ಜನಾಂಗದಲ್ಲಿ ಸಮಾನತೆಯು ಎಂದಿಗೂ ಸಾಧ್ಯವಿಲ್ಲವೆಂದು ಸೂಚಿಸುವುದು ಆ ಉದ್ದೇಶ. "ಯದ್ಭಾವಂ ತದ್ಭವತಿ" (ನೀವೇನು ಭಾವಿಸಿಕೊಳ್ಳುತ್ತೀರೋ ನೀವು ಅದಾಗುತ್ತೀರಿ) ಎಂಬ ಐತಿಹ್ಯವು ಸಮಾನತೆಯನ್ನು ಒಂದು ಖಾಸಗಿ ಹಾಗೂ ಯದೃಚ್ಛಾ (ಅಂದರೆ, ಗೊತ್ತುಗುರಿ ಇಲ್ಲದ) ಪ್ರತಿಪಾದನೆಯ ಮಟ್ಟಕ್ಕಿಳಿಸುತ್ತದೆ. ಎಲ್ಲವೂ ವ್ಯಕ್ತಿಗತ ಮನಸ್ಸನ್ನು ಅವಲಂಬಿಸಿರುತ್ತದೆ ಎನ್ನುವುದು ಅದರ ಸಾರ. ಇನ್ನೊಂದು ಐತಿಹ್ಯ "ಸಮಸ್ಯೆಗಳೆಲ್ಲಾ ಕೇವಲ ಮಾತಿನ ನಿರ್ಮಿತಿ" ಎಂಬುದು. ಸಮಾನತೆಯನ್ನು ಅದು ಅರ್ಥವಿಲ್ಲದ ಪದಪ್ರಯೋಗವೆಂದು ತಳ್ಳಿಹಾಕಿಬಿಡುತ್ತದೆ. ಇನ್ನೂ ಬೇರೆ ಮೂರು ಐತಿಹ್ಯಗಳನ್ನು ಗುರುತಿಸಬಹುದು: ಅವು ಯಾವುವೆಂದರೆ, "ಮಾನವ ಸ್ವಭಾವವನ್ನು ಬದಲಾಯಿಸಲಾಗದು," "ಶ್ರೀಮಂತರು ಸಮರ್ಥರು ಮತ್ತು ಬಡವರು ಅಸಮರ್ಥರು" ಹಾಗೂ "ನಿಮ್ಮನ್ನು ನೀವೇ ಕಾಯ್ದುಕೊಳ್ಳಬೇಕು." ಇವೆಲ್ಲವೂ ಒಂದೇ ಅಂಶವನ್ನು ಬೇರೆಬೇರೆ ರೀತಿಗಳಲ್ಲಿ ಪ್ರತಿಪಾದಿಸುತ್ತವೆ: ಕೆಲವೇ ಜನರು ಬಹುಸಂಖ್ಯಾತರ ಮೇಲೆ ಅಧಿಕಾರ ಚಲಾಯಿಸುವುದು ಸರಿ, ಎಂದು. ಬಹುತೇಕ ಸಾಮಾಜಿಕ ಐತಿಹ್ಯಗಳು ಪ್ರಜಾಪ್ರಭುತ್ವ ವಿರೋಧಿಯಾದವು; ಸತ್ಯವು ಪ್ರಜಾಪ್ರಭುತ್ವದ ಪರವಾಗಿರುತ್ತದೆಂದು

ಇದರ ಇಂಗಿತ. ಜೊತೆಗೆ ಬಹುತೇಕ ಸಾಮಾಜಿಕ ಐತಿಹ್ಯಗಳು ಯಥಾಸ್ಥಿತಿಯನ್ನು ಅಂತೆಯೇ ಉಳಿಸಿಕೊಳ್ಳುವ ಹುನ್ನಾರಗಳು. ಈ ಆತಂಕ ಏಕಿರುತ್ತದೆಂದರೆ ಐತಿಹ್ಯಗಳನ್ನು ಕಿತ್ತೊಗೆದರೆ ನಿಜಾರ್ಥದಲ್ಲಿ ಭವಿಷ್ಯವು ಮನುಕುಲಕ್ಕೆ ಸೇರಿದ್ದು ಎಂದಾಗುತ್ತದೆ.

ಸಾಮಾಜಿಕ ಐತಿಹ್ಯಗಳಿಂದ ಲಾಭ ಯಾವ ಬಣಗಳಿಗೆ? ಅತಿ ಸರಳವಾಗಿ ಹೇಳುವುದಾದರೆ ಆ ಬಣಗಳು ಪ್ರಸ್ತುತ ಇರುವ ವ್ಯವಸ್ಥೆಯಿಂದ ಲಾಭ ಪಡೆಯುತ್ತಿರುವವೇ. ಏಕಸ್ವಾಮ್ಯ ಹೊಂದಿರುವವರು, ಕಾರ್ಪೊರೇಟ್ ವಲಯದವರು. ಅವರ ಸಂಪತ್ತು ಬರುವುದು ಮತ್ತು ಹಿಗ್ಗುವುದು ಸ್ಥಳೀಯ ಮತ್ತು ವಸಾಹತುಗಳ ಜನರ ದುಡಿಮೆಯಿಂದ. ಈ ಬಣದವರನ್ನು ನಾವು ಕೆಲವೇಳೆ "ಪ್ರತಿಗಾಮಿಗಳು" ಎನ್ನುತ್ತೇವೆ, ಇನ್ನು ಕೆಲವು ವೇಳೆ "ಫ್ಯಾಸಿಸ್ಟರು" ಎನ್ನುತ್ತೇವೆ. ಅವೆರಡರ ನಡುವೆ ಸೂಕ್ಷ್ಮವಾದ ಅಂತರವಿದೆ, ಆದರೆ ಅದು ನಿಜಕ್ಕೂ ಮುಖ್ಯವಾದ್ದು. ಪ್ರತಿಗಾಮಿಗಳು ನಿರ್ದಿಷ್ಟ ರಾಜಕೀಯ ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ತಮ್ಮ ಸವಲತ್ತಿನ ನೆಲೆಯನ್ನು ಸ್ಥಿರಗೊಳಿಸಿ ಕೊಳ್ಳುತ್ತಾರೆ; ಫ್ಯಾಸಿಸ್ಟರ ಉದ್ದೇಶ ಬೇರೆ: ತಮ್ಮ ವಿಶಿಷ್ಟ ಆರ್ಥಿಕ ಸವಲತ್ತುಗಳನ್ನು ಬೇಕಾದರೆ ರಾಜಕೀಯ ಪ್ರಜಾಪ್ರಭುತ್ವವನ್ನು ಕಿತ್ತೆಸೆದು ರಕ್ಷಿಸಿಕೊಳ್ಳುವಂಥವರು. ಒಂದು ಇನ್ನೊಂದರ ಸ್ಥಿತ್ಯಂತರ ರೂಪದ್ದು. ಹಿಟ್ಲರನ ಮುಂಚಿನ ಅವಧಿಯಲ್ಲಿ ಪ್ರತಿಗಾಮಿಯೆನಿಸಿಕೊಂಡಿದ್ದ ಕ್ರುಪ್ ಕಂಪನಿಯು ಯಾವ ಆತಂಕವೂ ಇಲ್ಲದೆ ಹಿಟ್ಲರನ ಕಾಲದಲ್ಲಿ ಫ್ಯಾಸಿಸ್ಟ್ ಕಂಪನಿಯಾಯಿತು. ಇಂತಹ ಪರಿವರ್ತನೆಗೆ ಕುಮ್ಮಕ್ಕು ದೊರೆಯುವುದು ಯಾವಾಗ? ಪ್ರತಿಗಾಮಿಗಳ ಪ್ರಾಬಲ್ಯವನ್ನು ಸೀಮಿತಗೊಳಿಸಲು ಪ್ರಜಾಪ್ರಭುತ್ವದ ಅಂಗಸಂಸ್ಥೆಗಳನ್ನು ಬಳಸಿದಾಗ. ಏಕೆಂದರೆ, ಪ್ರತಿಗಾಮಿಗಳು ಮೆಚ್ಚಿಕೊಳ್ಳುವ ಸ್ವಾತಂತ್ರ್ಯವೆಂದರೆ ಉತ್ಪಾದನೆಯನ್ನು ಕಡಿಮೆ ವೆಚ್ಚದಿಂದ ಮಾಡಿಕೊಂಡು ಅತಿಹೆಚ್ಚಿನ ಬೆಲೆಗೆ ಅದನ್ನು ಮಾರುವುದು. ಅವರು ಮೆಚ್ಚಿಕೊಳ್ಳುವ ಸಮಾನತೆಯೆಂದರೆ ಸಮಾನವಾದ ಕನಿಷ್ಠಮಟ್ಟದ ಕೂಲಿ. ಸೌಹಾರ್ದತೆ ಎಂದರೆ ಅವರ ಪ್ರಕಾರ ಲಕ್ಷಗಟ್ಟಲೆ ಕೂಲಿಯಾಳುಗಳು ವಿಧೇಯರಾಗಿರುವುದು; ಮುಂಜಾವಿನಿಂದ ರಾತ್ರಿಯವರೆಗೆ ತೃಪ್ತಿಯಿಂದ ಅವರು ದುಡಿಯಬೇಕು: ಅವರು ಕೆಲಸ ಮಾಡುವ ಕಾರ್ಖಾನೆಗಳಲ್ಲಿರುವ ಯಂತ್ರಗಳು ಅವರದಲ್ಲ; ಅವರು ಉತ್ಪಾದಿಸುವ ಸರಕುಗಳು ಎಂದಿಗೂ ಅವರ ಭೋಗಕ್ಕೆ ಸಿಗಲಾರವು.

ಐತಿಹ್ಯಗಳ ವಿಶ್ಲೇಷಣೆ

ಈ ಐತಿಹ್ಯಗಳನ್ನು ಉದ್ದೇಶಪೂರ್ವಕವಾಗಿ ನಿರ್ಮಿಸಿಕೊಳ್ಳಲಾಗಿದೆಯೆಂದು ಭಾವಿಸಿದರೆ ಅದು ಶುದ್ಧ ತಪ್ಪು; ನಿರ್ಮಾಣ ಮಾಡಿಕೊಂಡವರ ಮನಸ್ಸಿನಲ್ಲಿ ಅದರ ಉದ್ದೇಶವು ಮೊದಲೇ ಸ್ಪಷ್ಟವಾಗಿತ್ತು ಎನ್ನುವಂತಿಲ್ಲ. ನಿಜವಾಗಿಯೂ ಅವು ಅಲ್ಲಲ್ಲಿ ಹರಡಿಕೊಂಡು ನಿಂತಿರುವಂಥವು: ಕೃತಿಗಳಲ್ಲಿ ಮತ್ತು ಮನಸ್ಸುಗಳಲ್ಲಿ ಪ್ರಚಾರದ ದೃಷ್ಟಿಯಿಂದ ಉಪಯುಕ್ತವೆನಿಸಿದಾಗ ಅವು ಪ್ರಾಮುಖ್ಯ ಪಡೆದುಕೊಳ್ಳುತ್ತವೆ. ಒಂದು ಉದಾಹರಣೆ ನೋಡಿ: ವೈಯ್ಯಕ್ತಿಕ ಪದಾರ್ಥಗಳು ಸತ್ಯ. ಆದರೆ ವರ್ಗಗಳು ಹಾಗೂ ವ್ಯವಸ್ಥೆಗಳು ಸತ್ಯವಲ್ಲ ಎಂಬ ವಿಚಾರ. ಸ್ಟುವರ್ಟ್ ಚೇಸ್ ಎಂಬಾತ ಒಂದು ಪುಸ್ತಕ ಬರೆದಿದ್ದಾನೆ: "ಪದಗಳ ಕ್ರೌರ್ಯ" (ದ ಟಿರನಿ ಆಫ್ ವರ್ಡ್ಸ್) ಎಂದು ಅದರ ಹೆಸರು. ಇಂತಹ ಧೋರಣೆಯು ಬಹಳ ಪ್ರಾಚೀನವಾದ್ದು. ಗ್ರೀಸಿನ ತತ್ತ್ವಶಾಸ್ತ್ರದಲ್ಲಾಗಲೆ ಅದು

ಕಂಡುಬಂದಿದೆ. ಮಧ್ಯಕಾಲೀನ ಯುಗದಲ್ಲಿ ಅದನ್ನು "ನಾಮಮಾತ್ರ ಗುಣಗಳು" (ನಾಮಿನಲಿಸಂ) ಎಂದು ಕರೆಯಲಾಗಿತ್ತು. ಅಂದರೆ, ವಸ್ತುಗಳಿಗೆ ಅಸ್ತಿತ್ವವಿದೆ, ಆದರೆ ಅವನ್ನು ಪ್ರತ್ಯೇಕಿಸಿ ಹೇಳುವ ಗುಣಗಳಿಗೆ ಅಸ್ತಿತ್ವವಿಲ್ಲ ಎಂದರ್ಥ. ಹಸು ಇದೆ. ಆದರೆ ಅದರ ಗುಣಗಳು ನಿರ್ದಿಷ್ಟವಲ್ಲ. ಆದ್ದರಿಂದ ಗೋವರ್ಗ ಇರಲಾರದು. ಈ ಧೋರಣೆಯು ಪ್ರಚಲಿತವಾಗಿದ್ದಾಗ ಅದರ ಪ್ರಭಾವವು ಕ್ರಾಂತಿಕಾರಕವಾಗಿತ್ತು. ಆ ಧೋರಣೆಯೇನೋ ಎಂದೂ ಸತ್ಯವಾದುದಾಗಿರಲಿಲ್ಲ. ಆದಾಗ್ಯೂ 14ನೇ ಶತಮಾನದಲ್ಲಿ ಅದರ ಪ್ರಭಾವವು ಕ್ರಾಂತಿಕಾರಕವಾಗಿತ್ತು: ಅದನ್ನು ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ತಿರುಗಿಸಿಬಿಟ್ಟಿದ್ದರಿಂದ. 20ನೆಯ ಶತಮಾನದಲ್ಲಿ ಚೇಸ್ ಅದನ್ನು ಬಳಸುವಾಗ್ಗೆ ಅದು ಪ್ರತಿಗಾಮಿಯಾಗಿಹೋಗಿತ್ತು, ಏಕೆಂದರೆ ಅದನ್ನು ಬಳಸಿದ್ದು ಫ್ಯಾಸಿಸ್ಟ್ ವಿರೋಧಿ ಹೋರಾಟವನ್ನು ನಿರ್ವೀರ್ಯಗೊಳಿಸಲು. (ನೋಡಿ, ಅಧ್ಯಾಯ–9).

ಬೇರೊಂದು ಉದಾಹರಣೆ ನೋಡಿ: ಹರ್ಬರ್ಟ್ ಸ್ಪೆನ್ಸರ್ (1820–1903) ಎಂಬ ತತ್ತ್ವಜ್ಞಾನಿ ನಂಬಿದ್ದ, ಬಡತನವು ಜೈವಿಕ ಅಸಾಮರ್ಥ್ಯದ ಕುರುಹು, ಎಂದು. ಹಾಗೆ ಹೇಳಿದಾಗ ಅವನ ಉದ್ದೇಶ ಆರ್ಥಿಕ ಸ್ಪರ್ಧೆಯನ್ನು ಪ್ರಜ್ಞಾಪೂರ್ವಕವಾಗಿ ಸಮರ್ಥಿಸ ಬೇಕು ಎಂದಿರಲಿಲ್ಲ. 19 ನೇ ಶತಮಾನದ ಮಧ್ಯಭಾಗದ ಆರ್ಥಿಕ ನಡತೆಯನ್ನು ನೋಡಿದಾಗ ಅವನಿಗೆ ಕಾಡಿನ ಜೀವಿಗಳ ನೆನಪಾಯಿತು. ಕಾಡಿನ ಮೃಗಗಳ ನಡತೆಯ ನ್ಯಾಯವು ತನ್ನ ಶತಮಾನದ ಮಾನವ ಜೀವಿಗಳಲ್ಲಿಯೂ ಇದೆ ಎಂದೆನಿಸಿತು ಅವನಿಗೆ. ಅದರಂತೆ ಒಂದು ವಿಚಾರ ಮಂಡಿಸಿದ. ಅವನ ಮಾತನ್ನು ಹುರುಪಿನಿಂದ ಹೊಗಳುವವರಿದ್ದರು. ಒಂದು ಸಂಶಯವಂತೂ ಇದೆ: ಅವನ ಜೀವನಪರ್ಯಂತ ತಾನೊಬ್ಬ ಪ್ರಚಾರಕನಂತೆ ಕೆಲಸ ಮಾಡಿದ್ದುದು ಅವನ ಗಮನಕ್ಕೆ ಬಂದಿತ್ತೆ?

ಕೆಲವು ಐತಿಹ್ಯಗಳಲ್ಲಿ ಸತ್ಯದ ಅಂಶವಿರುತ್ತದೆ, ಆದರೆ ಅದಕ್ಕೆ ಸಂದಿಗ್ಧತೆ ಮತ್ತು ತಪ್ಪು ಅನ್ವಯಗಳ ಕವಚ ಹೊದಿಸಿರುತ್ತಾರೆ; ಅದರಿಂದಾಗಿ ಅಲ್ಪಸ್ವಲ್ಪ ಸತ್ಯವೂ ಮರೆಯಾಗಿಬಿಡುತ್ತದೆ. ಆದರೆ ಅದು ಇಡಿಯಾಗಿ ಸತ್ಯವೇನೋ ಎಂಬ ಭಾವನೆ ಹರಡಿರುತ್ತದೆ. ಅಂಥವು ಬೇರೆಯವುಗಳಿಗಿಂತ ಸ್ವಲ್ಪ ಮೇಲು. ಆ ಬೇರೆಯವನ್ನು ಕುಲುಮೆಯ ಬೆಂಕಿಯಲ್ಲಿಟ್ಟು ಕಾಸಿದಾಗ ಸ್ವಲ್ಪಮಟ್ಟಿಗೆ ಅವುಗಳ ತಥ್ಯ ಗೋಚರವಾಗುತ್ತದೆ. ಉದಾಹರಣೆಗೆ, ಮಾನವ ಸ್ವಭಾವ: ಅದು ಬದಲಾಗುವುದಿಲ್ಲವೆಂಬ 'ಸತ್ಯ' ಉಂಟು; ಅಂತೆಯೇ, ಪ್ರತಿ ಪ್ರಶ್ನೆಗೂ ಎರಡು ಮಗ್ಗುಲುಗಳಿರುತ್ತವೆ ಎಂಬ 'ಸತ್ಯ'ವೂ ಇದೆ. ಆದರೆ ಈ 'ಸತ್ಯ'ವಾದ ಅರ್ಥಗಳಿಂದ ಹೊಮ್ಮುವ ತೀರ್ಮಾನಗಳು ನಾವು ಅರಸುತ್ತಿರುವ ತೀರ್ಮಾನಗಳಿಗೆ ಪೂರ್ತಿ ವಿರುದ್ಧವಾದವು. ಇಂತಹ ಐತಿಹ್ಯಗಳ ಮೇಲೆ ಸವಾರಿ ಮಾಡುವ ಮಂದಿ ಅವನ್ನು ವಿಶ್ವಾಸಾರ್ಹ ಕುದುರೆಗಳೆಂದು ಭಾವಿಸುವುದಿಲ್ಲ; ಏಕೆಂದರೆ, ಒಂದು ತಪ್ಪುಹೆಜ್ಜೆ ಇಟ್ಟರೆ ಅವರು ಮುಗ್ಗರಿಸಿ ಬಿದ್ದುಬಿಡುವ ಸಂಭವವುಂಟು.

ಇದು ಒಂದರ್ಥದಲ್ಲಿ ಎಲ್ಲಾ ಐತಿಹ್ಯಗಳಿಗೂ ಅನ್ವಯವಾಗುವಂಥದು. ಅದು ಅರ್ಧಸತ್ಯವೋ ಪೂರ್ತಿ ಅಸತ್ಯವೋ ಆಗಿದ್ದಾಗ್ಯೂ ಇದು ನಿಜ. ಒಬ್ಬ ವಿಮರ್ಶಕನಿಗೆ ಲಭ್ಯವಿರುವ ಒಂದು ಸಂತೋಷದ ಜವಾಬ್ದಾರಿ ಏನೆಂದರೆ ಐತಿಹ್ಯವು ನಿಜವೇ ಆಗಿದ್ದರೂ ಅದು ಏನನ್ನು ಸಾಧಿಸಲು ಹೊರಟಿದೆಯೋ ಅದನ್ನು ಸಾಧಿಸಲಾರದು, ಅಥವಾ ಸಾಧಿಸ ಹೊರಟಿರುವ ಪ್ರಮೇಯಕ್ಕೆ ಪೂರ್ತಿ ವಿರೋಧವಾದ ಪ್ರಮೇಯವನ್ನು

ಸಾಧಿಸಿಬಿಡುತ್ತದೆಂದು ತೋರಿಸಿಕೊಡುವುದು. ಒಂದು ಧೋರಣೆ ಇದೆಯೆನ್ನಿ: ಜೀವನವು ಹೋರಾಟ, ಅದರಲ್ಲಿ ಸಮರ್ಥರು ದಡ ಸೇರುತ್ತಾರೆ, ಅಸಮರ್ಥರು ಕೊಚ್ಚಿಹೋಗುತ್ತಾರೆ, ಎಂದು. ಈ ಧೋರಣೆ ಏನು ಸಾಧಿಸಹೊರಟಿದೆ? ಸಾಮಾಜಿಕ ವಿಮೆ ಕೂಡದು, ಸಹಾಯ ಧನ ನೀಡಕೂಡದು, ಎಂದು. ಅವು ಏಕೆ ಬೇಡ? ಏಕೆಂದರೆ ಅಸಮರ್ಥರಾದ ಕಳಪೆ ಜನಕ್ಕೆ ಅದು ಸಹಾಯ ನೀಡುತ್ತದೆ ಮತ್ತು ಸಮರ್ಥರು ತಮಗೆ ದಕ್ಕಬೇಕಾದ್ದನ್ನು ಕಳೆದುಕೊಳ್ಳುತ್ತಾರೆ. ಇಂಥದೇ ಧೋರಣೆಯ ಆಧಾರದಿಂದ ಸ್ಪೆನ್ಸರ್ ಸಾರ್ವಜನಿಕ ಶಿಕ್ಷಣವನ್ನು ವಿರೋಧಿಸಿದ್ದು. ಇರಲಿ, ಜೀವನ ಒಂದು ಹೋರಾಟವೆಂಬುದನ್ನು ಒಪ್ಪೋಣ. ನಿರ್ಗತಿಕರಾಗಿರುವವರೆಲ್ಲಾ ತಮ್ಮ ಬಲವನ್ನು ಒಟ್ಟುಗೂಡಿಸಿಕೊಂಡು ಶ್ರೀಮಂತರ ಆಳ್ವಿಕೆಯನ್ನು ಕಿತ್ತೊಗೆಯುತ್ತಾರೆಂದು ಭಾವಿಸಕೊಳ್ಳಿ, ಅವರು ಏನನ್ನು ಸಾಬೀತು ಮಾಡಿ ತೋರಿಸಿದಂತಾಯಿತು? ಅವರು ಖಂಡಿತವಾಗಿಯೂ ಸಮರ್ಥರು ಎಂದೇ ಅಲ್ಲವೆ? ಅದಕ್ಕವರು ಪುರಾವೆ ದೊರಕಿಸಿದ್ದಾರೆ, ಅಲ್ಲವೆ? ಅದೇ ಪುರಾವೆಯು ಶ್ರೀಮಂತರು ತೀರಾ ಅಸಮರ್ಥರು ಎಂಬುದನ್ನೂ ಸಾಬೀತು ಮಾಡಿದಂತಾಯಿತು. ಅಂದರೆ, ಸ್ಪೆನ್ಸರ್‌ನ ಧೋರಣೆಯು ಕ್ರಾಂತಿಯನ್ನು ಸಮರ್ಥಿಸುತ್ತದೆ, ಯಥಾಸ್ಥಿತಿಯನ್ನೂ ಸಮರ್ಥಿಸುತ್ತದೆ. ಒಂದು ವೇಳೆ ಹಿಂಸೆಯು ಸಾಮಾನ್ಯ ಸಂಗತಿ ಎಂಬುದನ್ನು ನಾವು ಒಪ್ಪಿದರೆ, ವಿಜಯಿಗಳು ಯಾರೆಂಬುದರ ಪೂರ್ವನಿರ್ಧಾರ ಸರಿಯಲ್ಲ. ಶ್ರೀಮಂತರೇ ಗೆಲ್ಲಬೇಕೆಂಬ ಷರತ್ತನ್ನೇನೂ ವಿಧಿಸಲಾಗುವುದಿಲ್ಲವಲ್ಲ! ಇದೆಂತಹ ಧೋರಣೆಯಾಯಿತೆಂಬುದನ್ನು ಗಮನಿಸಿ: ಒಂದು ಸಂಗತಿಯನ್ನು ಸಮರ್ಥಿಸುವ ಧೋರಣೆಯು ಅದಕ್ಕೆ ವಿರುದ್ಧವಾದ ಧೋರಣೆಯನ್ನು ಸಹ ಸಮರ್ಥಿಸುತ್ತದೆ. ಹಾಗಿದ್ದರೆ ಆ ಧೋರಣೆಯು ಅಸಂಗತವಾದ್ದು ಎಂಬ ತೀರ್ಮಾನ ಅನಿವಾರ್ಯ.

ಐತಿಹ್ಯಗಳು ಹುಟ್ಟಿಕೊಳ್ಳುವುದು ಬೇರೆ ಬೇರೆ ರೀತಿಗಳಲ್ಲಿ, ಆದರೆ ಅವು ಪ್ರಚಾರಸಾಧನಗಳಾಗುವುದು ಒಂದೇ ತೆರನಾದ್ದು. ಅವು ವಿವಿಧ ಸ್ವರೂಪಗಳನ್ನು ತಾಳುತ್ತವೆ, ಎಲ್ಲಾ ಸಂವಹನ ಮಾಧ್ಯಮಗಳಲ್ಲೂ ಪ್ರಚಾರಗೊಳ್ಳುತ್ತವೆ: ಪತ್ರಿಕೆಗಳು, ರೇಡಿಯೊ, ಪುಸ್ತಕಭಂಡಾರ, ಉಪನ್ಯಾಸ ವೇದಿಕೆ, ಇತ್ಯಾದಿ. (ಈಗ ವಿದ್ಯುನ್ಮಾಧ್ಯಮವೂ ಸೇರಿದೆ). ಅವೆಲ್ಲಾ ಸಮಾಚಾರವನ್ನು ಪಕ್ಷಪಾತವಿಲ್ಲದೆ ಅರ್ಥೈಸುತ್ತವೆ, ಆದರೆ ಅವು ಯಾವ ಅಭಿಪ್ರಾಯವನ್ನು ಪೋಷಿಸಲು ಹೊರಟಿವೆಯೋ ಅದಕ್ಕೆ ತಕ್ಕಂತೆ, ಅಷ್ಟೇ. ಸಮಾಚಾರಗಳನ್ನು ಎಲ್ಲರೂ ಪರೀಕ್ಷಿಸುತ್ತಾರೆ, ಆದರೆ ಅಭಿಪ್ರಾಯಗಳನ್ನು ಪರೀಕ್ಷಿಸ ಹೋಗುವುದಿಲ್ಲ. ಪ್ರತಿ ವಿಷಯದಲ್ಲೂ ಎರಡು ಮಗ್ಗುಲುಗಳಿವೆ ಎಂಬುದನ್ನು ತರ್ಕಬದ್ಧವೆಂದು ಪರಿಗಣಿಸಲಾಗುತ್ತದೆ. ಹಾಗೆಂದರೆ ನಿಷ್ಕೃಷ್ಟವಾಗಿ ಏನು ಎಂಬುದು ಬೇರೆ ಪ್ರಶ್ನೆ. ಆದರೆ ಎರಡು ಮಗ್ಗುಲುಗಳು ಸಾಧ್ಯವೆಂಬುದನ್ನು ಆಧರಿಸಿ ವ್ಯಾಖ್ಯಾನಕಾರನು ಎರಡು ರೀತಿಯ ಕುಚೇಷ್ಟೆ ಮಾಡುತ್ತಾನೆ: ಪ್ರತಿಗಾಮಿ ಪಕ್ಷದ ಹೊಲಸುಗಳಲ್ಲಿ ಒಂದು ಒಳ್ಳೆಯ ಅಂಶವನ್ನು ಉದಾಹರಿಸುತ್ತಾನೆ ಮತ್ತು ಪ್ರಜಾಪ್ರಭುತ್ವ ಪಕ್ಷದ ಅನೇಕ ಒಳ್ಳೆಯ ಅಂಶಗಳಲ್ಲಿ ಒಂದನ್ನು ಮಾತ್ರ ಆಯ್ದು ಮಿಕ್ಕಿದ್ದೆಲ್ಲಾ ಕೆಡಕುಗಳೇ ಎಂಬಂತೆ ವ್ಯಾಖ್ಯಾನಿಸುತ್ತಾನೆ. ಮನುಷ್ಯ ಸ್ವಾರ್ಥಿ ಎಂಬುದು ಅತಾರ್ಕಿಕವೇನಲ್ಲ, ಆದರೆ ವ್ಯಾಖ್ಯಾನಕಾರನು ಅದೇ ಮನುಷ್ಯ ಸ್ವಭಾವವೆಂದು ಅಬ್ಬರಿಸುತ್ತಾ ಮಾನವನ ಶ್ರೇಷ್ಠ

ನಡತೆಗಳನೇಕವನ್ನು ಕಡೆಗಾಣಿಸುತ್ತಾನೆ. ಮಾನವನು ತ್ಯಾಗಿ, ಸಮಾಜಮುಖಿ, ಜನಹಿತವನ್ನು ಅಪೇಕ್ಷಿಸುವವನು, ಇತ್ಯಾದಿಗಳೆಲ್ಲಾ ದಾಖಲಾಗುವುದಿಲ್ಲ. ಈ ಗುಣಗಳು ಏಲ್ಲರಲ್ಲೂ ಇಲ್ಲದಿದ್ದರೂ ನೈಜ ಪ್ರಜಾಪ್ರಭುತ್ವವಾದಿಗಳಲ್ಲಿ ಅವು ಇರುತ್ತವೆ.

ಇದೊಂದು ಸೋಜಿಗದ ಸಂಗತಿ: ಸಮಾಚಾರಗಳ ವ್ಯಾಖ್ಯಾನಕಾರರು ತಮ್ಮ ಉದ್ಯೋಗದಲ್ಲಿ ಒಂದು ನೀತಿ ಅನುಸರಿಸುತ್ತಾರೆ. ಅದೇನೆಂದರೆ, ಜನ ಏನು ಹೇಳುತ್ತಾರೋ ಅದರರ್ಥ ಅವರಿಗೆ ನಿಲುಕದ್ದು, ಎಂದು. ಸಾರ್ವಜನಿಕ ವ್ಯಕ್ತಿಗಳ ಮಾತುಗಳನ್ನು ಯಾವಗಲೂ ಯಥಾವತ್ತಾಗಿಯೇ ಗ್ರಹಿಸುವುದಾದರೆ ವ್ಯಾಖ್ಯಾನಕಾರನಿಗೆ ವ್ಯಾಖ್ಯಾನ ಮಾಡಲು ಏನೂ ಉಳಿಯುವುದಿಲ್ಲ; ಕೇವಲ ಚಾರಿತ್ರಿಕ ಘಟನೆಗಳನ್ನು ಪಟ್ಟಿಮಾಡುತ್ತಾ ಇರಬೇಕಾಗುತ್ತದೆ. ಅದಕ್ಕೆ ಮತ್ತೆ ಇತಿಹಾಸದ ಪರಿಚಯ ಪಡೆದುಕೊಳ್ಳ ಬೇಕಲ್ಲ! "ಆಂತರಿಕ ವಾರ್ತೆಯನ್ನು" ಸಂಗ್ರಹಿಸುವ ಪಟಿಂಗ ಎಂಬ ಬಿರುದು ತಪ್ಪಿಹೋಗುತ್ತದೆ. ಬಾಹ್ಯ ಎಂಬುದಿದ್ದರೆ ಆಗ ಆಂತರಿಕ ಎಂಬುದಿದ್ದೀತು; ಮತ್ತು, ಮುಚ್ಚಿಡಲು ಒಂದು ಲಕೋಟೆ ಇದ್ದರೆ ಆಗ ಮುಚ್ಚಿಡಲ್ಪಟ್ಟ ಸತ್ಯಗಳಿರುತ್ತವೆ. ಸಮಾಚಾರಗಳ ವ್ಯಾಖ್ಯಾನಕಾರರು ಅಂಥದೊಂದು ಲಕೋಟೆ ಇದೆಯೆಂದು ಭಾವಿಸಿಕೊಳ್ಳಬೇಕು ಮತ್ತು ಮಾನವನು ಲೋಭಿಯಾದ್ದರಿಂದ ಅದರೊಳಗೆ 'ಆಂತರಿಕ' ವಾರ್ತೆಯನ್ನು ಹುದುಗಿಸಿಡಲಾಗಿತ್ತು ಎಂದು ಓದುಗರನ್ನು ಮತ್ತು ಕೇಳುಗರನ್ನು ನಂಬಿಸಬೇಕು.

ಇದರ ಫಲಿತಾಂಶ ಬಹಳ ಗಮನಾರ್ಹ. ವರ್ಷದಲ್ಲಿ ಒಬ್ಬ ಅಂಕಣಕಾರ 350 ಅಂಕಣಗಳನ್ನು ಬರೆಯುತ್ತಾನೆಂದು ಇಟ್ಟುಕೊಳ್ಳೋಣ. ಇನ್ನು ಮಿಕ್ಕ 15 ಅವನ ರಜಾದಿನಗಳು. ಹತ್ತು ವರ್ಷಕ್ಕೆ 3500 ಅಂಕಣಗಳು, ಇಪ್ಪತ್ತು ವರ್ಷಕ್ಕೆ 7000. ಒಂದೊಂದು ಅಂಕಣ ಕನಿಷ್ಠ 500 ಪದಗಳದ್ದು. ಅಂದರೆ ಅವನು 35 ಲಕ್ಷ ಪದಗಳನ್ನು ಮುಟ್ಟಿರುತ್ತಾನೆ. ಇನ್ನೂ ಬರೆಯುತ್ತಲೇ ಇರುತ್ತಾನೆ. ಕಾಳೋ ಜಳ್ಳೋ ಅಂತೂ ಬರೆಯುತ್ತಲೇ ಇರುತ್ತಾನೆ. ನಮ್ಮಲ್ಲಿ ಎಂತಹ ಭವ್ಯ ಅಂಕಣಕಾರರಿದ್ದಾರೆಂದರೆ 35 ಲಕ್ಷ ಪದಗಳಲ್ಲಿ ಅಪ್ಪಿತಪ್ಪಿ ಒಮ್ಮೆಯಾದರೂ ಮಾನವ ಜನಾಂಗದ ಬಗ್ಗೆ ಪ್ರೀತಿಯ ಭಾವನೆಯನ್ನು ಸೂಸುವ ಒಂದು ಗುಣವಾಚಕ ಬಳಸುವುದಿಲ್ಲ. ಪದಗಳ ಮೇಲೆ ಪದಗಳು, ವಾಕ್ಯಗಳ ಮೇಲೆ ವಾಕ್ಯಗಳು, ಅವನು ಬರೆದದ್ದೆಲ್ಲಾ ಉದ್ದನೆಯ ಹಾವುಗಳಂತೆ ಪತ್ರಿಕೆಯ ಮೇಲೆ ಅಚ್ಚಾಗಿರುತ್ತವೆ. ಪ್ರಪಂಚವನ್ನೆಲ್ಲಾ ನುಂಗಿ ಆ ಹಾವುಗಳು ಈಗ ನಕ್ಷತ್ರಗಳತ್ತ ಮುಖ ಚಾಚಿವೆ! ಅಷ್ಟು ಅಪಾರವಾಗಿ ಬರೆದನಲ್ಲ, ಒಮ್ಮೆಯಾದರೂ ಪೀಡನೆಗೆ ಒಳಗಾಗಿರುವ ಜನಗಳ ಪರವಾಗಿ ನಿಂತು ಪೀಡಕನನ್ನು ಛೇಡಿಸಿರುವುದುಂಟೆ? ಜನಸಾಮಾನ್ಯರ ಬಗ್ಗೆ ಒಂದು ಹನಿ ಕಣ್ಣೀರು, ಒಂದು ಸಾಂತ್ವನದ ದನಿ, ಇಷ್ಟು ಘೋರಪಾತಕಗಳಿಗೆ ಗುರಿಯಾಗಿದ್ದಾನಲ್ಲಾ ಎಂಬ ಕನಿಕರ, ಎಲ್ಲೂ ಸಿಗುವುದಿಲ್ಲ. ಈ ವ್ಯಾಖ್ಯಾನಕಾರರು ಮಹಾ ನೀತಿವಂತರು. "ನಮಗೆ ಉಣಬಡಿಸುವ ಕೈಗಳನ್ನು ಕಚ್ಚುವುದು ಸಾಧುವೇ?" ಎಂಬುದು ಅವರ ನೀತಿ. ಕಚ್ಚಬಹುದಿತ್ತು ಆದರೆ ಕಚ್ಚುವುದಿಲ್ಲ, ಇಲ್ಲವೇ ಕಚ್ಚಲು ಸಿದ್ಧ ಆದರೆ ಕಚ್ಚಲಾರೆವು, ಎಂಬುದು ಅವರ ನಲ್ನುಡಿ! ತಿಂದು ತೇಗಿರುವವನ ದವಡೆ ಸುಸ್ತಾಗಿ ಮಲಗಿಬಿಡುತ್ತದೆ.

ವ್ಯಾಖ್ಯಾನಗಳು ಮತ್ತು ನೀತಿಗಳ ಒಕ್ಕಣೆಯ ಸರಮಾಲೆ, ಎರಡಕ್ಕೂ ಸಾಮಾಜಿಕ ಐತಿಹ್ಯಗಳು ಹಿನ್ನೆಲೆ ಒದಗಿಸುತ್ತವೆ. ಆದ್ದರಿಂದ ವ್ಯಾಖ್ಯಾನಗಳನ್ನಾಗಲಿ, ನೀತಿಗಳನ್ನಾಗಲಿ,

ಸರಿಯಾಗಿ ಅರ್ಥೈಸಿಕೊಳ್ಳಬೇಕಾದರೆ ಮೊದಲು ಅವುಗಳ ಭ್ರಾಮಕ ಹಿನ್ನೆಲೆಯನ್ನು ಅಳಿಸಿಹಾಕಬೇಕು, ಅದರ ಜಾಗದಲ್ಲಿ ಸತ್ಯವನ್ನು ಗಟ್ಟಿಯಾಗಿ ಪ್ರತಿಷ್ಠಾಪಿಸಬೇಕು. ಈ ಕೆಲಸವನ್ನು ಮಾಡಲು ತತ್ತ್ವಶಾಸ್ತ್ರಕಾರರು ಸಮರ್ಥರು, ಆದರೆ ಆ ಕೆಲಸಕ್ಕೆ ಕೈಹಾಕಲು ಈವರೆಗೆ ಅವರು ಹಿಂದೇಟು ಹಾಕುತ್ತಲೇ ಬಂದಿದ್ದಾರೆ. ಅದರ ಪರಿಣಾಮ ತಿಳಿದೇ ಇದೆ: ಅವರ ಉದ್ಗ್ರಂಥಗಳನ್ನು ಯಾರೂ ಒಪ್ಪುವುದಿಲ್ಲ. ಅವರು ಪಾಠ ಹೇಳುವ ತರಗತಿಗಳಲ್ಲಿ ಬೆಂಚುಗಳೆಲ್ಲಾ ಖಾಲಿ ಹೊಡೆಯುತ್ತಿವೆ. ಅವರು ಗಂಭೀರವಾಗಿ ಚರ್ಚಿಸುವ ಅಮೂರ್ತ ವಿಷಯಗಳನ್ನು ಧ್ಯಾನಿಸಲು ಯಾರು ಇಷ್ಟಪಟ್ಟಾರು! ಉದಾಹರಣೆಗೆ, "ವಿಶ್ವದ ಸಂರಚನೆಯಲ್ಲಿ ಮೌಲ್ಯಗಳು ಹಾಸುಹೊಕ್ಕಾಗಿವೆಯೆ?" ಪತ್ರಿಕೆಗಳ ಸಂಪಾದಕರು, ವ್ಯಾಖ್ಯಾನಕಾರರು, ರಾಜಕಾರಣಿಗಳು ಬೇರೇನೋ ವಿಷಯದ ಬಗ್ಗೆ ಸಂಶಯಗ್ರಸ್ತ ರಾಗಿದ್ದಾರೆ: "ಜನಸಾಮಾನ್ಯರು ದಿನಕ್ಕೆ ಅರಪಾವು ಹಾಲು ಪಡೆಯಲು ಅರ್ಹರೆ?" ಎಂದು. ಅವರಿಗೆ ಮೌಲ್ಯಗಳ ಆಮೂರ್ತ ಪ್ರಶ್ನೆ ಏಕೆ ಬೇಕು? "ವಿಶ್ವವು ಮಾನವನ ಬಗ್ಗೆ ಸ್ನೇಹಪರ ಭಾವನೆ ಹೊಂದಿದೆಯೆ?" ರಾಜತಾಂತ್ರಿಕ ಪಟುಗಳು ಪರಮಾಣು ಬಾಂಬನ್ನು ಮುದ್ದಾಡುವುದನ್ನು ಬಿಟ್ಟು ಈ ಪ್ರಶ್ನೆಯನ್ನು ಕುರಿತು ತಲೆ ತುರಿಸಿಕೊಳ್ಳುವುದುಂಟೆ?

ಸಂಗ್ರಹರೂಪದಲ್ಲಿ ಹೇಳುವುದಾದರೆ, ತತ್ತ್ವಶಾಸ್ತ್ರಜ್ಞರು ಅಪ್ರಸ್ತುತ ವಿಷಯಗಳ ಬಗ್ಗೆ ತಮ್ಮ ಬೌದ್ಧಿಕ ಶಕ್ತಿಯನ್ನು ವ್ಯಯಿಸುತ್ತಿದ್ದಾರೆ, ಅವರ ಸ್ವಂತ ಪರಂಪರೆಯನ್ನೇ ಮರೆತು ಬಿಟ್ಟಿದ್ದಾರೆ. ವಿಶೇಷತಃ 17 ಮತ್ತು 18ನೆಯ ಶತಮಾನಗಳಲ್ಲಿ ಅವರ ಪೂರ್ವಜರಿಂದಾಗಿ ಅರಳಿದ ಹೂವುಗಳು ಇಂದು ಅವರ ಕಣ್ಣಿಗೆ ಕಾಣುತ್ತಿಲ್ಲ. ಅಂದಿನ ಹಿರಿಯ ಮತ್ತು ಕಿರಿಯ ತತ್ತ್ವಶಾಸ್ತ್ರಜ್ಞಾನಿಗಳೆಲ್ಲಾ ಊಳಿಗಮಾನ್ಯ ವ್ಯವಸ್ಥೆಗೆ ಬೆಂಬಲ ನೀಡುತ್ತಿದ್ದ ಐತಿಹ್ಯಗಳನ್ನು ಪುಡಿಪುಡಿ ಮಾಡುವುದರಲ್ಲಿ ನಿರತರಾಗಿದ್ದರು. ಅದೆಷ್ಟು ಭದ್ರಕೋಟೆ ಯಾಗಿದ್ದಿತು, ಭೂಮಿಯಲ್ಲಿ ಅಡಿಪಾಯವಾದರೆ ಶಿಖರವು ಸ್ವರ್ಗಲೋಕಕ್ಕೆ ಚಾಚಿ ಕೊಂಡಿತ್ತು. ಆದರೆ ತತ್ತ್ವಶಾಸ್ತ್ರಜ್ಞಾನಿಗಳು ಆ ಕೋಟೆಯ ಒಂದು ಕಲ್ಲನ್ನೂ ಬಿಡಲಿಲ್ಲ, ಕೋಟೆಯನ್ನು ಭಗ್ನಗೊಳಿಸಲು ಮುಂದಾದರು. ಡೇಕಾರ್ಟ್ ಆ ಕೋಟೆಯ ಹೆಬ್ಬಾಗಿಲನ್ನು ಶಿಥಿಲಗೊಳಿಸುವುದರಿಂದ ಹಿಡಿದು ಕಾಂಟ್ ಆಯುಧಾಗಾರವನ್ನು ಸಿಡಿಸುವವರೆಗೆ ನಿರಂತರವಾಗಿ ತತ್ತ್ವಶಾಸ್ತ್ರಜ್ಞಾನಿಗಳು ಕಾತುರತೆ, ಆಸ್ಥೆ ಮತ್ತು ಹುರುಪಿನಿಂದ ತಮ್ಮ ಚಿಂತನೆಯನ್ನು ಬೆಳೆಸಿದರು. ಕೋಟೆಯ ರಕ್ಷಣೆಗೆ ನಿಂತ ಊಳಿಗಮಾನ್ಯ ಪ್ರಭುಗಳು ಕಂಗಾಲಾದರು, ಅಶಕ್ತರಾದರು. ಒಬ್ಬೊಬ್ಬ ಪ್ರಭುವನ್ನೂ ಅವರವರ ನೆಲೆಗಳಲ್ಲೇ ಮೊಳೆ ಹೊಡೆದು ನಿಶ್ಚಲಗೊಳಿಸಿದರು. ವೋಲ್ಟೇರ್ ಅದಕ್ಕೆ ಕತ್ತಿ-ತುಪಾಕಿ ಸರಬರಾಜು ಮಾಡಿದ ಮತ್ತು ಫ್ರಾನ್ಸಿನ ವಿಶ್ವಕೋಶಕಾರರು ಮೊಳೆ ಜಡಿದರು.

ಇಂತಹ ವಿಧ್ವಂಸ ನಡೆದದ್ದು ಹೇಗೆ? ಐತಿಹ್ಯಗಳ ಆಂತರಿಕ ಅಸಂಗತತೆಯನ್ನು ಪ್ರದರ್ಶನಕ್ಕೆ ಇಡುವ ಮೂಲಕ ಮತ್ತು ವಸ್ತುಸ್ಥಿತಿಯು ಐತಿಹ್ಯಕ್ಕೆ ಭಿನ್ನವಾಗಿದೆಯೆಂದು ತೋರಿಸಿಕೊಡುವುದರ ಮೂಲಕ. ಅಂತೆಯೇ ಪವಾಡಗಳೆಂದು ವಿಜೃಂಭಿಸುತ್ತಿದ್ದ ಅಂಶಗಳನ್ನು ಭೌತಿಕ ವಿಶ್ವದಿಂದ ಮತ್ತು ಮಾನವನ ಇತಿಹಾಸದಿಂದ ಹೊರಕ್ಕೆ ದಬ್ಬುವುದರಿಂದ. ಇದು ಸರಳ, ಏಕೆಂದರೆ ಪವಾಡಗಳ ಅಸ್ತಿತ್ವವು ಪ್ರಕೃತಿಯ ಸ್ವಭಾವ ಮತ್ತು ಚಲನೆಗೆ ಹೊರತಾದದ್ದು. ಪವಾಡಗಳು ಪ್ರಪಂಚದ ವ್ಯವಸ್ಥೆಯನ್ನು ಅವ್ಯವಸ್ಥೆಯನ್ನಾಗಿಸುತ್ತವೆ, ಪ್ರಾಕೃತಿಕ ವ್ಯವಸ್ಥೆಯನ್ನು ಮಾನವನ ಹಿಡಿತದಿಂದ

ದೂರಮಾಡುತ್ತವೆ; ಯಾವುದೋ ಅಗೋಚರ ಶಕ್ತಿಯ ಮನಸೋಇಚ್ಛೆ ವ್ಯವಹಾರಕ್ಕೆ ಪ್ರಕೃತಿಯನ್ನು ಅಡಿಯಾಳನ್ನಾಗಿಸುತ್ತವೆ. ಆ ಶಕ್ತಿಯು ದೇವರೋ ದೆವ್ವವೋ ಆಗಿರುತ್ತದೆ! ಅಂತಹ ಪ್ರಪಂಚವು ಮಾಟ-ಮಂತ್ರಗಳಿಗೆ ಪ್ರತಿಕ್ರಿಯಿಸುತ್ತದೆ, ವಿಜ್ಞಾನಕ್ಕಲ್ಲ. ಭೌತಶಾಸ್ತ್ರಜ್ಞನಿಗಿಂತಲೂ ಮಾಟಗಾರನು ಅಪ್ರತಿಮ ವಿಜಯಿಯಾಗಿಬಿಡುತ್ತಾನೆ.

ಇಪ್ಪತ್ತನೆಯ ಶತಮಾನದ ಐತಿಹ್ಯಗಳು ಪವಾಡಸದೃಶವೇ ಆಗಿವೆ: ಬಿಳಿ ತೊಗಲಿನವನು, ಬಿಳಿ ತೊಗಲಿನ ಕಾರಣದಿಂದಾಗಿ, ಕರಿಯ ಚರ್ಮದವನಿಗಿಂತಲೂ ಹೆಚ್ಚು ಪ್ರಜ್ಞಾವಂತ, ಪುಣ್ಯವಂತ, ಆದ್ದರಿಂದ ಅವನ ಮೌಲ್ಯ ಹೆಚ್ಚಿನದು. ಹಿಂದಿನ ಪುರಾಣ ಕತೆಯೊಂದರಲ್ಲಿ ಯೋನಾ ಎಂಬುವಳು ತಿಮಿಂಗಲದ ಶರೀರದಲ್ಲಿ ಅಡ್ಡಾಡಿ ಬಂದಳೆಂಬ ಮಾತಿದೆ. ನಮ್ಮ ಬಿಳಿಯವನ ಪವಾಡ ಅಂಥದ್ದು! ಜೈವಿಕ ವಿಕಾಸವು ಸರೀಸೃಪಗಳ ಹಂತದಿಂದ ಆರಂಭವಾಗಿ ಕುಂಟುತ್ತಾ ಸಾಗಿಬಂದಿದೆ. ಮಾನವನಿಗೆ ಮುಂಚೆ ಅದೆಷ್ಟು ಜೀವವೈವಿಧ್ಯಗಳು ಆಗಿಹೋದವು! ಕಡೆಗೀಗ ಔದ್ಯಮಿಕ ಶ್ರೀಮಂತ ಪುಢಾರಿ ಬಂದಿದ್ದಾನೆ. ಯೋನಾಳು ಸೂರ್ಯನನ್ನು ವಿಧೇಯನನ್ನಾಗಿಸಿದ ಪ್ರಸಂಗಕ್ಕಿಂತಲೂ ಮಿಗಿಲಾದ ಪವಾಡ ಇದು. ಸತ್ಯವೆಂದರೆ ಆಯಾ ಕಾಲದಲ್ಲಿ ಯಾರು ಏನೆಂದು ಬಗೆಯುತ್ತಾರೋ ಅದೇ,' ಎನ್ನುವುದು 'ಸತ್ಯವಾದರೆ, ಅಥವಾ ಶಬ್ದಕೋಶದ ಸಹಾಯದಿಂದ ಎಲ್ಲಾ ಸಮಸ್ಯೆಗಳನ್ನೂ ಬಗೆಹರಿಸುವುದು ಸಾಧ್ಯವಾದರೆ, ಪ್ರಪಂಚವು ಅತ್ಯಂತ ಪವಾಡಮಯವಾಗಿ ಪರಿಣಮಿಸೀತು. ಆಗ ಎಂತಹ ಪರಿಸ್ಥಿತಿ ಬರುತ್ತದೆಂದರೆ ನಾವು ಯಾರೂ ಏನನ್ನೂ ಗುರುತಿಸಲಾರದೆ ಹೋಗುತ್ತೇವೆ; ಕಡೆಗೆ ಪವಾಡಗಳನ್ನು ಗುರುತಿಸುವುದು ಸಹ ಸಾಧ್ಯವಾಗುವುದಿಲ್ಲ.

ಸಾಮಾಜಿಕ ಐತಿಹ್ಯಗಳ ತತ್ತ್ವಶಾಸ್ತ್ರೀಯ ವಿಶ್ಲೇಷಣೆಯು ಈ ಅಧ್ಯಾಯದ ಮೊದಲಲ್ಲಿ ಸೂಚಿಸಿದ ಮಾದರಿಯಲ್ಲಿ ನಡೆಯಬೇಕು. ಐತಿಹ್ಯದ ನಿಜಾರ್ಥವೇನೆಂದು ಮೊದಲು ಸ್ಪಷ್ಟಪಡಿಸಬೇಕು. ಐತಿಹ್ಯಕ್ಕೇನಾದರೂ ಅರ್ಥವಿದೆಯೇ ಎಂಬುದನ್ನು ಮನಗಾಣಿಸಬೇಕು. ಈ ಅರ್ಥವನ್ನು ವಾಸ್ತವಿಕ ದತ್ತಾಂಶದೊಂದಿಗೆ ಹೋಲಿಸಬೇಕು ಮತ್ತು ಅದಕ್ಕೆ ಪ್ರಸ್ತುತವಾಗುವ ಎಲ್ಲಾ ವೈಜ್ಞಾನಿಕ ಶಿಸ್ತುಗಳನ್ನೂ ಬಳಸಿಕೊಳ್ಳಬೇಕು. ಐತಿಹ್ಯವು ಯಾವುದನ್ನು ಪೂರ್ವಭಾವಿಯಾಗಿ ಅಂಗೀಕರಿಸಿದೆ ಮತ್ತು ಮುಂದೆ ಅದು ಏನನ್ನು ಸೂಚಿಸುತ್ತದೆ ಎಂಬುದನ್ನು ಅರಿತುಕೊಳ್ಳಬೇಕು. ಕಡೆಯದಾಗಿ, ಮಾನವನ ನಡತೆಯ ಮೇಲೆ ಐತಿಹ್ಯವು ಎಂತಹ ಪ್ರಭಾವ ಬೀರುತ್ತದೆಂಬುದನ್ನು ಎಚ್ಚರದಿಂದ ತಿಳಿಯಬೇಕು. ಅದನ್ನು ಮಾಡಲು ಐತಿಹ್ಯವನ್ನು ಸತ್ಯವೆಂದು ಭಾವಿಸುವವನು ಯಾವ ಕ್ರಿಯೆಯಲ್ಲಿ ತೊಡಗುತ್ತಾನೆಂಬುದನ್ನು ಒಳಹೊಕ್ಕು ಕಂಡುಕೊಳ್ಳಬೇಕು. ಆಗ ಐತಿಹ್ಯವು ವಸ್ತುಸ್ಥಿತಿಗೆ ಎಳ್ಳಷ್ಟೂ ಹೊಂದಿಕೊಳ್ಳುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ; ಅದು ಅನೇಕ ಅಸಂಗತ ವಿಷಯಗಳನ್ನು ಯದ್ವಾತದ್ವಾ ಸ್ವೀಕರಿಸಿರುತ್ತದೆ ಇಲ್ಲವೆ ಸೂಚಿಸುತ್ತಿರುತ್ತದೆಂಬುದು ಗೊತ್ತಾಗುತ್ತದೆ; ಈಗಿರುವುದಕ್ಕಿಂತಲೂ ಉತ್ತಮವಾದ ಪ್ರಪಂಚದ ನಿರ್ಮಿತಿಗೆ ಅದು ತೊಡರುಂಟುಮಾಡುತ್ತದೆ, ಇಲ್ಲವೆ ಈಗಿಗಿಂತಲೂ ಹೆಚ್ಚು ಕಲುಷಿತವಾದ ಪ್ರಪಂಚದ ನಿರ್ಮಿತಿಗೆ ಕಾರಣವಾಗುತ್ತದೆಂಬುದು ಅರಿವಿಗೆ ಬರುತ್ತದೆ. ಅಂದರೆ, ಐತಿಹ್ಯಗಳನ್ನು ನಂಬುವವನನ್ನು ಅದು ಕಾರ್ಯವಿಮುಖನನ್ನಾಗಿಸುತ್ತದೆ ಇಲ್ಲವೆ ಅನಾಗರಿಕ ಹಿಂಸಕನನ್ನಾಗಿಸುತ್ತದೆ.

ಈ ಪುಸ್ತಕದಲ್ಲಿ ನಾನು ಕಲೆಹಾಕಿ ವಿಶ್ಲೇಷಿಸಿರುವ ಐತಿಹ್ಯಗಳು ಎಲ್ಲ ಐತಿಹ್ಯಗಳ ಸಂಗ್ರಹವೆಂದು ಹೇಳಲಾಗದು. ಆದರೆ ಅವು ವ್ಯಾಪಕವಾಗಿ ಹರಡಿರುವಂಥವು ಮತ್ತು ಮೂಲಭೂತವಾದವು ಎಂದು ಹೇಳಬಲ್ಲೆ. ಅವು ವಸ್ತುತಃ ತತ್ತ್ವಶಾಸ್ತ್ರದ ವಿಚಾರಗಳು, ಅವನ್ನು ಸಾಮಾನ್ಯೀಕರಿಸಿ ಹೇಳುವುದು ರೂಢಿಯಲ್ಲಿದೆ. ಹೀಗೆ ಹೇಳುವುದರಿಂದ ಅವನ್ನು ನಿರ್ದಿಷ್ಟವಾಗಿ ಅನ್ವಯಗೊಳಿಸುವಂತಹ ಸಂದರ್ಭಗಳು ನಮ್ಮೆದುರಿಗೆ ಬರುತ್ತವೆ. ಅವುಗಳಲ್ಲಿ ಅಭಿಜಾತ ತತ್ತ್ವಶಾಸ್ತ್ರದ ಸಮಸ್ಯೆಗಳು ಅಡಕವಾಗಿವೆ. ಚಿಂತನಾ ಪದ್ಧತಿಗಳ ಇತಿಹಾಸ ತಿಳಿದಿರುವವರಿಗೆ ಐತಿಹ್ಯಗಳನ್ನು ನಿರ್ಮಾಣ ಮಾಡುವ ಯಂತ್ರವನ್ನು ಗುರುತಿಸುವುದು ಸಾಧ್ಯ.

ಇಲ್ಲಿಂದ ಮುಂದಿನ ಎರಡು ಐತಿಹ್ಯಗಳು ಮೌಲ್ಯ ಸಿದ್ಧಾಂತಕ್ಕೆ ಸಂಬಂಧಿಸಿದವು: "ಕಲೆ ಮತ್ತು ರಾಜಕೀಯವನ್ನು ಕಲಬೆರಕೆ ಮಾಡಬಾರದು" ಮತ್ತು "ನಿನ್ನನ್ನು ನೀನೇ ಪೋಷಿಸಿಕೊಳ್ಳಬೇಕು." ಮೊದಲನೆಯದು ಸೌಂದರ್ಯಶಾಸ್ತ್ರಕ್ಕೆ ಮತ್ತು ಇನ್ನೊಂದು ನೀತಿಶಾಸ್ತ್ರಕ್ಕೆ ಸಂಬಂಧಿಸಿವೆ. ನಾಲ್ಕು ಐತಿಹ್ಯಗಳು ಜ್ಞಾನ ಸಿದ್ಧಾಂತಕ್ಕೆ ಸಂಬಂಧಿಸಿವೆ: "ಪ್ರತಿಯೊಂದು ಪ್ರಶ್ನೆಗೂ ಎರಡು ಮಗ್ಗುಲುಗಳಿವೆ," "ನಿಮ್ಮ ಭಾವನೆಯು ತಾನೇ ವಸ್ತುಸ್ಥಿತಿಯಾಗಿ ಪರಿಣಮಿಸುತ್ತದೆ," "ಎಲ್ಲ ಸಮಸ್ಯೆಗಳೂ ಕೇವಲ ಮಾತಿನ ಉತ್ಪನ್ನಗಳು," ಮತ್ತು "ಮಾತುಗಳು ನನಗೊಂದು ಬಾಧೆ ಉಂಟುಮಾಡುವುದಿಲ್ಲ." ಮೌಲ್ಯ ಸಿದ್ಧಾಂತದ ಎಲ್ಲ ಪ್ರಶ್ನೆಗಳನ್ನೂ ಇವು ಹೆಚ್ಚುಕಡಿಮೆ ಚರ್ಚಿಸುತ್ತವೆ. ಇನ್ನುಳಿದ ನಾಲ್ಕು, ಮಾನವ ಮತ್ತು ಸಮಾಜದ ಸ್ವಭಾವಕ್ಕೆ ನೇರವಾಗಿ ಸಂಬಂಧಿಸಿವೆ. ಮಾನವನ ಜ್ಞಾನಸಂಪತ್ತಿನಲ್ಲಿ ಅವು ಬೇರೆಯವುಗಳಿಗಿಂತ ಸ್ವಲ್ಪ ಸಣ್ಣ ಪ್ರಮಾಣದ ಸಾಮಾನ್ಯೀಕರಣಗಳು, ಆದರೆ ಅವುಗಳ ವಲಯದಲ್ಲಿ ಅವು ಮೂಲಭೂತವಾದವು. ಅವು ಐತಿಹ್ಯಗಳಾಗಿರದೆ ಸತ್ಯವೇನಾದರೂ ಆಗಿದ್ದರೆ ಆ ಕ್ಷೇತ್ರದಲ್ಲಿ ಜ್ಞಾನವೆಂದು ಇಂದು ತಿಳಿಯಲಾಗಿರುವುದನ್ನು ಮೀರಿಬಿಟ್ಟಿರುತ್ತಿದ್ದವು.

ಬನ್ನಿ, ಈಗ ಖನಿಗೆ ಪ್ರವೇಶ ಮಾಡೋಣ: ನೀವು ಆಯ್ಕೆಯಿಂದಾಗಿ ತತ್ತ್ವಶಾಸ್ತ್ರಜ್ಞರೋ, ಆಕಸ್ಮಿಕವಾಗಿಯೋ ಅಥವಾ ಅಂತಃಸ್ವಭಾವದಿಂದಲೋ, ಯಾವುದಾದರೂ ಅಡ್ಡಿಯಿಲ್ಲ. ನಾನು ಅಷ್ಟೊಂದು ಡ್ರೇಗನ್‌ಗಳನ್ನು ಒಟ್ಟಿಗೆ ಹೊಡೆದುಹಾಕಿದ್ದೇನೆಂದು ಖಂಡಿತ ಹೇಳಿಕೊಳ್ಳಲಾರೆ. ಗಾಯಗೊಂಡ ಕೆಲವು ಡ್ರೇಗನ್‌ಗಳು ಇನ್ನೂ ಮಿಸುಕಾಡುತ್ತಿದ್ದರೆ ಅವನ್ನು ಪರಂಧಾಮಕ್ಕೆ ಕಳಿಸುವುದು ನಿಮ್ಮ ಸೌಜನ್ಯವೆನಿಸಿಕೊಳ್ಳುತ್ತದೆ.

❑❑

2. ಮಾನವ ಸ್ವಭಾವ ಬದಲಾಗದೆಂಬ ಮಿಥ್ಯೆ

ಇತಿಹಾಸದುದ್ದಕ್ಕೂ ಮಾನವ ತನ್ನ ಹಾಗೂ ತನ್ನ ಸುತ್ತಣ ಪ್ರಪಂಚದ ಬಗ್ಗೆ ವಿಚಿತ್ರವೆನಿಸುವ ಹಲವು ಅಭಿಪ್ರಾಯಗಳನ್ನು ತಾಳುತ್ತಾ ಬಂದಿದ್ದಾನೆ. ತನ್ನ 'ಹಣೆಬರಹ' ಎಂಬುದು ಅಂತಹದ್ದೊಂದು. ದೇವರೋ ದೆವ್ವವೋ ತನ್ನನ್ನು ಹಿಡಿತದಲ್ಲಿ ಇರಿಸಿಕೊಂಡು ನಿರ್ದೇಶಿಸುತ್ತಿದೆ ಎಂಬ ಭಾವನೆಯು ಬೇರೆ ಬೇರೆ ರೂಪಗಳಲ್ಲಿ ಪ್ರಕಟಗೊಂಡಿದೆ. ದೇವರ ಸೃಷ್ಟಿಯಲ್ಲಿ ಮಾನವನೇ ಅತಿಶ್ರೇಷ್ಠ ಎಂದೋ, ಆಡಂನಂತೆ ಬಹಿಷ್ಕೃತ ಎಂದೋ ಭಾವಿಸಿರುವುದೂ ಉಂಟು. ಹಿಂದೆಲ್ಲಾ ಜೀವನ ಎಷ್ಟು ಸುಂದರವಾಗಿತ್ತೆಂದು ಕತೆಗಳನ್ನು ಕಟ್ಟಿಕೊಳ್ಳುವಂತೆ, ಇಂದು ಎಲ್ಲಾ ಎಷ್ಟು ಭೀಕರವಾಗಿದೆಯೆಂದು ನೊಂದುಕೊಳ್ಳುತ್ತಾನೆ ಕೂಡ. ಜಗತ್ತನ್ನೆಲ್ಲಾ ಅರ್ಥಮಾಡಿಕೊಳ್ಳುತ್ತಾನೆ, ಪರಮಾಣುವನ್ನು ವಿಚ್ಛೇದ ಮಾಡುತ್ತಾನೆ, ಆದರೆ ತನ್ನ ಬಗ್ಗೆ ಅರಿವು ಮೂಡುವುದಿಲ್ಲವೆಂದು ಹಲುಬುತ್ತಾನೆ.

ಇದಕ್ಕೆ ಕಾರಣವೇನಿರಬಹುದು? ಪರಿಸರ, ಸಮಾಜ, ಕುಟುಂಬ, ಆರ್ಥಿಕತೆ, ಮುಂತಾದವುಗಳ ಹತೋಟಿಗೆ ಜ್ಞಾನವು ಒಂದು ರೀತಿಯ ಸಾಧನವೆಂದು ಬಗೆಯುವುದು ಅಂತಹ ಒಂದು ಕಾರಣ. ಅವನೊಂದು ಸೇತುವೆ ಕಟ್ಟಿದರೆ ಅದಕ್ಕೆ ತನ್ನ ನೈಪುಣ್ಯವು ಜ್ಞಾನದಿಂದ ಲಭಿಸಿದೆಯೆಂದು ಅವನಿಗೆ ಗೊತ್ತು. ಸಾಮಾಜಿಕ ಆಗುಹೋಗುಗಳನ್ನು ಅಷ್ಟೇ ನಿರ್ದಿಷ್ಟವಾದ ಜ್ಞಾನದಿಂದ ತಿಳಿಯಲು ಸಾಧ್ಯವಿಲ್ಲವಲ್ಲಾ ಎಂಬುದು ಒಂದು ಕೊರಗು. ಹೊರಗಣ ಪ್ರಪಂಚವನ್ನು ತಿಳಿದುಕೊಂಡಷ್ಟು ನಿಖರವಾಗಿ ತಮ್ಮ ಆಂತರಿಕ ಸಂಬಂಧಗಳನ್ನು ತಿಳಿಯಲಾಗದೆ ಹೋಗಿರುವುದು ಮಾನವ ಸಮುದಾಯಕ್ಕೆ ಒಂದು ಪೇಚಿನ ಪ್ರಸಂಗವೆನಿಸಿದೆ. ಒಬ್ಬ ಭೌತವಿಜ್ಞಾನಿಯಷ್ಟು ನಿಖರವಾಗಿ ಒಬ್ಬ ಮನೋವಿಜ್ಞಾನಿ ಇರಲಾರ. ಪ್ರಕೃತಿಯ ವಿಸ್ಮಯವನ್ನು ಬಿಡಿಸುವ ಭೌತವಿಜ್ಞಾನಿಗೆ, ಗೊತ್ತಿರುವಷ್ಟು ಅಂಶಗಳೂ ಸ್ಪಷ್ಟವಾಗಿ ಗೊತ್ತಿವೆ, ಆದರೆ ಮನೋವಿಜ್ಞಾನಿಯದು ಅಸ್ಪಷ್ಟ ತಿಳುವಳಿಕೆಗಳು. ಮಾನವನ ವ್ಯಕ್ತಿತ್ವವು ಹುಟ್ಟಿನಿಂದ ರೂಪಿಸಲ್ಪಟ್ಟಿದೆಯೋ ಅಥವಾ ಪರಿಸರದಿಂದಲೋ? ಇದಕ್ಕೆ ಇದಮಿತ್ಥಂ ಎಂಬ ಉತ್ತರವಿಲ್ಲ. ಹಾಗಿದ್ದರೆ, ಮನೋವಿಜ್ಞಾನವೆಂಬುದು ಒಂದು ಭ್ರಾಂತಿಯೆ? ಅದೆಂದೂ ಪಕ್ವವಾಗಲಾರದ ಜ್ಞಾನಕ್ಷೇತ್ರವೆ? ಹಾಗೇನೂ ಇರಲಾರದು, ಏಕೆಂದರೆ ಅನುಭವವು ಹೆಚ್ಚಾದಂತೆ ತಿಳುವಳಿಕೆಯು ಮೂಡುವುದು ಸಹಜ. ಆದರೆ ಅದು ಸಿದ್ಧಿಸುವವರೆಗೆ ಎಂತೆಂಥವೋ ಕಲ್ಪನೆಗಳು ಪ್ರಚಾರದಲ್ಲಿರುತ್ತವೆ. ಅವು ವೈಜ್ಞಾನಿಕ ಬೆಳವಣಿಗೆಗೆ ತೊಡಕುಗಳೂ ಆಗಬಹುದು. ಸಮಾಜ ಜೀವನದ ಬಗ್ಗೆ ಕೆಲವು ತೀರ್ಮಾನಗಳನ್ನು ಹೊಂದಿ, ಅವೆಲ್ಲಾ ವೈಜ್ಞಾನಿಕ ಆಧಾರದಿಂದಲೇ ಹೊಮ್ಮಿವೆಯೆಂಬ ಭ್ರಾಂತಿಯನ್ನು ಬೆಳೆಸಿಕೊಂಡು, ಆಮೇಲೆ, " ಮಾನವ ಸ್ವಭಾವ" ಇಂಥದು ಎಂದು ಸಾಮಾನ್ಯೀಕರಿಸಿಬಿಡುವ ಪ್ರವೃತ್ತಿ

ಬೆಳೆಯುವುದು ಹೀಗೆಯೇ. ನಾಟೀವೈದ್ಯದ ಹಿರಿಮೆಯನ್ನು ನಂಬಿದವರು ವೈದ್ಯರ ಸಲಹೆಯನ್ನು ಮಾನ್ಯ ಮಾಡುವುದಿಲ್ಲವಲ್ಲಾ, ಹಾಗೆ. ನಾವು ಪ್ರತಿಯೊಬ್ಬರೂ ಮನೋವಿಜ್ಞಾನಿಗಳಾಗಿಬಿಟ್ಟು ನಮ್ಮ ಭಾವನೆಗಳು ಪರಮಸತ್ಯವೆಂದು ಘೋಷಿಸಿಕೊಳ್ಳುವುದು ಅಪರೂಪವೇನಲ್ಲ.

ಇಂತಹ ಸನ್ನಿವೇಶದಲ್ಲಿ ಕಲ್ಪಿತ ಅಭಿಪ್ರಾಯಗಳು ಹಿಂಡುಹಿಂಡಾಗಿ ಬೆಳೆಯುತ್ತಿರುತ್ತವೆ. "ಮಾನವ ಸ್ವಭಾವವನ್ನು ಬದಲಾಯಿಸಲು ಸಾಧ್ಯವಿಲ್ಲ" ಎಂಬುದು ಅಂತಹ ಅಭಿಪ್ರಾಯಗಳಲ್ಲಿ ಮಹತ್ತರವಾದುದು. ಹಾಗೆ ಹೇಳುವುದರಿಂದ ಪ್ರಯೋಜನವಿದೆ; ಇಲ್ಲದಿದ್ದರೆ ಅದನ್ನೆಂದೋ ಕೈಬಿಡಲಾಗುತ್ತಿತ್ತು. ಪಾಪಿಗಳು – ಸಂತರು, ಆಳುವವರು – ಗುಲಾಮರು, ತತ್ವಜ್ಞಾನಿಗಳು, ಸಾಧುಗಳು, ದೇವತಾಶಾಸ್ತ್ರಜ್ಞರು, ಮನೋವಿಜ್ಞಾನಿಗಳು, ಪತ್ರಕರ್ತರು ಇದನ್ನು ನಂಬಿದ್ದಾರೆ. ಆದರೆ ಅದನ್ನು ಎಲ್ಲರೂ ಮಥಿಸಿ ಅರ್ಥ ಮಾಡಿಕೊಂಡಿದ್ದಾರೆಯೇ ಎಂಬುದು ಸಂಶಯಾತ್ಮಕವಾದ್ದು.

ಈ ಭಾವನೆಯಿಂದ ಏನು ಪ್ರಯೋಜನವಿದೆ? ಬೇಕಾದಷ್ಟಿದೆ. ಉದಾಹರಣೆಗೆ, ಜಗತ್ತಿನಲ್ಲಿ ಬಡತನವಿದೆಯೆ? ಉತ್ತರ : ಇದೆ, ಅದಕ್ಕೆ ಮುನ್ನೆಚ್ಚರವಿರದ ಮಾನವ ಸ್ವಭಾವವೇ ಕಾರಣ. ನಿರುದ್ಯೋಗವಿದೆಯೆ? ಇದೆ, ಅದಕ್ಕೆ ಮಾನವ ಸ್ವಭಾವವಾದ ಸೋಮಾರಿತನ ಕಾರಣ. ಯುದ್ಧಗಳಿವೆಯೇ? ಇವೆ, ಅದಕ್ಕೆ ಮಾನವಸಹಜವಾದ ಆಕ್ರಮಣಕಾರಿ ಸ್ವಭಾವವೇ ಕಾರಣ. ಮೋಸ, ದಗಾಬಾಜಿ, ಇತ್ಯಾದಿಗಳಿವೆಯೇ? ಇವೆ, ಲಾಭ ಗಳಿಸಬೇಕೆಂಬ ಮಾನವ ಸ್ವಭಾವ ಅದಕ್ಕೆ ಕಾರಣ. ಊಳಿಗದವರು ಮತ್ತು ಯಜಮಾನರು, ಗುಲಾಮರು – ಒಡೆಯರು, ಇರುವುದುಂಟೆ? ಉಂಟು, ಏಕೆಂದರೆ ಪ್ರತಿಯೊಬ್ಬರೂ ಅವರವರ ಸ್ಥಾನಗಳಲ್ಲಿ ಜನ್ಮ ತಾಳಿದ್ದಾರೆ!

ಪ್ರಶ್ನೆಗಳು ಬೇರೆ ರೀತಿಯಲ್ಲಿಯೂ ಇರಲು ಸಾಧ್ಯ : ಅಪರಾಧಿಗಳ ಹೆಚ್ಚಳವನ್ನು ತಡೆಯಲು ಸಾಧ್ಯವೆ ಮತ್ತು ಈಗಾಗಲೇ ಅಪರಾಧಿಗಳಾಗಿರುವವರನ್ನು ಬದಲಾಯಿಸಲು ಸಾಧ್ಯವೇ? – ಇಲ್ಲ, ಪ್ರಯೋಜನವಿಲ್ಲ; ಅದು ಮಾನವ ಸ್ವಭಾವ. ಸಮಾಜದಲ್ಲಿ ನ್ಯಾಯ ಮತ್ತು ಸಮಾನತೆ ಸಾಧ್ಯವೆ? – ಇಲ್ಲ, ಮಾನವ ಸ್ವಭಾವವನ್ನು ಬದಲಾಯಿಸಲಾಗುವುದಿಲ್ಲ. ಇಡೀ ಮಾನವಕುಲವನ್ನು ವೈಜ್ಞಾನಿಕ ಮಾರ್ಗಕ್ಕೆ ಕೊಂಡೊಯ್ಯಲು ಸಾಧ್ಯವೆ ? ಇಲ್ಲ, ಮೂರ್ಖತನವು ಮಾನವನ ಸ್ವಭಾವ!

ಇನ್ನೊಂದು ರೀತಿಯ ಪ್ರಶ್ನೆಗಳನ್ನು ನೋಡಿ: ಎಲ್ಲರಿಗೂ ಮತದಾನದ ಹಕ್ಕಿರಬೇಕೆ ?– ಇಲ್ಲ; ಅವಿದ್ಯಾವಂತರಿಗೆ ಅದು ಕೂಡದು. ಸಮಾಜದಲ್ಲಿರುವ ಏರುಪೇರುಗಳನ್ನು ಸರಿಪಡಿಸಬೇಕೆ? – ಆಗದು, ಜನರ 'ಪ್ರವೃತ್ತಿ' ಮೊದಲು ಬದಲಾಗಬೇಕು. ಅಸ್ಪೃಶ್ಯತೆಯನ್ನು ತೊಡೆದುಹಾಕಬೇಕೆ ? – ಸಾಧ್ಯವಿಲ್ಲ, ಅದು ಪ್ರತಿಯೊಬ್ಬರ ಮನಸ್ಸಿಗೂ ಬರಬೇಕು. ಸಮಾಜದ ರಚನೆಯನ್ನು ಬದಲಾಯಿಸಬೇಕೆ? ಇಲ್ಲ, ಮೊದಲು ಪ್ರತಿಯೊಬ್ಬರ ಆತ್ಮವೂ ಶುದ್ಧವಾಗಬೇಕು, ಸಂಪತ್ತಿನ ಆಸೆಯ ಜಾಗದಲ್ಲಿ ಅಧ್ಯಾತ್ಮ ದೃಷ್ಟಿ ನೆಲೆಗೊಳ್ಳಬೇಕು!

ಇಲ್ಲಿರುವ ಒಂದು ವಿಪರ್ಯಾಸವನ್ನು ಗಮನಿಸಿ : ಸಂಪತ್ತಿನ ಆಸೆಯ ಬದಲು ಆಧ್ಯಾತ್ಮಿಕ ದೃಷ್ಟಿ ಬೆಳೆಯುವುದೆಂಬುದನ್ನು ಒಪ್ಪಿದರೆ ಮಾನವ ಸ್ವಭಾವವು ಬದಲಾಗಲು ಸಾಧ್ಯವೆಂದು ಒಪ್ಪಿದಂತಾಯಿತು. ಆದರೆ ಇದು ಹಾಗೆ ಭಾಸವಾಗುತ್ತದಷ್ಟೆ, ನಿಜಕ್ಕೂ ಆ ಬದಲಾವಣೆಯು ಸಾಮಾಜಿಕ ಸಂದರ್ಭದಲ್ಲಿ ಉಂಟಾದುದಲ್ಲ ಮತ್ತು ಸಾಮಾಜಿಕ

ಸಂದರ್ಭದಲ್ಲಿ ಉಂಟಾಗದ ಬದಲಾವಣೆಯು ಅಮೂರ್ತವಾಗಿ ಉಳಿಯುತ್ತದೆ. ಅನಕ್ಷರಸ್ಥರಿಗೆ ಮತದಾನದ ಹಕ್ಕು ಇರಬಾರದೆಂಬ ಅಭಿಪ್ರಾಯವನ್ನು ನೋಡೋಣ. ಹಾಗೆ ಹೇಳುವವರ ವಾದ ಇದು: ಅವರಿಗೆ ಹಕ್ಕಿರಬೇಕೆಂಬುದು ನಮ್ಮ ಆಶಯ ಕೂಡ; ಆದರೆ ಅವರಿಗೆ ವಿದ್ಯಾಭ್ಯಾಸ ದೊರಕುವ ತನಕ ಅದು ಬೇಡ.

ಭೇಷ್, ನಿಮ್ಮ ಪ್ರಜಾಪ್ರಭುತ್ವದಲ್ಲಿನ ನಂಬಿಕೆ ಅಮೋಘವಾಗಿದೆ. ಆದರೆ ತೊಡಕಿರುವುದು ಹೀಗೆ : ಶಾಲೆಗೆ ಪ್ರವೇಶ ಸಿಗುವವರೆಗೆ ಅವರಿಗೆ ಶಿಕ್ಷಣ ದೊರೆಯುವುದಿಲ್ಲ. ಅದಕ್ಕೆ ಕಾನೂನು, ಸೌಲಭ್ಯದ ಕಲ್ಪನೆ, ಎಲ್ಲಾ ಬೇಕು. ಅಂತಹ ಕಾನೂನು ಮಾಡುವವರು ಶಾಸನಸಭೆಗೆ ಬರುವವರೆಗೆ ಆ ಶಾಸನ ಬರುವುದಿಲ್ಲ. ಹಾಗಾದರೆ ಅನಕ್ಷರಸ್ಥರಿಗೆ ಶಿಕ್ಷಣ ಮತ್ತು ಮತ ಚಲಾಯಿಸುವ ಹಕ್ಕು ಹೇಗೆ ದೊರೆಯುತ್ತದೆ? (ರೈತರ ಪರ, ದುಡಿಯುವವರ ಪರ, ಮಹಿಳೆಯರ ಪರ ಎಂದೆಲ್ಲಾ ಹೇಳಿಕೊಂಡು ಯಾವ ಸೂಕ್ತ ಕಾನೂನನ್ನೂ ಮಾಡದಿರುವವರು ಈವರೆಗೆ ನಮ್ಮಲ್ಲಿ ಎಷ್ಟು ಮಂದಿ ಆಗಿಹೋಗಿದ್ದಾರಲ್ಲವೆ?)

ತಾತ್ಪರ್ಯವಿಷ್ಟೆ : ನೀವು ಆದರ್ಶದ ಮಾತುಗಳನ್ನಾಡುತ್ತಾ ಸಂತೋಷ ಅನುಭವಿಸ ಬಹುದು; ಆದರ್ಶದ ಪರಿಣಾಮಕಾರಿ ಕ್ರಿಯೆಗೆ ಹೊರಳಬಾರದು, ಅಷ್ಟೆ. ಅಂದರೆ, ಬದಲಾವಣೆಯು ಆಮೂಲಾಗ್ರವಾಗಿ ಯಾವತ್ತಿಗೂ ಸಾಧ್ಯವಾಗುವುದಿಲ್ಲವೆಂದು ಹೇಳಿ ಕೈಕಟ್ಟಿ ಕೂರಬೇಕು, ಎಂದರ್ಥ.

ಬಡತನ, ನಿರುದ್ಯೋಗ, ಮುಂತಾದ ಪ್ರಶ್ನೆಗಳನ್ನು ಮತ್ತೆ ಪರಿಶೀಲಿಸೋಣ: ಸದ್ಯದ ಎಲ್ಲ ಸನ್ನಿವೇಶಗಳಿಗೆ ಮಾನವರು "ಸ್ವಾಭಾವಿಕ"ವಾಗಿ ನಡೆದುಕೊಳ್ಳುವುದೇ ಕಾರಣವೆಂದು ಅಲ್ಲಿ ಹೇಳಲಾಗಿದೆ. ಅದು ಅಸ್ತಿತ್ವದಲ್ಲಿರುವ ಸನ್ನಿವೇಶದ ಸಮರ್ಥನೆಯ ರೂಪದ್ದು. ಅದನ್ನು "ವಾಸ್ತವಿಕ" ದೃಷ್ಟಿಕೋನವೆಂದು ಹೊಗಳಲಾಗುತ್ತದೆ. ಒಂದರ್ಥದಲ್ಲಿ ಎಲ್ಲವೂ ದೇವರು ಮಾಡಿದ್ದು ಎಂಬುದೂ ಇದರಲ್ಲಿ ಅಡಕವಾಗಿದೆ. ಗ್ರಹಗತಿಯಿಂದ ಎಲ್ಲವೂ ಹೀಗೆ ನಿರ್ಧಾರವಾಗುತ್ತಿದೆಯೆಂದು ಬೇಕಾದರೂ ಬೂಸಿ ಬಿಡಬಹುದು. ಗ್ರಹಗತಿಯಿಂದ ಮಾನವನ ಗತಿ ತೀರ್ಮಾನವಾಗುವುದಾದರೆ ಹುಲುಮಾನವ ಏನು ತಾನೆ ಮಾಡಬಲ್ಲ! ಇರುವುದನ್ನು ಹಾಗೇ ಒಪ್ಪಿಕೊಂಡು ನಡೆಯುವುದೇ ಮೇಲು ಎಂಬ ತತ್ವವನ್ನು ಅಂಗೀಕರಿಸಬೇಕು, ಅಷ್ಟೆ.

ನಂತರದ ಪ್ರಶ್ನೆಗಳನ್ನು ನೋಡಿ: ಯುದ್ಧ, ಇತ್ಯಾದಿ. ಇಲ್ಲಿ ನೈತಿಕವೆಂಬುದು ಸಂಪೂರ್ಣವಾಗಿ ಸೊನ್ನೆ. ಯುದ್ಧ ಕೆಟ್ಟದ್ದು, ಹೊಟ್ಟೆಗಿಲ್ಲದೆ ನರಳಬೇಕಾಗುವುದು ಕೆಟ್ಟದ್ದು ; ಆದರೆ ಏನು ಮಾಡಲು ಸಾಧ್ಯ! ಇಷ್ಟವೇ ಬೇರೆ, ವಸ್ತುಸ್ಥಿತಿಯೇ ಬೇರೆ. ಮಾನವ ಸ್ವಭಾವ ಹಾಗಿರುವುದರಿಂದ ಯುದ್ಧವೂ ಅನಿವಾರ್ಯ, ಆಹಾರದ ಕೊರತೆಯೂ ಅನಿವಾರ್ಯ! ಸಮಾನತೆಯೆಂಬುದು ಅಮೋಘವಾದ ಕಲ್ಪನೆ. ಆದರೆ ನಮ್ಮ ಅದೃಷ್ಟ ಹಾಗಿದೆ; ಆದ್ದರಿಂದ ಕೆಲವರು ಮೇಲು, ಇತರರು ಕೀಳು. ಅದನ್ನು ಒಪ್ಪಿಕೊಂಡು ತೆಪ್ಪಗಿರಬೇಕು, ಅಷ್ಟೇ.

ಪಾಪ, ಹೀಗೆ ವಾದಿಸುವವರೂ ಆದರ್ಶದ ಆರಾಧಕರೇ; ಆದರೆ ಅವರೂ ವಾಸ್ತವಕ್ಕೆ ಕಟ್ಟುಬಿದ್ದಿದ್ದಾರೆ! ಅವರ ಹೃದಯವೇನೋ ವಿಶಾಲವಾಗಿದೆ, ಆದರೆ ತತ್ತ್ವಪಾಲನೆ ಇಲ್ಲ. 'ಸದ್ಗುಣ' ಎಂಬುದನ್ನು ಶ್ಲಾಘಿಸುತ್ತಾ ನಿಷ್ಕ್ರಿಯೆಯ ಸುಖ ಅವರಿಗೆ ಬೇಕೆಂಬುದು ಸ್ಪಷ್ಟವಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ, ಈ ಎಲ್ಲ ಪ್ರಸಂಗಗಳಲ್ಲೂ ಒಂದು ಸಾಮಾನ್ಯ

ಉದ್ದೇಶವಿದೆ. ವೈಜ್ಞಾನಿಕ ಸತ್ಯದ ಬೆಳಕಿನಲ್ಲಿ ಮಾನವ ಜನಾಂಗದ ಆಗುಹೋಗುಗಳನ್ನು ಪರೀಕ್ಷಿಸುವ ಬದಲು ಇಲ್ಲಿ ಸಾಮಾಜಿಕ ಬದಲಾವಣೆಯನ್ನು ಅನಾಮತ್ತಾಗಿ ಅಸಾಧ್ಯವಾದ ಭ್ರಾಂತಿಯೆಂದು ಬಗೆಯಲಾಗಿದೆ. ಇದೊಂದು ಬುದ್ಧಿವಂತಿಕೆಯ ಹಾದಿ : ನಿಮ್ಮ ಆಶೋತ್ತರಗಳ ಈಡೇರಿಕೆಗೆ ದಾಟಲಾಗದ ಕಂದುಕವಿದೆಯೆಂದು ಜನರನ್ನು ನಂಬಿಸಿದರೆ, ಅವರು ಉತ್ತಮಪಡಿಸಿಕೊಳ್ಳುವಿಕೆಯತ್ತ ಹೋಗದೆ ಏನು ಸಿಗುತ್ತದೋ ಅದನ್ನು ಭೋಗಿಸುತ್ತಾ ತೆಪ್ಪಗಿರುತ್ತಾರೆ. ಈ ತತ್ತ್ವವನ್ನು ಅಂಗೀಕರಿಸಿದಾಗ ತಮ್ಮ ಅಲ್ಪಕಾಲದ ಜೀವನದಲ್ಲಿ ಕಷ್ಟವೋ ನಷ್ಟವೋ, ಯಾವ ಆಘಾತವುಂಟಾದರೂ ಸುಮ್ಮನಿರುತ್ತಾರೆ. ಉಳ್ಳವರಿಗೆ ಬೇಕಾದ್ದೂ ಅದೇ!

ಮಾನವ ಸ್ವಭಾವಗಳಲ್ಲಿ ಬದಲಾಗದೆ ಉಳಿಯುವುವೆಂದು ಹೇಳಲಾದವು ಮುಖ್ಯವಾಗಿ ಎರಡು : (ಅ) ಮಾನವ ಸಾರ್ವತ್ರಿಕವಾಗಿ ಸ್ವಾರ್ಥಿ; ಅದಕ್ಕೆ ಔಷಧಿಯಿಲ್ಲ, ಮತ್ತು (ಆ) ಸಮೂಹದಲ್ಲಿ ನೋಡಿದಾಗ ಮಾನವ ಒಬ್ಬ ಮೂರ್ಖ, ಅದನ್ನು ತೊಡೆದುಹಾಕುವಂತಹ ಶಿಕ್ಷಣ ಯಾವುದೂ ಇಲ್ಲ. ಮಾನವನ ವ್ಯವಹಾರಗಳನ್ನು ಪ್ರಜ್ಞಾವಂತಿಕೆಯಿಂದ ನಡೆಸಲು ಎಂದಿಗೂ ಸಾಧ್ಯವಿಲ್ಲ.

ಇವೆರಡರಲ್ಲಿ ಮೊದಲನೆಯದು ನಿಜವಾದರೆ, ಮಾನವ ಸಮಾಜವು ಎಂದೆಂದಿಗೂ ಸಹಕಾರಿ ತತ್ತ್ವದ ಆಧಾರದಲ್ಲಿ ಸುಸ್ಥಿರವಾಗಿ ನೆಲೆಗೊಳ್ಳಲಾರದು; ಮತ್ತು ಎರಡನೆಯದು ನಿಜವಾದರೆ, ಸಾಮಾಜಿಕ ಅಸ್ತವ್ಯಸ್ತತೆಯಿಂದ ಮಾನವ ಸಮಾಜವು ಎಂದೂ ಹೊರಬರಲಾಗುವುದಿಲ್ಲ.

– ಆದರೆ ಈ ಗ್ರಹಿಕೆಗಳು ಸರಿಯೇ ?

ಇಹಲೋಕದ ಜಾಣತನವೆಂದರೆ ಮಾನವನು ಸ್ವಾರ್ಥಿಯೆಂಬುದನ್ನು ಸರ್ವಥಾ ಅಂಗೀಕರಿಸುವುದೆಂದು ಅನೂಚಾನವಾಗಿ ಹೇಳಿಕೊಂಡು ಬಂದಿದ್ದಾರೆ. ಮೋಕ್ಷ ಸಾಧನೆಗೆ ಕೂಡ ಅದೇ ತಳಹದಿ. ಇಲ್ಲಿಯ ಸ್ವಾರಸ್ಯ ನೋಡಿ: ಮಾನವ ಸ್ವಭಾವತಃ ನರಕಕ್ಕೆ ಯೋಗ್ಯ; ಆದರೆ ಅವನು ಸ್ವರ್ಗಕ್ಕೆ ಹೋಗಲು ಆಶಿಸುತ್ತಾನೆ ! ಇದೊಂದು ಬಿಡಿಸಲಾಗದ ವಿಪರ್ಯಾಸ.

ಸ್ವಾರ್ಥವೆಂದರೆ ಮಾನವನು ಇನ್ನೊಬ್ಬ ಮಾನವನನ್ನು ಕಡೆಗಣಿಸಿ ಸುಖವನ್ನು ಸಾಧಿಸಿಕೊಳ್ಳುವುದು. ಇದಕ್ಕಿರುವ ಅತಿ ತೀವ್ರ ಉದಾಹರಣೆಯೆಂದರೆ ಯುದ್ಧ. ಅದರಲ್ಲಿ ಸಂಘಟಿತ ಹಿಂಸೆ ಇದೆ. ಯುದ್ಧವನ್ನು ಎಂದೆಂದೂ ಇಲ್ಲವಾಗಿಸಲಾಗುವುದಿಲ್ಲವೆಂದು ಹೇಳಲು ಮತ್ತೆ ಮಾನವನ ಸ್ವಭಾವವನ್ನೇ ಕಾರಣವನ್ನಾಗಿ ಕೊಡುತ್ತಾರೆ. ಸ್ಪೆಂಗ್ಲರ್ ಎಂಬ ಸ್ವಯಂಘೋಷಿತ ಇತಿಹಾಸತಜ್ಞನ ಮಾತು ನೋಡಿ : "ಮನುಷ್ಯ ಯಾವಾಗಲೂ ಬೇಟೆಯಾಡುವಂತಹ ಮೃಗ. ಜೀವನದ ಮೂಲಸತ್ಯವೆಂದರೆ ದ್ವಂದ್ವ ಅಥವಾ ವಿರೋಧ. ಅದರಿಂದ ದೊರಕುವ ಸುಖವನ್ನು ಯಾವ ಅಹಿಂಸಾವಾದಿಯೂ ಸಂಪೂರ್ಣವಾಗಿ ಬುಡಮೇಲು ಮಾಡಲಾರ". ಚಾರ್ಲ್ಸ್ ಮೇಯೋ ಎಂಬುವನ ನುಡಿ ಇದು: "ಯುದ್ಧವನ್ನೆಂದೂ ತೊಡೆದುಹಾಕಲು ಸಾಧ್ಯವಿಲ್ಲ. ಮಾನವನ ವಂಶಪಾರಂಪರ್ಯ ಸಂಪತ್ತು ಅದು. ಅದು ನಮ್ಮ ಹತೋಟಿಗೆ ಮೀರಿದ್ದು". ಬಾಲ್ಡ್‌ವಿನ್ ಹೇಳಿದ: "ನಮ್ಮ ಉದ್ದೇಶವೇನೋ ಯುದ್ಧವನ್ನು ಇಲ್ಲವಾಗಿಸುವುದೇ ಆಗಿದೆ. ಒಂದೆರಡು ಶತಮಾನಗಳಲ್ಲಿ ಅದು ಸಿದ್ಧಿಸದು. ಆದರೂ ಯತ್ನ ಮುಂದುವರಿಯಬೇಕು. ಸಾವು ಜೀವನದ ಅವಿಭಾಜ್ಯ

ಅಂಗ. ಹಾಗೆಂದು ಸಾವಿನಿಂದ ಹತಾಶೆಗೊಳ್ಳಬೇಕೆ? ಸಾವನ್ನು ಜೀವನವು ಕಟ್ಟಕಡೆಗೆ ಸೋಲಿಸುತ್ತದೆಂಬ ತತ್ತ್ವವು ಪ್ರಾಚೀನವಾದ್ದು. ಹಾಗಿರುವಾಗ ಯುದ್ಧದಿಂದ ಕಂಗಾಲೇಕಾಗಬೇಕು?"

ಯುದ್ಧದಿಂದ ಹತಾಶೆ ಏಕೆ? ಏಕೆಂದರೆ, ಅದರಿಂದ ನಮ್ಮವರು ಸಾಯುತ್ತಾರೆ. ಮಕ್ಕಳು, ಸ್ನೇಹಿತರು, ಎಲ್ಲಾ. ನಾವು ಕಟ್ಟಿದ ಸೌಧಗಳೆಲ್ಲಾ ಧ್ವಂಸವಾಗುತ್ತವೆ. ಇನ್ನೊಂದು ಯುದ್ಧ ಮಾಡಲು ಈಗಿನ ಯುದ್ಧ ! ಇದು ಮೂರ್ಖತನವಲ್ಲವೇ? ಬಾಲ್ಡ್‌ವಿನ್ ಗುರುತಿಸುವಂತೆ, ಯುದ್ಧವನ್ನು ಕೊನೆಗಾಣಿಸುವ ಉದ್ದೇಶಕ್ಕಾಗಿ ಯತ್ನ ಮುಂದುವರಿಯಬೇಕು. ಸದ್ಯ, ಅಷ್ಟನ್ನಾದರೂ ಆತ ಒಪ್ಪಿಕೊಂಡನಲ್ಲ! ಅದು ಭ್ರಾಂತಿಯೇ ಆದರೂ ಅದಕ್ಕಾಗಿ ಶ್ರಮಿಸಬೇಕು, ಏಕೆಂದರೆ ಆ ಭ್ರಾಂತಿಯು ಮೌಲ್ಯಯುತವಾದ್ದು.

ಮಾನವರಲ್ಲಿ ತೋರಬಹುದಾದ ಅಮಾನವೀಯತೆಯು ಯುದ್ಧದಲ್ಲಿ ಅತಿ ಘೋರವಾಗಿ ಪ್ರಕಟವಾಗುತ್ತದೆ. ಈ ರೀತಿಯ ನಡತೆ ಸರ್ವೇಸಾಮಾನ್ಯವಲ್ಲ. ಅಂದರೆ, ಘೋರಹಿಂಸೆಯು ಮಾನವನ ಮೂಲಸ್ವಭಾವವಲ್ಲ. ಬೇರೆ ಮಾನವರಿಗಾಗಿ ತ್ಯಾಗ ಮಾಡುವುದು ಹೇಗೆ ಸಾರ್ವತ್ರಿಕವಲ್ಲವೋ ಹಾಗೆಯೇ ಇದೂ ಕೂಡ. ವೈಯ್ಯಕ್ತಿಕ ನೆಲೆಯಲ್ಲಿ ಇದು ಹೇಗೇ ಇದ್ದರೂ ಸಾಮೂಹಿಕ ನೆಲೆಯಲ್ಲಿ ಬೇರೆಯವರಿಗಾಗಿ ಮಾಡುವ ಅನೇಕ ಒಳ್ಳೆಯ ಕೆಲಸಗಳನ್ನು ಪಟ್ಟಿಮಾಡಬಹುದು. ದುಡಿಮೆಯ ವಿಭಜನೆಯು ಇದಕ್ಕೊಂದು ಉದಾಹರಣೆ. ಬೇರೆಯವರ ಅನುಕೂಲಕ್ಕೆ ಎಷ್ಟೆಲ್ಲಾ ಕೆಲಸಗಳು ನಡೆಯುತ್ತವೆ ಮತ್ತು ಎಷ್ಟೊಂದು ಮಂದಿ ಅದರಲ್ಲಿ ತೊಡಗಿದ್ದಾರೆ! ಸಮಾಜವೆಂದಮೇಲೆ ಅದು ಹಾಗಿರದಿರಲು ಸಾಧ್ಯವಿಲ್ಲ. ನಾವು ಮಾಡುವ ಎಲ್ಲಾ ಕೆಲಸಗಳು ಇತರ ಮಾನವರ ಒಳಿತಿಗಾಗಿ ಅಲ್ಲದಿರಬಹುದು, ಆದರೆ ಕೆಲವಂತೂ ಖಂಡಿತ ಇತರರಿಗೆ ಒಳ್ಳೆಯದನ್ನು ಮಾಡುವಂಥವು. ಧಾನ್ಯ ಬೆಳೆಯುವುದು, ಶಿಕ್ಷಣ ನೀಡುವುದು, ಬಟ್ಟೆ ನೇಯುವುದು, ಇವೆಲ್ಲ ಯಾವಾಗಲೂ ಸ್ವಂತಕ್ಕೆ ಮಾತ್ರವೇ ಆಗಿರುವುದಿಲ್ಲ. – ಮನುಷ್ಯನ ಎಲ್ಲಾ ಕ್ರಿಯೆಗಳಲ್ಲೂ ಸ್ವಾರ್ಥವಿದೆಯೆಂಬುದು ಅಷ್ಟರ ಮಟ್ಟಿಗಾದರೂ ನಿಜವಲ್ಲ. ಮಾನವನಲ್ಲಿ ಸ್ವಾರ್ಥವಿರುವಂತೆ ಸಮಾಜಮುಖಿ ಭಾವನೆಗಳೂ ಇವೆ. ಏನನ್ನೋ ಪಡೆಯುವ ತುಡಿತವಿರುವಾಗ ಬೇರೆಯವರಿಗೆ ಹಾನಿಯುಂಟು ಮಾಡುವ ಮಾನವ ಅಂತಹ ಹಾನಿಗೆ ಕೈಹಾಕದೆಯೂ ಇರಬಲ್ಲ, ಇರುತ್ತಾನೆ. ಅವನಿಗೆ ಬೇಕಾದ್ದು ಬೇರಾವ ಮಾರ್ಗದಿಂದಲೂ ಪಡೆಯಲಾಗುವುದಿಲ್ಲವೆಂಬ ಸಂದರ್ಭದ ಪ್ರಶ್ನೆಯೇ ಬೇರೆ. ಹಾಗಿಲ್ಲದಿದ್ದಾಗ ಸಹಕಾರದಿಂದ ವರ್ತಿಸಲು ಅವನಿಗೆ ಸಾಧ್ಯವಿದೆ.

ತಮ್ಮ ಆಶಯಗಳನ್ನು ಪೂರೈಸಿಕೊಳ್ಳಲು ಎಲ್ಲರೂ ತವಕಿಸುತ್ತಾರೆ. ಸ್ವ–ಹಿತವೇ ಬೇರೆ, ಸ್ವಾರ್ಥವೇ ಬೇರೆ. ಇತರರ ಆಶಯಗಳನ್ನು ಮುರಿದು ತನ್ನದನ್ನು ಸಾಧಿಸಿಕೊಳ್ಳುವುದು ಸ್ವಾರ್ಥ. ಇದು ಮಾನವ ಸಹಜ ಲಕ್ಷಣವೇನೂ ಅಲ್ಲ. ಬೇರೆಯವರನ್ನು ಕಡೆಗಣಿಸಿಯೇ ನಮ್ಮ ಆಶಯಗಳನ್ನು ಪೂರೈಸಿಕೊಳ್ಳಬೇಕಾದ ಸನ್ನಿವೇಶವು ಸಾರ್ವತ್ರಿಕವಲ್ಲ. ಎಷ್ಟೋ ವೇಳೆ, ಇತರರ ಆಶಯಗಳನ್ನು ಪೂರೈಸದೆ ಕೇವಲ ನಮ್ಮದನ್ನು ಮಾತ್ರ ಪೂರೈಸುವ ಸಾಧ್ಯತೆ ಇರುವುದಿಲ್ಲ. ಮಾನವನ ಆಸೆಗಳು ಸಾಮಾನ್ಯವಾಗಿ ಎಂಥವು ? " ಅಧಿಕಾರ" ಮುಂತಾದವನ್ನು ಪಕ್ಕಕ್ಕಿಡಿ ಮತ್ತು ವಿಕೃತ ಅಸೆಗಳನ್ನು ಹೊರತುಪಡಿಸಿ. ಆಗ ಉಳಿಯುವುದೇನು? ಆಹಾರ, ವಸತಿ, ಬಟ್ಟೆ, ಸಹವಾಸ, ಆಟ ಮತ್ತು ರತಿಕ್ರೀಡೆ, ಅಷ್ಟೇ

ಅಲ್ಲವೆ? ಇವು ಸಾರ್ವತ್ರಿಕ ಮತ್ತು ಮೂಲಭೂತವಾದ ಅಗತ್ಯಗಳು. ವ್ಯಕ್ತಿ ಮತ್ತು ಸಮಷ್ಟಿಯ ಅಸ್ತಿತ್ವ ಹಾಗೂ ಮುಂದುವರಿಕೆಗೆ ಆವು ತೀರಾ ಅಗತ್ಯ. ಈ ಅಗತ್ಯಗಳಿಗೆ ತಕ್ಕಂತೆ ಮಾನವ ಸ್ವಭಾವವು ನಡತೆಯ ರೂಪದಲ್ಲಿ ಪ್ರಕಟಗೊಳ್ಳುತ್ತದೆ. ಆದರೆ ಇಲ್ಲಿ "ಸ್ವಾರ್ಥ" ಏನಿದೆ? ಅದು ಅನಿವಾರ್ಯವಲ್ಲವೆಂಬುದು ಇದರಿಂದ ಸಾಬೀತಾಗುತ್ತದೆ. ಸಹವಾಸ ಮತ್ತು ರತಿಕ್ರೀಡೆ, ಇವೆರಡೂ ಸಾಮಾಜಿಕವಾದವು. ಅದು ಏಕಪಕ್ಷೀಯವಾಗಿ ಸ್ವಾರ್ಥವೆನಿಸುವುದಿಲ್ಲ. ಆಹಾರ, ಇತ್ಯಾದಿ, "ಆಸೆ"ಗಳಲ್ಲಿ ಕೆಡುಕಿನ ಅಂಗವೇನೂ ಇಲ್ಲ. ಅವನ್ನು ಪಡೆಯುವ ವಿಧಾನದಲ್ಲಿ ಕೆಡುಕಿನ ಅಂಶ ತೂರಿಬರಬಹುದು, ಅಷ್ಟೆ. ಜನಸಾಮಾನ್ಯರ ಆಸೆಗಳೆಲ್ಲಾ ಕೆಡುಕೆನಿಸಬಹುದಾದ್ದು ಒಬ್ಬ ಕ್ರೂರ ಸರ್ವಾಧಿಕಾರಿಗೆ ಮಾತ್ರ.

ಬೇರೆಯವರನ್ನು ಹಿಂಸಿಸಬೇಕೆಂಬುದು ಅನಿವಾರ್ಯವಲ್ಲವೆಂದಾದರೆ ಅದು ಮಾನವ ಸ್ವಭಾವದ ಅವಿಭಾಜ್ಯ ಭಾಗವಲ್ಲ ಎಂದರ್ಥ. ಅಂದರೆ, ಯುದ್ಧವು ಅನಿವಾರ್ಯವಲ್ಲ. ಅದು ಕೆಲವು ಸನ್ನಿವೇಶಗಳಿಂದಾಗಿ ಮೂಡಿಬರುತ್ತದೆ. ಅಂತಹ ಸನ್ನಿವೇಶಗಳು ಮಾನವ ಸ್ವಭಾವದ ಅನಿವಾರ್ಯ ಲಕ್ಷಣಗಳಲ್ಲ. ಅವು ಇಲ್ಲದೆಯೂ ಇರುವುದು ಸಾಧ್ಯ. ಮುಂದೊಂದು ದಿನ ಮಾನವ ಸ್ವಭಾವವು ಆ ಸನ್ನಿವೇಶಗಳನ್ನು ಇಲ್ಲದಿರುವಂತೆ ಮಾಡುತ್ತದೆಂಬುದು ಖಚಿತ. ಒಂದೋ, ಮಾನವ ಯುದ್ಧವನ್ನು ಅಸಾಧ್ಯವಾಗಿಸುತ್ತಾನೆ, ಇಲ್ಲವೇ, ಯುದ್ಧವು ಮಾನವನನ್ನು ಅಸಾಧ್ಯವಾಗಿಸುತ್ತದೆ. ಹಾಗೆ ನೋಡಿದರೆ, ಮಾನವ ಸ್ವಭಾವವು ಯುದ್ಧವನ್ನು ತಿರಸ್ಕರಿಸುತ್ತದೆ. ಸಮಾಜದಲ್ಲಿ ಸಹವಾಸ ಅಥವಾ ಪ್ರೀತಿಯು ಮಾನವನಿಗೆ ನೀಡುವ ಸಂತಸವನ್ನು ಯುದ್ಧವು ನೀಡುವುದಿಲ್ಲ, ಅಲ್ಲವೇ? ಯುದ್ಧಕ್ಕೆ ವಿಶೇಷ ಪ್ರಯತ್ನ ಬೇಕು. ಒಲ್ಲದವರನ್ನು ಒಗ್ಗೂಡಿಸಿ ಸೈನ್ಯ ರಚಿಸಬೇಕು. ಸಹವಾಸಕ್ಕೆ ಅಂತಹ ಸಾಹಸಗಳೇನೂ ಬೇಕಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ, ಮಾನವ ಸ್ವಭಾವವನ್ನು ಗುರುತಿಸಲು ಮಾನವನಿಗೆ ಯಾವುದು ಸುಖವನ್ನು ಕೊಡುತ್ತದೆ ಎಂಬುದನ್ನು ತಿಳಿದರೆ ಸಾಕು. ಯುದ್ಧವು ಆ ಸುಖ ನೀಡುವುದಿಲ್ಲ.

ಇನ್ನೊಂದಂಶವಿದೆ: ಮಾನವನು ಸ್ವಾರ್ಥಿ ಎಂದು ಹೇಳಿದಾಗ, ಅದು ವಸ್ತುನಿಷ್ಠ ಹೇಳಿಕೆಯಾಗುವುದಕ್ಕಿಂತಲೂ ಹೆಚ್ಚಾಗಿ ಅವಹೇಳನದ ಮಾತಾಗುತ್ತದೆ. ಮಾನವ ಸ್ವಭಾವವು ಸ್ವಾರ್ಥದ ಮುದ್ದೆಯಾಗಿದೆಯೆಂಬುದು ನಿಜವಾದರೆ, ಅವನು ಬೆಳೆಸಿರುವ ನೈತಿಕತೆಯ ನಿಯಮಗಳು ಏಕೆ ಬೇಕಾಗಿತ್ತು? ನೈತಿಕ ಅಧಃಪತನದಿಂದ ಉತ್ತಮಿಕೆಯತ್ತ ವಿಕಾಸ ಹೊಂದಲು ಸಾಧ್ಯ, ಅದು ಮೂಲಭೂತ ಆಶಯ, ಎನ್ನುವುದು ಮಾನವನ ಎಲ್ಲ ನಾಗರಿಕತೆ ಮತ್ತು ಸಂಸ್ಕೃತಿಗಳಲ್ಲಿ ಹಾಸುಹೊಕ್ಕಾಗಿ ಸೇರಿರುವುದು ಸತ್ಯ. ಮಾನವನು ಸ್ವಭಾವತಃ ಸ್ವಾರ್ಥಿಯಾದರೆ ಸಾಮಾಜಿಕ ಅನ್ಯಾಯದ ಕಲ್ಪನೆಯಾಗಲಿ, ಅದಕ್ಕೆ ಹೊಣೆಗಾರರನ್ನು ಗುರುತಿಸುವುದಾಗಲಿ ತೀರಾ ಅಸಂಬದ್ಧ. ಎಲ್ಲ ಶೋಷಕರೂ ಸುಮ್ಮನೆ ಮಾನವ ಸಹಜವಾದ ಕ್ರಿಯೆಯಲ್ಲಿ ತೊಡಗಿದ್ದೇವೆಂದು ಹೇಳಿಬಿಟ್ಟರೆ ಆಯಿತು! ಹಿಟ್ಲರನ ಸಹವರ್ತಿ ಗೋರಿಂಗ್, ನ್ಯೂರೆಂಬರ್ಗ್ ವಿಚಾರಣೆಯ ಸಮಯದಲ್ಲಿ ಹೇಳಿದ್ದ: "ನಾನಿದ್ದ ಪರಿಸ್ಥಿತಿಯಲ್ಲಿ ಯಾರೋ ಬೇರೆಯವರು ಮಾಡಬಹುದಾಗಿದ್ದುದನ್ನಷ್ಟೇ ನಾನು ಮಾಡಿದೆ". ಹಾಗಿದ್ದರೆ ಶಿಕ್ಷೆ ಯಾರಿಗೆ ಮತ್ತು ಏಕೆ? ಎರಡನೆಯದಾಗಿ, ಅನ್ಯಾಯವನ್ನು ವಿರೋಧಿಸಲು ನೈತಿಕ ಹಕ್ಕು ಯಾರಿಗಾದರೂ ಇರಬೇಕೆಂದರೆ, "ಸ್ವಾರ್ಥ" ಎಂಬುದು

ಮಾನವ ಸ್ವಭಾವದ ಮೂಲ ಲಕ್ಷಣವಾಗಿರಕೂಡದು. ಆಗ ಸಾಮ್ರಾಜ್ಯಶಾಹಿಯಂತಹ ವಿಪತ್ಕಾರಕ ಪಾತಕವನ್ನು ವಿರೋಧಿಸಲು ಕೆಲವು ಮಾನವರಿಗೆ ಸಾಧ್ಯವಾಗುತ್ತದೆ; ಇಲ್ಲದಿದ್ದರೆ ಯಾರೂ ಪ್ರತಿರೋಧ ಒಡ್ಡಬೇಕಾಗಿಲ್ಲ, ಒಡ್ಡಕೂಡದು!

ಸಾರಾಂಶವಿಷ್ಟೆ : ಮಾನವನ ಸ್ವಾರ್ಥಕ್ಕೆ ನಿರ್ದಿಷ್ಟವಾದ ಉದ್ದೇಶವಿದೆ. ಅಷ್ಟೇ ಹೊರತು, ಅದು ಸ್ವಾಭಾವಿಕವಲ್ಲ. ತನ್ನ ದುಷ್ಟ ಕ್ರಿಯೆಗಳನ್ನು ಸಮರ್ಥಿಸಿಕೊಳ್ಳಲು ಸ್ವಾರ್ಥಿಯು, ಸ್ವಾರ್ಥವನ್ನು ಮಾನವ ಸ್ವಭಾವ ಎಂದುಬಿಡುತ್ತಾನೆ. ಸೈದ್ಧಾಂತಿವಾಗಿ ಇದು ಹುರುಳಿಲ್ಲದ ಮಾತು. ಮಾನವ ಕಡುಪಾಪಿಯಾಗಬಹುದು, ಆದರೆ ಕಡುಪಾಪದಿಂದ ಹೊರಬರಲು ಸಾಧ್ಯವಿಲ್ಲವೆಂದು ಹತಾಶನಾಗುವುದಿಲ್ಲ.

ಇನ್ನು ಮಾನವನ ತಥಾಕಥಿತ ಮೂರ್ಖ ಸ್ವಭಾವವನ್ನು ಪರಿಶೀಲಿಸೋಣ. ಮಾನವನಿಗೆ ಉತ್ತಮಿಕೆ ಬೇಕು, ಆದರೆ ಅದನ್ನು ಪಡೆಯಲು ಬೇಕಾದ ತಿಳುವಳಿಕೆಯನ್ನು ಹೊಂದಲಾರ, ಎಂಬುದು ಇಲ್ಲಿನ ತರ್ಕ. ಮಾನವ ಅಲ್ಪಸ್ವಲ್ಪ ಜ್ಞಾನ ಗಳಿಸಿದ್ದಾನೆ, ಆದರೆ ಅವನ ಸಮಸ್ಯೆಗಳ ಪರಿಹಾರಕ್ಕೆ ಇದು ಏನೇನೂ ಸಾಲದು. ಇದನ್ನು ಅನೇಕ ಸಾಹಿತಿಗಳು ಸಹ ಹೇಳಿಬಿಟ್ಟಿದ್ದಾರೆ. ಅವರ ಪ್ರಕಾರ ಒಬ್ಬ ಶ್ರೀಸಾಮಾನ್ಯನು ತಿನ್ನುತ್ತಾನೆ, ಮಕ್ಕಳನ್ನು ಪಡೆಯುತ್ತಾನೆ, ಅವರ ಆಟಪಾಟ ನೋಡಿ ರಮಿಸುತ್ತಾನೆ, ಕೆಲವೊಮ್ಮೆ ಜಗಳಕ್ಕಿಳಿಯುತ್ತಾನೆ; ಅಷ್ಟೆ, ಅಲ್ಲಿಗೆ ಅವನ ವ್ಯವಹಾರ ಮುಗಿಯಿತು. ಶ್ರೀಸಾಮಾನ್ಯರಲ್ಲದೆ ಅಸಾಮಾನ್ಯರೂ ಇವೆಲ್ಲವನ್ನೂ ಮಾಡುತ್ತಾರೆ. ಆದರೆ ಜ್ಞಾನಶಿಖರವನ್ನೇರಿರುವ ಅವರು ಕೆಳಗಿನವರನ್ನು ಮೂದಲಿಸಿ ಸುಖಪಡುತ್ತಾರೆ! ಅಂದರೆ, ಮೂರ್ಖತನವು ಶ್ರೀಸಾಮಾನ್ಯನ ಲಕ್ಷಣವೆಂದು ಅವರ ಅಂಬೋಣ. ಒಂದು ಉದಾಹರಣೆಯನ್ನು ನೋಡಿ: ನಮ್ಮ ದೇಶದಲ್ಲಿ ಈಗ ಬೆಲೆಯೇರಿಕೆ ಅಗಾಧವಾಗಿದೆ. ಅದನ್ನು ತಡೆಯುವ ಕೆಲಸ ಮಾಡಬೇಕಾಗಿದೆ. ಚಿದಂಬರಂ, ಜೇಟ್ಲಿ ಮತ್ತು ಅವರ ಬಳಗದವರು ಹೇಳುತ್ತಾರೆ, "ಇದು ಸರಳ ಸೂತ್ರಗಳಿಂದ ಆಗದ ಕೆಲಸ. ಇದಕ್ಕೆ ಮಹತ್ತರ ಹಿನ್ನೆಲೆಯಿದೆ. ಅದನ್ನೆಲ್ಲಾ ನಮ್ಮ ಕಿಂಚಿತ್ ಅನುಭವದ ಸಹಾಯದಿಂದ ಪರಿಹರಿಸಲಾಗುವುದಿಲ್ಲ. ಸಾಗರದಷ್ಟು ಅನುಭವವನ್ನು ನಮ್ಮ ಕಿಂಚಿತ್ ಜ್ಞಾನದ ಸೀಸೆಗಳಲ್ಲಿ ಹಾಕಿಡಲು ಸಾಧ್ಯವೆ? ಇದರಲ್ಲಿ ಸುದೀರ್ಘವಾದ ತರ್ಕಸರಣಿ ಇದೆ. ಅದನ್ನು ಸುಲಭವಾಗಿ ಗ್ರಹಿಸಲಾಗುವುದಿಲ್ಲ. ಸ್ಥಿರವಾಗಿ, ನೇರವಾಗಿ, ನಿಂತು ಅದನ್ನೆಲ್ಲಾ ಪರಾಮರ್ಶಿಸಬೇಕು. ಆದರೆ ಎಷ್ಟು ಕಾಲ ನೇರವಾಗಿ ನಿಲ್ಲಲು ಸಾಧ್ಯ ! ಬಹುಬೇಗ ನಾವು ಸೊರಗಿ ಕೂತುಬಿಡುತ್ತೇವೆ." ಅದು ಸರಿ ಸ್ವಾಮಿ, ಅಷ್ಟೊಂದು ಧೀರ್ಘಕಾಲ ನೇರವಾಗಿ ನಿಲ್ಲಲು ಆಗದಿದ್ದರೆ ಬೇಡ, ಸಮಸ್ಯೆ ಅರ್ಥಮಾಡಿಕೊಂಡು ಬಗೆಹರಿಸುವಷ್ಟು ಕಾಲವಾದರೂ ನೇರವಾಗಿ ನಿಲ್ಲಬಹುದಲ್ಲಾ, ಎನ್ನುತ್ತೇವೆ ನಾವು.

ಇನ್ನಷ್ಟು ಸ್ಪಷ್ಟವಾಗಿ ಹೇಳೋಣ: ಸಾಮಾಜಿಕ ಸಮಸ್ಯೆಗಳು ಹಲವಿವೆ, ನಿಜ. ಆದರೆ ಅವುಗಳನ್ನೆಲ್ಲಾ ಗ್ರಹಿಸಲು ನಾವು ಪೂರ್ತಿ ಅಸಮರ್ಥರು ಎಂದು ಹೇಳುವುದು ಬೇಡ. ಹಾಗೆ ಕೂತುಬಿಟ್ಟರೆ ಯಾವ ಆರ್ಥಿಕ ಮತ್ತು ರಾಜಕೀಯ ಕಾರ್ಯಕ್ರಮದ ಅನುಷ್ಠಾನವೂ ಸಾಧ್ಯವಾಗುವುದಿಲ್ಲ. ಯುದ್ಧದ ಸಂದರ್ಭದಲ್ಲಿ ಹಾಗೆ ವಿಹ್ವಲರಾಗಿ ಕೂರುತ್ತಾರೇನು? ಇಲ್ಲವೆಂದಾದರೆ, ಅದನ್ನು ಶಾಂತಿಯ ಸಮಯದಲ್ಲಿ ಸಮಾಜದಲ್ಲಿ ಮಾಡಬಹುದಲ್ಲ! ಪ್ರತಿಯೊಬ್ಬ ವ್ಯಕ್ತಿಯೂ ಪ್ರತ್ಯೇಕವಾಗಿ ಸಮಸ್ಯೆಗಳನ್ನೆಲ್ಲಾ

ಎದುರಿಸಬೇಕಾಗಿ ಬಂದರೆ ಚಿದಂಬರಂ ಮತ್ತು ಬಳಗ ಹೇಳುವುದು ನಿಜ: ಸಾಗರದಷ್ಟು ಅನುಭವವನ್ನು ಸೀಸೆಯೊಂದರಲ್ಲಿ ತುಂಬಲು ಆಗುವುದಿಲ್ಲ. ಪ್ರಪಂಚವನ್ನು ತಿಳಿಯುವ ಸಾಹಸವನ್ನು ಒಬ್ಬೊಬ್ಬ ವ್ಯಕ್ತಿಯಷ್ಟೇ ಮಾಡುತ್ತಿಲ್ಲ. ಸಾಗರದಷ್ಟು ಜನ ಸೇರಿ ಅದನ್ನು ತಿಳಿಯಲು ಸೆಣಸುತ್ತಿದ್ದಾರೆ. ಜ್ಞಾನ– ವಿಜ್ಞಾನಗಳು ಸಾಮಾಜಿಕ ಸಂಪತ್ತು, ಕೇವಲ ವ್ಯಕ್ತಿಗತ ಆಸ್ತಿಯಲ್ಲ. ಒಬ್ಬೊಬ್ಬರ ಆಸ್ತಿಯೂ ಸೇರುತ್ತಾ ಸೇರುತ್ತಾ ಅದು ಸಾಮಾಜಿಕ ಸಂಪತ್ತಾಗುತ್ತದೆ. ಆಗ ಗುರುತ್ವಾಕರ್ಷಣೆಯ ನಿಯಮವೋ, ಬೇಸಾಯವನ್ನು ಉತ್ತಮಪಡಿಸುವ ತಂತ್ರವೋ ಗೊತ್ತಾಗುತ್ತಾ ಹೋಗುತ್ತದೆ. ಅದು ಸಮಾಜಕ್ಕೂ ಅನ್ವಯವಾಗುತ್ತದೆ. ಕೇವಲ ಒಬ್ಬ ವ್ಯಕ್ತಿಯು ಇಡೀ ಸಮಾಜದ ಚಲನೆಯನ್ನು ಅರ್ಥೈಸಲಾರ; ಆದರೆ ಹಲವರ ಅನುಭವವು ಘನೀಭೂತವಾದಾಗ ಅರ್ಥ ತಿಳಿಯುತ್ತಾ ಹೋಗುತ್ತದೆ.

ಚಿದಂಬರಂ ಬಳಗ ಹೇಳುವುದು ನಿಜ; ಒಬ್ಬೊಬ್ಬನೇ ಎರ್‍ರಾ ಬಿರ್‍ರಿ ಹೊರಟರೆ ಸಮೂಹದ ಸಮಸ್ಯೆಯನ್ನು ಬಿಡಿಸಲಾಗುವುದಿಲ್ಲ. ಆಗ ಮಾನವ ಸಂಕುಲದ ಹಿತವು ಆಕಸ್ಮಿಕಗಳಿಂದ ನಿರ್ಧಾರವಾಗಬೇಕಾಗುತ್ತದೆ. ಆಕಸ್ಮಿಕದ ಬದಲು ಹತೋಟಿ ಬೇಕಾದರೆ ಮಾನವ ಸಂಕುಲವು ಒಟ್ಟಾಗಿ, ಸಹಕಾರದ ನೆಲೆಯಲ್ಲಿ ಮುನ್ನಡೆಯಬೇಕು. ನಮ್ಮ ದೇಶದ ಧೀಮಂತಿಕೆಯ ಬಗ್ಗೆ ಅಷ್ಟೊಂದು ಹೇಳುತ್ತೇವಲ್ಲಾ, ಹಾಗಿರುವಾಗ ಮಾನವ ಸಂಕುಲವನ್ನು ಮೂರ್ಖತನ ಆವರಿಸಿಬಿಟ್ಟಿದೆಯೆಂದು ಏಕೆ ಪ್ರಲಪಿಸಬೇಕು? ಹಿಂದೆ ರೋಗವನ್ನು ಜ್ಯೋತಿಷ್ಯದಿಂದ ನಿವಾರಿಸಲು ಯತ್ನಿಸುತ್ತಿದ್ದರು; ಈಗಲೂ ಹಾಗೆಯೇ ಮಾಡುತ್ತೇವೆಯೇ? ದೇವತೆಗಳು ಮತ್ತು ರಾಕ್ಷಸರು ಹಿನ್ನೆಲೆಗೆ ಸರಿದು ವಿಜ್ಞಾನ – ತಂತ್ರಜ್ಞಾನಗಳು ಮುನ್ನೆಲೆಗೆ ಬಂದಿವೆ. ಇದೆಲ್ಲಾ ಸಾಧ್ಯವಾದದ್ದು ಒಟ್ಟಾರೆ ಸಾಮಾಜಿಕ ಅನುಭವದಿಂದ. ಒಂದೊಂದೇ ಸಮಸ್ಯೆಯ ಬಗ್ಗೆ ಒಬ್ಬೊಬ್ಬರೂ ಹೋರಾಟ ಮಾಡುತ್ತಾ ಯಶಸ್ಸು ಪಡೆದಂತೆ ಸಾಮಾಜಿಕ ಅನುಭವ ಹೆಚ್ಚಾಯಿತು. ವಿಶ್ವದ ಬಗೆಗಿನ ಜ್ಞಾನ ವಿಕಾಸವಾಗುತ್ತಾ ಬಂದಿತು. ತನ್ನ ಭವಿಷ್ಯವನ್ನು ನಿರ್ಧರಿಸಲು ಮಾನವನ ತಿಳುವಳಿಕೆ ಬಹಳ ಕಡಿಮೆ ಮಟ್ಟದ್ದೆಂದು ಹೇಳುತ್ತಿರುವಾಗಲೇ ನಾವು ನೋಡುವುದೇನು? ಸಮಾಜವನ್ನು ಆಳುವವರು ಹಾಗೆ ಭಾವಿಸಿಕೊಂಡಿಲ್ಲ, ಎಂಬುದನ್ನು. ಅವರ ಆಳ್ವಿಕೆಯಿಂದಾಗಿ (ಅಂದರೆ ಚಿದಂಬರಂ, ಜೇಟ್ಲಿ ಅಂಥವರ ಆರ್ಥಿಕ ನೀತಿಗಳಿಂದಾಗಿ) ಏನಾದರೂ ಸಾಮಾಜಿಕ ಆಘಾತವಾದರೆ, ಆಗ ಹೇಳಿಬಿಡುತ್ತಾರೆ, ಮಾನವನ 'ಸ್ವಾರ್ಥ'ದ ಬಗ್ಗೆ ಹೇಳುತ್ತಾರಲ್ಲಾ ಹಾಗೆ. ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಇದೊಂದು ಪ್ರಭಾವಶಾಲಿ ಅಸ್ತ್ರವಾಗಿದೆ!

ಇನ್ನುಳಿದ ಪ್ರಶ್ನೆ ಮಾನವನ ಸ್ವಭಾವವನ್ನು ಬದಲಾಯಿಸುವುದಕ್ಕೆ ಸಂಬಂಧಿಸಿದ್ದು. ಹಾಗೆಲ್ಲ ಬದಲಾಯಿಸಲು ಸಾಧ್ಯವಿಲ್ಲವೆಂದು ಹೇಳುವುದು ಸಹ ಬೇರೊಂದು ವಿಶಾಲವಾದ ಉದ್ದೇಶವನ್ನು ಹೊಂದಿದೆ. ಪ್ರಸ್ತುತದ ಸಾಮಾಜಿಕ ವ್ಯವಸ್ಥೆಯನ್ನು ಹಾಗೆಯೇ ಉಳಿಸಿಕೊಳ್ಳುವ ಉದ್ದೇಶ ಅದು. ಈಗ ಬಹುವಾಗಿ ಪ್ರಚಲಿತವಾಗಿರುವುದು ಬಂಡವಾಳಶಾಹಿ ವ್ಯವಸ್ಥೆ. ಮಾನವನ ಸ್ವಭಾವವು ಬಂಡವಾಳಶಾಹಿಯನ್ನು ಪೋಷಿಸುವಂಥದು ಎಂದು ತೋರಿಸಿಕೊಡಲು ಈ ಎಲ್ಲ ವಾದಗಳು ಹುಟ್ಟಿಕೊಂಡಿವೆ. ಭೂಮಿ ಮತ್ತು ಬೇರೆ ಉತ್ಪಾದನಾ ಸಾಧನಗಳನ್ನು ಕೆಲವು ವ್ಯಕ್ತಿಗಳು ತಮ್ಮ

ಹತೋಟಿಯಲ್ಲಿಟ್ಟುಕೊಂಡಿರುವುದು ಬಂಡವಾಳಶಾಹಿಯ ಸ್ವರೂಪ. ಲಾಭಕ್ಕಾಗಿ ಈ ಹತೋಟಿ. ಇದಕ್ಕೆ ಪರ್ಯಾಯವಾದ ವ್ಯವಸ್ಥೆಯಲ್ಲಿ ಭೂಮಿ ಮತ್ತು ಇತರೆ ಉತ್ಪಾದನಾ ಸಾಧನಗಳು ಸಮಾಜದ ಹತೋಟಿಯಲ್ಲಿರುತ್ತವೆ. ಮತ್ತು ಅದರ ಉದ್ದೇಶ ಲಾಭ ಮಾಡಿಕೊಳ್ಳುವುದಲ್ಲ. ಬದಲಾಗಿ, ಅದು ಬಳಕೆಗೆ ಬೇಕಾದ ವಸ್ತುಗಳ ಉತ್ಪಾದನೆಯ ಸರಳ ಉದ್ದೇಶ ಹೊಂದಿರುತ್ತದೆ. ಮಾನವನ ಸ್ವಭಾವದ ಮಾತನ್ನಾಡುವಾಗ ಸಮಾಜವಾದಿ ವ್ಯವಸ್ಥೆಯು ಸಾಧ್ಯವಿಲ್ಲವೆಂದು ಹೇಳುವ ಉದ್ದೇಶವಿರುತ್ತದೆ. ವೈಯಕ್ತಿಕ ಹಾಗೂ ಖಾಸಗಿ ಮಾಲಿಕತ್ವವಿರುವಾಗ ಉತ್ಪಾದನೆಯು ಅಮೋಘವಾಗಿರುತ್ತದೆಂಬ ಐತಿಹ್ಯವನ್ನು ಪದೇಪದೇ ಸಾರುವುದನ್ನು ನಾವು ಕೇಳುತ್ತಿರುತ್ತೇವೆ. ಮಾನವನು ದುಡಿಯಲು ಎರಡು ಮೂಲ ಪ್ರೇರಣೆಗಳು ಇರುತ್ತವೆಂದು ಇವರು ಹೇಳುತ್ತಾರೆ. ಒಂದು, ಶಿಕ್ಷೆ ಅನುಭವಿಸಬೇಕಾಗುವ ಭಯ; ಇನ್ನೊಂದು, ಪ್ರತಿಫಲ ದೊರೆಯುತ್ತದೆಂಬ ನಿರೀಕ್ಷೆ. ಗುಲಾಮ ಮತ್ತು ಊಳಿಗದವರು ದುಡಿಯುವುದು ಶಿಕ್ಷೆಯ ಭಯವಿರುವುದರಿಂದ; ಸ್ವತಂತ್ರವಾದ ವ್ಯಕ್ತಿ ದುಡಿಯುವುದು ಪ್ರತಿಫಲಾಪೇಕ್ಷೆಯಿಂದ. ಹೀಗೆ ದುಡಿಯಲು ಇರುವ ಪ್ರೇರಣೆಯನ್ನು ಕಡಿದುಹಾಕಿದರೆ ಉತ್ಪಾದನೆಯು ಕುಸಿಯುತ್ತದೆ. ಆದ್ದರಿಂದ ಬಂಡವಾಳಶಾಹಿಯನ್ನು ಬಲಗೊಳಿಸಬೇಕು, ಸಮರ್ಥಿಸಬೇಕು; ಫಲಾಪೇಕ್ಷೆಯಿಂದ ಸ್ವತಂತ್ರವಾಗಿ ದುಡಿಯುವ ಬದಲು ಪ್ರಭುತ್ವದ ಅಡಿಯಾಳುಗಳಾಗಿಬಿಡುವುದು ಸಮಾಜವಾದಿ ವ್ಯವಸ್ಥೆಯು ಒಡ್ಡುವ ಅಪಾಯ; ಬೇರೆ ರೀತಿಯಲ್ಲಿ ಹೇಳುವುದಾದರೆ, ಸಮಾಜವಾದಿ ವ್ಯವಸ್ಥೆಯು ಮಾನವ ಸ್ವಭಾವಕ್ಕೆ ವಿರುದ್ಧವಾದುದು.

– ಈ ವಾದಕ್ಕೆ ಪ್ರತಿಯಾಗಿ ಒಂದು ಪ್ರಶ್ನೆ ಹಾಕಿದರೆ ಸಾಕು: ಹಿಟ್ಲರನ ಫ್ಯಾಸಿಸ್ಟ್ ಪ್ರಭುತ್ವವು ಬಂಡವಾಳಶಾಹಿ ವ್ಯವಸ್ಥೆಯ ಒಂದು ಸ್ವರೂಪವಾಗಿದ್ದಿತು. ಅಲ್ಲಿ ಯಾವ ಸ್ವತಂತ್ರ ಪ್ರೇರಣೆಯಿಂದ ಜನ ದುಡಿಯುತ್ತಿದ್ದರು ಮತ್ತು ಯಾವ ಫಲಾಪೇಕ್ಷೆ ಇರುತ್ತಿತ್ತು?

ಹೋಗಲಿ, ಇನ್ನೊಂದು ರೀತಿ ವಿಚಾರ ಮಾಡೋಣ: ಸಮಾಜವಾದಿ ವ್ಯವಸ್ಥೆಯು ಮಾನವ ಸ್ವಭಾವಕ್ಕೆ ವಿರುದ್ಧವಾದ್ದರಿಂದ ಅದು ತಾನಾಗಿಯೇ ನಶಿಸಿಹೋಗಬೇಕಲ್ಲವೆ? ಅದನ್ನು ನಾಶಮಾಡಲು ಬಂಡವಳಿಗ ವರ್ಗವೇಕೆ ಅಷ್ಟೊಂದು ಶ್ರಮ ವಹಿಸಬೇಕು? ಉದಾಹರಣೆಗೆ, ಕ್ಯೂಬ ದೇಶದ ಪ್ರಭುತ್ವವನ್ನು ಬಗ್ಗುಬಡಿಯಲು ಅಮೆರಿಕಾ ಹರಸಾಹಸ ಮಾಡದೆ ಸುಮ್ಮನಿರಬಹುದಲ್ಲ; ಏಕೆಂದರೆ, ತಾನಾಗಿಯೇ ಅದು ಸೋತು ಬೀಳುತ್ತದೆಯಲ್ಲ! ಏಕೆ ಸೋಲುತ್ತದೆ? – ಸಮಾಜವಾದಿ ವ್ಯವಸ್ಥೆಯಿಂದಾಗಿ. ಬಂಡವಾಳಶಾಹಿಯು ಇದನ್ನು ನಂಬುವುದಿಲ್ಲ. ನಂಬಿದ್ದರೆ ಹೀಗೆ ಕ್ಯೂಬಾದಂತಹ ದೇಶದ ಮೇಲೆ ಹಗೆತನ ಸಾಧಿಸಿ ಆಕ್ರಮಣ ನಡೆಸಬೇಕಾಗಿರಲಿಲ್ಲ. (ಅದೇ ಮಾತು ವೆನಿಝುವೇಲ, ಬೊಲಿವಿಯ, ಮುಂತಾದ ದೇಶಗಳಿಗೂ ಅನ್ವಯವಾಗುತ್ತದೆ). ಇದರಿಂದ ಏನು ತಿಳಿಯುತ್ತದೆ? – ಮಾನವ ಸ್ವಭಾವವೆಂದು ಯಾವುದನ್ನು ಪ್ರಚಾರ ಮಾಡಲಾಗುತ್ತದೆಯೋ ಅದರಲ್ಲಿ ಹುರುಳಿಲ್ಲವೆಂದು ಸ್ವತಃ ಬಂಡವಾಳಶಾಹಿಗೆ ತಿಳಿದಿದೆಯೆಂಬುದು ಸ್ಪಷ್ಟವಾಗುತ್ತದೆ. ಇಲ್ಲದಿದ್ದರೆ ವಿಯೆಟ್ನಾಂ, ಚಿಲಿ, ಗ್ರೆನಡಾ, ಮುಂತಾದ ದೇಶಗಳ ಮೇಲೆ ಸೈನ್ಯವನ್ನು ಹರಿಬಿಡಬೇಕಾಗಿರಲಿಲ್ಲ.

ಇದರಿಂದ ನಾವು ತಿಳಿಯಬೇಕಾದದ್ದು ಇದು: ಒಂದೇ ಒಂದು ಸಾಮಾಜಿಕ ವ್ಯವಸ್ಥೆಯನ್ನು ಆಧರಿಸಿ ಮಾನವ ಸ್ವಭಾವವೆಂದು ಕೆಲವು ನಿರ್ದಿಷ್ಟ ನಡತೆಗಳನ್ನು

ಸಾಮಾನ್ಯೀಕರಿಸಿ ಹೇಳುವುದು ಸರಿಯಲ್ಲ. ಇದಕ್ಕೆ ಇತಿಹಾಸದ ಪುರಾವೆಗಳಿವೆ: ಋಗ್ವೇದದ ಕಾಲದಲ್ಲಿ ಗಣಗಳಾಗಿ ಸಾಮೂಹಿಕ ಜೀವನ ನಡೆಸುವುದು ಮಾನವ ಸ್ವಭಾವವಾಗಿತ್ತು; ಬುದ್ಧಪೂರ್ವ ಯುಗದಲ್ಲಿ ಜಡ್ಡು ವರ್ಣವ್ಯವಸ್ಥೆಯನ್ನು ಅಂಗೀಕರಿಸುವುದು ಮಾನವ ಸ್ವಭಾವವಾಗಿತ್ತು; ಊಳಿಗದವರಾಗಿ ಯಜಮಾನರ ಅಧೀನದಲ್ಲಿರುವುದು ಇನ್ನೊಂದು ಯುಗದಲ್ಲಿ ಮಾನವ ಸ್ವಭಾವವಾಯಿತು. ಮಹಿಳೆಯು ಸದಾ ಪುರುಷನ ಅಧೀನದಲ್ಲಿರಬೇಕೆಂದು ಸಾರುವ "ಮಾನವ ಸ್ವಭಾವ"ವು ಮಹಿಳೆಯ ಬಿಡುಗಡೆಯಾದಾಗ ಏನಾಗುತ್ತದೆ? ಹೀಗೆ ಪಟ್ಟಿಯನ್ನು ಮುಂದುವರಿಸಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಯಾವುದನ್ನು ಮಾನವ ಸ್ವಭಾವವೆಂದು ಗುರುತಿಸಲಾಗುತ್ತದೋ ಅದು ಶಾಶ್ವತವಲ್ಲ. ಆ ವ್ಯವಸ್ಥೆಯನ್ನು ಸಮರ್ಥಿಸಲು ಅದನ್ನೇ ನಿರಂತರವಾದ ಸ್ವಭಾವವೆಂದು ಚಿತ್ರಿಸಲಾಗುತ್ತದೆ, ಅಷ್ಟೆ.

ಸಮಕಾಲೀನ ಸಮಾಜದಲ್ಲಿ ಕೂಡ ಬೇರೆಬೇರೆ ವ್ಯವಸ್ಥೆಗಳಡಿ ವಿಭಿನ್ನವಾದ "ಮಾನವ ಸ್ವಭಾವ" ಇರುವುದನ್ನು ಕಾಣಬಹುದು. ಮಾನವನಿಗೆ ಪ್ರೇರಣೆಗಳು ಬೇಕಾಗಿರಬಹುದು, ಆದರೆ ಲಾಭದ ಆಕಾಂಕ್ಷೆಯೊಂದೇ ಅಂತಹ ಪ್ರೇರಣೆಯಲ್ಲ. ವಿಶ್ವದ ಇಂದಿನ ಎಲ್ಲ ಜನರನ್ನೂ ನೋಡಿದರೆ ಅವರಿಗೆಲ್ಲಾ ಲಾಭಾಕಾಂಕ್ಷೆಯು ಪ್ರೇರಣೆಯಾಗಿರುವಂತೆ ತೋರುವುದಿಲ್ಲ, ಅಲ್ಲವೇ? "ಮಾನವ ಸ್ವಭಾವ"ಕ್ಕೂ ನಿರ್ದಿಷ್ಟ ಸಾಮಾಜಿಕ ವ್ಯವಸ್ಥೆಗೂ ಅವಿನಾಭಾವ ಸಂಬಂಧವಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಒಂದಂತೂ ನಿಜ : ಮಾನವ ಸ್ವಭಾವವು ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸುವುದರತ್ತ ವಾಲುತ್ತದೆ. ಈ ಬದಲಾವಣೆಗಾಗಿ ಏಕೆ ಆಸಕ್ತಿ ಹುಟ್ಟುತ್ತದೆ? ಏಕೆಂದರೆ, ಮಾನವನ ಸಾರ್ವತ್ರಿಕ ಮೂಲಭೂತ ಅವಶ್ಯಕತೆಗಳು ಸದಾ ಒಂದೇ ಆಗಿವೆ. ಯಾವುದೇ ಸಾಮಾಜಿಕ ವ್ಯವಸ್ಥೆಯಲ್ಲಿ ಆ ಅವಶ್ಯಕತೆಗಳ ಪೂರೈಕೆಯಾಗದಿದ್ದಲ್ಲಿ ಅದನ್ನು ಬದಲಾಯಿಸುವುದು ಮಾನವನ ಸ್ವಭಾವ! ಹಾಗೆ ವ್ಯವಸ್ಥೆಯನ್ನು ಬದಲಾಯಿಸುತ್ತಾ ಮಾನವನು ಸಹ ಸ್ವತಃ ಬದಲಾಗುತ್ತಿರುತ್ತಾನೆ. ಗುಲಾಮನ ಪ್ರಜ್ಞೆಗೂ ಕಾರ್ಖಾನೆಯಲ್ಲಿ ದುಡಿಯುವ ಕಾರ್ಮಿಕನ ಪ್ರಜ್ಞೆಗೂ ವ್ಯತ್ಯಾಸವಿರುತ್ತದಲ್ಲಾ, ಹಾಗೆ.

ಸಾಮಾಜಿಕ ವ್ಯಕ್ತಿಯ ಮೂಲತತ್ತ್ವವು ಬದಲಾವಣೆ. ಮಾನವನ ಆಯಸ್ಸು ಕೇವಲ 20 ಅಥವಾ 100 ವರ್ಷಗಳಲ್ಲ; ಅವನ ಆಯಷ್ಯದ ವ್ಯಾಪ್ತಿ ಐದು ಲಕ್ಷ ವರ್ಷಗಳಷ್ಟು ಅಗಾಧವಾದುದು. ಅಷ್ಟು ವರ್ಷಗಳಲ್ಲಿ ಅವನ ಸ್ವಭಾವವು ಎಷ್ಟು ಬದಲಾಗಿದೆ ಮತ್ತು ಹೇಗೆ ಬದಲಾಗುತ್ತಲೇ ಇದೆ ಎಂಬುದನ್ನು ಗಮನಿಸಿದವರು ಮಾನವ ಸ್ವಭಾವವನ್ನು ಹ್ರಸ್ವಗೊಳಿಸಿ ಸಾಮಾನ್ಯೀಕರಿಸುವುದಿಲ್ಲ. ಆಫ್ರಿಕಾ ದೇಶದ ಜನರ ಐವತ್ತು ವರ್ಷಗಳ ಹಿಂದಿನ "ಸ್ವಭಾವ" ಹುಡುಕಿದರೂ ಇಂದು ಸಿಕ್ಕುವುದಿಲ್ಲವಲ್ಲ, ಏಕೆ? ಅದು ನಾಗರಿಕತೆಯ ಬೆಳವಣಿಗೆಯ ಲಕ್ಷಣ, ಸಂಸ್ಕೃತಿಯ ವಿಕಾಸದ ಲಕ್ಷಣ. ಇಷ್ಟೆಲ್ಲಾ ಇತಿಹಾಸದಲ್ಲಿ ಘಟಿಸಿರುವಾಗ, ಈಗ; ಅಂದರೆ 21ನೆಯ ಶತಮಾನದಲ್ಲಿ, ಇತಿಹಾಸವು ಸಂಪೂರ್ಣವಾಗಿ ಸ್ತಬ್ಧವಾಗಿಹೋಗಿದೆ ಎಂದು ಭಾವಿಸುವುದು ಯೋಗ್ಯವೆ, ತಾರ್ಕಿಕವೆ? ಚರಿತ್ರೆಯಲ್ಲಿ ಕೆಲವೇಳೆ ಬದಲಾವಣೆ ನಿಧಾನವಾಗಿ ನಡೆದಿದೆ, ಇನ್ನು ಕೆಲವೇಳೆ ಕ್ಷಿಪ್ರವಾಗಿ ನಡೆದಿದೆ; ಆದರೆ ದಿಕ್ಕು ಮಾತ್ರ ಒಂದೇ: ಅಮಾಯಕ ಮಾನವನು ಹೊಸ ಹೊಸ ಆವಿಷ್ಕಾರಗಳನ್ನು ಮಾಡುತ್ತಾ ಹೋಗುತ್ತಾನೆ, ತನ್ನ ಪರಿಸರ-ಸಮಾಜಗಳನ್ನು

ಬದಲಾಯಿಸುತ್ತಾನೆ, ಅದರೊಟ್ಟಿಗೆ ತಾನೂ ಬದಲಾಗುತ್ತಾನೆ. ಸಮಾಜದಲ್ಲಿ ಸಹಕಾರಿ ಜೀವನವು ಹೆಚ್ಚು ಫಲಪ್ರದವೆಂದು ಕಂಡುಬಂದರೆ, ಮತ್ತೆ ಅವನು ಕಾಡುಮನುಷ್ಯನಂತೆ ಜೀವಿಸಲು ಹಾತೊರೆಯುವುದಿಲ್ಲ. ಸ್ಪರ್ಧೆಗಿಂತಲೂ ಸಹಕಾರವು ಶ್ರೇಷ್ಠವೆಂದು ತಿಳಿದು ಅದರಂತೆ ಬಾಳುವೆ ನಡೆಸುತ್ತಾನೆ. ಈ ಬದಲಾವಣೆಗಳೆಲ್ಲಾ ಯಾವುದೋ ಅಮೂರ್ತ ಆದರ್ಶಗಳ ಪ್ಲೂಸೆಯಲ್ಲಿ ಹೊಮ್ಮುವುದಿಲ್ಲ. ಅದು ಉಂಟಾಗುವುದು ಮಾನವನ ಹಾಗೂ ಸಮಾಜದ ವಾಸ್ತವಿಕ ಅಗತ್ಯಗಳ ಪೂರೈಕೆಯ ಸಂದರ್ಭದಲ್ಲಿ.

ಮಾನವ ಬದಲಾಗದೆ ಇರುವಂತೆಯೇ ಸ್ಥಿರವಾಗಿ ಉಳಿಯುತ್ತಾನೆಂದು ಪಣ ಕಟ್ಟುವವರು ಯಾರಾದರೂ ಇದ್ದರೆ ಅವರು ಸೋಲುವುದು ಖಚಿತ. ಕಡೆಗೆ ಒಂದು ಮಾತು: ಮಾನವ ಸ್ವಭಾವವನ್ನು ನೀವು ಬದಲಾಯಿಸಲು ಆಗುವುದಿಲ್ಲವೆಂಬುದು ಕೆಡುಕಲ್ಲ; ಆದರೆ ಮಾನವ ಸ್ವಭಾವವು ನಿಮ್ಮನ್ನು ಬದಲಾಯಿಸಲು ಅಸಮರ್ಥವಾದರೆ ಅದು ಕೆಡುಕು.

❑❑

3. ಶ್ರೀಮಂತನು ಸಮರ್ಥ, ಬಡವನು ಅದಕ್ಷ, ಎಂಬ ಮಿಥ್ಯೆ

1848 ಯೂರೋಪಿನಲ್ಲಿ ಮಹತ್ವದ ವರ್ಷ. ಅದರ ನಂತರದ ಎರಡು ವರ್ಷಗಳಲ್ಲಿ ಯೂರೋಪಿನ ಆಳುವ ವರ್ಗವು ಅಸ್ತವ್ಯಸ್ತಗೊಂಡಿತ್ತು. ಒಂದಷ್ಟು ರಾಜರು ಸಿಂಹಾಸನ ಕಳೆದುಕೊಂಡರು ಮತ್ತು ಬೀದಿಗಿಳಿದಿದ್ದ ಜನರ ಸಿಂಹನಾದವು ಆಳುವವರನ್ನು ಕಂಗೆಡಿಸಿತ್ತು. ಫೆಬ್ರವರಿಯಲ್ಲಿ ಲೂಯಿ ಫಿಲಿಪ್ ಪ್ಯಾರಿಸ್ಸಿನಲ್ಲಿ ಬಿದ್ದ, ಮಾರ್ಚ್‌ನಲ್ಲಿ ವಿಯೆನ್ನಾದಿಂದ ಮೆಟ್ಟೆರ್ನಿಖ್ ಕಾಲ್ಕಿತ್ತ; ಮಿಲಾನ್‌ನಲ್ಲಿ ಆಸ್ಟ್ರಿಯ ವಿರುದ್ಧ ದಂಗೆ, ಬರ್ಲಿನ್ನಿನ ರಸ್ತೆಗಳಲ್ಲಿ ಕಾದಾಟ, ಬವೇರಿಯದಲ್ಲಿ ರಾಜನ ಪದತ್ಯಾಗ, ಮುಂತಾದುವೆಲ್ಲಾ 1850ರ ಘಟನೆಗಳು. ಬ್ರಿಟನ್ನಿನ ಶ್ರೀಮಂತರಿಗೆ ಅಚ್ಚರಿ, ಆಮೇಲೆ ಭೀತಿ, ಏಕೆಂದರೆ ಅಲ್ಲಿಯೂ ಚಾರ್ಟಿಸ್ಟರ ಬಲ ಬೆಳೆಯುತ್ತಿತ್ತು.

1849ರ ಜನವರಿ 2 ರಂದು ಚಾರ್ಲ್ಸ್ ಗ್ರೆವಿಲ್ ತನ್ನ ದಿನಚರಿಯಲ್ಲಿ ಸಮಾಧಾನದ ನಿಟ್ಟುಸಿರನ್ನು ದಾಖಲಿಸಿದ್ದ. ಆದರೆ ಸಮಾಧಾನ ಬಹುಕಾಲ ಉಳಿಯಲಿಲ್ಲ. ನಂತರದ ದಿನಗಳಲ್ಲಿ ಅವನು ಬರೆದದ್ದು ಇದು : "ಇಡೀ ಸಮಾಜದಲ್ಲಿ ತುಮುಲ ಉಂಟಾಗಿದೆ. ಇದನ್ನಾರೂ ನಿರೀಕ್ಷಿಸಿರಲಿಲ್ಲ. ಅದಾವ ದೈತ್ಯ ಶಕ್ತಿಯೋ ಕಾಣೆ, ಎಲ್ಲೆಲ್ಲೂ ಹರಡಿ ನಿಂತಿದೆ. ಅಜ್ಞಾನ, ಅಹಂಕಾರ, ದಿಟ್ಟತನ, ಬಡತನ, ಆಸೆ, ಮುಂತಾದ ಭಾವನೆಗಳೆಲ್ಲಾ ಹದ್ದುಮೀರಿ ಅಭಿವ್ಯಕ್ತವಾಗುತ್ತಿವೆ. ಪ್ರಪಂಚವನ್ನು ತಲೆಕೆಳಗುಮಾಡಿಬಿಡುತ್ತವೇನೋ ಎನಿಸುತ್ತಿದೆ. ಪ್ರಜಾಪ್ರಭುತ್ವ ಮತ್ತು ದಾನ – ಧರ್ಮ ಯಾವಾಗಲೂ ಒಂದು ರೀತಿಯ ಅಡಚಣೆಗಳನ್ನೆದುರಿಸುತ್ತಲೇ ಬಂದಿವೆ. ಅದಕ್ಕೆ ಸುಲಭ ಹಾದಿ ಎಂದೂ ಇರಲಿಲ್ಲ. ಈಗಲಾದರೋ ಅವುಗಳ ಪರಿಣಾಮವು ವ್ಯಾಪಕವಾಗಿ ಕಾಣುತ್ತಿದೆ : ಧ್ವಂಸ, ಭೀತಿ ಮತ್ತು ನಿರಾಶೆ. ಹಿಂದಿನ ಆಟಗಳೆಲ್ಲಾ ಮುಗಿದುಹೋದವು ಎನಿಸುತ್ತದೆ."

ಈ ಗ್ರೆವಿಲ್ ಖ್ಯಾತ ವಾರಪತ್ರಿಕೆ 'ಪಂಚ್' ಜೊತೆಗಿದ್ದವನು, ವಾರಿಕ್‌ನ ಐದನೆಯ ಅರ್ಲ್‌ನ ಮರಿಮಗ. ಸುಖಭೋಗದ ಜೀವನ ಹಠಾತ್ತನೆ ಕಡಿದುಬಿದ್ದಿದ್ದುದನ್ನು ಆತ ಕಂಡ. ಜರ್ಮನಿಯಿಂದ ಹೊರದೂಡಲ್ಪಟ್ಟಿದ್ದು, ಆಗ್ಗೆ ಲಂಡನ್ನಿನಲ್ಲಿ ವಾಸವಾಗಿದ್ದ ಒಬ್ಬ ವ್ಯಕ್ತಿಯ ಮಾತುಗಳನ್ನೀತ ಓದಿರಲಿಲ್ಲ. ಆ ವ್ಯಕ್ತಿ ಕಾರ್ಲ್ ಮಾರ್ಕ್ಸ್ ಮತ್ತು ಅವನ ಮಾತು 'ಕಮ್ಯುನಿಸ್ಟ್ ಘೋಷಣಾಪತ್ರ'. ಆತ ಹೇಳಿದ್ದ, "ಒಂದು ಭೂತವು ಯೂರೋಪನ್ನು ತತ್ತರಿಸುವಂತೆ ಮಾಡಿದೆ (ಅದೇ ಕಮ್ಯುನಿಸ್ಟ್ ಸಿದ್ಧಾಂತ)" ಎಂದು. ಮುಂದುವರಿದು ಶೋಷಿತ ಜನರಿಗೆ ಆತ ಹೇಳಿದ್ದ : "ಎದ್ದೇಳಿ, ನೀವು ಕಳೆದುಕೊಳ್ಳುವಂಥದೇನೂ ಇಲ್ಲ, ಕೇವಲ ನಿಮ್ಮ ಕೈಕೋಳಗಳನ್ನು ಬಿಟ್ಟು," ಎಂದು.

1848ರ ಬಿರುಗಾಳಿ ನಿಂತಾಗ ಹಳೆಯ ರಾಜರು ತಮ್ಮ ಸುಕ್ಕುಗಟ್ಟಿದ್ದ ದಿರಿಸನ್ನು ತೀಡಿ ಸರಿಮಾಡಿಕೊಂಡರು ಮತ್ತು ಹೊಸ ಯಜಮಾನರು ಠೀವಿಯಿಂದ ಬೀಗಲು ಸಿದ್ಧರಾಗಿದ್ದರು. ಉಳ್ಳವರ ವರ್ಗವು ತನ್ನ ಸಿದ್ಧಾಂತವನ್ನು ಗಟ್ಟಿಗೊಳಿಸುವುದರತ್ತ ಮಗ್ನವಾಯಿತು. ಅದು ಅವಶ್ಯಕವೂ ಆಗಿತ್ತು. ಏಕೆಂದರೆ ಭಾವನೆಗಳು ಒಂದು ರೀತಿ ಯಂತ್ರಗಳಿದ್ದಂತೆ; ಅವು ಸವೆದುಹೋಗುತ್ತವೆ. ಆದ್ದರಿಂದ ಹೊಸದನ್ನು ಅರಸಬೇಕು. ಆಧುನಿಕ ಕೃಷಿ ಕ್ಷೇತ್ರವನ್ನು ಯಾರಾದರೂ ಗುದ್ದಲಿಯಿಂದ ಉಳುತ್ತಾರೆಯೆ ? ಅಂತೆಯೇ, ಆಧುನಿಕ ಸರ್ಕಾರಕ್ಕೆ ಹಳೆಯ ಊಳಿಗಮಾನ್ಯ ಪ್ರಭುತ್ವದ ಪದ್ಧತಿಗಳು ಸರಿಹೊಂದುವಂತಿರಲಿಲ್ಲ. ನೀವೇ ಪ್ರಯೋಗ ಮಾಡಿ ನೋಡಿ: ಪೃಥ್ವಿಯ ಒಡೆಯನು ವಿಷ್ಣುವಿನ ಅಂಶವನ್ನು ಹೊಂದಿರುತ್ತಾನೆಂಬ ಮಾತನ್ನು ಎಷ್ಟು ಮಂದಿ ಮಾನ್ಯ ಮಾಡಿಯಾರು ?

ಯಾವುದೇ ಕಾಲದಲ್ಲೇ ಆಗಲಿ, ಆಳುವ ಬಣಕ್ಕೆ ಕೆಲವು ಭಾವನೆಗಳ ಬೆಂಬಲ ಬೇಕು; ಆದರೆ, ಅವು ಆಯಾ ಕಾಲದ ಬೌದ್ಧಿಕ ವಾತಾವರಣಕ್ಕೆ ಹೊಂದಿಕೊಳ್ಳುವಂಥವೇ ಆಗಿರಬೇಕು ಕೂಡ. ವಾತಾವರಣವು ಸದಾ ತಿಳಿಯಾಗಿರುವುದಿಲ್ಲ; ಏಕಪ್ರಕಾರವಾಗಿರುವುದಿಲ್ಲ. ಅಲ್ಲಿ ಬಿಸಿಲಿದೆ, ಜಿಟಿಜಿಟಿ ಮಳೆ ಇದೆ, ಶಾಂತತೆ ಇದೆ, ಬಿರುಗಾಳಿ ಇದೆ, ಧಬಧಬ ಸುರಿಯುವ ಮಳೆ ಇದೆ, ಚಳಿಯೂ ಇದೆ. ಆದ್ದರಿಂದ ಆಳುವವರು ವಾಯುಗುಣ ತಜ್ಞರನ್ನು ಹೊಂದಿಸಿಕೊಳ್ಳಬೇಕು. ಅವರು ಬೇರೆಬೇರೆ ವಾಯುಗುಣಗಳ ಲಕ್ಷಣಗಳನ್ನು ಹೇಳಬಲ್ಲರು ಮತ್ತು ಸದ್ಯದ ವಾತಾವರಣವು ಇದ್ದಿದ್ದರಲ್ಲಿ ಉತ್ತಮವಾದುದೆಂದು ನಿಮ್ಮನ್ನು ನಂಬಿಸಬಲ್ಲರು.

ಮಧ್ಯಯುಗದಲ್ಲಿ ಈ ಧಂಧೆ ಬಹಳ ಲಾಭದಾಯಕವಾಗಿಯೇ ನಡೆಯುತ್ತಿತ್ತು; ಏಕೆಂದರೆ, ಆಗ ವಿಸ್ಮಯಗಳು ಹೆಚ್ಚು ಮತ್ತು ಜ್ಞಾನ ಕಡಿಮೆ ಇರುತ್ತಿದ್ದುವು. ಕ್ರಮೇಣ ವಿಜ್ಞಾನದ ಬೆಳೆವಣಿಗೆಯಾಯಿತು. ಅದರಿಂದಾಗಿ ಜ್ಞಾನ ಹೆಚ್ಚಿ ವಿಸ್ಮಯ ಸ್ವಲ್ಪ ಕಡಿಮೆಗೊಂಡಿತು. ಆಧುನಿಕ ಸಿದ್ಧಾಂತಿಗಳಿಗೆ ಇದೊಂದು ಮುಗ್ಗಟ್ಟಿನ ಕಾಲವಾಗಿ ಹೋದದ್ದು ಇದರಿಂದ. ನಿಮಗೇನೋ ನಿಗದಿತವಾದ ಕೆಲವು ತೀರ್ಮಾನಗಳು ಬೇಕಾಗಿವೆಯೆನ್ನಿ. ಅವನ್ನು ಯಾವ ಸಂದರ್ಭದಲ್ಲಿ ಸುಲಭವಾಗಿ ಪಡೆಯಲು ಸಾಧ್ಯ ? ಸನ್ನಿವೇಶದ ಸಹಜ ಸ್ವಾಭಾವಿಕತೆಯ ತಿಳಿವಳಿಕೆಯಲ್ಲೋ ಅಥವಾ ಕಲ್ಪಿತ ಊಹಾ ಪ್ರಪಂಚದ ಮೂಸೆಯಲ್ಲೋ ? ಆದರೆ ವಿಜ್ಞಾನವು ಸಹ ಕಲ್ಪನೆಗಳ ಸಾಮ್ರಾಜ್ಯವನ್ನು ಕಟ್ಟಲು ಆಯುಧವಾಗಬಹುದಲ್ಲವೆ ? ಉದಾಹರಣೆಗೆ, ಜೀವ ವಿಕಾಸ ವಾದವನ್ನು ನೋಡಿ : ಅದು 19ನೆಯ ಶತಮಾನದ ಅದ್ಭುತವಾದ ತಿಳಿವು; ಅದನ್ನೂ ಅಧಿಕಾರದ ಚಲಾವಣೆಗೆ ತಕ್ಕುದಾಗುವಂತಹ ಆಯುಧವನ್ನಾಗಿ ಮಾರ್ಪಡಿಸಿಕೊಂಡುಬಿಟ್ಟರು ! ಒಂದು ಕಾಲಕ್ಕೆ ಜನತೆಯ ಯಜಮಾನರು ದೇವತೆಗಳಿಂದ ತಮ್ಮ ಅಧಿಕಾರಕ್ಕೆ ಮುದ್ರೆ ಹಾಕಿಸಿಕೊಂಡಿದ್ದರು; ಈಗ ಮುದ್ರಾಂಕಿತವು ಮರ್ಕಟದಿಂದ ಬಂದರೂ ಅದೇ ಸಾಕಾಗುವಂತಿತ್ತು.

ಇದನ್ನೆಲ್ಲಾ ಪ್ರಸ್ತಾಪಿಸಿದ್ದಕ್ಕೆ ಉದ್ದೇಶವಿದೆ : 1850ರಲ್ಲಿ ಲಂಡನ್ನಿನಲ್ಲಿ ಒಂದು ಪುಸ್ತಕ ಪ್ರಕಟಗೊಂಡಿತು. ಅದೊಂದು ವೈಜ್ಞಾನಿಕ ಅಧ್ಯಯನವೆನ್ನುವಂತೆ ತೋರುತ್ತಿತ್ತು. ಯಾವುದರ ಅಧ್ಯಯನ ? ಸಮಾಜದ ಆಗುಹೋಗುಗಳ ಅಧ್ಯಯನ. ಆ ಪುಸ್ತಕವು ಕೆಲವರು ಶ್ರೀಮಂತರಾಗಿರುವುದಕ್ಕೆ ಮತ್ತು ಇನ್ನು ಕೆಲವರು ಬಡವರಾಗಿರುವುದಕ್ಕೆ "ಕಾರಣಗಳನ್ನು" ತಿಳಿಯಪಡಿಸಿತು. ಅಂತೆಯೇ, ದಾನ-ಧರ್ಮವು ನೀತಿಶಾಸ್ತ್ರದ ತಪ್ಪು

ಅರ್ಥೈಸುವಿಕೆಯೆಂದೂ ಈ ಪುಸ್ತಕ ವಾದಿಸಿತು. ಅತಿ ಮುಖ್ಯವಾಗಿ ಅದು ಇನ್ನೊಂದು ವಿಷಯವನ್ನು ಪ್ರಸ್ತಾಪಿಸಿತ್ತು. ಅದೇನೆಂದರೆ, ಸರ್ಕಾರಗಳು ಜನಸಮುದಾಯದ ದಿನನಿತ್ಯದ ವ್ಯವಹಾರಗಳಲ್ಲಿ ಮಧ್ಯಪ್ರವೇಶ ಮಾಡಿದರೆ ಅವು ಕೆಟ್ಟ ಸರ್ಕಾರಗಳಾಗುತ್ತವೆ ಎಂದು. "ಸಮಾಜದ ಸ್ಥಿರನಿಯಮಗಳು" ಎಂಬ ಈ ಪುಸ್ತಕದ ಕರ್ತೃ ಹರ್ಬರ್ಟ್ ಸ್ಪೆನ್ಸರ್. ಅದು ಅವನ ಚೊಚ್ಚಲು ಕೃತಿ.

ವಿಶ್ವದಲ್ಲಿ ಹಾಯಾಗಿರಲು ಹಲವು ಹಾದಿಗಳಿವೆ. ಅವುಗಳಲ್ಲಿ ಅತಿಸರಳವಾದದ್ದು ಸಮಷ್ಟಿಯ ಲಯಕ್ಕೆ ತಕ್ಕಂತೆ ವ್ಯಕ್ತಿಯ ಲಯವನ್ನು ಬದ್ಧಗೊಳಿಸಿಕೊಳ್ಳುವುದು. 19ನೆಯ ಶತಮಾನದ ಬ್ರಿಟನ್ನಿನ ಸ್ಪೆನ್ಸರ್ ಮೂಲತಃ ಔದ್ಯೋಗಿಕ ಬಂಡವಾಳದ ಜಗತ್ತಿನ ಪ್ರವಾದಿ ಮತ್ತು ಅನುಚರ. ಪ್ರಾಣಿಗಳ ಪ್ರಪಂಚದಲ್ಲಿ ಸ್ಪೆನ್ಸರ್‌ಗೆ ಒಂದು ಹೋರಾಟದ ಮಾದರಿಯು ಕಂಡುಬಂತು. ಅಲ್ಲಿ ವೇಗವಾಗಿ ಓಡುವ ಪ್ರಾಣಿಗೆ ಸ್ಪರ್ಧೆ ಮತ್ತು ಬಲಿಷ್ಠವಾದ ಪ್ರಾಣಿಗೆ ಜಯ ಎಂಬ ನಿಯಮವಿದೆ. ಪಿತೃತ್ವದ ಸಂತೋಷ ಇಲ್ಲಿ ಗಂಡುಪ್ರಾಣಿಯದು ಮತ್ತು ಜೈವಿಕವಾಗಿ ಅದು ಹೆಚ್ಚು ಆಕರ್ಷಕವಾದುದು. ಈಗ ಯೋಚಿಸಿ : ಹಣದ ಯಶಸ್ವಿ ಹೂಡಿಕೆದಾರನೊಬ್ಬನಿದ್ದಾನೆ. ದಿನವೆಲ್ಲಾ "ದಣಿದು" ಸಂಜೆ ಬಿಲಿಯರ್ಡ್ಸ್ ಆಡಲು ಕ್ಲಬ್‌ಗೆ ಹೋಗಿ ಹಾಗೇ ಆಲೋಚಿಸುತ್ತಾನೆ : ಆ ಗಂಡುಪ್ರಾಣಿಯಂತೆ ತಾನೂ ಆಕರ್ಷಕ, ಬಲಿಷ್ಠ ಮತ್ತು ಸ್ಪರ್ಧೆಯಲ್ಲಿ ಗೆಲ್ಲುವ ಛಾತಿ ಇರುವವನಲ್ಲವೆ, ಎಂದು. ಪ್ರಕೃತಿಯೊಡನೆ ತನ್ನದು ಎಂಥ ಮೂಲಸಂಬಂಧ : ಅಲ್ಲೂ ಸ್ಪರ್ಧೆ ಇದೆ, ಇವನಲ್ಲೂ ವ್ಯವಹಾರದಲ್ಲಿ ಸ್ಪರ್ಧೆ ಇದೆ. ಅಂದರೆ, ಸ್ಪರ್ಧೆಯು ಸಹಜ.

ತಾನು ಎಲ್ಲವನ್ನೂ ಸ್ಪಷ್ಟವಾಗಿ ಅರಿತಿರುವುದಾಗಿ ಸ್ಪೆನ್ಸರ್ ಭಾವಿಸಿದ್ದ. ಒಮ್ಮೆ ಜಾರ್ಜ್ ಎಲಿಯಟ್ ಎಂಬ ಲೇಖಕಿ ಅವನಿಗೆ ಹೇಳಿದಳಂತೆ, "ಏನಾಶ್ಚರ್ಯ, ನಿನ್ನ ಹಣೆಯ ಮೇಲೆ ಸುಕ್ಕುಸುಕ್ಕಾದ ಗೀಟುಗಳೇ ಇಲ್ಲವಲ್ಲಾ" ಎಂದು. ಅದಕ್ಕವನೆಂದ : "ಹೇಗೆ ತಾನೆ ಇದ್ದೀತು ! ನನಗೆ ಸಂಶಯವೆಂಬುದೇ ಇಲ್ಲ, ಗೊತ್ತೆ ?" ಯಾರೋ ಸೂಚಿಸಿದ ಸಮಸ್ಯೆಗಳನ್ನು ಪರಿಹರಿಸುವುದು ತನ್ನ ಉದ್ದೇಶವಲ್ಲವೆನ್ನುವ ಸ್ಪೆನ್ಸರ್, ಥಟಕ್ಕನೆ ಸಂಗ್ರಹವಾಗುವ ಮಾಹಿತಿಯನ್ನಾಧರಿಸಿ ಸಾಮಾನ್ಯ ನಿಯಮಗಳು ತಾವೇ ತಾವಾಗಿ ಆವಿರ್ಭವಿಸಲು ತಾನು ಬಿಟ್ಟುಬಿಡುವುದಾಗಿ ಹೇಳುತ್ತಾನೆ. "ಹಾಗೆ ಕ್ರಮೇಣ, ನಿಧಾನವಾಗಿ, ಯಾರ ಮಧ್ಯಪ್ರವೇಶವೂ ಇಲ್ಲದೆ, ಯತ್ನ ಅಥವಾ ಪ್ರಜ್ಞಾಪೂರ್ವಕ ವಿಶ್ಲೇಷಣಾ ಪ್ರಕ್ರಿಯೆ ಇಲ್ಲದೆಯೇ, ಒಂದು ಸುಸಂಬದ್ಧವಾದ ಸಿದ್ಧಾಂತವು ಹೊರಹೊಮ್ಮುತ್ತದೆ" ಎನ್ನುತ್ತಾನೆ ಸ್ಪೆನ್ಸರ್. ಯಾವುದೇ ವಿಷಯದ ಜ್ಞಾನ ಪಡೆಯಲು ಇದು ಸೌಖ್ಯದ ಹಾದಿ ಇರಬಹುದು, ಆದರೆ ಅದು ಕ್ಷೇಮದ ಹಾದಿಯಲ್ಲ. ಆದ್ದರಿಂದಲೇ ಹಕ್ಸ್ಲಿ ಒಮ್ಮೆ ಹೇಳಿದ್ದು, "ದುರಂತದ ಬಗೆಗೆ ಸ್ಪೆನ್ಸರನ ಭಾವನೆ ಇದೆಯಲ್ಲಾ, ಅದೊಂದು ಪೇಲವ ತರ್ಕದ ಮಾದರಿಯದು. ಒಂದು ನೈಜ ಸಂಗತಿ ಗಮನಿಸಿದರೆ ಸಾಕು, ಅವನ ತರ್ಕವೆಲ್ಲಾ ಠುಸ್ಸೆಂದುಹೋಗುತ್ತದೆ," ಎಂದು.

ಪ್ರಸ್ತುತ, ಸ್ಪೆನ್ಸರ್‌ನ ಈ ಚಿಂತನಧಾರೆ ನಮ್ಮನ್ನೆತ್ತ ಕೊಂಡೊಯ್ಯುತ್ತದೆ ಎಂಬುದನ್ನು ನೋಡೋಣ. ಡಾರ್ವಿನ್ ವಿಕಾಸವಾದದ ಪ್ರತಿಪಾದನೆ ಮಾಡುವುದಕ್ಕೆ ಒಂಭತ್ತು ವರ್ಷ ಮುಂಚೆಯೇ ಸ್ಪೆನ್ಸರ್ "ಸಾಮಾಜಿಕ ಡಾರ್ವಿನ್‌ವಾದ"ವನ್ನು ಮಂಡಿಸಿಬಿಟ್ಟ. ಜೈವಿಕ ವಿಷಯಗಳ ಆಧಾರದಿಂದ ವಿಕಾಸವಾದವು ಸತ್ಯವೆಂಬ ತಿಳುವಳಿಕೆ ಬರುವುದಕ್ಕೆ

ಮೊದಲೇ ಸಾಮಾಜಿಕ ವಿಕಾಸವಾದ ಸಿದ್ಧಾಂತವು ಬಂದುಬಿಟ್ಟಿದ್ದಿತು. ಇದರಲ್ಲಿ ಎಷ್ಟು ಘೋರ ತಪ್ಪುಗಳಿರಬಹುದೆಂದು ಯಾವುದೇ ವಿಮರ್ಶಕನಿಗೂ ತಿಳಿದೀತು. ಈಗಿನ "ವಿಜ್ಞಾನಿಗಳು" ಯಾರಾದರೂ ಪ್ರಾಣಿ ಪ್ರಪಂಚದ ಸಂಘರ್ಷಗಳನ್ನು ಗಂಭೀರವಾಗಿ ಪರಿಗಣಿಸಿ ಸ್ಪೆನ್ಸರ್‌ನಂತೆ ಆಲೋಚಿಸಿದರೆ ಅವರ ಹಣೆಯಲ್ಲಿ ಸುಕ್ಕುಗೀರುಗಳಿಲ್ಲವೆಂದು ತೀರ್ಮಾನಿಸಬಹುದು, ಅವರಲ್ಲಿ ಯಾವ ಸಂಶಯವೂ ಉಳಿದಿಲ್ಲವೆಂದು ತರ್ಕಿಸಬಹುದು !

ಉಳಿವಿಗಾಗಿ ಹೋರಾಟ

ಹಾಗಿದ್ದರೆ ಸ್ಪೆನ್ಸರ್‌ನ ವಿಶಿಷ್ಟ ಕಾಣ್ಕೆ ಏನು ? ಜೀವಿಗಳ ಗೊಂದಲದ ಪ್ರಪಂಚದಲ್ಲಿ ಸದಾ ಹೋರಾಟದ ಒಂದು ನಿಯಮ ಕಂಡುಬರುತ್ತದೆ. ಅದನ್ನು ಯಾರೂ ಮೀರಲಾಗದು. ಪ್ರತಿಯೊಂದು ವಂಶದಲ್ಲೂ ಇಡೀ ವಂಶ ಹಾಗೂ ಅದರ ವೈಯಕ್ತಿಕ ವಿಭಾಗವು ಅಸ್ತಿತ್ವಕ್ಕಾಗಿ ಹೋರಾಟ ನಡೆಸುತ್ತಲೇ ಇರಬೇಕು. ಹಾಗಾಗಿ ವಂಶ ಮತ್ತು ವ್ಯಕ್ತಿ ಪರಸ್ಪರ ಅವಲಂಬಿಗಳು. ಪ್ರತಿಯೊಂದು ಜೀವಿಯೂ ಬೇರೊಂದು ಜೀವಿಗೆ ಗ್ರಾಸವಾಗಿಬಿಡುವ ಪ್ರತಿಕೂಲವನ್ನೆದುರಿಸಬೇಕಾಗಿದೆ. ಹಕ್ಕಿಗೆ ಹುಳು ಗ್ರಾಸ, ಬೇಡನಿಗೆ ಹಕ್ಕಿಯು ಗ್ರಾಸ. ಬೇಡನು ಯಾರಿಗೆ ಗ್ರಾಸ ? ಅವನು ಕಾಡಿನಲ್ಲಿ ಅಡ್ಡಾಡಹೋಗದಿದ್ದರೆ ಮತ್ತು ಮಾನವಭುಂಜಕರ ನಡುವೆ ಇರದಿದ್ದರೆ ಬಹುಶಃ ಗ್ರಾಸವಾಗಿಬಿಡುವ ಸಾಧ್ಯತೆಯಿಂದ ತಪ್ಪಿಸಿಕೊಳ್ಳಬಹುದು. ಏನೇ ಇರಲಿ, ಜೀವಿಸಲು ಆಹಾರ ಅಗತ್ಯವೆಂಬುದು ನಿರ್ವಿವಾದ. ಅಸ್ತಿತ್ವದಲ್ಲಿರಲು ಉಣ್ಣಬೇಕು ಮತ್ತು ಉಣ್ಣಲು ಕೊಲ್ಲಬೇಕು.

ಇದರಿಂದ ಸ್ಪೆನ್ಸರ್ ತರ್ಕಿಸಿದ್ದೇನು ? ಅತ್ಯಂತ ಪ್ರಾಚೀನ ಕಾಲದಿಂದಲೂ ಜೀವಿಗಳು ಅವಶ್ಯಕವಾಗಿ ಸ್ವಾರ್ಥಿಗಳಾಗಿ ಬೆಳೆದಿವೆ; ಮೃಗೀಯತೆಯು ಜೀವಿಗಳ ಒಂದು ಸ್ವಭಾವ. ಅಂದರೆ, ಪ್ರಕೃತಿಯೆಂದರೆ ರಕ್ತದ ಮಡುವು. ಸಮಾಜದ ಬಗ್ಗೆ ಇದರಿಂದ ತರ್ಕಿಸಬಹುದಾದ್ದೇನು ? ಭಾವುಕರಿಗೆ ಅದೊಂದು ದುಃಖದ ಸನ್ನಿವೇಶವೆಂದು ತೋರಬಹುದಾದರೂ ಅದರಲ್ಲೊಂದು ಸಂತಸವಿದೆ. ಒಂದು ಸಂದರ್ಭ ಹೀಗಿರುತ್ತದೆನ್ನಿ: ವಯಸ್ಸಾದಂತೆ ಜೀವಿಯು ಕೃಶವಾಗಿ, ಜೀವನವು ಅದಕ್ಕೆ ದುಸ್ಸಹವಾಗುತ್ತದೆ. ಅಂತಹ ದೆಸೆಯಲ್ಲಿ ಯಾವುದೋ ಜೀವಿಯು ಈ ಜೀವಿಯನ್ನು ಆಹಾರವನ್ನಾಗಿ ಮಾಡಿಕೊಳ್ಳುತ್ತದೆ. ಇದು ಶ್ರೇಯಸ್ಕರವೋ, ಇಲ್ಲವೆ "ಅಂಗಂ ಗಲಿತಂ ದಶನವಿಹೀನಂ" (ಅಂದರೆ ಹತೋಟಿಯಲ್ಲಿಲ್ಲದ ಅಂಗಾಂಗಳು, ಹಲ್ಲುಗಳಿಲ್ಲದ ಬಾಯಿ) ಆಗಿರುವಾಗಲೂ "ಆಶಾಪಿಂಡ"ವನ್ನು ತ್ಯಜಿಸದೆ ಕಡೆಗೆ ಹೊಟ್ಟೆಗಿಲ್ಲದೆ ಸಾಯುವುದು ಲೇಸೋ ? ಮುದಿತನದತ್ತ ಕ್ರಮಿಸುತ್ತಿರುವ ಮೇಕೆಗೆ ತೋಳವು ಹೇಳಬಹುದಾದ ಮಾತಿದೆಂದು ಊಹಿಸುವುದು ಕಷ್ಟವೇನಲ್ಲ. "ನಿನಗೆಂತಹ ಸೌಭಾಗ್ಯ ಕರುಣಿಸುತ್ತಿದ್ದೇನೆ" ಎಂದು ತೋಳ ಬೀಗಬಹುದು. ಯುವ ಪಾಷಂಡಿಗಳನ್ನು ಜೀವಂತ ಸುಟ್ಟುಹಾಕುವುದನ್ನು ಸಮರ್ಥಿಸುತ್ತಾ ರೋಮನ್ ಕ್ಯಾಥೊಲಿಕ್ ಚರ್ಚ್‌ನ ಕಾರ್ಡಿನಲ್ ಬೆಲಾರ್ಮಿನ್ ಹೇಳುತ್ತಿದ್ದನಂತೆ : "ಅವರು ಹೆಚ್ಚು ಕಾಲ ಬದುಕಿದಷ್ಟೂ ಅವರಿಗೇ ಕುತ್ತು, ಏಕೆಂದರೆ ಅವರು ಪಾಪದ ಚೀಲವನ್ನು ತುಂಬಿಕೊಳ್ಳುತ್ತಲೇ ಇದ್ದು ಕಡೆಗೆ ನರಕಕ್ಕೆ ನೂಕಲ್ಪಡುತ್ತಾರೆ."

ಎಂಥ ಅಪರೂಪದ ಅನುಗ್ರಹ ! ಅಷ್ಟೇ ಅಲ್ಲ. ಸ್ಪೆನ್ಸರ್ ಹೇಳುತ್ತಾನೆ : "ಸಸ್ಯಾಹಾರಿ ಪ್ರಾಣಿಸಂಕುಲದಲ್ಲಿ ಯೌವನವನ್ನು ಮೀರಿರುವುವನ್ನು ಸಂಹಾರ ಮಾಡುವ

ಮಾಂಸಾಹಾರಿ ಶತ್ರುಗಳು ಪ್ರಾಣಿಗಳ ಪೈಕಿ ಅಂಗಾಂಗಗಳನ್ನು ಊನ ಮಾಡಿಕೊಂಡಿರುವ, ಇಲ್ಲವೆ ರೋಗದಿಂದ ಬಳಲುತ್ತಿರುವ, ಪ್ರಾಣಿಗಳನ್ನು ಹೊಸಕಿಹಾಕಿ ದಷ್ಟಪುಷ್ಟವಾಗಿರುವುವನ್ನು ಜೀವಿಸಲು ಬಿಡುತ್ತವೆ." ಇದರ ಸತ್ಪರಿಣಾಮವೇನೆಂದರೆ "ಪ್ರಾಣಿಸಂಕುಲದಲ್ಲಿ ಕೆಳಮಟ್ಟದವು ನಾಶವಾಗಿ, ತಮ್ಮ ವಂಶದ ಉತ್ತಮ ಪ್ರತಿನಿಧಿಗಳನ್ನು ಜೀವಿಸುವಂತೆ ಮಾಡುತ್ತವೆ. ಅಂದರೆ, ಸುತ್ತಣ ಸನ್ನಿವೇಶಗಳಿಗೆ ಒಗ್ಗಿಕೊಳ್ಳುವಂತಹ ದೇಹ ದಾರ್ಢ್ಯವಿರುವ ಪ್ರಾಣಿಗಳು ಉಳಿಯುತ್ತವೆ, ಅವಕ್ಕೆ ಅತ್ಯಧಿಕ ಸುಖದ ಪ್ರಾಪ್ತಿಯಾಗುತ್ತದೆ." ಅರ್ಥಾತ್, ಕಳಪೆ ಮಟ್ಟದ ಜೀವಿಗಳನ್ನು ಉತ್ಪಾಟಿಸಿದಾಗ ಪ್ರಾಣಿ ಸಮಾಜಕ್ಕೆ ಅಗಾಧವಾದ ಲಾಭವಿದೆ. ಸಂಹಾರಕ್ಕಾಗಿ ಕಾದು ಕೂತಿರುವ ಹಿಂಸ್ರ ಪ್ರಾಣಿಯು ತನ್ನ ಬೇಟೆಗೆ ಸಿಲುಕಿದ ಪ್ರಾಣಿಗೆ ಬೊಗಸೆ ಬೊಗಸೆ ದಯಾಭಿಕ್ಷೆ ನೀಡಿದಂತಲ್ಲವೆ ಇದು !

ಈ ಅಭಿಪ್ರಾಯಗಳನ್ನು ಗಂಭೀರವಾಗಿ ವಿಮರ್ಶಿಸುವುದು ಅವಕ್ಕೆ ಅನಗತ್ಯವಾಗಿ ಗೌರವ ತಂದುಕೊಟ್ಟಂತಾಗಬಹುದು. ಅದನ್ನು ಮಾಡದೆ ಬೇರೆ ಕೆಲವು ಅಂಶಗಳತ್ತ ಗಮನಹರಿಸೋಣ. ಹುಲಿಯೊಂದು ಜಿಂಕೆಯನ್ನು ಹಿಡಿದು ತಿನ್ನುತ್ತದೆನ್ನಿ. ಅದಕ್ಕೆ ಅಗತ್ಯವಾದ ಪರಿಕರಗಳೇನು ? ಗಟ್ಟಿಯಾದ ಹಲ್ಲು, ಪಂಜ. ಜೊತೆಗೆ, ತಾನು ಹಿಡಿಯಬಯಸುವ ಜಿಂಕೆಗಿಂತಲೂ ಹೆಚ್ಚಿನ ಓಟದ ಸಾಮರ್ಥ್ಯ ಬೇಕು. ಹೊಂಚು ಹಾಕುವುದರಿಂದ ಅಥವಾ ವೇಗದ ಓಟದಿಂದ ಜಿಂಕೆಯನ್ನು ಹಿಡಿಯಲಾಗದಿದ್ದರೆ ಆ ಹುಲಿ ಅಸಮರ್ಥವೆನಿಸಿಕೊಳ್ಳುತ್ತದೆ. ತನ್ನ ಕುಲಕ್ಕೆ ಹೀಗೆ ಕಳಂಕ ತರಲು ಅದು ಬಹುಕಾಲ ಬಾಳಲಾರದು ಕೂಡ ! ಹಾಗಿದ್ದರೆ ಅಸ್ತಿತ್ವದಲ್ಲಿರಲು ಜರುಗುವ ಸಂಘರ್ಷದಲ್ಲಿ ಸೋಲು ಯಾರಿಗೆ ? ಜಿಂಕೆ ಹಿಡಿಯಲಾಗದ ಹುಲಿಗೆ ಮತ್ತು ಹಿಡಿಸಿಕೊಂಡುಬಿಡುವ ಜಿಂಕೆಗೆ ಇದೊಂದು ವಿಪರ್ಯಾಸ. ಜಿಂಕೆಯನ್ನು ಹಿಡಿಯಲಾಗದ ಹುಲಿಗೆ ಎದುರಾಗಿ ಹುಲಿಯಿಂದ ಹಿಡಿಸಿಕೊಳ್ಳುವಂತಹ ಜಿಂಕೆ ಬಂದರೆ ಆಗ ಹುಲಿಗೆ ಆಹಾರ ದಕ್ಕಿದಂತೆ; ಅಂದಿಗೆ ಹುಲಿ ಜೀವಂತ ಉಳಿಯುತ್ತದೆ. ಆದರೆ ಜಿಂಕೆಯನ್ನು ಹಿಡಿಯಲು ಸಮರ್ಥವಾದ ಹುಲಿಯೆದುರು, ವೇಗದ ಓಟದಲ್ಲಿ ಹುಲಿಯನ್ನು ಮೀರಿಸುವ ಜಿಂಕೆ ಬಂತೆಂದರೆ ಅಂದು ಹುಲಿಗೆ ಆಹಾರದ ಕೊರತೆ ಕಟ್ಟಿಟ್ಟಿದ್ದು; ಪರಿಣಾಮವಾಗಿ ಅದು ನಾಶವಾಗುತ್ತದೆ. ಇದೆಲ್ಲಾ ಸ್ಪೆನ್ಸರನ ಘನವಾದ ಲೆಕ್ಕಾಚಾರವನ್ನು ತಲೆಕೆಳಗು ಮಾಡಿಬಿಡುತ್ತದೆ. ಅಂದರೆ, ತಥಾಕಥಿತ ಸಮರ್ಥನು ಅಸಮರ್ಥನೆನಿಸಿಬಿಡುತ್ತಾನೆ ಮತ್ತು ಅಸಮರ್ಥನು ಸಮರ್ಥನಾಗಿ ಕಂಗೊಳಿಸುತ್ತಾನೆ. ಇದಕ್ಕಿಂತಲೂ ಕೆಟ್ಟ ಅನಾಹುತ ಉಂಟೆ ಸ್ಪೆನ್ಸರ್‌ಗೆ ?

ಇದಿಷ್ಟೂ ತರ್ಕದ ಬುದ್ಧಿವಂತಿಕೆಯ ಮಾತಿನಾಟ. ಅದಕ್ಕೆ ಗಂಭೀರವಾದ ವಾದವೊಂದನ್ನು ಜೋಡಿಸೋಣ. ಅತಿವೇಗದ ಜಿಂಕೆ ಮತ್ತು ಅತಿವೇಗದ (ಹಾಗೂ ಹೊಟ್ಟೆಬಾಕ) ಹುಲಿ ಉಳಿಯುತ್ತವೆಂದಿಟ್ಟುಕೊಳ್ಳೋಣ. ಅಂತೆಯೇ, ಅವು ಲೈಂಗಿಕ ಆಯ್ಕೆಯಿಂದಾಗಿ ಅಷ್ಟೇ ಅತಿವೇಗದ ಸಾಮರ್ಥ್ಯವನ್ನುಳ್ಳ ಪೀಳಿಗೆಗಳನ್ನು ಸೃಷ್ಟಿಸುತ್ತವೆಂದಿಟ್ಟುಕೊಳ್ಳೋಣ. ಆ ಪೀಳಿಗೆಗಳು ತಮ್ಮ ಸಾಮರ್ಥ್ಯವನ್ನು ಇನ್ನೂ ವೃದ್ಧಿಸಿಕೊಳ್ಳುತ್ತವೆ. ಹೀಗೆ ಪೀಳಿಗೆಗಳು ಮುಂದುವರಿದಾಗ, ಹೆಚ್ಚಿದ ಸಾಮರ್ಥ್ಯದ ಹುಲಿಯೆದುರು ಹೆಚ್ಚಿದ ಸಾಮರ್ಥ್ಯದ ಜಿಂಕೆ ಇರುತ್ತದೆ. ಆಗ ಅವುಗಳ ನಡುವಣ ಸ್ಪರ್ಧೆಯು ಬಹಳ ಕೌಶಲ್ಯದ್ದಾಗಿರುತ್ತದೆ, ಅಮೋಘವಾಗಿರುತ್ತದೆ. ಇದನ್ನೇ ಇಡೀ ಜೀವಿಗಳ ವಿಶ್ವಕ್ಕೆ ಅನ್ವಯಿಸಿನೋಡಿ. ಕಡಿಮೆ ಮಟ್ಟದ ಜಾಣ್ಮೆ ಹೊಂದಿದ ಪ್ರಾಣಿಗಳು

ಧ್ವಂಸವಾಗಿಬಿಡುತ್ತವೆ. ಇನ್ನುಳಿದುವಕ್ಕೆ ಅದರಿಂದಾಗಿ ಅಪಾಯ ಹೆಚ್ಚುತ್ತದೆ (ಏಕೆಂದರೆ, ಹುಲಿಗಳು ಉಣ್ಣಬೇಕಲ್ಲ). ಆಗ ಸುಲಭವಾಗಿ ಹಿಡಿಯಲಾಗದ ಪ್ರಾಣಿಗಳನ್ನು ಬೇಟೆಯಾಡಬೇಕು ಅಥವಾ ತಪ್ಪಿಸಿಕೊಂಡು ಹೋಗಲು ಹೆಚ್ಚು ಕಷ್ಟವಾಗುವಂತಹ ಪ್ರಾಣಿಗಳಿಂದ ಬೇಟೆಯಾಡಿಸಿಕೊಳ್ಳಬೇಕು. ರಭಸದಿಂದ ಓಡಿದ್ದ ಜಿಂಕೆ ಹುಲಿಯಿಂದ ತಪ್ಪಿಸಿಕೊಂಡಿತ್ತು; ಆದರೆ, ಪಾಪ, ಅದರ ಚಿಕ್ಕಪ್ಪ ಸಿಕ್ಕಿಹಾಕಿಕೊಂಡಿತ್ತು. ಇನ್ನು ಬೇರೆ ಚಿಕ್ಕಪ್ಪಗಳು ಉಳಿದಿರದಿದ್ದಾಗ ಸಿಕ್ಕಿಹಾಕಿಕೊಳ್ಳುವ ಸರದಿಯು ಹಿಂದಿನ ವೇಗಿ ಜಿಂಕೆಯದಾಗುತ್ತದೆ. ಇಂತಹ ಅದ್ಭುತವಾದ ವಿಕಾಸ ಪ್ರಕ್ರಿಯೆಯಲ್ಲಿ ಅಂತಿಮ ಪರಿಣಾಮವೇನೆಂದರೆ ಅತಿ ಹೆಚ್ಚಿನ ಅಭದ್ರತೆಯ ನಡುವೆ ಅತಿ ಹೆಚ್ಚಿನ ಪರಿಪೂರ್ಣತೆ ಉಳಿದಿರುತ್ತದೆ. ವಿಸ್ಮಯಕಾರಿ ಕೌಶಲ್ಯಗಳನ್ನೆಲ್ಲಾ ಉಳ್ಳವರು ಆ ಕೌಶಲ್ಯಗಳಿಂದ ಯಾವ ಲಾಭವನ್ನೂ ಪಡೆಯಲಾಗದಂತಹ ಬಿಕ್ಕಟ್ಟಿಗೆ ಸಿಲುಕಿರುತ್ತಾರೆ !

ಪ್ರಾಣಿಗಳ ಸಂಘರ್ಷದ ಮಾದರಿಯನ್ನು ಮಾನವ ಜಾತಿಗೂ ಅನ್ವಯಿಸ ಬಹುದೆಂದು ಸ್ಪೆನ್ಸರ್ ಭಾವಿಸಿದ. ಸಾಮಾಜಿಕ ದೃಶ್ಯ ಹೇಗಿದೆ ? – ಕೆಲವರು ಶ್ರೀಮಂತರು, ಇನ್ನು ಕೆಲವರು ಬಡಬಗ್ಗರು; ಕೆಲವರು ದುಡಿಮೆಯಲ್ಲಿ ತೊಡಗಿರುವವರು, ಇನ್ನು ಕೆಲವರು ಸೋಮಾರಿಗಳು (ಯುದ್ಧ ಕಾಲದಲ್ಲಿ ಮಾತ್ರ ಈ ಸೋಮಾರಿಗಳೂ ಕೆಲಸದಲ್ಲಿ ತೊಡಗಿಕೊಳ್ಳುತ್ತಾರೆ); ಕೆಲವರು ಆಳುವವರು, ಇನ್ನು ಕೆಲವರು ಆಳಿಸಿಕೊಳ್ಳುವವರು; ಕೆಲವರು ಸ್ವತಂತ್ರರು, ಇನ್ನು ಕೆಲವರು ದಾಸ್ಯದಲ್ಲಿರುವವರು. ಇವೆಲ್ಲ ವೈಪರೀತ್ಯಗಳ ನಡುವೆ ಸತತವಾದ ಘರ್ಷಣೆಯೊಂದು ಜಾರಿಯಲ್ಲಿರುತ್ತದೆ; ಅದು ಆರ್ಥಿಕ ಮತ್ತು ಸಾಮಾಜಿಕ ಸೌಲಭ್ಯಗಳನ್ನು ಪಡೆಯುವ ಉದ್ದೇಶದ್ದು. ಎಲ್ಲರೂ ಹಂಚಿಕೊಳ್ಳಲು ಬೇಕಾದಷ್ಟು ಸೌಲಭ್ಯಗಳಿಲ್ಲದಿರುವುದೂ ಒಂದು ತೊಡಕು. ಆರ್ಥಿಕ ಸಂಘರ್ಷದಲ್ಲಿ ಸೋತವರು ಹುಲಿಯಿಂದ ಹಿಡಿಯಲ್ಪಟ್ಟ ಜಿಂಕೆಯಂತೆ ನಶಿಸಿಹೋಗುತ್ತಾರೆ. ರೋಗರುಜಿನಗಳು ಮತ್ತು ಆಹಾರದ ಕೊರತೆಯು "ಅಸಮರ್ಥ"ರನ್ನು ಕಂಗಾಲಾಗಿಸಿ ಕೊಲ್ಲುತ್ತವೆ. ಗೆದ್ದ ಭೂಪತಿಗಳು ಮುಂದಿನ ಪೀಳಿಗೆಗಳಿಗೆ ಬುದ್ಧಿಮತ್ತೆಯನ್ನು ಕಲಿಸುತ್ತಾ ಸಾಗಬಹುದು !

ಸ್ಪೆನ್ಸರ್‌ನ ಪ್ರಕಾರ ಅಸಮರ್ಥರ ಬಡತನ, ಅವಿವೇಕಿಗಳ ಕಷ್ಟ, ಸೋಮಾರಿಗಳ ಉಪವಾಸ, ಇವೆಲ್ಲಾ ದೂರದರ್ಶಿತ್ವದ ಅಭಾವದ ಕುರುಹುಗಳು ಹಾಗೂ ಸೂಚನೆಗಳು. ಅಂದರೆ, ಅದೆಲ್ಲಾ ಅವರಿಗೆ ಅನಿವಾರ್ಯ. ನೈತಿಕತೆಗೆ ಹೊರತಾದವರೆನ್ನಲಾದ ಅವಿವೇಕಿ, ಸೋಮಾರಿ, ಇತ್ಯಾದಿಗಳನ್ನು ಹೆಸರಿಸಿ ಸ್ಪೆನ್ಸರ್ ಒಂದು ಮುಖ್ಯಾಂಶವನ್ನು ಮುಚ್ಚಿಡುತ್ತಿದ್ದಾನೆ. ಅಸಮರ್ಥ, ಸೋಮಾರಿ, ಎಂಬುವು ಕಡಿಮೆ ಕೂಲಿ ಪಡೆಯುವವರಿಗೆ ಕೊಡಲಾಗಿರುವ ವಿಶೇಷಣಗಳು; ಅವಿವೇಕಿಯೆಂದರೆ ಆರ್ಥಿಕವಾಗಿ ಮುನ್ನುಗ್ಗಲು ಹೋಗಿ ಎಡವಿರುವವನು. ತಮ್ಮ ಸಾಮಾಜಿಕ ಗುರಿಯನ್ನು ಮುಟ್ಟಲು ಸೋತಿರುವವರೇ ಇವರೆಲ್ಲಾ. ಅವರು ನಾಶಹೊಂದಿದರೆ ಯಾರಿಗೇನು ನಷ್ಟ ಎಂಬುದು ಸ್ಪೆನ್ಸರ್‌ನ ನಿಲುವು. ಆದರೆ ಅವರ ಪರವಾಗಿ ನಿಲ್ಲುವ ಧರ್ಮಪ್ರವರ್ತಕರೂ ಇದ್ದಾರೆ. ನಿರುದ್ಯೋಗ ಭತ್ಯೆ, ಸಂಕಷ್ಟದಲ್ಲಿರುವವರಿಗೆ ಪರಿಹಾರ, ಇತ್ಯಾದಿ ಸೌಲಭ್ಯಗಳಿಗಾಗಿ ಅವರು ಆಗ್ರಹಿಸುತ್ತಾರೆ. ಅವರನ್ನು ಕಂಡರೆ ಸ್ಪೆನ್ಸರ್‌ಗೆ ಜುಗುಪ್ಸೆ. ಏಕೆಂದರೆ, ಈ ಕ್ರಮಗಳು "ಅಸಮರ್ಥ"ರನ್ನು ಇನ್ನಷ್ಟು ಕಾಲ ಉಳಿಸಿಬಿಡುತ್ತವೆ. ಅದು ಸಮರ್ಥರಿಗೆ ಅನ್ಯಾಯ !

ಹಾಗೆ ನೋಡಿದರೆ, ಸಂಪತ್ತು ಗಳಿಸಿರುವ 'ಸಮರ್ಥ'ರಿಗೆ ತೆರಿಗೆ ವಿಧಿಸುವುದು ಸಹ ಸರಿಯಲ್ಲವೆಂಬುದು ಸ್ಪೆನ್ಸರ್‌ನ ವಾದ.

ಸ್ಪೆನ್ಸರ್‌ನ ಬೊಬ್ಬೆ ಸಮರ್ಥನೀಯವಲ್ಲವೆಂಬುದು ಪ್ರಮುಖ ವಿಚಾರ. ಪ್ರಾಕೃತಿಕ ನಿಯಮಗಳು, ನೈತಿಕ ಮತ್ತು ಕಾನೂನಿನ ನಿಯಮಗಳಿಗೆ ಭಿನ್ನವಾಗಿ, ಅನುಲ್ಲಂಘನೀಯ. ಹತ್ತನೆಯ ಮಹಡಿಯಿಂದ ಜಿಗಿದು ಗುರುತ್ವಾಕರ್ಷಣೆಯ ನಿಯಮಕ್ಕೆ ಸವಾಲೆಸೆದರೆ ಏನಾಗುತ್ತದೆಂದು ಎಲ್ಲರಿಗೂ ತಿಳಿದಿದೆ. ನಿಯಮೋಲ್ಲಂಘನೆಗೆ ಅದು ಶಿಕ್ಷೆಯಲ್ಲ; ಬದಲಾಗಿ, ಆ ನಿಯಮವನ್ನು ನಾನು ಉಲ್ಲಂಘಿಸಲಾರೆ, ಎಂಬ ಸತ್ಯದ ದ್ಯೋತಕ. ಅಳಿಯದೆ ಉಳಿಯಬೇಕೆಂಬ ನಿಯಮ ಕೂಡ ಅದೇ ತೆರನಾದುದು. ನೀವೆಷ್ಟೇ ಧರ್ಮಪ್ರವರ್ತಕರಾಗಿರಿ, ಅಸಮರ್ಥರನ್ನು ನೀವು ಉಳಿಸಲಾರಿರಿ; ಬಹಳವೆಂದರೆ, ಅಳಿವನ್ನು ಸ್ವಲ್ಪ ಮುಂದೂಡ ಬಲ್ಲಿರಿ, ಅಷ್ಟೆ. ಇದು ಮತ್ತೆ ಸ್ಪೆನ್ಸರ್‌ನ ವಾದಸರಣಿ. ಅಳಿಯಬೇಕಾದವರು ಉಳಿದರೆ ಅವರು ಉಳಿದಿರುವವರ ಮೇಲೆ ಹೊರೆಯಾಗುತ್ತಾರೆ, ಎನ್ನುತ್ತಾನೆ ಸ್ಪೆನ್ಸರ್. ಅವನದು ಖಚಿತ ಅಭಿಪ್ರಾಯ : ಕಮ್ಯುನಿಸ್ಟರ ಯಾವ ಪರಿಹಾರ ಕ್ರಮಗಳೂ ಅಸಮರ್ಥರನ್ನು ಉಳಿಸಲಾರವು, ಎಂದು. ಅವನೆಸಗಿರುವ ತಪ್ಪೇನೆಂದರೆ, ಪ್ರಾಕೃತಿಕ ನಿಯಮಗಳನ್ನು ನೈತಿಕ ಮತ್ತು ಕಾನೂನು ನಿಯಮಗಳೆಂದು ತಪ್ಪಾಗಿ ಅರ್ಥೈಸಿಕೊಂಡಿದ್ದಾನೆ. ತರ್ಕಶಾಸ್ತ್ರದಲ್ಲಿ ಇದನ್ನು ದ್ವಂದ್ವಾರ್ಥ ಸೂಚನೆ ಎನ್ನುತ್ತಾರೆ. ಉದಾಹರಣೆಗೆ, ಕೆಲವರು ಹೀಗೆನ್ನಬಹುದು : "ನಾನೇನೂ ಕಟ್ಟಾ ಧರ್ಮಶ್ರದ್ಧೆ ಇರುವವನಲ್ಲ. ಆದರೆ, ದೇವರ ನಿಯಮಗಳನ್ನು ನಾನು ಮಾನ್ಯ ಮಾಡುತ್ತೇನೆ, ಏಕೆಂದರೆ ಅವು ಪ್ರಾಕೃತಿಕ ನಿಯಮಗಳಾಗಿವೆ. ಆ ನಿಯಮಗಳು ಎಲ್ಲರಿಗೂ ಸಮಾನವಾದುವು; ಶ್ರದ್ಧಾಳುವಿಗೂ ಅಷ್ಟೆ, ಪಾಷಂಡಿಗೂ ಅಷ್ಟೆ. ಅವು ಗುರುತ್ವಾಕರ್ಷಣೆಯ ನಿಯಮವಿದ್ದಂತೆ; ಅಂದರೆ, ಎಲ್ಲರಿಗೂ ಅನ್ವಯಿಸುತ್ತವೆ. ಅಂತಹ ಇನ್ನೊಂದು ನಿಯಮ ವಿಕಾಸವಾದ; ಅತಿ ಸಮರ್ಥನು ಉಳಿಯುತ್ತಾನೆ, ಎಂಬ ನಿಯಮ. ಮತ್ತೊಂದು ನಿಯಮ, ಮಾರುಕಟ್ಟೆಯಲ್ಲಿ ಸರಬರಾಜು ಮತ್ತು ಬೇಡಿಕೆಯ ನಿಯಮ. ಇವುಗಳ ವಿರುದ್ಧ ಸೊಲ್ಲೆತ್ತುವುದು ಸಲ್ಲ."

ಇದನ್ನೆಲ್ಲಾ ಹೇಳುತ್ತಿರುವವರು ಯಾವುದಾದರೂ ಕಾರ್ಖಾನೆಯ ಮಾಲಿಕನ ವಕ್ತಾರರೋ ಎಂಬ ಅನುಮಾನ ಕಾಡುವುದು ಸಹಜ.

ಗಣ್ಯರತ್ತ ಒಂದು ಕ್ಷಣದ ಗಮನ

ಸ್ಪೆನ್ಸರ್ ಮತ್ತು ಅವನ ಅನುಯಾಯಿಗಳ ವಾದವು ಸಂಕ್ಷಿಪ್ತವಾಗಿ ಹೀಗಿದೆ : (ಅ) ಮಾನವ ಸಮುದಾಯದ ಉದ್ಧಾರವೆಂಬ ಮಾತು ಅರ್ಥರಹಿತವಾದ್ದು, ಮತ್ತು (ಆ) ಹಾಗೆ ಉದ್ಧಾರ ಮಾಡಹೊರಡುವವರು ಅಸಮರ್ಥರಿಗೆ ಅನವಶ್ಯಕವಾಗಿ ಜೀವ ಕೊಡುತ್ತಾರೆ ಮತ್ತು ಸಮರ್ಥರಿಗೆ ಹೊರೆಯಾಗಿಸುತ್ತಾರೆ.

ಬೇರೆ ರೀತಿಯಲ್ಲಿ ಹೇಳುವುದಾದರೆ, ಸುಧಾರಣೆಗಳು ಎಂದೂ ಯಶಸ್ಸು ಗಳಿಸುವುದಿಲ್ಲ ಮತ್ತು ಅವು ಅಪಾಯಕಾರಿ, ಎಂದರ್ಥ. ಇದನ್ನು ಪರೀಕ್ಷಿಸಿ ನೋಡೋಣ : ವಿಕಾಸ ಕ್ರಮದಲ್ಲಿ ಮೇಲೇರಿದ್ದಾರೆನ್ನಲಾದ ಈ ಗಣ್ಯರಿದ್ದಾರಲ್ಲ, ಅವರೆಲ್ಲಾ ಯಾರು ? ಸ್ಪೆನ್ಸರ್ ಪ್ರಕಾರ ಅವರು ಸ್ಪರ್ಧೆಯಲ್ಲಿ ಗೆದ್ದುಬಂದಿರುವವರು. ಅವರಲ್ಲಿ ಕೆಲವರ ಅಧಿಕಾರವು ಆರ್ಥಿಕ ಚೈತನ್ಯದಿಂದ ಬಂದಿದೆ, ಇನ್ನು ಕೆಲವರದು ರಾಜಕೀಯವಾದ್ದು. ಬೇರೆಯೂ

ಕೆಲವರಿರಬಹುದು; ತಮ್ಮ ಕಲಾಪ್ರತಿಭೆ ಮುಂತಾದ ಕಾರಣಗಳಿಂದ ಗಣ್ಯತೆ ಸಂಪಾದಿಸಿರುವವರು. ಅವರು ಏನೇ ಆದರೂ, ಈ ಕಲಾವಂತರ ಅಧಿಕಾರವು ಆರ್ಥಿಕ–ರಾಜಕೀಯ ಅಧಿಕಾರದ ಮುಂದೆ ಏನೂ ಅಲ್ಲ. ಅವರೆಲ್ಲಾ ಹೇಗೆ ಗಣ್ಯರಾದರೆಂಬುದು ಒಂದು ದೊಡ್ಡ ಕತೆ. ಆದರೆ ಅದೆಲ್ಲಾ ಅವರ ವೈಯಕ್ತಿಕ ಸಾಧನೆ ಎಂಬಂತೆ ಪ್ರತಿಫಲಿಸಲಾಗುತ್ತದೆ. "ವೈಯಕ್ತಿಕ ಸಾಧನೆ" ಎಂಬುದು ಮಾನವ ಜನಾಂಗದ ಬಗೆಗಿನ ಆಸಕ್ತಿ ಕೇಂದ್ರಿತವಾಗುವುದರ ಬದಲು ಕೆಲವು ವ್ಯಕ್ತಿಗಳ ಕೇಂದ್ರಿತ ಆಸಕ್ತಿಯಾಗಿ ಬಿಂಬಿಸಲಾಗುತ್ತಿದೆ. ಇತಿಹಾಸವನ್ನು ರೂಪಿಸುವವರು ಕೆಲವು ಧೀರೋದಾತ್ತ ವ್ಯಕ್ತಿಗಳು, ಎಂಬ ಕಪಟ ಸಿದ್ಧಾಂತಕ್ಕೆ ಸಮಾನವಾದ್ದು ಇದು. ಇದರ ಪ್ರಕಾರ ಸ್ವಾತಂತ್ರ್ಯವೆಂಬುದು ಯಾವ ಘರ್ಷಣೆಯೂ ಇಲ್ಲದೆ ಎಲ್ಲಿಂದಲೋ ಉದುರುತ್ತಿರುತ್ತದೆ! 19ನೆಯ ಶತಮಾನದ ಯೂರೋಪಿನಲ್ಲಿ ವೈಭವೀಕೃತ ಭಾವನೆಗಳಿಗೆ ವಿಶೇಷ ಸ್ಥಾನವಿತ್ತು. ಅದರ ಪರಿಣಾಮವಾಗಿ ಉದ್ಭವಿಸಿದ ಸಿದ್ಧಾಂತವೆಂದರೆ ಇದೇ : ಮಾನವನಲ್ಲಿ ಆಸಕ್ತಿ ಎಂದರೆ ತನ್ನಲ್ಲಿ ತಾನು ಆಸಕ್ತಿ ಇರಿಸಿಕೊಳ್ಳುವುದು, ಎಂದು. ಆಕ್ಸ್‌ಫರ್ಡ್‌ನಲ್ಲಿ ಆಗ್ಗೆ ಒಬ್ಬ ಪ್ರಾಧ್ಯಾಪಕ ತನ್ನ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದನಂತೆ, "ನೋಡಿ, ನಿಮ್ಮ ವರ್ತನೆಯು ದೇವರನ್ನು ಅಸಂತುಷ್ಟಗೊಳಿಸುವುದಲ್ಲದೆ ನನ್ನನ್ನೂ ಬಹುವಾಗಿ ಅಸಂತುಷ್ಟಗೊಳಿಸಿದೆ" ಎಂದು. ಅಂದರೆ, ಮೊದಲು ಅವನು, ಆಮೇಲೆ ದೇವರು. ವೈಯ್ಯಕ್ತಿಕತೆಯೆಂಬುದು ಆ ಹಂತಕ್ಕೇರಿದ್ದಿತು. "ನಾನು ನಿಮಗೆ ಸ್ವರ್ಗ ತೋರಿಸಲು ಬಂದರೆ ನೀವು ನನ್ನ ಟೊಪ್ಪಿಗೆಯನ್ನು ಕದ್ದಿದ್ದೀರಿ" ಎಂದು ಬ್ರಿಟನ್ನಿನ ಪಾದ್ರಿಯೊಬ್ಬ ಐರ್ಲೆಂಡಿನಲ್ಲಿ ಹೇಳಿದ್ದನಂತೆ. ಈ "ನಾನು" ಎಂಬುದು ಯಾವ ಪರಾಕಾಷ್ಠೆಯನ್ನು ಮುಟ್ಟಿದ್ದಿತೆಂದರೆ ಎಲ್ಲವನ್ನೂ ಕಾರ್ಲೈಲ್ "ಹಾಳಾದದ್ದು" ಎಂದು ಮೂದಲಿಸುತ್ತಿದ್ದನಂತೆ. ಡಾ॥ ಆರ್ನಲ್ಡ್ ಕಾರ್ಮಿಕ ಸಂಘಟನೆಗಳ ಬಗ್ಗೆ ಹೀಗೆಂದಿದ್ದ : "ತುಂಟತನವನ್ನು ಹರಿಬಿಡುವ ಭೀಕರ ಯಂತ್ರ; ದೊಂಬಿಗೂ ಸರಿ, ಕೊಲ್ಲಲೂ ಸರಿ." 19ನೆಯ ಶತಮಾನದ "ಗಣ್ಯ"ರಿಗಿಂತಲೂ ಕಡಿಮೆಯಿಲ್ಲದವರು 20ನೆಯ ಶತಮಾನದ ನಮ್ಮ "ಗಣ್ಯರು." ಹೇಗೂ ಗೋರಿಂಗ್ ಮತ್ತು ಗೋಬಲ್ಸ್‌ರಂತಹವರನ್ನು ಕೊಟ್ಟ ಶತಮಾನ ಅದು. ಅವರೇ ವಿಕಾಸದಲ್ಲಿ "ಸಮರ್ಥರು" ಎಂಬ ಪಟ್ಟ ಪಡೆದವರು! ಸಹಸ್ರಾರು ವರ್ಷಗಳ ವಿಕಾಸದ ಹಾದಿಯು ಇಂಥ "ಸಮರ್ಥ"ರನ್ನು ನೀಡುವುದಾದರೆ, ಆ ಸಿದ್ಧಾಂತದಲ್ಲಿ ಏನೋ ಐಬು ಇರಲೇಬೇಕೆಂದು ಸ್ಪೆನ್ಸರ್ ತಿಳಿಯದಾದ.

ಅನಿವಾರ್ಯತೆ ಮತ್ತು ನೈತಿಕತೆ

ಜೀವಶಾಸ್ತ್ರದ ಪ್ರಮೇಯವೊಂದನ್ನು ತಂದು ಮಾನವ ಸಮಾಜಕ್ಕೆ ಸಾರಾಸಗಟಾಗಿ ಅನ್ವಯಿಸುವುದಲ್ಲದೆ ಅದಕ್ಕೊಂದು ನೈತಿಕತೆಯ ಮೆರುಗನ್ನು ಬಳಿದಿದ್ದು ಸ್ಪೆನ್ಸರ್‌ನ ವಿಧಾನ. "ಸಮರ್ಥರು" ಮತ್ತು "ಅಸಮರ್ಥರು" ಎಂಬ ಪದಗಳಿಗೆ "ಒಳ್ಳೆಯವರು" ಮತ್ತು "ಕೆಟ್ಟವರು" ಎಂಬ ಪರ್ಯಾಯಾರ್ಥಗಳನ್ನು ಜೋಡಿಸಿಬಿಡಲಾಯಿತು. ಈಗ ನೋಡಿ ಮಥಿತಾರ್ಥ ಏನಾಯಿತೆಂದು : ಮಾನವ ಸಮಾಜದಲ್ಲಿ ಜೈವಿಕ ಸಾಮರ್ಥ್ಯ ಉಳ್ಳವರು, ಆರ್ಥಿಕವಾಗಿ ಯಶಸ್ವಿಯಾದವರು ಮತ್ತು ನೈತಿಕವಾಗಿ ಒಳ್ಳೆಯವರು, ಎಲ್ಲಾ ಒಬ್ಬರೇ! ಹಾಗಿಲ್ಲದವರು ಕೂಡ ಒಂದೇ ಬಣದವರಾಗಿಬಿಡುತ್ತಾರೆ. ಒಂದೇ ಮಾತಿನಲ್ಲಿ

ಸಂಗ್ರಹಿಸುವುದಾದರೆ, ಬಡವರೆಲ್ಲಾ ನೈತಿಕವಾಗಿ ಅತ್ಯಂತ ಕೀಳುಮಟ್ಟದವರು !!

ಇಷ್ಟೆಲ್ಲಾ ಕಸರತ್ತು ಸ್ಪೆನ್ಸರ್‌ಗೆ ಏಕೆ ಬೇಕಾಯಿತು ? ಉತ್ತರ ಸರಳವಾಗಿದೆ : ಖಾಸಗಿ ಆಸ್ತಿಯನ್ನು ಪವಿತ್ರವೆಂದು ಸಮರ್ಥಿಸಲು ವಿಕಾಸವಾದವನ್ನು ಬಳಸಬೇಕಾದರೆ ಜೈವಿಕ ಸಾಮರ್ಥ್ಯ, ಆರ್ಥಿಕ ಯಶಸ್ಸು ಮತ್ತು ನೈತಿಕ ಒಳ್ಳೆತನ ಎಂಬ ಮೂರು ಲಕ್ಷಣಗಳನ್ನು ಗುರುತಿಸಬೇಕು. ಆರ್ಥಿಕವಾಗಿ ಯಶಸ್ಸು ಗಳಿಸಿದಾತ ಜೈವಿಕವಾಗಿ ಸಮರ್ಥನಾಗಿಲ್ಲದಿದ್ದರೆ, ವಿಕಾಸವಾದದ "ನಿಯಮವು" ಆರ್ಥಿಕ ಯಶಸ್ಸನ್ನು ಅರ್ಥೈಸದೆಹೋಗುತ್ತದೆ. ಇವೆರಡೂ (ಸಾಮರ್ಥ್ಯ-ಯಶಸ್ಸು) ಇದ್ದವರು ನೈತಿಕವಾಗಿ ಒಳ್ಳೆಯವರಾಗಿಲ್ಲವೆಂದಾದರೆ ಅವರಲ್ಲಿರುವ ಆಸ್ತಿಯು ಅನೈತಿಕವಾಗಿ ಸಂಪಾದಿಸಿದ್ದು ಎಂದಾಗಿಬಿಡುತ್ತದೆ. ಶ್ರೀಮಂತರು ಮತ್ತು ಬಡವರು ಹೇಗಿದ್ದಾರೋ ಹಾಗೇ ಇರುವುದಕ್ಕೆ ಬೇಕಾದ ಬೌದ್ಧಿಕ ನೆಲೆಯನ್ನು ಸ್ಪೆನ್ಸರ್ ರಚಿಸಹೊರಟಿದ್ದಾನೆ ಮತ್ತು ಅವನ ಹಿಂದೆ ಹಿಂಡುಹಿಂಡು "ಸಿದ್ಧಾಂತಿಗಳು" ಅಂಡಲೆಯುತ್ತಿದ್ದಾರೆ.

ಮೊಟ್ಟಮೊದಲು ನಾವು ತಿಳಿಯಬೇಕಾದ ವಿಚಾರವೇನೆಂದರೆ ಜೈವಿಕ ಸಿದ್ಧಾಂತಗಳೆಲ್ಲಾ ಸಾಮಾಜಿಕ ಸಿದ್ಧಾಂತಗಳೂ ಆಗಿರುವುದಿಲ್ಲ ಎಂಬುದು. ಎರಡನೆಯದಾಗಿ, ವೈಜ್ಞಾನಿಕ ನಿರೂಪಣೆಗಳು ಕೆಲವು ಸಂಗತಿಗಳನ್ನಾಧರಿಸಿರುತ್ತವೆ; ಅವನ್ನೆಲ್ಲಾ ನೈತಿಕ ನಿರೂಪಣೆಗಳನ್ನಾಗಿ ಪರಿವರ್ತಿಸಲು ಬರುವುದಿಲ್ಲ. ಏಕೆಂದರೆ ಇಲ್ಲಿ ಮೌಲ್ಯಗಳು ಆಧಾರವಾಗಿರುತ್ತವೆ. ಆದ್ದರಿಂದ ಜೈವಿಕವಾಗಿ ಸಮರ್ಥರಾಗಿರುವ ಶ್ರೀಮಂತರು ನೈತಿಕವಾಗಿಯೂ ಸಮರ್ಥರಾಗಿರುತ್ತಾರೆಂಬ ಸಾಮಾನ್ಯೀಕರಣವು ಸಾಧ್ಯವಿಲ್ಲ. ಈ ಕನಿಷ್ಠ ತತ್ತ್ವವು ಸ್ಪೆನ್ಸರ್ ಮತ್ತು ಅವನ ಅನುಯಾಯಿಗಳಿಗೆ ಹೊಳೆಯದಿರುವುದು ಆಶ್ಚರ್ಯಕರ.

ಸ್ಪೆನ್ಸರ್ ಇತ್ಯಾದಿಗಳು 'ಅನಿವಾರ್ಯತೆ' ಎಂಬ ಪದವನ್ನು ಬಳಸುವಾಗ, ಮಾನವ ಪ್ರಯತ್ನಗಳು ಏನೇ ಇರಲಿ, ಹೇಗೇ ಇರಲಿ, ಕೆಲವು ಸಂಗತಿಗಳು ಯಥಾಪ್ರಕಾರ ಜರುಗಿಯೇ ತೀರುತ್ತವೆಂದು ಕಲ್ಪಿಸಿಕೊಳ್ಳುತ್ತಾರೆ. ಅವರ ಪ್ರಕಾರ ಸಾಮಾಜಿಕ ಅನಿವಾರ್ಯತೆಯೆಂದರೆ ಮಾನವನ ಸಂಪೂರ್ಣ ಅಸಹಾಯಕತೆ ಎಂಬರ್ಥ ಬರುತ್ತದೆ; ಸಾಮಾಜಿಕ ಯೋಜನೆ, ನಿಯಂತ್ರಣ, ಯಾವುದೂ ಸಾಧ್ಯವಿಲ್ಲವೆಂದು ಅವರ ಅಂಬೋಣ. ಜನಸಾಮಾನ್ಯರ ಸಮಸ್ಯೆಗಳಿಗೆ ಪರಿಹಾರವಿಲ್ಲವೆಂದು ಕೈಚೆಲ್ಲಿ ಕೂಡಬೇಕು, ಅಷ್ಟೆ. ಹಾಗಿದ್ದರೆ ಇಲ್ಲಿ ನೈತಿಕತೆಗೇನು ಕೆಲಸ ? ಪರಿಸರವಿಲ್ಲದೆ ಮತ್ತು ಅದನ್ನು ಬದಲಾಯಿಸಬಹುದು ಎಂಬ ಸಾಧ್ಯತೆ ಇಲ್ಲದೆ, ನೈತಿಕತೆಗೆ ಸ್ಥಾನವಿಲ್ಲ. ನೀವು ವಿಜ್ಞಾನಿಯಾಗಿ ಮನುಕುಲದ ಸೇವೆ ಮಾಡಬೇಕೆಂದು ಆಶಿಸುತ್ತೀರಿ, ಎಂದಿಟ್ಟುಕೊಳ್ಳಿ. ವಿಜ್ಞಾನಿಯಾಗಲು ತರಬೇತಿ ದೊರೆಯದಿದ್ದರೆ ಅಥವಾ ದೊರೆತರೂ ಅದನ್ನುಪಯೋಗಿಸಲು ಅವಕಾಶವಿಲ್ಲದಿದ್ದರೆ, ನಿಮ್ಮ ತೀರ್ಮಾನವು ಬಿದ್ದುಹೋಗುತ್ತದೆ. ಇದು ನಿಮ್ಮೊಬ್ಬರ ಕತೆಯಾಗದೆ ಸಮಾಜದಲ್ಲಿ ಎಲ್ಲರ ಮತ್ತು ಎಲ್ಲ ಆಯ್ಕೆಗಳ ಕತೆಯಾದರೆ ನೈತಿಕತೆಯೆಂಬುದು ಕುಸಿದುಬಿತ್ತು ಎಂದೇ ಅರ್ಥ. ಏನನ್ನೂ ಬದಲಾಯಿಸಲಾಗದಿದ್ದಾಗ ಯಾವ ತೀರ್ಮಾನವೂ ಅನಗತ್ಯ, ಯಾವ ಮೌಲ್ಯವೂ ನಿರರ್ಥಕ. ಅಂತಹ ಪ್ರಪಂಚ ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ. ಅದು ಸುಮ್ಮನೆ ಇದೆಯೆಂದಷ್ಟೇ ಹೇಳಬೇಕು.

ಸ್ಪೆನ್ಸರ್‌ನಂತೆ ನಾವೂ ಯೋಚಿಸುವುದಾದರೆ ಆಗ ನೈತಿಕ ಮಾಪನದ ಪ್ರಶ್ನೆಯೇ ಇರುವುದಿಲ್ಲ. ಸಮಾಜವೂ ಭೂಕಂಪ ಅಥವಾ ಧೂಮಕೇತುಗಳಂತೆ ನೈತಿಕೇತರ ವಸ್ತುವಾಗಿ

ಬಿಡುತ್ತದೆ. ಹೀಗಿರಬೇಕು ಅಥವಾ ಹೀಗಿರಬೇಕಾಗಿತ್ತು ಎಂಬ ಮಾತು ಆಗ ಅಪ್ರಸ್ತುತ. ಸಾಮಾಜಿಕ ಘಟನೆಗಳ ಬಗ್ಗೆ ಅಂತಹ ಧೋರಣೆಯನ್ನು ತಾಳುವವರು ಯಾರಾದರೂ ಇದ್ದಾರೆಯೆ ? ಅಂದರೆ, ಸ್ಪೆನ್ಸರ್ ತನ್ನ ವಾದವನ್ನು ತಾನೇ ನುಂಗಿ ಕೂರಬೇಕಾಗಿದೆ : ಬೇಕಾದರೆ ಶ್ರೀಮಂತರನ್ನು ಸಮರ್ಥರೆಂದು ಕರೆದುಕೊಳ್ಳಲಿ, ಆದರೆ ಅವರು ನೈತಿಕವಾಗಿ ಸಮರ್ಥರೆಂದು ಹೇಳಲು ತಾರ್ಕಿಕವಾಗಿ ಅಸಾಧ್ಯ. 'ಅನಿವಾರ್ಯತೆ' ಎಂಬುದು ಮಾನವ ಶಕ್ತಿಯ ಸೀಮಿತತೆಯನ್ನು ಸೂಚಿಸುವಂತೆ ಅದರ ಸಾಧ್ಯತೆಯನ್ನೂ ಸೂಚಿಸುತ್ತದೆ. "ನಾಳೆ ನಾನು ಹೀಗಾಗುತ್ತೇನೆ, ಸಮಾಜವು ಹೀಗಿರುತ್ತದೆ" ಎನ್ನಲು ಇದರಿಂದ ಶಕ್ಯ. "ಇಂತಹ ಫಲ ಪಡೆಯಲು ಹೀಗೆ ಮಾಡಬೇಕು" ಎಂಬ ತಿಳುವಳಿಕೆ ಅಥವಾ ಜ್ಞಾನವು ನಮ್ಮನ್ನು ಅಧೀರರನ್ನಾಗಿಸುವುದಿಲ್ಲ, ಬದಲಾಗಿ ಸಶಕ್ತರನ್ನಾಗಿಸುತ್ತದೆ. "ಅನಿವಾರ್ಯತೆ" ಎಂಬುದು ಕಾರ್ಯ-ಕಾರಣ ಸಂಬಂಧಕ್ಕೆ ಸೀಮಿತವಾಗಿದೆ; ಆ ಸಂಬಂಧವೇ ನಮ್ಮ ಸಫಲತೆಗಿರುವ ಹಾದಿ. ಇದನ್ನು ಗಮನಿಸದ ಸ್ಪೆನ್ಸರ್ ಎಡುವುದರಲ್ಲಿ ನಿಸ್ಸೀಮನೆನಿಸಿದ್ದಾನೆ, ಅಷ್ಟೆ. ಯಾವುದು ನೈತಿಕವಾಗಿ ಅಗತ್ಯವೋ ಅದು ಅಸಾಧ್ಯವೆಂದು ಹೇಳುವುದು ಸಮಾಜವನ್ನು ಯಥಾಸ್ಥಿತಿಯಲ್ಲಿ ಮುಂದುವರಿಸುವುದಕ್ಕೆ ಒಂದು ಕ್ರೂರ ಆಯುಧ. ಹಾಗೆ ಪ್ರತಿಪಾದಿಸುವವರಿಗೆ ಬದಲಾವಣೆ ಎಂಬುದೇ ಅಪಥ್ಯ, ಏಕೆಂದರೆ ಅದು ಅವರ ಮೂಲಕ್ಕೇ ಬರುತ್ತದೆ.

ಸಮರ್ಥರೆಲ್ಲಾ ಒಳ್ಳೆಯವರೆ ?

ಸ್ಪೆನ್ಸರ್‌ನ ವಾದದಲ್ಲಿ ಇನ್ನೊಂದು ಹುಳುಕಿದೆ. ಆತ ನೈತಿಕತೆಯನ್ನು ವಿಜ್ಞಾನದೊಳಕ್ಕೆ ತೂರಿಸಿದ, ಆದರೆ ಸಮಾಜವನ್ನು ವ್ಯಾಖ್ಯಾನಿಸುವಾಗ ಅದನ್ನು ಹೊರದೂಡಿದ. ಮೂಲಭೂತವಾಗಿ "ಸಮರ್ಥ" ಅಂದರೆ ಏನು ? ಪ್ಲೇಟೋ ಮತ್ತು ಅರಿಸ್ಟಾಟಲ್ ಅದನ್ನು ನೈತಿಕತೆಯ ಸೂಚಕವನ್ನಾಗಿ ಪರಿಭಾವಿಸಿಕೊಂಡಿದ್ದರು. (ವಾಲ್ಮೀಕಿಯು ಶ್ರೀರಾಮನನ್ನು ಸಮರ್ಥನೆನ್ನುವಾಗಲೂ ಇದೇ ಅರ್ಥವ್ಯಾಪ್ತಿ ಇದೆ). ಅಲ್ಲೆಲ್ಲಾ ಸಾಮರ್ಥ್ಯ ಮತ್ತು ಮೌಲ್ಯಗಳು ಜೊತೆಜೊತೆಗೇ ಹೋಗುತ್ತವೆ. ಡಾರ್ವಿನ್ನನ ವೈಜ್ಞಾನಿಕ ವಿಕಾಸವಾದದಲ್ಲಿ "ಸಾಮರ್ಥ್ಯ" ಎಂಬುದು ಮನುಷ್ಯ, ಸಸ್ಯ ಮತ್ತು ಪ್ರಾಣಿಗಳಿಗೆಲ್ಲಾ ಇರುವ ಲಕ್ಷಣ. ಈ ವೈಜ್ಞಾನಿಕ "ಸಾಮರ್ಥ್ಯ"ಕ್ಕೆ ನೈತಿಕ ಸಾಮಗ್ರಿಯೂ ಸೇರಿದೆಯೆಂದಾದರೆ ಆಗ ನಾವು 'ಒಳ್ಳೆಯ ಹಲ್ಲಿ' ಮತ್ತು 'ಕೆಟ್ಟ ಹಲ್ಲಿ' ಅಥವಾ 'ಒಳ್ಳೆಯ ಈಚಲು ಗಿಡ' ಮತ್ತು 'ಕೆಟ್ಟ ಈಚಲು ಗಿಡ' ಎಂದೆಲ್ಲಾ ವ್ಯವಹರಿಸಬೇಕಾಗುತ್ತದೆ. ನೈತಿಕ ಲಕ್ಷಣಗಳನ್ನು ಮಾನವರಿಗೆ ಅನ್ವಯಿಸುವುದು ಸ್ವೀಕೃತ ಪದ್ಧತಿ. ಮಾನವನಿಗೆ ಉಪಯುಕ್ತವಾದ್ದು, ಅಲ್ಲದ್ದು, ಎಂಬರ್ಥದಲ್ಲಿ ಬೇಕಾದರೆ ಅವನ್ನು ಪ್ರಾಣಿಗಳಿಗೆ ಮತ್ತು ಸಸ್ಯಗಳಿಗೆ ಅನ್ವಯಿಸಲು ಅಡ್ಡಿಯಿಲ್ಲ. ವಿಕಾಸವಾದದ ಪ್ರಕ್ರಿಯೆಯಲ್ಲಿ ನೈತಿಕತೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರಬಲ್ಲ ಮಾನವ ಆವಿರ್ಭವಿಸಿದ ಎನ್ನುವ ಮಟ್ಟಿಗೆ ವಿಕಾಸವಾದಕ್ಕೆ ನೈತಿಕತೆಯನ್ನು ಬೇಕಾದರೆ ಆರೋಪಿಸಿಕೊಳ್ಳಬಹುದು. ಹಲ್ಲಿಗಳ ಬಗ್ಗೆ ಹೇಳಬೇಕಾದರೆ ಅವು ಬದುಕುಳಿಯಲು ಬೇಕಾದ ಗುಣಗಳನ್ನು ಪಡೆದುಕೊಂಡವು ಎಂದಷ್ಟೇ ಹೇಳಬೇಕಾಗುತ್ತದೆ. ಅಂತಹ "ಗುಣಗಳು" ನೂರಾರಿವೆ : ದೈಹಿಕ ಶಕ್ತಿ, ವೇಗ, ಬುದ್ಧಿಮತ್ತೆ, ಸಂದರ್ಭಕ್ಕನುಗುಣವಾಗಿ ಬಣ್ಣ ಬದಲಾಯಿಸಿಕೊಳ್ಳುವುದು, ಸ್ವಾಭಾವಿಕ

ರಕ್ಷಣಾ ತಂತ್ರ (ಹಲ್ಲು, ದಂತ, ಪಂಜ, ಇತ್ಯಾದಿ), ಹೀಗೆ ಒಂದೇ ಎರಡೇ. ಎಲ್ಲಕ್ಕಿಂತ ಮುಖ್ಯವಾಗಿ ಫಲವಂತಿಕೆ ಇದೆ. ಅದಿಲ್ಲದಿದ್ದರೆ ಮೊಲಗಳು ಉಳಿಯುತ್ತಿದ್ದುವೆ ? ಸ್ಪೆನ್ಸರ್ ಇವನ್ನೆಲ್ಲಾ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಇನ್ನೊಂದು ಪ್ರಮುಖ ಗುಣವಿದೆ; ಅದನ್ನು ಡಾರ್ವಿನ್ ಹೇಳುತ್ತಾನೆ, ಸ್ಪೆನ್ಸರ್ ಹೇಳುವುದಿಲ್ಲ. ಅದೇ ಸಹಕಾರ. ತನ್ನ ಜಾತಿಯ ಪ್ರಾಣಿಗೆ ಅಪಾಯವಿದ್ದಾಗ ಇನ್ನೊಂದು ಪ್ರಾಣಿಯು ಸೂಚನೆ ನೀಡುವ ತಂತ್ರವನ್ನು ಕಲಿತಿದೆ. ದನಗಳು ಬೇರೆ ದನಗಳನ್ನು ನೆಕ್ಕಿ ನವೆ ಹೋಗಲಾಡಿಸುತ್ತವೆ, ಕೋತಿಗಳು ಪರಸ್ಪರ ಹೇನು ತೆಗೆದುಕೊಳ್ಳುತ್ತವೆ. ಸಹಕಾರವು ಆಕ್ರಮಣ ಮತ್ತು ಸ್ವ-ರಕ್ಷಣೆ, ಎರಡಕ್ಕೂ ಬೇಕು. ಇಂತಹ ಹತ್ತಾರು ಬೇರೆ ಗುಣಗಳೂ ಇದ್ದಾಗಲೇ ಉಳಿವು ಸಾಧ್ಯವಾಗುವುದು. ಈ ಗುಣಗಳು 'ಒಳ್ಳೆಯವೋ' ಅಥವಾ 'ಕೆಟ್ಟವೋ' ಎಂಬ ಪ್ರಶ್ನೆ ಬರುವುದಿಲ್ಲ. ಅವು ನೀಡುವ ಸೌಖ್ಯಕ್ಕೆ ಅನುಗುಣವಾಗಿ ಅವು ಮೌಲ್ಯಗಳೆನಿಸಿಕೊಳ್ಳುತ್ತವೆ. ನೈತಿಕತೆಯ ದೃಷ್ಟಿಯಿಂದ ಸ್ಯಾಮ್ಸನ್ ಶ್ರೇಷ್ಠನೋ ನ್ಯೂಟನ್ ಶ್ರೇಷ್ಠನೋ ಎಂಬ ಪ್ರಶ್ನೆಯನ್ನು ಹಾಕಿಕೊಳ್ಳಬೇಕಾಗಿಲ್ಲ. ಮುಖ್ಯ ವಿಷಯ ಬೇರೆಯೇ ಇದೆ : ಉಳಿವಿಗಾಗಿ ಅನುಕೂಲಕರವಾದ ಗುಣವು ನಿಜಕ್ಕೂ ಒಳ್ಳೆಯದೆನಿಸಿಕೊಳ್ಳಬೇಕಾದರೆ ಮೂಲತಃ ಉಳಿವೆಂಬುದು ಒಳ್ಳೆಯದಾಗಿರಬೇಕು. ವ್ಯಕ್ತಿಗಳು ತಮ್ಮ ಕ್ರಿಯೆಗಳಿಂದ ತಾವು ಉಳಿಯಲು ಅರ್ಹರೋ ಇಲ್ಲವೋ ಎಂಬುದನ್ನು ಸಾಬೀತುಪಡಿಸದಿದ್ದರೆ ಅಂತಹ ವ್ಯಕ್ತಿಗಳ ಉಳಿವು ವ್ಯರ್ಥ.

ಜೈವಿಕವಾಗಿ ಸಮರ್ಥವಾಗಿರುವುದೆಲ್ಲಾ ನೈತಿಕವಾಗಿ ಸಮರ್ಥವಾಗಿರಬೇಕಾಗಿಲ್ಲ ವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅದು ಆರ್ಥಿಕ ಸಾಮರ್ಥ್ಯಕ್ಕೂ ಅನ್ವಯಿಸುತ್ತದೆ. ಯಾವ ಗುಣವೂ ತಾನೇ ತಾನಾಗಿ ಆರ್ಥಿಕ ಯಶಸ್ಸನ್ನು ನೀಡುವುದಿಲ್ಲ. ಶಕ್ತಿ, ಬುದ್ಧಿಮತ್ತೆ, ಸಹಕಾರ ಇದ್ದಾಗ್ಯೂ ಆರ್ಥಿಕ ಯಶಸ್ಸು ಕಟ್ಟಿಟ್ಟ ಬುತ್ತಿಯಲ್ಲ. ಅಶಕ್ತನೂ ಮೂರ್ಖನೂ ಸ್ವಾರ್ಥಿಯೂ ಆದ ವ್ಯಕ್ತಿ ಆರ್ಥಿಕ ಯಶಸ್ಸು ಪಡೆಯಲು ಸಾಧ್ಯವೇ ಇಲ್ಲವೆಂಬುದು ಅನುಭವದಿಂದಲೇ ನಿರಾಕರಿಸಲ್ಪಟ್ಟಿದೆ. ಯಾವುದೇ ಗುಣವು ಆರ್ಥಿಕ ಯಶಸ್ಸಿಗೆ ಕಾರಣವಾಗುವುದು ಆಯಾ ಕಾಲದ ಸಾಮಾಜಿಕ ವ್ಯವಸ್ಥೆಯಿಂದಾಗಿ ಎಂಬುದು ಸತ್ಯ. ಪಶುಸಂಗೋಪನಾ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಫಲವಂತಿಕೆ ಬಹಳ ಮುಖ್ಯ. ಎಷ್ಟು ಮಕ್ಕಳಿದ್ದರೂ ಆದೀತು. ಆದರೆ ಇಂದಿನ ವ್ಯವಸ್ಥೆಯಲ್ಲಿ ಅದು ಅಷ್ಟೊಂದು ಮುಖ್ಯವಲ್ಲ. ಹೆಚ್ಚು ಮಕ್ಕಳೆಂದರೆ ಹೊರೆಯೂ ಆದೀತು.

ಸ್ಪೆನ್ಸರ್‌ನ ಸಿದ್ಧಾಂತವು ಮಣ್ಣುಮುಕ್ಕಿರುವುದು ಹೀಗೆ : ಜೈವಿಕ ಸಾಮರ್ಥ್ಯವನ್ನು ಆರ್ಥಿಕ ಮತ್ತು ನೈತಿಕ ಸಾಮರ್ಥ್ಯಗಳಿಗೆ ಥಳುಕುಹಾಕುವ ಮೂಲಕ. ಆದರೆ ಅದು ಶುದ್ಧ ಅತಾರ್ಕಿಕ ವಿಧಾನ. ಶ್ರೀಮಂತನು ಸಮರ್ಥ ಮತ್ತು ಬಡವನು ಅದಕ್ಷ ಎಂಬ ಮಾತು ಕೇವಲ ಅವಿವೇಕದ ಮಾತಾಗುತ್ತದೆ, ಪಕ್ಷಪಾತದ ಸೂಚನೆಯಾಗುತ್ತದೆ. ಯಾರನ್ನು ಸ್ಪೆನ್ಸರ್ ಸೋಮಾರಿ, ಅಸಮರ್ಥ, ಅವಿವೇಕಿ, ಎಂದೆಲ್ಲಾ ದೂಷಿಸುತ್ತಾನೋ ಅವರೆಲ್ಲಾ ಹಾಗಿದ್ದರೆ, ಅದು ಸಮಾಜದಲ್ಲಿ ಅವರಿಗೆ ದೊರೆತಿರುವ ಅಥವಾ ದೊರೆಯದೆ ಹೋಗಿರುವ ಸ್ಥಾನದ ಕಾರಣದಿಂದಾಗಿಯೇ ಎಂಬುದನ್ನು ಮನನ ಮಾಡಿಕೊಳ್ಳಬೇಕು. ಅದಾವುದೂ ಆನುವಂಶಿಕವಾದ ಗುಣವಲ್ಲ. ಆದ್ದರಿಂದ ಹೀಗೆ ಹೇಳಬಹುದು : ಉದ್ಯೋಗ ಇಲ್ಲದ್ದರಿಂದ ಸೋಮಾರಿಯಾಗಿದ್ದಾನೆ, ಮಾನ-ಮೇಷ ಎಣಿಸುವ

ಅವಿವೇಕವು ಸ್ಪರ್ಧೆಯಲ್ಲಿ ಜಗಿಯಲು ಆಗದ್ದರಿಂದ ಬರುತ್ತದೆ, ಮತ್ತು ತರಬೇತಿಗೆ ಅವಕಾಶವಿಲ್ಲದ್ದರಿಂದ ಅಸಾಮರ್ಥ್ಯ ಉಂಟಾಗುತ್ತದೆ. (ವಿದ್ಯೆ ಮತ್ತು ಸಮಾನತೆಯನ್ನು ನೀಡದೆ ನಮ್ಮ ದೇಶದ ಬಹುದೊಡ್ಡ ವಿಭಾಗಗಳನ್ನು ಶತಮಾನಗಳ ಕಾಲ ಅಸಮರ್ಥರನ್ನಾಗಿಯೇ ಇಟ್ಟಿದ್ದ ಸಾಮಾಜಿಕ ವ್ಯವಸ್ಥೆಯನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು). ಒಬ್ಬ ಬುದ್ಧಿವಂತ – ಕುಶಲ – ತಂತ್ರಜ್ಞ ಬರುವುದು ವಿಕಾಸವಾದದ ಮೂಸೆಯಿಂದಲ್ಲ, ಬದಲಾಗಿ ತರಬೇತಿಯ ಮೂಸೆಯಿಂದ. ಕೇವಲ 45 ವಯಸ್ಸಿನ ತಂತ್ರಜ್ಞನನ್ನು ನಿರುದ್ಯೋಗಿಯನ್ನಾಗಿ ಮಾಡುವ ವ್ಯವಸ್ಥೆಯಿದ್ದರೆ ಅದು ವಿಕಾಸವಾದದ ಕೊಡುಗೆಯಲ್ಲ; ಅದು ಜನವಿರೋಧಿ ಸಾಮಾಜಿಕ ವ್ಯವಸ್ಥೆಯ ಶಾಪ.

ಇನ್ನೊಂದಂಶವನ್ನು ಗಮನಿಸಿ : ಶ್ರೀಮಂತನ ಸಂಪತ್ತು ಮತ್ತು ಪ್ರಬಲರ ಅಧಿಕಾರಕ್ಕೆ ಮೂಲಾಧಾರವೇ ಬಡವರ ಮತ್ತು ದೀನರ ಅಶಕ್ತತೆ. ಶ್ರೀಮಂತರಿಗೆ ಲಾಭ ಬರುವುದು ದುಡಿಮೆಗಾರರ ದುಡಿಮೆಯಿಂದ. ದುಡಿಮೆಗಾರನಿಲ್ಲದಿದ್ದರೆ ಲಾಭವು ಆಕಾಶದಿಂದ ಸುರಿಯುತ್ತಿತ್ತೆ ? ಸ್ಪೆನ್ಸರ್ ಬಡವರ ಅಸಾಮರ್ಥ್ಯವನ್ನು ಹಂಗಿಸುತ್ತಾನೆ, ಆದರೆ ಅವನ ಸಾಮರ್ಥ್ಯ ಶ್ರೀಮಂತರ ಲಾಭ ಎಲ್ಲಿಂದ ಬರುತ್ತದೆಂದು ಅರ್ಥಮಾಡಿಕೊಳ್ಳುವುದಿಲ್ಲ. "ಸಮರ್ಥ"ರಿಗೆ "ಅಸಮರ್ಥ"ರ ಅವಶ್ಯಕತೆ ಇದೆ; ಪರಾವಲಂಬಿ ಜೀವಿಗೆ ಆತಿಥೇಯನೊಬ್ಬ ಬೇಕಾಗಿರುವಂತೆ. ಆದರೆ "ಅಸಮರ್ಥ"ನಿಗೆ "ಸಮರ್ಥ"ನ ಅವಶ್ಯಕತೆ ಇಲ್ಲ; ಭಿಕ್ಷೆ ಬೇಡದೆ ಜೀವಿಸುವ ಮಾರ್ಗ "ಅಸಮರ್ಥ"ನೆದುರು ತೆರೆದುಕೊಳ್ಳುತ್ತದೆ.

ಸಾಮರ್ಥ್ಯ ಮತ್ತು ಫ್ಯಾಸಿಸಂ

1850ರಿಂದಲೂ ಒಂದು ಪ್ರಚಾರ ಸತತವಾಗಿ ನಡೆಯುತ್ತಾ ಬಂದಿದೆ; ಎಲ್ಲಾ ಜೈವಿಕ ಅಸಮಾನತೆಯ ವಿವಿಧ ವ್ಯಾಖ್ಯಾನಗಳೇ. ಮೊದಲನೆಯ ಮಹಾಯುದ್ಧದ ತರುವಾಯದಲ್ಲಿ (1920ರ ದಶಕದಲ್ಲಿ) ಅದನ್ನು ರಾಷ್ಟ್ರೀಯ ಭಾವನೆಗಳನ್ನು ಪ್ರಚೋದಿಸಲು ಬಳಸಿ ರಾಷ್ಟ್ರ, ಜನಾಂಗ, ಜಾತಿ ಎಲ್ಲವನ್ನೂ ಒಂದೇ ಗುಡ್ಡೆಗೆ ಸೇರಿಸಿಬಿಡಲಾಯಿತು. ಒಂದು ಇನ್ನೊಂದರಿಂದ ಹೇಗೆ ಭಿನ್ನವೆಂಬ ಪರಿವೆಯನ್ನು ಸಂಪೂರ್ಣವಾಗಿ ತ್ಯಜಿಸಲಾಯಿತು. ಒಬ್ಬ ಜೀವಶಾಸ್ತ್ರಜ್ಞನಾದ ಸ್ಯಾಮ್ಯುಯೆಲ್ ಹೋಮ್ಸ್ ಬರೆದದ್ದು ಇದು ಎಂದು ನಂಬಬಲ್ಲಿರಾ ? "ನಮ್ಮ ಅನೇಕ ವಲಸೆಗಾರರು ಪ್ರಶಸ್ತವಾದ ಕುಲಗಳಿಂದ ಬಂದಿದ್ದಾರೆ, ನಿಜ; ಆದರೆ ಅವರೆಲ್ಲಾ (ಉದಾಹರಣೆಗೆ, ಗ್ರೀಕರು, ದಕ್ಷಿಣದ ಇಟಾಲಿಯನ್ನರು, ಪೋರ್ಚುಗೀಸರು, ಸಿರಿಯನ್ನರು, ಟರ್ಕರು) ನಮ್ಮ (ಸ್ಕಾಂಡಿನೇವಿಯಾದ) ನಾರ್ಡಿಕ್ ಕುಲದವರೊಡನೆ ಬೌದ್ಧಿಕವಾಗಿ ಸಮಾನರಾಗಬಹುದೇ ಎಂಬ ಸಂಶಯ ನನಗಿದೆ." ಒಬ್ಬ ವಿಜ್ಞಾನಿಯೇ ಹೀಗೆ ಹೇಳಬಹುದಾದರೆ ವಿಜ್ಞಾನಿಯೂ ಅಲ್ಲದ, ವಿವೇಕಿಯೂ ಅಲ್ಲದ ಹಿಟ್ಲರ್ ಎಂಬುವನೊಬ್ಬ ಅಂಥದೇ ಮಾತುಗಳನ್ನು ಹೇಳುವುದಾದಲ್ಲಿ ಆಶ್ಚರ್ಯವೆಲ್ಲಿಯದು ?

1930ರ ದಶಕದ ಮಧ್ಯಭಾಗದಲ್ಲಿ ಇಡೀ ಮನುಕುಲಕ್ಕೆ ಸಂಬಂಧಿಸಿದಂತೆ ನಿರಾಶಾಭಾವನೆಯು ಪಸರಿಸಿತ್ತು. ಜೈವಿಕ ಅಂಶಗಳಾವುವೂ ಬದಲಾಗಿರಲಿಲ್ಲ. ಆದರೆ ಹತಾಶೆಯ ಸಂದರ್ಭದಲ್ಲಿ ಹತಾಶೆಯ ತೀರ್ಮಾನಗಳು ಮುಂದೆಬಂದವು. ಸಿರಿಯನ್ನರು, ಟರ್ಕರು, ಮುಂತಾದವರೊಡನೆ ಇಡೀ ನಾಗರಿಕ ಸಮಾಜವನ್ನು ಸಮೀಕರಿಸಲಾಯಿತು.

ಎಲ್ಲರನ್ನೂ ತುಚ್ಛವಾಗಿ ಕಾಣುವ ಹೊಸ, ಆದರೆ ಕೆಟ್ಟ, ಸಂಪ್ರದಾಯ ಆರಂಭವಾಯಿತು. (ಬೇರೆ ಬೇರೆ ದೇಶಗಳಲ್ಲಿ ಯಾರನ್ನು ತುಚ್ಛರನ್ನಾಗಿ ಕಾಣಬೇಕೆಂಬುದಕ್ಕೆ 21ನೆಯ ಶತಮಾನವು ನೂರಾರು ನಿದರ್ಶನಗಳನ್ನು ನೀಡಿದೆ). ಸ್ಪೆನ್ಸರ್ ಹೇಳಿದ್ದುದು ನೆನಪಿದೆಯೆ ? "ಯಾರನ್ನು ಕಿತ್ತೊಗೆಯಬೇಕೋ ಅದು ಸಾಮಾಜಿಕ ಸುಧಾರಣೆಗಳಿಂದಾಗಿ ಮುಂದೂಡಲಾಗುತ್ತದೆ," ಎಂದಿದ್ದ ಅವನು. ಅವನ ಬಯಕೆ ಸಿದ್ಧಿಸುವ ಕಾಲ ಬಂದಿತೆಂದು ತೋರುತ್ತದೆ, ಆದ್ದರಿಂದ "ಕಿತ್ತೊಗೆಯುವ ಕೆಲಸ"ವನ್ನು ತ್ವರಿತಗೊಳಿಸಲಾಯಿತು ! "ಅಸಮರ್ಥ"ರನ್ನು ಆದಷ್ಟು ಬೇಗ ವಿಷಾನಿಲದ ಗುಂಡಿಗಳಿಗೆ ತಳ್ಳುವುದು ಒಂದು ಪದ್ಧತಿಯಾಯಿತು !! ಅದೇ ವಿಜ್ಞಾನಿ ಡಾ॥ ಹೋಮ್ಸ್ ಬಡಬಡಿಸಿದ, "ಪ್ರಕೃತಿಯು ಯಾರಿಗೆ ಅಪೇಕ್ಷಣೀಯ ಶಕ್ತಿ ಸಾಮರ್ಥ್ಯವನ್ನು ನೀಡಿಲ್ಲವೋ ಅಂಥವರ ಜನಾಂಗೀಯ ಆತ್ಮಹತ್ಯೆಗೆ ಪ್ರೇರಣೆ ನೀಡಲು ಏನಾದರೊಂದು ಮಾರ್ಗ ಕಂಡುಕೊಳ್ಳಬೇಕು" ಎಂದು. (ಹೋಮ್ಸ್ ಪಡೆದಿರುವ ಸಾಮರ್ಥ್ಯವನ್ನು ಅಪೇಕ್ಷಣೀಯವಲ್ಲವೆಂದು ತೀರ್ಮಾನಿಸಿದರೆ ಅವನ ಜನಾಂಗವು ಹತ್ಯೆ ಮಾಡಿಕೊಳ್ಳುತ್ತದೆಯೆ ಮತ್ತು ಯಾವುದು ಅಪೇಕ್ಷಣೀಯವೆಂದು ನಿರ್ಧರಿಸುವವರು ಯಾರು ? ತಾವು ಮಾತ್ರ ಉಳಿಯಬೇಕು, ಇತರರು ಹತರಾದರೆ ಪರವಾಗಿಲ್ಲವೆಂಬ ಧೋರಣೆ ಇದು). ಡಾ॥ ಅಲೆಕ್ಸಿಸ್ ಕ್ಯಾರೆಲ್ ಎಂಬುವನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾನೆ. ಅವನ ಪ್ರಕಾರ ಆಧುನಿಕ ನಾಗರಿಕತೆಯು ಆರೋಗ್ಯ, ಆಹಾರ, ಆಸ್ಪತ್ರೆ, ವಸತಿ, ಮುಂತಾದುವನ್ನು ಕಲ್ಪಿಸಿಕೊಟ್ಟು "ಅನೇಕ ಕಳಪೆ ಲಕ್ಷಣಗಳ ಜನರನ್ನು" ಬಾಳಲು ಬಿಟ್ಟಿದೆ. "ಇಂತಹ ದುರ್ಬಲರು ಹಾಗೂ ಅವರ ಸಂತತಿಯವರು ಬಿಳಿಯ ಜನಾಂಗಗಳು ಕ್ಷೀಣಿಸಲು ಕಾರಣರಾಗಿದ್ದಾರೆ. ಕೃತಕವಾಗಿ ಆರೋಗ್ಯವನ್ನು ಕಾಪಾಡುವುದನ್ನು ತೊರೆದು ಪ್ರಾಕೃತಿಕ ಆರೋಗ್ಯದ ಬೆನ್ನುಹತ್ತುವುದು ಉಚಿತವಾಗಿರುತ್ತದೆ." (ಅಂದರೆ, "ಸಾಯಲು ಯೋಗ್ಯರಾದವರನ್ನು" ಸಾಯಿಸಿ ಇಲ್ಲವೆ ಸಾಯಲು ಬಿಡಿ, ಎಂದರ್ಥ). ಈ ಖ್ಯಾತನಾಮನಾದ ಕ್ಯಾರೆಲ್ ಅಂಥವರು ನೇರವಾಗಿ ಹತ್ಯೆಗಳಲ್ಲಿ ಭಾಗವಹಿಸದಿದ್ದರೂ ಅದಕ್ಕೆ ಪೂರ್ವಭಾವಿಯಾಗಿ ಅಗತ್ಯವಾದ ಸೈದ್ಧಾಂತಿಕ ನೆಲೆಯನ್ನು ಗಟ್ಟಿಗೊಳಿಸಿಕೊಡುತ್ತಾರೆ. ಕ್ಯಾರೆಲ್ ಉಪದೇಶಿಸಿದ, ಅದನ್ನು ಹಿಟ್ಲರ್ ಕಾರ್ಯಗತಗೊಳಿಸಿದ. (ಆಮೇಲೆ ಹಿಟ್ಲರ್ ಜೊತೆಗೆ ಲಿಂಡನ್ ಜಾನ್‌ಸನ್, ಜಾರ್ಜ್ ಬುಷ್, ಎಲ್ಲಾ ಸೇರಿಕೊಳ್ಳುತ್ತಾರೆ. ವಿಯೆಟ್ನಾಂ ಮತ್ತು ಇರಾಕ್ ನರಕವಾಗಿದ್ದು ಇವರ ಸಾಹಸದಿಂದಲೇ ತಾನೆ !). ಹಿಟ್ಲರ್ ನಡೆಸಿದ್ದನ್ನು "ಜನಾಂಗೀಯ ಹತ್ಯೆ" ಎನ್ನುತ್ತಾರೆ. ಒಂದು ಘೋರ ಪಾತಕಕ್ಕೆ ನವಿರಾದ ಹೆಸರೊಂದು ಕೇಡು! ಖಾರ್ಕೊವ್‌ನಲ್ಲಿ ನಡೆಸಲಾದ ವಿಚಾರಣೆಯಲ್ಲಿ ಜರ್ಮನಿಯ ಗೂಢಚಾರ ಪೊಲೀಸ್‌ನ ರೆಟ್ಸ್ ಲಾಫ್ ಎನ್ನುವವನು ಹೇಳಿದ್ದ : "ರಷ್ಯನರು, ವಿಶೇಷತಃ ರಷ್ಯನ್ ಜನಾಂಗದವರು, ಕೆಳಮಟ್ಟದವರೆಂದು ನನಗೆ ಹೇಳಿಕೊಡಲಾಗಿತ್ತು. ಅವರಲ್ಲಿ ಬಹುಮಂದಿಯನ್ನು ಕೊಲ್ಲುವುದು ಸೂಕ್ತ, ಮಿಕ್ಕವರನ್ನು ಜರ್ಮನಿಯ ಭೂಮಾಲಿಕರಿಗೆ ಗುಲಾಮರನ್ನಾಗಿ ಮಾಡಿಕೊಳ್ಳಬೇಕು, ಎಂದೂ ಉಪದೇಶಿಸಿದ್ದರು." ಅದಕ್ಕಾಗಿ ನಾಝಿಗಳು ಅನುಸರಿಸಿದ ಅಮಾನವೀಯ ಕ್ರಮಗಳನ್ನು ಇಲ್ಲಿ ಪಟ್ಟಿ ಮಾಡಬೇಕಾಗಿಲ್ಲ. (ಆದರೆ, ಮುಂದೊಂದು ದಿನ ನಮ್ಮ ದೇಶದ ರಾಮಸೇನೆಯೋ, ಶಿವಸೇನೆಯೋ, ಬಜರಂಗಸೇನೆಯೋ ಇಂಥವೇ ಉಪದೇಶ ಸಾರಗಳನ್ನು ಸ್ಮರಿಸುವಂತಾಗಬಾರದೆಂದು ಆಶಿಸಬೇಕಾಗಿದೆ. ಏಕೆಂದರೆ ಜನಾಂಗೀಯ

ದ್ವೇಷವು ಕ್ರಮೇಣ ಜನಾಂಗೀಯ ಹತ್ಯೆಯಲ್ಲಿ ಪರ್ಯವಸಾನವಾಗುವ ಅಪಾಯವಿದೆ). ಹೋಮ್ಸ್-ಕ್ಯಾರೆಲ್ ಮತ್ತು ಹಿಟ್ಲರ್ ನಡುವೆ ಒಂದು ಚಿಕ್ಕ ಕಾಸಿಡುವಷ್ಟು ಅಂತರ ಸಹ ಇಲ್ಲ. ಅಂತೆಯೇ, ಸ್ಪೆನ್ಸರ್‌ನ ಕಪಟ-ಡಾರ್ವಿನ್‌ವಾದ ಮತ್ತು ಫ್ಯಾಸಿಸ್ಟ್ ಸಿದ್ಧಾಂತದ ನಡುವೆ ಸ್ಪೆನ್ಸರ್‌ನ ಹೊಲಸು ಪುಸ್ತಕದ ಒಂದು ಪುಟವನ್ನು ಹರಿದಿಡುವಷ್ಟು ಅಂತರ ಸಹ ಇಲ್ಲ.

1848ರ ನಂತರ ನಾವು 160 ವರ್ಷಗಳಷ್ಟು ಕಾಲ ಸಾಗಿಬಂದಿದ್ದೇವೆ. ಅಂದಿನ ಅಮಿತೋತ್ಸಾಹದ ಛಾಯೆ ಕಂದಿಹೋಗಿರುವಂತೆ ತೋರಬಹುದು. ಅದರ ಜಾಗದಲ್ಲಿ ಗಾಢವಾದ ಕತ್ತಲೆ ಆವರಿಸಿದೆ. ಆಧುನಿಕ ಇತಿಹಾಸದ ರಹಸ್ಯವನ್ನು ಅರಿತಿರುವವರು ಯಾರೂ ಇದರಿಂದ ಹತಾಶರಾಗುವುದಿಲ್ಲ, ಕಂಗಾಲಾಗುವುದಿಲ್ಲ. ಆ ರಹಸ್ಯವೇನು ? ಜನಸಾಮಾನ್ಯರು ಮುನ್ನೋಟದಿಂದ ಮುಂದಕ್ಕೆ ಹೆಜ್ಜೆಗಳನ್ನು ಹಾಕುತ್ತಲೇ ಇರುತ್ತಾರೆಂಬುದು ಆ ರಹಸ್ಯ. ಆ ಹೆಜ್ಜೆಗಳಡಿಯಲ್ಲಿ ಸ್ಪೆನ್ಸರ್, ಹೋಮ್ಸ್, ಕ್ಯಾರೆಲ್ ಮತ್ತು ಅವರ ಬೌದ್ಧಿಕ ಅನೈತಿಕ ಅನುಯಾಯಿಗಳೆಲ್ಲಾ ಮಣ್ಣುಪಾಲಾಗುವುದು ಖಚಿತ. ನಾಜಿ ದೈತ್ಯರನ್ನು ಮಾನವಕುಲವು ಮಟ್ಟಹಾಕಿತು, ವಿಯೆಟ್ನಾಂ ವೀರರು ಅಮೆರಿಕಾವನ್ನು ಹೊಡೆದಟ್ಟಿದರು. ಎಲ್ಲ ನಿರಂಕುಶ ಪ್ರಭುಗಳ ಭವಿಷ್ಯವೂ ಅದೇ ಆಗಿರುತ್ತದೆ. ಹೋರಾಟವು ವಿಜಯವಾಗಿ ಮಾರ್ಪಡುತ್ತದೆ ಮತ್ತು ಅರಣ್ಯದ ಕಟ್ಟುಕತೆಗಳು ನಾಗರಿಕ ಸಂಗತಿಯಾಗಿ ಪರಿವರ್ತನೆಗೊಳ್ಳುತ್ತವೆ.

ಮನುಷ್ಯನು ವಾನರನಾಗಿದ್ದ, ಆದರೆ ಈಗವನು ಜ್ಞಾನ ಪಡೆದ ವಾನರನಾಗಿದ್ದಾನೆ. ಅವನು ಹೊಸ ವಿಶ್ವವನ್ನು ಕಟ್ಟುವುದರಲ್ಲಿ ನಿರತನಾಗಿದ್ದಾನೆ, ಸಫಲನಾಗುತ್ತಾನೆ.

❑❑

4. ಜನಾಂಗೀಯ ತಾರತಮ್ಯವು ಸಹಜವೆಂಬ ಅವಿವೇಕ

ಯಾವುದೋ ಔತಣಕೂಟ. ಸ್ವಲ್ಪ ಶ್ರೀಮಂತರ ಮೋಜೆಂದರೂ ಆದೀತು. ಅಂಥವರು ಸುಮ್ಮನೆ ಕೂತು ಉಣ್ಣುವುದಿಲ್ಲ. ಏನೋ ಗಹನವಾದ ವಿಷಯದ ಚರ್ಚೆ ಇಲ್ಲದಿದ್ದರೆ ಗಂಟಲ ಮಾಂಸಖಂಡಗಳಿಗೆ ಒಗ್ಗುವುದಿಲ್ಲ. ಆದರೆ ಎಷ್ಟೋ ಬಾರಿ ಅದು ಒಣಚರ್ಚೆಯಾಗಿ ಊಟ ಮತ್ತು ಮಾತು ಸುತ್ತಿಸುತ್ತಿ ಗಿರಕಿ ಹೊಡೆಯುತ್ತಿರುತ್ತವೆ. ಅಂಥದೊಂದು ಸಂದರ್ಭದಲ್ಲಿ ರುಚಿಕರ ಮಾಂಸದ ತುಂಡೊಂದನ್ನು ಬಾಯಿಗಿರಿಸಿ ಕೊಳ್ಳುತ್ತಾ ಪಕ್ಕದಲ್ಲಿ ಕೂತಿದ್ದವನೆಂದ: "ನೋಡಿ, ಅವರು ಎಲ್ಲೆಡೆ ತೂರಿಕೊಳ್ಳುತ್ತಿದ್ದಾರೆ." ರಸವತ್ತಾದ ಊಟದ ಮಧ್ಯೆ ರಸವತ್ತಾದ ಮಾತು ಆತನಿಗೆ ರುಚಿಸುತ್ತಿತ್ತು.

ಆರಂಭದಲ್ಲಿ ಸೂಪ್ ಕುಡಿಯುವಾಗ ಇರಾನ್ ಕ್ಷೇಮಕರವಾದ ದೇಶವೇ ಎಂಬ ಮಾತು ಹರಿದಿತ್ತು. ಆಮೇಲೆ ಗರಿಗರಿ ಮಾಂಸದ ತಟ್ಟೆಗಳು ಬಂದಾಗ ಎದುರಿಗಿದ್ದಾಕೆ ಎಷ್ಟು ಸ್ವಾದಿಷ್ಟವಾದ ಊಟವೆಂದು ಲೊಚಕೆ ಹೊಡೆಯುತ್ತಿದ್ದಳು. ನೋಡಿದರೆ ತಾನು ತಿನ್ನುತ್ತಿದ್ದ ಮಾಂಸವು ಯಾವ ಪ್ರಾಣಿಯದೋ ಅದನ್ನೇ ಹೋಲುವ ಮುಖಭಾವ. "ಈಗೀಗ ಅಡಿಗೆ ಮಾಡುವುದಕ್ಕೇ ಬರದ ಜನ ತುಂಬಿಬಿಟ್ಟಿದ್ದಾರೆ" ಎಂದಳು.

ಅದೇನೆನಿಸಿತೋ, ನಂತರ ಬೇರೊಂದು ಉದ್ಗಾರವೆತ್ತಿದಳು: "ಈಗೀಗ ನೋಡಿ, ಅವರೆಲ್ಲಾ ಕಾರ್ಖಾನೆಗಳಲ್ಲಿ ನೌಕರಿ ಹೊಡೆದುಕೊಳ್ಳುತ್ತಿದ್ದಾರೆ. ತಮ್ಮ ನಿಗದಿತ ಸ್ಥಾನವೇನೆಂಬ ಪರಿವೆಯೇ ಇಲ್ಲದ ಜನ!"

ನಾನು ಕೇಳಿದೆ, "ಹೌದೆ? ಯಾರನ್ನು ಕುರಿತು ಹೇಳಿದಿರಿ?" ಎಂಥ ಮೂರ್ಖ ಅಂದುಕೊಂಡಳೋ ಏನೋ, ನನ್ನೊಡನೆ ಮಾತಾಡುವುದನ್ನು ನಿಲ್ಲಿಸಿ ಪಕ್ಕದಲ್ಲಿ ಕೂತಿದ್ದ ಯಜಮಾನಿತಿ ಜೊತೆ ಹರಟಲಾರಂಭಿಸಿದಳು. ನನ್ನ ಪಕ್ಕದಲ್ಲಿದ್ದವನು ಈಗ ಬಾಯಿಹಾಕಿದ. ಅಪಾರ ಜ್ಞಾನದ ಖನಿ ತಾನೆಂದು ಬೀಗುತ್ತಿದ್ದುದು ಸ್ಪಷ್ಟವಾಗಿತ್ತು.

ಅವನೆಂದ: "ನಿಜ ನೋಡಿ, ನಿನ್ನೆ ರೆಕ್ಸ್‌ನಲ್ಲಿ ಊಟಕ್ಕೆ ಹೋಗಿದ್ದೆ. ಅಲ್ಲಿ ಅವರೆಲ್ಲಾ ಅದೆಷ್ಟು ಮಂದಿ ತುಂಬಿಕೊಂಡಿದ್ದರು ಗೊತ್ತೇ"?

"ಅವರೆಂದರೆ ಯಾರು?" ಎಂದು ಕೇಳಿದೆ.

"ಅದೇ, ಆ ಯಹೂದಿಗಳಿದ್ದಾರಲ್ಲ, ಅವರು. ಎಲ್ಲೆಲ್ಲೂ ಅವರೇ ನುಗ್ಗುತ್ತಿದ್ದಾರೆ."

"ಅಲ್ಲಾ ಸ್ವಾಮಿ, ಹಾಗೆ ಅವರು ಬರಬಾರದೆಂಬುದಕ್ಕೆ ಕಾರಣವೇನಾದರೂ ಉಂಟೆ?"

ಅವನ ಅಚ್ಚರಿಗೆ ಎಲ್ಲೆಯೇ ಇರಲಿಲ್ಲ. ಬಾಯಿ ತೆಗೆದಿದ್ದವನು ಬಾಯಿ ಅಗಲಿಸುತ್ತಲೇ ಹೋದ. ಪುಷ್ಕಲವಾದ ಮಾಂಸದ ತುಂಡೊಂದು ಗಂಟಲಲ್ಲಿ ಸಿಕ್ಕಿಹಾಕಿಕೊಂಡು ಬಿಟ್ಟಿತೋ ಏನೋ ಎನಿಸುವಂತಾಯಿತು. ಕೂಡಲೆ ಬಾಯಿ ಮುಚ್ಚಿ ಎಲ್ಲಾ ಅಗಿದು

ನುಂಗಲು ಆರಂಭಿಸಿಬಿಟ್ಟ. ಮರುಮಾತೇ ಹೊರಡಲಿಲ್ಲವಲ್ಲ ಏಕೆ ಎಂದು ನಾನು ಗರ ಹೊಡೆದವನಂತೆ ನೋಡುತ್ತಾ ಕುಳಿತೆ.

* * *

ಅದು ನಿಮ್ಮ ದೇಶದ ಮಾತಲ್ಲ ಬಿಡಿ. ಅದು ಅಮೇರಿಕಾದ್ದು. ನಿಮ್ಮ ಖಾನಾವಳಿಯಲ್ಲೂ ಅಂತಹ ಸಂಭಾಷಣೆ ಬೇರೊಂದು ರೀತಿಯಲ್ಲಿ ನಡೆಯುತ್ತಿರುತ್ತದೆ. ಆದರೆ ಅಮೆರಿಕಾದ ವೈಖರಿ ತುಸು ಭಿನ್ನ. ಅಲ್ಲಿ ಅಧ್ಯಕ್ಷೀಯ ಚುನಾವಣೆ ನಡೆಯಬೇಕಾದರೆ ಅದೊಂದು ದೊಡ್ಡ ಸರ್ಕಸ್ ತರಹ ಇರಬೇಕೆಂಬ ಸಂಪ್ರದಾಯವಿದೆ. ಸಮಸ್ಯೆಗಳನ್ನು ಸ್ವಲ್ಪ ಉಲ್ಲಾಸದಿಂದ ಎದುರಿಸಬೇಕೆಂಬುದೇನೋ ಚೆನ್ನು; ಹಾಗೆ ನೋಡಿದರೆ ಅವರ ರಾಷ್ಟ್ರೀಯ ಸ್ವಭಾವವೇ ಉಲ್ಲಾಸಮಯ. ಚುನಾವಣೆ ಎಂದರೆ ಗಂಭೀರವಾದ ವಿಷಯ. ಅದರಲ್ಲಿ ಗಾಢ ಸಂಪ್ರದಾಯವಿದೆ. ಅಭ್ಯರ್ಥಿಗಳು, ವಿಶೇಷತಃ ವಿರೋಧಪಕ್ಷದ ಅಭ್ಯರ್ಥಿಗಳು, ತಿಪ್ಪರಲಾಗ ಹಾಕುವುದು, ಜೋಕರ್‌ಗಳಂತಿರುವುದು, ಕೆಲವೊಮ್ಮೆ ನಾಟಿವೈದ್ಯರಂತೆ ನಟಿಸುವುದು, ಇದರಲ್ಲೆಲ್ಲಾ ಪರಿಣತಿ ಹೊಂದಿರಬೇಕು.

1944ರಲ್ಲಿ ಅಂಥದೊಂದು ಚುನಾವಣೆ ನಡೆದಿತ್ತು. ಅದರ ಹಿಂದಿನ ಚುನಾವಣೆಗಳಿಗಿಂತ ಅದು ಸಾಕಷ್ಟು ಭಿನ್ನವಾಗಿತ್ತು. ತಿಪ್ಪರಲಾಗ, ಜೋಕರ್ ವೇಷಭೂಷಣ, ನಾಟಿ ಔಷಧಿಯ ಲವಾಜಮೆ, ಎಲ್ಲವೂ ವಿಪರೀತದ ಮಟ್ಟ ಮುಟ್ಟಿತ್ತು. ಆ ಗಲಾಟೆಯಲ್ಲಿ ಹಿಟ್ಲರನ ಮುಂಚೆ ಜರ್ಮನಿಯಲ್ಲಿದ್ದ ರಾಜಕೀಯದ ಛಾಯೆ ಸ್ಪಷ್ಟವಾಗಿ ತೋರಿಬರುವಂತಿತ್ತು, ಅಷ್ಟು ದೊಡ್ಡ ಗುಸುಗುಸು ಮತ್ತು ಗೊಂದಲ.

ಆಗ್ಗೆ ಅಮೆರಿಕಾದ ಅಧ್ಯಕ್ಷ ರೂಸ್‌ವೆಲ್ಟ್ ಆಗಲೆ ಮೂರು ಬಾರಿ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. ಅಧ್ಯಕ್ಷನಲ್ಲದೆ ಆತ ಅಮೆರಿಕಾದ ಮಿಲಿಟರಿ ದಂಡನಾಯಕ ಸಹ. ಮೂರು ಬಾರಿ ನಾಗರಿಕರ ಬೆಂಬಲ ಪಡೆದಿದ್ದ ಆತನನ್ನು ದೂಷಿಸುವುದು ಹೇಗೆ? ಒಂದು ಬಗೆಯ ಸಮಾನತೆಯನ್ನು ಎತ್ತಿಹಿಡಿದಿದ್ದರಿಂದ ತಾನೆ ಆತ ಮೂರು ಬಾರಿ ಅಯ್ಕೆಯಾದದ್ದು! ಆದ್ದರಿಂದ ರೂಸ್‌ವೆಲ್ಟ್‌ನನ್ನು ವಿರೋಧಿಸುತ್ತಿದ್ದ ಬಣವು ಒಂದು ಉಪಾಯ ಕಂಡುಕೊಂಡಿತು. ಆತನ ಜೊತೆಯಲ್ಲಿದ್ದ ಬೇರೊಬ್ಬ ವ್ಯಕ್ತಿಯನ್ನು ಹಿಗ್ಗಾಮುಗ್ಗ ದೂಷಿಸುವುದೇ ಆ ಉಪಾಯ. ಆ ವ್ಯಕ್ತಿ ಅಮೆರಿಕಾದಲ್ಲಿ ಜನಿಸಿದ್ದವನಲ್ಲ ಮತ್ತು ಒಬ್ಬ ಖ್ಯಾತ ಕಾರ್ಮಿಕ ನಾಯಕನಾಗಿದ್ದ. ಸಾಲದ್ದಕ್ಕೆ ಅವನೊಬ್ಬ ಯಹೂದಿ. ಬಹಳ ಬುದ್ಧಿವಂತ ಆಯ್ಕೆ ಎನ್ನಬೇಕು. ಅಪಾರ ಸಂಖ್ಯೆಯ ಜನರು ಆತನನ್ನು ವಿರೋಧಿಸಲು ಜೊತೆಯಾಗುತ್ತಾರೆಂಬ ಭರವಸೆ ಮೂಡಿತ್ತು. ಇನ್ನೇನು ಗೆದ್ದೇಬಿಟ್ಟರೇನೋ ಎನ್ನುವಷ್ಟು ಪ್ರಾಬಲ್ಯ ಮೆರೆಯಿತು ರೂಸ್‌ವೆಲ್ಟ್ ವಿರೋಧಿ ಬಣ.

ಹಾಗೆ ವಿರೋಧಕ್ಕೆ ಗುರಿಯಾದವನು ಸಿಡ್ನಿ ಹಿಲ್ಮನ್. ಇಡೀ ದೇಶದ ಜವಳಿ ಉದ್ಯಮದ ಎಲ್ಲ ದುಡಿಮೆಗಾರರ ನಾಯಕ ಮತ್ತು ಕಾರ್ಮಿಕ ಸಂಘಗಳ ಒಕ್ಕೂಟದ ಅಧ್ಯಕ್ಷ ಆತ. ಅವನೇನೂ ಚುನಾವಣಾ ಪ್ರಚಾರದಲ್ಲಿ ವಿಶಿಷ್ಟ ಸ್ಥಾನ ಹೊಂದಿರಲಿಲ್ಲ; ತಾನು ಆಯ್ಕೆ ಮಾಡಿಕೊಂಡಿದ್ದ ಅಭ್ಯರ್ಥಿಯ ಪರವಾಗಿ ಸಾಧ್ಯವಾದಷ್ಟು ಕೆಲಸ ಮಾಡುತ್ತಿದ್ದ, ಅಷ್ಟೆ. ಆದರೆ ಅವನು ಉದಾರವಾದಿಗಳ ಮತ್ತು ದುಡಿಮೆಗಾರರ ಹೊಂದಾಣಿಕೆ ಇದ್ದ ಗುಂಪಿನಲ್ಲಿದ್ದ; ಆದ್ದರಿಂದ ಪ್ರತಿಗಾಮಿಗಳ ಕೆಂಗಣ್ಣಿಗೆ ಗುರಿಯಾಗಿದ್ದ. ಯಹೂದಿಯೂ ಆಗಿದ್ದುದರಿಂದ ಫ್ಯಾಸಿಸ್ಟರು ಅವನನ್ನು ಕಂಡರೆ ಚೀರಾಡುತ್ತಿದ್ದರು.

ಅಕ್ಟೋಬರ್ 1944ರಲ್ಲಿ ಸುಮಾರು ಮೂವತ್ತು ಲಕ್ಷ ಅಮೆರಿಕನ್ನರಿಗೆ ಪತ್ರಗಳು ಬಂದವು; ಅವನ್ನು ಕಳಿಸಿದ್ದುದು ಬಸ್ಬಿ ಎಂಬುವನ ಹೆಸರಿನಲ್ಲಿ. ಅವನು ಇಲಿನಾಯ್ ರಾಜ್ಯದ ಪ್ರಜಾಪ್ರತಿನಿಧಿ. ಪತ್ರದ ಮುಂಭಾಗವು ಎದ್ದುಕಾಣುತ್ತಿತ್ತು, ಅದರಲ್ಲಿ ಹಿಲ್ಮನ್‌ನ ಜೀವನಚರಿತೆ ಬರೆಯಲಾಗಿತ್ತು. "ಇವನು ಹುಟ್ಟಿದ್ದು ರಷ್ಯಾದಲ್ಲಿ, ಬೆಸ್ಸಿ ಅಬ್ರಮೋವಿಟ್ಸ್ ಎಂಬಾಕೆಯನ್ನು ಮದುವೆಯಾದ. ಅಮೆರಿಕಾದಲ್ಲಿ ದುಡಿಮೆಗಾರರ ರಾಷ್ಟ್ರೀಯ ಸಮಿತಿಯ ರಾಜಕೀಯ ಕ್ರಿಯಾವಿಭಾಗವನ್ನು ಆಯೋಜಿಸಿದ್ದ." ಪತ್ರದ ಹಿಂಭಾಗದಲ್ಲಿ ಒಂದು ಸಂದೇಶವಿತ್ತು: "ಇದು ನಿಮ್ಮ ಅಮೆರಿಕಾ. ಅದನ್ನು ಆ ಸಿಡ್ನಿ ಹಿಲ್ಮನ್‌ಗೆ ಹಸ್ತಾಂತರ ಮಾಡಬಯಸುತ್ತೀರಾ?"

ಅಮೆರಿಕಾದಲ್ಲಿ ಯಾರನ್ನೂ ನೇರವಾಗಿ ಯಹೂದಿಯೆಂಬ ಕಾರಣಕ್ಕೆ ತೀವ್ರವಾಗಿ ದೂಷಿಸುವುದು ಕೂಡದೆಂಬ ಅಲಿಖಿತ ಪದ್ಧತಿ ಇದೆ. ಅಷ್ಟರಮಟ್ಟಿನ ಸಭ್ಯತೆ ಸ್ವಾಗತಾರ್ಹವೇ. ಆದ್ದರಿಂದ ಪತ್ರವನ್ನು ಬರೆದವನು ಬೇರೆ ಸಬೂಬುಗಳನ್ನು ನೀಡಿ ಆ ಯಹೂದಿಯನ್ನು ತುಳಿಯಬೇಕಾಗಿತ್ತು. ಅದಕ್ಕೇ ಅವನು ಹಿಲ್ಮನ್‌ನ ಪತ್ನಿಯ ನಾಮಧೇಯವನ್ನು ಬೆಸ್ಸಿ ಎಂದು ಸ್ಪಷ್ಟವಾಗಿ ಬರೆದಿದ್ದು. ನೋಡಿದಿರಾ, ರಾಜಕೀಯದಲ್ಲಿ ಹೇಗೆ ಸ್ತ್ರೀಗೌರವವನ್ನು ರಕ್ಷಿಸಬಹುದೆಂಬುದನ್ನು!

ಅಷ್ಟೇ ಆದರೆ ಸಾಕಾಗುವುದಿಲ್ಲ. ವಿಷದ ಪ್ರಮಾಣವನ್ನು ಹೆಚ್ಚಿಸಬೇಕಾದರೆ ಸ್ವಲ್ಪ ಹಿಟ್ಲರ್-ದ್ರಾವಣ ಸೇರಿಸಬೇಕು; ಅದಕ್ಕೆ ಹಿಲ್ಮನ್ ಒಬ್ಬ ಕಮ್ಯುನಿಸ್ಟ್, ಅವನು ಹುಟ್ಟಿದ್ದು ರಷ್ಯಾದಲ್ಲಿ, ಎಂದೆಲ್ಲಾ ಸೇರಿಸಿದ್ದ. ಅಂದರೆ ಅವನೊಬ್ಬ ತೀವ್ರ ಪುರೋಗಾಮಿ ಎಂದು ಭಾಸವಾಗಬೇಕು. ಆ ಹಿಲ್ಮನ್ ಬ್ರಿಟನ್ನಿನಲ್ಲಿ ಹುಟ್ಟಬಾರದಿತ್ತೆ? ಆಗ ಅವನು ಸಂಪನ್ನನಂತೆ ಕಾಣಲು ಸಾಧ್ಯವಾಗುತ್ತಿತ್ತು. ಹೇಗೂ ಆ ದೇಶದಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಶ್ರೇಷ್ಠ - ಕನಿಷ್ಠ ಎಂಬ ಪರಿಪಾಠವಿದ್ದಿತಲ್ಲ! ಜೊತೆಗೆ ಹಿಲ್ಮನ್ ದುಡಿಮೆಗಾರರ ಒಕ್ಕೂಟದ ಪದಾಧಿಕಾರಿ ಬೇರೆ. ಅವನನ್ನು ಹೀಯಾಳಿಸಲು ಬೇರಿನ್ನೇನು ತರ್ಕ ಬೇಕು? ಆದಾಗ್ಗ್ಯೂ ಮತದಾರರು ಇನ್ನೂ ಹೆಚ್ಚಿನ ಅರ್ಥವತ್ತಾದ ತರ್ಕವನ್ನು ಬಯಸಿದರು.

* * *

ಪ್ರಚಂಡ ಭಾಷಣಕಾರರು, ಪತ್ರಿಕೆಗಳ ಅಂಕಣ ಬರಹಗಾರರು ಮತ್ತು ಚುನಾವಣಾ ಅಭ್ಯರ್ಥಿಗಳಿಗೆ ಪದಗಳ ಪ್ರಾಬಲ್ಯದ ಬಗ್ಗೆ ಅತೀವ ಶ್ರದ್ಧೆ. ನಿರ್ದಿಷ್ಟ ಪದಗಳನ್ನು ಚೆನ್ನಾಗಿ ಪೋಣಿಸಿದರೆ ಅವುಗಳ ಪ್ರಭಾವಕ್ಕೆ ಮಿತಿಯಿಲ್ಲವೆಂಬುದು ಅವರ ನಂಬಿಕೆ. ಹೇಳಿದ್ದನ್ನೇ ಬೇರೆ ರೀತಿಯಲ್ಲಿ ಮತ್ತೆ ಹೇಳುವುದು ಗಾಢ ಪರಿಣಾಮ ಬೀರುತ್ತದೆ ಎಂಬುದು ಅವರ ಸಿದ್ಧಾಂತ. ತಾನು ತುತ್ತೂರಿ ಊದಿದರೆ ಸಾಕು, ಕೇದಾರೇಶ್ವರನ ಗೋಪುರ ಅಲ್ಲಾಡಿಹೋಗುತ್ತದೆ ಎಂಬ ಭಾವ ಬರವಣಿಗೆಗಾರ ಮತ್ತು ಜಾಹಿರಾತು ಬರೆಯುವಾತ ಇಬ್ಬರದೂ ಹೌದು. ಒಮ್ಮೊಮ್ಮೆ ತಾವೇ ತಮ್ಮ ಕಪಾಳಕ್ಕೆ ಹೊಡೆದುಕೊಳ್ಳುವ ದುರ್ಗತಿ ಅವರದು. ಮಾನವಕುಲಕ್ಕೆ ಅವರ ದೊಡ್ಡ ಸೇವೆಯೇ ಅದು.

1944ರ ಸೆಪ್ಟೆಂಬರ್ 12ರ ನಡಾವಳಿ ನೋಡಿ, ಅಮೆರಿಕಾದ ಪ್ರಜಾಪ್ರತಿನಿಧಿಸಭೆಯ ದಾಖಲೆ ಅದು: ಕೋಟೆಕೊತ್ತಲಗಳನ್ನುರುಳಿಸುವಂತಹ ಪ್ರಯತ್ನ ಅಲ್ಲಿದೆ. ಅದರಲ್ಲಿ ಯಹೂದಿಗಳ ಮೇಲಿನ ದ್ವೇಷ ಸಾಂದ್ರವಾಗಿ ಮಡುಗಟ್ಟಿದೆ. ಅದರ ಪಾಠ ಹೀಗಿದೆ:

ಶ್ರೀಮತಿ ಲ್ಯೂಸ್: ಅಧ್ಯಕ್ಷರೆ, ಸಭೆಯನ್ನುದ್ದೇಶಿಸಿ ಮಾತನಾಡಲು ಹತ್ತು ಸೆಕೆಂಡು ನನಗೆ ಸರ್ವಾನುಮತದಿಂದ ಕೊಡಬೇಕಾಗಿ ಆಗ್ರಹಿಸುತ್ತೇನೆ.

ಅಧ್ಯಕ್ಷರು: ಇದಕ್ಕೆ ಸಭೆಯದೇನಾದರೂ ಆಕ್ಷೇಪ ಉಂಟೆ?

ಅಂತಹ ಯಾವ ಆಕ್ಷೇಪವೂ ವ್ಯಕ್ತವಾಗಲಿಲ್ಲ.

ಶ್ರೀಮತಿ ಲ್ಯೂಸ್: ಆ ಸಿಡ್ನಿಯ ಎಲ್ಲ ವ್ಯವಹಾರಗಳನ್ನೂ ಬಹಿರಂಗಗೊಳಿಸಿ.

– ಸಭೆಯಲ್ಲಿ ಅದಕ್ಕಿಂತಲೂ ಪುಟ್ಟ ಭಾಷಣವನ್ನು ಯಾರೂ ಮಾಡಿರಲಿಲ್ಲ. ಅಲ್ಲದೆ, ಅದರ ವ್ಯಂಗ್ಯಾರ್ಥವು ಆಳವಾಗಿದ್ದಿತು.

1944ರ ಡಿಸೆಂಬರ್ 15ರಂದು ಕನೇಟಿಕಟ್‌ನ ಆ ಮಹಿಳೆಗೆ ಪೋಪ್ ಪಯಸ್ XII ಅವರನ್ನು ಭೇಟಿಯಾಗುವುದಿತ್ತು. ಆಕೆ ಅವರಿಗೆ ಏನು ಹೇಳಿದಳೆಂದು ಪತ್ರಿಕಾ ವರದಿ ಬಂದಿತ್ತು. ವರದಿಗಾರ್ತಿ ಆ ಮಾತಿಗೆ ಸಭ್ಯತೆಯ ರಂಗನ್ನು ಹಚ್ಚಿದ್ದಳು: "ಕನೇಟಿಕಟ್‌ನ ಪ್ರತಿನಿಧಿ ಕ್ಲೇರ್ ಬೂತ್ ಲ್ಯೂಸ್ ಹೇಳಿದಳು, 'ಬಲವಂತದಿಂದ ಶಾಂತಿ ಗಳಿಸುವುದರಲ್ಲಿ ಮಹಿಳೆಗೆ ಪುರುಷರಿಗಿರುವಷ್ಟು ಕಾತುರತೆ ಇಲ್ಲ, ಪರಸ್ಪರ ತಿಳಿವು ಮತ್ತು ದಾಕ್ಷಿಣ್ಯದ ಮೂಲಕ ಶಾಂತಿ ಅರಸುವುದನ್ನವರು ಇಚ್ಛಿಸುತ್ತಾರೆ.' "

ಹೌದೆ? ಎಲ್ಲ ಮಹಿಳೆಯರೂ ಅಂಥವರೇ ಏನು?

* * *

1946ರ ಜನವರಿಯಲ್ಲಿ ಅಮೇರಿಕಾದ ಸೆನೆಟ್ "ಉದ್ಯೋಗದಲ್ಲಿ ಸಾಚಾತನದ ನಡತೆಗಳ ವಿಧೇಯಕ" ಒಂದನ್ನು ಚರ್ಚೆಗೆತ್ತಿಕೊಂಡಿತ್ತು. ಸೆನೆಟ್‌ನಲ್ಲಿ ಅದರ ಚರ್ಚೆ ನಡೆಯಬೇಕೆಂಬ ನಿರ್ಣಯವನ್ನು ಮಂಡಿಸಿದಾಗ ಅದನ್ನು ವಿಫಲಗೊಳಿಸಲು ಹಲವು ಸದಸ್ಯರು ಗಂಟೆಗಟ್ಟಲೆ ಮಾತನಾಡುತ್ತಾ ನಿರ್ಣಯವನ್ನು ಹೂತುಹಾಕಿದರು. ಅದೊಂದು ಸ್ವೀಕೃತ ವಿಧಾನ: ವಿಧೇಯಕವು ನಿಮಗೆ ಬೇಡವೆನಿಸಿದರೆ ಮತ್ತು ಮತಗಳ ಚಲಾವಣೆ ನಡೆದರೆ ಅದು ಅಂಗೀಕೃತವಾಗಬಹುದೆಂದೆನಿಸಿದರೆ ಅದನ್ನು ವಿಫಲಗೊಳಿಸಲು ಗಂಟೆಗಟ್ಟಲೆ ಮಾತನಾಡುವುದೊಂದು ವಿಧಾನ. ಮಾತನಾಡುವ ವಿಭಾಗದವರು ಅಲ್ಪ ಸಂಖ್ಯಾತರಾದರೂ ವಿಧೇಯಕವನ್ನು ಅವರು ತಡೆಗಟ್ಟಬಹುದು! ಮಾತು ಕೇಳಿ ಸುಸ್ತಾದಾಗ ಸೆನೆಟ್ ಸದಸ್ಯರು "ಹೋಗಲಿ ಬಿಡಿ, ಈ ವಿಧೇಯಕ ಬೇಡ" ಎಂದು ಅಲ್ಪಸಂಖ್ಯಾತರಿಗೆ ಮಣಿದುಬಿಡುತ್ತಾರೆ.

"ಉದ್ಯೋಗದಲ್ಲಿ ಸಾಚಾತನದ ನಡತೆಗಳ ವಿಧೇಯಕ" ಹೀಗೆ ಕಸದ ಬುಟ್ಟಿ ಸೇರಿತು. ಮಿಸಿಸಿಪಿಯ ಸೆನೆಟರ್ ಬಿಲ್ಬೊ ಮಾತಿನಮಲ್ಲರ ಕ್ಯಾಪ್ಟನ್ ಆಗಿಬಿಟ್ಟ. ಅವನೇಕೆ ಅದನ್ನು ತಡೆಗಟ್ಟಿದ? ಅವನ "ರಾಜಕೀಯ ತತ್ವ" ಅಂಥದು. ಚರ್ಚೆಯ ಒಂದು ಪ್ರಸಂಗವನ್ನು ಗಮನಿಸಿ:

ದಕ್ಷಿಣ ಕ್ಯಾರೊಲೈನಾದ ಶ್ರೀ. ಜಾನ್‌ಸ್ಟನ್: ಮಿಸಿಸಿಪಿಯ ಸೆನೆಟರ್‌ಗೆ ನನ್ನದೊಂದು ಪ್ರಶ್ನೆಯಿದೆ. ಈವರೆಗೆ ಸೆನೆಟ್ ಹತ್ತಾರು ವಿಧೇಯಕಗಳನ್ನು ಅಂಗೀಕರಿಸಿದೆ. ಅವುಗಳ ಅರ್ಧಭಾಗದಷ್ಟನ್ನು ಮಾತಿನಮಲ್ಲರು ಹಾಳುಗೆಡವಿದ್ದರೆ ನಮ್ಮ ದೇಶಕ್ಕೆ ಅದರಿಂದ ಅಗಾಧ ಲಾಭವಿರುತ್ತಿತ್ತೇನೋ ?

ಶ್ರೀ ಬಿಲ್‌ಬೊ: ನನಗಂತೂ ವಿಧೇಯಕಗಳನ್ನು ಅಂಗೀಕರಿಸುವುದಕ್ಕಿಂತ ಅವನ್ನು ನಿಷ್ಫಲಗೊಳಿಸುವುದರಲ್ಲೇ ಹೆಚ್ಚು ಆಸಕ್ತಿ ಇದೆ.

ಈ ಸೆನೆಟರ್‌ನ ಸಾಮಾಜಿಕ ಅಭಿಪ್ರಾಯಗಳೇನೇ ಆಗಿದ್ದಿರಲಿ, ಏನೂ ಬಾಧಕವಿಲ್ಲ. ಆದರೆ ಆ ಬಗ್ಗೆ ಸೆನೆಟ್‌ನ ಅಭಿಪ್ರಾಯಗಳು ಹೇಗಿದ್ದವು ಎಂಬುದು ಹೆಚ್ಚು ಪ್ರಸ್ತುತ. ಅದನ್ನು ಮತ್ತೆ ನೋಡೋಣವಂತೆ. ಸದ್ಯಕ್ಕೆ ಪ್ರಜಾಪ್ರತಿನಿಧಿ ಸಭೆಯ ನಡಾವಳಿಗಳನ್ನಷ್ಟೇ ಗಮನಿಸೋಣ. ಈ ಬಿಲ್‌ಬೊ ಎಂಬ ಸೆನೆಟರ್ ತಾನು ಡಾ॥ ಜೇಮ್ಸ್ ಎ. ದೊಂಬ್ರೋಸ್ಕಿ ಎಂಬುವವರಿಗೆ ಒಂದು ಪತ್ರ ಬರೆದಿದ್ದುದಾಗಿ ಪ್ರಕಟಿಸಿದ. ಪತ್ರದ ಒಕ್ಕಣೆ ಇದು:

"ಮಾನ್ಯ ದೊಂಬ್ರೋಸ್ಕಿ, (ಹಾಗೆಂದಾಗ ನಗೆಯ ಅಲೆ)

ಮಿಸಿಸಿಪಿಯ ಜಾಕ್ಸನ್‌ನಲ್ಲಿರುವ ನನ್ನ ಸ್ನೇಹಿತನಿಂದ ಈಗತಾನೆ ಒಂದು ಪತ್ರ ಬಂದಿತು. ಎರಡು ಪುಟದ ಭರ್ತಿ ನಿನ್ನ ಅಮೇರಿಕಾ ವಿರೋಧಿ ಭಾವನೆ ಮತ್ತು ನೀಗ್ರೋಗಳ ಸಾಮಾಜಿಕ ಸಮಾನತೆಗಾಗಿ ಕಾತರದ ಬಗ್ಗೆ ಬರೆದಿದ್ದಾನೆ. ನಿನ್ನದೊಂದು ಕಮ್ಯುನಿಸ್ಟ್ ನಾಯಿಯ ಸಂಘಟನೆ. ನೀನೇನೋ ದೇಶದುದ್ದಗಲಕ್ಕೂ ಪ್ರಚಾರ ಆರಂಭಿಸಿದ್ದೀಯೆ. ಆಕ್ಷೇಪಾರ್ಹ ಶಾಸನಗಳನ್ನು ವಿಫಲಗೊಳಿಸಲು ಅಮೆರಿಕಾದ ಸೆನೆಟರ್‌ಗಳು ಮಾತಿನಮಲ್ಲರ ಬಾಣ ಬಳಸಕೂಡದೆಂಬ ಸಾರ್ವಜನಿಕ ಅಭಿಪ್ರಾಯ ರೂಪಿಸಲು ನೀನು ಇಚ್ಚಿಸುತ್ತಿರುವೆಯಂತೆ. ಅದು ಅಮೆರಿಕಾದ ಸೆನೆಟರ್‌ಗಳ ಹಕ್ಕು, ಗೊತ್ತೆ?"

ಬಿಲ್‌ಬೊ ಬರೆದ ಸಂಗತಿ ನಿರೀಕ್ಷಿಸುವಂಥದೇ. ಬರೆದವನ ಲಕ್ಷಣ ಅದು. ಆದರೆ, ಆರಂಭದಲ್ಲಿ "ಮಾನ್ಯ ದೊಂಬ್ರೋಸ್ಕಿ" ಎಂದಾಗ ನಗೆಯ ಅಲೆ ಹಬ್ಬಿತಲ್ಲಾ, ಅದನ್ನು ನೋಡಿ.

* * *

ಪೋಲೆಂಡಿನಲ್ಲಿ ಮೈದಾನೆಕ್ ಬಳಿ ಜರ್ಮನಿಯ ನಾಝಿಗಳು ಅಲ್ಲಿ ಕೊಲೆಗೊಳಗಾಗ ಬೇಕಾದವರಿಗಾಗಿ ಒಂದು ದೊಡ್ಡ ನೆಲೆ ಸ್ಥಾಪಿಸಿದ್ದರು. ಸುತ್ತಲೂ ಮುಳ್ಳು ಬೇಲಿ ಮತ್ತು ಮಧ್ಯೆ ಹತ್ತಾರು ಕಟ್ಟಡಗಳು. ಅವುಗಳಲ್ಲಿ ಎರಡು ಮನಸ್ಸನ್ನು ಚುಚ್ಚುವಂಥವು. ಸತ್ತವರೆಲ್ಲರ ಬಟ್ಟೆಗಳ ರಾಶಿಗಳಿರುವುದೊಂದು; ಎಲ್ಲಾ ದೊಡ್ಡವರ ಮತ್ತು ಮಕ್ಕಳ ಉಡುಗೆಗಳು. ಇನ್ನೊಂದರಲ್ಲಿ ಮೂರು ಕೊಠಡಿಗಳು. ಒಂದು, ಕೈದಿಗಳೆಲ್ಲರೂ ಬಟ್ಟೆ ಬಿಚ್ಚುವುದಕ್ಕೆ; ಎರಡನೆಯದು ಅವರೆಲ್ಲಾ ಸುರಿಯುವ ನೀರಿನಲ್ಲಿ ಸ್ನಾನ ಮಾಡುವುದಕ್ಕೆ; ಮೂರನೆಯದು ಅವರಲ್ಲಿ ಯಾರೂ ಕೆಳಗೆ ಬೀಳಲು ಜಾಗವೇ ಇಲ್ಲದಂತೆ ಕೊಠಡಿಯ ತುಂಬ ನಿಲ್ಲಲು. ಆ ಕೊಠಡಿಯೊಳಕ್ಕೆ ಮೂರು ಪೈಪುಗಳು ಹೊರಗಿನಿಂದ ಏನನ್ನಾದರೂ ಸುರಿಯುವಂಥವು. ನಾಲ್ಕನೆಯದು ಗೋಡೆಯಲ್ಲಿನ ರಂಧ್ರ. ಅಲ್ಲಿಂದ ಒಳಗಿನ ವಿದ್ಯಮಾನ ನೋಡಬಹುದು. ಹಾಗೆ ನೋಡಲೆಂದೇ ಒಬ್ಬ ಇರುತ್ತಾನೆ. ಕೊಠಡಿಯಲ್ಲಿ ಸುಮಾರು ಇನ್ನೂರು ಜನರನ್ನು ತುಂಬಿದ ಮೇಲೆ ಪೈಪುಗಳಿಂದ ಒಂದಷ್ಟು ಮಣಿಗಳ ರಾಶಿ ಹರಿದುಬರುತ್ತದೆ. ಗಾಳಿಯ ಸಂಪರ್ಕಕ್ಕೆ ಬಂದಾಗ ಆ ಮಣಿಗಳು ಮಾರಣಾಂತಿಕ ಅನಿಲವನ್ನು ಹೊರಸೂಸುತ್ತವೆ. ಹೊರಗೆ ನಿಂತ ಗಾರ್ಡ್ ಸಂತಸದಿಂದ ವೀಕ್ಷಿಸುತ್ತಿದ್ದು ಒಳಗಿನ ಎಲ್ಲರೂ ಸತ್ತರೆಂದು ಖಾತ್ರಿ ಮಾಡಿಕೊಳ್ಳುತ್ತಾನೆ.

ಮೊದಲಲ್ಲಿ, ಸತ್ತವರನ್ನು ಹೂಳಲಾಗುತ್ತಿತ್ತು: ಅದೂ ಒಂದರ ಮೇಲೊಂದರಂತೆ ಶವಗಳನ್ನು ಪೇರಿಸಿಟ್ಟು. ಆದರೆ ಎರಡನೆಯ ಮಹಾಯುದ್ಧವು ಪಶ್ಚಿಮ ಯೂರೋಪಿಗೆ ವಿಸ್ತರಿಸುತ್ತಿದ್ದಂತೆ ಹೂತಿದ್ದ ಶವಗಳನ್ನು ಪತ್ತೆಯಾಗದಂತೆ ಮಾಡಲಾಗುತ್ತಿತ್ತು. ತಮ್ಮ

ಮಾರಣ ಹೋಮವನ್ನು ಮುಚ್ಚಿಡಲು ನಾಝಿಗಳು ಪರಿಣತಿ ಹೊಂದಿದ್ದರು. ಅದಕ್ಕಾಗಿ ಒಂದು ಬೃಹತ್ ಸುಡುಗಾಡು, ಅದರಲ್ಲಿ ಐದು ದೊಡ್ಡ ಒಲೆಗಳು. ಒಂದೊಂದರಲ್ಲೂ ಒಂದು ಶವಕ್ಕೆ ಬೇಕಾಗುವಷ್ಟು ಜಾಗ. ಶವಗಳನ್ನು ಅಚ್ಚುಕಟ್ಟಾಗಿ ಒಲೆಯೊಳಕ್ಕೆ ತಳ್ಳಲು ಯಾಂತ್ರಿಕ ಸೌಲಭ್ಯ. ಸರಿ, ಸುಡುವ ಕ್ರಿಯೆ ನಿರಂತರವಾಗಿ ಸಾಗಿತ್ತು. ಒಂದೊಂದು ಶವ ಸುಡಲು ಬಹಳ ಕಾಲ ಹಿಡಿಯುತ್ತದೆಂಬುದನ್ನು ಗಮನಿಸಿ ಒಲೆಗಳ ಶಾಖ ಪ್ರಮಾಣವನ್ನು 1500 ಡಿಗ್ರಿ ಸೆಂಟಿಗ್ರೇಡಿಗೆ ಏರಿಸಿದರು. ಅದು ಅವರ "ವಿಜ್ಞಾನ"ದ ಮುನ್ನಡೆ! ದಿನಕ್ಕೆ ಎರಡು ಸಾವಿರ ಶವಗಳನ್ನು ಸುಡುವ "ಪ್ರಗತಿ" ಸಾಧಿಸಲಾಯಿತು. ಹೀಗೆ ಮೈದಾನೆಕ್‌ನಲ್ಲಿ ಸುಡಲಾದವರ ಸಂಖ್ಯೆ ಹದಿನೈದು ಲಕ್ಷ.

ಒಮ್ಮೆ ಏನಾಯಿತು, ಒಲೆಗಳೆಲ್ಲ ಧಗ ಧಗ ಉರಿಯುತ್ತಿದ್ದಾಗ ಒಂದಷ್ಟು ಮಂದಿ ಹೊಸ ಕೈದಿಗಳು ಬಂದುಬಿಟ್ಟರು. ಲೆಕ್ಕಾಚಾರ ತಪ್ಪಿದ್ದರಿಂದ ಹಾಗಾಗಿಬಿಟ್ಟಿತು. ಕೈದಿಗಳು ಸುಡುಗಾಡಿನ ಪ್ರಕ್ರಿಯೆಯನ್ನು ನೋಡಬಾರದಲ್ಲಾ! ಅಕಸ್ಮಾತ್ತಾಗಿ ಅದೇ ಸಮಯದಲ್ಲಿ ಮೈದಾನೆಕ್‌ನ ಪರಮಾಧಿಕಾರಿಯೂ ಅಲ್ಲಿದ್ದ. ತಮಗೆ ಕಾದಿರಿಸಲಾಗಿದ್ದ ವಿಪತ್ತನ್ನು ತಿಳಿದ ಒಬ್ಬ ಮಹಿಳೆ ಜೋರಾಗಿ ಅಬ್ಬರಿಸಿದಳು. ಬಾಯಿ ಮುಚ್ಚಲು ಅಧಿಕಾರಿ ಆಜ್ಞಾಪಿಸಿದ. ಆದರೆ ಅವಳು ಅರಚುವುದು ನಿಲ್ಲಲಿಲ್ಲ. ಜೀವಂತವಾಗಿಯೇ ಇದ್ದ ಅವಳನ್ನು ಇಬ್ಬರು ಗಾರ್ಡ್‌ಗಳು ಹಿಡಿದು ಒಲೆಗಳತ್ತ ನೂಕಿದರು. ಅವಳ ಕೂದಲಿಗೆ ಬೆಂಕಿ ತಗುಲಿ ಜ್ವಾಲೆ ಹಬ್ಬಿತು. ಕಡೆಯ ಒಂದು ಚೀರಾಟ. ಆಮೇಲೆ ಎಲ್ಲಾ ಸ್ತಬ್ಧ; ನೀರವತೆ ಆವರಿಸಿಬಿಟ್ಟಿತು. ಅದು ಫ್ಯಾಸಿಸ್ಟರು ನೀಡಿದ ಸಾವಿನ ಮೌನ.

* * *

ಈವರೆಗೆ ನೀಡಲಾದ ಘಟನೆಗಳಲ್ಲಿ ಒಂದು ಮಾದರಿಯಿದೆ. ಅದು ಗತಕಾಲದ ಇತಿಹಾಸದ ಬಗೆಗೆ ಮಾತ್ರವಲ್ಲ, ಮುಂದೆ ಘಟಿಸಬಹುದಾದ ಮಾದರಿಗಳ ಬಗೆಗೂ ಸೂಚನ ಕೊಡುತ್ತದೆ. ರೆಕ್ಸ್ ಹೊಟೇಲಿನಲ್ಲಿ ತಿನ್ನುತ್ತಿದ್ದ ನನ್ನ ಸ್ನೇಹಿತ, ದೊಂಬ್ರೋಸ್ಕಿಗೆ ಬರೆದ ಕಾಗದ, ಬಿಲ್‌ಬೋನ ಕುತ್ಸಿತ ಘೋಷಣೆ, ಸೆನೆಟರ್‌ಗಳೆಬ್ಬಿಸಿದ ನಗೆಯ ಅಲೆ, ಕೊನೆಗೆ ಮೈದಾನೆಕ್‌ನ ಸಾವಿನ ಕಾರ್ಖಾನೆ, ಎಲ್ಲಾ ಜರ್ಮನಿಯು 1945ಕ್ಕೆ ಮುಂಚಿನ ಇಪ್ಪತ್ತು ವರ್ಷ ನಡೆದು ಬಂದ ಹಾದಿಯ ಮಾದರಿ ಅದು. ಬೇರೆ ದೇಶಗಳು ಅಂಥದೇ ಹಾದಿಯನ್ನು ತುಳಿಯುವುದಿಲ್ಲವೆಂದೇನೂ ಇಲ್ಲ.

ಪ್ರಯಾಣ ಆರಂಭವಾಗುವುದು ತಲುಪಬೇಕಾದ ನಿಲ್ದಾಣದಿಂದಲ್ಲ. ಆದ್ದರಿಂದ ಜನಾಂಗೀಯ ದ್ವೇಷವನ್ನು ತಮ್ಮಲ್ಲಿ ತುಂಬಿಕೊಂಡಿರುವವರು ಆರಂಭದಲ್ಲೇ ಸುಡುಗಾಡಿನ ಒಲೆಗಳನ್ನು ಕಟ್ಟುವುದಿಲ್ಲ. ಆ ಗುರಿಯತ್ತ ಅವರು ಸಾಗುತ್ತಾರೆ, ಹಾಗೆ ಸಾಗುವಾಗ ಇತರರೂ ತಮ್ಮೊಡನೆ ಹೆಜ್ಜೆ ಹಾಕಬೇಕೆಂಬುದು ಅವರ ಬಯಕೆ. ಇತರರು ಅವರೊಡನೆ ಸಾಗದಿದ್ದಲ್ಲಿ ಅವರು ತಮ್ಮ ಅಂತಿಮ ನಿಲ್ದಾಣವನ್ನು ತಲುಪಲು ಸಾಧ್ಯವೇ ಇರುವುದಿಲ್ಲ.

ಇತರರನ್ನು ತಮ್ಮತ್ತ ಸೆಳೆದುಕೊಳ್ಳಲು ಗುಸುಗುಸು, ಮೂದಲಿಕೆ, ಮುಂತಾದುವೆಲ್ಲಾ ಅಸ್ತ್ರಗಳು. ಅತಿಸಾಮಾನ್ಯ ಸಂಭಾಷಣೆಯ ನಡುವೆ ಮೂದಲಿಕೆಯ ಮಾತನ್ನು ಸೇರಿಸುವುದು, ಬೇರೆ ಯಾರನ್ನೂ ಜನಾಂಗೀಯವಾಗಿ ಗುರುತಿಸದ ವೃತ್ತಪತ್ರಿಕೆಗಳು ನೀಗ್ರೋಗಳನ್ನು ಆ ವಿಶೇಷಣದಿಂದ ಹೆಸರಿಸುವುದು, ಶಾಲಾ–ಕಾಲೇಜುಗಳಲ್ಲಿ ಮೀಸಲಾತಿಯಿಂದ ಪ್ರವೇಶ ಪಡೆದವರನ್ನು ಹಂಗಿಸುವುದು, ಕ್ಲಬ್‌ಗಳಲ್ಲಿ ಮತ್ತು ಸಹಕಾರ

ಸಂಸ್ಥೆಗಳಲ್ಲಿ ಮಗುಮ್ಮಾಗಿ ಕೆಲವು ನಿರ್ಬಂಧಗಳನ್ನು ಹೇರುವುದು, ಇವೆಲ್ಲಾ ಅಂತಹ ಅಸ್ತ್ರಗಳು. ಅಸಮಾನತೆಯ ಸಾವಿರ ಸಂದರ್ಭಗಳು ನಮ್ಮಲ್ಲಿವೆ. ಅವನ್ನು ಉಪಯೋಗಿಸಿಕೊಂಡು ತಮ್ಮ ಅಭಿಯಾನ ಸಾಗಿಸುತ್ತಾರೆ ಈ ಜನ. ಜನರಲ್ಲಿರುವ ದೊಡ್ಡಸ್ತಿಕೆಯ ಭಾವ, ತುಳಿತಕ್ಕೆ ಸಿಲುಕಿರುವವರು ತಮಗಿಂತಲೂ ಹೆಚ್ಚು ಹೀನಾಯ ಸ್ಥಿತಿಯಲ್ಲಿರುವವರನ್ನು ಹೀಯಾಳಿಸುವುದು, ಇವನ್ನೂ ಬಳಸಲಾಗುತ್ತದೆ. ಇವಿಷ್ಟೇ ಸಾಲದೆಂಬಂತೆ ಮಕ್ಕಳಲ್ಲಿ ಜನಾಂಗೀಯ ವೈಷಮ್ಯದ ಭಾವನೆಯನ್ನು ತುಂಬುವುದು ಸಹ ಉಂಟು. ಆ ಮಕ್ಕಳಲ್ಲಿ ನಿರಾಸೆ ಇನ್ನೂ ಆವರಿಸದಿರುವಾಗಲೇ ಅವರಲ್ಲಿ ವೈಷಮ್ಯದ ಭಾವ ತುಂಬಿಬಿಡುವುದು ನೀಚತನ.

ಒಟ್ಟಿನಲ್ಲಿ, ಜನಾಂಗೀಯ ಧೋರಣೆ ಉಳ್ಳವರು ನಮ್ಮ ಮುಂದೆ ಆಘಾತಕಾರಿ ಸಮಸ್ಯೆಯನ್ನು ಇರಿಸಿದ್ದಾರೆ. ಅದಕ್ಕಿಂತಲೂ ಬೃಹತ್ತಾದ ಸಮಸ್ಯೆ ಬೇರೊಂದಿಲ್ಲ: ಅಂದರೆ, ಸಮಾಜವನ್ನು ಇಡಿಯಾಗಿ ಪುನರ್ರಚಿಸುವುದೊಂದನ್ನು ಬಿಟ್ಟು. ಜನಾಂಗೀಯ ದ್ವೇಷದ ಸಮಸ್ಯೆಯನ್ನು ಸಾಧ್ಯವಾದ ಎಲ್ಲ ಸಾಧನಗಳನ್ನೂ ಬಳಸಿ ಎದುರಿಸಬೇಕು; ಮತದಾನದ ಸಮಯದಲ್ಲಿ ಸಾರ್ವಜನಿಕ ಜೀವನದಿಂದ ಜನಾಂಗೀಯ ದ್ವೇಷಗಳನ್ನು ದೂರವಿಡುವ ಮೂಲಕ, ಶಾಸನದ ಬಲದಿಂದ, ಶಿಕ್ಷಣದ ನೆಲೆಯಲ್ಲಿ, ಜನಾಂಗೀಯ ದ್ವೇಷ ಭಾವವು ಮನಸ್ಸಿನ ಕಲ್ಮಶವನ್ನು ಹೆಚ್ಚಿಸಲಾಗದಂತಹ ಎಲ್ಲ ಕ್ರಮಗಳಿಂದ. ಸಾಮಾಜಿಕ ಅಸಮಾನತೆಯು ಸರ್ವವ್ಯಾಪಿಯಾಗಿ ಮನಸ್ಸನ್ನು ಕಲಕುತ್ತದೆ. ಅಸಮಾನತೆಯು ಶ್ರೇಷ್ಠ–ಕನಿಷ್ಠ ಎಂಬ ವಿಭಜನೆಯ ರೂಪದಲ್ಲಿರಬಹುದು, ಇಲ್ಲವೆ ಸಾಮೂಹಿಕ ಹತ್ಯೆಯ ರೂಪದಲ್ಲಿರಬಹುದು. ಗುಲಾಮನಾಗಿಯೇ ಜೀವಿಸಿ ಸಾಯಲು ಇಚ್ಛಿಸದ ಎಲ್ಲ ಮನಸ್ಸುಗಳಲ್ಲೂ ಸಮಾನತೆಯ ತುಡಿತವಿರುತ್ತದೆ.

ಪೂರ್ವಗ್ರಹದ ಆಧಾರ ಗ್ರಹಿಕೆಗಳು

'ಜನಾಂಗ' ಎಂಬುದಕ್ಕೆ ವೈಜ್ಞಾನಿಕ ಉಪಯೋಗವಿರುವುದು ಅನುಮಾನ. ಹೆಚ್ಚೆಂದರೆ ಮಾನವ ಜೀವಿಗಳನ್ನು ವಿಂಗಡಿಸಲು ಅದೊಂದು ಸಾಧನ; ಅದೂ ಸಹ ಆ ಜೀವಿಗಳ ಕಾಲಾನುಕ್ರಮದ ನಿರ್ಧಾರಕ್ಕೆ, ಅಷ್ಟೆ. ಮಾನವಶಾಸ್ತ್ರಜ್ಞರು ಈ ಸಾಧನದಿಂದ ಹಲವು ಶತಮಾನಗಳಲ್ಲಿ ಜನಸಮುದಾಯಗಳು ಎಲ್ಲೆಲ್ಲಿ ಸಂಚರಿಸಿ ನೆಲೆಸಿದರೆಂಬುದನ್ನು ತಿಳಿಯಬಹುದು. ಅದೂ ಲಿಖಿತ ದಾಖಲೆಗಳ ಮುಂಚಿನ ದಿನಗಳ ಸಮಾಚಾರ. ತಲೆಬುರುಡೆ, ಅದು ಭೂಮಿಯ ಯಾವ ಭಾಗದಲ್ಲಿ ಕಂಡುಬಂತು, ಮುಂತಾದುವನ್ನು ಆಧರಿಸಿ ಮಾನವಕುಲದ ವಿಕಾಸವನ್ನು ತಿಳಿಯಲು ಸಾಧ್ಯ. ಮಾನವಶಾಸ್ತ್ರಜ್ಞನಿಗೆ ಅತಿಪ್ರಾಚೀನ ಮಾನವನು ಕುತಂತ್ರಿ ಇಲ್ಲವೇ ಸ್ನೇಹಿ ಎಂಬುದಂತೂ ತಿಳಿಯುವುದಿಲ್ಲ.

ಅಂದರೆ, ವಿಭಜನೆಯು ವಾಸ್ತವದ ದಾಖಲೆ, ಅಷ್ಟೆ. ಹಲವು ವ್ಯಕ್ತಿಗಳಲ್ಲಿ ಏಕ ಪ್ರಕಾರವಾದ ಒಂದು ಅಥವಾ ಹಲವು ಲಕ್ಷಣಗಳು ಉಂಟೆಂದು ಹೇಳಲಷ್ಟೇ ಸಾಧ್ಯ. ಇನ್ನೊಂದರ್ಥದಲ್ಲಿ ಅದು ಜ್ಞಾನದ ಒಂದು ಆಕರ. ರಸಾಯನಶಾಸ್ತ್ರ, ಜೀವಶಾಸ್ತ್ರ, ಇತ್ಯಾದಿ ಶಿಸ್ತುಗಳ ವಿದ್ಯಾರ್ಥಿಗಳು ವಿಭಜನೆಯ ನೂರಾರು ಪ್ರಕಾರಗಳನ್ನು ಕಲಿಯುವಾಗ ಸುಸ್ತಾಗಿಬಿಡುತ್ತಾರೆ, ಆದರೆ ಅಂತಹ ವಿಭಜನೆಯ ತಿಳಿವು ಜ್ಞಾನದ ಒಂದು ಭಾಗ.

ಜ್ಞಾನವನ್ನು ಸಂಘಟಿತ ರೂಪದಲ್ಲಿ ದಾಖಲಿಸಲು ಅನೇಕ ಸಾಧನಗಳುಂಟು,

ಒಂದೊಂದಕ್ಕೂ ವಿಶಿಷ್ಟವಾದ ಲಕ್ಷಣಗಳುಂಟು. ವರ್ಗೀಕರಣದ ಪ್ರಯೋಜನವು ಜ್ಞಾನದ ಹೆಚ್ಚಳದಲ್ಲಿದೆ. ವಿಜ್ಞಾನದ ಕ್ಷೇತ್ರದಲ್ಲಿ ಇದು ಸ್ಪಷ್ಟವಿದೆ. "ಹಳದಿ ವಸ್ತುಗಳು" ಎಂದಾಗ ಹೂವು, ಗಂಧಕ, ಎಲ್ಲಾ ಸೇರುತ್ತವೆ. ಅಷ್ಟನ್ನು ತಿಳಿಯುವುದರಿಂದ ಹೂವಿನ ಇಲ್ಲವೇ ಗಂಧಕದ ಸರ್ವಸ್ವವೂ ತಿಳಿದಂತಾಗುವುದಿಲ್ಲ. ಅಷ್ಟರಮಟ್ಟಿಗೆ ವಿಭಜನೆಯು ಅನುಪಯುಕ್ತವೆನ್ನಲು ಸಹ ಸಾಧ್ಯ. ಅದೇ ಇಲಿ, ಅಳಿಲು, ಬೀವರ್, ಎಲ್ಲವೂ "ದಂಶಕ"ಗಳು ಎಂದಾಗ ಅದು ಉಪಯುಕ್ತ ವಿಭಜನೆ ಎನಿಸುತ್ತದೆ. ಅವುಗಳ ಚಹರೆ ಭಿನ್ನ, ಆದರೆ ಅವುಗಳ ಹಲ್ಲುಗಳ ರಚನೆ ಒಂದೇ ರೀತಿಯದು. ಈ ರಚನೆಯು ಅವುಗಳ ಆಹಾರ ಸಂಗ್ರಹಕ್ಕೆ ವಿಧಾನವೊಂದನ್ನು ಕಲ್ಪಿಸಿಕೊಟ್ಟಿದೆ. ಈ ಪ್ರಾಣಿಗಳ ಬಗೆಗಿನ ತಿಳಿವಿಗೆ ವಿಭಜನೆಯು ಸಹಾಯಕ. ಆ ವರ್ಗದ ಪ್ರಾಣಿಗಳಿವೆ ಮತ್ತು ಅವಕ್ಕೆ ಒಂದು ವಿಶಿಷ್ಟ ಲಕ್ಷಣವಿದೆ. ಹಲ್ಲುಗಳ ರಚನೆಯು ಆ ಪ್ರಾಣಿಗಳ ಬೇರೆಷ್ಟೋ ಲಕ್ಷಣಗಳನ್ನು ನಮಗೆ ತಿಳಿಸುತ್ತದೆ. ಆದ್ದರಿಂದ ಅದನ್ನು "ಪ್ರಮುಖ ಲಕ್ಷಣ" ಎನ್ನುತ್ತೇವೆ. ಆ ಲಕ್ಷಣವು ನಿರ್ಣಾಯಕವಾದ್ದು: ಅವೇನಾಗಿವೆ, ಏನು ಮಾಡುತ್ತವೆ, ಎಂಬುದು ಆ ಲಕ್ಷಣದಿಂದ ನಿರ್ಧರಿತವಾಗುತ್ತದೆ. ಹೂವು ಮತ್ತು ಗಂಧಕ "ಹಳದಿ" ಬಣ್ಣದವು ಎಂದಾಗ ಅಂತಹ ಯಾವ ನಿರ್ಣಾಯಕ ಅಂಶವೂ ತಿಳಿಯುವುದಿಲ್ಲ. ಅದು ಪ್ರಮುಖ ಲಕ್ಷಣವಲ್ಲ ಮತ್ತು ಅವುಗಳ ನಡತೆ ಮತ್ತು ಕ್ರಿಯೆ ಆ ಬಣ್ಣದಿಂದ ನಿರ್ಧಾರವಾಗುವುದಿಲ್ಲ.

ಆದ್ದರಿಂದ ಜ್ಞಾನದ ಮೂಲವಾದ ವಿಭಜನೆಯನ್ನು ಪರಿಗಣಿಸುವಾಗ ವಸ್ತುಗಳ ವಿಶಿಷ್ಟ ಲಕ್ಷಣಗಳನ್ನು ಗುರುತಿಸಬೇಕು. ಒಂದು ವರ್ಗದ ವಸ್ತುಗಳು ಅಂತಹ ಇತರ ವಸ್ತುಗಳೊಡನೆ ಅತಿಹೆಚ್ಚಿನ ಸಾಮ್ಯತೆ ಹೊಂದಿರಬೇಕು ಮತ್ತು ಬೇರೆ ವರ್ಗಗಳ ವಸ್ತುಗಳೊಡನೆ ಅತಿಹೆಚ್ಚಿನ ವ್ಯತ್ಯಾಸ ಹೊಂದಿರಬೇಕು. ಜ್ಞಾನದ ಬದಲು ಅಜ್ಞಾನ ಮತ್ತು ಪೂರ್ವಗ್ರಹಗಳನ್ನು ನಿರ್ಮಿಸಹೊರಟರೆ ಇದಕ್ಕೆ ವಿರುದ್ಧವಾದ ನೆಲೆಯನ್ನು ಅರಸಬೇಕು. ಅಂದರೆ, ವಿಶಿಷ್ಟ ಲಕ್ಷಣಗಳ ಬದಲು ಬೇಕಾಬಿಟ್ಟಿ ಲಕ್ಷಣಗಳನ್ನು ಗುರುತಿಸಿದರೆ ಸಾಕು. ಒಂದು ವರ್ಗದವರಲ್ಲಿ ಅನೇಕ ಸಾಮ್ಯತೆಗಳಿವೆಯೇ ಎಂಬುದು ಗೌಣವಾಗುತ್ತದೆ; ಆದ್ದರಿಂದ ವಿಭಜನೆಯು ಅನಿರ್ದಿಷ್ಟವೂ ಜಾಳುಜಾಳಾಗಿಯೂ ಇರುತ್ತದೆ. ನಿಮ್ಮಿಷ್ಟದಂತೆ ಆ ವರ್ಗಕ್ಕೆ ಯಾರನ್ನಾದರೂ ಸೇರಿಸಬಹುದು, ಇಲ್ಲವೇ ಕೈಬಿಡಬಹುದು.

ಇಷ್ಟು ಮಾಡಿದರೆ ಸಾಕು, ಒಂದು ವರ್ಗದಿಂದ ಯಾರನ್ನಾದರೂ ಬೇರ್ಪಡಿಸಬಹುದು, ಅಥವಾ ಸೇರಿಸಬಹುದು. ನಿಮ್ಮ ಸಂಚು ಏನಾಗಿರುತ್ತದೋ ಅದಕ್ಕೆ ಸರಿಯಾಗಿ ಅಗತ್ಯವಾದಂತಹ ವಿಭಜನೆಗಳನ್ನು ಆದರಿಸಬಹುದು. ಆಗ ಜಪಾನಿಗಳು ನಾಝಿಗಳ ಜೊತೆ ಸೇರುವ "ಆರ್ಯರು" ಆಗಿಬಿಡಲು ಸಾಧ್ಯ; ಅಂತೆಯೇ ರಷ್ಯನರು ಏಷ್ಯನರಾಗಿಬಿಡುತ್ತಾರೆ! ಈ ವರ್ಗಗಳು ವೈಜ್ಞಾನಿಕವಾಗಿ ಜನಾಂಗೀಯ ಎನಿಸಿಕೊಳ್ಳದಿದ್ದಾಗ ವರ್ಗೀಕರಣಕ್ಕೆ ಅರ್ಥವೇನಿದೆ? ಇದು ಜ್ಞಾನದ ಸಂಚಯವಾಗುವುದರ ಬದಲು ಪೂರ್ವಗ್ರಹದ ಸಂಚಯವಾಗುತ್ತದೆ; ಬೆಳಕು ನೀಡುವ ಬದಲು ದ್ವೇಷದ ವಿತರಣೆ ಇದಾಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, ವಿಜ್ಞಾನವನ್ನು ತೊರೆದು ಮಿಥ್ಯೆಯನ್ನು ತುಂಬಿಕೊಂಡು ಇತರರ ಮನಸ್ಸುಗಳನ್ನು ಕಲುಷಿತಗೊಳಿಸುವ ಅಸಹ್ಯ ಕ್ರಿಯೆ ಇದು.

ಜನಾಂಗೀಯ ದ್ವೇಷವನ್ನು ಆವಾಹಿಸಿಕೊಂಡ ವ್ಯಕ್ತಿಯು ಮೃಗೀಯ ಹಾದಿ ಹಿಡಿಯುವುದು ಖಚಿತ; ಸಾವಿನ ಸುಡುಗಾಡುಗಳನ್ನು ನಿರ್ಮಿಸುವವರಿಗೆ ವಿಜ್ಞಾನ

ಮತ್ತು ತರ್ಕದ ಹೊರೆ ಸರ್ವಥಾ ಇಲ್ಲ! ಯಾವ ಲಕ್ಷಣಗಳನ್ನು ದ್ವೇಷಿಸಲು ಅವನು ಆಯ್ಕೆ ಮಾಡಿಕೊಳ್ಳುತ್ತಾನೋ ಅವನ್ನೇ ವ್ಯಕ್ತಿಯ ಮೂಲ ಲಕ್ಷಣಗಳೆಂದು ಆರೋಪಿಸುವುದು ಅವನ ವಿಧಾನ. ಒಬ್ಬ ವ್ಯಕ್ತಿಯ ಚರ್ಮದ ಲಕ್ಷಣ ಅಥವಾ ಮೂಗಿನ ಆಕಾರ ಸುಲಭವಾಗಿ ಗೊತ್ತಾಗುವಂತಹ ವಿಷಯ; ಕಣ್ಣು ಬಿಟ್ಟರೆ ಸಾಕು ಅದು ತಿಳಿಯುತ್ತದೆ. ಅದನ್ನು ತಿಳಿಯಲು ವಿಶೇಷ ಪರಿಣತಿ ಅನಗತ್ಯ. ಮಾಡಬೇಕಾದ್ದಿಷ್ಟೆ: ಹಳದಿ ಮತ್ತು ಕಪ್ಪು ಚರ್ಮದವರನ್ನು ದ್ವೇಷಿಸಲು ಪ್ರೇರೇಪಿಸುವುದು. ಹಾಗೆ ದ್ವೇಷಿಸಲು ಉಪಕ್ರಮಿಸಿದರೆ ಜನಾಂಗೀಯ ದ್ವೇಷವು ಮನಸ್ಸಿನಲ್ಲಿ ಮನೆ ಮಾಡಿಕೊಳ್ಳುವುದು ಅನಿವಾರ್ಯ.

ಜನಾಂಗೀಯ ದ್ವೇಷ ಮತ್ತು ವಿಜ್ಞಾನ – ಇವುಗಳ ನಡುವೆ ಸಾಮ್ಯವೇನೂ ಇಲ್ಲ, ಕೇವಲ ಕೆಲವು ಪದಗಳು ಎರಡರಲ್ಲೂ ಇರುತ್ತವೆ. ಆ ಪದಗಳಿಗೆ ಬಣ್ಣ ಕಟ್ಟಿ ಅವನ್ನು ಬಯ್ಯಲು ಹೊರಟರೆ ಕೆಲಸ ಮುಗಿಯಿತು. ಜನಾಂಗೀಯ ವಿಭಜನೆಯು ಎಷ್ಟು ವಿಪತ್ಕಾರಿಯಾಗಿ ಬೆಳೆದಿದೆಯೆಂದರೆ ವಿಜ್ಞಾನಿಗಳು ಆ ಪದವನ್ನು ಬಳಸಲು ಸಹ ಅಂಜುವಂತಾಗಿದೆ. ಜನಾಂಗೀಯ ದ್ವೇಷಿಗಳು ಯಹೂದಿಗಳನ್ನು ಒಂದು 'ಜನಾಂಗ' ಎಂದು ಕರೆದರೆ ವಿಜ್ಞಾನಿಗಳು ಅದು ಹಾಗಲ್ಲವೆನ್ನುತ್ತಾರೆ. ಆದರೆ ಸಾವಿರಾರು ಜನ ಮೊದಲ ಪ್ರಮೇಯವನ್ನು ಸತ್ಯವೆಂದು ಸ್ವೀಕರಿಸಿಬಿಟ್ಟರೆ ವಿಜ್ಞಾನಿಯು ಬಳಸುವ "ಜನಾಂಗ" ಎಂಬ ಪರಿಭಾಷೆ ಅರ್ಥವಿಲ್ಲದ್ದಾಗುತ್ತದೆ. ಆಗ ಅವನು ಆ ಪದದ ಜಾಗದಲ್ಲಿ ಬೇರೊಂದು ಪದ ಹುಡುಕಿಕೊಳ್ಳಬೇಕು, ಅಷ್ಟೆ. ಆದರೆ ಹಾಗೆ ಮಾಡುವುದು ತಪ್ಪು; ಏಕೆಂದರೆ ಜನಾಂಗ ದ್ವೇಷಿಗಳು ಪರಿಕಲ್ಪನೆಗಳನ್ನು ದುರುಪಯೋಗ ಮಾಡಿಕೊಳ್ಳುವ ಹಕ್ಕನ್ನು ಮಾನ್ಯ ಮಾಡಿದಂತಾಗುತ್ತದೆ. ಆ ಹಕ್ಕು ಸರ್ವಥಾ ಯಾರಿಗೂ ಇರಬಾರದು. ಆದ್ದರಿಂದಲೇ ಹೋರಾಟದ ಕಣಕ್ಕಿಳಿಯುವುದು ಅನಿವಾರ್ಯ, ಪದಗಳನ್ನು ಕ್ಷುದ್ರೀಕರಣಕ್ಕೆ ಗುರಿಮಾಡುವುದನ್ನು ತಡೆಯಲೇಬೇಕು. ಕುಟಿಲ ಮತಿಗಳಿಗೆ ಹೆದರಿ ನಾವು ಪರ್ಯಾಯ ಪದಗಳನ್ನು ಹುಡುಕ ಹೊರಡುವ ಬದಲಾಗಿ ಇರುವ ಪದಗಳನ್ನು ಯಾವಾಗಲೂ ವೈಜ್ಞಾನಿಕವಾಗಿ ಬಳಸುವಂತೆ ಮಾಡಬೇಕಾದ್ದು ಅಗತ್ಯ. ಜನಾಂಗಗಳಿವೆಯಾದರೆ ಅವಕ್ಕೆ ವೈಜ್ಞಾನಿಕ ಸೂತ್ರಗಳೇನೆಂಬುದನ್ನು ತಿಳಿಯಬೇಕು. ಜನಾಂಗಗಳ ಕೆಲವು ಲಕ್ಷಣಗಳು ಮುಂದಿನ ಪೀಳಿಗೆಗಳಲ್ಲಿ ಮರುಕಳಿಸುವುದಾದರೆ ಮೊದಲು ಆ ಯಾವ ಲಕ್ಷಣಗಳು ಪಿತ್ರಾರ್ಜಿತವೆಂಬುದನ್ನು ಅರಿಯೋಣ. ಅಂದರೆ, ವೈಜ್ಞಾನಿಕವಾಗಿ ಜನಾಂಗೀಯ ಲಕ್ಷಣಗಳೆಂದರೇನು ಮತ್ತು ಅವು ಯಾವುವು ಎಂಬುದರ ಪರಿವೆ ಅತ್ಯಗತ್ಯ.

ಹಾಗಿದ್ದರೆ ಜನಾಂಗೀಯ ದ್ವೇಷವು ಏನು ಹೇಳುತ್ತದೆ? ಮಾನವ ಗುಂಪುಗಳಿವೆ, ಅವುಗಳ ಕೆಲವು ದೈಹಿಕ ಲಕ್ಷಣಗಳ ಮೂಲಕ ಅವನ್ನು ಗುರುತಿಸಬಹುದು ಎಂಬುದು ಅದರ ಸತ್ವ. ಅಂತಹ ಗುಂಪುಗಳು ಜನ್ಮಸಹಜವಾಗಿ ಮಾನವಸಂಕುಲಕ್ಕೆ ಅಪಾಯ ಉಂಟುಮಾಡುತ್ತವೆ, ಆದ್ದರಿಂದ ಅವನ್ನು ದೂರವಿಡಬೇಕು, ಅವರೊಡನೆ ಸಂಸರ್ಗ ಕೂಡದು, ಅವರನ್ನು ದಂಡಿಸಬೇಕು, ಕಡೆಗೆ ನಾಶಮಾಡಬೇಕು, ಎಂದು ಜನಾಂಗೀಯ ದ್ವೇಷ ಹೇಳುತ್ತದೆ. ಈ ನಿಲುವು ಸರಿಯೆಂದು ಸ್ಥಾಪಿಸಬೇಕಾದರೆ ಜನಾಂಗೀಯ ದ್ವೇಷಿಗಳು ಕೆಳಗಿನ ಅಂಶಗಳನ್ನು ಪ್ರಾಯೋಗಿಕವಾಗಿ ಸಾಬೀತುಮಾಡಿ ತೋರಿಸಬೇಕು:

(ಅ) ಕೆಲವು ಮಾನವ ಗುಂಪುಗಳು ಇತರ ಗುಂಪುಗಳಿಗಿಂತ ಪ್ರಾಕೃತಿಕವಾಗಿ ಭಿನ್ನ ಮತ್ತು ಅವುಗಳ ನಡತೆಯೂ ಅಷ್ಟೇ ಭಿನ್ನ.

(ಆ) ನಡತೆಯ ಇಂತಹ ವಕ್ರತೆಯು ಪಿತ್ರಾರ್ಜಿತವಾದ್ದು; ಆದ್ದರಿಂದ ಈ ಗುಂಪಿನ ಯಾವುದೇ ವ್ಯಕ್ತಿಯೂ ಆ ವಕ್ರತೆಯನ್ನು ಕಳೆದುಕೊಳ್ಳುವುದಿಲ್ಲ, ಕಳೆದುಕೊಳ್ಳಲಾಗದು.

(ಇ) ನಡತೆಯ ನಿರ್ದಿಷ್ಟ ಅಂಶಗಳಲ್ಲಿ ಕೆಲವಾದರೂ "ದುಷ್ಟ"ವಾದವು ಮತ್ತು ಆ "ದುಷ್ಟ" ಅಂಶಗಳೇ ಆ ಗುಂಪುಗಳಲ್ಲಿ ಪ್ರಧಾನ.

(ಈ) ಬೇರೆ ಮಾನವ ಗುಂಪುಗಳು ಹೊಂದಿರುವ "ಶಿಷ್ಟ" ಲಕ್ಷಣಗಳು ಆ ಗುಂಪುಗಳಿಗೆ "ದುಷ್ಟತನ"ವಿರುವ ಇನ್ನಿತರ ಗುಂಪುಗಳ ಮೇಲೆ ಅಧಿಕಾರ ಚಲಾಯಿಸಲು ಸಮರ್ಥನೆ ನೀಡುತ್ತವೆ.

ಸ್ವಲ್ಪ ಯೋಚನೆ ಮಾಡಿ ನೋಡಿದರೆ ಈ ಅಂಶಗಳನ್ನು ಜನಾಂಗದ್ವೇಷಿಯು ಹೊಂದಿರಬೇಕಾದ್ದು ಅಗತ್ಯವೆಂದು ಮನದಟ್ಟಾಗುತ್ತದೆ. ಅಲ್ಪಸಂಖ್ಯಾತರನ್ನು ಪ್ರತ್ಯೇಕವಾಗಿಡಲು, ಅವರ ಮೇಲೆ ವಿವಿಧ ತಾರತಮ್ಯಗಳನ್ನು ಹೇರಲು, ಈ ಜನಾಂಗ ದ್ವೇಷಿಯು ಹಲವು ಕುತಂತ್ರಗಳನ್ನು ಹೂಡಬೇಕು. ಆ ಕುತಂತ್ರಗಳಿಗೆ ನಿಯಮಾಧಾರಿತ ಸಮರ್ಥನೆ ನೀಡಬೇಕು; ಅದಕ್ಕಾಗಿ ತನ್ನ ಜನಾಂಗವು ಇತರೇ ಜನಾಂಗಗಳಿಗಿಂತಲೂ ನೈತಿಕವಾಗಿ ಶ್ರೇಷ್ಠವಾದುದೆಂದು ಪ್ರಲಪಿಸಬೇಕಾಗುತ್ತದೆ. ಆಯಿತು, ಇಂತಹ ಜನಾಂಗವಾದವು ಸರಿಯೆಂದೇ ಇಟ್ಟುಕೊಂಡರೆ "ಉನ್ನತ" ಎಂದು ಕರೆದುಕೊಳ್ಳುವ ಜನಾಂಗದ ಜವಾಬ್ದಾರಿ ಏನು? "ಉನ್ನತವಲ್ಲದ" ಜನಾಂಗವನ್ನು ಪ್ರಯತ್ನಪೂರ್ವಕವಾಗಿ 'ಉನ್ನತ'ಗೊಳಿಸುವುದು, ಅಲ್ಲವೆ? ಅದೇ ತಾಪತ್ರಯ: ಜನಾಂಗವಾದದ ಪ್ರಭೃತಿಯು 'ಉನ್ನತವಲ್ಲದವರಿಗೆ' ತಿಳಿವು ನೀಡಬಯಸುವುದಿಲ್ಲ; ಅವನ ಆಶಯ ಇತರರನ್ನು ಹಿಂಸಿಸುವುದು, ತುಳಿದಿಡುವುದು. ಆದ್ದರಿಂದ "ಕೆಳಮಟ್ಟದವರ" ನಡತೆಯ ಚಹರೆಯನ್ನು ತೊಡೆದುಹಾಕಲಾಗದು, ಅದು ಪಿತ್ರಾರ್ಜಿತವಾದದ್ದು ಎಂದು ವಾದಿಸುತ್ತಾನೆ. ನಿಜಕ್ಕೂ ಅದು ಆನುವಂಶಿಕವೇ ಆಗಿದ್ದಲ್ಲಿ ಅದು ಸಮುದಾಯದ ಮೂಲಭೂತ ಲಕ್ಷಣವಾಗಿರ ಬೇಕು ಮತ್ತು ಬೇರೆ ಗುಂಪುಗಳ ಲಕ್ಷಣಕ್ಕಿಂತಲೂ ಸಂಪೂರ್ಣವಾಗಿ ಭಿನ್ನವಾಗಿರಬೇಕು. ಇಲ್ಲದಿದ್ದರೆ ಆ "ಕೆಳಮಟ್ಟದವರು" ಮಾನವರಂತೆ ತೋರುತ್ತಾರೆ, ಆದರೆ ಮಾನವರಲ್ಲ, ಎಂದು ಹೇಳಿದಂತಾಗುತ್ತದೆ. ಒಬ್ಬ ಅಪ್ಪಟ ನಾಝಿ ಹೇಳುತ್ತಿದ್ದನಂತೆ, ಅವನಿಂದ ಹಿಂಸೆಗೊಳ್ಳಲ್ಪಟ್ಟ ಜನರಿಗೂ ಬೇರೆ ಪ್ರಾಣಿಗಳಿಗೂ ವ್ಯತ್ಯಾಸವೇ ಇರಲಿಲ್ಲವೆಂದು! ಪ್ರಪಂಚದ ಮಿಕ್ಕೆಲ್ಲ ಜನ ಇಂಥದೇ ಅಭಿಪ್ರಾಯವನ್ನು ಅಪ್ಪಟ ನಾಝಿಗಳ ಬಗೆಗೆ ತಾಳಿದ್ದರು.

ಒಟ್ಟಿನಲ್ಲಿ, ನಾಝಿಗಳ ಜನಾಂಗವಾದದಲ್ಲಿ ನಾಲ್ಕು ಸಿದ್ಧ ಸೂತ್ರಗಳಿವೆ. ಅವರದು ಶುಷ್ಕ ಮನಸ್ಸು ಮತ್ತು ಕೊಳೆತ ಭಾವನೆಗಳು; ಆದರೆ ಅದನ್ನವರು ಗುರುತಿಸಲಾಗದಷ್ಟು ಭಾವಶೂನ್ಯರು. ಅವರ ನಾಲ್ಕು ಸಿದ್ಧಸೂತ್ರಗಳು ಹಾಗೂ ಅವುಗಳಿಂದ ಸೂಚಿತವಾಗುವ ತೀರ್ಮಾನ ಶುದ್ಧ ತಪ್ಪೆಂದು ಅವರು ತಿಳಿಯರು ಮತ್ತು ತಿಳಿಯುವ ಅಪೇಕ್ಷೆಯೂ ಇಲ್ಲದವರು.

ಜನಾಂಗವಾದದ ವಿಮರ್ಶೆ

ನಮ್ಮೆದುರು ನಾಲ್ಕು ಸೂತ್ರಗಳಿವೆ, ಅವನ್ನು ಸತ್ಯವೆಂದು ಗ್ರಹಿಸಲಾಗಿದೆ. ಅವುಗಳ ಜೊತೆ ಐದನೆಯ ಒಂದು ಹೇಳಿಕೆಯನ್ನು ಆಧರಿಸಿ ಕ್ರಿಯೆ ಜರುಗುತ್ತದೆ: ನಾಲ್ಕು ಪ್ರಮೇಯಗಳು ಮತ್ತು ಒಂದು ತೀರ್ಮಾನ. ಯಾವುದೇ ವಾದದಲ್ಲಿ ಒಂದೇ ಒಂದು

ಪ್ರಮೇಯವು ತಪ್ಪಾದರೆ ತೀರ್ಮಾನವು ಪೂರ್ತಿ ತಪ್ಪಾಗದಿರಬಹುದು, ಆದರೆ ಅದರ ಸತ್ಯವು ಸಂಶಯಾಸ್ಪದ. ಬೇರಾವುದೋ ಕಾರಣಗಳಿಂದಾಗಿ ಅದು ನಿಜವಾಗಬಹುದು, ಅಷ್ಟೆ. ಪ್ರಕೃತದ ವಾದದಲ್ಲಿ ಅಂತಹ ಬೇರಾವ ಕಾರಣಗಳೂ ಇಲ್ಲ. ಜನಾಂಗವಾದಿಯ ಸಿದ್ಧಸೂತ್ರಗಳನ್ನು ವಿಶ್ಲೇಷಿಸುವಾಗ ನಾವು ಆಯ್ದುಕೊಂಡ ಸೂತ್ರಗಳು ಎಂಥವೆಂದರೆ ಅವುಗಳ ಸತ್ಯವನ್ನು ಊಹಿಸಿಕೊಂಡರೆ ಮಾತ್ರ ಅವುಗಳಿಂದ ಹೊಮ್ಮುವ ತೀರ್ಮಾನ ಸರಿಯಾಗಿರುತ್ತದೆ. "ಉ ಎಂಬ ಹೇಳಿಕೆಯು ಸರಿ ಎನಿಸಿಕೊಳ್ಳಬೇಕಾದರೆ ಮೊದಲಿಗೆ ಅ,ಆ,ಇ ಮತ್ತು ಈ ಮೊದಲೇ ಸರಿಯಾಗಿದ್ದಿರಬೇಕು. ಅವುಗಳಲ್ಲಿ ಯಾವುದೇ ಒಂದು ಸರಿಯಲ್ಲದಿದ್ದರೂ ಸಾಕು, ತೀರ್ಮಾನವು ತಪ್ಪಾಗಿರುತ್ತದೆ. ಆದ್ದರಿಂದ ಕೇವಲ ಒಂದು ಸೂತ್ರವು ತಪ್ಪೆಂಬುದನ್ನು ಸಾಧಿಸಿದರೆ ತೀರ್ಮಾನವು ತಪ್ಪೆಂದು ಸಿದ್ಧವಾಗುತ್ತದೆ. ಹಾಗೆ ನೋಡಿದರೆ, ನಾಲ್ಕೂ ಸೂತ್ರಗಳು ತಪ್ಪೇ. ಅಷ್ಟೊಂದು ಶ್ರೀಮಂತವಾಗಿವೆ ಈ ಸೂತ್ರಗಳು!

ನಾವೀಗ ಒಂದೊಂದು ಸೂತ್ರವನ್ನೂ ವಿಶ್ಲೇಷಣೆಗೆ ಒಳಪಡಿಸೋಣ: ಅದರಿಂದ ಜನಾಂಗವಾದದ ಆಂತರಿಕ ಅಸಾಂಗತ್ಯವು ತಾನೇ ತಾನಾಗಿ ತಿಳಿಯುತ್ತದೆ. ಜನಾಂಗವಾದವು ವಾಸ್ತವಕ್ಕೆ ವಿರೋಧವಾದುದಷ್ಟೇ ಅಲ್ಲ, ಅದು ಯಾವ ವೈಚಾರಿಕ ದೃಷ್ಟಿಯಿಂದ ನೋಡಿದರೂ ಅಬದ್ಧವಾಗಿಯೇ ಇರುತ್ತದೆ.

ಈಗ ಮೊದಲನೆಯ ಸೂತ್ರ: ಕೆಲವು ಮಾನವ ಗುಂಪುಗಳು ಇತರ ಗುಂಪುಗಳಿಗಿಂತ ಪ್ರಾಕೃತಿಕವಾಗಿ ಭಿನ್ನ ಮತ್ತು ಅವುಗಳ ನಡತೆಯೂ ಅಷ್ಟೇ ಭಿನ್ನ, ಎಂಬುದು.

ಎರಡು ಗುಂಪುಗಳು ಒಂದರಿಂದೊಂದು ತೀರಾ ಭಿನ್ನವಾಗಿದ್ದಾಗ ಭಿನ್ನತೆಯು ಚಹರೆ, ಕ್ರಿಯೆ ಮತ್ತು ವಿಶ್ವದ ಇತರ ಸಂಗತಿಗಳೊಂದಿಗೆ ಆ ಗುಂಪುಗಳ ಸಂಬಂಧ, ಇವುಗಳಲ್ಲಿ ಪ್ರಕಟಗೊಳ್ಳುತ್ತದೆ. ಅಂತಹ ಸಂದರ್ಭದಲ್ಲಿ ಒಂದು ವರ್ಗದ ಜನರ ನಡುವೆ ಸಾಮ್ಯತೆಯು ಬೇರೆ ವರ್ಗಗಳ ನಡುವೆ ಅವರಲ್ಲಿ ಇರಬಹುದಾದ ಸಾಮ್ಯತೆಗಿಂತಲೂ ಹೆಚ್ಚು ಪ್ರಖರ. ಸಿಂಹಗಳಿಗೆ ಪಂಜ ಮತ್ತು ಕುದುರೆಗಳಿಗೆ ಗೊರಸು ಇರುತ್ತವೆ. ಅವುಗಳ ಚಹರೆ, ಕ್ರಿಯೆ, ಜೀವನವಿಧಾನ, ಪ್ರಾಪಂಚಿಕ ಸಂಬಂಧಗಳು, ಇವೆಲ್ಲಾ ಭಿನ್ನ. ಅವುಗಳ ನಡುವೆ ಲೈಂಗಿಕ ಸಂಬಂಧವಿಲ್ಲ. ಸಿಂಹದ ಬಳಿ ಸಾರಿದರೆ ಕುದುರೆಯು ಸಿಂಹದ ನಾಲಿಗೆಯ ರುಚಿಗೆ ತುತ್ತಾಗುತ್ತದೆ. ಅದರಿಂದ ತಪ್ಪಿಸಿಕೊಳ್ಳುವುದು ಕುದುರೆಯ ಆದ್ಯ ತುರ್ತು. ಅಂದರೆ, ಪ್ರಾಣಿಗಳಲ್ಲಿ ಇವೆರಡೂ ಮೂಲತಃ ಭಿನ್ನ. ಜನಾಂಗೀಯ ಭಿನ್ನತೆಗಳು ಸಿಂಹ – ಕುದುರೆಗಳ ನಡುವಿನಂಥವು ಎಂದು ಹೇಳಿದರೆ ಜನಾಂಗವಾದಕ್ಕೆ ಸ್ವಲ್ಪವಾದರೂ ವೈಜ್ಞಾನಿಕ ತಳಹದಿ ದಕ್ಕೀತು.

ಇನ್ನೊಂದು ಉದಾಹರಣೆ ನೋಡಿ: ಹುಲಿ ಮತ್ತು ಚಿರತೆಗಳನ್ನು ತುಲನೆ ಮಾಡಿ ನೋಡಿ. ಒಂದಕ್ಕೆ ಮೈಮೇಲೆ ಪಟ್ಟೆಗಳು, ಇನ್ನೊಂದಕ್ಕೆ ಚುಕ್ಕೆಗಳು. ಆದರೆ ಅವೆರಡರ ನಡುವೆ ಬೇರೆ ಸಾಮ್ಯತೆಗಳುಂಟು. ಎರಡಕ್ಕೂ ಪಂಜಗಳಿವೆ, ಎರಡೂ ಬೆಕ್ಕಿನ ಜಾತಿಯವು, ಆದರೆ ಆರ್ಭಟಿಸುವಂತಹ ಬೆಕ್ಕುಗಳು. ಬೇರೆ ಬೆಕ್ಕುಗಳು ಕೇವಲ ಪರ್‌ಗುಟ್ಟುವ ಶಬ್ದ ಮಾಡುತ್ತವೆ. ಈ ವಿವಿಧ ಲಕ್ಷಣಗಳ ಪ್ರಾಮುಖ್ಯತೆಯನ್ನು ತೂಕಮಾಡಿ ನೋಡಿ: ಹುಲಿಯ ಪಟ್ಟೆ ಮತ್ತು ಚಿರತೆಯ ಚುಕ್ಕೆ ಅವನ್ನು ಭಿನ್ನೈಸುತ್ತವೆ, ಆದರೆ ಆ ಚಿಹ್ನೆಗಳು ಅವುಗಳ ನಡತೆಯನ್ನು ನಿಯಂತ್ರಿಸುವುದಿಲ್ಲ. ಅವುಗಳ ಸ್ವಭಾವ ಮತ್ತು ಜೀವನಪದ್ಧತಿ ಅವುಗಳ ಬೆಕ್ಕುಜಾತಿಯಿಂದ ನಿರ್ಧಾರವಾಗುತ್ತವೆ. ಜನಾಂಗೀಯ

ಭಿನ್ನತೆಯು ಹುಲಿ ಮತ್ತು ಚಿರತೆಗಳ ನಡುವಿನಂಥದು ಎಂದೇನಾದರೂ ಸಾಧಿಸಿ ತೋರಿಸಲು ಸಾಧ್ಯವಿದ್ದರೆ ಆಗ ಜನಾಂಗವಾದಕ್ಕೆ ವೈಜ್ಞಾನಿಕ ನೆಲೆ ಇರುವುದಿಲ್ಲ.

ಹಿಂದೆ ಪ್ರಸ್ತಾಪಿಸಿದ್ದ ಅಮೆರಿಕಾದ ಸೆನೆಟರ್ ಬಿಲ್ಬೊ ವಿಚಿತ್ರ ಮಾನವಶಾಸ್ತ್ರಜ್ಞ; ಅವನ ಪ್ರಕಾರ ಜನಾಂಗೀಯ ಭಿನ್ನತೆಗಳು ಕುದುರೆ ಮತ್ತು ಸಿಂಹದ ನಡುವಿನಂಥವು. ಅವನ ಒಂದು ವಿಶ್ಲೇಷಣೆಯನ್ನು ನೋಡಿ:

"ಜನಾಂಗ ಪ್ರತ್ಯೇಕತೆಯು ನೈಸರ್ಗಿಕ ನಿಯಮ. ಪ್ರಕೃತಿಯಲ್ಲಿ ಅದು ಸಹಜ. ಪ್ರಾಣಿ ಪ್ರಪಂಚದಲ್ಲೂ ಅದು ಸ್ವಾಭಾವಿಕ. ಹುಲ್ಲುಗಾವಲಿನಲ್ಲಿ ಹಸುಗಳ ಜೊತೆ ಕುದುರೆಗಳ ಸಾಲು ಕಂಡಿದ್ದೀರಾ? ಇಲ್ಲ, ಅವೆರಡೂ ಬೇರೆಬೇರೆ ದಿಕ್ಕಿನಲ್ಲಿ ಹೋಗಿಬಿಡುತ್ತವೆ. ಹಂದಿಗಳು ಮತ್ತು ಕುರಿಗಳೂ ಹಾಗೆಯೇ. ಅದೇ ಸಾಮಾನ್ಯ ನಿಯಮವು ಮಾನವ ಜನಾಂಗಕ್ಕೂ ಅನ್ವಯಿಸುತ್ತದೆ. ಮಂಗೋಲಿಯಾದ ಜನಾಂಗಗಳು ಬೆರೆಯುತ್ತವೆ, ಅವರಲ್ಲಿ ವಿವಾಹ ಸಂಬಂಧ ಇರುತ್ತದೆ, ಜೊತೆಯಲ್ಲಿ ವಾಸಿಸುತ್ತಾರೆ ಮತ್ತು ಅಂತರ ವ್ಯವಹಾರಗಳಿರುತ್ತವೆ. ಅಮೆರಿಕಾದ ಮೂಲಜನಾಂಗದವರಾದ ಇಂಡಿಯನ್ನರಲ್ಲೂ ಅಷ್ಟೆ. ನೀಗ್ರೊ ಜನಾಂಗದವರು ಮಾತ್ರ ತಮ್ಮ ಜನಾಂಗದ ಬಗ್ಗೆ ನಾಚುತ್ತಾರೆ, ಬಿಳಿ ಜನಾಂಗದವರೊಡನೆ ಸಮಾನತೆಗಾಗಿ ಆಗ್ರಹಿಸುತ್ತಾರೆ. ನಮ್ಮ ಅಮೆರಿಕಾದಲ್ಲಿ ಕೆಲವು ನಾಯಕರು ಉಪದೇಶಿಸುವುದೇನೆಂದರೆ ಬಿಳಿಯರು ಮತ್ತು ಕರಿಯರು ಲೈಂಗಿಕ ಕೂಡುವಿಕೆ, ಅಂತರವಿವಾಹ, ಇವೆರಡನ್ನು ಸಾಧಿಸಿದರೆ ಜನಾಂಗ ಪ್ರಶ್ನೆಯು ಪರಿಹಾರವಾಗುತ್ತದೆ, ಎಂದು."

ಸೆನೆಟರ್ ಓಡೇನಿಯಲ್ ಇದಕ್ಕೆ ಸೊಪ್ಪು ಹಾಕುತ್ತಾನೆ: "ಟೆಕ್ಸಾಸ್‌ನಲ್ಲಿ ಬಿಳಿಯರು ಮತ್ತು ಕರಿಯರು ಪರಸ್ಪರ ಸೌಹಾರ್ದ ತೋರುತ್ತಾರೆ. ನಮ್ಮನಮ್ಮ ಸ್ಥಾನಗಳನ್ನು ನಾವು ಕಾಯ್ದುಕೊಳ್ಳುತ್ತೇವೆ. ಅವರಿಲ್ಲದೆ ನಾವು, ನಾವಿಲ್ಲದೆ ಅವರು ಹೇಗೆ ಬಾಳಲು ಸಾಧ್ಯ? ನಾವು ಒಳ್ಳೆಯ ಬಾಂಧವ್ಯ ಹೊಂದಿದ್ದೇವೆ, ಆದರೆ ಜೊತೆಯಲ್ಲಿ ವಾಸಿಸುವುದಿಲ್ಲ. ನಮ್ಮಲ್ಲಿ ಅಂತರ್ವಿವಾಹವಿಲ್ಲ. ನಮ್ಮಲ್ಲಿ ಕರಿಯರಿಗೆ ತಮ್ಮ ಜನಾಂಗದ ಬಗ್ಗೆ ಹೆಮ್ಮೆ ಇದೆ, ನಮಗೆ ನಮ್ಮ ಜನಾಂಗದ ಬಗ್ಗೆ ಇರುವಂತೆಯೇ."

ಸೆನೆಟರ್ ಜಾನ್‌ಸ್ಟನ್‌ನ ಮಾತುಗಳನ್ನು ಗಮನಿಸಿ; ಅವನು ವಿಜ್ಞಾನದಿಂದ ದೈವತಾಶಾಸ್ತ್ರದತ್ತ ದಾಪುಗಾಲು ಹಾಕುತ್ತಾನೆ: "ನ್ಯೂಯಾರ್ಕಿನಲ್ಲಿ ಕರಿಯರು ಹೇರ್ಲಂನಲ್ಲಿ ಸೇರಿಕೊಳ್ಳುತ್ತಾರೆ. ಅದು ಅವರ ಹುಟ್ಟುಗುಣದ ಪರಿಣಾಮ. ವಿವಿಧ ಜನಾಂಗದವರು ಬೆರೆಯುತ್ತಾರೆ, ಆದರೆ ಜೊತೆಯಲ್ಲಿರುವುದು ಅಥವಾ ಇಲ್ಲದಿರುವುದು ಅವರ ವಾಂಛೆ. ಬೇರೆ ಜನಾಂಗದವರು ಈ ವಿಷಯದಲ್ಲಿ ತಲೆ ಹಾಕುವುದು ಅವರಿಗೆ ಬೇಕಿಲ್ಲ. ಅದು ಮಾನವ ಸ್ವಭಾವ ಗುಣ. ಅದು ಸಾರ್ವಕಾಲಿಕ ಸತ್ಯ. ಭಗವಂತ ನನ್ನ ಮುಖ ಬಿಳಿದು ಮಾಡಿದ. ಬೇರೆ ಕೆಲವನ್ನು ಹಳದಿ ಮಾಡಿದ. ಇನ್ನು ಕೆಲವರನ್ನು ಕರಿಯರನ್ನಾಗಿಸಿದ. ಅದನ್ನೆಲ್ಲಾ ಬದಲಿಸಲು ನಾವು ಯಾರು?"

ಜನಾಂಗೀಯ ಭಿನ್ನತೆಗಳನ್ನು ಗುರುತಿಸಲು ವಿಜ್ಞಾನಿಗಳು ಪರಿಗಣನೆಗೆ ತೆಗೆದುಕೊಳ್ಳುವುದು ಮುಖ್ಯವಾಗಿ ದೈಹಿಕ ಚಹರೆಗಳನ್ನು: ಎತ್ತರ, ತಲೆಯ ಆಕಾರ, ಮೈಬಣ್ಣ, ಕಣ್ಣು ಮತ್ತು ಕೂದಲಿನ ಬಣ್ಣ, ಕೂದಲಿನ ರೂಪ ಮತ್ತು ಪರಿಮಾಣ. ಜನಾಂಗದ್ವೇಷ ಮೂಡಿಸುವವರು ಇವುಗಳಲ್ಲಿ ಕೆಲವನ್ನು ತಾವೂ ಬಳಸುತ್ತಾರೆ; ಆದರೆ

ಅವರ ಪ್ರಕಾರ ಸುಧಾರಿತ ಮನುಷ್ಯನೊಬ್ಬ ಆರಡಿ ಉದ್ದದವನಾಗಿರಬೇಕು, ಉದ್ದನೆಯ ತಲೆ ಹೊಂದಿರಬೇಕು, ನಸು ಹೊಂಬಣ್ಣದವನಾಗಿರಬೇಕು, ಅಲೆಯಲೆಯಾದ ಕೂದಲು ಉಳ್ಳವನಾಗಿರಬೇಕು. ಇವುಗಳಲ್ಲಿ ವ್ಯತ್ಯಾಸಗಳು ಹೆಚ್ಚಿದಂತೆ ಅಂಥವರ ಬಗೆಗಿನ ತಾತ್ಸಾರವೂ ಹೆಚ್ಚುತ್ತದೆ.

ಆದರೆ ವ್ಯತ್ಯಾಸಗಳು ಕಲ್ಪಿತ; ಅವುಗಳನ್ನಾಧರಿಸಿ ಜನಾಂಗ ದ್ವೇಷಿಗಳು ವ್ಯಕ್ತಿಗಳ ನಡತೆಯನ್ನು ತೀರ್ಮಾನಿಸಿಬಿಡುತ್ತಾರೆ. ಉದಾಹರಣೆಗೆ, ಗುಂಗುರು ಕೂದಲಿನ ಕರಿಯನು ಸೋಮಾರಿ; ಅಂತೆಯೇ, ಸೊಂಪಾದ ಕರಿಕೂದಲಿನ ಮುಖದವನು, ಗರುಡನ ಮೂಗಿನವನು, ತನ್ನ ವ್ಯವಹಾರದಲ್ಲಿ ಬಡ್ಡಿ ಸೆಳೆಯುತ್ತಾನೆ, ಇತ್ಯಾದಿ. ಇಂತಹ ತಲೆಬುಡವಿಲ್ಲದ ಅನೇಕ ತಪ್ಪು ಕಲ್ಪನೆಗಳ ಉದಾಹರಣೆಗಳನ್ನು ಕಾಣಬಹುದು. ಕಣ್ಣಿಗೆ ಅಷ್ಟು ರಾಚದ ಲಕ್ಷಣಗಳನ್ನು "ಅಪವಾದ"ಗಳೆಂದುಬಿಡುತ್ತಾರೆ! ತಮ್ಮ ನೇರಬುದ್ಧಿಗೆ ಅದು ದೃಷ್ಟಾಂತವೆಂದು ಬೀಗುವುದೂ ಉಂಟು. ಆದರೆ ವೈಜ್ಞಾನಿಕ ನೆಲೆಯಲ್ಲಿ ಇದೆಲ್ಲಾ ಅಬದ್ಧ. ಅದರಲ್ಲಿ ತಾರ್ಕಿಕ ಸಾಧನೆ ಸೊನ್ನೆ ಮತ್ತು ಅಪವಾದವೆಂಬುದು ಕೃತ್ರಿಮದ ಮಾತು. ಒಬ್ಬ ವ್ಯಕ್ತಿಯ ಹೊರಗಿನ ಲಕ್ಷಣಕ್ಕೂ ಅವನ ನಡತೆಗೂ ಏನು ಸಂಬಂಧ? ಚರ್ಮದ ಬಣ್ಣದಿಂದ ನಡತೆಯನ್ನು ಊಹಿಸಲಾದೀತೆ? ಸರ್ವಥಾ ಅಸಾಧ್ಯ. ಎತ್ತರದ ಸೊಂಪಾದ ವ್ಯಕ್ತಿಯನ್ನು 'ನಾರ್ಡಿಕ್' ಎನ್ನುತ್ತಿದ್ದರು, ಹಿಟ್ಲರನ ಕಾಲದಲ್ಲಿ ಅವರು 'ಆರ್ಯರು' ಎಂದಾದರು. ಆ ದೈಹಿಕ ಲಕ್ಷಣಗಳು ಸುಗುಣವಂತರು, ಬುದ್ಧಿವಂತರು, ಎಂಬ ನಡತೆಯನ್ನು ನೀಡಬಲ್ಲುವೆ? ಹಾಗೇನಾದರೂ ಇದ್ದರೆ ಸುಗುಣಿಗಳಾಗುವುದು ನಮ್ಮಲ್ಲಿ ಅತಿಸುಲಭವೆಂದಾಯಿತು! ವ್ಯಕ್ತಿಯು ಕುಳ್ಳನೆ ಕಪ್ಪಗಿದ್ದರೆ ಅವನು ದುರ್ಗುಣದವನು, ದುರ್ಗುಣ ಅವನಿಗೆ ಅನಿವಾರ್ಯ. ಅದು ನಿಜಕ್ಕೂ ಅನಿವಾರ್ಯವಾದರೆ ಅವರನ್ನೇಕೆ ದೂಷಿಸಬೇಕು? ಅಂತೆಯೇ ತಥಾಕಥಿತ ಸುಗುಣವಂತನನ್ನು ಹೊಗಳುವುದೂ ಅಬದ್ಧವೇ ಆಯಿತು.

ಮೈಬಣ್ಣ ಮತ್ತು ನಡತೆಗಳ ನಡುವೆ ಸಂಬಂಧ ಕಲ್ಪಿಸುವುದು ಕಷ್ಟವೆಂದು ತೋರಿದಾಗ ಜನಾಂಗ ದ್ವೇಷಿಗಳು ತಲೆಯ ಆಕಾರ ಮತ್ತು ಗಾತ್ರಗಳಿಗೆ ಅಂಟಿಕೊಳ್ಳುತ್ತಾರೆ. ದೊಡ್ಡ ತಲೆ ಇದ್ದರೆ ದೊಡ್ಡ ಮಿದುಳು, ಅದರಿಂದ ಚಿಂತನಾಶಕ್ತಿಯ ಉನ್ನತಿ, ಎಂಬ ಚಿಂತನಾ ಲಹರಿ ಅವರದು. ಆದರೆ ಅದು ಮೂರ್ಖ ಸೂತ್ರ. ಈವರೆಗೆ ದೊರೆತಿರುವ ಅತಿದೊಡ್ಡ ಮಿದುಳು ಒಬ್ಬ ಶತದಡ್ಡನದು! ಎಷ್ಟೋ ಅಸಾಧಾರಣ ಮೇಧಾವಿಗಳು ಸ್ವಲ್ಪ ಸಣ್ಣ ಮಿದುಳನ್ನು ಹೊಂದಿದ್ದವರೇ. ಅಂದರೆ ಮಾನವನ ಮಿದುಳಿನ ಆಕಾರ ಮತ್ತು ಗಾತ್ರಕ್ಕೂ ಅವನ ಬೌದ್ಧಿಕ ಹಿರಿಮೆಗೂ ಸಂಬಂಧವಿಲ್ಲವೆಂದರ್ಥ. ಒಳ್ಳೆಯ ಅಥವಾ ಕೆಟ್ಟ ನಡತೆಯು ಜನಾಂಗೀಯ ಭಿನ್ನತೆಯಿಂದ ಉಂಟಾಗುವುದಿಲ್ಲ. ಇನ್ನೂ ವಿಶೇಷವೆಂದರೆ ಯಾವುದೇ ಮಾನವ ಗುಂಪಿನಲ್ಲಿ ಎಲ್ಲರ ದೈಹಿಕ ಲಕ್ಷಣಗಳೂ ಒಂದೇ ಆಗಿರುವುದಿಲ್ಲ. ಒಂದೇ ಗುಂಪಿನಲ್ಲಿ ಬೇರೆಬೇರೆ ಎತ್ತರದ ವ್ಯಕ್ತಿಗಳಿರುತ್ತಾರಲ್ಲ! ನೈಲ್ ನದಿಯ ಉಗಮಸ್ಥಾನವಾದ ಇಥಿಯೋಪಿಯಾದ ಶಿಲ್ಲಕ್ ನೀಗ್ರೋಗಳ ಸರಾಸರಿ ಎತ್ತರ ಆರಡಿ ಎರಡಂಗುಲ. ಅಲ್ಲಿಗೆ ಬಹಳ ಹತ್ತಿರದಲ್ಲೇ ನಾಲ್ಕಡಿ ಎಂಟಂಗುಲದ ಪಿಗ್ಮಿಗಳಿದ್ದಾರೆ, ಅವರೂ ನೀಗ್ರೋಗಳೇ. ಎತ್ತರದ ಮತ್ತು ಕುಳ್ಳ ವ್ಯಕ್ತಿಗಳು ವಿಶ್ವದೆಲ್ಲೆಡೆ ಒಂದೊಂದು ಗುಂಪಿನಲ್ಲೂ ಇದ್ದಾರೆ. ಅಂತೆಯೇ ತಲೆಯ ಆಕಾರ ಸಹ ಪ್ರತಿ

ಗುಂಪಿನಲ್ಲೂ ವಿವಿಧವಾಗಿರುವುದು ಕಾಣಬರುತ್ತದೆ. ಅಮೆರಿಕಾದ ಮೂಲನಿವಾಸಿಗಳಲ್ಲಿ ಉದ್ದದ ತಲೆಯುಳ್ಳವರಿರುವಂತೆ ಗುಂಡನೆಯ ತಲೆಯುಳ್ಳವರೂ ಇದ್ದಾರೆ. ಬಹಳ ಹತ್ತಿರದ ಸಂಬಂಧಿಗಳಲ್ಲಿ ಇಂತಹ ವ್ಯತ್ಯಾಸವು ಅಪರೂಪವೇನಲ್ಲ. ಯಾವ ಜನಾಂಗವನ್ನು ನೋಡಿದರೂ ಇದು ತಿಳಿಯುತ್ತದೆ.

ಮೈಬಣ್ಣವು ಬೇರೆಲ್ಲದಕ್ಕಿಂತಲೂ ಗಮನಾರ್ಹವಾದ್ದು: ಭೌಗೋಳಿಕವಾಗಿ ನೋಡಿದರೆ ಪಶ್ಚಿಮ ಆಫ್ರಿಕಾದವರು ಅತಿಕಪ್ಪು, ವಾಯವ್ಯ ಯೂರೋಪಿನಲ್ಲಿ ಅತಿಬಿಳುಪು, ಮತ್ತು ಆಗ್ನೇಯ ಏಷ್ಯದಲ್ಲಿ ಹಳದಿ. ಇದೇನೂ ಸೂತ್ರಬದ್ಧವಾದ ರೀತಿಯಲ್ಲಿ ಅಸ್ತಿತ್ವದಲ್ಲಿಲ್ಲ, ಏಕೆಂದರೆ ಸಾಮಾನ್ಯವಾಗಿ ವಿಶ್ವದಲ್ಲೆಲ್ಲಾ ಇರುವುದು ಮಧ್ಯೆಯ ಛಾಯೆಗಳು. ಈ ಮಧ್ಯೆಯ ಛಾಯೆಯು ಬಹುಶಃ ಎಲ್ಲರ ಆರಂಭದ ಬಣ್ಣವಾಗಿದ್ದಿರಬೇಕು, ಮಿಕ್ಕ ದಟ್ಟ ಛಾಯೆಗಳು ನಂತರದ ಬೆಳವಣಿಗೆ. ಮೈಬಣ್ಣವನ್ನಾಧರಿಸಿ ಜನಾಂಗಗಳನ್ನು ವಿಭಜಿಸುವುದು ವಿಕಾಸದ ಗತಿಯನ್ನು ಅದಲುಬದಲು ಮಾಡಿದಂತೆಯೇ ಸರಿ. ಮೈಬಣ್ಣಕ್ಕೆ ಎರಡು ರಾಸಾಯನಿಕಗಳು ಕಾರಣವೆಂದು ಈಚಿನ ಅಧ್ಯಯನಗಳು ಸೂಚಿಸಿವೆ. ಅವುಗಳಲ್ಲಿ ಕ್ಯಾರೊಟೀನ್ ಎಂಬುದು ಹಳದಿ ಛಾಯೆಯನ್ನೂ ಮೆಲನಿನ್ ಎಂಬುದು ಕಂದು ಛಾಯೆಯನ್ನೂ ಉಂಟುಮಾಡುತ್ತವೆ. ವಿವಿಧ ಪ್ರಮಾಣಗಳಲ್ಲಿ ಇವೆರಡೂ ಎಲ್ಲರಲ್ಲಿಯೂ ಇರುತ್ತವೆ. ಚರ್ಮದಡಿ ರಕ್ತನಾಳಗಳಿವೆ, ಅವು ಬಣ್ಣಕ್ಕೆ ಪೂರಕವಾದುವು. ರಾಸಾಯನಿಕಗಳು ಮತ್ತು ರಕ್ತನಾಳಗಳು ಮೈಬಣ್ಣಕ್ಕೆ ಕಾರಣ. ಅವು ವೈವಿಧ್ಯದಿಂದ ಕೂಡಿರುವುದು ಅಸಹಜವಲ್ಲ; ಯಾವ ಲಕ್ಷಣಗಳು ಮಾನವ ಜನಾಂಗವನ್ನು ಭಿನ್ನೈಸುತ್ತವೆಂದು ಭಾವಿಸಲಾಗಿದೆಯೋ ಅವೇ ಮಾನವಕುಲದ ಐಕ್ಯತೆಯ ಸೂಚಕಗಳೆಂಬುದು ಒಂದು ವಿಶೇಷ. ಕರಿ, ಬಿಳಿ, ಹಳದಿ, ಹೀಗೆ ಯಾವ ಮೈಬಣ್ಣವೇ ಇರಲಿ, ಎಲ್ಲರಲ್ಲೂ ಮೆಲನಿನ್ ಮತ್ತು ಕ್ಯಾರೊಟೀನ್ ಇವೆ. ಚರ್ಮದಲ್ಲಿ ಮತ್ತು ಚರ್ಮದಡಿಯಲ್ಲಿ ಮಾನವರೆಲ್ಲಾ ಸೋದರರೇ. ರುಡ್ಯಾರ್ಡ್ ಕಿಪ್ಲಿಂಗ್ ಹೇಳಿದ್ದ, ಪೂರ್ವವು ಪೂರ್ವ ಮತ್ತು ಪಶ್ಚಿಮವು ಪಶ್ಚಿಮ, ಅವುಗಳ ಸಂಗಮ ಎಂದೂ ಅಶಕ್ಯ, ಎಂದು. ಆ ತಾತನ ಎಳಸು ಮಾತುಗಳನ್ನು ಬಿಡಿ, ಅವು ಬ್ರಿಟನ್ನಿನ ಸಾಮ್ರಾಜ್ಯದ ಜೊತೆ ಹೂತುಹೋಗಿವೆ. ಈಗಲಾದರೋ ಪೂರ್ವ–ಪಶ್ಚಿಮಗಳು ದಿನಂಪ್ರತಿ ಸಂಗಮಿಸುತ್ತಿವೆ. ಆ ಸಂಗಮವು ಮಾನವ ಶರೀರದ ಪಾತಳಿಯಲ್ಲೂ ನಡೆಯುತ್ತಿದೆ. ಹೀಗಾಗಿ ಜನಾಂಗವಾದಿಗಳ ತರ್ಕದಲ್ಲಿ ಕಿಂಚಿತ್ತೂ ಹೂರಣವಿಲ್ಲ. ಯಾವ ಲಕ್ಷಣಗಳೂ ಅನನ್ಯವಲ್ಲ, ಅವು ಎಲ್ಲ ಗುಂಪುಗಳಲ್ಲೂ ಇರುವಂಥವೇ. ಆದ್ದರಿಂದ ಯಾವುದೇ ಗುಂಪಿನ ನಡತೆಯನ್ನೂ ಅದರ ಜನಾಂಗ ಭಿನ್ನತೆಗೆ ಆರೋಪಿಸಲಾಗದು. ಜನಾಂಗೀಯ ವಿಭಜನೆಯು ನಿಖರ ಜ್ಞಾನವನ್ನು ವೇದ್ಯಮಾಡುವುದಿಲ್ಲ ಮತ್ತು ಜನರನ್ನು ಗಮನಾರ್ಹವಾಗಿ ಒಡೆಯುವುದಿಲ್ಲ. ಅಜ್ಞಾನ ಮತ್ತು ಮೂರ್ಖತನವನ್ನಷ್ಟೇ ಜನಾಂಗೀಯ ವಿಭಜನೆಯು ವೇದ್ಯಗೊಳಿಸಲು ಸಾಧ್ಯ. ಇಂತಹ ಅಪ್ರಕೃತ ಸಾಧನದಿಂದ ವಿಶ್ವಸನೀಯ ತರ್ಕಬುದ್ಧಿ ಮೂಡಿಬಂದೀತೆ?

ಜನಾಂಗೀಯ ವಿಭಜನೆಯು ಸೋತು ಸುಣ್ಣವಾಗಲು ನಿಜವಾದ ಕಾರಣ ಬೇರೆಯೇ ಇದೆ: ಜನರು ಜೀವಿಸುವುದು ಮೈಬಣ್ಣ, ತಲೆಯ ಆಕಾರ ಅಥವಾ ಕೂದಲಿನ ಪ್ರಮಾಣದಿಂದಲ್ಲ; ಯಾವ ಲಕ್ಷಣಗಳು ಮಾನವನನ್ನು ಮಾನವನನ್ನಾಗಿಸುತ್ತವೆಯೋ

ಅವುಗಳಿಂದ ಅವನು ಜೀವಿಸುತ್ತಾನೆ. ಮಾನವರನ್ನು ನೀವು ಹೇಗೆ ಬೇಕಾದರೂ, ಯಾವ ಆಧಾರದಿಂದಲಾದರೂ, ಬೇರ್ಪಡಿಸಿಬಿಡಿ; ಆದರೆ ಅವರ ನಡುವಿನ ಸಾಮ್ಯವು ಸದಾ ಜೀವಂತವೇ ಆಗಿರುತ್ತದೆ. ಮಾನವತೆ ಉಳ್ಳವರಾಗಿ ಅವರೆಲ್ಲಾ ಒಂದು, ಅವರೆಲ್ಲರ ಶರೀರ ರಚನೆಯೂ ಒಂದೇ ತೆರನಾದುದು, ಶರೀರಶಾಸ್ತ್ರವೂ ಒಂದೇ ನಿಯಮ ಉಳ್ಳದ್ದು, ಮಾನಸಿಕ ಸುಖ ಮತ್ತು ತುಮುಲಗಳು ಒಂದೇ ತರಹದವು. ಅವರೆಲ್ಲರ ಮೂಲಭೂತ ಆರ್ಥಿಕ ಅಗತ್ಯಗಳು, ಜೊತೆಗಾರರೊಡನಾಟ, ಆಟಪಾಟಗಳು, ಎಲ್ಲಾ ಸಮಾನವಾದುವು. ಪರಿಸರದ ಪ್ರಭಾವವು ಅವರೆಲ್ಲರ ಮೇಲೂ ಏಕಪ್ರಕಾರವಾದ್ದು; ಅದು ಉತ್ತಮಗೊಳ್ಳಬಹುದು ಇಲ್ಲವೇ ಹೀನವಾಗಬಹುದು. ಇಂಥದನ್ನೆಲ್ಲಾ ಗಮನಿಸಿಯೇ ಶೇಕ್ಸ್‌ಪಿಯರ್ ತನ್ನ ಶೈಲಾಕ್ ಎಂಬ ಪಾತ್ರದ ಬಾಯಿಂದ ಹೇಳಿಸಿದ್ದು:

"ಯಹೂದಿಗೆ ಕಣ್ಣುಗಳಿಲ್ಲವೆ? ಅವನಿಗೆ ಕೈಗಳು, ಇತರ ಅಂಗಾಂಗಗಳು, ಅವುಗಳ ಪ್ರಮಾಣ, ಭಾವನೆ, ಪ್ರೀತಿ, ಉತ್ಕಟತೆ ಇಲ್ಲವೆ? ಅವನು ತಿನ್ನುವುದೂ ಅದೇ ಆಹಾರ, ಆಯುಧಗಳಿಂದ ಪ್ರಹಾರವು ಅವನಿಗೂ ಬಾಧೆಯನ್ನುಂಟುಮಾಡುತ್ತದೆ, ಅವನದೂ ಅವೇ ಕಾಯಿಲೆಗಳು, ಅವೇ ಔಷಧಿಗಳು; ಚಳಿಗಾಲ ಮತ್ತು ಬೇಸಿಗೆ ಅವನ ಮೇಲೂ ಅದೇ ಪ್ರಭಾವ ಹೊಂದಿವೆ. ಕ್ರೈಸ್ತನಿಗೇ ಬೇರೆ, ಯಹೂದ್ಯರಿಗೇ ಬೇರೆ ಎಂಬುದೇನೂ ಇಲ್ಲ. ನೀವು ಚಿವುಟಿದರೆ ನಮಗೆ ರಕ್ತ ಚಿಮ್ಮುವುದಿಲ್ಲವೆ? ಚಕ್ಕಲಗುಳಿಯು ನಮಗೆ ನಗೆ ತರಿಸುವುದಿಲ್ಲವೆ? ನೀವು ವಿಷ ಉಣಿಸಿದರೆ ನಾವು ಸಾಯುವುದಿಲ್ಲವೆ? ಅಂತೆಯೇ, ನೀವು ನಮಗೆ ಅನ್ಯಾಯವೆಸಗಿದರೆ ನಾವು ಸೇಡು ತೀರಿಸಿಕೊಳ್ಳುವುದಿಲ್ಲವೇನು? ಬೇರೆಲ್ಲದರಲ್ಲೂ ನಾವು ನಿಮ್ಮಂತೆಯೇ ಇರುವಾಗ ಇದರಲ್ಲಿಯೂ ನಾವು ನಿಮ್ಮಂತೆಯೇ ಇರುತ್ತೇವೆ."

ಗಮನಿಸಿ, ಶೇಕ್ಸ್‌ಪಿಯರ್ ಇಲ್ಲಿ ಯಹೂದ್ಯರನ್ನು ಒಂದು ಜನಾಂಗವೆಂದು ಪರಿಗಣಿಸಿಲ್ಲ; ಅವರದೊಂದು ಸಮುದಾಯ, ಅಷ್ಟೆ.

ಜನಾಂಗವಾದಿಯ ಮೊದಲ ಸೂತ್ರವಿದೆಯಲ್ಲಾ, ಕೆಲವು ಮಾನವ ಗುಂಪುಗಳು ಇತರ ಗುಂಪುಗಳಿಗಿಂತ ಪ್ರಾಕೃತಿಕವಾಗಿ ಭಿನ್ನ ಮತ್ತು ಅವುಗಳ ನಡತೆಯೂ ಅಷ್ಟೇ ಭಿನ್ನ ಎಂದು, ಅದನ್ನು ನಾವು ತಳ್ಳಿಹಾಕುತ್ತೇವೆ. ವಿಶಾಲಾರ್ಥದಲ್ಲಿ ಸ್ವಭಾವ ಮತ್ತು ನಡತೆ ಎಲ್ಲಾ ಮಾನವರಲ್ಲೂ ಒಂದೇ ತೆರನಾದ್ದು. ಜನಾಂಗವಾದಿಯು ಹೇಳುತ್ತಾನೆ, ಆಯಾ ಜನಾಂಗದವರು ಒಟ್ಟಾಗಬೇಕೆಂದು; ಹಾಗಿದ್ದರೆ ಇಡೀ ಮನುಕುಲವು ಒಟ್ಟಾಗಬೇಕೆಂಬುದು ಯಥಾರ್ಥವಲ್ಲವೆ? ಶುದ್ಧತರ್ಕವು ಫ್ಯಾಸಿಸಂಗೆ ಪುಷ್ಟಿ ನೀಡುವುದಿಲ್ಲ, ಅದು ಪ್ರಜಾಪ್ರಭುತ್ವಕ್ಕೆ ಪುಷ್ಟಿ ನೀಡುತ್ತದೆ. ಆದ್ದರಿಂದಲೇ ಇರಬೇಕು, ಫ್ಯಾಸಿಸ್ಟರು ತಮ್ಮ ರಕ್ತದೊಡನೆ ಚಿಂತಿಸುತ್ತಿರುತ್ತಾರೆ.

ರಕ್ತದ ಐತಿಹ್ಯ

ಈಗ ಎರಡನೆಯ ಸೂತ್ರವನ್ನು ಅವಲೋಕಿಸೋಣ:

"ನಡತೆಯ ವಕ್ರತೆಯು ಪಿತ್ರಾರ್ಜಿತ; ಆದ್ದರಿಂದ ಕೆಲವು ಮಾನವ ಗುಂಪುಗಳು ವಕ್ರತೆಯನ್ನೆಂದೂ ಕಳೆದುಕೊಳ್ಳಲಾರವು." ಅಂದರೆ, ಅಮೆರಿಕಾದ ಹಿನ್ನೆಲೆಯಲ್ಲಿ ಕರಿಯರು ಕೆಳದರ್ಜೆಯ ನಾಗರಿಕರಾಗಿಯೇ ಉಳಿಯಬೇಕು, ಎಂದರ್ಥ.

ಬೇರೆಲ್ಲ ಭಾವನೆಗಳಿಗಿಂತಲೂ ಈ ರಕ್ತದ ಬಗೆಗಿನ ಐತಿಹ್ಯವು ಹೆಚ್ಚು ಪಿಡುಗನ್ನುಂಟುಮಾಡಿ ಮನುಕುಲವನ್ನು ಛಿದ್ರಗೊಳಿಸಿದೆ, ಭಾವೋದ್ರೇಕವನ್ನು ಪೋಷಿಸುತ್ತಾ ಬಂದಿದೆ. ಪಾಪ, ರಕ್ತವೆಂಬ ದ್ರವವು ತನ್ನಷ್ಟಕ್ಕೆ ತಾನು ನಾಳಗಳಲ್ಲಿ ಹರಿಯುತ್ತಿದೆ, ಜೀವಗಳನ್ನು ಸಂರಕ್ಷಿಸುತ್ತಿದೆ. ಅದಿಲ್ಲದೆ ಜೀವಿಗೆ ಜೀವವಿಲ್ಲ. ನಮ್ಮ ಬೌದ್ಧಿಕ ಅಸ್ತಿತ್ವಕ್ಕೆ ರಕ್ತವು ಅಪಾರ ಕಾಣಿಕೆಯನ್ನಿತ್ತು ನಮಗೆ ಆಪ್ತವಾಗಿದೆ. ಚರ್ಮದಡಿ ಉಳಿದುಬಿಡುತ್ತದಾದ್ದರಿಂದ ಅದು ಗುಪ್ತವಾಗಿದೆ. ರಕ್ತವು ನಮಗೆ ಪ್ರಶಸ್ತವಾದ್ದು, ಆಪ್ತವಾದ್ದು, ಗುಪ್ತವಾದ್ದು. ಅದು ಅನುಭಾವದ ಮಟ್ಟಕ್ಕೇರಲು ಅಷ್ಟು ಸಾಕಲ್ಲವೇ!

ಸಾಹಿತ್ಯಗಳಲ್ಲಿ ರಕ್ತವು ಒಂದು ರೂಪಕವಾಗಿ ಅನಾದಿಕಾಲದಿಂದ ಮೂಡಿಬಂದಿದೆ. ಜೀವ ಮತ್ತು ಜೀವದ ತ್ಯಾಗ, ಇವಕ್ಕೆ ಅದು ನಿರಂತರವಾಗಿ ಪ್ರತೀಕವಾಗಿ ಪ್ರಸಿದ್ಧವಾಗಿದೆ. ಅದು ಔನ್ನತ್ಯಕ್ಕೂ ಪ್ರತೀಕ, ಅಧಃಪತನಕ್ಕೂ ಪ್ರತೀಕ; ಹೊಸತಿನ ಆವಿಷ್ಕಾರ ಮತ್ತು ಹಳೆಯದಾದುದರ ಚಿರಂತನತೆ, ಎರಡನ್ನೂ ಪ್ರತಿನಿಧಿಸುತ್ತದೆ. ತಮಗಿಷ್ಟಬಂದಂತೆ ವಾದ ಹೂಡಲು, ರಕ್ತದ ಮಾತನ್ನಾಡಲು ಇಷ್ಟು ಸಾಲದೆ! ರೂಪಕ ಮತ್ತು ವಾಸ್ತವ, ಇವೆರಡೂ ಪ್ರತ್ಯೇಕ; ಆ ವ್ಯತ್ಯಾಸವನ್ನು ಮುಚ್ಚಿಟ್ಟು ವಾಸ್ತವ ಪ್ರಪಂಚದ ವಿವರಣೆಗಾಗಿ ರಕ್ತವನ್ನು ಉಪಯೋಗಿಸುವುದು ಸುಲಭ. ಅದು ಅನೂಚಾನವಾಗಿ ನಡೆದುಬಂದಿದೆ.

ಊಳಿಗಮಾನ್ಯ ವ್ಯವಸ್ಥೆಯ ಸಮಾಜದಲ್ಲಿ ಶ್ರೀಮಂತರು ಆಸ್ತಿಯನ್ನು ತಮ್ಮ ಕುಟುಂಬದಲ್ಲೇ ಉಳಿಸಿಕೊಳ್ಳಲು ಆಸ್ತಿಯು ತಂದೆಯಿಂದ ಮಗನಿಗೆ ಹೋಗುವಾಗ 'ರಕ್ತದ ಜೊತೆ' ಹೋಗುತ್ತದೆಯೆಂದು ಹೇಳುವುದು ಉಪಯುಕ್ತವಾಗಿತ್ತು. ಇಂತಹ ಮಾತುಗಳು ವರ್ಣಮಯ ಉಡುಪಿನಂತೆ: ಒಂದು ಸರಳ ಆರ್ಥಿಕ ವ್ಯವಹಾರಕ್ಕೆ ನೆರವು ನೀಡಲು ಈ ಬಣ್ಣದ ಮಾತು ಒಂದು ಹೊದಿಕೆ ಅಷ್ಟೇ. ಪ್ರತಿಯೊಂದು ಶ್ರೀಮಂತ ಕುಟುಂಬವೂ ಬೃಹತ್ತಾದ ಆಸ್ತಿಯ ಕೇಂದ್ರವೆಂಬುದು ಮೂಲ ವಾಸ್ತವ. ಬಂಡವಾಳಶಾಹಿಯಡಿಯಲ್ಲಿ ಸಂಪತ್ತು ಉದ್ಯಮ ವ್ಯವಸ್ಥೆಯನ್ನು ಆಧರಿಸಿರುತ್ತದೆ, ಅದಕ್ಕೆ ವಿಶಾಲ ಮಾರುಕಟ್ಟೆಗಳು ಅಗತ್ಯ. ಇಲ್ಲಿ "ರಕ್ತ" ಎಂಬುದು ಇಡೀ ಸಮುದಾಯಗಳನ್ನು ಒಳಗೊಳ್ಳುವಂತಹ ಪ್ರತಿಮೆಯಾಗಿರುತ್ತದೆ. 19ನೆಯ ಶತಮಾನದ ಯೂರೋಪಿನಲ್ಲಿ ಇದನ್ನು ಸಾಧಿಸಲು "ರಕ್ತ" ಮತ್ತು "ರಾಷ್ಟ್ರ" ಎಂಬುವನ್ನು ಸಮೀಕರಿಸಲಾಯಿತು. ಗೋಬಿನೋ ಎಂಬ ಊರಿನ ಕೋಮ್ತೆ ಎಂಬುವನು ಪ್ರೇಮಮಯ ಕತೆಗಳನ್ನು ಬರೆಯುವುದರಲ್ಲಿ ಪ್ರಖ್ಯಾತಿ ಹೊಂದಿದ್ದ; ಅವನು ಸಾಮಾಜಿಕ ಔನ್ನತ್ಯದ ಸಿದ್ಧಾಂತವನ್ನು ರಾಷ್ಟ್ರೀಯ ಭಿನ್ನತೆಗಳ ಮೇಲೆ ಹೇರಿದ. ಅದು 20ನೇ ಶತಮಾನದಲ್ಲಿ "ರಕ್ತ" ಮತ್ತು "ಜನಾಂಗ" ಎಂಬುವನ್ನು ಬೆರೆಸಿಡುವ ಚಮತ್ಕಾರವಾಗಿ ರೂಪುಗೊಂಡಿತು.

"ಜನಾಂಗೀಯ ರಕ್ತ ಸಂಬಂಧಗಳು" ಎಂಬ ಕಲ್ಪನೆಯು ಎರಡು ಉದ್ದೇಶಗಳನ್ನು ಪೂರೈಸುತ್ತದೆ: ವಿದೇಶಗಳ ಮೇಲಿನ ಆಕ್ರಮಣಕ್ಕೆ ಸಮರ್ಥನೆ ನೀಡುವುದು ಮತ್ತು ಸ್ವಕೀಯ ದೇಶಗಳಲ್ಲಿ ಜನಸಮುದಾಯವನ್ನು ವಿಭಾಗಗಳಾಗಿ ಪ್ರತ್ಯೇಕಿಸುವುದು. ಜರ್ಮನಿಯ ರಾಷ್ಟ್ರೀಯರು ಮತ್ತು ಅವರ ಸಂತತಿಯವರು ಪ್ರಪಂಚದಲ್ಲಿ ಎಲ್ಲೆಲ್ಲೋ ಚದುರಿಹೋಗಿದ್ದಾರೆ ಎನ್ನೋಣ; ಅದನ್ನು ಜರ್ಮನಿಯ ನಾಝಿಗಳು ವ್ಯಾಖ್ಯಾನಿಸುವಾಗ "ಜರ್ಮನರ ರಕ್ತವಿರುವೆಡೆಗಳಲ್ಲಿ ಜರ್ಮನಿ ವ್ಯಾಪಿಸಿದೆ" ಎಂದು ಹೇಳುವುದು ಸುಲಭ.

ಆಕ್ರಮಣದಿಂದ ಪಕ್ಕದ ರಾಷ್ಟ್ರವೊಂದನ್ನು ಗೆದ್ದು ತನ್ನ ಎಲ್ಲೆಯನ್ನು ವಿಸ್ತರಿಸಿಕೊಂಡರೆ "ಹೊರಗಣ ನೀಚ ಜನಾಂಗದಿಂದ ಜರ್ಮನರನ್ನು ಪಾರು ಮಾಡಿ ಸ್ವಕೀಯ ದೇಶಕ್ಕೆ ಸೇರ್ಪಡೆಗೊಳಿಸಲಾದ್ದು" ಎಂದು ವ್ಯಾಖ್ಯಾನಿಸಿಬಿಡಬಹುದು. ಹಾಗಿದ್ದರೆ ಜರ್ಮನ್ ಸಾಮ್ರಾಜ್ಯದ ವಿಸ್ತರಣೆಗೆ ಎಲ್ಲೆ ಯಾವುದು? ಜರ್ಮನ್ ಮೂಲದವರನ್ನೆಲ್ಲಾ ಒಳಗೊಳ್ಳುವವರೆಗೆ! ಹೀಗೆ ಪಾರುಮಾಡುವ ಭೂಪರಿಂದ ಪ್ರಪಂಚವು ತನ್ನನ್ನು ಪಾರು ಮಾಡಿಕೊಳ್ಳಬೇಕಾಯಿತು. ಜರ್ಮನರನ್ನು ಪಾರುಮಾಡಲು ತವಕಿಸಿದ ನಾಝಿಗಳು ಸ್ವತಃ ತಮ್ಮದೇ ದೇಶದ ಜನರನ್ನು ಕೃತಕ ವಿಭಜನೆಗೆ ಗುರಿಮಾಡಿದರು. ದೇಶದ ಎಲ್ಲ ಸಂಕಷ್ಟಗಳಿಗೂ ಯಹೂದ್ಯರು ಕಾರಣರೆಂದು ವಾದಿಸುವುದು ಈ ವಿಭಜನೆಯ ಪರಿಣಾಮವೇ. ಒಂದು ಇಡೀ ಜನಸಮುದಾಯವನ್ನು ಮೃಗೀಯವಾಗಿ ನಡೆಸಿಕೊಳ್ಳುವ ಹಂತಕರ ಪ್ರಕ್ರಿಯೆಯಲ್ಲಿ ನೇರವಾಗಿ ಪಾಲ್ಗೊಳ್ಳದವರೂ ಸಹ ಹನನಕ್ಕೆ ಗುರಿಯಾದವರ ಸಂಪತ್ತನ್ನು ಭೋಗಿಸಲು ಅಂಜುವ ಅಗತ್ಯವಿರಲಿಲ್ಲ ಎಂದಾಯಿತು.

ಹೀಗಿದೆ ರಕ್ತದ ಐತಿಹ್ಯವು ಒದಗಿಸುವ ಸಾಮಾಜಿಕ ಪ್ರಯೋಜನ. ಅದು ಶುದ್ಧ ಕುತರ್ಕವೆಂಬುದಕ್ಕೆ ವೈಜ್ಞಾನಿಕ ಪುರಾವೆ ಇದೆ. ರಕ್ತವು ಎರಡು ಮಾದರಿಯದೆಂದು ವಿಭಜಿಸಿ ಹೇಳಬಹುದು. ಆದರೆ ಅದು ಜನಾಂಗೀಯ ವಿಭಜನೆಗೆ ಪುಷ್ಟಿ ನೀಡುವಂತಹುದಲ್ಲ. ಎಲ್ಲ ಜನಾಂಗೀಯ ಸಮುದಾಯಗಳಲ್ಲೂ ಆ ಎರಡು ಮಾದರಿ ಗಳಿರುತ್ತವೆ. ಪ್ರಜಾಪ್ರಭುತ್ವವನ್ನು ಮನ್ನಿಸುವ ಮನಸ್ಸಿಗೆ ಆಹ್ಲಾದ ಉಂಟಾಗುವುದು ತನ್ನ ರಕ್ತದ ಮಾದರಿಯಲ್ಲಿ ಆಸ್ಟ್ರೇಲಿಯಾದ ಹಾಗೂ ಅಮೆರಿಕಾದ ಮೂಲನಿವಾಸಿಗಳ ರಕ್ತದ ಮಾದರಿ ಇದೆಯೆಂಬುದನ್ನು ತಿಳಿದಾಗ. ಮಾನವ ಜನಾಂಗದ ಐಕ್ಯತೆಗೆ ಇದು ಮೂಲಧಾತು, ಏಕೆಂದರೆ ಯಾರಿಗಾದರೂ ರಕ್ತ ನೀಡಿ ಚಿಕಿತ್ಸೆ ಮಾಡಬೇಕಾದಾಗ ರಕ್ತದಲ್ಲಿರುವ ಪ್ಲಾಸ್ಮಾ ಅಥವಾ "ರಕ್ತ ರಸ" ಒಂದೇ ಪ್ರಕೃತವಾದ್ದು ಮತ್ತು ಎಲ್ಲರ ರಕ್ತದಲ್ಲೂ ಅದು ಇದೆ.

ಎರಡನೆಯದಾಗಿ, ಆನುವಂಶಿಕ ಲಕ್ಷಣಗಳನ್ನು "ಜೀನ್"ಗಳು ಪ್ರತಿನಿಧಿಸುತ್ತವೆಯೇ ವಿನಾ ರಕ್ತವಲ್ಲ. ಆನುವಂಶಿಕ ವಿಜ್ಞಾನ (ಅಥವಾ ತಳಿವಿಜ್ಞಾನವು) ಸಿದ್ಧಪಡಿಸಿರುವಂತೆ ಮನುಕುಲವು ಒಂದು ಸಮುದಾಯ; ಅದು ಮನುಕುಲದ ಶ್ರೇಣಿ ಮತ್ತು ಜನಾಂಗವನ್ನು ನಿರ್ಧರಿಸಿ ಹೇಳುವುದಿಲ್ಲ. ಜನಗಳಿಗೆ ಒಂದು ಸಾಮಾನ್ಯ ಉಗಮವಿದೆಯೆಂದು ಭಾವಿಸಬಹುದು. ಮನುಕುಲದ ಇತಿಹಾಸದಲ್ಲಿ ಅವೆಷ್ಟು ಅಂತರ್ವಿವಾಹಗಳು ಜರುಗಿವೆ! ಜಗತ್ತಿನಾದ್ಯಂತ ಒಂದು ನಿರ್ದಿಷ್ಟ ದೈಹಿಕ ಲಕ್ಷಣವು ನಿರ್ದಿಷ್ಟವಾದೊಂದು ಜೀನ್ ಜೊತೆ ಲಗತ್ತಿಸಲ್ಪಟ್ಟಿರುವುದು ಕಂಡುಬರುತ್ತದೆ. ಯಾವುವೋ ಕೆಲವು ಗುಣಗಳನ್ನಾಧರಿಸಿ "ಜನಾಂಗ"ವನ್ನು ಗುರುತಿಸಹೊರಟರೆ ಅಂತಹ ಗುಣಗಳ ಪೈಕಿ ಒಂದನ್ನು ಹೊಂದಿರುವವರನ್ನು ಆ ಜನಾಂಗಕ್ಕೆ ಸೇರಿಸಬಹುದು; ಆದರೆ ಅದೇ ಬೇರೆ ಗುಣಗಳನ್ನು ಹೊಂದಿರದೇ ಇರುವುದರಿಂದ ಅವರನ್ನು ಆ ಜನಾಂಗದಿಂದ ಹೊರಗಿರಿಸಬೇಕಾಗುತ್ತದೆ.

ಮೂರನೆಯದಾಗಿ, ಆನುವಂಶಿಕ ನಡತೆಯ ಲಕ್ಷಣವಲ್ಲದವನ್ನು ಜನಾಂಗೀಯ ವಿಭಜನೆಯ ಹೆಸರಿನಲ್ಲಿ ಆನುವಂಶಿಕ ಲಕ್ಷಣಗಳೆಂದು ಹೇಳಿಬಿಡುವ ಪ್ರವೃತ್ತಿ ಇದೆ. ಒಬ್ಬ ವ್ಯಕ್ತಿಯ ರಾಜಕೀಯ ಮತ್ತು ಸಾಮಾಜಿಕ ನಡತೆಗೂ ಜೀನ್‌ಗೂ ಯಾವ ಸಂಬಂಧವೂ ಇಲ್ಲವೆಂಬುದು ಸುಸ್ಪಷ್ಟ. ಬಂಡವಾಳಶಾಹಿಯಲ್ಲಿ ಕಾಣಬರುವ ಲಾಭಕೋರತನಕ್ಕೆ

ಯಾವುದೋ ಜೀನ್ ಕಾರಣವೆಂದು ಬಗೆಯುವುದಾದರೆ, ಊಳಿಗಮಾನ್ಯ ವ್ಯವಸ್ಥೆಯ ಪ್ರಭುಗಳು ಹಾಗೂ ಪ್ರಾಚೀನ ಗುಲಾಮರ ಒಡೆಯರೂ ಬೇರೊಂದು ತರಹದ ಜೀನ್ ಹೊಂದಿದ್ದಿರಬಹುದೆಂದು ಭಾವಿಸಬೇಕಾದೀತು. ಆ ಜೀನ್‌ಗಳು ನಶಿಸಿಹೋದದ್ದಾದರೂ ಹೇಗೆ? ಬಂಡವಾಳಶಾಹಿ ನಡತೆಗೆ ಕಾರಣವಾದ ಜೀನ್‌ಗಳು ಊಳಿಗಮಾನ್ಯ ವ್ಯವಸ್ಥೆಯಿದ್ದಾಗ ನಿಷ್ಕ್ರಿಯಗೊಂಡಿದ್ದವೆ? ಅಥವಾ ಜೀವವಿಜ್ಞಾನದಲ್ಲಿ ಹೇಳಲಾಗುವ ವ್ಯತ್ಯಯದಿಂದ ಅವು ಹೊಸದಾಗಿ ಉತ್ಪನ್ನವಾದವೆ? ಮಾನವ ಚರಿತ್ರೆಯಲ್ಲಿ ಘಟಿಸಿರುವ ಸಾಮಾಜಿಕ ಬದಲಾವಣೆಗಳನ್ನು ಒಂದು ಚಾರಿತ್ರಿಕ ನೆಲೆಯಲ್ಲಿ ವ್ಯಾಖ್ಯಾನಿಸುವ ಬದಲು ತಳಿವಿಜ್ಞಾನವನ್ನು ಎಂಥದೋ ಕಂತೆ ಪುರಾಣವೆಂಬಂತೆ ಮಾರ್ಪಡಿಸುವುದು ಅಚಿಂತ್ಯ.

ಶರೀರದ ರಚನೆ ಮತ್ತು ಶರೀರ ಕ್ರಿಯೆಗಳಲ್ಲಿ ಪಿತ್ರಾರ್ಜಿತವೆಂಬಂತಹ ಲಕ್ಷಣಗಳು ಸ್ಥೂಲವಾಗಿ ಇರುವುದು ನಿಜ, ಆದರೆ ಮಾನವನ ನಡತೆಗೆ ಪರಿಸರದ ಭಾವಗಳಿರುತ್ತವೆ. ಅದರಲ್ಲಿ ಸಮಾಜದ ಪಾತ್ರ ಅಗಾಧವಾದ್ದು. ಬಂಡವಳಿಗರು ಇರುವುದಕ್ಕೆ ಯಾವುದೇ ವಿಶೇಷ ಆನುವಂಶಿಕ ಧಾತುಗಳು ಕಾರಣವಲ್ಲ; ಅದಕ್ಕೆ ಸರಕುಗಳ ಉತ್ಪಾದನೆ ಮತ್ತು ವಿತರಣೆಯಲ್ಲಿನ ಒಂದು ನಿರ್ದಿಷ್ಟ ಸಾಮಾಜಿಕ ಮಾದರಿಯು ಕಾರಣ. ಔದ್ಯಮಿಕ ಕ್ಷೇತ್ರದಲ್ಲಿ ಕಾರ್ಮಿಕರು ಇರುವುದಕ್ಕೂ ಅದೇ ಕಾರಣ. ಈ ಎರಡು ಗುಂಪುಗಳು ಅಸ್ತಿತ್ವಕ್ಕೆ ಬರಲು ಆನುವಂಶಿಕ ಕಾರಣಗಳೇನೂ ಇಲ್ಲ. ಸಾಮಾನ್ಯವಾಗಿ ಹೇಳಲಾಗುವ ಒಂದು ಮಾತು ಇದಕ್ಕೆ ಸಮರ್ಥನೆಯನ್ನೊದಗಿಸುತ್ತದೆ: "ನೀವು ಒಂದು ವರ್ಗದಿಂದ ಬೇರೊಂದು ವರ್ಗಕ್ಕೆ ಏರಬಹುದು ಇಲ್ಲವೆ ಕುಸಿಯಬಹುದು! ಇದಕ್ಕೆ ಜೈವಿಕವಾದ ಕಾರಣವಾವುದೂ ಇಲ್ಲ; ಇರುವುದು ಸಾಮಾಜಿಕ ಕಾರಣ." ಅಮೆರಿಕಾದಲ್ಲಿ ಕರಿಯರನ್ನು ದುಡಿಮೆಗೆ ಆಯ್ಕೆ ಮಾಡಿಕೊಳ್ಳುವಾಗ ಅವರಿಗೆ ಕಡೆಯ ಆದ್ಯತೆ, ಆದರೆ ದುಡಿಮೆಯಿಂದ ಹೊರದೂಡುವಾಗ ಅವರಿಗೇ ಮೊದಲ ಆದ್ಯತೆ. ಅವರಿಗೆ ದಕ್ಕುವ ಕೆಲಸಗಳು ಕೆಳದರ್ಜೆಯವು. ಅಥವಾ, ಯಹೂದ್ಯರನ್ನು ನೋಡಿ: ಅವರದೆನ್ನಲಾದ ವ್ಯಾಪಾರ ಇತ್ಯಾದಿ ಕಸುಬುಗಳು ಇವೆ; ಅವಕ್ಕೆ ಜೈವಿಕ ಕಾರಣವೇನೂ ಇಲ್ಲ. ಇರುವುದು ಸಾಮಾಜಿಕ ಕಾರಣವೇ. ಕರಿಯರನ್ನು ಅವರ ಈಗಿನ ಸ್ಥಾನದಲ್ಲಿರಿಸಲು ಇರುವ ಕಾರಣಗಳು ಸಮಾಜವನ್ನು ಆಳುವವರಿಗೆ ಶೋಭೆ ತರುವುದಿಲ್ಲ. ಕನಿಷ್ಠ ಕೂಲಿಗೆ ದುಡಿಮೆ ಮಾಡಲು ಅವರನ್ನು ಒಂದು ದೊಡ್ಡ ಉಗ್ರಾಣದಲ್ಲಿ ಕಾಪಿಟ್ಟಿದ್ದೇವೆ. ಯಹೂದಿಗಳ ಕಾರ್ಪಣ್ಯಕ್ಕೆ ಕಾರಣ ತಮ್ಮನ್ನು "ಆರ್ಯರು" ಎಂದು ಕರೆದುಕೊಳ್ಳುವವರು ಅವರನ್ನು ಸ್ಪರ್ಧೆಯಿಂದ ಹೊರದೂಡಲು ಹೊಂಚು ಹಾಕುತ್ತಿರುವುದೇ ವಿನಾ ಬೇರೇನೂ ಅಲ್ಲ.

ನಾಜ಼ಿಗಳು ಮಾನವನ ನಡತೆಯು "ಜನಾಂಗದ ಆತ್ಮ"ದಿಂದ ಪೂರ್ವ ನಿರ್ಧಾರಿತವಾದದ್ದೆಂದು ಐತಿಹ್ಯವೊಂದನ್ನು ಕಟ್ಟಿಕೊಟ್ಟಿದ್ದಾರೆ; ಆದರೆ, ಅಂತಹ ಧೋರಣೆಯ ಖಂಡನೆಯನ್ನು ಅವರೇ ಒದಗಿಸಿಕೊಟ್ಟಿದ್ದಾರೆ. ಹೇಗೂ ತಾವು ಶ್ರೇಷ್ಠ ಜನಾಂಗದವರಾದ್ದರಿಂದ ಎಲ್ಲರ ಮೇಲೂ ವಿಜಯ ಸಾಧಿಸುವುದು ಶತಸ್ಸಿದ್ಧವೆಂದು ಸ್ವತಃ ಅವರೇ ಭಾವಿಸಿಕೊಳ್ಳಲಿಲ್ಲ. ವಿದೇಶಗಳನ್ನು ಸ್ವಾಧೀನಪಡಿಸಿಕೊಳ್ಳಲು ಅವರಿಗೆ ಜರ್ಮನಿಯ ಜನರ ಬೆಂಬಲ ಬೇಕಾಗಿತ್ತು; ತಮ್ಮ ಜನಾಂಗದ ತಥಾಕಥಿತ ಹಿರಿಮೆಯು ಸಾಕಾಗುತ್ತಿರಲಿಲ್ಲ. ಆದ್ದರಿಂದ ಮಾಧ್ಯಮಗಳನ್ನು ಸೆಳೆದುಕೊಂಡರು. ಶಿಕ್ಷಣ ಕ್ಷೇತ್ರದ ಸಂಸ್ಥೆಗಳನ್ನೂ ಸಾಂಸ್ಕೃತಿಕ ವಲಯವನ್ನೂ ತಮ್ಮದಾಗಿಸಿಕೊಂಡರು. ಎಲ್ಲವನ್ನೂ ತಮ್ಮ

ಅಗತ್ಯಕ್ಕೆ ತಕ್ಕಂತೆ ತಿರುಚಿಕೊಂಡರು. ಅಂದರೆ, ಜನರ ಮನಸ್ಸನ್ನು ತಮ್ಮತ್ತ ಒಗ್ಗಿಸಿಕೊಳ್ಳಲು, ಅವರ ನಡತೆಯನ್ನು ತಮ್ಮ ಪರವಾಗಿರುವಂತೆ ಮಾಡಿಕೊಳ್ಳಲು, ಇದು ಅಗತ್ಯವಾಗಿತ್ತು. ಜನಾಂಗದ ಹಿರಿಮೆಯ ಐತಿಹ್ಯವನ್ನು ನಂಬಿ ಸುಮ್ಮನಿರುವಂತಿರಲಿಲ್ಲ.

ಫ್ಲ್ಯಾಸಿಸ್ಟರ ಘೋಷಿತ ಸಿದ್ಧಾಂತವೇನೇ ಇರಲಿ, ಅವರ ಆಚರಣೆಯು ಸಾಮಾಜಿಕ ನಡತೆಯು ಜನ್ಮತಃ ಒಂದು ತೆರನಾಗಿರುವುದಿಲ್ಲ, ಬದಲಾಗಿ ಅದನ್ನು ಒಗ್ಗಿಸಿಕೊಳ್ಳಬೇಕೆಂಬುದನ್ನು ಸ್ಥಿರಗೊಳಿಸಿತು. ನಮಗೆ ಅನಿಷ್ಟವೆನಿಸುವ ಸಾಮಾಜಿಕ ನಡತೆಯು ಒಂದು ಗುಂಪಿನ ಜನರಲ್ಲಿದ್ದರೆ ಪರಿಹಾರವು ಆ ಜನರನ್ನೆಲ್ಲ ಕೊಲ್ಲುವುದರಲ್ಲಿಲ್ಲ ಅಥವಾ ಅವರನ್ನು ಪ್ರತ್ಯೇಕವಾಗಿರಿಸುವುದರಲ್ಲಿಲ್ಲ; ನಡತೆಗೆ ಪರಿಸರದಲ್ಲಿನ ಕಾರಣಗಳನ್ನು ಗುರುತಿಸಿ ಅವನ್ನು ನಿವಾರಿಸುವುದರಲ್ಲಿದೆ. ಯಾವನೋ ಕರಿಯನು ಸೋಮಾರಿಯೆಂದು ಸಂಶೋಧನೆಯು ತೋರಿಸಿಕೊಟ್ಟರೆ ಅವನ ಬಡತನವನ್ನು ಹಿಗ್ಗಿಸಿ ಇನ್ನೂ ಹೆಚ್ಚಿನ ಸೋಮಾರಿಯನ್ನಾಗಿಸುವುದು ತರವಲ್ಲ; ಅವನಿಗೆ ಸೂಕ್ತ ಆಹಾರ ಒದಗಿಸಬೇಕು. ಆಗ ಅವನ ಸೋಮಾರಿತನ ಓಡಿಹೋಗುತ್ತದೆ.

"ಕೆಟ್ಟ" ಜನಾಂಗಗಳು ಎಂಬುವುಂಟೆ?

ಕಡೆಯ ಎರಡು ಸೂತ್ರಗಳನ್ನು ಒಟ್ಟಾಗಿ ಪರಿಶೀಲಿಸೋಣ, ಏಕೆಂದರೆ ಅವೆರಡೂ ನೀತಿಶಾಸ್ತ್ರಕ್ಕೆ ಸಂಬಂಧಿಸಿದವು: "ನಡತೆಯ ನಿರ್ದಿಷ್ಟ ಅಂಶಗಳಲ್ಲಿ ಕೆಲವಾದರೂ ದುಷ್ಟವಾದವು ಇರುತ್ತವೆ ಮತ್ತು ಆ ದುಷ್ಟ ಅಂಶಗಳೇ ಆ ಗುಂಪುಗಳಲ್ಲಿ ಪ್ರಧಾನ" ಮತ್ತು "ಬೇರೆ ಮಾನವ ಗುಂಪುಗಳು ಹೊಂದಿರುವ 'ಶಿಷ್ಟ' ಲಕ್ಷಣಗಳು ಆ ಗುಂಪುಗಳಿಗೆ 'ದುಷ್ಟತನ'ವಿರುವ ಇನ್ನಿತರ ಗುಂಪುಗಳ ಮೇಲೆ ಅಧಿಕಾರ ಚಲಾಯಿಸಲು ಸಮರ್ಥನೆ ನೀಡುತ್ತವೆ."

ಇಂತಹ ಸಾರಾಸಗಟಿನ ನೀತಿಪಾಠಗಳು ಖಂಡಿತ ಒಪ್ಪಿತವಾಗುವುದಿಲ್ಲ, ಏಕೆಂದರೆ ನಾವು ಅಗತ್ಯವಾಗಿ ತಿಳಿಯಬೇಕಾದ್ದನ್ನು, ಅಂದರೆ ವೈಯ್ಯಕ್ತಿಕ ನಡತೆಯನ್ನು, ಅವು ಮುಚ್ಚಿಡುತ್ತವೆ. ಖಂಡಿಸುವುದು ಅಥವಾ ಸಮರ್ಥಿಸುವುದು ಇಲ್ಲಿ ವಾಸ್ತವ ನಡತೆಯ ವಿಶ್ಲೇಷಣೆಯೇ ಇಲ್ಲದ ಸಂದರ್ಭದ ಸಂಗತಿ. ಜನಾಂಗಗಳ ದೈಹಿಕ ಲಕ್ಷಣಗಳನ್ನು ಸಹ ನಾವು ಕ್ಲುಪ್ತವಾಗಿ ಹೇಳಲು ಬರುವುದಿಲ್ಲ; ಹೀಗಿರುವಾಗ ಅವೇ ಜನಾಂಗಗಳ ನೈತಿಕ ಲಕ್ಷಣಗಳನ್ನು ಸಾಮಾನ್ಯೀಕರಿಸಿ ಹೇಳುವುದು ಸಾಧ್ಯವೆ? ಮೊದಲನೆಯದಾಗಿ, ಯಾವುದು ಒಳಿತು ಮತ್ತು ಯಾವುದು ಹೊಲ್ಲತು ಎಂಬುದನ್ನೇ ನಿಷ್ಕರ್ಷೆ ಮಾಡುವುದು ಕಷ್ಟ; ಹಾಗಿರುವಾಗ ಒಂದು ಇಡೀ ಜನಸಮುದಾಯವನ್ನು ಒಳಿತು ಅಥವಾ ಹೊಲ್ಲತು ಎಂದು ತೀರ್ಮಾನಿಸುವುದು ಹೇಗೆ? ಅಂತಹ ಆಧಾರವಿಲ್ಲದೆ, ಇಂತಹ ಸಮುದಾಯದ ಭವಿಷ್ಯ ಇದು ಎಂದು ಘೋಷಿಸಿಬಿಡುವುದು ಸರ್ವಥಾ ಅಂಗೀಕಾರಾರ್ಹವಲ್ಲ. ನೈತಿಕ ನಿಯಮಗಳ ಹೂರಣವನ್ನು ನಿರ್ಧರಿಸುವುದು ಸುಲಭಸಾಧ್ಯವಲ್ಲ; ಹಾಗೇನಾದರೂ ಮಾಡಹೊರಟರೆ ಅದು ಅವಿವೇಕದ ಪರಮಾವಧಿ ಆಗುತ್ತದೆ. ಮನಸೋ ಇಚ್ಛೆ ಸಹಸ್ರಾರು ಜನರ ಪೀಡನೆ ಇದರ ಕೆಟ್ಟ ಪರಿಣಾಮ. ನಮ್ಮ ಕಣ್ಣಿನಲ್ಲಿ ಹೊಟ್ಟು ಬಿದ್ದಿದೆ, ಇತರರ ಕಣ್ಣಿನಲ್ಲಿ ಧೂಳಿನ ಕಣವಿದೆ: ನಾವು ಅವರನ್ನು ಧಿಕ್ಕರಿಸಲು ಹೊರಟಿದ್ದೇವೆ!

ಇಂತಹ ಪ್ರಶ್ನೆಯನ್ನು ಬಗೆಹರಿಸಲು ದಾರ್ಶನಿಕ ಸಿದ್ಧಾಂತಗಳಿಗೆ ಶರಣಾಗಬೇಕಿಲ್ಲ. ಯಾವುದೋ ಜನಾಂಗವನ್ನು ನಾವು ತುಚ್ಛವೆಂದು ಎಣಿಸುತ್ತೇವೆನ್ನಿ; ಅಂತಹ ಜನಾಂಗದ ನಡತೆಯನ್ನು ಉಚ್ಚ ಜನಾಂಗವೆಂದು ಹೇಳಲಾಗುವುದರೊಡನೆ ಹೋಲಿಸಬಹುದೆ? ಹಾಗೆ ಮಾಡುವುದರ ಪರಿಣಾಮವೇನು? ಉಚ್ಚವೆನ್ನಲಾದ ಜನಾಂಗದ ಬುಡಕ್ಕೇ ಗೆದ್ದಲು ಬಂದಂತಾಗುತ್ತದೆ. ಏಕೆಂದರೆ, ಉಚ್ಚ ಜನಾಂಗದವನ ಜೊತೆ ಊಟಕ್ಕೆ ಕೂತವನು ಕರಿಯನೂ ಅಲ್ಲ, ಯಹೂದಿಯೂ ಅಲ್ಲ; ಬದಲಾಗಿ, ತನ್ನ 'ಆರ್ಯ' ಜನಾಂಗದವನೇ! ಹಿಂದೆ ಯಾವನೋ ಸೆನೆಟರ್‌ಗೆ ಬಂದಿದ್ದೆನ್ನಲಾದ ಪತ್ರವನ್ನು ಬರೆದಿದ್ದವನೂ ಆರ್ಯನೇ ಅಲ್ಲವೆ? ಅಷ್ಟೇಕೆ, ಮೈದಾನೆಕ್‌ನಲ್ಲಿ ಸಾವಿನ ಬೃಹತ್ ಶಿಬಿರವನ್ನು ರಚಿಸಿದವನು ಸಹ ಆರ್ಯನೇ ವಿನಾ ಕರಿಯ ಅಥವಾ ಯಹೂದಿಯಲ್ಲ. ಇಡೀ ಮಾನವ ಇತಿಹಾಸದಲ್ಲಿ ಕರಿಯರು ಅಥವಾ ಯಾವುದೇ "ಕೀಳು" ಜನಾಂಗವು, ತಮ್ಮನ್ನು ತಾವು "ಶ್ರೇಷ್ಠ" ಎಂದು ಕರೆದುಕೊಳ್ಳುವ ಜನಾಂಗಗಳವರಷ್ಟು ಕೊಲೆಪಾತಕಿಗಳಾಗಿಲ್ಲ. ನೈತಿಕತೆಯ ತಕ್ಕಡಿಯಲ್ಲಿ ತೂಗಿದರೆ ವಾಸ್ತವವು ಜನಾಂಗವಾದಿಗಳು ಹೇಳುವುದಕ್ಕೆ ವ್ಯತಿರಿಕ್ತವಾಗಿದೆ. ಪಾಪದ ಹೊರೆಯನ್ನು ಹೊರುವುದು ಪುಣ್ಯಕಾರ್ಯವೆಂದೇನಾದರೂ ಸೂತ್ರೀಕರಿಸಿದರೆ ಆಗ ಮಾತ್ರ ಜನಾಂಗವಾದಿಗಳು ಮರ್ಯಾದಸ್ಥರಾಗಿ ಕಂಡಾರು; ಅನ್ಯಾಯದ ಪರಾಕಾಷ್ಠೆಯು ನ್ಯಾಯವೆಂದಾಗ ಮಾತ್ರ ಅವರು ಯೋಗ್ಯರೆನಿಸಿಕೊಂಡಾರು. ಅತಿ ಅಸಹ್ಯವಾದ ಕಲ್ಮಷಗಳನ್ನು ಪೂಸಿಕೊಳ್ಳುವುದು ಶುದ್ಧತೆಯೆನಿಸಿಕೊಂಡಾಗ ಇವರು ಪರಿಶುದ್ಧರು! ಈ 'ಆರ್ಯರು' ಮತ್ತು ಅವರ ಅನಿಷ್ಟ ಜ್ಞಾತಿಗಳಿದ್ದಾರಲ್ಲಾ, ಅವರಿಗೆ ಜೊನತಾನ್ ಸ್ವಿಫ್ಟ್‌ನ ಒಂದು ಮಾತು ಪೂರ್ಣವಾಗಿ ಅನ್ವಯವಾಗುತ್ತದೆ: ಅವರು "ಪ್ರಕೃತಿ ಮಾತೆಯು ಕಂಡ ಘೋರ ದುರ್ವಾಸನೆಯ ಹೇನು-ಕೂರೆಗಳ ದುಷ್ಟ ಜನಾಂಗ; ಆ ಹೇನು-ಕೂರೆಗಳು ಪೃಥ್ವಿಯ ಮೇಲೆ ನಡೆದಾಡಿ ಎಲ್ಲವನ್ನೂ ಮಲಿನಗೊಳಿಸಿವೆ."

ನೈತಿಕ ತೀರ್ಪಿಗೆ ತಲೆಬಾಗಬೇಕೆಂದಿದ್ದರೆ ಕಳೆದ ಕೆಲವು ವರ್ಷಗಳಲ್ಲಿ (ಅಂದರೆ 1930ರ ದಶಕದಲ್ಲಿ) ತಲೆಗಳನ್ನು ಚೆಂಡಾಡಿದ ಮೃಗೀಯತೆಯು ಪಾಪಿಷ್ಠರು ಯಾರೆಂಬುದನ್ನು ಸಾಬೀತುಗೊಳಿಸಿರುವುದನ್ನು ಗಮನಿಸಬೇಕು. ಹೋಗಲಿ, ಅಸಾಧ್ಯವೆನಿಸುವ ಒಂದು ಸಂದರ್ಭವನ್ನು ಕಲ್ಪಿಸಿಕೊಳ್ಳೋಣ. ಈ 'ಆರ್ಯರು' ಚಾಟಿ, ವಿಷಾನಿಲ ಕೋಣೆ, ಜಂಗಮವಾದ ನೇಣುಗಂಬ, ಎಲ್ಲವನ್ನೂ ಹೊಂದಿದ್ದಾರೆ. ಅವರ ಮೂದಲಿಕೆ, ಪ್ರತ್ಯೇಕಗೊಳಿಸುವ ಕುತಂತ್ರ, ಇತ್ಯಾದಿಗಳನ್ನು ಇತರ ಸಮುದಾಯಗಳ ನಡವಳಿಕೆಗಳಿಗಿಂತಲೂ ನೈತಿಕವಾಗಿ ಉತ್ತಮವೆಂದು ಭಾವಿಸೋಣ. ಈ ಉತ್ತಮಿಕೆಯು ಇತರರನ್ನು ಕ್ರೂರವಾಗಿ ಹಿಂಸಿಸಲು, ಅವರ ಮೇಲೆ ದೌರ್ಜನ್ಯವೆಸಗಲು ಅಪ್ಪಣೆ ನೀಡುತ್ತದೆಯೇ? ಅಂತಹ ಅಮಾನುಷ ಕೊಲೆಗಳು ನಿಜವಾಗಿಯೂ ಘಟಿಸಿದವೆಂದು ನಂಬಲಾದೀತೆ? ದಮನವೆಂದರೆ ಬಲವಂತವಾಗಿ ಹಿಂಸಾತ್ಮಕ ಶೋಷಣೆ ಮಾಡುವುದು; ಅದೂ ಮಾನವರ ಚಿಕ್ಕ ಸಮುದಾಯಗಳ ಮೇಲೆ. ಅಧಿಕಾರದ ಪ್ರಾಬಲ್ಯವು ಅದನ್ನೆಸಗಲು ಒಂದು ಸಾಧನ. ಆದರೆ ಇಂತಹ ದೈಹಿಕ ಅಥವಾ ನೈತಿಕ ಪ್ರಾಬಲ್ಯವು ದೌರ್ಜನ್ಯ ಮತ್ತು

ಕೊಲೆಗಳಿಗೆ ಸಮರ್ಥನೆ ನೀಡುತ್ತದೆಯೇ? ಪ್ರಜಾಪ್ರಭುತ್ವವಾದಿ ನೈತಿಕತೆಯು ಅದನ್ನು ಕಂಡು ಹೇಸುತ್ತದೆ. ಅದರ ಸಂಪೂರ್ಣ ನಾಶಕ್ಕಾಗಿ ಹಂಬಲಿಸುತ್ತದೆ.

* * *

ಒಟ್ಟಿನಲ್ಲಿ, ಮಾನವ ಸಮುದಾಯಗಳು ಸಂಪೂರ್ಣವಾಗಿ ಭಿನ್ನವೆಂದು ಜನಾಂಗವಾದಿಯು ಸಾಧಿಸಲಾರ. ಕೆಲವು ಭಿನ್ನತೆಗಳು ಆನುವಂಶಿಕವೆಂದೂ ಸಹ ಅವನು ಸಾಬೀತುಗೊಳಿಸಲಾರ. ಹೀಗಿರುವಾಗ ಒಳಿತು ಮತ್ತು ಹೊಲ್ಲತು ಎಂಬ ಲಕ್ಷಣಗಳನ್ನು ಸಾರಾಸಗಟಾಗಿ ವಿವಿಧ ಸಮುದಾಯಗಳ ಮೇಲೆ ಹೇರುವುದು ಹೇಗೆ ತಾನೆ ಸಮಂಜಸವಾಗಬಲ್ಲುದು?

"ಒಳ್ಳೆಯ" ಲಕ್ಷಣಗಳಿರುವ ಸಮುದಾಯವಿದೆಯೆಂದು ಅತಾರ್ಕಿಕವಾಗಿ ಭಾವಿಸಿದರೂ ಸಹ ಬೇರೆ ಸಮುದಾಯಗಳ ಮೇಲೆ ಹಲ್ಲೆ ನಡೆಸುವ ಹಕ್ಕು ಅವಕ್ಕಿಲ್ಲ. ಜನಾಂಗವಾದಿಯು ನಾಲ್ಕು ಸೂತ್ರಗಳನ್ನು ಹೆಣೆದಿದ್ದಾನಲ್ಲ, ಅದಕ್ಕೆ ಅವನಿಗೆ ನೀಡಬೇಕಾದ ಅಂಕ ಕೇವಲ ಸೊನ್ನೆ. ಇಂತಹ ಕೇಡುಗರು ಇಡೀ ಪ್ರಪಂಚದ ಮೇಲೆ ಅಧಿಕಾರ ಸ್ಥಾಪಿಸುವ ಹಂತವನ್ನು ಮುಟ್ಟಿದರೆ ಅದಕ್ಕಿಂತ ಬೇರೆ ದುರ್ಗತಿ ಇನ್ನಾವುದು!

ಸುಮ್ಮನೆ ನಡುಗುತ್ತಾ ಕುಳಿತಿರಲು ಸಾಧ್ಯವಿಲ್ಲ. ನಾವು ಕಾರ್ಯಪ್ರವೃತ್ತರಾಗೋಣ. ಅದು ಅನಿವಾರ್ಯ. ಜನತೆಗೆ ತಿಳಿವು ನೀಡುವುದು ಮತ್ತು ರಾಜಕೀಯವಾಗಿ ಸನ್ನಿವೇಶವನ್ನು ತಹಬಂದಿಗೆ ತರುವುದು, ಇವೇ ನಮ್ಮ ಮುಂದಿರುವ ಹಾದಿ. ಪ್ರಪಂಚದಲ್ಲೆಲ್ಲೂ ಮೈದಾನೆಕ್‌ನಂತಹ ಸ್ಮಶಾನಗಳು ಕೂಡದು. ಹಿಟ್ಲರನಂತಹ ಪಾತಕಿಗಳು ಕೂಡದು. ನಮ್ಮ ಜನಪ್ರತಿನಿಧಿಗಳಲ್ಲಿ ಇಂತಹ ಪಾತಕಗಳನ್ನು ಸಮರ್ಥಿಸುವವರಿಗೆ ಸ್ಥಾನವು ಸರ್ವಥಾ ಕೂಡದು. ಜನಾಂಗೀಯ ದ್ವೇಷದ ಘೋಷಣೆಗೆ ಅವಕಾಶವೂ ನಿಷಿದ್ಧ. ಇದನ್ನು ಆಗುಮಾಡಿಕೊಂಡಾಗ ಸ್ನೇಹಮಯ ಕೂಟಗಳಲ್ಲಿ ನಾವು ಒಟ್ಟಾಗಿ ಉಣ್ಣಬಹುದು, ದ್ವೇಷಪೂರಿತ ಸಂಭಾಷಣೆಯ ಜೊತೆ ಜೊತೆಗೆ ಪಾಯಸ ಕುಡಿಯುವುದನ್ನು ತಡೆಯಬಹುದು.

ಇದನ್ನು ಸಾಧಿಸುವುದರಲ್ಲಿ ನಾವು ಸೋಲಬೇಕಾಗಿಲ್ಲ. "ಯಜಮಾನ ಜನಾಂಗ" ಎಂದು ಕರೆದುಕೊಳ್ಳುವ ಮಾನವ ಜನಾಂಗವು ಒಂದೇ. ಅದು ಅನೇಕ ನಾಯಕರನ್ನು ಬೆಳೆಸಿಕೊಂಡಿದೆ. ನಾವೇ ಆ ನಾಯಕರು. ಅಂದರೆ, ಪ್ರಪಂಚದ ಪ್ರಜಾಪ್ರಭುತ್ವವಾದಿ ಜನತೆ. ಇದು ಫಲಿಸುವಂತೆ ಮಾಡಲು ಅಗತ್ಯವಾದ ತಿಳಿವು ನಮ್ಮಲ್ಲಿದೆ, ಅದಕ್ಕೆ ಬೇಕಾದ ಶಕ್ತಿಯೂ ಇದೆ. ತಿಳಿವು ಮತ್ತು ಶಕ್ತಿ ಏಕತ್ರ ಸಂಘಟಿತಗೊಂಡಾಗ ಗೆಲುವು ತಾನೇ ತಾನಾಗಿ ಫಲಿಸುತ್ತದೆ. ಜನಾಂಗ ಭಿನ್ನತೆಯ ಕಲ್ಪನೆಯು ಒಂದು ವಿಕೃತ ಐತಿಹ್ಯ. ಹಿಂಸೆ ಮತ್ತು ದ್ವೇಷಗಳ ಊರೆಯು ಆ ಐತಿಹ್ಯವನ್ನು ಭದ್ರಗೊಳಿಸುವುದಿಲ್ಲ. ಆ ಊರೆಯು ನಮ್ಮನ್ನು ಕಂಗಾಲಾಗಿಸಲು ಬಿಡೆವು.

❑❑

5. ಪ್ರಶ್ನೆಗಳಿಗೆಲ್ಲಾ ಎರಡು ಮಗ್ಗುಲುಗಳೆಂಬ ಮಿಥ್ಯೆ

ಪ್ರಸ್ತುತ ನಮ್ಮ ದೇಶದಲ್ಲಿ ಹಲವು ಬಿಕ್ಕಟ್ಟುಗಳಿವೆ. ಕೋಮುವಾದದ ಉಪಟಳ ಅಂಥದೊಂದು. ಕೋಮುವಾದಿಗಳು ಬಹುಬೇಗನೆ ಫ್ಯಾಸಿಸ್ಟ್ ಅನೀತಿಗಳನ್ನು ತಮ್ಮದಾಗಿಸಿಕೊಂಡು ಬೇರೆಯವರ ಜೀವನವನ್ನು ಸಹಿಸಲಾಗದಷ್ಟು ಭೀಕರ ಗೊಳಿಸುತ್ತಾರೆ. ಮಾನವಸಹಜ ಲಕ್ಷಣಗಳು ಅಳಿಸಿಹೋದಾಗ ಎಲ್ಲದರಲ್ಲೂ ಮೃಗೀಯ ವರ್ತನೆ ಅನಿವಾರ್ಯ. ಈ ವಾತಾವರಣವನ್ನು ಮನಸ್ಸಿನಲ್ಲಿಟ್ಟುಕೊಂಡು ವೈಚಾರಿಕ ಪ್ರತಿಪಾದನೆಯನ್ನು ನೋಡಿದರೆ ಇಂದಿನ ನಮ್ಮ ಹೆಜ್ಜೆಗೆ ಹಾದಿ ಗುರುತಿಸಬಹುದು. ಎಡ–ಬಲ ಎರಡೂ ಬೇಡವೆನ್ನುವವರಿಗೆ ಉತ್ತರ ಇಲ್ಲಿದೆ.

"ಲಿವಿಂಗ್ ಏಜ್" ಎಂಬ ನಿಯತಕಾಲಿಕವೊಂದಿತ್ತು. ಆಗಸ್ಟ್ 1933ರಲ್ಲಿ ಅದು "ಹಿಟ್ಲರನೊಡನೆ ಒಂದು ಹೆಜ್ಜೆ" ಎಂಬ ಲೇಖನ ಪ್ರಕಟಿಸಿತು. ಆವೇಳೆಗಾಗಲೆ ಹಿಟ್ಲರನ ಪಾತಕಗಳು ಜಗತ್ತಿಗೆ ತಿಳಿದಿತ್ತು : ಪಾರ್ಲಿಮೆಂಟ್ ಭವನಕ್ಕೆ ಬೆಂಕಿ ಹಾಕಿದ್ದು, "ಶಿಸ್ತಿನ" ಸಿಪಾಯಿಗಳ ದಾಂಧಲೆ, ಇತ್ಯಾದಿ. ಆದರೆ ಲೇಖಕಿ ಡಾ॥ ಆ್ಯಲಿಸ್ ಹ್ಯಾಮಿಲ್ಟನ್‌ಗೆ ಇದಾವುದೂ ತಟ್ಟಲಿಲ್ಲ. ನಾಜಿಗಳ ದೃಷ್ಟಿಯನ್ನು ಪ್ರಸ್ತುತಪಡಿಸಬೇಕೆಂದು ಆಕೆಯ ಇರಾದೆ. ಆದ್ದರಿಂದ ಆಕೆ ಬರೆದಳು : "ಇಂಥವರನ್ನು ಹುಚ್ಚರು, ಹೇಡಿಗಳು, ಎಂದೆಲ್ಲಾ ಬೈದು ವಿರಮಿಸುವುದು ಸರಿಯಲ್ಲ. ಜರ್ಮನಿಯು ಯುದ್ಧದ ಕಾವಿನಲ್ಲಿರುವ ಸಂದರ್ಭ ಇದು. ಯುದ್ಧಕಾಲದಲ್ಲಿ ನಮ್ಮ ಆದರ್ಶವಾದಿಗಳು ವಿಲಕ್ಷಣವಾಗಿ ಬದಲಾಗಿರಲಿಲ್ಲವೆ ? ಜರ್ಮನಿಯಲ್ಲಿ ಕ್ರೌರ್ಯ, ಮೊಂಡುಭಾವನೆ, ವೈಯಕ್ತಿಕ ಸೇಡು, ಎಲ್ಲಾ ಇವೆ, ನಿಜ; ಆದರೆ ಅದರ ಮೂಸೆಯಿಂದ ಜರ್ಮನರು ಬಹುಕಾಲದಿಂದ ಆಶಿಸುತ್ತಿದ್ದುದೊಂದು ಹೊರಬಂದಿದೆ. ಇಂಗ್ಲೆಂಡಿನ ಆಂಗ್ಲೊ – ಸ್ಯಾಕ್ಸನರಾದ ನಮಗೆ ಅದು ತಿಳಿಯುವುದಿಲ್ಲ, ನಾವೂ ಯೋಚಿಸಬೇಕು."

ಇದನ್ನು ಬರೆದಾಕೆ ನಾಜಿಯಲ್ಲ. ಆಕೆಗೆ ವಸ್ತುನಿಷ್ಠತೆ ಬೇಕು. ಕೆಲವು ಪಾತಕಗಳ ಆಧಾರದ ಮೇಲೆ ಇಡಿಯಾದ ತೀರ್ಮಾನ ಸಾಧುವಲ್ಲವೆಂದು ಅವಳ ಆಗ್ರಹ. ಆದರೆ ಹೇಗೋ ನಾಜಿಗಳ ಬಗೆಗಿನ ಪಕ್ಷಪಾತದ ಬುದ್ಧಿ ಬರಹದಲ್ಲೇ ಸ್ಪಷ್ಟವಾಗಿದೆ. ವಿಶ್ವದ ಜನರೆಲ್ಲಾ ಒಟ್ಟಾಗಿ ಹಿಟ್ಲರನನ್ನು ಕಿತ್ತೆಸೆದು ಮನುಕುಲವನ್ನು ರಕ್ಷಿಸಬೇಕಿತ್ತು. ಅಂಥದರಲ್ಲಿ ಈಕೆ ನಾಜಿಗಳ ಬಗ್ಗೆ 'ವಸ್ತುನಿಷ್ಠ' ವಿಚಾರ ಬಯಸುತ್ತಾಳೆ; ನಮ್ಮಲ್ಲಿ, "ಆಂಗ್ಲೊ – ಸ್ಯಾಕ್ಸನರಲ್ಲಿ", ಅಂಥದೇ ದೃಷ್ಟಿ ಇದೆಯೆನ್ನುತ್ತಾಳೆ. ಆದ್ದರಿಂದ ಅವರನ್ನು ಜರಿಯಬಾರದು. ಜರ್ಮನರ ಆಶಯ ಫಲಿಸುತ್ತಿದೆಯೆಂಬ ಮಾತು ಬೇರೆ! ವಸ್ತುನಿಷ್ಠತೆಯ ಹೆಸರಲ್ಲಿ ಇಂತಹ ಕ್ಷುದ್ರ ಮನಸ್ಸು ಅನಿರೀಕ್ಷಿತ.

“ಆಂಗ್ಲೋ-ಸ್ಯಾಕ್ಸನರು” ಬ್ರಿಟನ್ ಮತ್ತು ಅಮೆರಿಕಾದಲ್ಲಿದ್ದಾರೆ ಸರಿ; ಆದರೆ ಅವರಂಥವರು ಪ್ರಪಂಚದ ಎಲ್ಲೆಡೆ ಇದ್ದಾರೆ. ಅವರೆಲ್ಲಾ ಅನುಭವದಿಂದ ಏನಾದರೂ ಕಲಿತಿದ್ದಾರೆಯೇ ವಿನಾ ಅವರ ವಾರಸುದಾರಿಕೆಯಿಂದಲ್ಲ. ಸಮಸ್ಯೆಗೆ ವಿಮುಖವಾಗುವುದು ಸಹ ಅಂತಹ ಅನುಭವದ ಫಲವೇನೋ ! ಅದರಲ್ಲಿ ತಪ್ಪೇನು ಅನಿಸಬಹುದು. ನಾವು ಕುಸ್ತಿ ಮಾಡಹೋಗದಿದ್ದರೆ ಮುಗಿಯಿತು, ಶಾಂತಿ ನೆಲೆಸುತ್ತದೆಯಲ್ಲವೆ ? ಸಾಮಾನ್ಯವಾಗಿ ಕ್ರಿಯೆ ಅನಿವಾರ್ಯವೆಂಬ ಭಾವನೆ ದಟ್ಟವಾಗಿರುತ್ತದೆ; ಅದು ಜೀವದ ಪ್ರಶ್ನೆ, ಸಮಾಜದ ಪ್ರಶ್ನೆ. ಹೀಗಿರುವಾಗ ಸುಮ್ಮನಿರಬೇಕೆಂದರೆ ಹೇಗೆ ? ಕ್ರಿಯೆಗಳೆಲ್ಲಾ ನಿಷ್ಫಲವೆಂಬ ತತ್ತ್ವವನ್ನು ಸಾರುವವರಿದ್ದಾರೆ. ಮಾನವ ಸ್ವಭಾವ ಬದಲಾಗುವುದಿಲ್ಲವೆಂಬ ಖಚಿತತೆ ಅವರದು. ಸಾಮಾಜಿಕ ಅಸಮಾನತೆಯು ವಿಕಾಸವಾದದ ಅನಿವಾರ್ಯ ಪರಿಣಾಮವೆಂದಾದರೆ ನಾವು ಮಾಡುವುದೇನಿದೆ ! ನಿಷ್ಕ್ರಿಯೆಯನ್ನು ಬೋಧಿಸುವ ಈ ಮಾತುಗಳು ನೈತಿಕ ಪ್ರಜ್ಞೆ ಇರುವವರಿಗೆ ರುಚಿಸುವುದಿಲ್ಲ. ತಮ್ಮ ಸುಖ ಮತ್ತು ಬೇರೆಯವರ ದುಃಖ ನೋಡುತ್ತಾ ಅವರು ಸುಮ್ಮನೆ ಕೂಡಲಾರರು. ತಮ್ಮ ಸಂತೃಪ್ತಿಯಲ್ಲೇ ಮುಳುಗಿಹೋಗಿರುವವರು ಅದನ್ನೆಲ್ಲಾ ಗಮನಿಸದೆ ಇರುತ್ತಾರೇನೋ ! ಖಾಸಗಿ ಏಳಿಗೆಯು ಇಂತಹ ಜಡತೆಯನ್ನು ಅನೂಚಾನವಾಗಿ ಸಾಂದ್ರಗೊಳಿಸುತ್ತಾ ಬಂದಿರುವುದುಂಟು. ಸುಖ-ಸಮೃದ್ಧಿ ಇರುವವರಲ್ಲೂ ಹಲವು ವೇಳೆ ಸಹಜೀವಿಗಳ ಬಗ್ಗೆ ಸಾಂತ್ವನದ ಭಾವವಿರುತ್ತದೆ. ದುಃಖದುಮ್ಮಾನಗಳು, ಅನ್ಯಾಯ, ಇವೆಲ್ಲಾ ಅವರಿಗೂ ಗೊತ್ತು. ಅದನ್ನವರು ಪ್ರತಿಭಟಿಸಿ ಕ್ರಿಯಾಶೀಲರಾಗುತ್ತಾರೆ. ಅದಕ್ಕೆ ಪ್ರೇರಣೆ ಇದ್ದೇ ಇದೆ; ಏಕೆಂದರೆ, ಸ್ವತಃ ಅವರು ಅನಿಶ್ಚಿತತೆಯ ಹೊಡೆತಕ್ಕೆ ಸಿಕ್ಕಿದ್ದವರು.

ಯಾರು ಕ್ರಿಯೆಯನ್ನು ತಡೆಯಲಿಚ್ಛಿಸುತ್ತಾರೋ ಅವರು ಅತ್ತಿತ್ತ ವಾಲದೆ ಹೇಗೋ ಸ್ಥಿರವಾಗಿ ಇರಬಯಸುವವರು. ಅದು ಸುಲಭದ ಮಾತಲ್ಲ; ಸ್ವಲ್ಪ ಅತ್ತಿತ್ತ ಅಲುಗಿದರೂ ತಂತಿಯಿಂದ ಕೆಳಗುರುಳುವುದೇ ! ಹೀಗಾಗಿ ಅವರು ತಂತಿಯ ಮೇಲೆ ನವಿರಾಗಿ ನಡೆಯುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಲೇ ಇರಬೇಕು. ಅದರ ಒಂದು ಭಾಗವಾಗಿ ಹೆಚ್ಚು ಮಾತನಾಡುವುದನ್ನು ರೂಢಿಸಿಕೊಳ್ಳುತ್ತಾರೆ. ಯಾವುದರ ಬಗ್ಗೆ ? ಬಲಕ್ಕೆ ಬಿದ್ದರೇನಾಗುತ್ತದೆ, ಎಡಕ್ಕೆ ಬಿದ್ದರೇನಾಗುತ್ತದೆ ಎಂಬುದನ್ನು ಕುರಿತು. ಈ ಮಾದರಿಯವರ ಜೊತೆ ಇನ್ನೊಂದು ಗುಂಪನ್ನು ಸೇರಿಸಬೇಕು : ಅವರಿಗೆ ಕ್ರಿಯೆಯನ್ನು ಕುರಿತು ಸೊಗಸು ಭಾವನೆಗಳಿವೆ, ಆದರೆ ಯಾವೊಂದು ನಿರ್ದಿಷ್ಟ ತತ್ವಕ್ಕೂ ಬದ್ಧರಾಗಲು ಸಿದ್ಧರಿಲ್ಲ. ಕ್ರಿಯೆಯ ಪರಿಚಯ ಬೇಕು, ಏನು ನಡೆಯುತ್ತಿದೆಯೆಂಬ ಕುತೂಹಲ, ಆದರೆ ತಂತಿ ನಡಿಗೆಯೆಂದರೆ ವಿಮುಖತೆ. ಪಕ್ಷಪಾತವಿಲ್ಲದ ದೃಷ್ಟಿ, ಪ್ರಾಮಾಣಿಕತೆ, ಉಳಿಯಬೇಕೆಂಬ ಹಂಬಲ, ಇತ್ಯಾದಿ ಅವರದು. ಆಗೇನು ಮಾಡುವುದು ? ಎಲ್ಲ ತತ್ವಗಳ ಬಗೆಗೂ ಒಲವು ಬೆಳೆಸಿಕೊಳ್ಳುವುದು ಮತ್ತು ಯಾವ ತೀರ್ಮಾನವನ್ನೂ ಕೈಗೊಳ್ಳದಿರುವುದರಲ್ಲಿ ಪ್ರಾಮಾಣಿಕರಾಗಿರುವುದು. ಅಂದರೆ, ಒಬ್ಬರದು ತಂತಿ ನಡೆ, ಇನ್ನೊಬ್ಬರದು ಅಲುಗುವ ನಡೆ. ಅಲುಗಾಡುವುದು ದೈಹಿಕ ವ್ಯಾಯಾಮವೆನಿಸಿ ಕೊಳ್ಳದು. ವ್ಯಾಯಾಮದಲ್ಲಿ ಮಾಂಸಖಂಡಗಳನ್ನು ಬೆಳೆಸಿ, ಅವು ಇಡೀ ದೇಹವನ್ನು ನಿಯಂತ್ರಿಸುವಂತೆ ಮಾಡುವ ಉದ್ದೇಶವಿದೆ. ಅಂದರೆ, ಪ್ರಪಂಚದಲ್ಲಿ ನಮ್ಮ ಸ್ಥಾನ ಕಂಡುಕೊಳ್ಳುವುದು ಒಂದು ವ್ಯಾಯಾಮದ ಶಿಸ್ತಿದ್ದಂತೆ. ಅಲುಗಾಡುವಾಗ ರಭಸವಿದ್ದರೆ

ಅದೂ ವ್ಯಾಯಾಮವಾಗಿಬಿಡಬಹುದು, ಆದರೆ ಅದರಲ್ಲಿ ಯಾವ ಶಿಸ್ತೂ ಇಲ್ಲ. ಅಲುಗಾಡುವವರು ಇಚ್ಛೆಗನುಸಾರವಾಗಿ ಹಾಗೆ ಮಾಡುವುದಿಲ್ಲ, ಪರಸ್ಪರ ವಿರೋಧಿ ಸೆಳೆತ ಅವರನ್ನು ಅಲುಗಾಡಿಸುತ್ತಿರುತ್ತದೆ. ಅತ್ತಿತ್ತ ಭರ್ರೆಂದು ಏಳುತ್ತಿರುವ ಅಲೆಗಳ ನಡುವೆ ಸಿಕ್ಕಿಕೊಂಡ ಮರದ ತುಂಡು ಯಾವುದು ಹೆಚ್ಚು ಪ್ರಭಾವಿ ಅಲೆಯೋ ಅದರೊಡನೆ ತೇಲಿಹೋಗುತ್ತದೆ. ತೇಲುವಾಗ ಅದೇನು ಗಾಂಭೀರ್ಯ, ಬುದ್ಧಿವಂತಿಕೆ ! ಮೇಲೆ ಆಕಾಶ, ಕೆಳಗೆ ನೀರು; ನೀರಿನ ಜೊತೆ ಸಂಪರ್ಕ ಕಳೆದುಕೊಳ್ಳಲು ಮರದ ತುಂಡಿಗೆ ಆಸೆಯಿಲ್ಲ. ಬದಲಾಗಿ, ತಾನದೆಷ್ಟು ಅಚಲವಾದ ಸಂಬಂಧ ಬೆಳೆಸಿಕೊಂಡಿದ್ದೇನೆಂಬ ಹಮ್ಮೂ ಇರಲು ಸಾಕು. ಮುಳುಗದ ತುಂಡಲ್ಲವೆ ! ಪ್ರಪಂಚವೂ ನೀರಿನಂತೆ ವಿಶಾಲ, ಚಲನಶೀಲ; ಮತ್ತು ಬದಲಾವಣೆಗಳಿಗೆ ಪಕ್ಕಾದದ್ದು. ಎಂಥದೋ ಯಾಂತ್ರಿಕ ಅಧಿಕಾರ, ಖಚಿತತೆ ಇದ್ದಂತೆ ತೋರುವ ಬೃಹತ್ ಘಟಕ ಇದು. ಅಲೆಗಳಿಗೆ ಎರಡು ವಿಧದ ಜಾರುವ ಪಕ್ಕಗಳು. ಒಂದೊಂದು ಬೋಗುಣಿಯಲ್ಲೂ ಎರಡೆರಡು ಅಲೆಗಳು. ಅಂದರೆ, ಪ್ರತಿಯೊಂದು ಪ್ರಶ್ನೆಗೂ ಎರಡು ಮಗ್ಗುಲುಗಳಲ್ಲವೆ ?

ತಾರ್ಕಿಕವಾಗಿ ಇದು ಸರಿ. ಯಾವುದೇ ಹೇಳಿಕೆಗೂ ಅದಕ್ಕೆ ವಿರುದ್ಧವಾದ ಇನ್ನೊಂದು ಹೇಳಿಕೆ ಸಾಧ್ಯ. ಎರಡನೆಯ ಹೇಳಿಕೆಯಲ್ಲಿ ಮೊದಲಿನದನ್ನು ತಳ್ಳಿಹಾಕಲು ಬೇಕಾದಷ್ಟು ಸಾಮಗ್ರಿ ಅಡಕಗೊಂಡಿರುತ್ತದೆ. "ನಿನ್ನೆ ಇಲ್ಲಿ ಮಳೆ ಬಿದ್ದಿತು" ಎಂದು ನಾನು ಹೇಳಿದರೆ, "ಇಲ್ಲ, ಬೀಳಲಿಲ್ಲ" ಎಂದು ನೀವು ಹೇಳುತ್ತೀರಿ. ಈ ಅರ್ಥದಲ್ಲಿ ಎಲ್ಲಾ ಪ್ರಶ್ನೆಗಳಿಗೂ ಎರಡು ಮಗ್ಗುಲುಗಳುಂಟು. ಆದರೆ ತೀರ್ಮಾನ ಕೈಗೊಳ್ಳಲು ಇಚ್ಛಿಸದವರಿಗೆ ಯಾವುದಾದರೊಂದು ಹೇಳಿಕೆಯಲ್ಲಿ ಅಸತ್ಯವಿದೆಯೆಂಬ ಸುಳಿವೂ ಅಗತ್ಯವಾಗುತ್ತದೆ. ಎರಡು ಹೇಳಿಕೆಗಳೂ ನಿಜವಾಗಲಾರವು; ಒಂದು ನಿಜ ಮತ್ತು ಇನ್ನೊಂದು ಅಲ್ಲ. ಎಲ್ಲ ಚರ್ಚೆಗಳಲ್ಲೂ ಇಂತಹ ನಿಖರತೆ ಇರಬೇಕು; ಇಲ್ಲದಿದ್ದರೆ ಕೇಂದ್ರವಿಷಯವು ಮಸುಕಾಗಿಬಿಡುತ್ತದೆ, ಯಾವುದನ್ನು ಕುರಿತು ಚರ್ಚೆ ಎಂಬುದೇ ಶಂಕೆಗೆ ಆಸ್ಪದ ನೀಡುವಂತಾಗುತ್ತದೆ. ಯಾವುದನ್ನು ಕುರಿತಾದರೂ ಎರಡು ಹೇಳಿಕೆಗಳೂ ಸತ್ಯವಾಗಿರಬೇಕಾದರೆ ಅವು ಪರಸ್ಪರ ವಿರೋಧಿ ನೆಲೆಯವಲ್ಲ. ಹಾಗಿರುವಾಗ ಎರಡೇಕೆ, ಹಲವು ನಿಜವಾದ ಹೇಳಿಕೆಗಳಿರಲು ಸಾಧ್ಯ. ಅವುಗಳ ನಡುವೆ ಅಂತಸ್ಸಾಮ್ಯವಿರುತ್ತದೆ. ತಂತಿ ನಡೆ ಮತ್ತು ಅಲುಗಾಡುವ ಸನ್ನಿವೇಶದಲ್ಲಿ ಬರುವ ದ್ವಂದ್ವ ಇದೇ: ಪರಸ್ಪರ ವಿರೋಧಿ ಹೇಳಿಕೆಗಳಾದರೆ ಇರುವುವೇ ಎರಡು, ಅವುಗಳಲ್ಲಿ ಒಂದು ಅಸತ್ಯ. ಪರಸ್ಪರ ವಿರೋಧಿಯಲ್ಲದಿದ್ದರೆ ಅವು ಒಂದಕ್ಕೊಂದು ಪೂರಕ ಎಂದಾಯಿತು. ಆಗ ಅವುಗಳು ಅಸಂಖ್ಯವಾಗಿರಬಹುದು. ಅಂದರೆ, ಸತ್ಯಾಸತ್ಯತೆಯು ಪ್ರಶ್ನೆಯ ವಿಷಯ; ಇಲ್ಲವೇ, ಸಂಖ್ಯೆಯು ಪ್ರಶ್ನೆಯ ವಿಷಯ. ತಂತಿ ನಡಿಗೆಯವರಿಗೆ, ಅಲುಗಾಡುವ ಸ್ವಭಾವದವರಿಗೆ, ಈ ದ್ವಂದ್ವ ತಟ್ಟುವುದಿಲ್ಲ; ಏಕೆಂದರೆ, ಅವರ ಚಿಂತನೆಯಲ್ಲಿ ತಾರ್ಕಿಕ ಸಾಮ್ಯ-ವಿರೋಧಗಳ ಪರಿಗಣನೆ ಇರುವುದಿಲ್ಲ. ಹೇಗೋ ಏನೋ ಸ್ಪರ್ಧೆಗಳೆಲ್ಲಾ ಎರಡು ಪಕ್ಷಗಳಾಗಿರುತ್ತವೆಂಬ ಮಬ್ಬು ಮಬ್ಬು ಕಲ್ಪನೆ ಅವರದು, ಅಷ್ಟೆ. ಹಲವು ಪಕ್ಷಗಳಿರುತ್ತವೆಯೆಂದರೂ ಅವರಿಗೆ ಬಾಧಕವಿಲ್ಲ. ಪಕ್ಷಗಳು ಎಷ್ಟು ಹೆಚ್ಚಾಗಿವೆಯೋ ಅಷ್ಟೂ ವಿಶಾಲವಾದ ಚರ್ಚೆ ಸಾಧ್ಯವೆಂಬ ಹುಮ್ಮಸ್ಸು ಅವರಿಗೆ. ಚರ್ಚೆ ವಿಶಾಲವಾದಷ್ಟೂ ತೀರ್ಮಾನ ಅನಿಶ್ಚಯವೆಂಬ ಸಮಾಧಾನ; ತೀರ್ಮಾನ

ಅನಿಶ್ಚಯವಾದಾಗೆಲ್ಲಾ ಕ್ರಿಯೆಯನ್ನು ಮುಂದೂಡುತ್ತಿರಬಹುದಲ್ಲ ! ಅಂದರೆ, ಈ ದ್ವಂದ್ವವು ಅಲುಗಾಡುವ ಸ್ವಭಾವದವನ ಕೇಡಿನ ಪಡಿಯಚ್ಚು ಎಂದರ್ಥ.

ಈಗ ಇನ್ನೊಂದು ರೀತಿ ನೋಡಹೊರಡೋಣ. ಪ್ರತಿಯೊಂದು ಪ್ರಶ್ನೆಗೂ ಎರಡು ಮಗ್ಗುಲುಗಳಿವೆಯೆಂದು ಹೇಳುವವರು ವೈಜ್ಞಾನಿಕ ಸತ್ಯವನ್ನು ನಿರ್ಧರಿಸುವುದರಲ್ಲೇನೂ ತೊಡಗಿರುವುದಿಲ್ಲ. ಅವರ ದೃಷ್ಟಿಯಲ್ಲಿರುವುದು ರಾಜಕೀಯ ಅಥವಾ ಸಾಮಾಜಿಕ ವಿಷಯ. ಹಲವು ಕಾರ್ಯಕ್ರಮಗಳು ಎದುರಿಗಿರುವಾಗ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕೆಂಬುದು ಅವರ ಜಿಜ್ಞಾಸೆಗೆ ಮೂಲ. ಒಂದೊಂದು ವಿಷಯವನ್ನು ಕುರಿತಂತೆಯೂ ಹುರಿಯಾಳುಗಳು ಮತ್ತು ಪ್ರಚಾರ ಎಲ್ಲೆಯಿಲ್ಲದಷ್ಟು; ಹೀಗಿರುವಾಗ ಅತಿ ಕ್ಷೇಮವಾದ ನಂಬಿಕೆ ಅವರಿಗೆ ಸುಲಭವಾಗಿ ದಕ್ಕುತ್ತದೆ. ಅದೇ "ಎರಡು ಕಡೆಗೂ ಹೇಳಬಹುದಾದ್ದು ಬೇಕಾದಷ್ಟಿದೆ" ಎಂಬ ಜಾರಿಕೆಯ ಮಾತು.

ತತ್ವಗಳ ಗ್ರಹಚಾರ ಹೀಗಿದೆ : ಕೇವಲ ವಾದಕ್ಕೆಂದು ಅವನ್ನು ಎಷ್ಟು ಲಂಬಿಸುತ್ತೇವೆಯೋ ಅಷ್ಟೂ ಅವುಗಳ ಅಂತಸ್ಸತ್ವ ಮರೆಯಾಗಿಬಿಡುತ್ತದೆ. ಹಾಗೆ ಮಾಡಹೋದಾಗ ತತ್ವವು ವೈವಿಧ್ಯಮಯವಾದ ಹಿನ್ನೆಲೆಗಳಲ್ಲಿ ಕಾಣಿಸಿಕೊಂಡು ಕಡೆಗೆ ಅದರ ಮೂಲಾರ್ಥವು ಸಡಿಲವಾಗಿಬಿಡುತ್ತದೆ. ಎಷ್ಟು ಹಿನ್ನೆಲೆಗಳೋ ಅಷ್ಟು ಅರ್ಥಗಳು; ಖಚಿತ ಚಿಂತನೆಗೆ ಇದು ಮಾರಕ. ತತ್ವವನ್ನು ಹಿಗ್ಗಾಮುಗ್ಗ ಝಾಡಿಸಿ, ಅದನ್ನು ಸೋಲಿಸಿ ಅನರ್ಥಗೊಳಿಸುವುದಷ್ಟೇ ಉಳಿಯುವ ಕೆಲಸ. ಎಲ್ಲ ಪ್ರಶ್ನೆಗಳಿಗೂ ಎರಡು ಮಗ್ಗುಲುಗಳಿವೆಯೆಂಬ ಧೋರಣೆಗೆ ಸ್ವತಃ ಹತ್ತಾರು ಅರ್ಥಗಳನ್ನು ಕಲ್ಪಿಸಲು ಸಾಧ್ಯ. ಅದರ ನಿಷ್ಕೃಷ್ಟ ತಾರ್ಕಿಕಾರ್ಥ ಎಲ್ಲೋ ಮರೆಯಾಗುತ್ತದೆ. ಮೊದಲಿಗೇ ಅದರ ತಾರ್ಕಿಕಾರ್ಥವನ್ನು ತುಂಡರಿಸಿದರೆ ನಮಗೆ ಬೇಕೆನಿಸಿದ ವಿಚಿತ್ರ ಅರ್ಥವನ್ನು ಆಯ್ದುಕೊಳ್ಳಲು ಅಡ್ಡಿಯಿರುವುದಿಲ್ಲ. ವಿಚಿತ್ರಾರ್ಥವು ತಾರ್ಕಿಕಾರ್ಥದಿಂದ ಹೊಮ್ಮುವಂತಿರಬೇಕಾಗಿಲ್ಲ; ನಾವು ಹೇಳಿದ ಸಂದರ್ಭಕ್ಕೆ ತಕ್ಕಂತೆ ಅರ್ಥ ಕಟ್ಟಿಕೊಳ್ಳಬೇಕು, ಅಷ್ಟೆ. ಇದೂ ಗೋಜಲುಗೋಜಲಾಗಿ ಪರಿಣಮಿಸುತ್ತಿದೆಯೇ ? ಇರಲಿ; ಎಲ್ಲ ಪ್ರಶ್ನೆಗಳಿಗೂ ಎರಡು ಮಗ್ಗುಲುಗಳಿವೆ ಎಂದಾಗ ಕಡೇಪಕ್ಷ ಏಳು ಅರ್ಥಗಳು ಸಾಧ್ಯ: (1) ಪ್ರಮುಖ ಸಾಮಾಜಿಕ ಸಂಗತಿಗಳು ಮಾನವ ಸಮಾಜವನ್ನು ಎರಡು ಬಣಗಳನ್ನಾಗಿ ಮಾಡುತ್ತವೆ; ಎರಡರಲ್ಲೂ ಸುಸಂಗತ ತರ್ಕ ಸ್ವಲ್ಪಮಟ್ಟಿಗಿದೆ ಮತ್ತು ಎರಡರಲ್ಲೂ ಸ್ವ–ಹಿತದ ಲೇಪವಿದೆ; (2) ಯಾವುದೇ ಸನ್ನಿವೇಶದಲ್ಲೂ ಸಮಾನವಾಗಿ ಒಳ್ಳೆಯ ಆಯ್ಕೆಯೆನಿಸಿಕೊಳ್ಳುವಂತಹ ಹಲವು ಆಯ್ಕೆಗಳಿರುತ್ತವೆ; (3) ಎಲ್ಲ ಸಿದ್ಧಾಂತಗಳಲ್ಲೂ ಸ್ವಲ್ಪ ಸತ್ಯಾಂಶವುಂಟು, ಸ್ವಲ್ಪ ತಪ್ಪು ಅಂಶಗಳುಂಟು; ಆದ್ದರಿಂದ ಪ್ರತಿಯೊಂದರಿಂದಲೂ ಸತ್ಯವನ್ನು ಅರಿತು ಆರಿಸಿಕೊಳ್ಳಬೇಕು; (4) ಯಾವುದಾದರೂ ಒಂದು ಪಕ್ಷ ವಹಿಸಿದರೆ ವೈಜ್ಞಾನಿಕ ನಿಷ್ಪಕ್ಷಪಾತಕ್ಕೆ ಧಕ್ಕೆಯುಂಟಾಗುತ್ತದೆ; (5) ಪರಸ್ಪರ ವಿರೋಧಿ ಸಿದ್ಧಾಂತಗಳನ್ನು ಹೆಚ್ಚು ಹೆಚ್ಚು ತಿಳಿದಷ್ಟೂ ಆ ಸಿದ್ಧಾಂತಗಳನ್ನು ಇಟ್ಟುಕೊಂಡಿರುವವರ ಬಗ್ಗೆ ಅನುಕಂಪ ಮೂಡುತ್ತದೆ; (6) ಪ್ರತಿಯೊಂದು ವಿವಾದದಲ್ಲೂ ಸಂಬಂಧಿಸಿದ ಎಲ್ಲರ ಅಭಿಪ್ರಾಯಗಳನ್ನೂ ಮನವಿಟ್ಟು ಅರಿತುಕೊಳ್ಳಬೇಕು; (7) ಎಲ್ಲ ಸಂಗತಿಗಳನ್ನೂ ಸಂಪೂರ್ಣವಾಗಿ ಅಭ್ಯಾಸ ಮಾಡುವವರೆಗೆ ಯಾವ ತೀರ್ಮಾನಕ್ಕೂ ಬರಬಾರದು.

ಇವುಗಳಲ್ಲಿ ಮೂರು ಅಲುಗಾಡುವವರ ಲಕ್ಷಣ; ಮುಂದಿನ ಮೂರು ತಂತಿ

ನಡಿಗೆಯವರ ಲಕ್ಷಣ; ಕಡೆಯದು ಸಾಮಾನ್ಯವಾಗಿ ಅಂಗೀಕಾರಾರ್ಹವಾಗಿದ್ದು, ಅದು ಯಾರ ಲಕ್ಷಣವಾದರೂ ಆಗಲು ಸಾಧ್ಯ.

ಆರು ಮೌಢ್ಯದ ಅರ್ಥಗಳು

ಈಗ ಮೊದಲ ಆರು ಅರ್ಥಸಾಧ್ಯತೆಗಳನ್ನು ಪರೀಕ್ಷಿಸೋಣ: (ಅ) ಪ್ರತಿಯೊಂದು ಪ್ರಶ್ನೆಗೂ ಎರಡು ಮಗ್ಗುಲುಗಳಿಲ್ಲದಿರಬಹುದು, ಆದರೆ ಬಹುತೇಕ ಪ್ರಮುಖ ಪ್ರಶ್ನೆಗಳಿಗಿರುತ್ತವೆ ಮತ್ತು ಎರಡು ಕಡೆಗೂ ಸರಿಯಾದ ತರ್ಕ ಸ್ವಲ್ಪ ಮತ್ತು ಸ್ವ-ಹಿತ ಸ್ವಲ್ಪ ಇರುತ್ತವೆ. ಪ್ರಮುಖ ಪ್ರಶ್ನೆಗಳು ಹೀಗೆ ಧ್ರುವೀಕರಣಗೊಳ್ಳುವುದು ಸ್ವಾಭಾವಿಕ, ಏಕೆಂದರೆ ಅವು ಇಡೀ ಜನರಿಗೆ ಸಂಬಂಧಿಸಿದ ಪ್ರಶ್ನೆಗಳು ಮತ್ತು ಯಾವುದಾದರೊಂದು ಕಡೆಗೆ ಸೇರದೆ ಉಳಿಯುವ ಮಂದಿ ಕಡಿಮೆಯಾಗುತ್ತಾ ಹೋಗುತ್ತಾರೆ. ಅವರು ಯಾವ ಬಣ ಸೇರುತ್ತಾರೆಂಬುದು ಅವರ ಹಿತಾಸಕ್ತಿಗಳನ್ನಾಧರಿಸಿರುತ್ತದೆ. ಅಂದರೆ, ಯಾವುದು ಮಿತ್ರಬಣವೆಂದು ಅವರು ಭಾವಿಸುತ್ತಾರೋ ಅದರತ್ತ ಹೋಗುತ್ತಾರೆ, ವೈರಿ ಬಣದತ್ತ ಅಲ್ಲ. ಎರಡು ಬಣಗಳೂ ತಮ್ಮ ನಿಲುವನ್ನು ಮಂಡಿಸುತ್ತಾ ಹೋರಾಟದಲ್ಲಿರುತ್ತವೆ; ಎರಡು ಕಡೆಯೂ ಪ್ರಚಾರದಲ್ಲಿ ಗಟ್ಟಿಗರಾದ ನಾಯಕರಿರುತ್ತಾರೆ. ಹೀಗಾಗಿ ಎರಡೂ ಸಮಾನವಾಗಿ ಸರಿಯಾಗಿವೆ ಎನ್ನಿಸಲೂ ಸಾಧ್ಯ. ವಿರೋಧವಾದುವು, ಆದರೆ ಎರಡೂ ಸರಿಯಾದವು ಅಂದರೇನರ್ಥ? ಎರಡನ್ನೂ ತೆಗೆದುಹಾಕಿ, ಎಂದು ! ಎರಡರಲ್ಲೂ ಸ್ವ-ಹಿತ ಇರುವುದರಿಂದ ಎರಡನ್ನೂ ಗುಮಾನಿಯಿಂದ ಕಾಣಬೇಕು. ಅಲೆಗಳ ಹೊಡೆತಕ್ಕೆ ಸಿಕ್ಕಿದ ಮರದ ತುಂಡು ಯಾವ ಕಡೆಗೆ ಬಿದ್ದು ಈಸಿದರೂ ಒಂದೇ ಅನುಭವ ತಾನೆ.

(ಆ) ಸಮಾನವಾಗಿ ಯುಕ್ತ ಮತ್ತು ಸಮಾನವಾಗಿ ಗುಮಾನಿಗೆ ಯೋಗ್ಯ; ಮೊದಲನೆಯದು ಅಚ್ಚರಿ ಮೂಡಿಸುತ್ತದೆ ಮತ್ತು ಎರಡನೆಯದು ಕಂಗಾಲಾಗಿಸುತ್ತದೆ. ಅಮೂರ್ತವನ್ನು ಮುಚ್ಚಿಡುವ ಭರಾಟೆಯಲ್ಲಿ ಬರುವ ಅಚ್ಚರಿಯ ಪರಿಣಾಮಗಳನ್ನು ನೋಡಿ. ಎರಡು ಕಾರ್ಯಕ್ರಮಗಳನ್ನೂ "ತೂಗಿ" ನೋಡುವುದೆಂದರೆ ಎರಡನ್ನೂ ಅವುಗಳ ಆಂತರಿಕ ಸಂಗತತೆಯ ದೃಷ್ಟಿಯಿಂದ ತುಲನೆ ಮಾಡುವುದು, ಹೇಗೆ ಪ್ರೇರಿಸುತ್ತವೆಂದು ನೋಡುವುದು. ಆದರೆ ಅವಕ್ಕೆ ನಿರ್ದಿಷ್ಟ ಚಾರಿತ್ರಿಕ ಸನ್ನಿವೇಶ ವೊಂದಿರುತ್ತದಲ್ಲ, ಅದನ್ನು ಗಮನಿಸಬೇಡವೆ ? ಈ ಸಂಗತತ್ವವೇ ಅವುಗಳ ಸಾರ, ಅದೇ ಅವುಗಳ ಮಹತ್ವದ ಸೂಚನೆ. ತಕ್ಷಣದ ಸಾಮಾಜಿಕ ಹಿನ್ನೆಲೆಯಿಂದ ಬಿಡಿಸಿ ಅದನ್ನು ಅಮೂರ್ತವೆಂಬಂತೆ ನೋಡಿದರೆ ಎರಡೂ ಸಮಾನವಾಗಿ ಒಪ್ಪುವಂಥವೇ ಆದಾವು; ಆದರೆ ಹಿನ್ನೆಲೆಯನ್ನು ಸ್ಪಷ್ಟಪಡಿಸಿಕೊಂಡರೆ ಅವುಗಳ ಅಸಮಾನತೆಯು ಕಣ್ಣಿಗೆ ರಾಚುತ್ತದೆ. ಆಯ್ಕೆ ಯಾವುದಾದರೂ ಸರಿಯೆ ಎಂಬುದರ ಜಾಗದಲ್ಲಿ ಇಂಥದೇ ಆಯ್ಕೆ ಮಾಡಿಕೊ ಎಂದು ಕೂಗಿ ಹೇಳುತ್ತವೆ. ಆಯ್ಕೆಯ ಗೊಡವೆ ಬೇಡವೆನ್ನುವವನಿಗೆ ಈ ಧ್ವನಿಗಳು ಸೈರನ್ ಇದ್ದಂತೆ; ಆಯ್ಕೆಯಿಂದ ದೂರಸರಿಯಬೇಕಾದರೆ ಕಿವಿ ಮುಚ್ಚಿಕೊಳ್ಳಬೇಕಾದೀತು.

ಇನ್ನು ಕಂಗಾಲಾಗಿಸುವ ಪ್ರಸಂಗ: ಎರಡು ಕಡೆಯೂ ಸ್ವ-ಹಿತವಿದೆಯಾದ್ದರಿಂದ ಎರಡೂ ಸಮಾನವಾಗಿ ಭ್ರಷ್ಟವೇ ಎಂಬ ವಿಚಾರ. ಆಶ್ಚರ್ಯವೆನಿಸಬಹುದು, ಆದರೆ ಕೆಲವರಿರುತ್ತಾರೆ; ಅವರು ಮಾನವನ ವ್ಯವಹಾರಗಳಲ್ಲಿ ತಲೆಹಾಕಬಯಸುವುದಿಲ್ಲ.

ಏಕೆಂದರೆ, ಅವರ ಪ್ರಕಾರ ಎಲ್ಲ ಸಾಮಾಜಿಕ ಸಂಸ್ಥೆಗಳು ಮತ್ತು ರಾಜಕೀಯ ಚಳುವಳಿಗಳು ಅಶುದ್ಧ. ತಮ್ಮ ಅಸಾಮಾನ್ಯ ಶೋಭೆ ಅವರ ಕಣ್ಣು ಕೋರೈಸುತ್ತದೆ; ತಮ್ಮನ್ನು ತ್ಯಾಗಮೂರ್ತಿಗಳೆಂದು ಭಾವಿಸಿಕೊಳ್ಳುವ ಈ ಜನ ಒಂದು ಚಳುವಳಿಯೋ ಕಾರ್ಯಕ್ರಮವೋ ಮೂಡಲೆಂದು ಕಾಯುತ್ತಾರೆ. ಅದೆಂತಹದ್ದಾಗಿರಬೇಕೆಂದರೆ, ಅದನ್ನು ಪ್ರಸ್ತುತಪಡಿಸುವವರಿಗೆ ಅದರಿಂದ ಯಾವ ಪ್ರಯೋಜನವೂ ಇರಬಾರದು. ಆಗಲೇ ಅದು ಶುದ್ಧ. ತಮಗೆ ಅನಾನುಕೂಲಗಳನ್ನು ಕಲ್ಪಿಸಿಕೊಳ್ಳುವ ಉದ್ದೇಶದಿಂದಲೇ ಯಾರಾದರೂ ಬೆಳೆಸುವ ಒಂದು ಸಾಮಾಜಿಕ ಚಳುವಳಿಗಾಗಿ ಇವರು ತವಕದಿಂದ ಕಾಯುತ್ತಾರೆ! ಅಂಥದೊಂದು ಚಳುವಳಿ ಎಂದಾದರೂ ಬಂದರೆ ಅದು ಬಹಳ ವಕ್ರವಾಗಿರುತ್ತದೇನೊ. ಆದ್ದರಿಂದ, ಒಂದು ವಿವಾದದಲ್ಲಿ ಎರಡು ಬಣಗಳವರಿಗೂ ಸ್ವ-ಹಿತವಿದೆಯೆನ್ನುವುದು, ಹೆಚ್ಚುಕಡಿಮೆ, ಮರದ ತುಂಡು ಎದ್ದುನಿಂತು ಅಲೆಗಳ ಎರಡು ಕಡೆಗಳಲ್ಲೂ ನೀರಿದೆಯೆಂದು ಹೇಳಿದಂತೆಯೇ ಸರಿ. ಸ್ವಂತದ ಹಿತಾಸಕ್ತಿ ಇರುವಾಗ ತರ್ಕವು ಭ್ರಷ್ಟವಾಗಬಹುದೆಂಬುದು ನಿಜ. ಬೇರೆಯವರಿಗೆ ಮೋಸ ಮಾಡಿ ಸ್ವ-ಹಿತ ರಕ್ಷಿಸಿಕೊಳ್ಳಲು ಅದು ಬೇಕು. ಆದರೆ ಸ್ವ-ಹಿತದ ರಕ್ಷಣೆಗೆ ನಾವೆಲ್ಲರೂ ಇತರರಿಗೆ ಮೋಸ ಮಾಡಿಯೇ ಮಾಡುತ್ತೇವೆಂದೇನೂ ಇಲ್ಲ. ಪ್ರಾಮಾಣಿಕತೆಯು ಸ್ವ-ಹಿತಕ್ಕೆ ವಿರೋಧಿಯಾಗಬೇಕಿಲ್ಲ. ಫ್ರಾಂಕ್ಲಿನ್ ಹೇಳಿದ್ದಂತೆ ಪ್ರಾಮಾಣಿಕತೆಯು ಅತ್ಯುತ್ತಮ ನೀತಿ. ಮೋಸದ ಮಾತಿಲ್ಲದಾಗ ತರ್ಕಕ್ಕೇಕೆ ಕುಂದು ಬರಬೇಕು? ಆದ್ದರಿಂದ ಒಂದು ಬಣಕ್ಕೆ ಸ್ವ-ಹಿತಾಸಕ್ತಿ ಇದ್ದಮಾತ್ರಕ್ಕೆ ಅದರ ಕಾರ್ಯಕ್ರಮ ಆಪಾತ ರಮಣೀಯ ಆಗಿಬಿಡುವುದಿಲ್ಲ. ನಮ್ಮ ಮನೆಗೆ ಬೆಂಕಿ ಬಿದ್ದಿದೆ; ತನ್ನ ಮನೆಗೆ ಅದು ಹರಡದಿರಲೆಂದು ಪಕ್ಕದ ಮನೆಯವರು ನನಗೆ ಸಹಾಯ ನೀಡುತ್ತಾರೆ. ಹಾಗೆಂದರೆ ಅವರ ಕ್ರಿಯೆಯಲ್ಲಿ ಕೃತ್ರಿಮತೆ ಇದೆಯೆಂದರ್ಥವಲ್ಲ. ಅವರಿಂದ ನನಗೇನೂ ಸಹಾಯವಾಗಿಲ್ಲವೆಂದು ಹೇಳಿ ನಾನವರಿಗೆ ವಂದನೆ ಹೇಳದಿರಲೆ ? ಅದು ಯೋಗ್ಯವಲ್ಲ.

ಅಶುದ್ಧವಾದ ತರ್ಕ ಇರುವುದೆಲ್ಲಿ ? ಸ್ವಂತಕ್ಕೇನೋ ಒಳ್ಳೆಯದಿದ್ದಾಗೆಲ್ಲಾ ಖಂಡಿತಕ್ಕೂ ಅದು ಸಮುದಾಯದ ಹಿತಕ್ಕೆ ವ್ಯತಿರಿಕ್ತವಾದದ್ದು ಎಂದು ಭಾವಿಸುವುದರಲ್ಲಿ. ಒಬ್ಬ ವ್ಯಕ್ತಿಯ ಹಿತವು ಇತರರ ಹಿತದಿಂದ ಪೂರ್ತಿ ಪ್ರತ್ಯೇಕ, ಅದಕ್ಕೆ ತೀರಾ ವಿರೋಧ, ಎಂದು ಭಾವಿಸಿದಾಗಿನ ತತ್ತ್ವವೇನೆಂದರೆ "ಎಲ್ಲರೂ ಎಲ್ಲರ ವಿರುದ್ಧ ಯುದ್ಧ ಸಾರಬೇಕು" ಎಂಬುದು. ಪ್ರಾಣಿಗಳ ಪ್ರಪಂಚ ನೋಡಿ: ಅಲ್ಲಿ ಸಂಘರ್ಷವಿರುವಂತೆ ಸಹಕಾರವೂ ಇದೆ. ಎಲ್ಲರೂ ಎಲ್ಲರ ವಿರುದ್ಧವೆಂಬ ಸೂತ್ರವು ನಿರಾಧಾರವಾದುದೆಂಬುದೇ ನಾಳಿನ ಒಳ್ಳೆಯ ವಿಶ್ವಕ್ಕೆ ನಮಗೆ ಆಸರೆ. ಏನೇ ಇರಲಿ, ಒಂದು ಗುಂಪಿನ ಹಿತವಡಗಿದೆಯೆಂಬ ಕಾರಣಕ್ಕೆ ಒಂದು ಕಾರ್ಯಕ್ರಮವು ಮೋಸದ್ದು, ಕೆಟ್ಟದ್ದು, ಆಗಬೇಕಾಗಿಲ್ಲ. ಅದು ಮೋಸ ಮತ್ತು ಕೇಡು ಉಂಟುಮಾಡುವುದು ಕಾರ್ಯಕ್ರಮದ ನೈಜ ಪರಿಣಾಮಗಳಿಂದ ಮಾತ್ರವೇ ತಿಳಿಯಬಹುದಾದ್ದು. ಅದನ್ನು ನಿಖರವಾಗಿ ತಿಳಿಯಲು ಪ್ರತಿಯೊಂದು ಸಮಸ್ಯೆ ಮತ್ತು ಕಾರ್ಯಕ್ರಮವನ್ನೂ ಅದರ ಸಮಗ್ರ ಚಾರಿತ್ರಿಕ ಆಗುಹೋಗುಗಳ ಆಧಾರದ ಮೇಲೆ ನಿಷ್ಕರ್ಷೆ ಮಾಡಬೇಕು. ಹಾಗೆ ನೋಡಿದಾಗ ಯಾವ ಗುಂಪು ಸ್ವ-ಹಿತಕ್ಕಾಗಿ ಕಾರ್ಯಮಗ್ನವಾಗಿದೆಯೆಂಬುದು ತಿಳಿದುಬಿಡುತ್ತದೆ. ಮುಖ್ಯ ಪ್ರಶ್ನೆ ಇದು: ಸಾಮಾಜಿಕ ಪ್ರಗತಿಗೆ ಯಾವ ಗುಂಪು ಏನು ಮಾಡುತ್ತಿದೆ, ಎಂಬುದು. ಅದು

ಸಮಾಜದ ಪ್ರಗತಿಗೆ ಇಂಬುಕೊಡುತ್ತಿದ್ದರೆ ಅದರ ಸ್ವ-ಹಿತಾಸಕ್ತಿಯು ಮನುಕುಲಕ್ಕೆ ಹೇಯವಲ್ಲ, ಬದಲಾಗಿ ಅದು ಶ್ರೇಯಸ್ಕರ.

ವಿಶೇಷತಃ ಇದು ದುಡಿಯುವವರ ಚಳುವಳಿಯ ಸಂದರ್ಭದಲ್ಲಿ ಪ್ರಸ್ತುತ. ಅವರ ಚಳುವಳಿಗಳು ತಮ್ಮ ಸ್ವಂತದ ಉತ್ತಮಿಕೆಗಾಗಿ ನಡೆಯುವ ಹೋರಾಟಗಳಾಗಿದ್ದರೂ ಅಸಮಾನತೆ ಮತ್ತು ನಿರಂಕುಶಾಧಿಪತ್ಯಗಳ ವಿರುದ್ಧದವೂ ಆಗಿರುತ್ತವೆ. ಅಂತಹ ಪಿಡುಗುಗಳು ಸಮಾಜದ ಎಲ್ಲರಿಗೂ ಬಾಧೆಯನ್ನುಂಟುಮಾಡುತ್ತಿರುತ್ತವೆ. ಸಮಾಜದ ಕೆಲವು ವಿಭಾಗಗಳು, ಅದರಲ್ಲೂ ಮಧ್ಯಮ ವರ್ಗದ ಕೆಳಸ್ತರದವರು, ಆಗಾಗ್ಗೆ ಫ್ಯಾಸಿಸ಼ಂಗೆ ಒಲವು ತೋರಿಸಿರುವುದುಂಟು; ಆದರೆ ತನ್ನ ಸ್ಥಾನದ ಲಕ್ಷಣದಿಂದಾಗಿ ಅಂತಹ ಆಳ್ವಿಕೆಗೆ ಕಡು ವೈರಿ. ಸಮಾಜದ ಕೆಲವು ವಿಭಾಗಗಳು ಯಹೂದಿಗಳನ್ನು ದ್ವೇಷಿಸುವ, ಕಪ್ಪು ಜನಾಂಗದವರನ್ನು ಪಕ್ಷಪಾತದಿಂದ ಕಾಣುವ ಧೋರಣೆಯನ್ನು ತಾಳಬಹುದು; ಇನ್ನೂ ಮುಂದೆ ಹೋಗಿ "ಅನಪೇಕ್ಷಿತವಾದ ಅನ್ಯರನ್ನು" ಹೊರಗಟ್ಟಲು ಆಶಿಸಬಹುದು. ಇಂತಹ ವೈಪರೀತ್ಯ ಭಾವನೆಗಳನ್ನು ತನ್ನಲ್ಲಿ ಬೆಳೆಸಿಕೊಂಡರೆ ದುಡಿಯುವವರ ಚಳುವಳಿಗೆ ಉಳಿಗಾಲವಿರುವುದಿಲ್ಲ. ಒಡಕಿಗೆ ಆಸ್ಪದ ನೀಡಲಾಗದಂತಹ ಚಳುವಳಿ ಅದು. ಇಂತಹ ಬೇರೆಷ್ಟೋ ಮೌಢ್ಯಗಳನ್ನು ಸಮಾಜದ ಕೆಲವಿಭಾಗಗಳು ತಮ್ಮಲ್ಲಿ ತುಂಬಿಕೊಳ್ಳಬಹುದು, ಆದರೆ ದುಡಿಯುವವರ ಚಳುವಳಿಯು ಅಂತಹ ಮಾರಕ ಮೌಢ್ಯಗಳನ್ನು ಗುರುತಿಸಿ ಕೂಡಲೆ ಹೊಸಕಿಹಾಕಬೇಕಾಗುತ್ತದೆ.

ಇದರ ಸೂಚನೆ ಸ್ಪಷ್ಟವಾಗಿದೆ. ತಾವು ಕ್ರಾಂತಿಕಾರಿ ವಿಜಯಗಳನ್ನು ಸಾಧಿಸುತ್ತಿದ್ದ ಕಾಲದಲ್ಲಿ ಬಂಡವಳಿಗರು ಭೌತಿಕ ವಿಜ್ಞಾನ ಶಾಖೆಗಳ ಪೋಷಕರಾಗಿದ್ದಂತೆ ನಮ್ಮ ಕಾಲದಲ್ಲಿ ದುಡಿಯುವವರ ಚಳುವಳಿಯು ಸಮಾಜ ವಿಜ್ಞಾನದ ಧಾರಕನಾಗಿದೆ. ಎಷ್ಟು ಜ್ಞಾನದ ಶೇಖರಣೆಯಾಗಿದೆ ಅಥವಾ ಆಗಿದ್ದಿತು ಎಂಬುದು ಮುಖ್ಯವಲ್ಲ. ಬಂಡವಳಿಗರ ಯಶಸ್ಸು ರಸತಂತ್ರ (ಕ್ಷುದ್ರ ಖನಿಜಗಳನ್ನು ಚಿನ್ನವಾಗಿಸುವ ಐತಿಹ್ಯ) ಮತ್ತು ಜ್ಯೋತಿಷ್ಯದಂತಹ "ಜ್ಞಾನ" ಶಾಖೆಗಳನ್ನು ಚಿವುಟಿಹಾಕಿದಂತೆ ದುಡಿಯುವವರ ಯಶಸ್ಸು ಮ್ಯಾಂಚೆಸ್ಟರ್ ಕೇಂದ್ರಿತ ಅರ್ಥಶಾಸ್ತ್ರ ಮತ್ತು ಅದಕ್ಕಿಂತಲೂ ಹೊಲಸಾದ "ನನ್ನ ಗುರಿ" (ಹಿಟ್ಲರನ ಆತ್ಮಕತೆ)ಯಂತಹ ದೈತ್ಯ ಸುಳ್ಳುಗಳನ್ನು ಮೆಟ್ಟಿ ನಿಲ್ಲುತ್ತದೆ. ಅಂದರೆ, ಚಾರಿತ್ರಿಕವಾಗಿ ತಾವು ಹೊಂದಿರುವ ಸ್ಥಾನದಿಂದಾಗಿ ಕೆಲವರು ವಿಶಿಷ್ಟ ಅದೃಷ್ಟವಂತರು. ಸಮಾಜದ ಎಷ್ಟೋ ಜನರಿಗೆ ಒಳಿತು ಎಂಬುದು ಒಂದು ಹೋರಾಟ ಇಲ್ಲವೆ ಅಭ್ಯಾಸ. ಆದರೆ ಅಧ್ಯಾತ್ಮಧೋರಣೆ, ಅಜ್ಞಾನ ಮತ್ತು ಪಾಶವಿ ವೃತ್ತಿಯಂತಹ ಲಕ್ಷಣಗಳನ್ನು ಸ್ವಭಾವತಃ ತಮ್ಮಲ್ಲಿ ತುಂಬಿಕೊಳ್ಳಲಾಗದಂತಹ ಜನಸಮುದಾಯವನ್ನು ಕಂಡು ನಾವೆಷ್ಟು ಅಸೂಯೆಪಡಬೇಕು ! ನಮಗೆ ಹಾಗಿರಲು ಕಷ್ಟ, ಆದರೆ ಅವರಿಗೆ ಅದು ಅತಿಸುಲಭ. ಅವರ ಸ್ವ-ಹಿತಾಸಕ್ತಿಯು ಎಲ್ಲರ ಹಿತಕ್ಕೆ ಮಾಂತ್ರಿಕವೋ ಎಂಬಂತೆ ಪೋಟಿಹಾಕಿಕೊಂಡಿದೆ. ಆ ಕಡೆಗೆ ಈ ಕಡೆಗೆ ವಾಲುವುದರಲ್ಲೇ ಮಗ್ನರಾಗಿರುವವರು ಈ ಸುಲಭ ಗುಣವನ್ನು ಅಪ್ಪಿಕೊಳ್ಳಲಿ, ತಮ್ಮ ಎಣೆಯಿಲ್ಲದ ಸಂಶಯಗಳನ್ನು ತೊರೆಯಲಿ. ಡೋಲಾಯಮಾನ ನಿಲುವು ಅನಾರೋಗ್ಯಕರ.

* * *

(2) ಸಮುದ್ರದ ಅಲೆಯ ಹೊಡೆತಕ್ಕೆ ಸಿಕ್ಕಿದ ಮರದ ತುಂಡು ತಾನಿರುವ ಅಲೆಯ ಮೇಲಿನಿಂದ ಬೇರೆ ಅಲೆಗಳನ್ನು ಕಾಣುತ್ತದೆ. ಅಯ್ಯೋ, ನನಗದೆಷ್ಟು ಅಗಾಧ ಸಾಧ್ಯತೆಗಳಿವೆ, ಎಂದದಕ್ಕೆ ಅನಿಸಬಹುದು. ಒಂದು ಪ್ರಶ್ನೆಗೆ ಎರಡು ಮಗ್ಗುಲುಗಳಿವೆಯೆಂದಾಗ, ಬಹುಶಃ ಆಯ್ಕೆಗೆ ಯೋಗ್ಯವಾದ ಹತ್ತಾರು ಪರ್ಯಾಯಗಳಿವೆ ಎಂಬ ಇಂಗಿತವಿದೆ. ಸಾಧಾರಣ ಸಮಸ್ಯೆಗಳನ್ನು ಪ್ರಮುಖ ಸಾಮಾಜಿಕ ಸಂಗತಿಗಳೆಂದು ಪರಿಭಾವಿಸುವುದರ ಪರಿಣಾಮ ಇದು. ರಜೆಗೆ ನಾನೆಲ್ಲೋ ಹೋಗಬೇಕು, ನನ್ನ ಮುಂದೆ ಹತ್ತಾರು ಆಯ್ಕೆಯ ಸಾಧ್ಯತೆಗಳಿವೆ, ಪ್ರತಿಯೊಂದೂ ತನ್ನದೇ ಆದ ಆಕರ್ಷಣೆ ಹೊಂದಿದೆ. ಅಥವಾ, ಕೆಲಹೊತ್ತು ಏನನ್ನಾದರೂ ಓದಿಕೊಂಡಿರಬೇಕು, ಆಯ್ಕೆಗೆ ಎಷ್ಟೊಂದು ಪುಸ್ತಕಗಳಿವೆ, ಪ್ರತಿಯೊಂದೂ ಉಪಯುಕ್ತ ಮತ್ತು ಆನಂದದಾಯಕ. ನಮ್ಮ ಆಸಕ್ತಿಗಳು ಅನೇಕವಿದ್ದು, ತೃಪ್ತಿ ಹಲವು ಬಗೆಯವಿದ್ದಾಗ ಪ್ರತಿಯೊಂದು ಸನ್ನಿವೇಶವೂ ಆಯ್ಕೆಗೆ ಹಲವು ಸಂಗತಿಗಳನ್ನೊಡ್ಡುತ್ತದೆ. ಎಲ್ಲಾ ಪರಿಚಯವಿರುವಂಥವೇ ಆದರೂ ಆಯ್ಕೆ ಪ್ರತಿ ಸನ್ನಿವೇಶದಲ್ಲೂ ನಮ್ಮ ಮುಂದಿರುತ್ತದೆ. ಅರಿಸ್ಟಾಟಲ್ ಹೇಳಿದ್ದು ಇದಕ್ಕೆ ಭಿನ್ನವಾದ್ದು. ಅವನ ಪ್ರಕಾರ ಪ್ರತಿ ಸನ್ನಿವೇಶದಲ್ಲೂ ಅದಕ್ಕನುಗುಣವಾದ ಆಯ್ಕೆ ಒಂದು ಮಾತ್ರ ಇರುತ್ತದೆ. ಅಂತಹ ಆಯ್ಕೆಯನ್ನು ಅವನು 'ಮಧ್ಯಸ್ಥವಾದ್ದು' ಎಂದು ಕರೆದಿದ್ದ. ಅದರಿಂದ ಯಾವ ಕಡೆಗೆ ಚಲಿಸಿದರೂ ಅದು ತೀವ್ರತೆಯೆನಿಸಿಕೊಳ್ಳುತ್ತದೆ. ಸನ್ನಿವೇಶಕ್ಕೆ ಅಗತ್ಯವಾದುದಕ್ಕಿಂತ ಹೆಚ್ಚು ಅಥವಾ ಕಡಿಮೆ ಆಗಿರುತ್ತಾದ್ದರಿಂದ ಆ ಹೆಸರು. ಒಂದು ಸೈನ್ಯದ ತುಕಡಿ ಯಾವುದೋ ಸ್ಥಾನವನ್ನು ರಕ್ಷಿಸುತ್ತಿದೆಯೆನ್ನಿ; ಅಲ್ಲಿ 'ಮಧ್ಯಸ್ಥ' ಯಾವುದು ? ಆ ಸ್ಥಾನವನ್ನು ಉಳಿಸಿಕೊಳ್ಳಲು ಬೇಕಾದಷ್ಟು ಕೆಚ್ಚು ಮಾತ್ರ ಮಧ್ಯಸ್ಥ. ಅವರು ಹಿಂದಕ್ಕೆ ಸರಿದರೆ ಹೇಡಿಗಳು; ಮುಂದಕ್ಕೆ ಸರಿದರೆ ಅನಗತ್ಯವಾದ ಗಂಡಾಂತರ. ಅವರಿಗೂ ಅಪಾಯ, ಸ್ಥಾನವೂ ಅಭದ್ರ. ಸನ್ನಿವೇಶವು ಬದಲಾದಾಗ ಅವರ ಕ್ರಿಯೆಯೂ ಬದಲಾಗುತ್ತದೆ. ಸೈನಿಕರು ಆ ನಿಗದಿತ ಸ್ಥಾನವನ್ನು ರಕ್ಷಿಸಲು ಅಸಮರ್ಥರಾದರೆ ಅವರು ಅಲ್ಲೇ ಉಳಿಯಬಾರದು; ಉಳಿದರೆ ಅದು ಕೆಚ್ಚಲ್ಲ, ಬದಲಾಗಿ ದುಡುಕು. ಅದೇ, ಇನ್ನೂ ಮುಂದುವರಿಯಲು ಸಾಧ್ಯವಿದ್ದಾಗ ಸೈನಿಕರು ಅಲ್ಲೇ ಉಳಿದುಬಿಟ್ಟರೆ ಅದು ಕೆಚ್ಚಾಗುವುದರ ಬದಲು ಹೇಡಿತನವಾಗುತ್ತದೆ.

ಅರಿಸ್ಟಾಟಲನ ಈ ಸಿದ್ಧಾಂತವು ಮಾನವನ ಚಿಂತನೆಗೆ ಒಂದು ಮಹತ್ವದ ಕಾಣಿಕೆ. ಒಳ್ಳೆಯ ಯೋಜನೆಯೊಂದಕ್ಕೆ ಇದು ನೀಲಿನಕ್ಷೆ. ಮೊದಲು ವಾಸ್ತವಿಕ ಸನ್ನಿವೇಶದ ವಿಶ್ಲೇಷಣೆ, ಆಮೇಲೆ ಸೂತ್ರವನ್ನು ಕಾರ್ಯರೂಪಕ್ಕೆ ತರುವ ಕೆಲಸ. ಈ ನೆಲೆಯಲ್ಲಿ ಯಾವುದೇ ಸನ್ನಿವೇಶವನ್ನೂ ಪರೀಕ್ಷಿಸಲು ಸಾಧ್ಯ. ಸನ್ನಿವೇಶವು ವಾಸ್ತವವಾದ್ದು; ಆದ್ದರಿಂದ ಮನಸೋ ಇಚ್ಛೆ ಕಲ್ಪಿಸಿಕೊಳ್ಳಲು ಅವಕಾಶವಿಲ್ಲ. ಅಂತಹ ಸಂದರ್ಭದಲ್ಲಿ ಕ್ರಿಯೆಯೆಂಬುದು, ಅರಿಸ್ಟಾಟಲ್ ಹೇಳುವಂತೆ, "ಒಬ್ಬ ಪ್ರಾಯೋಗಿಕ ತಿಳುವಳಿಕೆಯುಳ್ಳವನ ಕ್ರಿಯೆ" ಆಗುತ್ತದೆ. ಈಗ ನೋಡಿ, ನಿಗದಿತ ಸೂತ್ರದಿಂದ ದೂರವಾಗುವುದು ಅತ್ಯಲ್ಪವೇ ಆದರೂ ಆಗ ನಮ್ಮ ಮುಂದಿನ ಒಳ್ಳೆಯ ಆಯ್ಕೆಗಳು ಹಲವು. ಆದಾಗ್ಯೂ ಅಂತಹ ಸಂದರ್ಭದಲ್ಲಿ ಸಹ "ಅತ್ಯುತ್ತಮವೆನ್ನಬಹುದಾದ್ದು" ಒಂದಿರುತ್ತದೆ. ಅಂಥದೊಂದಿದೆ ಅಥವಾ ಇರುತ್ತದೆ ಎಂಬುದನ್ನು ತಿಳಿದಿದ್ದರೆ ಸರಿ; ನಮಗದನ್ನು ಹುಡುಕಿ

ತೆಗೆಯಲಾಗದಿರುವ ಸಂಭವವೂ ಉಂಟು. ಅತ್ಯುತ್ತಮವಾದ ಆಯ್ಕೆಗೆ ಬಹು ಹತ್ತಿರವಾದ್ದನ್ನು ಕಂಡುಕೊಂಡು ಅದರಂತೆ ಕ್ರಿಯಾಶೀಲವಾಗಲು ಅಡ್ಡಿಯಿಲ್ಲ.

ಸಾಮೂಹಿಕ ಕ್ರಿಯೆಯ ಸಂದರ್ಭಗಳಲ್ಲಿ "ಅನೇಕ ಆಯ್ಕೆಗಳ ಸಿದ್ಧಾಂತ" ಎನ್ನಬಹುದಾದ್ದು ಅಪಾಯಕಾರಿ ಪರಿಣಾಮಗಳನ್ನು ಉಂಟುಮಾಡಬಲ್ಲುದು. ಕೆಲವು ಗುರಿಗಳ ಸಾಧನೆಯನ್ನು ಬಹುಸಂಖ್ಯೆಯ ಜನ ಒಟ್ಟಾಗಿ ಕಲೆತು ಮಾಡಬೇಕಾದಾಗ ಅವರು ತಮ್ಮ ಕಾರ್ಯಕ್ರಮದ ಬಗ್ಗೆ ನಿರ್ದಿಷ್ಟ ಪರಿಜ್ಞಾನ ಉಳ್ಳವರಾಗಬೇಕು. ಒಬ್ಬೊಬ್ಬರಿಗೆ ಒಂದೊಂದು ಕಾರ್ಯಕ್ರಮಗಳಿವೆಯೆನ್ನಿ. ಮೂರು ಕಾರ್ಯಕ್ರಮವಾಗಿಬಿಟ್ಟರೆ ಜೊತೆಗೂಡಿ ಕ್ರಿಯಾಶೀಲರಾಗುವುದಿಲ್ಲ. ಮೂರೂ ಸಾಧುವಾದುವೇ ಎನ್ನಲಾಗದು. ಆಗಿದ್ದರೂ, ಒಂದು ಕಾರ್ಯಕ್ರಮದ ಜಾಗದಲ್ಲಿ ಮೂರು ಕಾರ್ಯಗತವಾಗ ಹೊರಟಿರುತ್ತವೆ. ಜನರ ಶಕ್ತಿ ಛಿದ್ರವಾಯಿತು. ಒಂದು ಬಂಡೆಯನ್ನು ಬೆಟ್ಟದ ಮೇಲಕ್ಕೇರಿಸಲು ಮೂರು ಮಂದಿ ಒಟ್ಟಾಗುವ ಬದಲು, ಮೂವರೂ ಒಂದೊಂದು ಬಂಡೆಯನ್ನು ಮೇಲಕ್ಕೇರಿಸಲು ಹತಾಶ ಪ್ರಯತ್ನದಲ್ಲಿ ತೊಡಗುತ್ತಾರೆ. ಬಂಡೆ ಮಾತ್ರ ಕೆಳಗೇ ಉಳಿದುಬಿಡುತ್ತದೆ. ಮೂವರೂ ಒಂದು "ಸರಿಯೆನಿಸುವ" (ಅಂದರೆ, ಮೇಲಕ್ಕೇರಿಸಲು ಸಾಧ್ಯವೆನಿಸುವ) ಬಂಡೆಯ ಹಿಂದೆ ನಿಂತು ತಮ್ಮ ಪ್ರಯತ್ನವನ್ನೆಲ್ಲಾ ಏಕೀಭವಿಸಬೇಕು. ಈ ಮಾತನ್ನು ಪ್ರಶ್ನಿಸಲಾದೀತೆ ? ಆದರೆ ಅದನ್ನು ನಿರಾಕರಿಸಿ ಎಂತೆಂಥದೋ ಪಾತಕಗಳು ಜರುಗಿಹೋಗಿವೆ ! ಯಾರೋ ದೇಶದ್ರೋಹಿ, ಯಾರೋ ಸ್ವಪಕ್ಷ ದ್ರೋಹಿ, ತಾನೂ ಅದೇ ಕಾರ್ಯಕ್ರಮವನ್ನು ಜಾರಿಗೊಳಿಸುತ್ತಿರುವುದಾಗಿ ಹೇಳುತ್ತಾ ಕಾರ್ಯಸಾಧನೆಯನ್ನು ಹಾಳುಗೆಡಹುವುದು ಅಪರೂಪವಲ್ಲ. ಉದಾಹರಣೆಗೆ, ಅವರೆಲ್ಲರೂ "ಫ್ಯಾಸಿಸಂ" ಅನ್ನು ಉತ್ಪಾಟಿಸಬೇಕೆನ್ನುತ್ತಾರೆ. ಆದರೆ, ಹೇಗೆ? ಅವರನ್ನು ಎದುರಿಸುವ ಬದಲು, ಅವರನ್ನೆಲ್ಲಾ ಒಬ್ಬೊಬ್ಬರನ್ನಾಗಿ ಹಿಡಿದು ಅವರಲ್ಲಿ ಸುಧಾರಣೆ ತರುವ ಮೂಲಕ. ಹಾಗೆ ಮಾಡಿದಾಗ ಫ್ಯಾಸಿಸಂಅನ್ನು ಸೋಲಿಸಿದಂತೆಯೂ ಆಯಿತು, ಯಾರಿಗೂ ಪೆಟ್ಟು ಬೀಳದಂತೆಯೂ ಆಯಿತು. ಸರಿ, ಅದರ ಮೇಲೆ ವಿಪುಲ ಚರ್ಚೆ, ಅದಕ್ಕೆ ಕೊನೆಯೇ ಇಲ್ಲ. ಅಷ್ಟರಲ್ಲಿ ಸಾಯುಧರಾಗಿ ಫ್ಯಾಸಿಸ್ಟರು ಮುನ್ನುಗ್ಗುತ್ತಾರೆ. ಯಾರು ಯಾರಲ್ಲಿ ಸುಧಾರಣೆ ತರುತ್ತಾರೆಂಬ ಪ್ರಶ್ನೆ ಎಲ್ಲೋ ಮೂಲೆಗುಂಪಾಗುತ್ತದೆ.

ಇಂತಹ ತಂತ್ರಗಳು ಸಂಘಟಿತ ಗುಂಪುಗಳಲ್ಲಿ ಸರ್ವೇಸಾಮಾನ್ಯ. ಹೊಳೆಯುವ ಪರ್ಯಾಯ ಯುಕ್ತಿಯೊಂದನ್ನು ಮುಂದಿರಿಸಿ ಫ್ಯಾಸಿಸಂಅನ್ನು ಬಗ್ಗುಬಡಿಯುವ ಬದಲು ಅದನ್ನು ಪೋಷಿಸಿಬಿಡಬಹುದು! ಪರ್ಯಾಯದಲ್ಲಿ ಏನೆಲ್ಲಾ ಕಾಂತಿ ಇರಲು ಶಕ್ಯ, ಎಷ್ಟು ಆಕರ್ಷಣೆ ಇರಲು ಸಾಧ್ಯ: ದಯೆ, ಗೌರವ, ಕಾರ್ಯಸಾಧ್ಯತೆ, ಎಲ್ಲಾ. ಯಾವ ವಿಧಾನ ಸರಿಯೆಂಬುದನ್ನು ಕುರಿತು ಚಿಂತನೆಯ ಅಭಾವ, ನಿರ್ದಿಷ್ಟ ಸನ್ನಿವೇಶದಲ್ಲಿ ಈ ಕಾರ್ಯಕ್ರಮವು ಫಲ ನೀಡಬಲ್ಲುದೇ ಎಂಬುದರ ಪರಿವೆ ಅಥವಾ ವಿವೇಚನೆ ಇಲ್ಲದಿರುವುದು; ಕಾಂತಿ ಮುಕ್ಕಾಗದೆ ಉಳಿಯುತ್ತದೇನೋ ಸರಿ; ಆದರೆ ಗುಂಪು ಹೊಟ್ಟೆಗಿಲ್ಲದೆ ಸಾಯುತ್ತದೆ. ಬುರಿದನ್ ಎಂಬೊಬ್ಬನ ಬಳಿ ಕತ್ತೆಯೊಂದಿತ್ತು. ಅದನ್ನು ಕಟ್ಟಿಹಾಕಿ ಎರಡೂ ಕಡೆಗೂ ಒಂದೊಂದು ಹೊರೆ ಹುಲ್ಲನ್ನಿರಿಸಿದ, ಎಲ್ಲಿಗೋ ಪ್ರಯಾಣ ಬೆಳೆಸಿದ. ಎರಡು ಕಡೆಯ ಹೊರೆಗಳೂ ಕತ್ತೆಗೆ ಸಿಗುವಂತಿರಲಿಲ್ಲ. ಬುರಿದನ್ ಹಿಂದಿರುಗಿದಾಗ ಕತ್ತೆ ಸತ್ತುಬಿದ್ದಿತ್ತು.

*　　*　　*

(3) ಮುಂದಿನದು ಊಗಲಾಡುವವರ ಪ್ರಸಂಗ. ಅವನು ಮರದ ತುಂಡಿನಂತೆ ಸಮುದ್ರದಲ್ಲಿ ಚೆನ್ನಾಗಿ ತೂಗಾಡಿ ಸವೆದು ಬಂದಿದ್ದಾನೆ. ಮೇಲಕ್ಕೇರುವುದು, ಕೆಳಗೆ ಬೀಳುವುದು, ಅವನಿಗೆ ಅಭ್ಯಾಸವಾಗಿಹೋಗಿದೆ. ಅದರಲ್ಲಿ ಅವನಿಗೆ ಹೊಸತೇನೂ ಉಳಿದಿಲ್ಲ. ಆದರೆ ವಿವಿಧ ಅಲೆಗಳು ತರುವ ಅಪಾಯವೆಂಥದೆಂಬ ಪ್ರಜ್ಞೆ ಅವನಲ್ಲಿ ಮೂಡಿದೆ. ಅವನಿಗೀಗ ತಿಳಿದಿರುವ ವಿಷಯ ಇದು: ಒಂದು ಪ್ರಶ್ನೆಗೆ ಎರಡು ಮಗ್ಗುಲುಗಳಿರುವಂತೆ ಅಲೆಗಳಿಗೂ ಎರಡು ಮಗ್ಗುಲುಗಳಿವೆ. ಮಗ್ಗುಲುಗಳು ಸಾಮ್ಯ ಹೊಂದಿವೆ, ನಿಜ; ಆದರೆ ಅದರ ಜೊತೆಗೆ ತಪ್ಪಿನ ಅಂಶವೂ ಸೇರಿಕೊಂಡಿದೆ. ಏನು ಮಾಡುವುದು? ತಪ್ಪಿನ ಅಂಶವನ್ನು ಹೇಗಾದರೂ ಮಾಡಿ ತೆಗೆದುಹಾಕಿಬಿಟ್ಟರೆ ಜೊತೆಗೂಡಿಸುವ ಕೆಲಸ ಸುಲಭವಾದೀತಲ್ಲ ! ಎರಡೂ ಕಡೆಗೆ ಹೇಳಬಹುದಾದ್ದು ಸಾಕಷ್ಟಿದೆ, ಎಂಬುದಲ್ಲವೆ ಐಕ್ಯತೆಗೆ ಅಡ್ಡಿ, ಆ 'ಸಾಕಷ್ಟು' ಎಂಬುದನ್ನು ಪ್ರತ್ಯೇಕಗೊಳಿಸಿದರೆ ಆಯಿತಲ್ಲ. ಆಗ ಸಿದ್ಧಾಂತ ಮತ್ತು ಕಾರ್ಯಕ್ರಮಗಳೆರಡೂ ಒಂದೊಂದೇ ಆಗುತ್ತವೆ. ಹೀಗೆಂದುಕೊಳ್ಳುವ ನಮ್ಮ ಊಗಲಾಡುವ ವ್ಯಕ್ತಿ ವಿಶಾಲ ಹೃದಯಿಯಾಗಿಬಿಡುತ್ತಾನೆ.

ಇದರಲ್ಲಿರುವ ಮುಗ್ಗಟ್ಟು ಹಾಗೇ ಉಳಿಯಿತು. ಯಾವ ಸಿದ್ಧಾಂತದಲ್ಲೂ ಪೂರ್ಣ ಸತ್ಯವಿಲ್ಲ, ಆದರೆ ಪ್ರತಿ ಸಿದ್ಧಾಂತದಲ್ಲೂ ಭಾಗಶಃ ಸತ್ಯವಿದೆ ಎಂದು ಭಾವಿಸುವುದು ಸೊಗಸಾಗಿ ಕಾಣುತ್ತದೆ, ಆದರೆ ಜಾಗರೂಕತೆ ಅವಶ್ಯಕ. ಯಾರ ಭಾವನೆಗೂ ನೋವುಂಟು ಮಾಡುವುದಿಲ್ಲವೆಂಬುದು ನಿಜ, ಏಕೆಂದರೆ ಎಲ್ಲರಲ್ಲಿಯೂ ಏನೋ ಒಂದು ಒಳ್ಳೆಯ ಪ್ರಜ್ಞೆಯನ್ನು ಹೇಗೂ ಕಂಡಿದ್ದೇವಲ್ಲ ! ಅದರಲ್ಲಿ ತೊಂದರೆಯೂ ಇಲ್ಲ, ಏಕೆಂದರೆ ಪೂರ್ಣ ನಿಖರತೆಯನ್ನು ಯಾರೊಬ್ಬರಿಗೂ ಆರೋಪಿಸಿಲ್ಲ. ಇನ್ನೊಂದು ಅನುಕೂಲವಿದೆ: ಸಮಯವನ್ನು ಉಳಿಸಿದಂತಾಯಿತು, ಎಂಬುದು. ಮಾಹಿತಿ ಕಲೆಹಾಕುವುದು, ವಿಶ್ಲೇಷಿಸುವುದು, ಸತ್ಯವನ್ನು ವ್ಯವಸ್ಥೆಗೊಳಿಸುವುದು, ಹೀಗೆ ಯಾವುದರ ಜಂಜಾಟವೂ ಇಲ್ಲ; ಬೇರೆಯವರ ಶ್ರಮದಿಂದ ಲಭಿಸಿರುವ ಫಲವನ್ನು ಬುದ್ಧಿವಂತಿಕೆಯಿಂದ ಗಮನಿಸಿದರಾಯಿತು, ಅಷ್ಟೆ. ಇದೊಂದು ತರಹದ ಅಡುಗೆಯ ತಯಾರಿ ಇದ್ದಂತೆ: ಬೆರಕೆ ಸೊಪ್ಪಿನ ಹುಳಿ ಚೆಂದ, ಅಂದಂತೆ ಈ ರೀತಿಯ ಕಾರ್ಯಕ್ರಮ ಚೆಂದ.

ನೋಡಲು ಚೆಂದ ಇರಬಹುದು, ಆದರೆ ರುಚಿ ವಿಕಟವಾದ್ದು. ಪ್ರತಿಯೊಂದು ಸಿದ್ಧಾಂತದಲ್ಲೂ ಕೆಲವು ನಿಜವಾದ ಗ್ರಹಿಕೆಗಳಿವೆಯೆಂಬುದು ಮೊದಲನೆಯ ತಪ್ಪು. ಕೆಲವು ಸಿದ್ಧಾಂತಗಳಂತೂ ಅಪ್ಪಟ ಸುಳ್ಳಿನ ಕಂತೆಗಳು; ಅಂಥವು ಬಹಳಷ್ಟಿಲ್ಲವೆಂಬುದೇ ಸಮಾಧಾನ. ಅವು ಏನೇನನ್ನೋ ಬಹಳ ಲಂಬಿಸಿ ಹೇಳುತ್ತವೆ, ಆದರೆ ಸತ್ಯದೊಂದಿಗೆ ಎಳ್ಳಷ್ಟೂ ಸಂಬಂಧ ಬೆಳೆಸಿಕೊಳ್ಳುವುದಿಲ್ಲ. ಉದಾಹರಣೆಗೆ, ಜ್ಯೋತಿಷ್ಯ. ಎಷ್ಟೇ ವಿಶಾಲ ಹೃದಯಿಯಾದರೂ ಅದರಲ್ಲಿ ಏನು ಸತ್ಯವನ್ನು ಕಾಣಲು ಸಿಗುತ್ತದೆ? ಅಥವಾ, ಸಂಖ್ಯಾಶಾಸ್ತ್ರವೂ ಆದೀತು. ಅಂಕಿಗಳನ್ನು ಕೂಡಿ, ಕಳೆದು, ಗುಣಿಸಿ, ಭಾಗಿಸಿ ಸತ್ಯ ಕಂಡುಕೊಳ್ಳಲಾದೀತೆ ? ಅವುಗಳಿಂದ ಏನು ವಿಶ್ವದೃಷ್ಟಿ ಪಡೆಯಲಾದೀತು ? ಅಥವಾ ಡಾ॥ ಗೋಬಲ್ಸ್‌ನ ಜನಾಂಗೀಯ ಧೋರಣೆಯ ಹೇಳಿಕೆಗಳಲ್ಲಿ ಏನು ವಿಶ್ವದೃಷ್ಟಿಯನ್ನು ಕಂಡುಕೊಳ್ಳಬೇಕು? ಎರಡನೆಯದಾಗಿ, ವಿವಿಧ ಸಿದ್ಧಾಂತಗಳಿಂದ ಏನನ್ನಾದರೂ ಆಯ್ಕೆ ಮಾಡಿಕೊಳ್ಳಬೇಕಾದರೆ ಮೊದಲು ನಮಗೆ ಸಾಕಷ್ಟು ಮಾಹಿತಿ ತಿಳಿದಿರಬೇಕು. ಆಯ್ಕೆ ಮಾಡಿಕೊಳ್ಳಲು ಏನಾದರೊಂದು ಮಾನದಂಡ ಬೇಕಲ್ಲ; ಇಲ್ಲದಿದ್ದರೆ ಸತ್ಯ–ಅಸತ್ಯಗಳನ್ನು

ಬೇರ್ಪಡಿಸುವುದು ಹೇಗೆ ? ಬೇಕಾಬಿಟ್ಟಿ ಆಯ್ಕೆ ಮಾಡಿಕೊಳ್ಳಲಂತೂ ಆಗುವುದಿಲ್ಲ. ಹಾಗೆ ಮಾಡಿದರೆ ಸತ್ಯ-ಅಸತ್ಯಗಳ ಕಡು ಮಿಶ್ರಣ ಕಟ್ಟಿಟ್ಟದ್ದು. ಅದು ನಮ್ಮ ಉದ್ದೇಶವಲ್ಲ. ಸ್ವಲ್ಪ ನೈಪುಣ್ಯದಿಂದ ಆಯ್ಕೆ ಮಾಡಿಕೊಳ್ಳಬೇಕಾದರೆ ಕಿಂಚಿತ್ತಾದರೂ ಸತ್ಯದ ಕಲ್ಪನೆ ಇರಬೇಕು. ವಿಶಾಲ ಹೃದಯದಿಂದ ದಕ್ಕುವುದಲ್ಲ ಅದು. ವಿಶಾಲ ಹೃದಯದಿಂದ ಎಲ್ಲವನ್ನೂ ವಿಶ್ಲೇಷಿಸಬೇಕು, ನಿಜ; ಆದರೆ ಸಿಕ್ಕಿದ್ದನ್ನೆಲ್ಲಾ ವಿಶಾಲ ಹೃದಯವಿದೆಯೆಂದು ಅಂಗೀಕರಿಸಿ ತುಂಬಿಕೊಳ್ಳಲಾಗುವುದಿಲ್ಲ. ಉದಾರ ಮನಸ್ಸಿನವರು ಸತ್ಯಕ್ಕಾಗಿ ಎಲ್ಲೆಡೆ ಶೋಧನೆ ನಡೆಸಿ ಸತ್ಯವನ್ನು ಮೊದಲು ತಿಳಿಯುತ್ತಾರೆ; ಆಮೇಲೆ ಅದು ಬೇರೆ ಕಡೆಗಳಲ್ಲಿ ಎಷ್ಟರಮಟ್ಟಿಗಿದೆ ಯೆಂಬುದನ್ನು ತಿಳಿಯಬಹುದು. ಹಾಗೆ ಮಾಡಿದಾಗ ಸತ್ಯವು ಎರಡೂ ಮಗ್ಗುಲುಗಳಲ್ಲಿ ಒಂದೇ ಪ್ರಮಾಣದಲ್ಲಿರುವುದಿಲ್ಲವೆಂಬುದು ಖಚಿತವಾಗುತ್ತದೆ. ಸಿದ್ಧಾಂತದ ಒಟ್ಟು ಪ್ರತಿಪಾದನೆಗಳಲ್ಲಿ ಪ್ರತಿಯೊಂದೂ ಸಮಾನ ಪ್ರಾಮುಖ್ಯ ಹೊಂದಿರುವುದಿಲ್ಲ. ಕೆಲವು ಅತಿಮುಖ್ಯ, ಇನ್ನು ಕೆಲವು ಅಷ್ಟೊಂದು ಮುಖ್ಯವಲ್ಲ. ಮೂಲಭೂತ ಹೇಳಿಕೆಗಳಲ್ಲಿ ಸತ್ಯವಾಗಿರುವ ಸಿದ್ಧಾಂತಗಳಿವೆ, ವಿಶದೀಕರಣದಲ್ಲಿ ತಪ್ಪುಗಳು ನುಸುಳಿರಬಹುದು. ಇನ್ನು ಕೆಲವು ಸಿದ್ಧಾಂತಗಳು ಮೂಲಭೂತ ಹೇಳಿಕೆಗಳ ಹಂತದಲ್ಲಿ ತಪ್ಪಾಗಿದ್ದು, ವಿಶದೀಕರಣ ದಲ್ಲೆಲ್ಲೋ ಅಕಸ್ಮಾತ್ತಾಗಿ ಒಂದೆರಡು ಸರಿಯಾದ ಅಂಶಗಳು ತೂರಿಕೊಂಡಿರಬಹುದು. ಇನ್ನು ಬೇರೆಯವು ತಪ್ಪು; ಬೇಕೆಂದೇ ತಪ್ಪು ಪ್ರತಿಪಾದಿಸುವಂಥವು, ಸರ್ವಥಾ ತಪ್ಪಾದವು. ಇಂಥವನ್ನೆಲ್ಲಾ ಒಟ್ಟಾಗಿ ಸಮಾನ ಮೌಲ್ಯವುಳ್ಳವು, ಸಮಾನವಾಗಿ ಆಸಕ್ತಿ ಮೂಡಿಸುವಂಥವು, ಅಲ್ಲಲ್ಲಿ ಸಮಾನವಾಗಿ ತಪ್ಪುಗಳು ನುಸುಳಿರುವಂಥವು, ಎಂದೆಲ್ಲಾ ಹೇಳುವುದು ವಿಚಿತ್ರವಾದ ನಿಷ್ಪಕ್ಷಪಾತ ಆಗಿಬಿಡುತ್ತದೆ.

ಆದ್ದರಿಂದ 'ವಿಶಾಲ ಹೃದಯ'ದ ಕಲಬೆರಕೆ ತತ್ವಗಳು ವೈಯ್ಯಕ್ತಿಕ, ಕೆಲವೊಮ್ಮೆ ಹುಚ್ಚಾಟಿಕೆಯ, ಆಧಾರ ಹೊಂದಿರಬಹುದೇ ವಿನಾ ಅವು ವೈಜ್ಞಾನಿಕ ವಿಚಾರವಾಗಲಾರವು. ವೈಯ್ಯಕ್ತಿಕತೆ ಯಾವ ಮಟ್ಟಕ್ಕೆ ಹೋಗುತ್ತದೆಂದರೆ ಅದರಲ್ಲಿ ಖಚಿತ ಅಂಶಗಳಿಗೆ ಸ್ಥಾನವಿಲ್ಲ. ಬದಲಾಗಿ, ಒಬ್ಬ ವ್ಯಕ್ತಿ ಆ ಬಗ್ಗೆ ಹೇಗೆ ಚಿಂತಿಸುತ್ತಾನೆಂಬುದಷ್ಟೆ ಮುಖ್ಯವಾಗಿಬಿಡುತ್ತದೆ. ಇದನ್ನು ಕೊನೆ ಮುಟ್ಟುವವರೆಗೆ ಲಂಬಿಸಿದಾಗ ವಿಜ್ಞಾನ ಮತ್ತು ವಿವೇಕ ಪುಡಿಪುಡಿಯಾಗಿಹೋಗಿರುತ್ತವೆ. ಇದರಲ್ಲಿ ಮುಕ್ತಮನಸ್ಸೆಂಬುದು ಎಷ್ಟೊಂದು ಮುಕ್ತವಾಗಿಬಿಟ್ಟಿರುತ್ತದೆಂದರೆ ಅದರಿಂದ ಎಲ್ಲವೂ ಉದುರಿಹೋಗುವಂಥದು ಅನಿವಾರ್ಯ. ಉಳಿಯುವುದೇನು ? ಜೀವರಹಿತ ಮೌನ, ಅಭಾವ. ಅದು ಅಭಾವವಾಗಿಹೋಯಿತೆಂಬ ನೋವೇನೂ ಇರುವುದಿಲ್ಲ, ಅಷ್ಟೆ.

* * *

(4) ಇದು ಊಗಲಾಡುವವನ ಕತೆಯಾದರೆ, ಇನ್ನು ತಂತಿ ನಡಿಗೆಯವನ ಸಮಾಚಾರವೇನು? ಅವನು ಮೂರು ವಿಧಗಳಲ್ಲಿ ಲಭ್ಯ. ಅಲ್ಲಿ ಬೌದ್ಧಿಕ ತೀಕ್ಷ್ಣತೆ ಇಲ್ಲ, ಆದರೆ ತಾಟಸ್ಥ್ಯವಿದೆ. ಅವನು ಕಾಣಿಸಿಕೊಳ್ಳುವ ಮೂರು ವಿಧಗಳೆಂದರೆ ವಿಜ್ಞಾನಿಯಾಗಿ, ಮಾನವ ಅನುಕಂಪ ಉಳ್ಳವನಾಗಿ ಮತ್ತು ನ್ಯಾಯದ ಸಾಕಾರ ಮೂರ್ತಿಯಾಗಿ. ಮೂರೂ ಬಹಳ ಪ್ರಬಲವಾದ ಪಾತ್ರಗಳೇ. ತಂತಿ ನಡಿಗೆಯವನು ವಿಜ್ಞಾನಿಯ ಸೋಗಿನಲ್ಲಿ ಹೇಳುತ್ತಾನೆ, ಒಂದನ್ನು ಬಿಟ್ಟು ಇನ್ನೊಂದು ಕಾರ್ಯಕ್ರಮವನ್ನು ಅಂಗೀಕರಿಸುವುದು ವೈಜ್ಞಾನಿಕ ದೃಷ್ಟಿಗೆ ಹೊರತಾದ ಪಕ್ಷಪಾತ ಎನಿಸಿಕೊಳ್ಳುತ್ತದೆ, ಎಂದು.

ಒಂದು ಪ್ರಶ್ನೆಗೆ ಎರಡು ಮಗ್ಗುಲುಗಳಿವೆಯೆಂದರೆ ಅವನ ಅರ್ಥ ಇದೇ. ಇದನ್ನು ಕೆಲವರು 'ಅಕೆಡೆಮಿಕ್' (ಪಾಂಡಿತ್ಯದ) ಶಿಸ್ತು ಎನ್ನುತ್ತಾರೆ. ವಿದ್ವತ್ ಪ್ರಪಂಚದಲ್ಲಿ ಎಷ್ಟೋ ವೇಳೆ ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳಲು ಅನುವಾಗುವ ರೀತಿಯಲ್ಲಿ ವಿದ್ವಾಂಸರು ಆದರ್ಶಗಳನ್ನು ರೂಪಿಸಿಕೊಳ್ಳುವುದುಂಟು. ಆದಾಗ್ಯೂ ಇಷ್ಟು ಹೇಳಬಹುದು: ಕೆಲವು ವಿದ್ವಾಂಸರ ಪ್ರಕಾರ ಒಂದು ತೀರ್ಮಾನವು ಕ್ರಿಯೆಗೆ ಹಾದಿಮಾಡಿಕೊಟ್ಟರೆ ತಮ್ಮ ಮುಕ್ತ ಚಿಂತನೆಯ ತೀರ್ಮಾನದಲ್ಲಿ ಏನೋ ಐಬುಂಟಾಗಿದೆ ಎಂದರ್ಥ. ಸಮಾಜ ವಿಜ್ಞಾನಿಗಳಲ್ಲಿ ಇಂತಹ ಅಭಿಪ್ರಾಯ ಕಾಣಬಹುದು. ತಮ್ಮ ಅಧ್ಯಯನವು ವಿವರಣಾ ಸ್ವರೂಪದ್ದೇ ವಿನಾ ನಿಯಾಮಕವಲ್ಲವೆಂದವರು ಹೇಳುತ್ತಾರೆ. ಇಂತಹ ಪದಗುಚ್ಛದ ಆಶಯ ಸ್ಪಷ್ಟ : ಸಮಾಜವು ಕಂಡಂತೆ ಅದನ್ನವರು ವಿವರಿಸುತ್ತಾರೆ, ಅದರ ಉತ್ತಮಿಕೆಗೆ ಸಲಹೆ ಕೊಡುವುದಿಲ್ಲ, ಎಂದು. ಒಂದು ನಿರ್ದಿಷ್ಟ ಸಾಮಾಜಿಕ ಸನ್ನಿವೇಶವು ಒಳ್ಳೆಯದೋ ಕೆಟ್ಟದ್ದೋ ಎಂಬುದನ್ನು ಸಹ ಅವರು ಹೇಳಲಿಚ್ಛಿಸುವುದಿಲ್ಲ. ಏಕೆಂದರೆ ಅದು ಪಕ್ಷ ವಹಿಸಿದಂತಾಗುತ್ತದೆ !

ನಿಜಕ್ಕೂ 'ವೈಜ್ಞಾನಿಕ' ಪಕ್ಷಪಾತರಾಹಿತ್ಯವೆಂದರೇನು ? ಯಾವುದನ್ನೂ ತಿರುಚದೆ, ಪೂರ್ವಗ್ರಹವಿಲ್ಲದೆ, ವಸ್ತುಗಳು ಹೀಗಿವೆಯೆಂಬುದರ ಅರಿವು ಪಡೆಯುವುದು. ಸಾಮಾಜಿಕ ಕ್ರಿಯೆಯೊಂದು ಪಕ್ಷಪಾತರಾಹಿತ್ಯವನ್ನು ಹಾಳುಗೆಡಹಬೇಕಾದರೆ ಅದು ವಸ್ತುಗಳ ವಾಸ್ತವ ಜ್ಞಾನವನ್ನು ಭ್ರಷ್ಟಗೊಳಿಸಬೇಕು ಇಲ್ಲವೆ ತಡೆಗಟ್ಟಬೇಕು. ಅಂದರೆ, ವೈಜ್ಞಾನಿಕ ಪಕ್ಷಪಾತರಾಹಿತ್ಯವು ರಾಜಕೀಯ ಅಲಿಪ್ತತೆಯಾಗಿರಬೇಕೆಂದರ್ಥ. ವಸ್ತುಸ್ಥಿತಿ ಹಾಗಿಲ್ಲ. ನೇತ್ಯಾತ್ಮಕವಾಗಿ ಹೇಳುವುದಾದರೆ, ವೈಜ್ಞಾನಿಕ ಪಕ್ಷಪಾತರಾಹಿತ್ಯವೆಂದರೆ ಮೊದಲಿಗೇ ನಿಮಗೆ ಬೇಕಾದ ತೀರ್ಮಾನಗಳೊಂದಿಗೆ ಆರಂಭಿಸದಿರುವುದು ಎಂದರ್ಥ. ಹಾಗೆ ಆರಂಭಿಸಿ ಅದಕ್ಕೆ ಕಾರಣಗಳನ್ನು ಹೆಕ್ಕಿ ತೆಗೆಯುವುದು ಪಕ್ಷಪಾತ. ನಮಗೆ ಏನೋ ರುಚಿಸುತ್ತದೆ, ಆದ್ದರಿಂದ ಅದನ್ನು ಒಳಗೊಳ್ಳುವ ಹೇಳಿಕೆಯು ಸತ್ಯ, ಎಂಬುದು ಪಕ್ಷಪಾತ. ಅದನ್ನು ಸಂಶಯದಿಂದ ನೋಡಿದರೆ ಜೀವನವೇ ಅರ್ಥರಹಿತವಾಗಿ ಬಿಡುತ್ತದಲ್ಲಾ ಎಂದು ಕೊರಗುವುದು ಪಕ್ಷಪಾತ. ಅಂದರೆ, ಒಂದು ಪಕ್ಷದ ಅಥವಾ ಗುಂಪಿನ ಕಾರ್ಯಕ್ರಮವನ್ನು ಸಮರ್ಥಿಸಲೆಂದು ವಾಸ್ತವಾಂಶಗಳನ್ನು ತಿರುಚುವುದು ಅಥವಾ ಗಮನಿಸದಿರುವುದು ಕೂಡದು ಎಂದರ್ಥ. ಇಂತಹ ಪಕ್ಷಪಾತರಾಹಿತ್ಯದ ಕಲ್ಪನೆಯು ಸಾಮಾಜಿಕ ಪ್ರಶ್ನೆಗಳ ಬಗ್ಗೆ ನಾವು ಅಲಿಪ್ತರಾಗಿರಬೇಕೆಂದು ವಿಧಿಸುತ್ತದೆಯೆ ? ಒಂದು ಕಾರ್ಯಕ್ರಮದ ಪರವಾಗಿದ್ದೇವೆನ್ನಿ, ಆಗ ನಾವು ಯಾವುದನ್ನು ವಿರೋಧಿಸಿದ್ದೇವೋ ಅದರ ಸಾರವನ್ನು ಸರಿಯಾಗಿ ಗ್ರಹಿಸಿಲ್ಲವೆಂದು ಅರ್ಥವೆ ? ಹಾಗೇನೂ ಅಲ್ಲ. ಬೇರೆ ಕಾರ್ಯಕ್ರಮಗಳ ಬಗೆಗಿನ ಅರಿವು ನಾವು ಒಪ್ಪುವ ಕಾರ್ಯಕ್ರಮದ ಆಯ್ಕೆಗೆ ಸಹಾಯ ಮಾಡಿದೆ. ಎರಡನೆಯದಾಗಿ, ಕ್ರಿಯೆಯ ಸಂದರ್ಭದಲ್ಲಿ ಅದು ಪ್ರಸ್ತುತ. ಆ ಅರಿವಿಲ್ಲದೆ ನಾವು ಯಾವ ಗುಂಪುಗಳ ವಿರುದ್ಧ ಹೋರಾಡುತ್ತೇವೆ ಮತ್ತು ಹೋರಾಟದಲ್ಲಿ ಯಾರೊಡನೆ ಮೈತ್ರಿ ಬೆಳೆಸುತ್ತೇವೆ ಎಂಬುದು ತಿಳಿಯುವುದಿಲ್ಲ. ಕ್ರಿಯೆ ಆರಂಭವಾದ ನಂತರ ಈ ಅರಿವು ಇನ್ನೂ ಹೆಚ್ಚಿನ ಮಹತ್ವ ಪಡೆಯುತ್ತದೆ, ಅದರ ನಿಷ್ಕೃಷ್ಟತೆಯು ಇನ್ನೂ ಹೆಚ್ಚಿನ ಮೌಲ್ಯ ಪಡೆಯುತ್ತದೆ. ಆದ್ದರಿಂದ ತೀರ್ಮಾನವು ಅರಿವನ್ನು ಕಶ್ಮಲಗೊಳಿಸುತ್ತದೆಂಬುದು ನಿಜವಲ್ಲ; ಬದಲಾಗಿ, ಕ್ರಿಯೆಯು ನಮ್ಮ ತಿಳುವಳಿಕೆಯನ್ನು ವಿಶದಗೊಳಿಸುತ್ತದೆ, ಹಸನುಗೊಳಿಸುತ್ತದೆ. ನಿಷ್ಕ್ರಿಯೆಯು ಅದನ್ನು ಮುಗ್ಗುಲುಗೊಳಿಸುತ್ತದೆ.

ಹಿಂದಿನ ಉದಾಹರಣೆಗೆ ಮರಳೋಣ: ಫ್ಯಾಸಿಸಂ ಜನಾಂಗೀಯ ಮತ್ತು ರಾಷ್ಟ್ರೀಯ ಅಲ್ಪಸಂಖ್ಯಾತರನ್ನು ಹಿಂಸಿಸುತ್ತದೆಂಬುದು ನಿಜ. ಚುನಾಯಿತ ಸರ್ಕಾರ ಮತ್ತು ನಾಗರಿಕ ಹಕ್ಕುಗಳನ್ನು ಅದು ಮೆಟ್ಟಿ ನಿಲ್ಲುತ್ತದೆ, ದುಡಿಯುವವರ ಸ್ವತಂತ್ರ ಸಂಘಗಳನ್ನು ರದ್ದುಗೊಳಿಸುತ್ತದೆ ಮತ್ತು ದುಡಿಯುವವರನ್ನು ಅಗಾಧ ಶೋಷಣೆಗೆ ಈಡು ಮಾಡುತ್ತದೆ. ಅದಕ್ಕಿರುವ ವಿದೇಶಾಂಗ ನೀತಿ ಒಂದೇ ಒಂದು: ವಿಶ್ವದ ಆಕ್ರಮಣ. ಇದನ್ನೆಲ್ಲಾ ಹೇಗೆ ತೀರ್ಮಾನಿಸುತ್ತೀರಿ? ಬೇರೆಲ್ಲವನ್ನೂ ತೀರ್ಮಾನಿಸುವಂತೆಯೇ: ಅಂದರೆ, ವಾಸ್ತವ ಅಂಶಗಳ ಅವಲೋಕನದಿಂದ. ಆ ತೀರ್ಮಾನಗಳಿಗೆ ಬರಲು ಕಾರಣಗಳನ್ನು ನಾವು ಎಲ್ಲಿಂದಲೋ ಕಂಡುಹಿಡಿದಿಲ್ಲ, ನಮಗೆ ಆಪ್ಯಾಯಮಾನವೆಂದು ನಂಬಿಕೆಗಳನ್ನು ಬೆಳೆಸಿಕೊಂಡಿಲ್ಲ, ಅಥವಾ ವಾಸ್ತವ ಸಂಗತಿಗಳನ್ನು ಪಕ್ಷಪಾತದಿಂದ ತಿರುಚಿಲ್ಲ. ಹೇಳಿರುವುದೆಲ್ಲಾ ವೈಜ್ಞಾನಿಕ ಪಕ್ಷಪಾತರಾಹಿತ್ಯದ ನೆಲೆಯಲ್ಲೇ.

ಈಗ ನೋಡಿ : ನಾನು ಫ್ಯಾಸಿಸಂ ವಿರುದ್ಧ ಹೋರಾಡಿದರೆ ಅದು ವೈಜ್ಞಾನಿಕ ಪಕ್ಷಪಾತರಾಹಿತ್ಯಕ್ಕೆ ಅಪಚಾರವೆಸಗಿದಂತಾಗುತ್ತದೆಯೆ ? ಫ್ಯಾಸಿಸಂಅನ್ನು ಒಂದು ಕೆಡುಕೆಂದು ದೂಷಿಸಿ ಅದನ್ನು ಉತ್ಪಾಟಿಸಬೇಕೆಂದು ಹೇಳಿದರೆ ಫ್ಯಾಸಿಸಂನ ಬಗೆಗಿನ ವಾಸ್ತವಾಂಶಗಳನ್ನು ನಾನು ಬದಲಾಯಿಸಿದೆನೆ, ವಿರೂಪಗೊಳಿಸಿದೆನೆ, ಮಾರ್ಪಡಿಸಿದೆನೆ? ಸರ್ವಥಾ ಇಲ್ಲ; ಬದಲಾಗಿ, ಫ್ಯಾಸಿಸಂ ಅದರ ಸ್ವರೂಪದಲ್ಲೇ ಕೆಡುಕನ್ನು ತುಂಬಿಕೊಂಡಿದೆಯಾದ್ದರಿಂದ ಅದರ ವಿರುದ್ಧ ಸೆಣಸಲಿಚ್ಛಿಸುತ್ತೇನೆ. ನನ್ನ ನಿಲುವಿಗೆ ಆ ವಾಸ್ತವಾಂಶಗಳೇ ಕಾರಣ. ನನ್ನ ತೀರ್ಮಾನವು ಅವನ್ನು ತಿರುಚುವುದಿಲ್ಲ, ಏಕೆಂದರೆ ತೀರ್ಮಾನ ಹೊಮ್ಮಿರುವುದೇ ಅವುಗಳಿಂದ. ವಿಜ್ಞಾನ ಮತ್ತು ಸಂಸ್ಕೃತಿಯ ಎಲ್ಲ ತೀವ್ರ ಶತ್ರುಗಳ ವಿರುದ್ಧ ಹೋರಾಡದಿದ್ದರೆ ನಾನು ಹೇಗೆ ತಾನೆ ವಿಜ್ಞಾನಿ ಎನಿಸಿಕೊಳ್ಳಬಲ್ಲೆ ?

ಈ ಸಂಬಂಧದಲ್ಲಿ ಇನ್ನೊಂದು ವಿಚಾರವನ್ನು ವಿಶ್ಲೇಷಿಸಿಕೊಳ್ಳಬೇಕು; ಯಾವುದಾದರೊಂದು ಪಕ್ಷವನ್ನು ವಹಿಸುವುದು ವಿಜ್ಞಾನಕ್ಕೆ ನೈತಿಕ ಆಯಾಮವೊಂದನ್ನು ಒದಗಿಸುತ್ತದೆಯೆಂಬ ವಿಚಾರ. ಇದನ್ನು ತೀವ್ರವಾಗಿ ಅನುಷ್ಠಾನಕ್ಕೆ ತಂದರೆ ವಿಜ್ಞಾನಿಯೊಬ್ಬ ಯಾವ ನೈತಿಕ ಅಭಿಪ್ರಾಯವನ್ನೂ ಹೊಂದುವಂತಿಲ್ಲವೆಂದಾಗುತ್ತದೆ; ಕಡೇಪಕ್ಷ ಅವನ ವೈಜ್ಞಾನಿಕ ಕ್ಷೇತ್ರದ ವಿಚಾರಗಳ ಬಗ್ಗೆ.

ಈ ನಂಬಿಕೆಗೆ ಚಾರಿತ್ರಿಕ ಕಾರಣವೊಂದಿದೆ. ಮಧ್ಯಕಾಲೀನ ಮಂಜಿನಿಂದ ಆಧುನಿಕ ವಿಜ್ಞಾನವು ಹೊರಬಂದಾಗ ಅದಕ್ಕಿದ್ದ ಒಂದು ಒತ್ತಾಯವೆಂದರೆ ಪ್ರಾಕೃತಿಕ ಸಂಗತಿಗಳನ್ನು ಸಾಧಿಸುವಾಗ ನೈತಿಕ ಕಾರಣಗಳನ್ನು ಮುಂದೊಡ್ಡದಿರುವುದು. ಉದಾಹರಣೆಗೆ, ಅರಿಸ್ಟಾಟಲ್ ಚಂದ್ರ ಗುಂಡಾಗಿದೆಯೆಂದು "ಸಾಧಿಸಿದ್ದ." ಹೇಗೆ? ಗುಂಡಾಗಿರುವುದು ಅತ್ಯಂತ ಒಳ್ಳೆಯ ಆಕಾರ ಮತ್ತು ಭಗವಂತ ಅಂಥದನ್ನೇ ಸೃಷ್ಟಿಸುತ್ತಾನೆ ಎಂಬ ಕಾರಣ ಕೊಟ್ಟು. ತರ್ಕದ ತೀರ್ಮಾನ (ಗುಂಡಾಗಿರುವುದು) ಸರಿ, ಆದರೆ ಅದಕ್ಕೆ ಕೊಡಲಾದ ಕಾರಣ ಅಸಂಬದ್ಧ. ಈ ರೀತಿಯ ಸಾಧಿಸುವಿಕೆಯ ವಿರುದ್ಧದ ದೀರ್ಘ ಹೋರಾಟದಲ್ಲಿ ವಿಜ್ಞಾನಿಗಳು ಕಡೆಗೆ ಬೇರೊಂದು ಧ್ರುವಕ್ಕೆ ಅಂಟಿಕೊಂಡುಬಿಟ್ಟರು. ವಾಸ್ತವ ಸಂಗತಿ ಮತ್ತು ಮೌಲ್ಯ ಪರಸ್ಪರ ಸಂಬಂಧವಿರುವಂತಹುವಲ್ಲ, ಪ್ರಕೃತಿ ವಿಜ್ಞಾನಕ್ಕೂ ನೈತಿಕತೆಗೂ ಸಂಬಂಧವಿಲ್ಲ, ಎಂದು ನಂಬುವಂತಾಗಿಬಿಟ್ಟರು. ಎರಡೂ ಪರಸ್ಪರ ವಿರೋಧಿ ಅಂಶಗಳು, ಒಂದು ಇನ್ನೊಂದನ್ನು ಕಂಡರೆ ಸೆಟೆಯುತ್ತದೆ, ಎಂದು ವಿಜ್ಞಾನಿಗಳು

ಭಾವಿಸಿದಂತಿದೆ. ಇದೆಷ್ಟುಮಟ್ಟಿಗೆ ಸಮಂಜಸ? ವಾಸ್ತವ ಸಂಗತಿಗಳನ್ನು ನೈತಿಕ ತರ್ಕದಿಂದ ಸಾಧಿಸಲಾಗುವುದಿಲ್ಲ, ನಿಜ. ಹಾಗೆಂದಮಾತ್ರಕ್ಕೆ, ವಾಸ್ತವವನ್ನು ವೈಜ್ಞಾನಿಕವಾಗಿ ಸ್ಥಾಪಿಸಿದ ನಂತರವೂ ಅದರ ಬಗ್ಗೆ ನೈತಿಕ ತರ್ಕ ಕೂಡದೆಂದರ್ಥವೆ? ಹಾಗಲ್ಲ. ವಾಸ್ತವವೇನೆಂದು ತಿಳಿಯಲು ನೈತಿಕ ತರ್ಕ ಅಸಾಧು, ಆದರೆ ವಾಸ್ತವದ ಮಾಪನ ಮಾಡಲು ನೈತಿಕತೆಯು ಸಾಧನವಾಗಬಹುದೆಂಬುದು ವರ್ಜ್ಯವಲ್ಲ. ಸುತ್ತಣ ಪ್ರಪಂಚ ಹೀಗೇಕಿದೆಯೆಂಬುದಕ್ಕೆ ನೈತಿಕ ಕಾರಣ ಬೇಕಿಲ್ಲ; ಆದರೆ ಆಯ್ಕೆಗಳನ್ನು ಮಾಡಿಕೊಳ್ಳುವಾಗ ನೈತಿಕ ಕಾರಣಗಳನ್ನು ಅವಲಂಬಿಸುವುದು ದೋಷವಲ್ಲ. ಕ್ರಿಯೆ ಯಾವ ಸಂದರ್ಭದಲ್ಲಿ ಉಂಟಾಗುತ್ತದೆ ಮತ್ತು ಅದಕ್ಕೆ ಸಾಧನ ಯಾವುದು ಎಂಬುದನ್ನು ವಿಜ್ಞಾನ ನಿರ್ಧರಿಸುತ್ತದೆ, ಆದರೆ ಹಲವು ಕಾರ್ಯಕ್ರಮಗಳ ಪೈಕಿ ಸರಿ ಯಾವುದು, ಯಾವುದನ್ನು ಅನುಸರಿಸಬೇಕು, ಎಂಬುದನ್ನು ನೀತಿಶಾಸ್ತ್ರವು ತೀರ್ಮಾನಿಸುತ್ತದೆ. ನೈತಿಕತೆಯನ್ನು ಸಂಪೂರ್ಣವಾಗಿ ಬಹಿಷ್ಕರಿಸುವ ವಿಜ್ಞಾನಿಯು ತಕ್ಕಮಟ್ಟಿಗೆ ವಿಜ್ಞಾನಿಯಾಗಿ ಉಳಿಯಬಹುದು, ಆದರೆ ಮಾನವನಾಗಿ ಅವನು ಕುಬ್ಜನಾಗುತ್ತಾನೆ. ಅವನಿಗೆ ಜ್ಞಾನವಿದೆ, ಆದರೆ ಅವನು ಕ್ರಿಯಾಶೀಲನಲ್ಲ. ಅವನಿಗೆ ಅಗಾಧ ಬುದ್ಧಿ ಇದೆ, ಆದರೆ ಅದೆಲ್ಲಾ ದಂಡಕ್ಕೆ !

ಕಡೆಯದಾಗಿ, ಮಹತ್ವದ ಸಂಗತಿಗಳ ಬಗ್ಗೆ ತಾಟಸ್ಥ್ಯವೆಂಬುದು ಕೇವಲ ಭ್ರಮೆ. ಹೋರಾಟದ ಕಣಕ್ಕಿಳಿದ ನಂತರ ಯಾವುದನ್ನು ಮಾಡಿದರೂ ಮಾಡದಿದ್ದರೂ ಯಾವುದಾದರೊಂದು ಪಕ್ಷಕ್ಕೆ ಸಹಾಯಕವಾಗುತ್ತದೆ. ಒಂದು ಪ್ರಶ್ನೆಗೆ ಎರಡು ಮಗ್ಗುಲುಗಳಿದ್ದಾಗಲೂ ಇದು ಅನ್ವಯವಾಗುತ್ತದೆ. ಇಂದಿನ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ಪರವಾಗಿ ಹೋರಾಟಕ್ಕಿಳಿಯದ, ಆತ್ಮವಿಶ್ವಾಸವಿಲ್ಲದ, ಮಹನೀಯರು ಫ್ಯಾಸಿಸಂಗೆ ಸಹಾಯ ನೀಡಿದ್ದಾರೆಂದೇ ನಿರ್ಣಯ. ಅವರ "ವೈಜ್ಞಾನಿಕ" ನಿಷ್ಕ್ರಿಯೆಯನ್ನು ಹಿಟ್ಲರ್ ಅವಲಂಬಿಸಿದ್ದ ಮತ್ತು ಅದರಲ್ಲಿ ಯಶಸ್ಸು ಕಂಡ. ಹೀಗಾಗಿ ಆರಂಭದಲ್ಲಿ ಮಂಡಿಸಲಾದ ವಾದವನ್ನು ತಳ್ಳಿಹಾಕುವ ತೀರ್ಮಾನಕ್ಕೆ ನಾವು ಬರುತ್ತೇವೆ. ಒಂದು ಪ್ರಶ್ನೆಗೆ ಎರಡು, ಅಥವಾ ಎರಡೇ, ಮಗ್ಗುಲುಗಳಿರುವಾಗ ನಾವು ಯಾವುದಾದರೊಂದನ್ನು ಆಯ್ಕೆ ಮಾಡಿಕೊಳ್ಳುವುದು ಅನಿವಾರ್ಯ. ನಿಸ್ಸಂಗಿಯಾಗಿ ದೂರ ಉಳಿಯುವುದು ಸೈದ್ಧಾಂತಿಕ ಪುಷ್ಟಿ ಪಡೆದರೂ ವಾಸ್ತವದಲ್ಲಿ ಅದು ನಿರಾಕರಿಸಲ್ಪಡುತ್ತದೆ.

* * *

(5) ತಂತಿ ನಡಿಗೆಯವನು ಆತ್ಮಪರೀಕ್ಷೆ ಮಾಡಿಕೊಂಡಾಗ ತಾನೊಬ್ಬ ಸಜ್ಜನನೆಂದು ತಿಳಿಯುತ್ತಾನೆ; ಬಾಹ್ಯ ಪ್ರಪಂಚದ ಗೋಜಲು ಸಂದರ್ಭಗಳನ್ನು ಬಿಟ್ಟು ತನ್ನ ಪ್ರೀತಿಯ ಆಂತರಿಕ ಸಂವೇದನೆಗಳನ್ನು ನೋಡಿಕೊಳ್ಳಬೇಕು, ಅಷ್ಟೆ. ಸಂಘರ್ಷದಲ್ಲಿ ತೊಡಗಿರುವ ಇಬ್ಬರಿಗೂ ಅವನ ಸಾಂತ್ವನ ಉಂಟು. ಅವರಂತೆ ತಾನೂ ಒಬ್ಬ ಮನುಷ್ಯ; ಅವರು ಅದೇಕೋ ವಿವಾದವೆಬ್ಬಿಸುತ್ತಿದ್ದಾರೆ, ಆದರೆ ತಾನು ಅದನ್ನು ಮೀರಿ ಬೆಳೆದಿರುವುದಾಗಿ ಅವನಿಗೆ ಸಮಾಧಾನ. ಎರಡು ಕಡೆಯೂ ಮಾನವರೇ ಇರುವುದರಿಂದ ಸಂಗತಿಯು ಅಷ್ಟು ಗಂಭೀರವಲ್ಲವೆಂದು ಅವನ ಅನಿಸಿಕೆ. ಇದು ಸಮಚಿತ್ತ ತರುವ ಅಂಶ, ಆದರೆ ಅವನಲ್ಲಿ ಎಲ್ಲೋ ಅಹಂ ಅಡಗಿದೆ ಮತ್ತು ಅದಕ್ಕೆ ತಕ್ಕುದಾದ ಭ್ರಮೆಯೂ ಕೂಡಿಕೊಂಡಿದೆ. ಸಾಮಾನ್ಯವಾಗಿ ನೋಡಿದರೆ, ತಿಕ್ಕಾಟದಲ್ಲಿ ಮಗ್ನರಾಗಿರುವ ವಿವಿಧ ಗುಂಪುಗಳಿಗೆ ಸಾಂತ್ವನ ತೋರುವುದು ಮಾನವೀಯ ಲಕ್ಷಣ; ಆದರೆ ಅವರೂ

ಮಾನವೀಯವಾಗಿದ್ದರೆ ಮಾತ್ರ. ಒಂದು ಗುಂಪು ಮನುಕುಲಕ್ಕೆ ಹಾನಿಕರವಾಗುವಂತಹ ಕೃತ್ಯಗಳಲ್ಲಿ ನಿರತವಾಗಿದ್ದರೆ ಅದಕ್ಕೆ ಸಾಂತ್ವನ ತೋರುವುದು ಒಂದು ವಿಲಕ್ಷಣವಾದ ಮಾನವೀಯತೆಯೇ ಸರಿ. "ಪಾಪವನ್ನು ದ್ವೇಷಿಸು, ಪಾಪಿಯನ್ನು ಪ್ರೀತಿಸು" ಎಂಬ ನಾಣ್ಣುಡಿ ಇದೆ. ಈ ಸೂತ್ರವನ್ನು ಕಾರ್ಯಗತಗೊಳಿಸುವುದನ್ನು ಅದಕ್ಕೆ ಸಾಮರ್ಥ್ಯವಿರುವ ಜಟ್ಟಿಗಳಿಗೆ ಬಿಟ್ಟುಬಿಡುತ್ತೇನೆ. "ಎಲ್ಲವನ್ನೂ ಅರ್ಥಮಾಡಿಕೊಂಡರೆ ಎಲ್ಲವನ್ನೂ ಕ್ಷಮಿಸಿದಂತೆ" ಎಂಬ ಪ್ರಾಚೀನ ಹಳಸಲು ಮಾತನ್ನು ಅದರ ಸೀಮಿತ ಕಕ್ಷೆಯಲ್ಲಿ ಬಂಧಿಸೋಣ. ಉದಾಹರಣೆಗೆ, ಮತ್ತೆ ಫ್ಯಾಸಿಸಂ ನೋಡೋಣ. ಅದರ ಸಾಮಾಜಿಕ ಮತ್ತು ಮಾನಸಿಕ ಉಗಮವನ್ನು ತಿಳಿಯುವುದು ಸುಲಭ. ಅದಕ್ಕೆ ನಮ್ಮ ಸಾಂತ್ವನವಾಗಲಿ ಕ್ಷಮಾದಾನದ ಕಣ್ಣೀರಾಗಲಿ ಬೇಕಿಲ್ಲ. ತಮ್ಮ ಸಾಮಾಜಿಕ ಕೃತ್ಯಗಳಲ್ಲಿ ಫ್ಯಾಸಿಸ್ಟರು ತಮ್ಮೆಲ್ಲ ಮಾನವೀಯ ಭಾವನೆಗಳನ್ನು, ದಯೆ ಮತ್ತು ವಾತ್ಸಲ್ಯವನ್ನು, ಎಚ್ಚರಿಕೆಯಿಂದ ಮುದುಟಿಟ್ಟಿದ್ದಾರೆ, ಸಾಧ್ಯವಾದಾಗ ನಿರ್ಮೂಲಗೊಳಿಸಿದ್ದಾರೆ. ಅಂತಹ ಸಹಜ ಭಾವನೆಗಳ ಜಾಗದಲ್ಲಿ ನುಂಗಿಹಾಕುವಂತಹ ದ್ವೇಷ, ಅಸಹನೆ ಇದೆ. ಇತರ ಮಾನವರು ಆಶಿಸುವ, ಗೌರವಿಸುವ, ಎಲ್ಲವನ್ನೂ ನಾಶಮಾಡಲು ಅವರು ತಹತಹಿಸುತ್ತಾರೆ. ಜರ್ಮನಿಯ ಮೂರನೆಯ ಪ್ರಭುತ್ವ (ರಾಯ್‌ಶ್) ಅಲಂಕರಿಸಿ ಕೊಂಡಿದ್ದದು ಹನನಮಾಡಲ್ಪಟ್ಟ ಸಂಸ್ಕೃತಿಗಳ ಪದಕಗಳಿಂದ. ಅದರಲ್ಲಿ ಜರ್ಮನಿಯ ಸಂಸ್ಕೃತಿಯೂ ಸೇರಿತ್ತು; ಮನುಷ್ಯಮಾಂಸ ತಿನ್ನುವವನು ತನ್ನ ಗುಡಿಸಲನ್ನು ತಲೆಬರುಡೆ ಗಳಿಂದ ಅಲಂಕರಿಸಿಕೊಂಡಂತಿತ್ತು ಈ ಪ್ರಭುತ್ವದ ಅಲಂಕಾರ. ಮಧ್ಯಯುಗದ ಪಾತಕಗಳ ಪ್ರದರ್ಶನ ಮತ್ತೆ ಜರುಗಿತು. ಅದೇ ಕೊಡಲಿ, ಅದೇ ತಲೆ ಕಡಿಯುವ ಕ್ರೂರಿ. ಆದರೆ ಆಗ ವ್ಯಕ್ತಿಗಳ ಕೊಲೆ, ಈಗ ಸಾಮೂಹಿಕ ಹತ್ಯೆಗೆ ಬೇಕಾದ ಹೊಲಸು ನೈಪುಣ್ಯ. ಇಂತಹ ಘೋರ ಕೃತ್ಯವನ್ನು ಸಾಂತ್ವನದ ಕಣ್ಣಿಂದ ನೋಡುವ ಸಾಮರ್ಥ್ಯ ಉಳ್ಳವರು ಅದೆಂತಹ ಮಾನವತೆಯನ್ನು ಅಭಿವ್ಯಕ್ತಿಸುತ್ತಾರೋ ಕಾಣೆ ! ಅವರ ಸಾಂತ್ವನವನ್ನು ಬಲವಂತದಿಂದ ಪ್ರತಿರೋಧಿಸಿದಷ್ಟೂ ಮನುಕುಲಕ್ಕೆ ಅನುಕೂಲಕರ.

ಆದ್ದರಿಂದ ನನ್ನ ತೀರ್ಮಾನ ಇದು: ನಾವು ಯಾವುದರ ಬಗ್ಗೆ ತೀರ್ಮಾನ ಕೈಗೊಳ್ಳುತ್ತೇವೋ ಅದನ್ನು ಮೊದಲು ಅರ್ಥಮಾಡಿಕೊಳ್ಳಬೇಕಾದ್ದು ನಿಸ್ಸಂಶಯವಾಗಿ ಅಗತ್ಯ; ಆದರೆ ನಾವು ಅರ್ಥಮಾಡಿಕೊಂಡದ್ದನ್ನೆಲ್ಲಾ ನಾವು ಒಪ್ಪಬೇಕಾಗಿಲ್ಲ. ಘೋರ ಕೆಡುಕಿನ ಬಗೆಗಿನ ಅರಿವು ಅದನ್ನು ಅಸಹ್ಯವೆಂದು ಪರಿಗಣಿಸಿ ಅದರ ವಿರುದ್ಧ ಹೋರಾಡಲು ನಮ್ಮನ್ನು ಪ್ರೇರೇಪಿಸದಿದ್ದರೆ ನಮ್ಮ ಮಾನವ ಸಹಜ ಧೀಮಂತ ಗುಣವೊಂದನ್ನು ಕಳೆದುಕೊಂಡಿದ್ದೇವೆ ಎಂದರ್ಥ. ನಮ್ಮನ್ನಾಕ್ರಮಿಸುವ ತಪ್ಪುಗಳನ್ನು ಸೋಲಿಸಿ ವಿಜಯಿಗಳಾಗುವ ಗುಣ ಮಾನವನಿಗೆ ಸಹಜವಾಗಬೇಕು. ಅಳೆಯಲಾಗದಷ್ಟು ಸದ್ಭಾವನೆಯ ಗೋಂದಿನಲ್ಲಿ ನಮ್ಮ ಮಹದಾಶಯಗಳೆಲ್ಲಾ ಹೂತುಹೋಗುತ್ತಿರಲಿ, ನಾವು ಮಾತ್ರ ಸಾಂತ್ವನದ ನಿಷ್ಕ್ರಿಯೆಯಲ್ಲಿ ಮಣ್ಣುಮುದ್ದೆಯಂತೆ ತೆಪ್ಪಗೆ ಕೂತಿರೋಣ ಎನ್ನುವುದು ಯಾವ ನೈತಿಕ ತತ್ವವೋ ನನಗೆ ತಿಳಿಯದು. ಅದು ನೈತಿಕತೆಯಲ್ಲ. ಮನುಕುಲವನ್ನು ಪ್ರೀತಿಸುವುದು ಮಾನವೀಯತೆ. ಮನುಕುಲದ ಶತ್ರುಗಳನ್ನು ನಾಶಮಾಡುವುದು ಮನುಕುಲವನ್ನು ಪ್ರೀತಿಸಿದಂತೆ ಎಂದು ನಾನೆನ್ನುತ್ತೇನೆ.

* * *

(6) ತಂತಿ ನಡಿಗೆಯವನ ಕಡೆಯ ಅವತಾರ ನ್ಯಾಯಪರತೆ. ಎಲ್ಲ ಪ್ರಶ್ನೆಗಳಿಗೂ ಎರಡು ಮಗ್ಗುಲುಗಳಿವೆಯೆಂದಾಗ ಅವನ ಅರ್ಥ ವಿವಾದದಲ್ಲಿ ಭಾಗಿಗಳಾಗಿರುವವರಿಗೆಲ್ಲಾ ತಮ್ಮ ಅಭಿಪ್ರಾಯ ಹೇಳುವ ಅವಕಾಶವಿರಬೇಕು, ಎಂದು. ಇದು ನ್ಯಾಯಸಮ್ಮತವಾದ್ದು, ಉದಾರತೆಯಿಂದ ಕೂಡಿದ್ದು. ಸಾಮಾಜಿಕ ವಾಸ್ತವದ ಸಂಬಂಧದಲ್ಲಿ ಇದನ್ನು ಮಾನ್ಯ ಮಾಡುತ್ತಾರೆಯೇ ಎಂಬುದು ಬೇರೆ ವಿಷಯ. ವಾಸ್ತವ ಜಗತ್ತಿಗೆ ಬಂದಾಗ ಅದರ ನೈತಿಕ ಚಹರೆಯನ್ನು ಬದಲಾಯಿಸಿಬಿಡುವ ವಕ್ರ ಅಭ್ಯಾಸ ಉಂಟು; ಅಷ್ಟೇ ಏಕೆ, ಅದನ್ನು ನಿರಾಕರಿಸುವುದೂ ಇದೆ. ಎಲ್ಲರಿಗೂ ಅಭಿಪ್ರಾಯ ಮಂಡಿಸುವ ಅವಕಾಶವಿರುವುದು ಸತ್ಯವನ್ನು ಮುಚ್ಚಿಹಾಕದಿರಲು ಮತ್ತು ನಿಜವಾದ ಹೇಳಿಕೆಯನ್ನು ತಳ್ಳಿಹಾಕದಿರಲು. ವಿವಾದದಲ್ಲಿ ಪಾಲ್ಗೊಂಡಿರುವವರು, ತಮ್ಮ ವಾದದಲ್ಲಿ ತಪ್ಪಿದ್ದರೂ, ಪ್ರಾಮಾಣಿಕವಾಗಿ ಅವರು ಸರಿ ಎಂದುಕೊಂಡಿದ್ದುದನ್ನು ಹೇಳಲು ಅವಕಾಶ ನಿರೀಕ್ಷಿಸುವುದು ಸಹಜ. ಅಂದರೆ, ಯಾರನ್ನೋ ಮೋಸಗೊಳಿಸಲು ಅವರು ವಾದವೊಂದನ್ನು ಸೃಷ್ಟಿಸಿಕೊಂಡಿರುವುದಿಲ್ಲ; ಯಾರ ವಿರುದ್ಧವೋ ಹಗೆತನದಿಂದ ಪ್ರಚಾರ ಮಾಡಬೇಕೆಂಬುದೂ ಅವರ ಉದ್ದೇಶವಲ್ಲ. ಒಂದು ತಪ್ಪು ಅಭಿಪ್ರಾಯವನ್ನು ಪ್ರಾಮಾಣಿಕವಾಗಿ ಮಂಡಿಸುವುದೇ ಬೇರೆ, ಬೇಕೆಂದೇ ಸುಳ್ಳುಗಳನ್ನು ಹರಡಲು ಪ್ರತಿಯೊಂದು ಹೆಜ್ಜೆಯಿಡುವಾಗಲೂ ಹವಣಿಸುವುದೇ ಬೇರೆ. ಸುಳ್ಳು ಪ್ರಚಾರ ಮಾಡುವವನು ತನ್ನ ಪ್ರತಿಯೊಂದು ಸಾರ್ವಜನಿಕ ಮಾತಿನಲ್ಲೂ ಅದನ್ನು ತುಂಬುತ್ತಾನೆ. ನಿಜದ ಪರವಾಗಿರುವವರಿಗೆ ಅಭಿವ್ಯಕ್ತಿಯ ಅವಕಾಶ ಬೇಕು. ಪ್ರಾಮಾಣಿಕವಾಗಿ ತಪ್ಪು ಅಭಿಪ್ರಾಯ ಇರಿಸಿಕೊಂಡಿರುವವರಿಗೆ ನಾವೆಲ್ಲಾ ಅವಕಾಶ ಕೊಡುವಂಥವರೇ. ಆದರೆ ಸುಳ್ಳುಕೋರರನ್ನು ಬಿಟ್ಟು ಬೇರೆ ಯಾರು ತಾನೆ ಸುಳ್ಳುಕೋರರಿಗೆ ಅಭಿವ್ಯಕ್ತಿಯ ಅವಕಾಶ ನೀಡಬೇಕೆಂದು ಆಗ್ರಹಿಸಿಯಾರು ?

ಪ್ರಜ್ಞಾಪೂರ್ವಕವಾಗಿ ಸುಳ್ಳು ಹೇಳುವವರಿಗೆ ಅಭಿವ್ಯಕ್ತಿಯ ಹಕ್ಕು ಇರಕೂಡದೆಂಬ ಒಂದು ಅಮೂರ್ತ ನಿಯಮವನ್ನು ರೂಪಿಸಬಹುದು. ಈ ನಿಯಮವು ಎಷ್ಟು ಅರ್ಥವತ್ತಾದುದೆಂಬುದು ಮೂರ್ತ ಉದಾಹರಣೆಗಳನ್ನು ನೋಡಿದಾಗ ತಿಳಿಯುತ್ತದೆ. ಜರ್ಮನಿಯಲ್ಲಿ ಹಿಟ್ಲರನು ಮೇಲೇರುವುದಕ್ಕೆ ಮುಂಚೆ ಸಮಾಜವಾದಿ ಪ್ರಜಾಪ್ರಭುತ್ವ ಪಕ್ಷದಲ್ಲಿ ಒಂದು ಅಭಿಪ್ರಾಯ ಸದಾ ಕಾಡುತ್ತಿತ್ತು : ಮುಕ್ತ ಅಭಿವ್ಯಕ್ತಿಯೆಂದರೆ ನಾಝಿಗಳಿಗೆ ಮುಕ್ತ ಅಭಿವ್ಯಕ್ತಿ, ಎಂದು. ಅಧಿಕಾರವನ್ನು ಕಿತ್ತುಕೊಳ್ಳಲು ಜರ್ಮನಿಯ ಜನರಲ್ಲಿ ನಾಝಿಗಳು ವಿಶಾಲ ತಳಹದಿ ರಚಿಸಿಕೊಳ್ಳುವ ಅಗತ್ಯವಿತ್ತು. ಅದಕ್ಕೆ ತಮ್ಮ ಸುಳ್ಳುಪಳ್ಳು ಪ್ರಚಾರಕ್ಕೆ ಅವಕಾಶ ಬೇಕಿತ್ತು ; ಉದಾಹರಣೆಗೆ, ಯಹೂದ್ಯರ ವಿರುದ್ಧದ ಭಾವನೆಗಳು. ಕರಪತ್ರ, ಪುಸ್ತಕ, ಭಾಷಣ ಇತ್ಯಾದಿಗಳು ಅದಕ್ಕೆ ಸಾಧನ. ನಾಝಿಗಳಿಗೆ ಆ ಸ್ವತಂತ್ರ ಅವಕಾಶ ಕೊಟ್ಟಿದ್ದೇ ಸಾಕು, ಇತರರೆಲ್ಲರ ಸ್ವಾತಂತ್ರ್ಯವೂ ಮುಕ್ತಾಯವಾಯಿತು. ನಂತರ ಬಂದಿದ್ದು ಉಪದ್ರವ, ಕೊಲೆ, ಯುದ್ಧ, ಇವುಗಳ ಸರಮಾಲೆ. ವಿಶ್ವದ ಕೋಟಿಗಟ್ಟಲೆ ಜನರ ಸಾವು ಇದರ ಪರಿಣಾಮ. ಮುಕ್ತ ಅಭಿವ್ಯಕ್ತಿಯ ಹಕ್ಕಿನ ದುರುಪಯೋಗವು ಅಭಿವ್ಯಕ್ತಿಯನ್ನು ಸಾಯಿಸಿತು; ಅಲ್ಲದೆ, ಪ್ರಗತಿಪರ ಮನುಕುಲವು ಗೌರವಿಸಿ ಕಾಪಾಡಿಕೊಂಡಿದ್ದ ಬೇರೆಲ್ಲ ಹಕ್ಕುಗಳೂ ಮಣ್ಣುಗೂಡಿದವು.

ಇದು ಯಾವಾಗಲೂ ಮತ್ತು ಎಲ್ಲೆಡೆಯೂ ಹೀಗೇ. ಪೀಡಿಸುವ ಜಾಡ್ಯವಿರುವ ಜನರ ಗುಂಪೊಂದು ಇರುವಾಗೆಲ್ಲಾ ಇದು ಹೀಗೆ ನಡೆಯುತ್ತದೆ. ಅದನ್ನು ತಡೆದು

ನಿಲ್ಲಿಸದಿದ್ದರೆ ಅದು ಬೇರೆಲ್ಲ ಗುಂಪುಗಳನ್ನೂ ನಾಶಮಾಡುತ್ತದೆ. ಯಾವ ಜನ ತಮ್ಮದೇ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುವುದಿಲ್ಲವೋ ಅವರ ಗತಿ ಇದೇ: ಬೇರೆಯವರು ಅವರ ಅಭಿಪ್ರಾಯಗಳನ್ನು ರೂಪಿಸಿ, ಚಾಟಿ ಮತ್ತು ಹರಳೆಣ್ಣೆ ಪ್ರಯೋಗಿಸಿ, ಅದನ್ನು ಹೇಳಿಕೊಡುತ್ತಾರೆ. ಅಸಹನೆಯೊಂದನ್ನುಳಿದು ಬೇರೆಲ್ಲವನ್ನೂ ಸಹನೆಯು ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳಬಲ್ಲದು. ಸ್ವಾತಂತ್ರ್ಯ ಎಲ್ಲರಿಗೂ ದಕ್ಕಬಲ್ಲದು; ಇತರರನ್ನು ಗುಲಾಮರನ್ನಾಗಿಸಿಕೊಳ್ಳುವವರನ್ನು ಬಿಟ್ಟು.

* * *

(7) ಈವರೆಗೆ ಆರು ವಿಧಗಳಲ್ಲಿ ತಡವರಿಸುವ ತಂತಿ ನಡಿಗೆಯವರನ್ನೂ ಊಗಲಾಡುವವರನ್ನೂ ವಿರೋಧಿಸಿದ್ದಾಯಿತು. ಅವರಿಗೆ ಸ್ವಲ್ಪಮಟ್ಟಿನ ಮರ್ಯಾದೆ ನೀಡಿ ಅವರು ಮಂಡಿಸುವ ಅಭಿಪ್ರಾಯವನ್ನು ಮತ್ತೆ ಅವಲೋಕಿಸೋಣ. ಎಲ್ಲ ಪ್ರಶ್ನೆಗಳಿಗೂ ಎರಡು ಮಗ್ಗುಲುಗಳಿವೆ ಎಂಬ ಅವರ ಮಾತಿನ ಅರ್ಥ "ಯಾವ ವಿಚಾರವನ್ನೇ ಆಗಲಿ ಎಚ್ಚರದಿಂದ ಪರಿಶೀಲಿಸದೆ ತೀರ್ಮಾನ ಕೈಗೊಳ್ಳಬಾರದು" ಎಂದಿಟ್ಟುಕೊಳ್ಳೋಣ. ಇದಕ್ಕೆ ಯಾರೂ ಚಕಾರ ಎತ್ತಲಾರರು. ಆದರೆ ಒಂದು ನಿರ್ಬಂಧವಿದೆ: "ಎಚ್ಚರದಿಂದ ಪರಿಶೀಲಿಸುವುದು" ಎಂಬುದನ್ನು ಹಿಗ್ಗಾಮುಗ್ಗಾ ಹಿಗ್ಗಿಸಿ ಕ್ರಿಯೆಯನ್ನು ಅನಿರ್ದಿಷ್ಟ ಕಾಲ ಮುಂದೂಡುವುದು ಎನ್ನುವಂತೆ ಮಾಡಕೂಡದು. ತಂತಿ ನಡಿಗೆಯವರು ಮತ್ತು ಊಗಲಾಡುವ ಮಂದಿ ಬಹಳ ಅಧ್ಯಯನಶೀಲರಂತೆ ತೋರಿಸಿಕೊಳ್ಳುತ್ತಾರೆ. "ಒಂದು ಕ್ಷಣ ತಡೆಯಿರಿ, ನನ್ನ ಮುಂದಿರುವ ಸಾಕ್ಷ್ಯಾಧಾರಗಳನ್ನೆಲ್ಲಾ ಇನ್ನೂ ಪರಿಶೀಲಿಸುತ್ತಿದ್ದೇನೆ" ಎಂದು ಅವರು ನಿರಂತರವಾಗಿ ಹೇಳುತ್ತಲೇ ಇರುತ್ತಾರೆ. ಆದರೆ ಘಟನೆಗಳು ಜನರಂತೆ ಸಾವಧಾನವಾಗಿ ಕಾಯುತ್ತಾ ಕೂಡುವುದಿಲ್ಲ. ಅಧ್ಯಯನದ ವಿಷಯವು ಘಟನೆಗಳು ವಿಸ್ತರಿಸಿಕೊಳ್ಳುತ್ತಿರುವಂತೆ ಏನೋ ಒಂದು ನಿರ್ಣಾಯಕ ಮಜಲನ್ನು ಮುಟ್ಟುತ್ತದೆ. ಆದರೆ ನಮ್ಮ ಅಧ್ಯಯನಶೀಲ ತಂತಿ ನಡಿಗೆಯವರು ಮತ್ತು ಊಗಲಾಡುವವರು ತಮ್ಮ ಅಧ್ಯಯನದಲ್ಲಿ ಮುಳುಗೇ ಇರುತ್ತಾರೆ ! ಕಡೆಗೆ, ಅಧ್ಯಯನದ ಉದ್ದೇಶವೇನು? ಬದಲಾಗುತ್ತಿರುವ ಪರಿಸರದ ಮೇಲೆ ಪ್ರಭಾವ ಬೀರುವುದು ತಾನೆ ? ನಮ್ಮ ಆಶಯಗಳಿಗನುಗುಣವಾಗಿ ಅದನ್ನು ಮಾಡಬೇಕಾದರೆ ಭೌತಿಕ ಮತ್ತು ಸಾಮಾಜಿಕ ಪ್ರಪಂಚದ ಘಟನೆಗಳ ಸಾಕಷ್ಟು ನಿಖರವಾದ ತಿಳುವಳಿಕೆ ಅಗತ್ಯ. ಆದರ್ಶ ಸನ್ನಿವೇಶವೆಂದರೆ ಎಲ್ಲ ಸಾಧ್ಯತೆ ಮತ್ತು ಕಾರ್ಯಕ್ರಮಗಳೂ ತಿಳಿದಿರುವ ಹಿನ್ನೆಲೆಯಲ್ಲಿ ತೀರ್ಮಾನ ಕೈಗೊಳ್ಳುವ ಅವಕಾಶ. ನಮ್ಮ ಅಜ್ಞಾನದಿಂದ ನಮ್ಮದೇ ತೀರ್ಮಾನವು ಸೋತುಹೋಗಬಾರದಲ್ಲವೆ !

ನಮ್ಮ ಯೋಜನೆಗಳಿಗಿರುವ ಒಂದು ಸೀಮಿತತೆ ಇದು. ಇದಲ್ಲದೆ ಬೇರೊಂದೂ ಇದೆ: ಎಲ್ಲ ಯೋಜನೆಗಳೂ ಮಾಡಲ್ಪಡುವುದು ಇತಿಹಾಸದ ಒಂದು ನಿರ್ದಿಷ್ಟ ಘಳಿಗೆಗೆ. ಅವು ಆ ಕ್ಷಣಕ್ಕೆ ಪ್ರಸ್ತುತ, ಸದಾಕಾಲಕ್ಕೂ ಅಲ್ಲ. ಆ ಕ್ಷಣ ಕಳೆದುಹೋದ ಮೇಲೆ ಬೇರೊಂದು ಕ್ಷಣ ಆ ಜಾಗವನ್ನು ಆಕ್ರಮಿಸುತ್ತದೆ; ಆಗ ಹಿಂದಿನ ಯೋಜನೆ ಅನ್ವಯವಾಗಲಾರದು. ಯೋಜನೆಯು ಅತಿಸಾಮರ್ಥ್ಯದಿಂದ ವಿವರವಾಗಿಯೇ ಹೊಮ್ಮಿರಬಹುದು, ಆದರೆ ಅದು ಅಪ್ರಯೋಜಕ; ನಿರೀಕ್ಷಿಸಿದ ಪ್ರಭಾವ ಅದರಿಂದ ಉಂಟಾಗುವುದಿಲ್ಲ. "ಬಹಳ ಕಡಿಮೆ, ಅದೂ ಬಹಳ ತಡವಾಗಿ" ಎನ್ನುವ ನಾಣ್ಣುಡಿಯ

ನೀತಿ, ತತ್ವ, ಎಲ್ಲಾ ಇದೇ. ತನ್ನ ಸುತ್ತಣ ಪ್ರಪಂಚವನ್ನು ಹತೋಟಿಯಲ್ಲಿಟ್ಟುಕೊಳ್ಳುವ ಮಾನವನ ಯತ್ನಗಳಿಗೆ ಎರಡು ಸೀಮಾರೇಖೆಗಳಿವೆ: ಒಂದು, ಅರಿವು ಮೂಡಿಸಿಕೊಳ್ಳುವ ಮುನ್ನ ಕ್ರಿಯೆಗೆ ಜಿಗಿಯಬಾರದು; ಎರಡು, ಅವಕಾಶವು ಕಮರಿಹೋಗುವ ಮುನ್ನ ಕ್ರಿಯಾಶೀಲರಾಗಬೇಕು. ಈ ಎರಡು ರೇಖೆಗಳ ನಡುವೆ ದೊರಕುವ ಸಮಯ ಕಡಿಮೆ, ಕೆಲವೊಮ್ಮೆ ಅತಿಕಡಿಮೆ. ವಿಶ್ವದ ಮೇಲೆ ಸದಾ ಹೆಚ್ಚುತ್ತಲೇ ಇರುವ ಪ್ರಭುತ್ವವನ್ನು ಸ್ಥಾಪಿಸಿಕೊಳ್ಳಲು ಮಾನವ ಈ ಸೀಮಾರೇಖೆಗಳನ್ನು ಮೀರುತ್ತಲೇ ಇರುತ್ತಾನೆ, ಅದು ಅವನ ವಿಜಯಗಳಲ್ಲಿ ಮೇರುಸ್ಥಾನ ಹೊಂದಿದೆ.

ಊಗಲಾಡುವವರು ಹಾಗೇಕೆ ಮಾಡುತ್ತಾರೆ ?

ನಾವು ಚರ್ಚಿಸುತ್ತಿರುವ ನಂಬಿಕೆ ಎಷ್ಟು ಸಂದಿಗ್ಧವಾದ್ದು, ಅದಕ್ಕೆ ನಾವು ಹೊರತೆಗೆದ ವಿವಿಧ ಅರ್ಥಗಳು ಎಷ್ಟು ಅಸಮರ್ಪಕ ಎಂಬುದು ಈಗ ತಿಳಿದಂತಾಗಿದೆ. ಏನೋ ಒಂದು ವಿಶೇಷಣ ನೀಡದೆ ಯಾವ ಅರ್ಥವನ್ನೂ ಸ್ವೀಕರಿಸುವಂತಿಲ್ಲ. ಅವುಗಳಲ್ಲಿ ಅನೇಕ ಅರ್ಥಗಳು ಉದ್ದೇಶಪೂರ್ವಕವಾಗಿಯೇ ಮೋಸದ ತಂತ್ರಗಳನ್ನೇನೋ ಅಡಗಿಸಿಕೊಂಡಂತಿವೆ. ಅವುಗಳ ಸಾರವನ್ನು ವಿಶ್ಲೇಷಿಸಿ ವಿವರಿಸಿಬಿಟ್ಟರೆ ದಾರಿತಪ್ಪಿಸುವ ಅವುಗಳ ಲಕ್ಷಣಕ್ಕೆ ಕಡಿವಾಣ ಬೀಳುವುದಿಲ್ಲ. ಇಂತಹ ವಿಶಿಷ್ಟ ಭ್ರಮೆಗಳಿಗೆ ಕೆಲಜನ ಏಕೆ ಮಾರುಹೋಗಿದ್ದಾರೆಂಬುದನ್ನೂ ಸ್ವಲ್ಪ ತಿಳಿಯಬೇಕು. ಕೆಲವು ವಿಶೇಷ ಮನೋಭಾವಗಳ ಸ್ವಭಾವ ತಿಳಿಯಲು ಮನೋವೈಜ್ಞಾನಿಕ ವಿಶ್ಲೇಷಣೆಯಲ್ಲಿ ತೊಡಗಿದರೆ ತಪ್ಪಾಗಲಾರದೆಂದು ಭಾವಿಸುತ್ತೇನೆ; ಸ್ವಲ್ಪ ಬೆಳಕು ಬೀರುತ್ತದೇನೋ ನೋಡೋಣ. ಅದನ್ನು ಮಾಡಲು ಮಠಾಧಿಪತಿಗಳಿಗಿರುವ ಕೌಶಲ ನನಗಿಲ್ಲ. ಆದ್ದರಿಂದ ಭ್ರಮೆಗಳನ್ನೂ, ಮಾರುಹೋಗುವ ಮನೋಭಾವವನ್ನೂ ಅವುಗಳ ಚಾರಿತ್ರಿಕ ಸ್ಥಾನದಲ್ಲಿರಿಸಿದರೆ ಲಾಭದಾಯಕವಾದೀತೇನೋ ಎನಿಸುತ್ತದೆ. ಅದಕ್ಕೆ ಆರಂಭ ಹೀಗೆ: ಸಾಮಾಜಿಕ ಮತ್ತು ರಾಜಕೀಯ ವಿಚಾರಗಳನ್ನು ಕುರಿತಂತೆ ಕೆಲಜನ ಒಂದು ನಿರ್ಧಾರಕ್ಕೆ ಬರಲು ಅಸಮರ್ಥರು ಇಲ್ಲವೆ ಸಮರ್ಥರಿದ್ದೂ ಅದನ್ನು ಮಾಡುವುದಿಲ್ಲ. ಹಲವು ಸಂಗತಿಗಳಿವೆ; ಅವುಗಳ ಬಗ್ಗೆ ಅವರು ಅನಿಶ್ಚಿತ ನಿಲುವು ಹೊಂದಿರುತ್ತಾರೆ. ಒಂದು ಸುಸಂಗತ ನಿರ್ದಿಷ್ಟ ಕಾರ್ಯಕ್ರಮದ ಪರಿವೆಯೇ ಅವರಿಗಿಲ್ಲ. ಹೀಗೇಕೆ?

ಸಾಮಾಜಿಕ ಸಮಸ್ಯೆಗಳ ಬಗ್ಗೆ ಅನಿಶ್ಚಿತತೆಯು ಮೂಲಭೂತ ನಂಬಿಕೆಗಳಲ್ಲಿನ ವೈರುಧ್ಯದಿಂದಾಗಿ ಉಂಟಾಗುತ್ತದೆ. ಒಂದು ಸಾಮಾಜಿಕ ಸಿದ್ಧಾಂತವನ್ನು ಪ್ರಜ್ಞಾಪೂರ್ವಕವಾಗಿಯೋ ಅಲ್ಲವೋ ಆತುಕೊಂಡಾಗ ಹಲವು ಪ್ರತಿಪಾದನೆಗಳಿರುತ್ತವೆ. ಅವನ್ನು ಒಂದು ನಿರ್ದಿಷ್ಟ ಸಮಸ್ಯೆಗೆ ಹೊಂದಿಸಿದಾಗ ಒಂದಕ್ಕೊಂದು ವಿರೋಧವಾಗಿರುವುದು ಗೊತ್ತಾಗುತ್ತದೆ. ರಾಜಕೀಯ ಪ್ರಜಾಪ್ರಭುತ್ವದ ಸಂಸ್ಥೆಗಳಲ್ಲಿ ನಂಬಿಕೆ ಇರುವವನೊಬ್ಬನಿದ್ದಾನೆ ಎನ್ನಿ; ಅವನಿಗೆ ದುಡಿಯುವವರ ಸಂಘಗಳ ಬಗ್ಗೆ ಏನೋ ಅಸಂತೃಪ್ತಿ ಇರಬಹುದು. ಈ ಪಂಕ್ತಿಗೆ ಇನ್ನೂ ಏನೇನೋ ಸೇರಬಹುದು: ಯಹೂದ್ಯರು, ನೀಗ್ರೋಗಳು, ಪರಕೀಯರು, ಇತ್ಯಾದಿ. ದುಡಿಯುವವರ ಸಂಘಗಳು ರಾಜಕೀಯ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಬಳಸಿಕೊಳ್ಳುತ್ತವೆ; ಕೂಲಿ ಮತ್ತು ದುಡಿಯುವ ವೇಳೆಯನ್ನು ನಿಗದಿಪಡಿಸಿಕೊಳ್ಳಲು, ಇಲ್ಲವೆ ನಿರುದ್ಯೋಗ ವಿಮೆ

ಪಡೆಯಲು, ಇಲ್ಲವೆ ಮುದುಕರಾದಾಗ ಪಿಂಚಣಿ ಪಡೆಯಲು, ಇತ್ಯಾದಿ. ನಮ್ಮ ಸ್ನೇಹಿತ ಇದ್ದಾನಲ್ಲ, ಅವನಿಗೆ ಒಂದು ದ್ವಂದ್ವ ಮೂಡುತ್ತದೆ: ಪ್ರಜಾಪ್ರಭುತ್ವದಲ್ಲಿ ನಂಬಿಕೆಯುಂಟು, ಆದರೆ ದುಡಿಯುವವರ ಸಂಘಗಳೆಂದರೆ ಇರಿಸುಮುರಿಸು. ರಾಜಕೀಯ ಪ್ರಜಾಪ್ರಭುತ್ವವನ್ನು ಬೆಂಬಲಿಸುವುದನ್ನು ಮುಂದುವರಿಸಿದರೆ ದುಡಿಯುವವರು ಕ್ರಮೇಣ ವರ್ಧಿಸುವುದನ್ನು ಅಂಗೀಕರಿಸಬೇಕು; ದುಡಿಯುವವರ ಬಗೆಗಿನ ಅಸಂತೋಷ ಮುಂದುವರಿದರೆ ಕ್ರಮೇಣ ಪ್ರಜಾಪ್ರಭುತ್ವ ಸಂಸ್ಥೆಗಳಲ್ಲಿ ನಂಬಿಕೆ ಕಳೆದುಕೊಳ್ಳಬೇಕು.

ಈಗ ಆರಂಭವಾಯಿತು ಅವನ ಡೋಲಾಯಮಾನ ಸ್ಥಿತಿ. ಒಮ್ಮೆ ಪ್ರಜಾಪ್ರಭುತ್ವವಾದಿ ಕ್ರಮವನ್ನು ಬೆಂಬಲಿಸುತ್ತಾನೆ, ಇನ್ನೊಮ್ಮೆ ದುಡಿಯುವವರ ವಿರೋಧವಾಗಿ ಹೇರಿದ ನಿರ್ಬಂಧವನ್ನು ಬೆಂಬಲಿಸುತ್ತಾನೆ. ಇನ್ನು ಕೆಲವೊಮ್ಮೆ ಯಾವ ತೀರ್ಮಾನವೂ ಬೇಡವೆಂದು ಸುಮ್ಮನಾಗುತ್ತಾನೆ, ಕೈ ಎತ್ತಿಬಿಡುತ್ತಾನೆ. ಇದೇನು ವಿಸ್ಮಯಕಾರಿ ಪ್ರಪಂಚ, ಎಷ್ಟೊಂದು ಸ್ವಾರ್ಥ, ಎಷ್ಟು ಸಂಘರ್ಷ, ಎನಿಸಿಬಿಡುತ್ತದೆ. ಹಿಂದಿನ ಸ್ಪಷ್ಟತೆ, ತ್ಯಾಗ ಮನೋಭಾವ, ಎಲ್ಲಾ ಗಾಳಿಗೆ ಹೋಯಿತು. ಉಳಿದಿರುವ ದಾರಿಯೊಂದೇ: ಊಗಲಾಡುವುದು, ತಂತಿ ನಡಿಗೆ. ಒಲಿಂಪಿಕ್ಸ್ ಪಟುವೇ ಆಗಿಬಿಡುತ್ತಾನೆ ! ಅವನೀಗ ರಣರಂಗದ ಹೊರಗಿನವನು, ಆದರೆ ಅವನ ಆಶಾಭಂಗದ ಹೊಡೆತ ಉಳಿದಿದೆ. ಆಗಾಗ ವ್ಯಸನ, ಕೆಲವೇಳೆ ಕೋಪದ ಆದರ್ಶಗಳು; ಸರಿ, ಸಮಕಾಲೀನರು ಅದೆಷ್ಟು ಇಹಕ್ಕೆ ಅಂಟಿಕೊಂಡಿದ್ದಾರೆಂದು ಅವರನ್ನು ಮೂದಲಿಸಲು ಆರಂಭಿಸುತ್ತಾನೆ. ತಾನು ಹಿಂದೆ ಅನುಸರಿಸಿದ್ದ ನಾಯಕರನ್ನು ತೆಗಳುತ್ತಾನೆ; ಆದರೆ ಇರುವ ಕೆಟ್ಟವರಲ್ಲಿ ಇವರೇ ಉತ್ತಮರು ಎಂಬ ಭಾವನೆಯೂ ಪ್ರಬಲವಾಗಿರುತ್ತದೆ. ಸಂಘರ್ಷದ ವೇಳೆ ಅವರು ಅನುಸರಿಸುವ ಸಮಜಾಯಿಷಿ ತಂತ್ರವು ಇವನಿಗೆ ಇಡೀ ಉದ್ದೇಶಕ್ಕೆ ಶರಣು ಹೊಡೆದಂತೆ ಅನಿಸುತ್ತದೆ. ಅವರಿಗೇಕೆ ಅಷ್ಟೂ ತಿಳಿಯುವುದಿಲ್ಲ ? ತಾನು ಎತ್ತರದಲ್ಲಿ ನಿಂತು ಕಾಣುವುದನ್ನು ಅವರೇಕೆ ಕಾಣಲಾರರು ? ಅಯ್ಯೋ ಕಾಲವೆ, ಅಯ್ಯೋ ನೀತಿಯೇ, ಎಂದು ಕಂಗಾಲಾಗುತ್ತಾನೆ. ಪ್ರಾಚೀನ ರೋಮಿನ ಸಿಸೆರೋ ಉದ್ಗಾರದಲ್ಲಿ ಅವನಿಗೆ ನೆನಪಿಗೆ ಬರುವುದು ಅದಷ್ಟೆ !

ಈ ಸ್ವಭಾವದ ನಮ್ಮ ವ್ಯಕ್ತಿ ಊಹಾಲೋಕದವನಲ್ಲ, ಅವನು ನಮ್ಮ ನಡುವಿನವನೇ. ಹದಿನೇಳನೆಯ ಶತಮಾನದಿಂದ ಇಪ್ಪತ್ತನೆ ಶತಮಾನದವರೆಗಿನ ಚಿಂತನೆಯ ಇಡೀ ಚಳುವಳಿಯನ್ನವನು ಪ್ರತಿನಿಧಿಸುತ್ತಾನೆ. ಅದನ್ನು ನಾವು ಉದಾರವಾದಿ ಪರಂಪರೆ ಎನ್ನುತ್ತೇವೆ. ಈ ಪರಂಪರೆ ಹುಟ್ಟಿದ್ದು ಹೇಗೆ ? ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧವಾಗಿ ಬಂಡವಾಳಶಾಹಿ ಸಮಾಜವನ್ನು ಸಮರ್ಥಿಸುವುದಕ್ಕಾಗಿ. ವೈಯಕ್ತಿಕ ಆಸ್ತಿ ಹಕ್ಕುಗಳಿಗೆ ಅದು ನ್ಯಾಯತತ್ವವನ್ನು ವಿವರವಾಗಿ ರೂಪಿಸಿಕೊಟ್ಟಿತು. ರಾಜಕೀಯ ಪ್ರಜಾಪ್ರಭುತ್ವ, ನಾಗರಿಕ ಸ್ವಾತಂತ್ರ್ಯ, ಈ ತತ್ವಗಳ ಉಗಮವಾದದ್ದೂ ಆಗಲೇ. ಊಳಿಗಮಾನ್ಯತೆಯ ಯಜಮಾನರ ವಿರುದ್ಧ ಇವು ಪ್ರಬಲ ಆಯುಧಗಳಾದವು. 1688ರ ನಂತರ ಬಂದ ಲಾಕ್ ಎಂಬ ತತ್ವಜ್ಞಾನಿ ಈ ಸಿದ್ಧಾಂತಕ್ಕೆ ಇನ್ನೊಂದು ಧೋರಣೆಯನ್ನು ಲಗತ್ತಿಸಿದ. ಅದು ಸಹನೆಯ ತತ್ವ; ಜೀವಿಸು, ಜೀವಿಸಲು ಬಿಡು, ಎಂಬ ತತ್ವ. ಆ ವೇಳೆಗೆ ವ್ಯಾಪಾರಿಗಳು ಒಂದಂಶ ಕಂಡುಕೊಂಡಿದ್ದರು: ಇಡೀ ವಿಶ್ವದಲ್ಲಿ ತಮ್ಮ ವ್ಯಾಪಾರವನ್ನು ವಿಸ್ತರಿಸಬೇಕಾದರೆ, ಅಥವಾ ಕಡೇಪಕ್ಷ ಇಡೀ ಯೂರೋಪಿನಲ್ಲಿ ಅದನ್ನು ಸ್ನೇಹಯುತ

ವಾತಾವರಣದಲ್ಲಿ ನಡೆಸಬೇಕಾದರೆ, ಇತರರ ಅಭಿಪ್ರಾಯಗಳನ್ನು ಅಸಹನೆಯಿಂದ ಉಪೇಕ್ಷಿಸಬಾರದು, ಎಂಬುದು ಆ ಅಂಶ. 1750ರಲ್ಲಿ ಜೋಸಯಾ ಟಕರ್ ಹೇಳಿದಂತೆ, ಧಾರ್ಮಿಕ ಸ್ವಾತಂತ್ರ್ಯ ಒಳ್ಳೆಯದು, ಕೇವಲ "ವ್ಯಾಪಾರಿ ದೃಷ್ಟಿಯಿಂದ ನೋಡಿದಾಗ."

ಖಾಸಗಿ ಆಸ್ತಿ, ರಾಜಕೀಯ ಪ್ರಜಾಪ್ರಭುತ್ವ ಮತ್ತು ಸಹನೆ ಇವು ಉದಾರವಾದಿ ಪರಂಪರೆಯ ಮೂರು ಮುಖ್ಯಾಂಶಗಳು. ಆಧುನಿಕ ಯುಗದಲ್ಲಿ ಈ ಪರಂಪರೆಯು ಬಹುಶಃ ಅತಿಪ್ರಬಲವಾದ್ದು. ಪಾಶ್ಚಿಮಾತ್ಯ ದೇಶಗಳಲ್ಲಿ ಬಹುತೇಕ ಜನ ಈ ಪರಂಪರೆಯಲ್ಲಿ ಬೆಳೆದಿದ್ದಾರೆ; ಹೀಗಾಗಿ, ಸ್ವಯಂ ಪ್ರಮಾಣಿತ ಸತ್ಯವೋ ಎಂಬಂತೆ ಆ ವ್ಯವಸ್ಥೆಯಿಂದ ಅವರ ರಾಜಕೀಯ ಚಿಂತನೆ ಹೊಮ್ಮಿದೆ. ಉದಾರವಾದದ ಈ ಮೂರು ತತ್ವಗಳು ಕಳೆದ ಇಪ್ಪತ್ತು ವರ್ಷಗಳಲ್ಲಿ (ಇದನ್ನು ಬರೆದದ್ದು 1947ರಲ್ಲಿ) ಅಷ್ಟು ಸುಂದರವಾಗಿ ಸಮ್ಮಿಳಿತವಾಗಿ ಉಳಿದಿಲ್ಲ. ತನ್ನ ಖಾಸಗಿ ಆಸ್ತಿಯನ್ನು ದಕ್ಕಿಸಿಕೊಳ್ಳಲು ಇಟಲಿ ಮತ್ತು ಜರ್ಮನಿಯ ಬಂಡವಾಳಶಾಹಿಯ ಒಂದು ಭಾಗ ಫ್ಯಾಸಿಸಂ ಅನ್ನು ಅಪ್ಪಿಕೊಂಡಿತು; ಅದಕ್ಕಾಗಿ ಉದಾರವಾದದ ಉಳಿದೆರಡು ತತ್ವಗಳನ್ನು ಗಾಳಿಗೆ ತೂರಿತು. ಈಚಿನ ಚರಿತ್ರೆಯ ಮೇಲೆ ಆ ವರ್ಗದ ಪ್ರಭಾವ ಎಷ್ಟು ದಟ್ಟವಾಗಿದೆಯೆಂದರೆ ಮತ್ತೆ ಆ ಮೂರು ತತ್ವಗಳು ಪರಸ್ಪರ ಹೊಂದಾಣಿಕೆಯಿಂದ ಇರುವುದೇ ಇಲ್ಲವೇನೋ ಎನಿಸುತ್ತದೆ. ಇರಬಲ್ಲವೇ ಎಂಬುದು ಸಮಕಾಲೀನ ಘಟನೆಗಳಿಂದ ನಿರ್ಧಾರವಾಗಬೇಕಾಗಿದೆ. ಈ ಘಟನೆಗಳ ತಕ್ಷಣದ ಭವಿಷ್ಯವೇನಾಗಿರುತ್ತದೆಂದು ಹೇಳುವಷ್ಟು ನಾನು ಪ್ರವಾದಿಯಲ್ಲ. ಇಷ್ಟನ್ನು ಖಂಡಿತವಾಗಿ ಹೇಳಬಹುದು: ಇಂದಿನ ಖಾಸಗಿ ಆಸ್ತಿಯ ವ್ಯವಸ್ಥೆಯು ಸ್ಥಳೀಯವಾಗಿ (ಅಮೆರಿಕಾದಲ್ಲಿ) ಉತ್ತಮಗೊಳ್ಳುತ್ತಿರುವ ಜೀವನ ಮಟ್ಟದೊಂದಿಗೆ ಸಾಕಷ್ಟು ಸಾಂಗತ್ಯದಿಂದ ಇರುವುದಾದರೆ ಮತ್ತು ವಿದೇಶಗಳಲ್ಲಿ ವಸಾಹತು ದೇಶಗಳ ಜನರ ಸ್ವಾತಂತ್ರ್ಯವು ಹೆಚ್ಚುವಂತಾದರೆ ಈ ಮೂರು ತತ್ವಗಳ ಹೊಂದಾಣಿಕೆ ಮರುಸ್ಥಾಪನೆಗೊಳ್ಳಲು ಸಾಧ್ಯ. ಆದರೆ ಖಾಸಗಿ ಆಸ್ತಿಯ ವ್ಯವಸ್ಥೆಯು ತನ್ನ ರಕ್ಷಣೆಗಾಗಿ ಜೀವನ ಮಟ್ಟವನ್ನು ಕುಸಿಯುವಂತೆ ಮಾಡಿದರೆ ಮತ್ತು ವಸಾಹತು ದೇಶಗಳ ಜನರ ದಾಸ್ಯವನ್ನು ಮುಂದುವರಿಸಿದರೆ ಈ ತತ್ವಗಳ ಮರುಹೊಂದಾಣಿಕೆ ಅಸಾಧ್ಯ. ಇರುವ ಆಯ್ಕೆ ಇವೆರಡರ ನಡುವೆ ಮಾತ್ರ. ಹೀಗಿರುವಾಗ ಉದಾರವಾದಿಗಳು ಉದಾರವಾದಕ್ಕೆ ಮರುಜೀವ ತುಂಬಬೇಕು, ಅದೂ ಈಗಿಗಿಂತಲೂ ಉನ್ನತ ಮಟ್ಟದಲ್ಲಿ; ಅಥವಾ, ಇಂದಿನ ಸಾಮಾಜಿಕ ವರ್ಧನೆಗೆ ಅನುಗುಣವಾಗಿ ಪ್ರಾತಿನಿಧ್ಯ ನೀಡುವಂತಹ ಬೇರೊಂದು ಸಿದ್ಧಾಂತವನ್ನಾಗಿ ಉದಾರವಾದವನ್ನು ಪರಿವರ್ತಿಸಬೇಕು.

ಏನೇ ಇರಲಿ, ಒಂದಂಶ ಸ್ಪಷ್ಟವಾಗಿದೆ: ಸಾಮಾಜಿಕ ಕ್ರಿಯಾಶಾಲಿತ್ವದಿಂದ ಹಿಂದಕ್ಕೆ ಸರಿಯುವುದಾಗಲಿ, ಅದನ್ನು ಅನಿರ್ದಿಷ್ಟವಾಗಿ ಮುಂದೂಡುವುದಾಗಲಿ ಇಂದಿನ ಮಾನವರಿಗೆ ಅಶಕ್ಯ. ಪ್ರಪಂಚದ ಅರಿವನ್ನು ಕುರಿತಂತೆ, ನಿರ್ಧಾರಗಳ ಅಭಾವದಲ್ಲಿ, ಎಲ್ಲವೂ ಗೋಜಲು: ಮಂಜು ಕವಿದಂತಿರುವ, ಎಲ್ಲವೂ ನಿಷ್ಫಲವೆನ್ನುವಂತಿರುವ, ವಾತಾವರಣ. ತಾಳ್ಮೆ, ಸಹನೆ, ನಿಷ್ಪಕ್ಷಪಾತ, ಮುಂತಾದ ಶ್ರೇಯಸ್ಕರ ಗುಣಗಳು ನಿರ್ಧಾರಗಳಿಗೆ ಸಹಾಯಕವೇ ವಿನಾ ಅವಕ್ಕೆ ಅಡಚಣೆಗಳಲ್ಲ. ಆ ಗುಣಗಳು ಕೇವಲ ನಮ್ಮವು ಮಾತ್ರವೆಂಬಂತೆ ವ್ಯವಹರಿಸಿದರೆ ಅವುಗಳ ಸಹಾಯದಿಂದ ನಾವು ತಲುಪಬಹುದಾದ ಗುರಿಗಳು ದೂರವೇ ಉಳಿಯುತ್ತವೆ. ❑❑

6. ಯದ್ಭಾವಂ ತದ್ಭವತಿ

ಮನುಷ್ಯನ ಸ್ವಭಾವವೆಂದು ಎಷ್ಟೋ ಸಾಮಾಜಿಕ ಮತ್ತು ಆರ್ಥಿಕ ಪಿಡುಗುಗಳನ್ನು ಅರ್ಥೈಸುವ ಹಾಗೂ ಸಮರ್ಥಿಸುವ ಬುದ್ಧಿವಂತಿಕೆಯು ಶೋಷಕ ವರ್ಗದ ಒಂದು ಲಕ್ಷಣ. ಉದಾಹರಣೆಗೆ, ಇತರರನ್ನು ಕಿತ್ತು ತಿನ್ನುವುದು ಮಾನವ ಸ್ವಭಾವವೆಂದು ಹೇಳಿ ಬಂಡವಾಳಶಾಹಿಯ ಎಲ್ಲ ಅನೈತಿಕ ಕ್ರಮಗಳನ್ನು ಸಮರ್ಥಿಸಿಬಿಡುವ ಪಂಡಿತರು ನಮ್ಮಲ್ಲಿರುತ್ತಾರೆ. ಅಂತಹ ಸ್ವಭಾವವು ಸಾರ್ವಕಾಲಿಕವಲ್ಲ ಮತ್ತು ಅದು ಬದಲಾಗುತ್ತಿರುವ ಹಾಗೂ ಬದಲಾಗಬಲ್ಲ ಅಂಶ. ನಮ್ಮಲ್ಲಿ ಆಗಾಗ್ಗೆ ಕೇಳಿಬರುವ ಮಾತೊಂದಿದೆ; ಅದೇನೆಂದರೆ, ಸಾಮರ್ಥ್ಯ ಇರುವವರು ಶ್ರೀಮಂತರಾಗುತ್ತಾರೆ ಮತ್ತು ಅದಿಲ್ಲದಿರುವವರು ಬಡವರಾಗಿಯೇ ಉಳಿಯುತ್ತಾರೆ, ಎಂದು. ಅದನ್ನು ತಿರುಗಿಸಿ ಹೀಗೂ ಹೇಳಬಹುದು : ಯಾರೋ ಶ್ರೀಮಂತರಿದ್ದಾರೆ ಎಂದರೆ, ಅವರು ಸಮರ್ಥರು ಎಂದರ್ಥ; ಬಡವನು ಸ್ವಭಾವತಃ ಅದಕ್ಷನಾದ್ದರಿಂದ ಅವನೆಂದೂ ಮೇಲೆ ಏರಲಾರ, ಎಂದು. ಇದೂ ಯಥಾಸ್ಥಿತಿವಾದವೇ ಆಗುತ್ತದೆ; ಅಂದರೆ, ಇರುವುದೆಲ್ಲಾ ಹಾಗೇ ಇರುತ್ತದೆ; ಆದ್ದರಿಂದ ಅದನ್ನು ಬದಲಾಯಿಸಲು ಶ್ರಮಿಸುವುದು ವ್ಯರ್ಥ, ಎಂದರ್ಥ. ದುಡಿಯುವ ಜನರ ಬೌದ್ಧಿಕ ಮತ್ತು ಸಾಂಸ್ಕೃತಿಕ ವ್ಯಕ್ತಿತ್ವವನ್ನು ಕುಗ್ಗಿಸಿ ಅವರನ್ನು ಸದಾ ಸ್ವಾಧೀನದಲ್ಲಿರಿಸಿಕೊಳ್ಳಲು ಇಂತಹ ನೂರಾರು ಅಸ್ತ್ರಗಳನ್ನು ಶೋಷಕ ವರ್ಗವು ತನ್ನ ಬತ್ತಳಿಕಯಲ್ಲಿ ಶೇಖರಿಸಿಕೊಂಡಿರುತ್ತದೆ. ಅವುಗಳನ್ನು ಬಲಹೀನಗೊಳಿಸುವುದು ಅವಶ್ಯಕ.

* * *

ಒಂದು ಮಧ್ಯಾಹ್ನ ಯಾವನೋ ಅಡ್ಡಾಡುತ್ತಿದ್ದಾನೆ. ಪ್ರಪಂಚ ಅವನಿಗೆ ಹೇಗೆ ಕಾಣುತ್ತದೆ? ಅಗೋ ಅಲ್ಲಿ, ನೀಲಿ ಮತ್ತು ಕೆಂಪು ಛಾಯೆ. ಓಹೋ, ಅದೊಂದು ತಲೆಕೆಳಗಾದ ತ್ರಿಭುಜ; ಬಿಳಿಯದು; ಆದರೆ ಮಧ್ಯದಲ್ಲಿ ನೀಲಿ ಸೀಳು. ಮೇಲೆ ಗೋಪುರ. ಕೇಸರಿ ಬಣ್ಣದ್ದು. ಆದರೆ ಸ್ವಲ್ಪ ಹಳದಿ ಅದರಿಂದ ಹರಿದು ಹೋಗುತ್ತಿದೆ. ಕೆಳಗೆ ನೋಡಿದರೆ ಎಲ್ಲಾ ಬರೀ ಗಟ್ಟಿ, ಇದಲ್ಲವೇ ಸ್ವಾರಸ್ಯ, ಛಾಯೆಗಳ ನಡುವಿನಿಂದ ಶಬ್ದ ಹೊಮ್ಮುತ್ತಿದೆ. ಅದೆಷ್ಟು ನಿಶ್ಚಲವಾದ ಶಬ್ದ, ನೋಡಿ. ಅದರ ಜೊತೆ ಕಂದು ಬಣ್ಣದ ಮೆರುಗು ಬೇರೆ. ಓಹೋ, ಹೇಗೆ ಬೇಗನೆ ಬದಲಾಗಿಬಿಟ್ಟಿತು; ಈಗಲ್ಲಿ ಕರಿಯ ಚತುರ್ಭುಜ. ಒಂದು ಕೆಂಪು ವೃತ್ತದ ಬಳಿ ನಿಂತಿತು. ಹಾಗೆ ನಿಂತಾಗ ಕರ್ಕಶ ಶಬ್ದ. ಆದರೂ ಶಬ್ದ ಮತ್ತು ಛಾಯೆಗಳತ್ತ ಎಂಥದೋ ಮಧುರ ಆದರೆ ಕಹಿ ರುಚಿ ನುಸುಳುತ್ತಿದೆ. ಮುಟ್ಟಿ ನೋಡಿದರೆ ಅದು ಘನದ್ರವ್ಯವೇ. ಮುಟ್ಟಿದಾಗ ಎಷ್ಟು ಉಲ್ಲಾಸ. ಎಷ್ಟು ಸನಿಹದಲ್ಲಿದೆಯಲ್ಲ, ಮುಟ್ಟುವುದರಲ್ಲಿ ಯಶಸ್ಸು ಖಚಿತ.

– ಪ್ರಪಂಚ ಹಾಗಿಲ್ಲ, ಆದರೆ ಅಡ್ಡಾಡುತ್ತಿರುವ ಈ ವ್ಯಕ್ತಿಗೆ ಪ್ರಪಂಚದ ಒಂದು ಭಾಗ

ಹಾಗೆ ಕಾಣುತ್ತಿದೆ, ಅಷ್ಟೆ. ಅವನೇ ಸ್ವಾತ್ಮೈಕವಾದಿ. ಅಂದರೆ, ತನ್ನ ಆತ್ಮವೊಂದೇ ತಿಳಿದುಕೊಳ್ಳಬೇಕಾದ ವಿಷಯ, ಇರುವುದು ಅದೊಂದೇ, ಎಂದು ಹೇಳುವವನು. ಹೀಗೆಂದುಕೊಳ್ಳುವ ಆ ವ್ಯಕ್ತಿ ನಡೆದಾಡುತ್ತಿರುವಾಗ ರಸ್ತೆಯಲ್ಲಿ ಬೇರೆಯವರನ್ನು ಗಮನಿಸುತ್ತಿದ್ದಾನೆ. ಒಬ್ಬ ಬಿಳಿ ಅಂಗಿಯವನು, ಮೇಲೆ ನೀಲಿ ಕಂಠಕೌಪೀನ ಅಥವಾ ಟೈ ಧರಿಸಿದ್ದಾನೆ. ಇನ್ನೊಬ್ಬಳು ಕೆಂಪು ಬಟ್ಟೆಯವಳು, ಅವಳ ಟೋಪಿ ಹಳದಿಯದು. ಪಕ್ಕದಲ್ಲಿ ಆಟೋರಿಕ್ಷಾದ ಶಬ್ದ, ಕೆಂಪು ದೀಪ ಬಂದಿದ್ದರಿಂದ ಬ್ರೇಕ್ ಹಾಕಿ ಝುಪ್ಪಂತ ನಿಂತಿತು. ಇವನು ಸ್ವತಃ ಕಲ್ಲುಸಕ್ಕರೆ ಮೆಲ್ಲುತ್ತಿದ್ದಾನೆ, ಆದ್ದರಿಂದ ಬಾಯೆಲ್ಲಾ ಸಿಹಿ. ಬಾಯಾಡಿಸುತ್ತಿದ್ದಂತೆ ಅವನಿಗೇನೋ ದೊಡ್ಡ ಗೆಲುವು ಸಿಕ್ಕ ಅನುಭವ.

ಇದೇನು ಪುರಾಣ ಅನ್ನುತ್ತೀರೇನೊ, ಏಕೆಂದರೆ ಇದೆಲ್ಲಾ ದಿನನಿತ್ಯದ ಸರ್ವೇಸಾಮಾನ್ಯ ಸಂಗತಿಗಳು. ಹೌದು, ಅವು ಸರ್ವೇ ಸಾಮಾನ್ಯ. ಹಾಗಲ್ಲವೆಂದದ್ದು ನಾನಲ್ಲ; ನಮ್ಮ ದೊಡ್ಡ ತತ್ತ್ವಶಾಸ್ತ್ರಜ್ಞರಿದ್ದಾರಲ್ಲ ಅವರ ಭಾಷೆ ಅದು. ಅವರಿಗೆ ಅದೊಂದು ಮೋಜು. ಸುಮ್ಮನೆ 'ವಸ್ತುಗಳು' ಎಂದರೆ ಅವರಿಗೆ ರುಚಿಸುವುದಿಲ್ಲ; 'ಬಣ್ಣ ಬಣ್ಣದ ಛಾಯೆಗಳು' ಎಂದರೆ ಘನತೆ ಎಂಬ ಭಾವನೆ ಅವರದು. ಮೊದಲನೆಯ ಪದ ಎರಡನೆಯದರಷ್ಟು ಸಂಕೀರ್ಣವಲ್ಲ; ಆದ್ದರಿಂದ ಅದು ಸಮಸ್ಯೆ ಹುಟ್ಟುಹಾಕುವುದಿಲ್ಲ. ಸಮಸ್ಯೆಯನ್ನು ಎಬ್ಬಿಸದಿದ್ದರೆ ಅದೆಂತಹ ಪಾಂಡಿತ್ಯ, ಎಂಬುದು ಅವರ ಮೋಹ. ಸಿದ್ಧಾಂತ ಎಂಬುದು ಯಾವಾಗಲೂ ಅಪಾರ ಎಚ್ಚರಿಕೆಯಿಂದ ಮೂಡುವಂಥದು. ತತ್ತ್ವಶಾಸ್ತ್ರಜ್ಞನು ಕ್ಲುಪ್ತವಾಗಿ ವಾಸ್ತವವನ್ನು ಗ್ರಹಿಸಿದ್ದಾನೆನ್ನಿ; ಆಗ ಅವನ ಪ್ರಜ್ಞೆಯಲ್ಲಿ ಏನೋ ಒಂದು ಸ್ಪಷ್ಟವಾದ ಗ್ರಹಿಕೆ ಇರುತ್ತದೆ. ಆ ಗ್ರಹಿಕೆಗೆ ಕಾರಣವಾದ ವಸ್ತುವೊಂದು ಇದೆಯೋ ಇಲ್ಲವೋ, ಹೇಗೂ ಇರಲಿ, ಗ್ರಹಿಕೆಯಂತೂ ಇದೆ. ಸ್ಪಷ್ಟತೆ ಸಾಧ್ಯವಿಲ್ಲದಾಗ ಅದನ್ನು ಸುಮ್ಮನೆ ಅಂಗೀಕರಿಸಬೇಕೇಕೆ?

ಈಗ ತಾನೆ ಹೇಳಿದ 'ಸ್ವಾತ್ಮೈಕವಾದ'ವನ್ನು 'ಸೊಲಿಪ್ಸಿಸಂ' ಎನ್ನುತ್ತಾರೆ. ಅದು ಲ್ಯಾಟಿನ್ ಭಾಷೆಯಿಂದ ವ್ಯುತ್ಪತ್ತಿ ಹೊಂದಿದೆ. ಅದರ ಮೊದಲ ಭಾಗಕ್ಕೆ 'ಏಕೈಕ' (ಸೋಲ್) ಎಂಬರ್ಥವಿದೆ; ಎರಡನೆಯದಕ್ಕೆ 'ಸ್ವಕೀಯ' ಎಂಬರ್ಥ. ಎರಡನ್ನೂ ಸೇರಿಸಿದರೆ ಬರುವ ಅರ್ಥ ಇದು: ನಮಗೆ ತಿಳಿದಿರುವುದು ನಮ್ಮ ಅಸ್ತಿತ್ವ, ನಮ್ಮ ಪ್ರಜ್ಞೆಯನ್ನು ತುಂಬಿರುವ ಸಂವೇದನೆಗಳು. ಸರಿ, ವಸ್ತುಗಳಿವೆ ಎಂಬ ನಮ್ಮ ಜ್ಞಾನಕ್ಕೆ ಈ ಸಂವೇದನೆಗಳಷ್ಟೇ ಪ್ರಮಾಣವೆಂದು ನಂಬಿದೆವೆನ್ನಿ, ಆಗ ಯಾವ ತೀರ್ಮಾನ ಸಾಧ್ಯ? ಖಂಡಿತಕ್ಕೂ ಸತ್ಯವಾದ್ದು ಒಂದೇ ಸಂಗತಿ: ಅದು ನಮ್ಮ ಸ್ವಂತದ ಅಸ್ತಿತ್ವ ಮತ್ತು ನಮ್ಮ ಸಂವೇದನೆಗಳು. ಈಗ ಇನ್ನೊಂದು ಹೆಜ್ಜೆ ಮುಂದೆ ಹಾಕಿದರೆ ಸಾಕು, ಸಂಶಯದ ಬದಲು ನಿರಾಕರಣೆ ಸುಲಭ. ಅಂದರೆ, ನನಗೆ ತಿಳಿದಿರುವುದು ನಾನಿದ್ದೇನೆ ಮತ್ತು ನನಗೆ ಸಂವೇದನೆಗಳಿವೆ, ಎಂದಷ್ಟೆ. ಅದಷ್ಟೇ ಸತ್ಯವೆಂದಾದರೆ, ಬೇರೆ ವಸ್ತುಗಳಾಗಲಿ ವ್ಯಕ್ತಿಗಳಾಗಲಿ ಉಂಟೆಂದು ಹೇಳುವುದಾದರೂ ಹೇಗೆ! ಅದು ತಿಳಿದಿಲ್ಲದಾಗ, ಅವೆಲ್ಲಾ ಇವೆಯೆಂದು ಕಲ್ಪಿಸಿಕೊಳ್ಳುವುದರಲ್ಲಿ ಏನರ್ಥವಿದೆ? ನಾನೆಂದೂ ತಿಳಿಯಲಾಗದ್ದನ್ನು ಕಲ್ಪಿಸಿಕೊಳ್ಳುವುದು ನಿರರ್ಥಕ ತಾನೆ! ಹೀಗೆ ಗ್ರಹಿಸಲಾರಂಭಿಸಿದರೆ ಅದು ಇನ್ನಷ್ಟು ಮತ್ತಷ್ಟು ಖಚಿತವಾಗುತ್ತಾ ಹೋಗುತ್ತದೆ; ನನ್ನ ಪ್ರಜ್ಞೆಗೆ ನಿಲುಕುವ ನನ್ನನ್ನುಳಿದು ವಿಶ್ವದಲ್ಲಿ ಬಹುಶಃ ಬೇರೇನೂ ಇಲ್ಲ, ಎಂದು. ಕ್ರಮೇಣ ಆ 'ಬಹುಶಃ' ಕೂಡ ಇಲ್ಲವಾಗಿ ಹೋಗುತ್ತದೆ. ಮೊದಲಿನ ಎಚ್ಚರಿಕೆಯ

ಸಂಶಯ ಹೋಗಿ ನಾನೊಬ್ಬನೇ ಇರುವುದು ಎಂಬ ಬೆಚ್ಚನೆಯ ನಂಬಿಕೆ ತುಂಬಿಕೊಳ್ಳುತ್ತದೆ. ನಕ್ಷತ್ರಗಳು, ಸೂರ್ಯ, ಗ್ರಹಗಳು, ಎಲ್ಲವೂ ಒಂದು ಕೊಠಡಿಯ ಪೀಠೋಪಕರಣಗಳಷ್ಟು ಕುಬ್ಜವಾಗಿಬಿಡುತ್ತವೆ. ಆ ಕೊಠಡಿ ಬೇರಾವುದೋ ಅಲ್ಲ, ಅದು ನನ್ನ ಪ್ರಜ್ಞೆ. ಅಂತಹ ಅದ್ಭುತ ಸನ್ನಿವೇಶದಲ್ಲಿ ನಾನು ಆಸೀನನಾಗಿ ಬಿಡುತ್ತೇನೆ: ನಾನು, ನಾನೊಬ್ಬನೇ, ನಾನೇ ಸಹನಾಶೀಲ ನೋಡುಗ, ಎಲ್ಲ ಅಸ್ತಿತ್ವದ ಮೂಲಮಾದರಿ, ಅವಿನಾಶಿ ಆತ್ಮ, ನಿತ್ಯ, ಇತ್ಯಾದಿ. ಅಹಂ ಬ್ರಹ್ಮಾಸ್ಮಿ!

ಆಯಿತು, ಈ ಆತ್ಮ ಒಂಟಿಯಾಗಿದ್ದುಕೊಂಡು ಏನು ಮಾಡುತ್ತದೆ? ಅದು ಆಲೋಚಿಸುತ್ತದೆ. ಅದಕ್ಕೆ ಭಾವನೆಗಳಿವೆ, ಆಶಯಗಳಿವೆ, ವಿಷಯಗಳ ತಿಳಿವಿದೆ. ಆದರೆ ಅದು ಕೇವಲ ಸ್ವಚ್ಛ ತಿಳಿವು. ಭೂಮಿಯನ್ನು ಹೊತ್ತು ನಿಂತ ಅಟ್ಲಾಸ್ (ಅಥವಾ ಆದಿಶೇಷ) ಇದ್ದಾನೆನುತ್ತಾರಲ್ಲ, ಅವನ ಹಾಗೆ ಈ ಆತ್ಮಕ್ಕೆ ದಣಿವೆಂಬುದೇ ಇಲ್ಲ. ಈ ಆತ್ಮಕ್ಕೆ ತಿನಿಸು ಬೇಕೆ? ಬೇಕು. ತಿನ್ನಿಸಿಕೊಳ್ಳುವ ಶರೀರವಿದೆಯೆ? ಹೌದು ಇದೆ. ಆದರೆ, ನನ್ನ ಪ್ರಜ್ಞೆಗೆ ಭಾಸವಾದಷ್ಟರ ಮಟ್ಟಿಗೆ. ಕೂರಲು ಕುರ್ಚಿಗಳಿವೆಯೆ? ಇವೆ. ಮಾತಾಡಲು ಜನರಿದ್ದಾರೆಯೆ? ಇದ್ದಾರೆ. ಆದರೆ, ಈ ವಸ್ತು ಮತ್ತು ವ್ಯಕ್ತಿಗಳು ನನ್ನ "ಸಂವೇದನೆಯ ಹೊರೆಗಳಲ್ಲಿ" ಎಷ್ಟರ ಮಟ್ಟಿಗೆ ಸೇರಿಕೊಂಡಿದ್ದಾರೋ ಅಷ್ಟರ ಮಟ್ಟಿಗೆ ಮಾತ್ರ. ಹೋಗಲಿ, ಒಳಿತು ಮತ್ತು ಕೆಡುಕು ಎಂಬುವು ಇವೆಯೆ? ಇವೆ, ಆದರೆ ನನ್ನ ಭಾವನೆ ಮತ್ತು ಆಶಯಗಳಿಗೆ ಹೊಂದಿಕೊಂಡಂತೆ ಇಲ್ಲವೆ ವಿರೋಧವಾಗಿದ್ದಂತೆ ಮಾತ್ರ. ವಸ್ತುಗಳಿವೆ, ಏಕೆಂದರೆ ಅವನ್ನು ನಾನು ಆಲೋಚಿಸುತ್ತೇನೆ; ಮೌಲ್ಯಗಳೂ ಅಷ್ಟೆ, ನಾನು ಆಲೋಚಿಸುವುದರಿಂದಾಗಿ ಅವು ಇವೆ. ಅಂದರೆ, ನನ್ನ ಆಲೋಚನೆಯೇ ಎಲ್ಲಕ್ಕೂ ಮೂಲ ಆಕರ.

ಈಗ ನೋಡಿ, ಹೀಗೆ ಎಷ್ಟು ಮಂದಿ ಸಂಪೂರ್ಣವಾಗಿ ಸ್ವಾತ್ಮೈಕವಾದಿಗಳಾಗಲು ಬಯಸುತ್ತಾರೆ? ಅವರು ಮಾಡುವುದೆಲ್ಲಾ ಇದಕ್ಕೆ ಪ್ರತಿಯಾದುದೇ ಆಗಿರುತ್ತದೆ. ಬೆಳಿಗ್ಗೆ ಏಳುತ್ತಾರೆ, ಎದ್ದಾಗ ಅವರ ಹಾಸಿಗೆ ಕೇವಲ ಮನಸ್ಸಿನ ಕಾಲ್ಪನಿಕ ಸಂವೇದನೆ ಆಗಿರುವುದಿಲ್ಲ. ಅವರು ಸುತ್ತಮುತ್ತ ವ್ಯವಹಾರಗಳಲ್ಲಿ ತೊಡಗುವಾಗ ಆ ಪ್ರಪಂಚವು ತಮ್ಮಿಂದ ಪ್ರತ್ಯೇಕವಾದುದೆಂದು ಅವರಿಗೆ ಗೊತ್ತು. ಪ್ರಜ್ಞೆಯು ಸುಪ್ತಾವಸ್ಥೆಗೆ ಹೋದಾಗ ರಾತ್ರಿಯ ನಿದ್ದೆ. ಹೀಗೆ ನಿದ್ದೆಗೆ ಜಾರಿದಾಗ ಹೊರಗಣ ಪ್ರಪಂಚ ತನ್ನ ಅಸ್ತಿತ್ವ ಕಳೆದುಕೊಳ್ಳುವುದಿಲ್ಲವೆಂದು ಅವರಿಗೆ ಗೊತ್ತು, ಏಕೆಂದರೆ ಬೆಳಿಗ್ಗೆ ಅವರು ಅದೇ ಪ್ರಪಂಚದೊಳಕ್ಕೆ ತಾನೆ ಏಳುವುದು. ಆದಾಗ್ಯೂ ನಮ್ಮ ತತ್ವಶಾಸ್ತ್ರಜ್ಞರು ಜಿಜ್ಞಾಸೆ ಮಾಡುತ್ತಲೇ ಇರುತ್ತಾರೆ, ಈ ಅತಿ ಸಾಮಾನ್ಯ ವ್ಯಕ್ತಿಗೆ ತನ್ನನ್ನುಳಿದು ಬೇರಾವುದಕ್ಕೂ ಅಸ್ತಿತ್ವವಿಲ್ಲ ಎಂದು. ಅವನಾದರೋ ವಾಸ್ತವ ಪ್ರಜ್ಞೆಯುಳ್ಳ ಸಾಮಾನ್ಯ ಜ್ಞಾನಿ. ಅವನೆಂದೂ ಪ್ರಪಂಚವು ಕೇವಲ ತನ್ನ ಮನಸ್ಸಿನ ಕಲ್ಪನೆಯೆಂದು ಅಂದುಕೊಂಡವನಲ್ಲ. ಬಿಷಪ್ ಬಾರ್ಕ್ಲೆ ಎಂಬ ತತ್ತ್ವಶಾಸ್ತ್ರಜ್ಞನಿದ್ದ. ಅವನು ಪುಂಖಾನುಪುಂಖವಾಗಿ ಅಮೂರ್ತತೆಗಳನ್ನು ಕಲೆಹಾಕಿದ. ನಮ್ಮ ಸಾಮಾನ್ಯ ವ್ಯಕ್ತಿಗೆ ಬಾರ್ಕ್ಲೆ ಹಿಡಿಸುವುದು ಅಶಕ್ಯ. ಅವನದು ಸರಳ, ನೇರ, ಪ್ರಪಂಚ. ಅದರಲ್ಲಿ ತಾನುಂಟು, ಬೇರೆಯವೆಲ್ಲಾ ಉಂಟು. ಅವು ಖಂಡಿತವಾಗಿಯೂ ಅವನಿಂದ ಪ್ರತ್ಯೇಕವಾದುವು. ಹೀಗೆ ತಿಳಿದ ಆ ಸಾಮಾನ್ಯ ವ್ಯಕ್ತಿಯು ನೈಪುಣ್ಯ ಹೊಂದಿದ್ದಾನೆ, ಆದರೆ ತತ್ತ್ವಶಾಸ್ತ್ರಜ್ಞರು ಅದನ್ನು ಗುರುತಿಸದಿದ್ದರೆ ಅವನೇನು ಮಾಡಿಯಾನು! ಅದಕ್ಕೇ ಬರ್ಟ್ರಂಡ್ ರಸೆಲ್ ಒಮ್ಮೆ ಹೇಳಿದ್ದು, ತತ್ತ್ವಶಾಸ್ತ್ರ ಜಿಜ್ಞಾಸೆಗೆ

ಹೊರಡುವ ಮೊದಲು ಒಂದಂಶ ಖಾತ್ರಿ ಮಾಡಿಕೊ; ನೀನು ತರ್ಕಕ್ಕೆ ಬದ್ಧನಾಗುತ್ತೀಯೋ, ಪ್ರಜ್ಞಾವಂತಿಕೆಯನ್ನು ಮಾನ್ಯ ಮಾಡುತ್ತೀಯೋ, ಎಂದು. ತತ್ತ್ವಶಾಸ್ತ್ರಜ್ಞರು ಬಹು ವೇಳೆ ತರ್ಕಕ್ಕೆ ಬದ್ಧರು. ಆದರೆ ಸಾಮಾನ್ಯ ಜನ ಪ್ರಜ್ಞಾವಂತರು. ಅದೇ ವ್ಯತ್ಯಾಸ.

ಸ್ವಾತ್ಯಕವಾದವೆಂದರೆ ನಮ್ಮ ಸಂವೇದನೆಗಳಿಗೆ ಹೊರತಾಗಿಯೂ ವಸ್ತುಗಳುಂಟೆ ಎಂಬುದಕ್ಕಷ್ಟೆ ಸೀಮಿತವಾಗಬೇಕಾಗಿಲ್ಲ. ಬೇರೆಯೂ ಉಂಟು. ಉದಾಹರಣೆಗೆ, ನಮ್ಮ ಈ ಪ್ರಪಂಚ ಇದೆಯಲ್ಲ, ಅದು ಆಲೋಚನೆ ಮತ್ತು ಊಹೆಗಳನ್ನು ಮೀರಿ ನಿಲ್ಲುವಷ್ಟು ಗಟ್ಟಿಯಾದುದಲ್ಲ, ಎಂದು ಹೇಳಿ ಹೊರಡಬಹುದು. ಲೂಯಿಸ್ ಮಮ್‌ಫರ್ಡ್ ಎಂಬಾತ ಹಾಗೆ ಹೇಳಿದ್ದ: "ಮನುಷ್ಯನ ಕಲ್ಪನೆಗಳು ಕೆಲವೇಳೆ ಅವನನ್ನು ತಪ್ಪುದಾರಿಗೆ ಎಳೆದಿವೆ, ಬೆಳಕನ್ನರಸಿ ಹೋಗಿ ಕತ್ತಲಲ್ಲಿ ಮುಳುಗುವಂತೆ ಮಾಡಿವೆ. ಪರಿಪೂರ್ಣತೆಯ ಆಶಯ ಹೊಂದಿ ಅವನು ಕೆಲವೇಳೆ ಅಮಾನವೀಯತೆ ಮೆರೆದಿದ್ದಾನೆ, ಕ್ರೂರಿಯಾಗಿದ್ದಾನೆ, ಜೀವ ವಿರೋಧಿ ಆಗಿದ್ದಾನೆ. ವಿಜ್ಞಾನವೇನೋ ವಸ್ತುಗಳನ್ನು ವಸ್ತುನಿಷ್ಠವಾಗಿಸಲು ಶ್ರಮಿಸಿದೆ, ಆದರೆ ಅದಕ್ಕಿಂತಲೂ ಸುಲಭವಾಗಿ ಪುರಾಣ ಮತ್ತು ಮತಧರ್ಮ ಎರಡೂ ವಸ್ತುಗಳನ್ನು ಮೂರ್ತೀಕರಿಸಿವೆ. ಏನೇ ಇರಲಿ, ಇದೆಲ್ಲದರ ಅಂತಿಮ ಪರಿಣಾಮ ತನ್ನ ಸನ್ನಿವೇಶ ಮತ್ತು ಗುರಿಗಳ ಬಗೆಗಿನ ಆಳವಾದ ಅರಿವು ಪಡೆಯುವುದೇ ಆಗಿದೆ. ಅವನ ಪ್ರಾಯೋಗಿಕ ಕ್ರಿಯೆಗಳಷ್ಟೇ ಆಗಿದ್ದರೆ ಇಂತಹ ಅರಿವು ಸಾಧ್ಯವಾಗುತ್ತಿರಲಿಲ್ಲ. ತನ್ನ ಪಶುಸಮಾನ ಸ್ಥಿತಿಯನ್ನು ಮೀರಿ ಬೆಳೆಯಲು ಮಾನವ ಕೆಲವು ಆದರ್ಶಗಳನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಅವನ ಮನೋಭಾವನೆ ಮತ್ತು ಉಚ್ಚಮಟ್ಟದ ಸ್ವಂತಿಕೆಯು ಮಾನವ ಸಮಾಜದ ಸೀಮಿತ ವ್ಯವಹಾರಗಳನ್ನು ಮೀರಿ ಬೆಳೆಯಲು ಅವನಿಗೆ ಅನುವು ಮಾಡಿಕೊಟ್ಟಿದೆ."

ಹೀಗೆಂದ ಮಮ್‌ಫರ್ಡ್‌ನ ಇಂಗಿತವೇನು? ಮಾನವನ ಜೀವನದಲ್ಲಿ ವಿಜ್ಞಾನ ಮತ್ತು ಪುರಾಣ ಜೊತೆ ಜೊತೆಯಾಗಿ ಕೆಲಸ ಮಾಡಿವೆ, ಎಂದು. ವಿಜ್ಞಾನದ ಹಾದಿ ಕ್ಲಿಷ್ಟ, ಆದರೆ ಪುರಾಣದ ಹಾದಿ ಸಲೀಸು; ಕೆಲವೇಳೆ ಪುರಾಣವು ತಪ್ಪುದಾರಿಗೆಳೆಯುವಂತೆ ತೋರಿದರೂ ಒಟ್ಟಾರೆಯಾಗಿ ಅದು ಗಂಭೀರವಾದ್ದು, ಎಂದು. ಅಂದರೆ, ಪಶುಸಮಾನ ಗತಿಯಾಚೆಗೆ ಬೆಳೆಯಲು ವಿಶ್ವದ ಬಗೆಗಿನ ವೈಜ್ಞಾನಿಕ ತಿಳಿವು ಸಾಲದು, ಅದಕ್ಕೆ ಆದರ್ಶಗಳನ್ನು ಕಟ್ಟಿಕೊಳ್ಳಬೇಕು, ಮನೋಭಾವನೆ ಬೆಳೆಸಿಕೊಳ್ಳಬೇಕು, ಆಗಮಾತ್ರವೇ ಆಶಯಗಳು ಅರ್ಥವಾಗುತ್ತವೆ, ಎಂದರ್ಥ. ಮನೋಭಾವನೆ ಎಂಬುದು ಆಯಾ ಯುಗದ ಚಿಂತನೆಯನ್ನು ವ್ಯಾಪಿಸುವ ಆದರ್ಶಗಳ ಸಂಕೀರ್ಣ. ಆದ್ದರಿಂದ ಯಾವುದು ಸರಿಯಾದ ಆಶಯವೆಂಬುದನ್ನು ಅದು ಪ್ರತಿಫಲಿಸುತ್ತದೆ, ಅದು ಬಹುಜನಾಭಿಪ್ರಾಯವಾಗಿರುತ್ತದೆ. ಮಮ್‌ಫರ್ಡ್‌ನ ಸಿದ್ಧಾಂತ ಮತ್ತು ಆಚರಣೆಯಲ್ಲಿ ಮನೋಭಾವನೆಯು ವಾಸ್ತವವನ್ನು ಹೊಂದಿಕೊಂಡು ಹೋಗುವುದಿಲ್ಲ; ಬದಲಾಗಿ, ಮೂಲತಃ ಮಾನವನ ಅಗತ್ಯಗಳನ್ನು ಮನೋಭಾವನೆಯು ಎಷ್ಟರಮಟ್ಟಿಗೆ ಪ್ರತಿನಿಧಿಸುತ್ತದೆಂಬುದು ಮುಖ್ಯವಾಗುತ್ತದೆ. ಭೌತಿಕ ಮತ್ತು ಸಾಮಾಜಿಕ ಸನ್ನಿವೇಶಗಳನ್ನು ವಸ್ತುನಿಷ್ಠವಾಗಿ ನೋಡುವ ಬದಲು ವ್ಯಕ್ತಿನಿಷ್ಠವಾಗಿ ಮಾನವನ 'ಆತ್ಮ'ವನ್ನು ನೋಡುವ ಬಗೆ ಇದು. ಈ 'ಆತ್ಮ'ವು ಪುರಾಣದಲ್ಲಿ ಮತ್ತು ಕನಸಿನಲ್ಲಿ ಮೈದೋರುತ್ತದೆ; ಆದರೆ, ವಿಜ್ಞಾನವು ಲೆಕ್ಕಾಚಾರದಿಂದ ನಿರ್ದಿಷ್ಟವಾಗಿ ಏನನ್ನೋ ಪ್ರತಿಪಾದಿಸಿಬಿಡುತ್ತದೆ. ಎಂಥ ಅದ್ಭುತ ವಿಚಾರ ಇದು! ಎಂಥದೋ

ಕವಿಪ್ರತಿಭೆಯು ಮಾನವನ ಸತ್ವವನ್ನು ಹೊರಗೆಡಹುತ್ತದೆ, ಆದ್ದರಿಂದ ವಿಜ್ಞಾನಕ್ಕಿಂತ ಅದೇ ಮೇಲು, ಎಂಬುದು ಆ ವಿಚಾರ.

ಇದೊಂದು ಆಳವಾದ ಚಿಂತನೆ ಆಗುವುದಕ್ಕಿಂತಲೂ ಬಗ್ಗಡದ ನೀರಾಗುವುದೇ ಹೆಚ್ಚು. ಬಗ್ಗಡವನ್ನು ಆಳವಾದ್ದೆಂದು ತಪ್ಪಾಗಿ ತಿಳಿಯುವುದು ಪರಿಕಲ್ಪನೆಗಳ ಚಿಂತನೆಯ ಒಂದು ಲಕ್ಷಣ. ಅದು ಸ್ವಾತ್ಮೈಕವಾದವಂತೂ ಆಗೇ ತೀರುತ್ತದೆ. ಏಕೆ ಹಾಗೆನ್ನುವುದು? ವಿಜ್ಞಾನವು ವಿಶಿಷ್ಟ ತಂತ್ರಗಳನ್ನುಳ್ಳದ್ದು. ಹಾಗಿದ್ದೂ ಅದಕ್ಕೆ ಮೂಲಭೂತ ಸತ್ಯ ದೊರಕದು, ದೊರಕುವುದು ಕೇವಲ ಆನುಷಂಗಿಕ ಸತ್ಯ ಎಂದು ಹೇಳಿದರೆ ಏನರ್ಥ ಗೊತ್ತೆ? ಮೂಲಭೂತ ಸತ್ಯದ ಬಗೆಗಿನ ಒಳ ಅರಿವು ಅವೈಜ್ಞಾನಿಕ ಮತ್ತು ಅತಾರ್ಕಿಕ ಪ್ರಕ್ರಿಯೆಗಳಿಂದ ಲಭಿಸುವಂಥದಕ್ಕೆ ಮಾತ್ರ ಸೀಮಿತವಾಗುತ್ತದೆ. ಅಂದರೆ, ನಾವು ವಾಪಸ್ಸು ಆ ನಮ್ಮ ಚಿಕ್ಕ ಕೋಣೆಗೇ ಬಂದೆವು; ಆತ್ಮನ ಕೋಟೆಗೆ! ಅಲ್ಲಿ ಎಂಥ ಪ್ರಶ್ನೆಗಳಿರುತ್ತವೆ? ಕೊಠಡಿ ಸ್ವಚ್ಛವಾಗಿದೆಯೆ, ಜಾಗ ವಿಶಾಲವೆ, ಕುರ್ಚಿ ಒರೆಸಿದೆಯೆ, ಇತ್ಯಾದಿ. ಎಲ್ಲದರಲ್ಲೂ ಏನೋ ಒಂದು ನಿಯಮವಿದ್ದಂತೆ ಭಾಸವಾಗುತ್ತದೆ. ಇಲ್ಲಿ ಅಭಿಪ್ರಾಯಕ್ಕೆ ಮಹತ್ವವಿಲ್ಲ; ಬಟ್ಟೆ ಹಾಕಿಕೊಳ್ಳುವುದು, ಕಳಚುವುದು ಇದ್ದಂತೆ ಅದು. ಚೆನ್ನಾಗಿ ಕಾಣಬೇಕು, ಆಕರ್ಷಕವಾಗಿರಬೇಕು, ಬೆತ್ತಲಾಗಿರಬಾರದು, ಇತ್ಯಾದಿ.

ಅಭಿಪ್ರಾಯಗಳನ್ನು ಕುರಿತ ಈ ಅವಗುಣ ಮೊದಲಿಗೆ ತತ್ತ್ವಶಾಸ್ತ್ರಜ್ಞರದು ಮಾತ್ರ ಆಗಿತ್ತು, ಆದರೆ ಈಗ ಸಾರ್ವಜನಿಕರಿಗೆ ವಿಷಯಗಳನ್ನು ಮನದಟ್ಟು ಮಾಡಿಕೊಡುವಂಥವರೂ ಅದೇ ಚಾಳಿ ಬೆಳೆಸಿಕೊಳ್ಳುತ್ತಿದ್ದಾರೆ. ಅವರೆಲ್ಲರ ಪ್ರಕಾರ ವಿಶ್ವದ ಅಂತಿಮ ರಹಸ್ಯಗಳೆಲ್ಲಾ ಆತ್ಮನ ಅಂತರಾಳದಲ್ಲೇ ಹುದುಗಿವೆ, ಆದರೆ ಆ ಅಂತರಾಳವನ್ನು ಹೊಗಲಾಗುವುದಿಲ್ಲ. ಅಲ್ಲದೆ, ಎಲ್ಲ ಆತ್ಮಗಳೂ ಈ ಲಕ್ಷಣವನ್ನು ಹೊಂದಿಲ್ಲ. ಬೌದ್ಧಿಕ ಶ್ರೀಮಂತಿಕೆಯ ಕೆಲವು ಮಂದಿ ಇದ್ದಾರಲ್ಲ, ಅವರು ಮಾತ್ರ ಈ ಸಾಮರ್ಥ್ಯ ಉಳ್ಳವರೆಂದು ಅವರೇ ತೀರ್ಮಾನಿಸಿಕೊಂಡುಬಿಟ್ಟಿದ್ದಾರೆ ! ಮಿಕ್ಕ ಆತ್ಮಗಳಲ್ಲಿ ಚಿನ್ನವೇ ಇಲ್ಲವಲ್ಲಾ ಎಂದು ಅವರಿಗೆ ಕಸಿವಿಸಿ, ಪಾಪ. ಇದರ ಮುಂದಿನ ಹೆಜ್ಜೆಯಲ್ಲಿ ಒಂದು ವಿಚಿತ್ರ ಸಹಕಾರಿ ಧಂಧೆ ಆರಂಭವಾಗುತ್ತದೆ: ಬೌದ್ಧಿಕ ಸಂಪತ್ತನ್ನುಳ್ಳವರು ಮತ್ತು ಧನ ಸಂಪತ್ತನ್ನುಳ್ಳವರು ಒಟ್ಟಾಗಿ ಉಚಿತವಾಗಿ ಅವರ ಮಾಲನ್ನು ಹಂಚುತ್ತಾರೆ. ಧನ ಹಂಚಲು ಹಿಡಿತವಿರುತ್ತದೆ, ಆದರೆ ಆತ್ಮನ ಜ್ಞಾನ ಹಂಚುವಾಗ ಅವರದು ಕೊಡುಗೈ. ಈಚಿನ ವರ್ಷಗಳಲ್ಲಿ ಈ ಸ್ವಾತ್ಮೈಕವಾದಿಗಳ ತಂಡ ಸಾರ್ವಜನಿಕರ ಮಧ್ಯೆ ರಾಜಕೀಯ ಮತ್ತು ಸೇನಾ ವ್ಯವಹಾರಗಳಲ್ಲಿ ಚತುರವೆಂಬಂತೆ ಕಾಣಿಸಿಕೊಳ್ಳುತ್ತಿದೆ. ಅವರಿಗೆ ವಾಸ್ತವವಾಗಿ ಆ ಕ್ಷೇತ್ರಗಳ ಒಳ–ಹೊರಗುಗಳೆಲ್ಲಾ ತಿಳಿದಿರಬೇಕಾಗಿಲ್ಲ, ಆದರೂ ಅವರ ಪಾಂಡಿತ್ಯಕ್ಕೆ ಎಲ್ಲೆಯಿಲ್ಲ. ಅವರು ಎಂತೆಂತಹ ಘನ ಹೇಳಿಕೆಗಳನ್ನು ನೀಡಿಬಿಡುತ್ತಾರೆ ಗೊತ್ತೆ? "ನಮ್ಮ ಕಾಲದಲ್ಲಿ ಮ್ಯೂನಿಕ್ ಸಮ್ಮೇಳನವು ಶಾಂತಿಯನ್ನು ಸ್ಥಾಪಿಸಿತು, ಯಾವ ಕೋಟಿ–ಕೊತ್ತಲಗಳೂ ಇಲ್ಲದೆಯೇ ಚೆಕೋಸ್ಲೋವಾಕಿಯ ಸುಭದ್ರವಾಗಿತ್ತು, ಜರ್ಮನಿ ಮತ್ತು ರಷ್ಯ ಎಂದೆಂದೂ ಪರಸ್ಪರ ಸೆಣಸಾಟ ನಡೆಸುವುದಿಲ್ಲ, ಜರ್ಮನಿಯಾಗಲಿ, ಜಪಾನಾಗಲಿ ಅಮೆರಿಕಾ ಮೇಲೆ ಎಂದೆಂದೂ ಧಾಳಿ ಮಾಡುವುದಿಲ್ಲ, ಇತ್ಯಾದಿ." ಇರಲಿ, ಜರ್ಮನಿಯು ರಷ್ಯದ ಮೇಲೆ ಆಕ್ರಮಣ ನಡೆಸಿತಲ್ಲ ಅದು ವಿಶ್ವದ ಕಮ್ಯುನಿಸ್ಟರಿಗೆ ಮಾತ್ರ ಘಾಸಿ ತಂದಿತೆಂಬುದು ಇವರ ಮತ. ಆಗ ಇವರೆಲ್ಲರ ಭವಿಷ್ಯನುಡಿ ಹೇಗಿತ್ತು? ಮಾರ್ಟಿನ್

ಡೈಸ್ ಹೇಳಿದ, ಇನ್ನು ಮೂವತ್ತು ದಿನಗಳಲ್ಲಿ ರಷ್ಯ ಜರ್ಮನಿಯ ಅಧೀನವಾಗುತ್ತದೆ, ಎಂದು. ಡ್ರೂ ಪಿಯರ್ಸನ್ ಮತ್ತು ರಾಬರ್ಟ್ ಅಲೆನ್ ಹೇಳಿದ್ದಿದು: ರಷ್ಯವು ಜರ್ಮನಿಯನ್ನು ಹಿಮ್ಮೆಟ್ಟಿಸುತ್ತಿದೆಯೆಂಬ ವರದಿಗಳೇನೋ ಬರುತ್ತಿವೆ; ಆದರೆ ಅಮೇರಿಕಾಕ್ಕೆ ಪ್ರಬಲ ನಂಬಿಕೆ ಉಂಟು, ನಾಝಿಗಳ ಮಹಾನ್ ಶಕ್ತಿಯನ್ನು ಎದುರಿಸುವಲ್ಲಿ ಕೊನೆಗೆ ರಷ್ಯ ಸೋಲಲೇಬೇಕು, ಎಂದು.

ಯೂಜಿನ್ ಲಿಯಾನ್ಸ್ ಹೇಳಿದ: "ಒಂದಂತೂ ಖಂಡಿತ, ಕಕೇಶಿಯಾದ ದೊಡ್ಡಕಳ್ಳ ಜುಗಾಶ್ವಿಲಿಯನ್ನು ಜೊಸೆಫ್ ಸ್ಟಾಲಿನ್ ಎನ್ನುತ್ತಾರೆ; ಅವನು ಮುಖ ಮುಚ್ಚಿಕೊಂಡು ಸಾಯುವಂತಾಗುತ್ತದೆ ನೋಡುತ್ತಿರಿ." ಫ್ರೆಡಾ ಯೂಟ್ಲಿ ಪ್ರಕಾರ ಕಾಲು ಶತಮಾನ ಬಾಳಿದ್ದ ಸೋವಿಯೆತ್ ನಾಡು ಯುದ್ಧದಲ್ಲಿ ಪತನವಾಗುತ್ತದೆ; ಅದು ಆಕ್ರಮಣದಿಂದ ಸೋಲುಣ್ಣುತ್ತದೆ ಇಲ್ಲವೆ ಚೂರುಚೂರಾಗಿಹೋಗುತ್ತದೆ.

ಎಂಥಾ ಭವಿಷ್ಯವಾಣಿಗಳು! ಸೋವಿಯೆತ್ ಸರ್ಕಾರವು ಜನರ ಮೇಲೆ ದಬ್ಬಾಳಿಕೆ ನಡೆಸುತ್ತಿತ್ತೆಂಬ ಪೂರ್ವಗ್ರಹದ ಪರಿಣಾಮವೇ ಇಂತಹ ತೀರ್ಮಾನಗಳು. ಸೋವಿಯೆತ್ ಗೆರಿಲ್ಲಾಗಳು ಸಶಸ್ತ್ರ ಹೋರಾಟ ನಡೆಸಿ ಸೋವಿಯೆತ್ ಸೈನ್ಯದ ಯಶಸ್ಸನ್ನು ಖಾತರಿಗೊಳಿಸಿದ್ದು ಇತಿಹಾಸ. ಆದರೆ ಈ ನಿಪುಣರೆಲ್ಲಾ ನೈಜ ಘಟನೆಗಳನ್ನು ಲೆಕ್ಕಿಸಲಿಲ್ಲವಾದ್ದರಿಂದ ಅವರು ಹೇಳಿದ್ದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ಸಂಗತಿಗಳು ಬೆಳೆದವು. ಇಷ್ಟು ಅಬದ್ಧವಾಗಿ ವಿಶ್ಲೇಷಣೆ ಮಾಡಿದ್ದವರಿಗೆ ಕನಿಷ್ಠ ಶಿಕ್ಷೆಯೂ ಇಲ್ಲ. ಅವರಂತೆ ಮಾತನಾಡುವವರು ಇಂದಿಗೂ ಇದ್ದಾರೆ. ಉದಾಹರಣೆಗೆ, ಲೂಯಿ ಬ್ರೋಂಫೀಲ್ಡ್ ಮಾತು ನೋಡಿ: "ಅಮೆರಿಕಾ ಸಮೃದ್ಧವಾದ ದೇಶ, ಆದರೆ ಸದ್ಯದಲ್ಲೇ ಜನಕ್ಕೆ ತಿನ್ನಲು ಏನೂ ಇರುವುದಿಲ್ಲ." ಇದನ್ನಾತ ಹೇಳಿದ್ದುದು ಎರಡನೆಯ ಯುದ್ಧದ ಸಂದರ್ಭದಲ್ಲಿ. ಇನ್ನೊಬ್ಬ ಹೇಳಿದ್ದ, ಅಮೇರಿಕಾದಲ್ಲಿ ಇನ್ನೇನು ಕಮ್ಯುನಿಸ್ಟರ ಆಡಳಿತ ಬಂದೇ ಬಿಟ್ಟಿತು, ಎಂದು. ಅಧ್ಯಕ್ಷೀಯ ಚುನಾವಣೆ ಬಂದಾಗಲೆಲ್ಲ ಈ ಗುಮ್ಮನೂ ಬರುತ್ತದೆ ಅಮೆರಿಕಾದಲ್ಲಿ.

ಇದೆಲ್ಲಾ ಹೇಗೆ ಸಾಧ್ಯ?

ಈ ನಿಪುಣರೆನಿಸಿಕೊಂಡವರು ನಿಪುಣರಲ್ಲ, ಕೇವಲ ಪ್ರಚಾರಕರು. ಅವರ ಕೆಲಸ ವಿಶ್ಲೇಷಣೆಯಲ್ಲ, ತಮಗೆ ಬೇಕಾದಂತಹ ಕ್ರಿಯೆಗೆ ಪ್ರಚೋದನೆ ನೀಡುವುದು ಉದ್ದೇಶ. ಅದಿರಲಿ, ನಿಪುಣನು ಎಷ್ಟು ನಂಬಿಕೆಗೆ ಅರ್ಹ? ಅವನ ಹೇಳಿಕೆ ಒಂದು ಕಡೆ, ಅವನ ನಿಯಂತ್ರಣದಲ್ಲಿಲ್ಲದ ಪ್ರಪಂಚ ಇನ್ನೊಂದೆಡೆ. ಅವನು ಏನು ಮಾಡುತ್ತಾನೆಂದರೆ ತನ್ನನ್ನು ತಾನು ನಂಬಿಸಿಕೊಂಡುಬಿಡುತ್ತಾನೆ. ಅದರಲ್ಲಿ ಎಂಥದೋ ತರ್ಕ ಹುಡುಕಿಕೊಂಡು ಅದು ಜನರಿಗೆ ಆಪ್ಯಾಯಮಾನವಾಗುತ್ತದೆಂದು ತನ್ನನ್ನು ತಾನೇ ಪ್ರೇರೇಪಿಸಿಕೊಳ್ಳುತ್ತಾನೆ. ಅವನ ಆಲೋಚನೆಯೇ ಅವನಿಗೆ ಸತ್ಯ. ಇನ್ನೊಂದು ಬಗೆಯಲ್ಲಿ ನೋಡೋಣ: ಅವನ ಇಚ್ಛೆಯಂತೆ ನಾವು ನಡೆಯುವಂತಾಗಬೇಕೆಂಬ ಆಶಯ ಅವನದು; ಅದಕ್ಕೆ ತಕ್ಕಂತೆ ಬರೆಯುವುದನ್ನು ಕಲಿಯುತ್ತಾನೆ. ಅವನ ಅಭಿಪ್ರಾಯ ನಮಗೆ ಸಮ್ಮತವಾದರೆ ಅವನ ನಿರೀಕ್ಷೆ ಫಲಿಸುತ್ತದಲ್ಲವೆ? ನಿರೀಕ್ಷೆ ಫಲಿಸಲಿಲ್ಲವೆನ್ನಿ, ಏನೂ ಬಾಧಕವಿಲ್ಲ; ಏಕೆಂದರೆ ಅಂಥದೊಂದು ಬೆಳವಣಿಗೆಯ ಸಾಧ್ಯತೆಯನ್ನೇನೂ ಅಳಿಸಿಹಾಕಲಾಗುವುದಿಲ್ಲವಲ್ಲ. ನಿರೀಕ್ಷೆ ಫಲಿಸಿದರೆ ಈ ನಿಪುಣ ವಿಲಿಯಂ ಜೇಮ್ಸ್ ಆಗುತ್ತಾನೆ, ಫಲಿಸದಿದ್ದರೆ

ಮುಸೋಲಿನಿ ಆಗುತ್ತಾನೆ. (ಜೇಮ್ಸ್ ಎಂದೂ ಫ್ಯಾಸಿಸ್ಟ್ ಆಗಿರಲಿಲ್ಲ, ಆದರೆ ಅವನ ವ್ಯಾವಹಾರಿಕ ಉಪಯುಕ್ತತೆಯನ್ನು ಮುಸೋಲಿನಿ ಮೆಚ್ಚಿಕೊಂಡಿದ್ದ.) ಜೇಮ್ಸ್ ಸತ್ಯದ ಬಗ್ಗೆ ಒಂದು ಸಿದ್ಧಾಂತ ರೂಪಿಸಿದ್ದ; ಮಾನವನ ತುರ್ತು ಆಶಯಗಳು ಬೇಗನೆ ಫಲಿಸುತ್ತವೆಂದು. ನಿಮಗೇನೋ ಬೇಕು, ಅದರಲ್ಲಿ ಪೂರ್ಣ ನಂಬಿಕೆ ಇದ್ದರೆ ಅದು ತಪ್ಪದೆ ಫಲಿಸುತ್ತದೆಂಬುದು ಅವನ ಸಿದ್ಧಾಂತ. ಅದಕ್ಕೆ ನಿದರ್ಶನಗಳನ್ನು ಅವನು ಕಲೆಹಾಕಿದ್ದ: ಯಾರೋ ಒಬ್ಬಾಕೆ ತನ್ನನ್ನು ಪ್ರೀತಿಸಬೇಕೆಂಬ ಉತ್ಕಟೇಚ್ಛೆ ಇದ್ದರೆ ಅವಳು ಒಲಿದೇ ಒಲಿಯುತ್ತಾಳೆ. ಅಥವಾ, ಯಾವುದೋ ಒಂದು ಸತ್ಯದ ಬಗ್ಗೆ ನಿಮಗೆ ಉತ್ಸಾಹವಿದೆ. ಆ ಸತ್ಯ ಅಸ್ತಿತ್ವಕ್ಕೆ ಬರುತ್ತದೆ. ಬಡ್ತಿ, ವರದಾನ, ನೇಮಕಾತಿ, ಇವನ್ನೆಲ್ಲಾ ಯಾರು ಜೀವಂತವಾದ ಸಾಧ್ಯತೆಯೆಂದು ಅನುಭವಿಸುತ್ತಾರೋ ಅವರಿಗೆ ಅವು ದಕ್ಕುತ್ತವೆ. ಮುಖ್ಯವಾದ್ದು ಉತ್ಕಟತೆ, ಅಷ್ಟೆ.

ಈ ಸಿದ್ಧಾಂತ ಸರಿಯೇ ಎಂದು ಪರೀಕ್ಷಿಸಲು ನನಗೆ ಅವಕಾಶ ದೊರೆಯಲಿಲ್ಲ, ಏಕೆಂದರೆ ಅದು ತಿಳಿಯುವ ಮೊದಲೇ ಆ್ಯಲಿಸ್ ಮತ್ತು ನಾನು ಪರಸ್ಪರ ಅನುರಾಗ ಬೆಳೆಸಿಕೊಂಡುಬಿಟ್ಟಿದ್ದೆವು. ಇನ್ನು ಬಡ್ತಿ, ಮುಂತಾದುವಕ್ಕೆ ಬಂದರೆ ಅವನ್ನೂ ನನಗೆ ಪರೀಕ್ಷಿಸಲಾಗಿಲ್ಲ; ಏಕೆಂದರೆ, ಅವುಗಳ ಬಗ್ಗೆ ಅಷ್ಟೊಂದು ಉತ್ಕಟತೆಯನ್ನು ಸಾಧಿಸುವುದು ನನ್ನಿಂದಾಗಿಲ್ಲ. ನನಗೆನಿಸುತ್ತದೆ, ಬಡ್ತಿ ಮುಂತಾದುವಕ್ಕೆ ನಾನಲ್ಲದೆ ಬೇರೆ ಹಲವು ಕಾರಣಗಳು ಕೂಡಿ ಬರಬೇಕು, ಎಂದು; ಆದರೆ ಆ ಕಾರಣಗಳೆಲ್ಲ ನನ್ನ ಹಿಡಿತದಲ್ಲಿರುವುದಿಲ್ಲ. ಆದ್ದರಿಂದ ಉತ್ಕಟೇಚ್ಛೆಯಿಂದ ಎಲ್ಲ ಆಶಯಗಳು ಫಲಿಸುತ್ತವೆಂದು ಭಾವಿಸುವುದರಲ್ಲಿ ಸುಖವೇನೂ ಇಲ್ಲ. ಆದಾಗ್ಯೂ ಒಂದು ವಿಶೇಷವಿದೆ: ಯಾವುದೋ ಸಂಗತಿ ಸತ್ಯವಾಗಬೇಕೆಂಬ ಇಚ್ಛೆಯು ಸತ್ಯವಾಗಿಯೂ ಪರಿಣಮಿಸಲು ಮಾನಸಿಕ ಪ್ರಯತ್ನ ಅಗಾಧವಾಗಿರಬೇಕು. ತದೇಕಚಿತ್ತ ಅನ್ನುತ್ತಾರಲ್ಲ ಅದು ಪ್ರಜ್ವಲವಾಗುತ್ತದೆ ಮತ್ತು ಇಂಧನ ಇರುವವರೆಗೆ ಅದು ಜ್ವಲಿಸುತ್ತಲೇ ಇರುತ್ತದೆ. ನಿಪುಣರ ಕೆಲಸವೇನೆಂದರೆ ಈ ಇಂಧನದ ಸರಬರಾಜು ಮಾಡುವುದು. ಎಲ್ಲಾ ತಕ್ಷಣದಲ್ಲೇ ಫಲಿಸುವಂತೆ ಮಾಡಲು ಅವರು ಸಮರ್ಥರಲ್ಲ, ಆದರೆ ಆ ದಿಕ್ಕಿನಲ್ಲಿ ಅಗತ್ಯವಾದ ಭಾವನೆಗಳನ್ನು ಮತ್ತು ಕನಸುಗಳನ್ನು ಅವರು ಕಟ್ಟಿಕೊಡಬೇಕು. ನಮ್ಮ ಇಚ್ಛೆ-ಅನಿಚ್ಛೆಗಳನ್ನು, ನಮ್ಮ ತಿಳುವಳಿಕೆ ಮತ್ತು ಅಜ್ಞಾನ, ನಮ್ಮ ಸಂಶಯಗಳು-ಆತಂಕಗಳು-ಭರವಸೆಗಳು-ವ್ಯಸನಗಳು-ಮೆಚ್ಚುಗೆಗಳು, ಇವನ್ನೆಲ್ಲಾ ಅವರು ಆಲೋಚಿಸಿ ನೋಡುತ್ತಾರೆ. ಇಷ್ಟೆಲ್ಲಾ ತಿಳಿದ ಮೇಲೆ ನಮ್ಮಲ್ಲೊಂದು ಶ್ರದ್ಧೆಯನ್ನು ಬಿತ್ತುತ್ತಾರೆ: ಮನಸ್ಸಿನ ಆಂತರ್ಯವು ಬಹಿರಂಗ ತಿಳಿವಿಗಿಂತಲೂ ಹೆಚ್ಚು ಮುಖ್ಯ, ಎಂದು. ಮನಸ್ಸಿನ ಆಂತರ್ಯದ ಆಳವಾದ ನೆಲೆ ಇರುವುದು ಅದೇನನ್ನೋ ಪಡೆಯಬೇಕು ಅಥವಾ ಸಾಧಿಸಬೇಕು ಎಂಬ ತುಡಿತದಲ್ಲಿ. ಆಗ ಅನುಭವವನ್ನು ಆಲೋಚನೆ ಜಯಿಸಿಬಿಡುತ್ತದೆ, ಭಾವೋದ್ರೇಕವು ಆಲೋಚನೆಯನ್ನು ಜಯಿಸಿಬಿಡುತ್ತದೆ.

ಫ್ಯಾಸಿಸಂ ಬಗೆಗಿನ ಕೆಲವು ವಿವರಣೆಗಳನ್ನು ನೋಡೋಣ. ಆಲ್‌ಫ್ರೆಡೊ ರೋಕೊ ಹೇಳಿದ್ದು: ಫ್ಯಾಸಿಸಂ ಎಂಬುದು ಅತಿ ಮುಖ್ಯವಾಗಿ ಒಂದು ಕ್ರಿಯೆ ಮತ್ತು ಭಾವನೆ. ಅದು ಅಪ್ರಜ್ಞಾಪೂರ್ವಕವಾಗಿ ಜನಾಂಗೀಯ ಸಹಜ ಪ್ರವೃತ್ತಿಯನ್ನು ಹೊಡೆದೆಬ್ಬಿಸುತ್ತದೆ. ಆದ್ದರಿಂದ ಜನರ ಮನಸ್ಸನ್ನದು ಕಲಕುತ್ತದೆ, ಒಂದು ರಾಷ್ಟ್ರೀಯ ಆಶಯದ ಅಲೆಯನ್ನೆಬ್ಬಿಸುತ್ತದೆ.

ಅಡಾಲ್ಫ್ ಹಿಟ್ಲರ್ ಹೇಳಿದ್ದು: ಜನ ಸಂಕಟಕ್ಕೆ ಸಿಲುಕಿದ್ದು ತಮ್ಮ ಸಹಜ ಪ್ರವೃತ್ತಿಯನ್ನು ಕೈ ಬಿಟ್ಟಿದ್ದರಿಂದ, ತೇಪೇದಾರಿ ಬೌದ್ಧಿಕ ಶಿಕ್ಷಣ ಪಡೆದದ್ದರಿಂದ.... ನಮ್ಮ ರಾಷ್ಟ್ರೀಯ ಸಮಾಜವಾದಿ ಕ್ರಾಂತಿಯ ಚೈತನ್ಯಪೂರ್ಣ ತಳಹದಿಯನ್ನು ಹೊರಗಿನ ನಮ್ಮ ಜನ ಇನ್ನೂ ಸರಿಯಾಗಿ ಗುರುತಿಸಿಲ್ಲ. ಅವರಿನ್ನೂ ಪ್ರಜಾಪ್ರಭುತ್ವವನ್ನು ಮರ್ದಿಸುವ ಸರ್ವಾಧಿಕಾರ ಎಂದು ಮಾತನಾಡುತ್ತಾ ಕೂತಿದ್ದಾರೆ. ಜರ್ಮನಿಯ ನಮ್ಮ ಕ್ರಾಂತಿಯು ಅತ್ಯುತ್ಕೃಷ್ಟ ಪ್ರಜಾಪ್ರಭುತ್ವವೆಂಬುದನ್ನು ಅವರು ತಿಳಿದಿಲ್ಲ. ನಾನೂ ಜನರಲ್ಲಿ ಒಬ್ಬ, ನಾನೇನೂ ವಿದೇಶಿ ಬುದ್ಧಿಜೀವಿಯಲ್ಲ, ಅಂತರರಾಷ್ಟ್ರೀಯ ಕ್ರಾಂತಿಯ ಪ್ರವಾದಿಯೂ ಅಲ್ಲ.

ಆಲ್‌ಫ್ರೆಡ್ ರೋಸೆನ್‌ಬರ್ಗ್ ಹೇಳಿಕೆ: ಪ್ರತಿಯೊಂದು ಮಹತ್ವದ ರಾಜಕೀಯ ಬದಲಾವಣೆಯೂ ಹೊರಗಿನ ಘಟನೆಗಳಿಂದ ರೂಪಿತವಾಗದೆ ಒಂದು ನಿರ್ದಿಷ್ಟ ತಾತ್ವಿಕ ಪರಿಕಲ್ಪನೆಯ ಆಧಾರದಿಂದ ಹೊರಹೊಮ್ಮುತ್ತದೆ.

ಓಸ್ವಾಲ್ಡ್ ಸ್ಪೆಂಗ್‌ಲರ್: ಜೀವನವನ್ನು ನಿರ್ದೇಶಿಸುವುದು ತರ್ಕವಲ್ಲ, ಬದಲಾಗಿ ತರ್ಕವನ್ನು ಜೀವನ ನಿರ್ದೇಶಿಸುತ್ತದೆ. ಜೀವನಕ್ಕೆ, ಮನುಕುಲಕ್ಕೆ, ಗುರಿಯೆಂಬುದೇನೂ ಇಲ್ಲ. ಭಾವನೆಗಳು ಅತಾರ್ಕಿಕವಾಗಿ ನಡೆದುಕೊಳ್ಳುವುದು ರಕ್ತಗತವಾದ ಲಕ್ಷಣ. ಪ್ರಜ್ಞೆಯೆಂಬುದು ತೀರಾ ಅಪ್ರಸ್ತುತ. ಜೀವನವೇ ಸರ್ವಸ್ವ, ಅ ಇಂದ ಕ್ಷ ವರೆಗೆ ಅದೇ ನಿಜವಾದ ಸತ್ವ. ಅದಕ್ಕೆ ವ್ಯವಸ್ಥೆ, ಪ್ರಗತಿ, ತರ್ಕ, ಎಂಬುದೇನೂ ಇಲ್ಲ. ಅದಿರುವುದು ತನಗಾಗಿ, ಅಷ್ಟೆ.

ಗ್ಲಾಡ್‌ಸ್ಟನ್ ಮರ್ರೆ: ಹತ್ತೊಂಬತ್ತನೆಯ ಶತಮಾನದ ಜರ್ಮನಿಯ ಚಿಂತಕರು ಹಾಕಿಕೊಟ್ಟ ಹಾದಿಯಲ್ಲಿ ಜರ್ಮನರು ನಡೆಯುತ್ತಿದ್ದಾರೆ, ಅಷ್ಟೆ. ಕಳೆದ ನೂರು ವರ್ಷಗಳ ಇತಿಹಾಸ ಸಾಬೀತುಪಡಿಸುವ ಅಂಶವೇನೆಂದರೆ ಸಾಮಾಜಿಕ ವಿಕಾಸಕ್ಕೆ ಬೇರೇನೂ ಪ್ರೇರಕ ಶಕ್ತಿಗಳಿಲ್ಲ, ಇರುವುದೊಂದೇ ಶಕ್ತಿ, ಅದು ಚಿಂತನೆ. ಅದಕ್ಕೆ ಬೇರಾವ ಸಾಧನಗಳೂ ಬೇಕಿಲ್ಲ.

ಸ್ವಾರಸ್ಯಕರ ಹೇಳಿಕೆಗಳಲ್ಲವೆ? [ಗೋಲ್ವಾಲ್ಕರ್ ಮತ್ತು ಮೋಹನ್ ಭಾಗವತ್ ಸಹ ಇಂಥವೇ ಮಾತುಗಳನ್ನಾಡಿಯಾರು!] ಅವುಗಳಲ್ಲಿ ಸ್ಪೆಂಗ್ಲರ್‌ನದು ಬಿಟ್ಟರೆ ಉಳಿದುವೆಲ್ಲಾ ಕಟ್ಟಾ ಫ್ಯಾಸಿಸ್ಟರ ಮಾತುಗಳೇ. ಸ್ಪೆಂಗ್ಲರ್ ಸ್ವತಃ ಫ್ಯಾಸಿಸ್ಟನಲ್ಲವೆಂದು ತೋರುತ್ತದೆ, ಆದರೆ ಅವನು ಅವರ ಹಿಂದಿನ ಪೀಳಿಗೆಯವನು, ಪೂರ್ವಜ. ಅವರೆಲ್ಲರ ಧೋರಣೆಗಳ ಉದ್ದೇಶ ಮತ್ತು ಪರಿಣಾಮಗಳನ್ನು ವೈಜ್ಞಾನಿಕ ಪದ್ಧತಿಯ ನಿಯಮಗಳೊಡನೆ ಇಟ್ಟು ತೂಗಿನೋಡಬೇಕು. ಆ ನಿಯಮಗಳು ಎರಡು: (ಅ) ಆಲೋಚಿಸುವ ವ್ಯಕ್ತಿಯ ನಿಟ್ಟಿನಿಂದ ಮಾತ್ರ ನೋಡಿದರಾಗದು, ಏಕೆಂದರೆ ಅವನ ಹೊರತಾಗಿಯೂ ವಿಶ್ವವಿದೆ, ಅಲ್ಲಿ ಘಟನೆಗಳಿವೆ, ಅವುಗಳ ಅವಲೋಕನ ಸಾಧ್ಯವಿದೆ. ಅವುಗಳೊಡನೆ ಹೇಳಿಕೆಗಳನ್ನಿಟ್ಟು ತೂಗಿನೋಡಬೇಕು; (ಆ) ಹೇಳಿಕೆಗಳನ್ನೆಲ್ಲಾ ವ್ಯವಸ್ಥಿತವಾಗಿ, ಆಂತರಿಕ ವೈರುಧ್ಯಗಳಿಲ್ಲದಂತೆ, ಜೋಡಿಸಿಕೊಳ್ಳಬೇಕು.

ಈ ನಿಯಮಗಳು ಕಠಿಣವೆನಿಸಬಹುದು. ಮೊದಲನೆಯ ನಿಯಮವು ಪ್ರಪಂಚ ನಿಜಕ್ಕೂ ಹೇಗಿದೆಯೋ ಹಾಗೆಯೇ ನೋಡಬೇಕೆಂಬ ನಿರ್ಬಂಧ ಹೇರುತ್ತದೆ. ನಮ್ಮಿಷ್ಟ ಬಂದಂತೆ ಅದನ್ನು ಬದಲಾಯಿಸಿ ನೋಡಲಾಗುವುದಿಲ್ಲ. ಕೆಲವೇಳೆ ನಮ್ಮ ತಿಳುವಳಿಕೆಯಿಂದ ಪ್ರಪಂಚವನ್ನು ಸ್ವಲ್ಪಮಟ್ಟಿಗೆ ಅಧೀನಪಡಿಸಿಕೊಳ್ಳಬಹುದು ನಿಜ, ಆದರೆ

ಅದಕ್ಕೆ ಮಿತಿಯುಂಟು. ಎರಡನೆಯ ನಿಯಮವು ತರ್ಕದ ಅಗತ್ಯವನ್ನು ಒತ್ತಿ ಹೇಳುತ್ತದೆ. ಬೇಕಾಬಿಟ್ಟಿ ಹೇಳಿಕೆಗಳನ್ನು ಪೋಣಿಸುವುದು ಅದಕ್ಕೆ ಮಾನ್ಯವಲ್ಲ. ಅವಕ್ಕೆಲ್ಲಾ ಒಂದು ಕ್ರಮ ಇರುತ್ತದೆ. ಇದೆಲ್ಲಾ ಫ್ಯಾಸಿಸ್ಟ್ ನಾಯಕರಿಗೆ ಗೊತ್ತಿಲ್ಲವೆಂದಲ್ಲ. ಅವರ ಉಪದೇಶ ಎಷ್ಟೇ ಅತಾರ್ಕಿಕ ಅಸಂಬದ್ಧತೆಯಿಂದ ಕೂಡಿದ್ದರೂ ಕಾರ್ಯಕ್ರಮ ರೂಪಿಸಿಕೊಳ್ಳುವಲ್ಲಿ ಅಂತಹ ಪ್ರಮಾದವನ್ನು ಪ್ರಜ್ಞಾಪೂರ್ವಕವಾಗಿ ಅವರೇನೂ ಮಾಡಿಕೊಳ್ಳುವುದಿಲ್ಲ. ತಮ್ಮದೂ ಸೇರಿದಂತೆ ಇಡೀ ಜನಸಮುದಾಯಗಳನ್ನು ಗುಲಾಮಗಿರಿಗೆ ತಳ್ಳಲು ಹವಣಿಸಿದಾಗ ಇವರು ಎರಡು ಕುತಂತ್ರಗಳನ್ನು ಮಾಡಬೇಕಾಗುತ್ತದೆ: (ಅ) ಪ್ರಪಂಚವು ಹೇಗಿದೆಯೋ ಹಾಗೆ ನೋಡದಂತೆ ಮಾಡುವುದು, ಮತ್ತು (ಆ) ಅವರ ಸಿದ್ಧಾಂತವನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸದಂತೆ ತಡೆಯೊಡ್ಡುವುದು.

ಅವರ ಸಿದ್ಧಾಂತವನ್ನು ನಿರೂಪಿಸುವ ಹೇಳಿಕೆಗಳು ಮೂಲತಃ ಪ್ರಚಾರದ ಉದ್ದೇಶ ಉಳ್ಳವು; ಅವನ್ನು ಒಟ್ಟಾಗಿ ಗಮನಿಸಿದರೆ ತರ್ಕದ ಎಳ್ಳಷ್ಟು ಎಳೆಯೂ ಕಾಣಸಿಗುವುದಿಲ್ಲ. ಉದಾಹರಣೆಗೆ, ಈ ಹೇಳಿಕೆಗಳನ್ನು ನೋಡಿ: ಆರ್ಯರು ನಸು ಹೊಂಬಣ್ಣದ ಕೂದಲು ಹಾಗೂ ನೀಲಿ ಕಣ್ಣು ಹೊಂದಿದ್ದಾರೆ; ಜಪಾನಿಯರು ಆರ್ಯರು; ಹಿಟ್ಲರ್ ಒಬ್ಬ ಆರ್ಯಜನಾಂಗದ ವ್ಯಕ್ತಿ. ಇವು ಪರಸ್ಪರ ಹೊಂದಾಣಿಕೆ ಇಲ್ಲದ ಹೇಳಿಕೆಗಳು. ಹಾಗಿದ್ದರೆ ಪ್ರಚಾರಕ ಏನು ಉಪಾಯ ಹೂಡಬೇಕು? ತರ್ಕದ ಮೊದಲ ಮೆಟ್ಟಿಲನ್ನು ಹಲವು ಹೇಳಿಕೆಗಳ ಸಹಾಯದಿಂದ ಕುಟ್ಟಿಹಾಕಬೇಕು. ಅದಕ್ಕಾಗಿ ಹುಟ್ಟಿಕೊಳ್ಳುವ ಹೇಳಿಕೆಗಳು ಹೀಗಿರುತ್ತವೆ: "ಸಮಾಜ ವಿಜ್ಞಾನವು ವಿಜ್ಞಾನವೆನಿಸಲಾರದು; ವಿಜ್ಞಾನವು ವಾಸ್ತವವನ್ನು ವಿರೂಪಗೊಳಿಸುತ್ತದೆ; ವಿಜ್ಞಾನ ಸಾಲದು, ನಮಗೆ ಬೇಕಾದ್ದು ಶ್ರದ್ಧೆ; ಬೌದ್ಧಿಕ ಯತ್ನದಿಂದ ಸತ್ಯದ ಆಳವನ್ನು ಅರಿಯಲಾಗದು." ಇವೆಲ್ಲವನ್ನೂ ಕ್ರೋಢೀಕರಿಸುವ ಮೇರು ಹೇಳಿಕೆ ಇದು: ನಮ್ಮ ನಿಜವಾದ ಇರವು ಆತ್ಮರೂಪದ್ದು.

ಎರಡನೆಯ ತರ್ಕ ನಿಯಮವನ್ನು ಭ್ರಷ್ಟಗೊಳಿಸುವ ಹೇಳಿಕೆಗಳು ಹೀಗಿರುತ್ತವೆ: "ತರ್ಕವೆಂಬುದು ಬಂಧನದ ಅಂಗಿ; ಹೇಗೆ ಚಿಂತಿಸುತ್ತೀಯೆ ಎಂಬುದಕ್ಕಿಂತ ಎಂಥ ಭಾವನೆಗಳಿವೆ ಎಂಬುದು ಹೆಚ್ಚು ಮುಖ್ಯ; ಭಾವನಾತ್ಮಕ ಹಾದಿ ಮಾತ್ರ ಸತ್ಯದತ್ತ ಕೊಂಡೊಯ್ಯಬಲ್ಲದು; ಈ ಅರ್ಥ ಬೆಂದ ಬೌದ್ಧಿಕ ಶಿಕ್ಷಣವನ್ನು ಧಿಕ್ಕರಿಸಿ; ನಾವು ವಿದೇಶಿ ಬುದ್ಧಿಜೀವಿಗಳಲ್ಲ; ಭಾವನೆಗಳು ರಕ್ತಗತವಾಗಿ ಹರಿಯಲು ತರ್ಕ ಬೇಕಿಲ್ಲ; ಜೀವನ ಇರುವುದು ಕೇವಲ ತನಗಾಗಿ." ಇವೆಲ್ಲದರ ಮೇರು ಹೇಳಿಕೆ: ರಕ್ತಗತ ಚಿಂತನೆಯೇ ಶ್ರೇಷ್ಠ.

ಈ ಎರಡು ಪ್ರಕ್ರಿಯೆಗಳಿಗೆ ಗುರಿಯಾಗುವುದೆಂದರೆ ಮಾನಸಿಕವಾಗಿ ಹರಳೆಣ್ಣೆ ಕುಡಿದಂತೆಯೇ ಸರಿ. ಹಾಗಾದಾಗ ನೀವು ಸಂಪೂರ್ಣವಾಗಿ ಫ್ಯಾಸಿಸ್ಟರ ಪ್ರಾಬಲ್ಯಕ್ಕೆ ಸಿಲುಕುತ್ತೀರಿ. ಅವರಿಗೆ ವಸ್ತುನಿಷ್ಠ ಸತ್ಯದ ಕಲ್ಪನೆಯೂ ಬೇಡ, ಅದರ ಗೋಜಿಗೆ ಹೋಗುವುದೂ ಬೇಡ. ವಿಶ್ಲೇಷಣೆ ಮತ್ತು ಅಭಿಪ್ರಾಯಗಳಲ್ಲಿ ಸಾಂಗತ್ಯವಿರಬೇಕೆಂಬ ಅರಿವು ಸಹ ಅವರಿಗೆ ಅಪಥ್ಯ. ಆದ್ದರಿಂದಲೇ ಹಾಸ್ಯಾಸ್ಪದವಾದ ಅನೇಕ ಮೂರ್ಖ ಮಾತುಗಳನ್ನು ಕಿವಿ ನಿಮಿರಿಸಿಕೊಂಡು ಕೇಳಲು ಅವರಿಗೆ ಸಾಧ್ಯವಾಗುವುದು. ಉದಾಹರಣೆಗೆ ಬೆನಿಟೊ ಮುಸೋಲಿನಿಯ ಸೆಪ್ಟೆಂಬರ್ 1937ರ ಈ ಮಾತು ಗಮನಿಸಿ: "ಫ್ಯಾಸಿಸಂಗೆ ತನ್ನದೇ ಆದ ನೈತಿಕತೆ ಇದೆ, ನಾವದಕ್ಕೆ ಸದಾ ಬದ್ಧರು. ಆ ನೈತಿಕತೆಯಿಂದಾಗಿ ನಾವು ಯಾವಾಗಲೂ ಎಲ್ಲರೊಡನೆ ಮುಚ್ಚುಮರೆಯಿಲ್ಲದೆ

ಮುಕ್ತವಾಗಿ ವ್ಯವಹರಿಸುತ್ತೇವೆ. ಯಾರನ್ನಾದರೂ ಒಮ್ಮೆ ಸ್ನೇಹಿತರನ್ನಾಗಿ ಸ್ವೀಕರಿಸಿದರೆ ನಾವು ಕೊನೆಯವರೆಗೆ ಅವರೊಂದಿಗೆ ಪ್ರಾಮಾಣಿಕವಾಗಿರುತ್ತೇವೆ." (ಇದನ್ನವನು ಬರ್ಲಿನ್ನಿನಲ್ಲಿ ಹಿಟ್ಲರನ ಸಮ್ಮುಖದಲ್ಲಿ ಹೇಳಿದ್ದ.) ಅವನ ಇನ್ನೊಂದು ಮಾತು ಹೀಗಿದೆ: "ಫ್ಯಾಸಿಸ್ಟರು ತಮ್ಮ ನೆರೆಯವರನ್ನು ಪ್ರೀತಿಸುತ್ತಾರೆ; ಆದರೆ 'ನೆರೆಯವರು' ಎಂಬುದು ಅಸ್ಪಷ್ಟ, ಅನಿರ್ದಿಷ್ಟ, ಕಲ್ಪನೆಯಲ್ಲ. ನೆರೆಯವರ ಮೇಲಿನ ಪ್ರೀತಿಯು ನಮ್ಮ ನಮ್ಮಲ್ಲಿನ ಅಂತರವನ್ನು ಕಡೆಗಣಿಸುವುದಿಲ್ಲ. ಅಂತರಕ್ಕೆ ಶಿಷ್ಟ ಶಿಕ್ಷಣ, ಅಂತಸ್ತು, ದೈಹಿಕವಾಗಿ ದೂರವಿರುವುದು, ಎಲ್ಲವೂ ಕಾರಣ." ಮುಸೋಲಿನಿಯ ಬರ್ಲಿನ್ ಭಾಷಣಕ್ಕೆ ಪ್ರತಿಯಾಗಿ ಹಿಟ್ಲರ್ ಅದೇ ಸಂದರ್ಭದಲ್ಲಿ (1937) ಹೇಳಿದ್ದ ಮಾತಿದು: "ಇಂದಿನ ಈ ಸಂದರ್ಭದಲ್ಲಿ ಅತೀವ ಮುದ ನೀಡುವ ಸಂಗತಿಯೆಂದರೆ ನಮ್ಮ ನೆಚ್ಚಿನ ಅತಿಥಿ ನಮ್ಮೊಡನಿರುವುದು. ಈತ ಅಸಾಮಾನ್ಯ. ಇತಿಹಾಸದಲ್ಲಿ ಈತ ಅಸಮಾನ. ಏಕೆಂದರೆ, ಇತಿಹಾಸದ ಘಟನೆಗಳು ಈತನನ್ನು ಪರೀಕ್ಷೆಗೆ ಒಳಪಡಿಸುವುದಿಲ್ಲ; ಬದಲಾಗಿ ಈತನೇ ತನ್ನ ದೇಶದ ಇತಿಹಾಸವನ್ನು ನಿರ್ಧರಿಸುತ್ತಾನೆ."

ಇವರಿಬ್ಬರೂ ಸೇರಿ ಇತಿಹಾಸವನ್ನು "ನಿರ್ಧರಿಸಿದ್ದು" ಈಗ ಇತಿಹಾಸವಾಗಿದೆ. ಅಳುಕಿನ ಸಮಾಚಾರವೇನೆಂದರೆ ಇವರ ಭ್ರಮೆಗೆ ಸಮನಾದ ಭ್ರಮೆಯನ್ನು ಫ್ಯಾಸಿಸ್ಟ್ ಅಲ್ಲದ ಕೆಲವು ದೇಶಗಳೂ ಇರಿಸಿಕೊಂಡಿವೆ ಮತ್ತು ಅದೇ ಹಿಂದಿನ ಉದ್ದೇಶಗಳಿಗಾಗಿ ಅದನ್ನು ಬೆಳೆಸಿಕೊಳ್ಳುತ್ತವೆ. ಆದ್ದರಿಂದ ವಿಶ್ವದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸುವ ಸಲುವಾಗಿ ನಡೆಯುವ ಹೋರಾಟವು ಈ ಭ್ರಮೆಯನ್ನು ತಾತ್ವಿಕ ವಿಮರ್ಶೆಯ ಅಸ್ತ್ರದಿಂದ ನಾಶಗೊಳಿಸಬೇಕು. ಫ್ಯಾಸಿಸ್ಟರಲ್ಲದ ಕೆಲವರು ಹುಟ್ಟಿಹಾಕುವ ಭ್ರಮೆಗಳ ಒಂದೆರಡು ಮಾದರಿಗಳನ್ನು ಗಮನಿಸೋಣ: 1930ರ ಸಮಯ. ಅದರ ಹಿಂದಿನ ವರ್ಷ ಹಣದುಬ್ಬರದಿಂದ ಆರ್ಥಿಕತೆ ಸೊರಗಿತ್ತು. ಅದೇ ಹಿಂಜರಿತ ಮುಂದುವರಿದಿದ್ದರೂ ಕ್ಯಾಲಿಫೋರ್ನಿಯಾದ ದೊಡ್ಡ ಬ್ಯಾಂಕಿನ ಅಧ್ಯಕ್ಷ ಕ್ರಾಕಲ್ ಎಲ್ಲಾ ಉತ್ತಮಗೊಂಡಿದೆ, ಏನೂ ಚಿಂತೆಯಿಲ್ಲ, ಎಂದು ನುಡಿದ. ಗಿಲ್ಬರ್ಟ್ ಹಾಜಿಸ್ ಎಂಬ ಇನ್ನೊಬ್ಬ ಹೇಳಿದ: ವಾಲ್ ಸ್ಟ್ರೀಟ್‌ನ ವ್ಯವಹಾರ ಅಗಾಧವಾದ್ದೇನಲ್ಲ. ಯಾರೋ ಕೆಲವು ಶ್ರೀಮಂತರು ಇನ್ನಷ್ಟು ಶ್ರೀಮಂತಿಕೆ ಗಳಿಸಿಕೊಳ್ಳಲು ಏನೋ ಪೈಪೋಟಿ ನಡೆಸುತ್ತಾರೆ. ಅದರಿಂದ ತಮಗೇನೂ ಆಗುವುದಿಲ್ಲವೆಂದು ಜನ ತವಕಿಸದಿದ್ದರೆ ನಮ್ಮ ದೇಶದಲ್ಲಿ ಹಿಂಜರಿತ ಇರುವುದೇ ಇಲ್ಲ. ದುಡಿಯುವ ಜನ ಯಥಾಪ್ರಕಾರ ವಾಹನ, ರೇಡಿಯೋ, ಬಟ್ಟೆ ಬರೆ ಕೊಳ್ಳುತ್ತಿದ್ದರೆ ಹಿಂಜರಿತ ಎಲ್ಲಿಂದ ಬಂದೀತು. ಆದರೆ ಏನಾಗಿದೆ? ಬ್ಯಾಂಕು ವ್ಯಾಪಾರಿಗೆ, ವ್ಯಾಪಾರಿಯು ಉತ್ಪಾದಕರಿಗೆ ಹೆದರಿಕೆ ಉಂಟುಮಾಡಿ ಕಠಿಣ ಕಾಲ ಬರಲಿದೆಯೆಂದು ಗುಲ್ಲೆಬ್ಬಿಸಿದ್ದಾರೆ. ಭೀತರಾಗದೆ ಉಳಿಯಬೇಕಾದ್ದು ಇಂದಿನ ಅವಶ್ಯಕತೆ.

ಇದರರ್ಥವೇನು? ಆರ್ಥಿಕ ಹಿಂಜರಿತವು ಅಪ್ರಾಮಾಣಿಕತೆ, ಭಯ ಮತ್ತು ಭಗವಂತನ ಆಣತಿಯನ್ನು ಮೀರುವುದರಿಂದ ಬರುತ್ತದೆ, ಎಂದು. ನೈತಿಕತೆ ಕುಸಿಯಿತು, ಆರ್ಥಿಕತೆಯೂ ಕುಸಿಯಿತು. ನೈತಿಕತೆಯ ಅರಿವುಂಟಾದರೆ, ಅಧ್ಯಾತ್ಮದ ಪುನರುಜ್ಜೀವನ ವಾದರೆ, ಎಲ್ಲಾ ಸರಿಹೋಗುತ್ತದೆ. ಅಮೆರಿಕಾದ ಬ್ಯಾಂಕು ಬಂಡವಾಳ ನೀಡುತ್ತದೆ, ಅಂಕಿ-ಸಂಖ್ಯೆ ವಿಭಾಗ ಪರಿಣಾಮದ ಮಾಪನ ಮಾಡುತ್ತದೆ. ಹೀಗಿರುವಾಗ ಭಯವೆಲ್ಲಿಯದು! ಅಲ್ಲದೆ ಕ್ರೈಸ್ತಮತದ ಯುವ ಪೋಷಕರಿಲ್ಲವೆ. ಅವರು ಎಲ್ಲವನ್ನೂ ಅಚ್ಚುಕಟ್ಟಾಗಿಸುತ್ತಾರೆ.

ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ವಿಧಾನಗಳು ಹಿಂಜರಿತವನ್ನು ಹಿಂದಕ್ಕಿಕ್ಕುತ್ತವೆ. ಹೀಗೆಂದವನು ರೋಜರ್ ಬ್ಯಾಬ್‌ಸನ್. ಹೇಗಿದೆ ನೋಡಿ: ಮೊದಲನೆಯವನು ಹಿಂಜರಿತವು ವಿಶ್ಲೇಷಕರ ಮಾನಸಿಕ ಸೃಷ್ಟಿ ಎಂದ; ಎರಡನೆಯವನು ದೊಡ್ಡ ಬ್ಯಾಂಕುಗಳು ಹಬ್ಬಿಸಿರುವ ವದಂತಿ ಅದು ಎಂದು ಹಿಟ್ಲರನಂತೆ ಘೋಷಿಸಿದ. ಕಡೆಯವನು ಅಧ್ಯಾತ್ಮದ ಮೊರೆಹೊಗು, ಆರ್ಥಿಕ ಹಿಂಜರಿತ ಮರೆಯಾಗುತ್ತದೆ ಎಂದು ಉಪದೇಶಿಸಿದ. ಬಂಡವಾಳಶಾಹಿಯ ಸ್ವಭಾವದಿಂದ ಹಿಂಜರಿತ ಉಂಟಾಗಿದೆಯೆಂಬುದನ್ನು ಮೂವರೂ ಮುಚ್ಚಿಹಾಕಲು ಯತ್ನಿಸಿದರು. ಅದರಿಂದ ಅವರಿಗೆ ಲಾಭವಿದೆ. ರೋಗವು ಮಾನಸಿಕ, ಆದ್ದರಿಂದ ಗುಣವಾಗುವುದು ಸಹ ಮಾನಸಿಕ ಗೆಲುವಿನಿಂದ ಎಂದುಬಿಟ್ಟರೆ ಸರಣಿಯಂತೆ ಆರ್ಥಿಕ ಸಂಗತಿಗಳು ಬೆಳೆದುಬಂದದ್ದನ್ನು ವದಂತಿಯೆಂದು ನಿರಾಕರಿಸಬಹುದು. ಇಲ್ಲವೆ, ಕ್ರೈಸ್ತ ಯುವಕ ಮಂಡಲಿಗೆ ಸೇರಿ ಪರಿಹಾರ ದೊರಕಿಸಿಕೊಳ್ಳಿ, ಎನ್ನಬಹುದು!

ಇದೇನು ವಿವರಣೆಯೊ, ಇಲ್ಲ ತಮಾಷೆಯ ಮಾತೊ? ತಮ್ಮ ಮಾತನ್ನು ಜನ ಹೇಗೆ ಸ್ವೀಕರಿಸಿಯಾರೆಂಬ ಪರಿವೆಯೇ ಇವರಿಗಿಲ್ಲ. ಆದರೆ ಕೆಲವರಿದ್ದಾರೆ: ಪತ್ರಿಕೆಗಳು, ಪ್ರವಚನಗಳು, ಪ್ರಚಾರ ಸಾಧನಗಳು ಅವರ ತಲೆಗೆ ತುರುಕಿವೆ: ಎಲ್ಲಾ ಮಾನಸಿಕ ಪ್ರಶ್ನೆಗಳು ಎಂದು. ಇನ್ನೂ ಬೇಕಾದರೆ ಮಾಧ್ಯಮಗಳಿವೆ, ಜ್ಯೋತಿಷಿಗಳಿದ್ದಾರೆ, ನಿಜ ಪರಿಸರವನ್ನು ಮರೆಯಿಸಿ ಮನಸ್ಸಿನ ಆಟಕ್ಕೆ ನಿಮ್ಮನ್ನು ದೂಡುತ್ತಾರೆ. ಆದರೆ ಪ್ರಪಂಚದ ವಿಸ್ಮಯಗಳು ಮಾನಸಿಕ ಸುಖದೆದುರು ಕಮರಿಹೋಗುವುದಿಲ್ಲವಲ್ಲ! ಅವರ ಬೋಧನೆಯ ಸಾರ, "ಪಾರಾಗಲು ಸುಲಭ ತಂತ್ರ ಅನುಸರಿಸಬೇಕು," ಎಂಬುದು. ಸತ್ಯವನ್ನು ಮರೆಮಾಚಿ ಪಾರಾಗಲು ಹಿಡಿಯುವ ಹಾದಿ ಯಾವುದು? ಪ್ರತಿಕೂಲವಾದ ಸತ್ಯದಿಂದ ಓಡಿಹೋಗಲು ಪರಂಪರಾಗತ ಹಾದಿಯೊಂದಿದೆ, ಅದನ್ನು ಶ್ರೇಷ್ಠವೆಂದು ಬಣ್ಣಿಸಲಾಗಿದೆ. ಅಂತರ್ಮುಖಿಯಾಗು, ಎಲ್ಲಾ ಸಲೀಸಾಗುತ್ತದೆ! ಎಂತೆಂಥವರನ್ನೂ ಅದು ಆಕರ್ಷಿಸಿ, ಆವರಿಸಿ, ಹಿಡಿದಿಡುವಂತಹ ಆಯುಧವಾಗಬೇಕಾದರೆ ಅದು ಬಹುಮುಖೀ ಪರಂಪರೆಯೇ ಆಗಿರಬೇಕು. ಬೌದ್ಧಿಕ ಮತ್ತು ಕ್ರಿಯಾಶೀಲ ವ್ಯಕ್ತಿಗಳು, ವಿಜ್ಞಾನಿಗಳು, ಭಾವುಕರು, ಮಂದಹೃದಯಿಗಳು, ನಿರಾಸೆಯ ಮುದ್ದೆಗಳು, ಸಂಶಯಗ್ರಸ್ತರು, ಶ್ರದ್ಧಾವಂತರು, ಡೋಲಾಯಮಾನ ಸ್ವಭಾವದವರು, ಎಲ್ಲರೂ ಇದರ ಹಿಡಿತಕ್ಕೆ ಬರುವಂತಿರಬೇಕಲ್ಲ. ಅಂತಹ ಪರಂಪರೆಯೊಂದಿದೆ, ಆಧುನಿಕ ತತ್ತ್ವಶಾಸ್ತ್ರದ ಕೇಂದ್ರಬಿಂದುವೇ ಅದು.

ಆಶ್ರಯತಾಣದ ಅರಸುವಿಕೆ

ಪ್ರಾಚೀನ ಗ್ರೀಸ್ ದೀರ್ಘಕಾಲ ವಿಷಣ್ಣತೆಯನ್ನು ಅನುಭವಿಸಿತು, ಆದರೆ ಸ್ವಾತ್ಮೈಕವಾದಕ್ಕೆ ಶರಣಾಗಲಿಲ್ಲ. ಮಧ್ಯಯುಗೀಯ ಜನಕ್ಕೆ ಗೊಂದಲಗಳಿದ್ದುವು, ಆದರೆ ಯಾರೋ ಕೆಲವು ಅತೀಂದ್ರಿಯವಾದಿಗಳನ್ನು ಬಿಟ್ಟರೆ ಯಾರೂ ಅದನ್ನು ಆದರಿಸಲಿಲ್ಲ.

17–18ನೇ ಶತಮಾನಗಳಲ್ಲಿ ಸ್ಪಿನೋಜಾ಼ ಒಬ್ಬನೇ ಅದರಿಂದ ಮುಕ್ತವಾಗಿದ್ದವನು. ಡೇಕಾರ್ಟ್, ಲೈಬ್ನಿಜ಼್, ಲಾಕ್, ಬಾರ್ಕ್‌ಲೆ, ಹ್ಯೂಮ್, ಕಾಂಟ್ ಇವರಲ್ಲೆಲ್ಲಾ ಅದು ಬೀಜವಾಗಿಯೋ ಹೂವಾಗಿಯೋ ಇದ್ದೇ ಇದೆ. ಇದು ಸ್ವಲ್ಪ ಗಮನಾರ್ಹ, ಏಕೆಂದರೆ ಆಗೆಲ್ಲಾ ಎರಡು ವಿರೋಧಿ ಬಣಗಳಿರುತ್ತಿದ್ದವು. ತರ್ಕವಾದಿಗಳು ಡೇಕಾರ್ಟ್ ತಮ್ಮ

ಗುರುವೆಂದು ಭಾವಿಸಿದ್ದರು, ಏಕೆಂದರೆ ಅವನು ಸ್ವಪ್ರಮಾಣದಿಂದ ಸಿದ್ಧವಾಗುವಂತಹ ಮೂಲಭೂತ ಸತ್ಯದ ಶೋಧನೆಯಲ್ಲಿ ತೊಡಗಿದ್ದ. ಪ್ರಯೋಗವಾದಿ ಸಿದ್ಧಾಂತಿ ಲಾಕ್‌ನ ಅನುಯಾಯಿಗಳು ಪ್ರತ್ಯಕ್ಷ ಸಂವೇದನೆಯಿಂದ ಅದನ್ನು ಪಡೆಯಹೊರಟಿದ್ದರು. ತರ್ಕವಾದಿಗಳು ಸಂವೇದನೆಯನ್ನು ಶಂಕೆಯಿಂದ ನೋಡಿದರು; ಅದು ಗೊಂದಲಯುತವೂ ಹಾದಿತಪ್ಪಿಸುವಂಥದೂ ಆಗಿರಬಹುದೆಂಬ ಕಾರಣದಿಂದ. ಅದಕ್ಕೆ ಪ್ರತಿಯಾಗಿ ಪ್ರಯೋಗವಾದಿಗಳು ಸ್ವಪ್ರಮಾಣವನ್ನು ಆಧಾರರಹಿತವೆಂದು ತಳ್ಳಿಹಾಕಿದರು. ಇವೆರಡರ ಹೊಂದಾಣಿಕೆ ಅಸಾಧ್ಯವಲ್ಲ: ನಾವು ಹಿಂದೆ ನಮೂದಿಸಿದ ವೈಜ್ಞಾನಿಕ ವಿಧಾನದ ಎರಡು ನಿಯಮಗಳಲ್ಲಿ ಒಂದು ತರ್ಕವಾದಿಗಳದ್ದು, ಇನ್ನೊಂದು ಪ್ರಯೋಗವಾದಿಗಳದ್ದು.

ಮುಖ್ಯ ವಿಷಯಕ್ಕೆ ಬರೋಣ: ಎರಡು ಬಣಗಳೂ ಸ್ವಾತ್ಮೈಕವಾದವನ್ನೇ ಪ್ರತಿಪಾದಿಸಿದವು; ನಿಶ್ಚಯವಾಗಿ, ಆದರೆ ಬೇರೆ ಬೇರೆ ಕಾರಣಗಳಿಂದ. ಒಂದು ನಿಶ್ಚಿತ ಸತ್ಯ ಹುಡುಕುತ್ತಾ ಡೇಕಾರ್ಟ್ ಪ್ರತಿಯೊಂದು ಹೇಳಿಕೆಯನ್ನೂ ಶಂಕಿಸಬಹುದಾದ್ದು ಹೇಗೆ ಎಂಬುದರತ್ತ ಗಮನ ಹರಿಸಿದ. ಒಂದೇ ಒಂದು ಹೇಳಿಕೆಯನ್ನುಳಿದು ಉಳಿದೆಲ್ಲವನ್ನೂ ಸುಸಂಗತವಾಗಿ ಶಂಕಿಸಬಹುದೆಂದು ಅವನು ಕಂಡುಕೊಂಡ. ಶಂಕಿಸಲಾಗದ್ದು "ನಾನಿದ್ದೇನೆ" ಎಂಬುದೊಂದನ್ನೇ. ಅದನ್ನು ಶಂಕಿಸಿದರೆ ಸ್ವಯಂ ವಿರೋಧ ಕಟ್ಟಿಟ್ಟದ್ದು. ಏಕೆಂದರೆ, "ನಾನು ಶಂಕಿಸುತ್ತೇನೆ" ಎಂದು ಹೇಳಬೇಕಾದರೆ ಮೊದಲಿಗೆ "ನಾನಿದ್ದೇನೆ" ಎಂಬುದು ಸತ್ಯವಾಗಬೇಕಲ್ಲ! "ನಾನು ಶಂಕಿಸುತ್ತೇನೆ" ಎಂಬುದು "ನಾನಿದ್ದೇನೆ" ಎಂಬುದಕ್ಕೆ ಪ್ರಮಾಣ. ಇರುವಿಕೆಯ ಸತ್ಯಕ್ಕೆ ಮತ್ತೊಂದು ಸತ್ಯದ ಅಗತ್ಯವಿಲ್ಲ. ಇದೇ ಪ್ರಸಿದ್ಧವಾದ "ಕಾಘಿತೊ ಎರ್ಗೊ ಸುಮ್" ಎಂಬ ತತ್ವ. ಅದೊಂದು ಸುಳ್ಳು ತತ್ವವೆಂಬ ಮಾತಂತಿರಲಿ, ಇದರಿಂದ ಡೇಕಾರ್ಟ್ ಸಾಧಿಸಿದ್ದೇನು? "ನಾನಿದ್ದೇನೆ" ಎಂಬುದನ್ನು. ಆಯಿತು, ಆದರೆ ಅದರಿಂದ ಬೇರೇನೋ ಸಹ ಇದೆಯೆಂದು ಸಾಧಿಸಿದಂತಾಯಿತೆ? ಇಲ್ಲ, ಏಕೆಂದರೆ ಡೇಕಾರ್ಟ್ ಹೇಳುವಂತೆ ಅವಾವುವೂ ಸ್ವಯಂ ಪ್ರಮಾಣಿತವಲ್ಲ. ಇದೇ ಸ್ವಾತ್ಮೈಕವಾದ. ಕೊಠಡಿಯಲ್ಲಿ ಕೂತು ಬೀಗ ಹಾಕಿಕೊಳ್ಳುವುದು, ಆಮೇಲೆ ಬೀಗದ ಕೈ ಬಿಸಾಡಿ ಬಿಡುವುದು! ಇನ್ನು ಪ್ರಯೋಗವಾದಿಗಳ ಕತೆ ನೋಡೋಣ: ಇವರ ಪ್ರಕಾರ ಸತ್ಯವು ಇಂದ್ರಿಯಾನುಭವದಿಂದ ಪ್ರಾಪ್ತವಾಗುತ್ತದೆ. ಲಾಕ್ ಹೇಳುತ್ತಾನೆ: "ಮಂಜಿನ ಮೇಲೆ ನಡೆಯುತ್ತಿರುವವನೊಬ್ಬನನ್ನು ನಾನೇ ಸ್ವತಃ ನೋಡಿದಾಗ ಅದು ಸಾಧ್ಯವೆಂಬುದನ್ನು ತಟಾಯಿಸಿ ಖುದ್ದು ಜ್ಞಾನವಾಗಿಬಿಡುತ್ತದೆ." ಇಂದ್ರಿಯಾನುಭವಕ್ಕೆ ಬಣ್ಣ, ಶಬ್ದ, ರುಚಿ, ರಚನೆ, ಪರಿಮಳ, ಎಲ್ಲಾ ದಕ್ಕುತ್ತವೆ. ಅವುಗಳ ಮೂಲವೇನು? ಲಾಕ್ ಪ್ರಕಾರ ಸ್ವತಂತ್ರ ನೈಜ ವಸ್ತುಗಳು ಮೂಲ; ಆದರೆ ಅವು ನೆಲೆಗೊಳ್ಳುವುದು ಮಾನವ ಪ್ರಜ್ಞೆಯಲ್ಲಿ. ಅಂದರೆ ಏನಾಯಿತು? ಮನಸ್ಸಿನೆದುರು ಇರುವುದು ಸಂವೇದನೆ ಮಾತ್ರ, ಸಂವೇದನೆಯನ್ನುಂಟು ಮಾಡಿದವೆನ್ನಲಾದ ವಸ್ತುಗಳನ್ನು ನೇರವಾಗಿ ನೋಡಿದ್ದಿಲ್ಲ. ನಾವು ನೇರವಾಗಿ ನೋಡಿದ್ದು ನಿಜ ಎನ್ನುವುದಾದರೆ ಸಂವೇದನೆಗಳು ನಿಜ, ಆದರೆ ವಸ್ತುಗಳು ಸಂಶಯಕ್ಕೆ ಸಿಲುಕುತ್ತವೆ.

ಇದನ್ನು ಬಗೆಹರಿಸಲು ಹೋಗಿ ಬಾರ್ಕ್ಲೆ ಸ್ವಾತ್ಮೈಕವಾದದ ಪರಮಾವಧಿಯನ್ನು ಮುಟ್ಟಿದ. ಅವನ ಪ್ರಕಾರ ವಸ್ತುಗಳ ಅಸ್ತಿತ್ವವು ಅವುಗಳನ್ನು ನೋಡುವುದನ್ನು ಅವಲಂಬಿಸಿದೆ. ಅಂದರೆ, ಅವನ್ನು ನೋಡದಿದ್ದಾಗ ಅವಿಲ್ಲವೆಂದರ್ಥ. ಒಂದು ಕೊಠಡಿ ಇದೆ. ಅದರೊಳಗೇನೋ ಇದೆ, ಆದರೆ ಬಾಗಿಲು ಮುಚ್ಚಿದೆ. ಒಳಗಿರುವುದರ ಅಸ್ತಿತ್ವ ನಮ್ಮ

ಪ್ರಜ್ಞೆಗೆ ಬಾರದು; ಆದ್ದರಿಂದ ಅವು ಇಲ್ಲ, ಅಷ್ಟೆ. ಇದು ಸಾಮಾನ್ಯ ತಿಳುವಳಿಕೆಗೆ ವಿರೋಧವಲ್ಲ, ಅದಕ್ಕೇನು ಮಾಡುವುದು? ಬಾರ್ಕ್ಲೆ ಅದನ್ನು ಕ್ಲಿಷ್ಟವಾಗಿ, ಆದರೆ ಅಮೋಘವಾಗಿ, ವಿವರಿಸಿದ್ದಾನೆ: "ಸ್ವರ್ಗದ ಸಮೂಹಗಾನ, ಭೂಮಿಯ ಸರಂಜಾಮುಗಳು, ಅಷ್ಟೇ ಏಕೆ, ಇಡೀ ವಿಶ್ವದ ಸರ್ವಸ್ವವೂ ಮನಸ್ಸಿಲ್ಲದಿದ್ದರೆ ಅಸ್ತಿತ್ವರಹಿತ; ಅವಿವೆ ಎಂಬುದನ್ನು ನೋಡಿದಾಗ ಅಥವಾ ತಿಳಿದಾಗ ತಾನೆ ಅವಿರಲು ಸಾಧ್ಯ! ನಾನವನ್ನು ಎಲ್ಲಿಯವರೆಗೆ ನಿಜಕ್ಕೂ ನೋಡುವುದಿಲ್ಲವೋ, ಅಂದರೆ ನನ್ನ ಅಥವಾ ಬೇರಾವುದೋ ಸೃಷ್ಟಿಯಾದ ಚೈತನ್ಯದ ಮನಸ್ಸಿನಲ್ಲಿರುವುದಿಲ್ಲವೋ, ಅಲ್ಲಿಯವರೆಗೆ ಅವಕ್ಕೆ ಅಸ್ತಿತ್ವವಿಲ್ಲ. ಹಾಗೇನಾದರೂ ಇದ್ದರೆ ಅದು ಯಾವುದೋ ನಿತ್ಯ ಚೈತನ್ಯದ ಮನಸ್ಸಿನಲ್ಲಿ ಆಶ್ರಯ ಪಡೆಯಬೇಕು".

ಪ್ರಜ್ಞೆಗೆ ನಿಲುಕಿದ ಸಂವೇದನೆಗಳು ಮಾತ್ರವೇ ನಿಜವೆಂದು ಅಂಗೀಕರಿಸಿದ ಪ್ರಯೋಗವಾದವು ಮನಸ್ಸನ್ನು ಆ ಸಂವೇದನೆಗಳೊಳಗೆ ಸೆರೆಯಿಟ್ಟಿತು, ತನ್ನನ್ನುಳಿದು ಬೇರಾವ ಪ್ರಪಂಚಕ್ಕೂ ಅದಕ್ಕೆ ಪ್ರವೇಶವಿಲ್ಲದಂತೆ ಮಾಡಿಬಿಟ್ಟಿತು. ಲಾಕ್ ಪ್ರತಿಪಾದಿಸಿದ್ದನ್ನು ಬೆಳೆಸಿ ತರ್ಕವಾದವನ್ನು ತುಂಡರಿಸುವ ಕೆಲಸವನ್ನು ಹ್ಯೂಮ್ ಮಾಡಿದ. ಮಾನವ (ಅಥವಾ ಅವನ 'ಆತ್ಮ') ಯಾವ ಇಂದ್ರಿಯಾನುಭವಕ್ಕೂ ನಿಲುಕಿಲ್ಲವಾದ್ದರಿಂದ ಅದರ ಅಸ್ತಿತ್ವವೂ ಸಂಶಯಾಸ್ಪದವೆಂದು ಅವನು ತರ್ಕಿಸಿದ. ಅವನ ಪ್ರಕಾರ ಇರುವುದೆಲ್ಲಾ ಕೇವಲ ಸಂವೇದನೆಗಳ ಹರಿವು; ಅದನ್ನು ಪ್ರೇರಿಸಲು ವಸ್ತುಗಳಿಲ್ಲ, ಸ್ವೀಕರಿಸಲು ಮನಸ್ಸಿಲ್ಲ!

ತತ್ತ್ವಶಾಸ್ತ್ರಜ್ಞರಿಗೆ ಬಾರ್ಕ್ಲೆ ಸಿದ್ಧಾಂತದ ವೈಚಿತ್ರ್ಯಕ್ಕೆ ಸಮನಾದ ಬೇರೊಂದು ರಂಜನೆ ಇರಲಾರದೇನೊ! ಆದರೆ ಅದನ್ನು ತಿಳಿಯದೆಯೂ ಎಷ್ಟೋ ಜನ ಆ ಸಿದ್ಧಾಂತವನ್ನು ಆತುಕೊಂಡಿದ್ದಾರೆ. ಜೇಮ್ಸ್ ಜೀನ್ಸ್ ಮತ್ತು ಆರ್ಥರ್ ಎಡಿಂಗ್‌ಟನ್‌ರಂತಹ ಭೌತ ವಿಜ್ಞಾನಿಗಳಲ್ಲಿ ಸಹ ಅದರ ಗಾಢ ಛಾಯೆ ಅಡಗಿದೆ. ಅವರಿಬ್ಬರೂ ಭೌತಶಾಸ್ತ್ರಕ್ಕೆ ಸಲ್ಲಿಸಿದ ಸೇವೆಗಿಂತಲೂ ದೇವತಾಶಾಸ್ತ್ರಕ್ಕೆ ಸಲ್ಲಿಸಿದ ಸೇವೆಗಾಗಿ ಪ್ರಖ್ಯಾತರೆಂಬುದು ಬೇರೆ ಮಾತು. ಆದರೆ ಬಾರ್ಕ್ಲೆ ಸರ್ವಥಾ ಅವಿಚಲಿತನಾಗಿ ಉಳಿದು ತನ್ನ ಸಿದ್ಧಾಂತವನ್ನು ನಿಷ್ಕರ್ಷೆಯಿಂದ ಕ್ಲುಪ್ತವಾಗಿ ಮಂಡಿಸಿದ, ಸಿದ್ಧಾಂತದ ಪರಿಣಾಮವನ್ನು ದಾರ್ಢ್ಯದಿಂದ ಸ್ವೀಕರಿಸಿದ. ಕಾಂಟ್ ಅವನನ್ನು 'ಬಿಶಪ್' ಎಂದು ಕರೆದ. ಅದರಲ್ಲಿ ನಗುವುದೇನಿದೆ? ಅವನ ದೊಡ್ಡ ಪಾಪವೆಂದರೆ ಅವನ ಸ್ಪಷ್ಟತೆ, ಅಷ್ಟೆ. ತಮ್ಮ ಚಿಂತನೆ ಏನೆಂಬುದರ ಬಗೆಗೇ ಸ್ಪಷ್ಟತೆಯಿಲ್ಲದ ಎಷ್ಟೋ ಮಂದಿಯನ್ನು ಹೊಗಳಿ ಅಟ್ಟಕ್ಕೇರಿಸುತ್ತೇವಲ್ಲ, ಹಾಗಿರುವಾಗ ಬಾರ್ಕ್ಲೆಯನ್ನೇಕೆ ತೆಗಳಬೇಕು!

ಭಾವನಾವಾದದ ಉತ್ಕೃಷ್ಟ ನಿರೂಪಣೆಗೆ ಬಾರ್ಕ್ಲೆಯ ಗ್ರಂಥಕ್ಕೆ ಸಮಾನವಾದುದು ವಿರಳ. "ಮಾನವನ ಜ್ಞಾನದ ನಿಯಮಗಳು" ಎಂಬ ಆ ಗ್ರಂಥದಲ್ಲಿ ಸಿದ್ಧಾಂತದ ತಿರುಳಿದೆ; ಅದಕ್ಕೆ ಅತೀಂದ್ರಿಯವಾದ, ಜಗದಾತ್ಮ, ವಿಶ್ವಪ್ರಜ್ಞೆ, ಮುಂತಾದ ಕಲಸು ಮೇಲೋಗರವಿಲ್ಲ. ಯಾವ ಅಳುಕೂ ಇಲ್ಲದೆ ತನ್ನ ಸಿದ್ಧಾಂತವನ್ನು ಬಿಚ್ಚಿಡುವ ಬಾರ್ಕ್ಲೆಯ ಪ್ರತಿಪಾದನೆಯಲ್ಲಿ ಒಂದು ಸೌಂದರ್ಯವಿದೆ. ಪ್ರಕೃತಿಗೂ ಮುನ್ನ ಪ್ರಜ್ಞೆ ಇದ್ದಿತು, ಪ್ರಜ್ಞೆಯೊಂದೇ ವಿಶ್ವದ ಅಸ್ತಿತ್ವವನ್ನು ಸಾಧ್ಯಗೊಳಿಸುತ್ತದೆ, ಎಂಬ ತತ್ವವನ್ನು ಮುಕ್ತವಾಗಿ ಘೋಷಿಸಿದವನು ಬಾರ್ಕ್ಲೆ. ಇದು ಸಾಮಾನ್ಯ ತಿಳುವಳಿಕೆಗೆ ತೀರಾ ವಿರುದ್ಧವಾದ್ದು;

ಆದರೂ ಅದೇಕೆ ಅಷ್ಟು ಪ್ರಸಿದ್ಧ? ವಿಶ್ವವು ಸ್ವತಂತ್ರ ವ್ಯವಸ್ಥೆಯಾಗಿ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ, ಅದು ತಮ್ಮ ಅಥವಾ ಇತರರ ಪ್ರಜ್ಞೆಯಿಂದ ನೆಲೆಗೊಳ್ಳಬೇಕು ಇಲ್ಲವೆ ಭಗವಂತನ ಪ್ರಜ್ಞೆಯಲ್ಲಿರಬೇಕು, ಎಂದು ಜನ ನಂಬಲು ಏನು ಕಾರಣವಿರಬಹುದು? ಬಾರ್ಕ್ಲೆಯ ವಾದ ಎಷ್ಟೇ ಸೊಗಸಾಗಿದ್ದರೂ ಅವನ ಸಿದ್ಧಾಂತವನ್ನು ಪೋಷಿಸಲು ಅದು ಸಾಲದು. ದಾರ್ಶನಿಕ ಸಿದ್ಧಾಂತಗಳು ಅವನ್ನು ಸಮರ್ಥಿಸುವ ಪುರಾವೆಗಳಿಂದ ಮಾತ್ರವೇ ಪುಷ್ಟಿ ಪಡೆಯುವುದಿಲ್ಲ. ಅವುಗಳ ಸಾಧ್ಯಾಸಾಧ್ಯತೆಗಳಿಗೆ ನಿರ್ದಿಷ್ಟ ಸಾಮಾಜಿಕ ಹಿನ್ನೆಲೆ ಇದ್ದು ಅದು ಜೀವನಕ್ಕೆ ಪ್ರಸ್ತುತವಾದ ಸಿದ್ಧಾಂತವಾಗಿರುವುದು ನಿರ್ದೇಶಕ ಸೂತ್ರ. ಹಾಗಿದ್ದಾಗ ಅದು ಅನೇಕ ಮನಸ್ಸುಗಳನ್ನಾವರಿಸಿರಲು ಸಾಧ್ಯ. ಇನ್ನೂ ಸರಳವಾಗಿ ಹೇಳುವುದಾದರೆ, ಪ್ರತಿಯೊಬ್ಬ ಜೀವಿಯೂ ಏನಾದರೊಂದು ತತ್ವವನ್ನು ನಿರೂಪಿಸಿ ಕೊಂಡಿರುವುದು ಸಹಜ. ವಿಶ್ವದಲ್ಲಿ ತನ್ನ ಅನುಭವವನ್ನಾಧರಿಸಿ ಪ್ರತಿಯೊಬ್ಬ ವ್ಯಕ್ತಿಯೂ ಕೆಲವು ಪ್ರಮೇಯ ಅಥವಾ ನಿರೂಪಣೆಗಳನ್ನು ನಿರ್ಮಿಸಿಕೊಂಡಿರುತ್ತಾನೆ(ಳೆ). ಅವು ಕಡಿಮೆಯೋ ಹೆಚ್ಚೋ ಇರಬಹುದು, ಆದರೆ ಇರುವುದಂತೂ ಶತಸ್ಸಿದ್ಧ. ಪ್ರತಿಯೊಬ್ಬ ನಿರೂಪಕನ(ಳ) ಪ್ರಮೇಯಕ್ಕೂ ಒಂದು ಚರಿತ್ರೆ ಇದೆ, ತನ್ನ ಮತ್ತು ಭೌತಿಕ ಪ್ರಪಂಚದ ನಡುವಣ ದೀರ್ಘ ಸಂಸರ್ಗ ಹಾಗೂ ತನ್ನ ಸಮಾಜದ ನಡುವಣ ಸಂಬಂಧಗಳ ಹಿನ್ನೆಲೆಯಿದೆ. ಒಂದು ದಾರ್ಶನಿಕ ಸಿದ್ಧಾಂತವು ವ್ಯಾಪಕವಾಗಿ ಅಂಗೀಕಾರಾರ್ಹವಾಗ ಬೇಕಾದರೆ ಅದು ಬಹುತೇಕ ಜನರ ಒಪ್ಪಿಗೆಯುಳ್ಳ ಪ್ರಮೇಯವಾಗಿರಬೇಕು. ಅಂಗೀಕೃತವಲ್ಲದಿದ್ದರೆ ಕನಿಷ್ಠ ಪಕ್ಷ ಅದಕ್ಕೆ ವಿರೋಧ ಇರಬಾರದು. ಉದಾಹರಣೆಗೆ, ಹರ್ಬರ್ಟ್ ಸ್ಪೆನ್ಸರ್ ಪ್ರಚುರಪಡಿಸಿದ್ದ "ಸ್ವಯಂ ಚಲಿತ ಸಾಮಾಜಿಕ ಅಭಿವೃದ್ಧಿ"ಯ ಕಲ್ಪನೆಯು 19ನೆಯ ಶತಮಾನದಲ್ಲಿ ಮಾನ್ಯತೆ ಹೊಂದಿತ್ತು, ಏಕೆಂದರೆ ಅದು ಯೂರೋಪಿನಲ್ಲಿ ಸಮೃದ್ಧಿಯ ಶತಮಾನವಾಗಿತ್ತು. ಮೊದಲನೆಯ ಮಹಾಯುದ್ಧದ ನಂತರ ಆ ಕಲ್ಪನೆ ಕುಸಿದು ಬಿತ್ತು. ಅಭಿವೃದ್ಧಿಯು ಸ್ವಯಂ ಚಾಲನೆಗೆ ದಕ್ಕುವಂಥದಲ್ಲ, ಅದನ್ನು ಯತ್ನಪೂರ್ವಕವಾಗಿ ಸಿದ್ಧಿಸಿಕೊಳ್ಳಬೇಕು, ಆಗಲೂ ಸುಲಭದಲ್ಲಿ ಅದು ದಕ್ಕದೆ ಹೋಗಬಹುದು, ಎಂಬ ತಿಳಿವು ಆಗ್ಗೆ ಮೂಡಿತ್ತು. ಜಾರ್ಜ್ ಸಾಂಟಾಯನ ಹೇಳಿದಂತೆ, ತತ್ತ್ವಶಾಸ್ತ್ರಗಳ ನಿರಾಕರಣೆಯನ್ನು ಯಾರೂ ಸಾಧಿಸಹೋಗಬೇಕಾಗಿಲ್ಲ, ಅವನ್ನು ಜನ ತಾವಾಗೇ ಸುಮ್ಮನೆ ಕೈ ಬಿಡುತ್ತಾರೆ.

ನಾವು ಹಿಂದೆಯೇ ನೋಡಿದಂತೆ, ಆಧುನಿಕ ತತ್ತ್ವಶಾಸ್ತ್ರವು ತಾರ್ಕಿಕ ಹಾದಿಯದ್ದಿರಲಿ, ಪ್ರಯೋಗ ಹಾದಿಯದ್ದಿರಲಿ, ಅದು ಮೂಲತಃ ಸ್ವಾತ್ಮೈಕವಾದದ ತಿರುಳನ್ನು ತುಂಬಿಕೊಂಡಿರುತ್ತದೆ. ಹಾಗೆಂದರೆ, ಅಸ್ತಿತ್ವದಲ್ಲಿರುವುದು ಅದೊಂದೇ ಸಿದ್ಧಾಂತವೆಂದಲ್ಲ; ಆಧುನಿಕ ಚಿಂತನೆಯಲ್ಲಿ ಅದು ಪ್ರಧಾನ ಪಂಥ ಎಂದರ್ಥ. ಸ್ವಾತ್ಮೈಕವಾದದ ಅಂಟುಜಾಡ್ಯ ಅದನ್ನಾವರಿಸಿದೆಯೆಂದು ಬೇಕಾದರೂ ಹೇಳಬಹುದು. ಇದಕ್ಕೆ ಕಾರಣ ಆಧುನಿಕ ಸಮಾಜದಲ್ಲಿ ಪ್ರಧಾನವಾಗಿ ಕಾಣಬರುವ ಒಂದು ದೃಷ್ಟಿಕೋನ. ಅದನ್ನು ಅನ್ವರ್ಥವಾಗಿ ವ್ಯಕ್ತಿವಾದ ಅಥವಾ ಅಹಂಭಾವ ಎನ್ನಬಹುದು. ಅದೊಂದು ಸಂಪೂರ್ಣ ವಿಶ್ವದೃಷ್ಟಿ ಎಂಬ ಮಟ್ಟಕ್ಕೆ ಮುಟ್ಟಿದೆ, ಅಧ್ಯಯನದ ಪ್ರತಿಯೊಂದು ವಿಭಾಗದಲ್ಲೂ ಅದರ ನಿಟ್ಟಿನಲ್ಲಿ ವ್ಯಾಖ್ಯಾನಗಳು ಬಂದಿವೆ. ಅದರ ಲಕ್ಷಣ ಮತ್ತು ಮಹತ್ವವನ್ನು ತಿಳಿಯಲು ಅದು ಯಾವ ವಿಶ್ವದೃಷ್ಟಿಯ ಸ್ಥಳವನ್ನಾಕ್ರಮಿಸಿತೋ ಅದನ್ನರಿಯುವುದು ಸೂಕ್ತ.

ಮಧ್ಯಯುಗೀನ ಸಾಮಾಜಿಕ ವ್ಯವಸ್ಥೆಯನ್ನು ವಿವರಿಸಿ ಸಮರ್ಥಿಸುತ್ತಿದ್ದ ವಿಶ್ವದೃಷ್ಟಿ ಅದು. ಊಳಿಗಮಾನ್ಯ ವ್ಯವಸ್ಥೆಯು ತಳದಿಂದ ಅಗ್ರದವರೆಗೆ ಅಂತಸ್ತುಗಳನ್ನು ಹೊಂದಿದ್ದ, ಶ್ರೇಣೀಕೃತ ವ್ಯವಸ್ಥೆ. ಅದಕ್ಕೆ ಭೂಮಿಯ ಒಡೆತನವು ಆಧಾರ. ಈ ಸಾಮಾಜಿಕ ಶ್ರೇಣಿಯ ತಳದಲ್ಲಿ ದಾಸನಿದ್ದ. ಅವನು ಕೃಷಿ ಮಾಡುತ್ತಿದ್ದ. ಭೂಮಿಯ ಒಡೆಯನೇ ಅವನ ಯಜಮಾನ. ಆ ಯಜಮಾನನ ಒಡೆಯ ದೊರೆ. ಆ ದೊರೆಯು ರೋಮಿನ ಪಾವನ ಚಕ್ರವರ್ತಿ. ಪಾವನನೋ ಅಥವಾ ಹಾಗೆಂದು ಸ್ವತಃ ಅವನೇ ಭಾವಿಸಿಕೊಂಡಿದ್ದನೋ ಅದು ಬೇರೆ ವಿಷಯ. ಪೋಪನ ಸಾರ್ವಭೌಮತ್ವ ಅವನಿಗೆ ಸಂತ ಪೀಟರನಿಂದ ಬಂದಿದ್ದಂತೆ. ಆ ಹಕ್ಕನ್ನು ಪ್ರಶ್ನಿಸಲು ಹೇಗೂ ಪೀಟರ್ ಇರಲಿಲ್ಲವಲ್ಲ! ಪೀಟರನಿಗೆ ಆ ಸ್ಥಾನ ದೊರಕಿದ್ದು ತಂದೆ ಯೇಸುವಿನಿಂದ. ಯೇಸುವಿನದು ಪ್ರಶ್ನಾತೀತವಾದ ಪರಮಾಧಿಕಾರ. ಭೂಮಿಯ ಕೃಷಿ ಮಾಡುವ ದಾಸನಿಂದ ಹಿಡಿದು "ವಿಶ್ವದ ದೊರೆ ಮತ್ತು ಮಾಲೀಕ"ನವರೆಗೆ ಒಂದು ಅವಿಚ್ಛಿನ್ನ ಸಂಬಂಧ. ಅಂದರೆ, ಸಮಾಜದ ಮೌನ ಮೇರು ನಿಯಮ ಅಧೀನತೆ. ಅಧೀನತೆ ಇದ್ದಾಗ ಶರಣಾಗತಿ ಸುಲಭವಾಗಿ ಹಿಂಬಾಲಿಸುತ್ತದೆಂಬ ಆಶಯವಿದ್ದಿತು.

ಶ್ರೇಣೀಕರಣವನ್ನು ಒಂದು ನಿಯಮ ಅಥವಾ ತತ್ವ ಎಂಬಂತೆ ಪರಿಪಾಲಿಸಲು ಸಂತ ಪಾಲ್ ನೀಡಿದ್ದ ಧ್ಯೇಯವಾಕ್ಯವನ್ನು ಅನ್ವಯಿಸಲಾಯಿತು. "ನಾವೆಲ್ಲಾ ಒಂದು ಇನ್ನೊಂದರ ಅಂಗವಿದ್ದಂತೆ" ಎಂಬುದು ಅವನ ವ್ಯಾಖ್ಯಾನ. ಮಾನವ ಸಮಾಜವು ಮಾನವ ಶರೀರವನ್ನು ಹೋಲುತ್ತದೆ; ಶರೀರದಲ್ಲಿ ಪ್ರತಿಯೊಂದು ಅಂಗಕ್ಕೂ ತನ್ನದೇ ಆದ ವಿಶಿಷ್ಟ ಕರ್ತವ್ಯವಿದೆ. ಶ್ವಾಸಕೋಶವು ಹೃದಯದ ಕೆಲಸ ಮಾಡಲಾರದು, ಹೃದಯವು ಮಿದುಳಿನ ಕೆಲಸ ನಿರ್ವಹಿಸಲಾರದು. ಈ ಹೋಲಿಕೆಯನ್ನು ಮಧ್ಯಯುಗದಲ್ಲಿ ಅಗಾಧವಾಗಿ ಬೆಳೆಸಲಾಗಿತ್ತು. ಪರಮಾಧಿಕಾರವು ಪೋಪನದೋ ಅಥವಾ ಚಕ್ರವರ್ತಿಯದೋ ಎಂಬ ಪ್ರಶ್ನೆಯೇನೋ ಆಗಾಗ ತಲೆಯೆತ್ತುತ್ತಿತ್ತು, ಏಕೆಂದರೆ ಶರೀರಕ್ಕೆ ಎರಡು ತಲೆಗಳಿರಲಾಗದಲ್ಲ, ಅದಕ್ಕೆ. ಪಿತ್ತಕೋಶದಲ್ಲಿ ನ್ಯಾಯಾಂಗ, ಕಾಲ್ಬೆರಳುಗಳಲ್ಲಿ ಮಹಾ ಜನತೆ, ಹೀಗೆ ಅಂಗಾಂಗ ವ್ಯವಸ್ಥೆ. ಜನ ದಂಗೆಯೆದ್ದಾಗ ಶರೀರಕ್ಕೆ ಎಂಥದೋ ಕೀಲುರೋಗ ತಗುಲಿತೆಂದು ಭಾವಿಸಿದ್ದಿರಬಹುದು! ಏನೇ ಇರಲಿ, ಹೀಗೆ ಮೋಹಕವಾಗಿ ರಚಿಸಿಕೊಳ್ಳಲಾದ ಮಧ್ಯಯುಗೀಯ ಸಮಾಜಕ್ಕೆ ಭೋಗವಸ್ತುಗಳನ್ನು ಉತ್ಪಾದಿಸುವ ಒಂದು ವರ್ಗದ ಅಗತ್ಯವಿತ್ತು. ಆ ವರ್ಗದ ಜಾಣತನಕ್ಕೆ ಗೋಚರಿಸಿದ್ದೇನೆಂದರೆ ಹೆಚ್ಚು ಸರಕು ಉತ್ಪಾದಿಸಿ ಮಾರಿದರೆ ಹೆಚ್ಚು ಲಾಭ ಮತ್ತು ಸಂಪತ್ತು ಗಳಿಸಬಹುದು ಎಂದು. ಅಲ್ಲದೆ, ಊಳಿಗದವರ ಯಜಮಾನರಿಗೆ ಹಣದ ಅವಶ್ಯಕತೆ ಇದ್ದಿತು. ಭೂಮಾಲೀಕರು ಸಾಲ ಎತ್ತುವುದರಲ್ಲಿ ಹೇಗೂ ನಿಸ್ಸೀಮರಲ್ಲವೆ! ಸರಿ, ಒಂದು ವರ್ಗ ಹುಟ್ಟಿಕೊಂಡಿತು. ಅದು ವ್ಯಾಪಾರಿ ವರ್ಗದ ಒಂದು ಭಾಗ; ಲೇವಾದೇವಿ ಮಾಡುವವರದು. ಅವರ ವ್ಯವಹಾರಗಳನ್ನು ಚರ್ಚು ಅನುಮೋದಿಸಲಿಲ್ಲ. ಹೀಗೆ ಟೀಕೆಗೆ ಒಳಗಾದರೂ ಅವರಿಲ್ಲದೆ ಆಳುವವರು ಉದ್ಧಾರವಾಗುವಂತಿರಲಿಲ್ಲ. ಆದ್ದರಿಂದ ಅವರು ಸಮೃದ್ಧವಾಗಿ ಬೆಳೆದರು. ಅವರ ಮತ್ತು ಊಳಿಗಮಾನ್ಯ ಶ್ರೀಮಂತರ ಹಿತಾಸಕ್ತಿಗಳು ಪರಸ್ಪರ ವಿರೋಧವಾಗಿದ್ದವು. ಅಂದಿನ ಸಮಾಜದ ತೊಡಕಿನ ಅಂತಸ್ಸಂಬಂಧಗಳು ಸರಕುಗಳ ಉತ್ಪಾದನೆಯ ಹೆಚ್ಚಳಕ್ಕೆ ಅಡ್ಡಿಯುಂಟುಮಾಡುವಂಥವು, ಆದ್ದರಿಂದ ಅದರಲ್ಲಿ ಬಿರುಕು ಕಾಣಿಸಿಕೊಂಡಿತು. ಎಷ್ಟು

ಉತ್ಪಾದಿಸಬಹುದೋ ಅಷ್ಟನ್ನೂ ಉತ್ಪಾದಿಸಲು ಅಡ್ಡಿಯುಂಟು ಮಾಡುವ ಎಲ್ಲ ಸಮಾಜಗಳದ್ದೂ ಅದೇ ಗತಿ. ಗಟ್ಟಿಯಾಗಿ ನೆಲೆಯೂರಿದೆಯೆಂದು ಭಾವಿಸಲಾಗಿದ್ದ ಶ್ರೇಣೀಕರಣದ ಕಂಬವು ಮರದ್ದು, ಅದಕ್ಕೆ ಗೆದ್ದಲು ಹತ್ತಿದೆ, ಎಂಬ ಅರಿವು ಅನಿವಾರ್ಯವಾಯಿತು. ಗೆದ್ದಲು ಎಂಬ ಪದ ಅಷ್ಟು ಪ್ರಿಯವಾದುದಲ್ಲ, ಆದರೆ ಅಂದಿನ ವ್ಯಂಗ್ಯವನ್ನು ಅದು ಚೆನ್ನಾಗಿ ಹೊರತರುತ್ತದೆ. ಗೆದ್ದಲು ಬೇರಾವುದೂ ಅಲ್ಲ, ಆಗಿನ ವ್ಯಾಪಾರಿಗಳು, ಬ್ಯಾಂಕರುಗಳು, ಸರಕುದಾರರು, ಇದ್ದರಲ್ಲ ಅವರೇ ಗೆದ್ದಲು; ಆಧುನಿಕ ಬಂಡವಳಿಗರ ಚಾರಿತ್ರಿಕ ಪೂರ್ವಜರು. ಕಳೆದ ನಾಲ್ಕುನೂರು ವರ್ಷಗಳ ಇತಿಹಾಸವು ಬಹುಮಟ್ಟಿಗೆ ಅವರ ಆಟಾಟೋಪಗಳೇ ಮತ್ತು ತತ್ತ್ವಶಾಸ್ತ್ರವು ಬಹುಮಟ್ಟಿಗೆ ಅವರ ಅನಿಸಿಕೆಗಳ ದಾಖಲೆಯೇ ಆಗಿದೆ. ಮಧ್ಯಯುಗೀಯ ಸಾಮಾಜಿಕ ಸಿದ್ಧಾಂತಕ್ಕೆ ವ್ಯಾಪಾರದ ವೃದ್ಧಿಯು ಬಲವಾದ ಪೆಟ್ಟು ಕೊಟ್ಟಿತು.

ಅದರ ಪ್ರಭಾವ ಗಮನಾರ್ಹ: ಮಧ್ಯಯುಗೀಯ ನಂಬಿಕೆಯಂತೆ ಪ್ರತಿಯೊಬ್ಬರಿಗೂ ಸಮಾಜದಲ್ಲಿ ಪ್ರತ್ಯೇಕ ಸ್ಥಾನವಿತ್ತು; ಶ್ರೀಮಂತನ ವಿಶಿಷ್ಟ ಜವಾಬ್ದಾರಿ, ವ್ಯಾಪಾರಿಯ ಕರ್ತವ್ಯ, ಹೀಗೆ. ಒಬ್ಬನು ಇನ್ನೊಬ್ಬನ ಸ್ಥಾನವನ್ನು ಕಸಿಯುವಂತಿರಲಿಲ್ಲ. ಆದರೆ, ವ್ಯಾಪಾರಿಯು "ಒಳ್ಳೆಯ" ವ್ಯಾಪಾರಿ ಎನಿಸಿಕೊಳ್ಳಬೇಕಾದರೆ, ಅಂದರೆ ಲಾಭಕೋರನಾಗಬೇಕಾದರೆ, ಶ್ರೀಮಂತರೊಡನೆ ಘರ್ಷಣೆ ಅನಿವಾರ್ಯ; ಅಂತೆಯೇ ವ್ಯಾಪಾರಿಯ ವ್ಯವಹಾರಗಳನ್ನು ಮೊಟಕುಗೊಳಿಸದೆ ಶ್ರೀಮಂತನು "ಒಳ್ಳೆಯ" ಶ್ರೀಮಂತನೂ ಆಗುವಂತಿರಲಿಲ್ಲ, ಅಂದರೆ ಭಾರಿ ಭೂಮಾಲೀಕನಾಗಿ ಉಳಿಯಲಾಗುತ್ತಿರಲಿಲ್ಲ; ಹೀಗಾಗಿ ಅಂದಿನ ಸಿದ್ಧಾಂತವು ತಲೆಕೆಳಗಾಗಬೇಕಾಯಿತು. ಈ ವರ್ಗಗಳು ತಮ್ಮ ತಮ್ಮ ಕರ್ತವ್ಯಗಳನ್ನು ಎಷ್ಟು ಫಲಪ್ರದವಾಗಿ ನಿರ್ವಹಿಸಿದವೋ ಅಷ್ಟೂ ಬಲವಾಗಿ ಅವುಗಳ ನಡುವಿನ ಘರ್ಷಣೆ ಹೆಚ್ಚಿತು. ಶಾಂತಿಯುತವಾಗಿ ಎಲ್ಲರೂ ತಮ್ಮ ತಮ್ಮ ನಿರ್ದಿಷ್ಟ ಸ್ಥಾನಗಳಲ್ಲಿ ಉಳಿದಿರುತ್ತಾರೆಂಬ ಸಿದ್ಧಾಂತವು ವಾಸ್ತವವಾಗಿ ವೈಷಮ್ಯಕ್ಕೆ ಹಾದಿ ಮಾಡಿಕೊಟ್ಟಿತು. ಹೊಸ ವ್ಯಾಪಾರಿ ವರ್ಗದ ಸಿದ್ಧಾಂತಿಗಳೂ ಇದ್ದರಲ್ಲ, ಅವರು ಅಂದಿನ ಪುರೋಗಾಮಿಗಳು ಎನ್ನದೆ ವಿಧಿಯಿಲ್ಲ. ಅವರು ಮುಂಚಿನ ನಿರ್ದಿಷ್ಟ ಸ್ಥಾನಗಳ ಸಿದ್ಧಾಂತವನ್ನು ತಳ್ಳಿಹಾಕಿದರು, ಅದಕ್ಕೆ ವಿರುದ್ಧವಾದೊಂದು ಸಿದ್ಧಾಂತವನ್ನು ಮಂಡಿಸಿದರು. ಯಾವುದೇ ಸಾಮಾಜಿಕ ಕರ್ತವ್ಯಗಳ ನಿರ್ವಹಣೆಯ ಆಧಾರದ ಮೇಲೆ ಒಬ್ಬ ವ್ಯಕ್ತಿಯ ಮಾಪನ ಸಾಧ್ಯವಿಲ್ಲ, ಆ ವ್ಯಕ್ತಿ ತನಗಾಗಿ ಏನೆಲ್ಲಾ ಸಾಧಿಸಿಕೊಳ್ಳಬಹುದೋ ಅದರ ಆಧಾರದ ಮೇಲೆ ಅವನ (ಅವಳ) ಬೆಲೆ ಕಟ್ಟಬೇಕು, ಎಂದು. ಇಡೀ ಸಮಾಜವು ಒಂದು ಶರೀರವಲ್ಲ, ಬದಲಾಗಿ ಸಮಾಜವು ಹಲವು ವ್ಯಕ್ತಿಗಳ ಸಮುದಾಯ, ಎಂದು ಅವರು ಪ್ರತಿಪಾದಿಸಿದರು. ಪ್ರತಿಯೊಂದು ಸಾಮಾಜಿಕ ವ್ಯಕ್ತಿಗೂ ತನ್ನದೇ ಆದ ವೈಯಕ್ತಿಕ ಹಿತಾಸಕ್ತಿಗಳ ಪ್ರೇರಣೆಯುಂಟು ಮತ್ತು ಪ್ರತಿಯೊಬ್ಬರಿಗೂ ಸಹಜ ಹಕ್ಕುಗಳುಂಟು. ಪರಸ್ಪರ ಸಂಬಂಧಗಳು ಕೇವಲ ಹಂಗಾಮಿ; ಪರಸ್ಪರ ಪ್ರಯೋಜನದಷ್ಟು ಮಟ್ಟಿಗೆ. ಅದೊಂದು ರೀತಿಯ ಕಠಿಣ ಒಪ್ಪಂದ. ಒಬ್ಬರ ಮೇಲೊಬ್ಬರ ಪ್ರಭಾವ ಎನ್ನುವುದು ಕೇವಲ ಗೌಣ; ಒಂದು ಕಲ್ಲುಗುಡ್ಡೆಯಲ್ಲಿನ ಕಲ್ಲುಗಳಲ್ಲಿದ್ದಂತೆ. ವ್ಯಕ್ತಿ, ಅವನ ಕೌಶಲ್ಯ ಮತ್ತು ಪ್ರಾಬಲ್ಯ, ಇವುಗಳ ಮೇಲಿನ ಒತ್ತು ಮಾನವ ಚಿಂತನೆಯಲ್ಲಿ ಅಮೂಲ್ಯವಾದ್ದು; ಆದರೆ ಸಾಮಾಜಿಕ ಕರ್ತವ್ಯದ ಕಲ್ಪನೆ ನಶಿಸಿಹೋದುದು ಅಪಾರ ನಷ್ಟ. ಉದಾಹರಣೆಗೆ, ಮಾಂಸದಂಗಡಿ

ಇಟ್ಟುಕೊಂಡವವ ಒಬ್ಬನಿದ್ದಾನೆನ್ನೋಣ. ಅವನ ಇರುವಿಕೆಗೆ ಸಮರ್ಥನೆ ಸಮಾಜದಲ್ಲಿ ಆಹಾರದ ಪೂರೈಕೆ ಮಾಡುವುದು. ಹೊಸ ಪ್ರಕ್ರಿಯೆಯಲ್ಲಿ ಈ ಸಮರ್ಥನೆಗೆ ಸ್ಥಾನವಿಲ್ಲ. ಹೊಟ್ಟೆ ಹೊರೆಯಲು ಅದೊಂದು ಮಾರ್ಗವೆಂಬುದಷ್ಟೇ ಈಗ ಅವನು ಹೇಳಬಹುದಾಗಿದ್ದುದು. ಹಿಂದಿನ ಸಂದರ್ಭದಲ್ಲಿ "ಒಳ್ಳೆಯ" ಮಾಂಸ ಮಾರಾಟಗಾರನು ಬೇಕಾದಷ್ಟು ಜನರಿಗೆ ಮಾಂಸ ಒದಗಿಸುವಂಥವನು; ಹೊಸ ಸಂದರ್ಭದಲ್ಲಿ ಅವನ ಆದಾಯವು ಅವನ "ಒಳ್ಳೆತನ"ಕ್ಕೆ ಸೂಚನೆ. ಆ್ಯಡಂ ಸ್ಮಿತ್ ಈ ಕುರಿತು ಹೇಳುವಾಗ ಮಾಂಸ, ರೊಟ್ಟಿ, ಮದ್ಯ ಇತ್ಯಾದಿಗಳನ್ನು ಮಾರುವವರ ಕೃಪೆಯಿಂದೇನೂ ಜನ ಜೀವಿಸುವುದಿಲ್ಲ; ಅವರೆಲ್ಲಾ ತಮ್ಮ ತಮ್ಮ ಹಿತಸಾಧನೆಗಾಗಿ ಅಂತಹ ಉದ್ಯೋಗಗಳಲ್ಲಿ ನಿರತರಾಗಿದ್ದಾರೆಂದು ಪ್ರತಿಪಾದಿಸಿದ್ದ. ಹೊಸ ಪದ್ಧತಿಯಲ್ಲಿ ಇದರ ಪ್ರಮಾಣ ಇನ್ನೂ ಹೆಚ್ಚಿನದು. ಹಿಂದಿನದು ಸ್ಥಗಿತ, ಸಾವಯವ ಸಿದ್ಧಾಂತ; ಹೊಸದು ಚಲನಶೀಲ, ನಿರವಯವ ಸಿದ್ಧಾಂತ. ಈ ವೈರುಧ್ಯವನ್ನು ಅಳಿಸಿಹಾಕಲು ಚಲನಶೀಲ ಸಾವಯವ ಸಿದ್ಧಾಂತವೊಂದರ ಅವಶ್ಯಕತೆ ಇದೆ. ಅದೇ ಭವಿಷ್ಯದ ಭರವಸೆ. ಇದಕ್ಕೆ ಪೂರ್ತಿ ವಿರುದ್ಧವಾದ್ದು ಸ್ಥಗಿತವಾದ ನಿರವಯವ ಸಿದ್ಧಾಂತ. ಫ್ಯಾಸಿಸಂನಲ್ಲಿ ಅಡಗಿರುವುದು ಇದೇ. ಇಲ್ಲಿ ಸ್ಥಗಿತವೆಂದರೆ ಶ್ರೇಣೀಕೃತ ಸ್ವರೂಪ, ಚಲನಶೀಲ ಎಂದರೆ ಹರಿವಿರುವುದು, ಪ್ರಜಾಪ್ರಭುತ್ವದ ಅವಕಾಶ ಇರುವುದು; ಸಾವಯವವೆಂದರೆ ಸಾಮಾಜಿಕ ಜವಾಬ್ದಾರಿ ಇರುವಂಥದು, ನಿರವಯವ ಎಂದರೆ ಸ್ವಹಿತವೊಂದನ್ನೇ ಆದ್ಯತೆಯನ್ನಾಗಿ ಉಳ್ಳದ್ದು. ಫ್ಯಾಸಿಸಂನಲ್ಲಿ ಉಚ್ಚ-ನೀಚ ಎಂಬ ವಿಂಗಡಣೆಯ ಜೊತೆ ಸ್ವಹಿತಕ್ಕೆ ಆದ್ಯತೆ ಇರುತ್ತದೆ, ಸಮಾನತೆ ಮತ್ತು ಸಾಮಾಜಿಕ ಜವಾಬ್ದಾರಿ ಸೊನ್ನೆ. ಆದ್ದರಿಂದಲೇ ಅದರ ಮೂಲೋತ್ಪಾಟನೆ ಅವಶ್ಯಕ.

ಹದಿನೇಳು, ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಸಮಾಜವನ್ನು ಕುರಿತ ಚಿಂತನೆಯಲ್ಲಿ ಅದು ಸ್ವಹಿತ ಸಾಧಿಸಿಕೊಳ್ಳುವ ವ್ಯಕ್ತಿಗಳ ಸಮೂಹ ಎಂಬಂತೆ ಪ್ರತಿಫಲಿಸಲಾಗಿದೆ. ಲೈಬ್‌ನಿಝ್ ಅದಕ್ಕೆ "ಕಿಟಕಿಗಳಿಲ್ಲದ ಏಕಧಾತು" ಎಂಬ ಹೆಸರಿಟ್ಟು ತತ್ತ್ವಶಾಸ್ತ್ರ ಬೆಳೆಸಿದ, ಅರ್ಥಶಾಸ್ತ್ರದಲ್ಲಿ ಮಾನವನನ್ನು "ಮ್ಯಾಂಚೆಸ್ಟರ್ ಮನುಷ್ಯ" ಎಂದರು (ಅಂದರೆ ಉದ್ಯಮದಲ್ಲಿ ದುಡಿದೋ ದುಡಿಯದೆಯೋ ಹಣ ಗಳಿಸುವವನು ಎಂದು), ಇತಿಹಾಸದಲ್ಲಿ ಕಾರ್ಲೈಲ್ 'ಹೀರೊ' ಎಂಬ ಕಲ್ಪನೆಯನ್ನು ತಂದ, ಮತ್ತು ಸಾಮಾಜಿಕ ಸುಖವೆಂದರೆ ಪ್ರತ್ಯೇಕ ವ್ಯಕ್ತಿಗಳ ಸುಖದ "ಮೊತ್ತ" ಎಂದು ಬೆಂತಾಮ್ ವ್ಯಾಖ್ಯಾನಿಸಿದ. ಇಡೀ ಆಧುನಿಕ ಯುಗದಲ್ಲಿ ಮನಶ್ಶಾಸ್ತ್ರವೆಂದರೆ ಪ್ರತ್ಯೇಕ ವ್ಯಕ್ತಿಗಳ ಅಧ್ಯಯನವೇ ಆಗಿದೆ, ಸಾಮಾಜಿಕ ಮನಶ್ಶಾಸ್ತ್ರವು ಕೇವಲ ಬಾಲಂಗೋಚಿಯಾಗಿಹೋಗಿದೆ. ನೀತಿಶಾಸ್ತ್ರವೂ ಅಷ್ಟೆ: ಪ್ರತ್ಯೇಕ ವ್ಯಕ್ತಿಯು ಯಾವ ಆಯ್ಕೆ ಮಾಡಿಕೊಳ್ಳಬೇಕೆಂಬುದಷ್ಟೇ ಅದರ ವಸ್ತು, ಸಾಮಾಜಿಕ ನೈತಿಕತೆಯ ಮಾತು ಇಲ್ಲವೇ ಇಲ್ಲವೆನ್ನುವಷ್ಟು ವಿರಳ. ರಾಜ್ಯಶಾಸ್ತ್ರ ಏನು ಮಾಡುತ್ತದೆ? ವ್ಯಕ್ತಿ ಮತ್ತು ಪ್ರಭುತ್ವದ ನಡುವಿನ ಸಂಬಂಧದ ಅಮೂರ್ತ, ಕೃತಕ ಪ್ರಶ್ನೆಗೆ ಒತ್ತು ನೀಡುತ್ತದೆ! ಯಾರ ಪ್ರಭುತ್ವ ಅದು ಎಂಬ ಪ್ರಶ್ನೆಯನ್ನೇ ಎತ್ತುವುದಿಲ್ಲ. ಎಲ್ಲ ಶಿಸ್ತುಗಳಲ್ಲೂ, ಅಧ್ಯಯನಗಳಲ್ಲೂ "ನಾನು, ನಾನು," ಅದಕ್ಕೆ ಪ್ರಮುಖ ಸ್ಥಾನ. ಇಂತಹ ಬೌದ್ಧಿಕ ವಾತಾವರಣದಲ್ಲಿ ಸ್ವಾತ್ಮೈಕವಾದವಲ್ಲದೆ ಮತ್ತೇನು ವಿಜೃಂಭಿಸೀತು? ವಾಸ್ತವ ಪ್ರಪಂಚದಲ್ಲಿ

ಸೌಖ್ಯವಿಲ್ಲದಾದಾಗ, 'ಆತ್ಮ'ವು ಆರಾಮವಾಗಿದ್ದರೆ, ಬರಬಹುದಾದ ಭಾವನೆ ಯಾವುದು? "ಯದ್ಭಾವಂ ತದ್ಭವತಿ" (ಹೇಗೆ ಭಾವಿಸಿಕೊಳ್ಳುತ್ತೀರೋ ಹಾಗೆ ವಾಸ್ತವವು ಇರುತ್ತದೆ) ಎಂಬುದು. ಅಮೆರಿಕಾದಲ್ಲಂತೂ ಈ ನಂಬಿಕೆಯು ಬಲವಾಗಲು ಎಮರ್ಸನ್ ಮತ್ತು ವಿಲಿಯಂ ಜೇಮ್ಸ್‌ರಂಥವರ ಬೋಧನೆಯ ಪಾತ್ರವೂ ಉಂಟು. ಹಾಗಿರುವಾಗ ಆ ಭಾವನೆಯನ್ನವರು ಕೈಬಿಟ್ಟಾರೆ? ಇಲ್ಲ, ಆದರೆ ಅದನ್ನು ಕೈಬಿಡದೆ ಅವರ ಏಳಿಗೆಯು ಸಾಧ್ಯವಾಗದು. ಯಾರು ತಮ್ಮ ಚಿಂತನೆಯಲ್ಲೇ ಜೀವಿಸುತ್ತಾರೋ ಅಂಥವರು ವಿಶ್ವದಲ್ಲಿ ಜೀವಿಸಲಾರರು. ಯಾರು ತನ್ನ ದನಿಯಲ್ಲೇ ಸುಖ ಕಾಣುತ್ತಾನೋ ಅವನಿಗೆ ದಿವ್ಯ ಸಂಗೀತ ಹೇಗೆ ದಕ್ಕಬಲ್ಲದು!

ಅಜ್ಞಾನಿಗಳ ಕೂಪ

ವಸ್ತುಗಳು ನಾವು ಆಲೋಚಿಸಿದಂತೆ ಇರುತ್ತವೆ (ಯದ್ಭಾವಂ ತದ್ಭವತಿ) ಎಂಬ ಧೋರಣೆಯನ್ನು ಜನ ನಂಬಬಹುದೆಂಬುದಕ್ಕೆ ಚಾರಿತ್ರಿಕ ಕಾರಣಗಳನ್ನು ನಾವು ಈವರೆಗೆ ಪರಿಶೀಲಿಸಿದ್ದೇವೆ. ಅಂತಹ ನಂಬಿಕೆಯು ಹೇಗೆ ಫ್ಯಾಸಿಸ್ಟ್ ಮನೋಭಾವಕ್ಕೆ ಹಾದಿ ಮಾಡಿಕೊಡುತ್ತದೆಂಬುದನ್ನೂ ನೋಡಿದ್ದೇವೆ. ಇದರಿಂದ ಅಪಾಯದ ಮುನ್ಸೂಚನೆ ನಮಗೆ ದೊರೆಯುತ್ತದೆಯಾದರೂ ಅಂತಹ ನಂಬಿಕೆಯೇ ತಪ್ಪೆಂಬುದನ್ನು ಇದು ತೋರಿಸಿಕೊಡುವುದಿಲ್ಲ. ಅದಕ್ಕೆ ಚರ್ಚೆಯ ಮುಂದುವರಿಕೆ ಅಗತ್ಯ. ಆಲೋಚನೆಯು ವಸ್ತುಗಳನ್ನು ಅವಿರುವಂತೆ ಮಾಡುತ್ತದೆಂದರೆ, ಅವು ಹಾಗಿರುವುದಕ್ಕೆ ನಾವು ಅವನ್ನು ಹಾಗೆ ನೋಡುವುದು ಕಾರಣ ಎಂದಾಗುತ್ತದೆ. ಅಥವಾ, ನಮ್ಮ ಪ್ರಜ್ಞೆಯು ಅವುಗಳ ಇರುವಿಕೆ ಮತ್ತು ಸ್ವರೂಪವನ್ನು ನಿರ್ಧರಿಸುತ್ತದೆ, ಎಂದರ್ಥ. ಈ ವಾದದ ಪ್ರಕಾರ ನಮ್ಮ ಪ್ರಜ್ಞೆಯಿಂದಲ್ಲದೆ ಆ ವಸ್ತುಗಳಿಗೆ ಅಸ್ತಿತ್ವ ಮತ್ತು ಸ್ವರೂಪ ಎಂಬುದೇನೂ ಇಲ್ಲ. ಅಂದರೆ, ಪ್ರಜ್ಞೆಗೆ ಪಾರಮ್ಯ ನೀಡಿದಂತಾಯಿತು. ಅದರ ಆಧಾರದ ಮೇಲೆಯೇ ಮಿಕ್ಕೆಲ್ಲದರ ಅಸ್ತಿತ್ವವು ನಿಂತಿದೆ. ಆದ್ದರಿಂದ, ಪ್ರಜ್ಞೆಯು ವಿಶ್ವವು ಅಸ್ತಿತ್ವಕ್ಕೆ ಬಂದಾಗಿನಿಂದಲೂ ಅಥವಾ ಅದಕ್ಕೂ ಮುಂಚೆಯಿಂದಲೂ, ಅಸ್ತಿತ್ವದಲ್ಲಿದ್ದಿರಬೇಕು. ನಮ್ಮಲ್ಲಿ ಯಾರೊಬ್ಬರ ಪ್ರಜ್ಞೆಯ ಬಗೆಗೂ ಇದು ನಿಜವಾದ ಮಾತಲ್ಲ. ಯಾರೋ ಒಬ್ಬ ವ್ಯಕ್ತಿಯ ಪ್ರಜ್ಞೆಯಿಂದಾಗಿ ವಿಶ್ವಕ್ಕೆ ಅಸ್ತಿತ್ವವಿಲ್ಲವೆನ್ನುವುದು ಸರಿಯಾದರೆ, ಆಗ ಅದಕ್ಕೆ ಒಂದು ಮಾತು ಸೇರಿಸಬಹುದು: ತಲೆಮಾರಿನಿಂದ ತಲೆಮಾರಿಗೆ ಸೇರಿದ ಜನಗಳ ಪ್ರಜ್ಞೆಯಿಂದಾಗಿ ವಿಶ್ವವು ಅಸ್ತಿತ್ವದಲ್ಲಿದೆ, ಎಂದು. ಈ ವಾದವೂ ನಿರರ್ಥಕ. ಭೂವಿಜ್ಞಾನದ ಪ್ರಕಾರ ಭೂಮಿಯು ಕೋಟಿಗಟ್ಟಲೆ ವರ್ಷಗಳಷ್ಟು ಹಿಂದಿನಿಂದಲೂ ಇದೆ, ಆದರೆ ಮಾನವ ಜನಾಂಗವು ಕೇವಲ 5 ಲಕ್ಷ ವರ್ಷಗಳಷ್ಟು ಈಚಿನದು. ಹೋಗಲಿ, ವಿಶ್ವಕ್ಕೆ ಆದಿ ಅಥವಾ ಆರಂಭ ಎಂಬುದೇನಾದರೂ ಇದ್ದಿತೆ? ಏನೇ ಇರಲಿ, ಭೂಮಿಯ ಮತ್ತು ವಿಶ್ವದ ಅಸ್ತಿತ್ವವನ್ನು ಆಗುಗೊಳಿಸಿದ್ದು ಮಾನವ ಪ್ರಜ್ಞೆಯಂತೂ ಅಲ್ಲ. ಅದಿಲ್ಲದೆಯೇ ಕೋಟಿಕೋಟಿ ವರ್ಷಗಳ ಕಾಲದಿಂದ ನಕ್ಷತ್ರಗಳು ತಮ್ಮ ಪಥದಲ್ಲಿ ಸಾಗುತ್ತಾ ಬಂದಿವೆ. ಅವು ಖಗೋಳ ವಿಜ್ಞಾನಿಗಳ ಬರುವಿಕೆಗೆ ಕಾದು ಕುಳಿತಿರಲಿಲ್ಲ. [ಲೆನಿನ್ ಹೇಳಿದ್ದ ಮಾತೊಂದನ್ನು ಇಲ್ಲಿ ನೆನೆಯಬಹುದು: "ಪ್ರಪಂಚವಿದೆ ಎಂಬುದನ್ನು ತಿಳಿಯುವಂತಹ ಜೀವಿಯೊಂದು ಬರುವ ಎಷ್ಟೋ ಶತಮಾನಗಳ ಹಿಂದೆಯೇ ಪ್ರಪಂಚವಿದ್ದಿತು."]

ಇನ್ನೊಂದು ಕಟ್ಟಕಡೆಯ ಸಾಧ್ಯತೆ ಇದೆ. ಅದೇನೆಂದರೆ, ವಿಶ್ವವು ವಿಶ್ವ ಪ್ರಜ್ಞೆ ಅಥವಾ ಜಗದಾತ್ಮನಲ್ಲಿ ಸದಾ ಉಳಿದುಬಂದಿದೆ, ಎಂಬುದು. ವಾದದಲ್ಲಿನ ತೊಡಕನ್ನು ನಿವಾರಿಸಿಕೊಳ್ಳಲು ಬಂದಿರುವ ಮಾತಿದು, ಅಷ್ಟೆ. ಆ ತಥಾಕಥಿತ ವಿಶ್ವಪ್ರಜ್ಞೆಯ ಅಸ್ತಿತ್ವಕ್ಕೆ ಪುರಾವೆಯೇನು? ಮತ್ತೆ ಅದೇ, ಆಲೋಚನೆಯು ಹೇಗಿರುತ್ತದೋ ಸಂಗತಿಯು ಹಾಗೆಯೇ ಇರುತ್ತದೆ, ಎಂಬ ಪುರಾವೆ! ಇಂತಹ ಊಹಾಜ್ಞಾನಕ್ಕೆ ಬೇರಾವ ಪ್ರಯೋಜನವೂ ಇಲ್ಲ. ಖಗೋಳಶಾಸ್ತ್ರವು ನಕ್ಷತ್ರಗಳ ಇತಿಹಾಸ ಹೇಳುತ್ತದೆ, ಭೂಗರ್ಭಶಾಸ್ತ್ರವು ಭೂಮಿಯ ಇತಿಹಾಸ ಹೇಳುತ್ತದೆ ಮತ್ತು ಮಾನವಶಾಸ್ತ್ರ ಮನುಷ್ಯನ ಚರಿತ್ರೆ ಹೇಳುತ್ತದೆ. ಅವಾವುದಕ್ಕೂ ವಿಶ್ವಪ್ರಜ್ಞೆಯ ಅಗತ್ಯ ಕಂಡುಬಂದಿಲ್ಲ. ಯಾವ ವೈಜ್ಞಾನಿಕ ಉದ್ದೇಶಕ್ಕೂ ಅದರ ಅಸ್ತಿತ್ವದ ಊಹಾಜ್ಞಾನ ಅನವಶ್ಯಕ.

ಬಾರ್ಕ್ಲೆಯ ಮಾತನ್ನು ಇನ್ನೊಮ್ಮೆ ನೋಡೋಣ. ಅವನ ಹೇಳಿಕೆಯ ಸಾರಾಂಶವಿಷ್ಟೆ: ನಮ್ಮ ಪ್ರಜ್ಞೆಯ ಹೊರತಾಗಿ ವಸ್ತುಗಳ ಅಸ್ತಿತ್ವವಿದೆಯೆಂದು ಹೇಳುವುದು ಅರ್ಥವಿಲ್ಲದ ಮಾತು, ಎಂದು. ಬಾರ್ಕ್ಲೆಯಾಗಲಿ, ಬೇರೆ ಯಾರೇ ಆಗಲಿ, ನಮ್ಮ ಸಂವೇದನೆಗಳಿಗೆ ನಮ್ಮನ್ನು ಹೊರತುಪಡಿಸಿ ಬೇರೊಂದು ಮೂಲವಿದೆ ಎಂಬುದನ್ನು ಒಪ್ಪುತ್ತಾರೆ. ಸಂವೇದನೆಗಳು ಬಹಳ ಮೊಂಡಾದವು, ಏಕೆಂದರೆ ಅವು ನಮ್ಮಿಷ್ಟದಂತೆ ನಡೆದುಕೊಳ್ಳುವುದಿಲ್ಲ, ನಾವು ಹೇಳಿದ ರೂಪದಲ್ಲಿ ಮೂಡುವುದಿಲ್ಲ. ಕಣ್ಣು ತೆರೆದು ನೋಡಿದರೆ ಪ್ರಪಂಚವು ಒಂದು ನಿರ್ದಿಷ್ಟ ಸಮಯದಲ್ಲಿ ಹೇಗಿರುತ್ತದೋ ಹಾಗೆಯೇ ಕಾಣುತ್ತದೆ. ನಾವಲ್ಲದೆ ಸಂವೇದನೆಗಳಿಗೆ ಬೇರೊಂದು ಮೂಲವಿದೆಯೆನ್ನುವುದಾದರೆ ಆ ಸಂವೇದನೆಗಳು ಆಯಾ ವಸ್ತುಗಳೇ ಆಗಿರುತ್ತವೆಂಬ ಊಹಾಜ್ಞಾನವು ತರ್ಕಬದ್ಧವಾಗಿದೆ. ಅವುಗಳ "ಮೊಂಡುತನ" ಆ ಮೂಲವು ನಮ್ಮಿಂದ ಹೊರತಾದ್ದು, ಸ್ವತಂತ್ರವಾದ್ದು, ಎಂಬುದನ್ನು ಖಚಿತಪಡಿಸುತ್ತದೆ ಮತ್ತು ವಾಸ್ತವಿಕ ಪ್ರಪಂಚವು ಇದೆಯೆಂಬುದಕ್ಕೆ ಅದು ಪುರಾವೆಯೂ ಆಗುತ್ತದೆ.

ಈಗ ಇನ್ನೊಂದು ಪರ್ಯಾಯ ಹೊಳೆದುಬಿಡಬಹುದು. ಬಾರ್ಕ್ಲೆ ಆಯ್ಕೆ ಮಾಡಿಕೊಂಡದ್ದು ಅದನ್ನೇ: ಆ ಹೊರಗಿನ ಮೂಲವು ದೇವರು ಎಂಬುದೇ ಆಗಿದೆ. ಈ ಊಹಾಜ್ಞಾನವೂ ಅಪ್ರಯೋಜಕವೇ, ಏಕೆಂದರೆ ತಾತ್ವಿಕ ವಿವರಣೆಯಾಗಿ ಇದರಲ್ಲೂ ಹಿಂದಿನ ಕೊರತೆಯೇ ಇರುತ್ತದೆ; ವಿಶ್ವ ಪ್ರಜ್ಞೆಯ ಬದಲು ದೇವರನ್ನು ತಂದಿಟ್ಟರೆ ವ್ಯತ್ಯಾಸವೇನೂ ಆಗುವುದಿಲ್ಲ. ಅದು ವಾಸ್ತವ ಸಂಗತಿಯ ವಿವರಣೆಗೆ ಅಗತ್ಯವಾದ ಪರಿಕರವಲ್ಲ. ಧಾರ್ಮಿಕ ಅನುಭವದ ಸಾಕ್ಷ್ಯವನ್ನು ನಿಜವೆಂದು ಅಂಗೀಕರಿಸಿದರೂ ಸಹ ನಮ್ಮ ಭೌತಿಕ ಸಂವೇದನೆಗಳಿಗೆ ಭಗವಂತನು ಮೂಲವೆಂದು ಸಿದ್ಧವಾಗುವುದಿಲ್ಲ. ತನ್ನ ಸರ್ವಶಕ್ತಿತ್ವದಿಂದ ಅವನು ಭೂಮ್ಯಾಕಾಶಗಳನ್ನು ಸೃಷ್ಟಿಸಿದ್ದು ನಮ್ಮಂತಹ ಜೀವಿಗಳ ಮನಸ್ಸುಗಳಿಗೆ ಏನೋ ಒಂದು ಹೂರಣರೂಪದ ಸಂವೇದನೆ ದೊರೆಯಲೆಂದೆ?

ಇಷ್ಟಾದ ಮೇಲೂ ಒಂದು ವಾದ ಹೂಡಬಹುದೇನೊ! ಏನದು? ಇಷ್ಟೆಲ್ಲಾ ತಪ್ಪುಗಳು ಕಂಡುಬಂದಿದ್ದು ಮಾನವ ಅನುಭವವನ್ನು ಸರಿಯಾಗಿ ಅರ್ಥೈಸದಿದ್ದುದರಿಂದ, ಅಷ್ಟೆ, ಎಂಬುದು. ಅನುಭವವು ಮೂಲತಃ ಯೋಚನಾಪರವಾದ್ದು ಎಂದು ಹೇಳುವುದೇ ತಪ್ಪೆಂಬುದು ಇದರ ಸಾರ. ವಾಸ್ತವ ಬೇರೆಯೇ ಇದೆ. ಅದೇನೆಂದರೆ, ಮನಸ್ಸು ಸಂವೇದನೆಗಳನ್ನು ಸ್ವೀಕರಿಸುತ್ತದೆ, ಗಮನಿಸುತ್ತದೆ. ಮನಸ್ಸು ಈ

"ಗಮನಿಸುವಿಕೆ"ಯಷ್ಟನ್ನೇ ಮಾಡಿದ್ದರೆ ಮನಸ್ಸಿನ ಸಂವೇದನೆಯ ಪರದೆಯ ಹಿಂದೆ ವಸ್ತುಗಳು ಇವೆಯೆ, ಇಲ್ಲವೆ, ಎಂದು ಅಚ್ಚರಿಪಡುವ ಸಂಭವವೇ ಇರುತ್ತಿರಲಿಲ್ಲ. ಮಾನವ ಅನುಭವವು ಕೇವಲ ಯೋಚನಾಪರವಾದ್ದಲ್ಲ. ಅದನ್ನು ಮೀರಿ ಅದು (ಅನುಭವವು) ಪ್ರಪಂಚವನ್ನು ಕ್ರಿಯಾತ್ಮಕವಾಗಿ ಕೌಶಲದಿಂದ ನಿರ್ವಹಿಸುತ್ತದೆ. ನಾವು ಸಂವೇದನೆಗಳನ್ನು ಸ್ವೀಕರಿಸುತ್ತೇವೆ, ನಿಜ, ಆದರೆ ಪರಿಸರವನ್ನು ವಿನ್ಯಾಸಗೊಳಿಸುತ್ತೇವೆ ಕೂಡ. ಅದೇನು ಇಂದಿನ ಸಂಗತಿಯಲ್ಲ, ಅನೂಚಾನವಾಗಿ ನಡೆದುಬಂದಿದೆ ಅದು. ಆ ವಿನ್ಯಾಸಗೊಳಿಸುವಿಕೆಯು ಯಶಸ್ವಿಯಾಗಿ ಜರುಗಬೇಕಾದರೆ ನಾವು ಪ್ರಪಂಚವನ್ನು ಇಂದು ಸ್ವತಂತ್ರ ಘಟಕವೆಂದು ಸ್ವೀಕರಿಸಬೇಕು. ಆಗ ಮಾತ್ರ ಅದರ ಲಕ್ಷಣಗಳನ್ನು ನಾವೆಷ್ಟು ತಿಳಿದಿದ್ದೇವೋ ಅಷ್ಟರ ಮಟ್ಟಿಗೆ ಅದನ್ನು ವಿನ್ಯಾಸಗೊಳಿಸುತ್ತಾ ಹೋಗಲು ಸಾಧ್ಯ. ವಿಜ್ಞಾನದ ಅತಿದೊಡ್ಡ ಸಾಧನೆ ಇದೇ: ಗಣಿತಶಾಸ್ತ್ರ, ಪ್ರಯೋಗ ಶಾಲೆಯಲ್ಲಿನ ವಿಶ್ಲೇಷಣೆ, ಮುಂತಾದವುಗಳ ಸಹಾಯದಿಂದ ವಸ್ತುಗಳು ಹೇಗೆ ನಡೆದುಕೊಳ್ಳುತ್ತವೆಂಬುದನ್ನು ತಿಳಿಸುವುದು. ನಾವು ಅವನ್ನು ನೋಡದಿದ್ದಾಗಲೂ ಅವು ಹಾಗೆಯೇ ನಡೆದುಕೊಳ್ಳುತ್ತವೆ. ಭೌತ ಪ್ರಪಂಚದ ಬಗೆಗಿನ ತಿಳಿವು ಸದಾ ಹೆಚ್ಚುತ್ತಲೇ ಬಂದಿರುವುದು ವಿಜ್ಞಾನದ ಸಾಧನೆಗೆ ಮತ್ತಷ್ಟು ಪುರಾವೆ ಒದಗಿಸುತ್ತದೆ.

ಹಾಗಾದರೆ ಸಾಮಾನ್ಯ ಸತ್ಯವೇನು? ಪ್ರಜ್ಞೆಯು ಪ್ರಕೃತಿಗಿಂತಲೂ ಮುಂಚಿನದಲ್ಲ, ಅದು ಪ್ರಕೃತಿಗೆ ತರುವಾಯದ್ದು. ಪ್ರಕೃತಿಯು ಅನೇಕಾನೇಕ ವೈಭವಗಳುಳ್ಳ ಸಂಪತ್ತನ್ನು ನಿರ್ಮಿಸಿದೆ, ಆ ಪೈಕಿ ಪ್ರಜ್ಞೆಯುಳ್ಳ ಮನುಷ್ಯ ಜೀವಿಗಳೂ ಸೇರಿದ್ದಾರೆ. ಪ್ರಕೃತಿಯು ಪ್ರಜ್ಞೆಯನ್ನು ಸದಾಕಾಲವೂ ಶಕ್ತಿಯುತವಾಗಿ ಪ್ರಭಾವಿಸುತ್ತಿರುತ್ತದೆ. ಹೀಗಿರುವಾಗ ನಾವು ಆಲೋಚಿಸಿದಂತೆಯೇ ವಾಸ್ತವವು ಇರುತ್ತದೆಯೆಂದು ಗಂಭೀರವಾಗಿ ನಂಬಿದರೆ ಅದು ವಿಶ್ವವನ್ನು ತನ್ನ ತಲೆಯ ಮೇಲೆ ನಿಲ್ಲಿಸಿದಂತಾಗುತ್ತದೆ, ಅಂದರೆ ತಲೆಕೆಳಗು ಮಾಡಿದಂತಾಗುತ್ತದೆ. ಇಂತಹ ತಪ್ಪು ಇನ್ನಷ್ಟು ತಪ್ಪುಗಳಿಗೆ ಎಳೆದೊಯ್ಯುತ್ತದೆ. ವಾಸ್ತವ ಪ್ರಪಂಚದಲ್ಲಿ ತುಂಬಿಕೊಂಡಿರುವ ವಾಸ್ತವ ಕೆಡುಕುಗಳನ್ನು ನಿವಾರಿಸುವ ಬದಲು, ಹೀಗಿದ್ದು ಹಾಗೆ ಹೋಗುವ ಸುಖಕ್ಕಾಗಿ ಹಲುಬುವುದು ಶ್ರೇಯಸ್ಕರವಲ್ಲ. ವಸ್ತುಗಳ ಜಾಗದಲ್ಲಿ ಭಾವನೆಗಳನ್ನು ಪ್ರತಿಷ್ಠಾಪಿಸುವುದು ಕೇವಲ ಅಲ್ಪಕಾಲಿಕ ಸುಖವಲ್ಲದೆ ಮತ್ತೇನು! ನಮ್ಮ ಮುಂದಿರುವ ದೊಡ್ಡ ವಿಚಾರ ವಾಸ್ತವ ಕೆಡುಕುಗಳ ನಿವಾರಣೆ. ಅದು ನಿರಂತರವಾದ ಕೆಲಸ. ಬಿಕ್ಕಟ್ಟಿನ ಹಾಗೂ ಹಾಯಾಗಿರುವ ಎರಡೂ ಸಂದರ್ಭಗಳಲ್ಲಿ ಈ ಕೆಲಸ ನಡೆಯಬೇಕು. ತರ್ಕಬದ್ಧವಾಗಿ ಚಿಂತಿಸುವವರ ಎಲ್ಲ ಶಕ್ತಿಯೂ ಅದಕ್ಕೆ ವಿನಿಯೋಗವಾಗುತ್ತದೆ. ಇದೇನಿದು ಎನಿಸಬಹುದು, ಆದರೆ ಸತ್ಯವಿರುವುದೇ ಹಾಗೆ ಮತ್ತು ಅದು ನ್ಯಾಯಯುತವಾದ್ದು ಸಹ: ಆತ್ಮದ ಶಾಂತಿಯನ್ನು ಕುರಿತಂತೆ ಹಲವು ಆಶ್ವಾಸನೆಗಳನ್ನು ಸುಳ್ಳುಸುಳ್ಳೇ ವಾಗ್ದಾನ ಮಾಡುವ ನಿಗೂಢ ಸತ್ಯಗಳ ವಕ್ತಾರರ ದಂಡು ದೊಡ್ಡದಿದೆ. ಅವರೆಲ್ಲ ನಮ್ಮನ್ನು ಪ್ರಪಂಚದಿಂದ ತಪ್ಪಿಸಿಕೊಳ್ಳಲು ಪ್ರೇರೇಪಿಸುತ್ತಾರೆ. ತರ್ಕವು ಅದೇ ಪ್ರಪಂಚವನ್ನು ಬದಲಾಯಿಸಲು ನಮಗೆ ಪ್ರೇರೇಪಣೆ ನೀಡುತ್ತದೆ. ತರ್ಕಬುದ್ಧಿ ಮತ್ತು ಸಾಮಾಜಿಕ ಆಶಯಗಳನ್ನುಳ್ಳವರು ಮಾತ್ರವೇ ಚೈತನ್ಯಯುತವಾದ ಶಾಂತಿಯ ಪ್ರಾಪ್ತಿಗೆ ಭಾಜನರಾಗುತ್ತಾರೆ.

❑❑

7. ಕಲೆ ಮತ್ತು ರಾಜಕೀಯ ಬೆರೆಯುವುದುಂಟೆ!

ಹಿಟ್ಲರನನ್ನು ಸೋಲಿಸಿ ಬರ್ಲಿನ್ ನಗರವನ್ನು ಮೊದಲು ಪ್ರವೇಶಿಸಿದ್ದು ಸೋವಿಯೆತ್ ಒಕ್ಕೂಟದ ಸೈನ್ಯ. ನಂತರ ಅಮೆರಿಕಾದ ತುಕಡಿಗಳೂ ಬಂದವು. ಹೀಗೆ ಬಂದ ತುಕಡಿಗೆ ಒಬ್ಬ ಚಲನಚಿತ್ರ ತಾರೆ ಸೆರೆ ಸಿಕ್ಕಳು. ಅವಳ ಹೆಸರು ಲೆನಿ ರೀಫ್ಲೆನ್‌ಸ್ಟಾಲ್. ಒಬ್ಬ ಸೈನಿಕ ಹೇಳಿದ, "ಏನಮ್ಮಾ, ನಾನು ಎಷ್ಟೊಂದು ಸಿನಿಮಾ ನೋಡಿದ್ದೇನೆ, ಆದರೆ ನಿನ್ನ ಹೆಸರೇ ನಾನು ಕೇಳಿಲ್ಲವಲ್ಲ?" ಎಂದು. ಕೇಳಿರಲಾರ, ಏಕೆಂದರೆ ಅವಳು ಹಾಲಿವುಡ್‌ಗೆ ಒಮ್ಮೆ ಭೇಟಿ ನೀಡಿದ್ದಳು ಅಷ್ಟೆ; ನಟಿಯಾಗಿ ಪ್ರಸಿದ್ಧಳಾಗಲು ಅವಕಾಶವಿರಲಿಲ್ಲ. ಆದರೆ ಯೂರೋಪಿನಲ್ಲಿ ಅವಳು ಖ್ಯಾತಳು. ಅವಳದ್ದೊಂದು ಸೌಂದರ್ಯ ಮೀಮಾಂಸೆ ಇದ್ದಿತು. ಅವಳು ಹೇಳಿದ್ದುದು ಇದು: "ಹಿಟ್ಲರ್ ನನಗೆ ಬಹಳ ಹಿಡಿಸುತ್ತಾನೆ, ಆದರೆ ನಾನು ನಾಜ಼ಿ ಪಕ್ಷಕ್ಕೆ ಸೇರಿಲ್ಲ. ನೋಡಿ, ನಾನೊಬ್ಬ ಕಲಾವಿದೆ; ರಾಜಕೀಯದಲ್ಲಿ ನಾನು ಭಾಗವಹಿಸುವುದಿಲ್ಲ. ಅಲ್ಲದೆ, ನನಗೆ ಅನೇಕ ಯಹೂದಿ ಮಿತ್ರರಿದ್ದಾರೆ."

ಇದನ್ನು ಕೇಳಿದಾಗ ಕಲಾವಿದನೊಬ್ಬನ ನೆನಪಾಯಿತು. ಕೆಲವು ವರ್ಷಗಳ ಹಿಂದೆ ಆತನ ಭೇಟಿಯಾಗಿತ್ತು. ಮಾತನಾಡುತ್ತಾ ಸ್ವಲ್ಪ ವಿಸ್ಕಿ ಕೂಡ ಸೇವಿಸಿದ್ದೆವು. ಮಧ್ಯೆ ಆತನೆಂದ: "ನಾನು ಕಲಾವಿದ. ಮುಂದಿನ ಪೀಳಿಗೆಗಳಿಗೆ ಒಂದಷ್ಟು ಹೂವುಗಳನ್ನು ಕಾಪಾಡಿಕೊಟ್ಟರೆ ಸಾಕು, ಅಷ್ಟೇ ನನ್ನ ಕೆಲಸ." ಅವನದನ್ನು ಹೇಳಿದ ದಿನಗಳಲ್ಲಿ ಯೂರೋಪಿನಲ್ಲಿ ಬೆಂಕಿ ಹೊತ್ತಿ ಉರಿಯುತ್ತಿತ್ತು, ಸ್ಪೇನ್‌ನಲ್ಲಿ ಪ್ರಜಾಪ್ರಭುತ್ವಕ್ಕಾಗಿ ಅಂತರ್ಯುದ್ಧ ನಡೆಯುತ್ತಿತ್ತು, ಭೀಕರ ಭವಿಷ್ಯದ ಸೂಚನೆ ಪ್ರಬಲವಾಗಿತ್ತು. ಹೂವುಗಳನ್ನು ಆರಿಸುವುದಕ್ಕಿಂತಲೂ ಹೆಚ್ಚಾಗಿ ಮಾಡಬಹುದಾದ್ದು ಕಲಾವಿದರಿಗೆ ಎಷ್ಟೋ ಇತ್ತು. ಸ್ಪೇನ್ ಗಣರಾಜ್ಯವನ್ನು ಬೆಂಬಲಿಸಿ ನಿಂತಿದ್ದರೆ ಲಕ್ಷಗಟ್ಟಲೆ ಜೀವಗಳು ಉಳಿಯುತ್ತಿದ್ದವು, ಸಾವಿರಾರು ಜನರನ್ನು ಪೊಲೀಸರು ಬೇಟೆಯಾಡಿದ್ದನ್ನು ತಡೆಯಬಹುದಿತ್ತು. ಆದರೆ ಅದು 'ರಾಜಕೀಯ' ವಾದ್ದರಿಂದ ಈ ಕಲಾವಿದ ದೂರ ನಿಂತುಬಿಟ್ಟ, ಮಾನವ ಜನಾಂಗದ ಹತ್ಯೆ ನೋಡುತ್ತಾ ಕಣ್ಣು ಮುಚ್ಚಿಕೊಂಡ.

ಇಂತಹ ಮಿಥ್ಯೆಯಿಂದ ಉಪಯೋಗವಾದ್ದು ಯಾರಿಗೆ? ನನ್ನ ಕಲಾವಿದ ಸ್ನೇಹಿತನಿಗೆ ಏನೂ ಉಪಯೋಗವಾಗಲಿಲ್ಲ. ಅವನ ಕುಂಚಕ್ಕೆ ಅದ್ಭುತ ವಸ್ತುವಿತ್ತು, ಸಾಧ್ಯತೆ ಇತ್ತು; ಆದರೆ ಮಾನವನ ಸ್ವಾತಂತ್ರ್ಯ ಅವನಿಗೆ ಮುಖ್ಯವೆನಿಸಲಿಲ್ಲ. ಹೋಗಲಿ, ನಮಗೆ-ನಿಮಗೆ ಏನಾದರೂ ಪ್ರಯೋಜನವಾಯಿತೆ? ಅದೂ ಇಲ್ಲ, ಏಕೆಂದರೆ ನಮ್ಮಂಥವರನ್ನು ಬಡಿದೆಬ್ಬಿಸುವ ಕೆಲಸ ಮಾಡಬಹುದಾಗಿದ್ದವನು ನಿಷ್ಕ್ರಿಯತೆಯ ಭಾವ ತಳೆದಿದ್ದ. ಉಪಯೋಗವಾದ್ದು ಫ್ಯಾಸಿಸ್ಟರಿಗೆ, ಯೂರೋಪಿನ ಜನಸಾಮಾನ್ಯರಿಗಲ್ಲ.

ಕೊಲೆಪಾತಕರಿಗೆ ಅನುಕೂಲವಾಗುವಂತೆ ನಮ್ಮ ಕಲಾವಿದ ಅವರನ್ನು ಎದುರಿಸ ಬೇಕಾಗಿದ್ದವರನ್ನು ಮೌನಿಗಳನ್ನಾಗಿಸಿದ್ದ, "ನಾನು ಕಲಾವಿದ, ನನಗೇಕೆ ಇದರ ಗೊಡವೆ?" ಎಂದುಬಿಟ್ಟ. ಅಂದರೆ, ಕಲೆ ಮತ್ತು ರಾಜಕೀಯಗಳ ನಡುವೆ ಸಂಬಂಧವಿಲ್ಲ ಎಂದು ಹೇಳುವುದಕ್ಕೆ ಒಂದು ಸಾಮಾಜಿಕ ಪ್ರಯೋಜನವಿದೆ: ಜನರನ್ನು ಮೌನಿಗಳನ್ನಾಗಿಸುವುದು, ನಿಶ್ಶಸ್ತ್ರರನ್ನಾಗಿ ಮಾಡುವುದು. ಕಲಾ ಸೌಂದರ್ಯದ ನೆರವಿನಿಂದ ಭಾವನೆಗಳನ್ನು ಮೂಡಿಸಿದರೆ ಅದು ಜನರ ಮನದಾಳವನ್ನು ಹೊಗುತ್ತದೆ; ಜನ ಅವನ್ನು ಸ್ವೀಕರಿಸುತ್ತಾರೆ, ಪ್ರತಿಕ್ರಿಯಿಸುತ್ತಾರೆ. ಕ್ರಮೇಣ ಅದು ಜ್ವಾಲೆಯಾಗಿ ಹೊಮ್ಮುತ್ತದೆ. ಅಮೆರಿಕಾದಲ್ಲಿ "ಅಂಕಲ್ ಟಾಮ್ಸ್ ಕ್ಯಾಬಿನ್" ಸಾಕಷ್ಟು ಪ್ರಸಿದ್ಧಿ ಪಡೆದರೆ ಅಂತರ್ಯುದ್ಧ ಆಗಿಬಿಡಬಹುದು, ಕರಿಯರ ಮೇಲಿನ ದಬ್ಬಾಳಿಕೆಯ ವಿರುದ್ಧ ಜನಸಾಮಾನ್ಯರು ಸಿಡಿದೇಳಬಹುದು. ಅಷ್ಟು ಪ್ರಖರವಾಗಿ ಕರಿಯರ ಮೇಲಿನ ಹಿಂಸೆಯನ್ನು ಲೇಖಕಿ ಚಿತ್ರಿಸಿದ್ದಾಳೆ. ಆದ್ದರಿಂದ ಪ್ರತಿಗಾಮಿಗಳು ಎಚ್ಚರವಹಿಸಿ ಸಾಧ್ಯವಾದಷ್ಟು ಮಟ್ಟಿಗೆ ಅಂತಹ ಕಾದಂಬರಿ, ನಾಟಕ, ಬಾರದಂತೆ ನೋಡಿಕೊಳ್ಳುತ್ತಾರೆ. ಮಾನವನ ನೋವು ಮತ್ತು ಅದಕ್ಕೆ ಮದ್ದು ಜನಮಾನಸದಿಂದ ದೂರವಿರುವಂತೆ ಮಾಡುವುದು ಅವರ ಕ್ಷೇಮಕ್ಕೆ!

ಆದರೆ ಪ್ರಜಾಪ್ರಭುತ್ವದಲ್ಲಿ ಸರ್ಕಾರಿ ಯಂತ್ರವನ್ನು ಬಳಸಿ ಇಂಥದನ್ನು ಎಷ್ಟು ಕಾಲ ಮಾಡಿಯಾರು? ಆದ್ದರಿಂದ ಕಲಾವಿದ ಏನು ಬೇಕೋ ಅದನ್ನು ಸೃಷ್ಟಿಸಿಕೊಳ್ಳಲಿ, ಅದನ್ನು ಜನರಿಗೆ ತಲುಪದಂತೆ ಮಾಡುವ ತಂತ್ರ ಸಿದ್ಧಿಸಿದರೆ ಸಾಕು ಅವರಿಗೆ. ಅದನ್ನು ಪರಿಣಾಮಕಾರಿಯಾಗಿ ಮಾಡುವುದು ಹೇಗೆ? ಕಾದಂಬರಿಕಾರ–ನಾಟಕಕಾರ–ಕಲಾವಿದರನ್ನು ನಂಬಿಸಬೇಕು, ತಮ್ಮ ನಿಜವಾದ ಆಸಕ್ತಿ ಬೇರಿನ್ನೇನೋ, ಎಂದು. ಕಲೆಗಳಿಗೆ ಸಾಮಾಜಿಕ ವಿಚಾರಗಳು ಹೊರತಾದರೆ ಸಾಕು, ಉನ್ನತ ಮಟ್ಟದಲ್ಲಿ ಸಂವಹನ ಮಾಡುವವರ ಬಾಯಿ ಮುಚ್ಚಿಸಿದಂತಾಗುತ್ತದೆ. ಇದು ಪ್ರತಿಬಂಧಕ ಸಾಧನ. ಆದರೆ ಅದಕ್ಕೆ ಬಗ್ಗದ ಕಲಾವಿದರ ಬಾಯಿ ಮುಚ್ಚಿಸುವುದು ಹೇಗೆ? ಅವರ ಕೃತಿಗಳು "ಕಲೆಯಲ್ಲ, ಅವು ಕೇವಲ ಪ್ರಚಾರ" ಎಂದು ಜನರನ್ನು ನಂಬಿಸಬೇಕು. ಅದಕ್ಕಾಗಿಯೇ ಅಂಥವರ ಕಲಾಕೌಶಲ್ಯವನ್ನು ಅನುಮಾನಿಸಲಾಗುತ್ತದೆ, ಅವರ ಸಹೃದಯ ವಲಯವನ್ನು ಕುಗ್ಗಿಸಲಾಗುತ್ತದೆ. ಒಂದು ಬಾರಿಯಾದರೂ ನೇರವಾಗಿ ಅವರ ಸಾಮಾಜಿಕ ಕಾಳಜಿಗಳ ಪ್ರಶ್ನೆಯನ್ನೆತ್ತದೆ ಅವರನ್ನು ಅಪಮೌಲ್ಯಗೊಳಿಸುತ್ತಾರೆ. ಸಾಹಿತ್ಯ ಮೀಮಾಂಸೆಯ ಸೂತ್ರಗಳನ್ನು ಈ ದೃಷ್ಟಿಯಿಂದ ನಿರೂಪಿಸಿ ಅದೇ ಶ್ರೇಷ್ಠವೆಂಬ ಮಿಥ್ಯೆಯನ್ನು ಹರಡುವುದೂ ಉಂಟು.

ಇಲ್ಲಿಯ ಸ್ವಾರಸ್ಯವಿರುವುದೇ ಅದರಲ್ಲಿ: ಇಡೀ ಉದ್ದೇಶ ರಾಜಕೀಯವಾದ್ದು, ಆದರೆ ಅದನ್ನು 'ಕಲೆಯು ರಾಜಕೀಯ ಸಂಬಂಧ ಹೊಂದಿರಬಾರದು' ಎಂಬ ಮುಸುಕಿನಲ್ಲಿ ನೆರವೇರಿಸಿಕೊಳ್ಳುವ ಹುನ್ನಾರವಿದೆ. ಕಲಾತಂತ್ರವನ್ನು ತಮ್ಮ ವ್ಯವಸಾಯದಿಂದ ಸಿದ್ಧಿಸಿಕೊಂಡ ಕಲಾವಿದರು ಆ ತಂತ್ರವು ಎಷ್ಟು ಸುಭಗವಾಗಿ ತಮ್ಮ ಸಂವಹನಕ್ಕೆ ಮೆರುಗುಕೊಟ್ಟಿದೆಯೆಂದು ಸಂಭ್ರಮಿಸುವುದು ಸಹಜ. ಸಹೃದಯರು ಸಹ ಅದಕ್ಕೆ ಪ್ರಾಶಸ್ತ್ಯ ನೀಡಿ ಕಲಾವಿದನ ಶ್ರೇಷ್ಠತೆ ಮತ್ತು ಯಶಸ್ಸು ಇರುವುದೇ ಆ ತಂತ್ರದಲ್ಲಿ ಎಂಬ ಭ್ರಮೆಗೆ ತುತ್ತಾಗಬಹುದು. ಏನು ಅಭಿವ್ಯಕ್ತವಾಗಿದೆ ಎಂಬುದಕ್ಕಿಂತ ಹೇಗೆ

ಅಭಿವ್ಯಕ್ತವಾಗಿದೆ ಎಂಬುದು ಹೆಚ್ಚು ಮಹತ್ವ ಪಡೆದುಕೊಳ್ಳುವುದು ಈ ಕಾರಣದಿಂದ. ಹೂರಣಕ್ಕಿಂತಲೂ ಹೊದಿಕೆಗೆ ಆದ್ಯತೆ ಸರಿಯೇ ಎಂಬ ಪ್ರಶ್ನೆ ಎತ್ತುವ ಬದಲು ಕಲಾವಿದನು ತನ್ನ ಸುತ್ತಣ ವಿದ್ಯಮಾನಗಳಿಂದ ಎಷ್ಟೊಂದು ನಿರ್ಲಿಪ್ತನಾಗಿ ಉಳಿದಿದ್ದಾನೆಂದು ಅವನನ್ನು ಹೊಗಳುವ ಪ್ರವೃತ್ತಿ ಕಂಡುಬಂದರೆ ಆ ನಿರ್ಲಿಪ್ತತೆಯನ್ನು ಅವನು ಬೆಳೆಸಿಕೊಂಡಿದ್ದು ಹೇಗೆ ಎಂಬ ಪ್ರಶ್ನೆ ಪ್ರಸ್ತುತವಾಗುತ್ತದೆ. ಉದಾಹರಣೆಗೆ ಒಬ್ಬ ಸಾಹಿತಿಯ ಕೃತಿಯನ್ನು ಗಮನಿಸಿ: ಅವನಿಗೆ ಪದಗಳೇ ಮಾಧ್ಯಮ. ಪದಗಳಿಗೆ ಅರ್ಥವಿದೆ, ಭಾವನಾತ್ಮಕ ವ್ಯಾಪ್ತಿ ಇದೆ. ಪದಗಳನ್ನು ಜೋಡಿಸುವಾಗ ಎಷ್ಟೇ ಬೇಡವೆಂದರೂ ಕೆಲವು ಭಾವನೆಗಳು ಸಹಜವಾಗಿಯೇ ವ್ಯಕ್ತವಾಗಿಬಿಡುತ್ತವೆ. ಅಂದರೆ, ಅವನು ತನ್ನ ಸುತ್ತಣ ಪ್ರಪಂಚವನ್ನು ಬಿಟ್ಟು ಬೇರೆಲ್ಲಿಗೋ ಹೋಗಿಲ್ಲ; ಜೀವನ ಅವನ ವಸ್ತುವಾಗಿಯೇ ಉಳಿದಿರುತ್ತದೆ. ಪದಗಳು ಕೇವಲ ಶಬ್ದ ಹೊರಡಿಸಿ, ಅರ್ಥ ನೀಡದಿರುವಂತಿದ್ದರೆ ಸಾಹಿತಿ ನಿರ್ಲಿಪ್ತನಾಗಿರಬಹುದಿತ್ತು. ಅವನು ಜೋಡಿಸುವ ಪದಗಳು ಅಂತಹ ಲಕ್ಷಣ ಹೊಂದಿಲ್ಲ. ಕೆಲವು ಕವಿಗಳು ಆ ದಿಕ್ಕಿನಲ್ಲಿ ಪ್ರಯತ್ನ ನಡೆಸಿದ್ದಾರೆ. ಆದರೆ ಯಶಸ್ವಿಗಳಾಗಿಲ್ಲ. ಗಟ್ರೂಡ್ ಸ್ಟೇನ್ ಎಂಬಾಕೆಯ ಬಗ್ಗೆ ಇದನ್ನು ಹೇಳುವುದುಂಟು.

ಹಾಗೆ ನೋಡಿದರೆ, ಚಿತ್ರ ಬಿಡಿಸುವ ಕಲಾವಿದ ಹೆಚ್ಚು ನಿರ್ಲಿಪ್ತನಾಗಿರಲು ಸಾಧ್ಯ. ಸಾಮಾನ್ಯ ಜೀವನದ ಚಲನವಲನಗಳನ್ನು ಚಿತ್ರಿಸುವುದನ್ನು ಬಿಟ್ಟು ವಾಸ್ತವವನ್ನು ಮೀರಿ ಕಲೆಯನ್ನು ಉಣಬಡಿಸಲು ಅವನು ಬಣ್ಣಗಳನ್ನು ತನ್ನ ಮನಬಂದಂತೆ ಬಳಸಬಲ್ಲ. ಪ್ರಪಂಚದ ವಸ್ತುಗಳಿರುವಂತೆ ಇರದ ಚಿತ್ರಣ ಅವನನ್ನು ಆಕ್ಷೇಪಕ್ಕೆ ಗುರಿಯಾಗಿಸುವುದಿಲ್ಲ. ಎಲ್ಲವೂ ವಾಸ್ತವ ಪ್ರಪಂಚದ ಪ್ರತಿಪಾದನೆಯಾಗಿರಬೇಕಿಲ್ಲವೆಂಬ ಸೂತ್ರ ಅವನಿಗೆ ಅನ್ವಯವಾಗಬಲ್ಲದು. ಆಗಲೂ ಸಹ ಅವನು ಪೂರ್ತಿಯಾಗಿ ನಿರ್ಲಿಪ್ತನಾಗಿರ ಬೇಕಾದರೆ ಅವನ ಕೃತಿಯು ಏನನ್ನೂ ಸೂಚಿಸದಂತಿರಬೇಕು; ಹಾಗೇನಾದರೂ ಇದ್ದರೆ ಅದು ಮತ್ತೆ ಯಾವುದೋ ಭಾವನೆಯ ಅಭಿವ್ಯಕ್ತಿಯಾಗಿಬಿಡುತ್ತದೆ. ಅಂತಹ ಕಲಾಕೃತಿಗಳಿವೆ; ಉದಾಹರಣೆಗೆ ಕಾಂಡಿನ್‌ಸ್ಕಿಯದು; ಆದರೆ ಅವನು ಸಹ ಒಂದು ಚಲನೆ ಮತ್ತು ಸಾಮರಸ್ಯದ ಹೊಳಹನ್ನು ನೀಡುತ್ತಾನೆ. ಅದರಿಂದ ನೋಡುಗನು ಬೇರಿನ್ನೆಷ್ಟೋ ಭಾವನೆಗಳನ್ನು ಮೂಡಿಸಿಕೊಳ್ಳಲು ಅಡ್ಡಿಯಿಲ್ಲ. ಸಂಗೀತ ರಚನೆ ಮಾಡುವವರು ಕೇವಲ ಶಬ್ದದ ಪ್ರಯೋಗ ಮಾಡಬಲ್ಲರು. (ಇದು ಕೀರ್ತನೆಗಳ ಸಂದರ್ಭದಲ್ಲಿ ನಿಜವಲ್ಲ, ಏಕೆಂದರೆ ತ್ಯಾಗರಾಜರಂಥವರಿಗೆ ಸಾಹಿತ್ಯವಿಲ್ಲದೆ ಸಂಗೀತವಿಲ್ಲ. ಬೀಥೋವೆನ್, ಚೈಕೋವ್‌ಸ್ಕಿ, ಮುಂತಾದವರು ಶಬ್ದದ ಜೋಡಣೆಯನ್ನು ಸಂಗೀತದ ಪ್ರಧಾನಾಂಶವಾಗಿಸುತ್ತಾರೆ). ಹಾಗೆ ಶಬ್ದದಿಂದಲೇ ಸಂಗೀತ ಕೃತಿ ರಚಿಸಿದವರು ಸಹ ಯಾವ ಭಾವನೆಗಳನ್ನೂ ಅಭಿವ್ಯಕ್ತಿಸದೆ ಇರುತ್ತಾರೇನು? ಬೀಥೋವೆನ್‌ರಂಥವರು ಅಗಾಧ ದಾರ್ಶನಿಕ ತತ್ವಗಳನ್ನು ತಮ್ಮ ಸಂಗೀತದಲ್ಲಿ ಮೇಳೈಸಿದ್ದಾರೆ. ಹೀಗಿರುವಾಗ ಅರ್ಥವಿಲ್ಲದ ಸಂಗೀತ ಎಲ್ಲಿಂದ ಬಂದೀತು? (ಪ್ರೊಫೆಸರ್ ಎ.ಎನ್.ಮೂರ್ತಿರಾಯರು 'ಸಂಗೀತ ಜ್ಞಾನಮು ಅರ್ಥ ವಿನಾ' ಇದ್ದರೆ ಉದಾತ್ತವಾಗಿರುತ್ತದೆಂದು ಹೇಳಿದಾಗಲೂ ಸಂಗೀತಕ್ಕೆ ಭಾವನೆಗಳ ಸಂಪತ್ತಿದೆ ಎಂಬುದನ್ನು ಒಪ್ಪಿದ್ದಾರೆ.) ಸಂಗೀತದ ಶಬ್ದಗಳಿಂದ ಶ್ರೋತೃವು ಏನೋ ಒಂದು ಅರ್ಥ ಪಡೆದುಕೊಳ್ಳುವುದಂತೂ ನಿಜ. ಇಲ್ಲದಿದ್ದರೆ ಸಂಗೀತ ಯಾರು ಕೇಳುತ್ತಾರೆ!

ಕಲೆಗೆ ಅರ್ಥವಿಲ್ಲದಿರುವ ಸಂದರ್ಭ ತೀರಾ ಅಪರೂಪವೇ ಎಂದಂತಾಯಿತು. ಜೀವನಕ್ಕೆ ಹೇಗೋ ಒಂದು ರೀತಿಯಲ್ಲಿ ಸಂಬಂಧಿಸಿರದ ಕಲೆಯನ್ನು ಎಲ್ಲಿಂದ ತರೋಣ! ಕಲಾವಿದನಿಗೆ ಸ್ಫೂರ್ತಿ ದೊರೆತಿರುವುದು ಜೀವನದಿಂದ; ಹಾಗಿದ್ದಾಗ ಮಾನವ ಜೀವನವನ್ನು ದೂರವಿರಿಸಿ ಕಲೆಯನ್ನು ಸೃಷ್ಟಿಸಲಾದೀತೆ? ಕಲೆಯ ಅಭಿವ್ಯಕ್ತಿಯು ಕೇಳುಗ–ಓದುಗ–ನೋಡುಗರಲ್ಲಿ ಏನೋ ಒಂದರ್ಥವನ್ನು ಮೂಡಿಸಿಯೇ ತೀರುತ್ತದೆ. ಢಮ–ಢಮ ಸಂಗೀತ ರುಚಿಸದವರಿಗೆ ಕಡೇ ಪಕ್ಷ ಬೇಸರ ಮತ್ತು ಬೀಭತ್ಸದ ಕಲ್ಪನೆಯನ್ನಾದರೂ ಅದು ನೀಡಲೇಬೇಕು! ಎಂದೋ ಒಬ್ಬ ಕವಿಯು ಕತ್ತಲಿನ ಘೋರ ಸ್ವರೂಪವನ್ನೋ ಅದರ ನಿಗೂಢತೆಯನ್ನೋ ಬಣ್ಣಿಸಿದ್ದಾನೆಂದಿಟ್ಟುಕೊಳ್ಳಿ; ಅದನ್ನು ಇಂದು ಓದುವಾಗ ಅದರಲ್ಲಿ ಫ್ಯಾಸಿಸಂನ ಘೋರ ಸ್ವರೂಪವನ್ನು ಕಾಣಬಹುದೆಂಬುದಕ್ಕೆ ಹತ್ತಾರು ನಿದರ್ಶನಗಳಿವೆ. ಅವನ ಕವನದ ಕತ್ತಲೆ ಒಂದು ಪ್ರಬಲ ಸಂಕೇತವಾಗಿಬಿಡುತ್ತದೆ. ತಾನು ಜೀವನದಿಂದ ನಿರ್ಲಿಪ್ತವಾಗಿ ರಚಿಸಿದ್ದಾನೆಂದು ಭಾವಿಸುವವನ ಸಾಹಿತ್ಯ ಕೃತಿ ಸಹ ಜೀವನದ ಛಾಯೆಯನ್ನು ಒಳಗೊಂಡಿರುತ್ತದೆ ಎಂದರ್ಥ. ಆದ್ದರಿಂದ ಅವನ ನಿರ್ಲಿಪ್ತತೆಯೇ ಒಂದು ಭ್ರಾಂತಿಯಾಗಿರುತ್ತದೆ, ಅಪ್ರಜ್ಞಾಪೂರ್ವಕವಾಗಿ ಏನನ್ನೋ ಸೂಚಿಸಿರುತ್ತಾನೆ; ಇಲ್ಲವಾದರೆ ಅವನ ನಿರ್ಲಿಪ್ತತೆಯು ಅವನ ಸೋಗು ಅಥವಾ ಕಪಟ, ಅಷ್ಟೆ.

ತಾವು ನಿರ್ಲಿಪ್ತರೆಂದು ಬಣ್ಣಿಸಿಕೊಳ್ಳುವ ಕವಿಗಳು ಅಥವಾ ಬೇರೆ ಕಲಾವಿದರು ನಿರ್ಲಿಪ್ತರಲ್ಲದವರ ಕೃತಿಗಳನ್ನು ಹೇಗೆ ನೋಡುತ್ತಾರೆ? ಅಂಥವುಗಳ ಗೊಡವೆ ಅವರಿಗೇಕೆ ಬೇಕು? ಆಧುನಿಕ ಯುಗದ 'ನಿರ್ಲಿಪ್ತ' ಕವಿ ಕುಮಾರವ್ಯಾಸನನ್ನು ಓದಿ ವಿಮರ್ಶೆ ಬರೆಯುತ್ತಾನಲ್ಲಾ, ಏಕೆ? ಅಥವಾ, ರವಿವರ್ಮನ ಕಲಾಕೃತಿಯನ್ನು 'ನಿರ್ಲಿಪ್ತ' ಕಲಾವಿದ ಆಸ್ವಾದಿಸುವುದಿಲ್ಲವೆ? ಆಧುನಿಕನ ಕೃತಿ ಅಷ್ಟು ಕಠಿಣ, ಆದರೆ ಅದರ ನಿರ್ಮಾತೃವು ಹಿಂದಿನ ಯಾವುದೋ ಸರಳ ಕೃತಿಯ ಛಾಯೆ ಬಯಸುತ್ತಾನೆ. ಅಂದರೆ, 'ನಿರ್ಲಿಪ್ತ' ಕವಿ–ಕಲಾವಿದರು ಸಮಕಾಲೀನ ಜಗತ್ತಿನತ್ತ ಕಣ್ಣುಮುಚ್ಚಿ ಕುಳಿತಿಲ್ಲ. ಅವರು ವ್ಯಾಖ್ಯಾನಿಸುವುದೂ ಅದನ್ನೇ; ಆದರೆ ತಪ್ಪುತಪ್ಪಾಗಿ, ಅಷ್ಟೆ. ಸ್ವಲ್ಪಮಟ್ಟಿಗೆ ಇದು ಸರಳೀಕೃತ ವಿಶ್ಲೇಷಣೆಯೇ. ಇನ್ನಷ್ಟು ನಿದರ್ಶನಗಳನ್ನು ಆಯ್ದುಕೊಂಡು ಇದರ ಬಗ್ಗೆ ಇನ್ನೂ ಆಳವಾದ ಚರ್ಚೆ ನಡೆಸಬೇಕು. ಆದರೆ ಒಂದು ಮಾತು ನಿಜ: ಕಲಾಕೃತಿಯು ಹೆಚ್ಚು ಹೆಚ್ಚು ಜನರನ್ನುದ್ದೇಶಿಸಿ ರಚಿತವಾದಷ್ಟೂ, ಅದು ಸುತ್ತಣ ಜಗದ ಬಗ್ಗೆ ಹೆಚ್ಚು ಹೆಚ್ಚು ಸಂವಾದದಲ್ಲಿ ನಿರತವಾಗುತ್ತದೆ. ಅದು ನೇರವಾಗಿಯೇ ಆ ಸ್ವರೂಪದಲ್ಲಿರಬೇಕಾಗಿಲ್ಲ, ಆದರೆ ಏನೋ ಟೀಕೆ ಅಥವಾ ಅನಿಸಿಕೆ ಇರುತ್ತದೆ. ಹಿಂದಿನ ಕಾಲದ ಭವ್ಯತೆ ನಷ್ಟವಾಗಿ ಹೋಯಿತಲ್ಲಾ ಎಂಬ ಭಾವನೆಯನ್ನು ದಟ್ಟವಾಗಿ ನಿರೂಪಿಸುವವನು ಅದೇ ಕಾಲದಲ್ಲಿ ಸಂಕಷ್ಟಕ್ಕೆ ಗುರಿಯಾಗಿದ್ದವರನ್ನು ಕುರಿತು ಸಾಂತ್ವನದ ದೃಷ್ಟಿಯನ್ನು ಹರಿಸಿರುವುದಿಲ್ಲ. ಅಂತಹ ನಿರೂಪಕನ ಪರಿತಾಪ ನಮಗೆಷ್ಟು ಆದರಣೀಯ? ಅಷ್ಟೇಕೆ, ಒಬ್ಬ ಸೂಪರ್‌ಮ್ಯಾನ್ ಅಥವಾ ಸ್ಪೈಡರ್‌ಮ್ಯಾನ್ ಚಿತ್ರಿತಗೊಂಡಾಗ ಅವನ ಅಗಾಧ ಶಕ್ತಿಯೆದುರು ನಾವೆಲ್ಲಾ ಕುಬ್ಜರಲ್ಲವೆ? ಇಲ್ಲಿಯ ಸಂದೇಶದ ಒಳಗುಟ್ಟೇನು? ಅವನು ಛೋಟಾ ಭೀಮ್ ಇರಬಹುದು ಇಲ್ಲವೆ ಹ್ಯಾರಿ ಪಾಟರ್ ಇರಬಹುದು, ಅವರಿಗೆಲ್ಲಾ ಅಪೂರ್ವ, ಅಮೋಘ, ಅಸೀಮಿತ ಬಲವಿದೆ; ಅವರು ಎಲ್ಲದರಲ್ಲೂ ವಿಜಯ

ಸಾಧಿಸುತ್ತಾರೆ. ಅದರೆದುರು ನಮ್ಮ ವಾಸ್ತವಿಕ ಸಾಮಾಜಿಕ ವ್ಯವಸ್ಥೆಯಲ್ಲಿ ನಾವು ಏನನ್ನೂ ಗಳಿಸಲು ಅಶಕ್ತರು, ಏನನ್ನೂ ನಿಯಂತ್ರಿಸಲು ಅಸಮರ್ಥರು. ಈ ಹತಾಶೆಗೆ ಪ್ರತಿಯಾಗಿ ಎಂದೆಂದೂ ವಿಜಯಿಯಾಗುವ ಛೋಟಾ ಭೀಮ್ ನಮಗೆ ಒಂದು ರೀತಿಯ ಪರಿಹಾರ ಒದಗಿಸುತ್ತಾನೆ! ಆದರೆ ವಾಸ್ತವದಲ್ಲಿ ಅಲ್ಲ. ಸ್ಫೂರ್ತಿ ತುಂಬಲಾರದ ವೀರ ಅವನು. ಅವನನ್ನು ಮೆಚ್ಚಬಹುದು ಆದರೆ ಅನುಕರಿಸಲಾಗುವುದಿಲ್ಲ. ನಮ್ಮ ಕಷ್ಟಗಳಿಗೆಲ್ಲಾ ಎಲ್ಲೋ ಹೊರಗಿನಿಂದ ಪರಿಹಾರ ದೊರೆಯಬೇಕು, ನಾವದನ್ನು ಸ್ವಂತ ಶ್ರಮದಿಂದ ಪಡೆಯಲಾರೆವು ಎಂಬ ಭಾವನೆಯನ್ನು ತೀವ್ರಗೊಳಿಸುವ ಚಿತ್ರಣ ಅದು. ಪರಮಾತ್ಮನ ಅವತಾರದ ನಿರೀಕ್ಷೆ ಇದ್ದಂತೆ! ಅವನು ಧರೆಗಿಳಿದು ಬಂದು ಎಲ್ಲವನ್ನೂ ಸರಿಪಡಿಸುತ್ತಾನೆ, ಅವನು ಬರುವವರೆಗೆ ಕಾಯುವುದಷ್ಟೇ ನಮ್ಮ ಕೆಲಸ! ಅವನು ಸರಿಪಡಿಸುವುದಾದರೂ ಎಷ್ಟು? ಅವನು ಅತ್ತ ಹೋದನಂತರ ಮತ್ತೆ ಇದು ಗೋಜಲಾಗುತ್ತದೆ, ಮತ್ತೆ ನಾವು ಅವನ ಬರವನ್ನು ನಿರೀಕ್ಷಿಸುತ್ತಾ ಕಾಲ ದೂಡಬೇಕು. ಇದೆಂತಹ ಸಾಮಾಜಿಕ ಸಿದ್ಧಾಂತ? ತೀರಾ ಹಿಮ್ಮುಖವಾದದ್ದೆಂದು ಖಂಡಿತ ಹೇಳಬಹುದು.

ಸಮೂಹಕ್ಕಾಗಿ ಕಲೆ ಎಂದಾಗ ಎಲ್ಲಕ್ಕಿಂತ ಹೆಚ್ಚು ವ್ಯಾಪಕವಾದ್ದು ಸಿನೆಮಾ. ಅದರ ಉದ್ದೇಶ ರಂಜನೆ, ಪ್ರಚಾರವಲ್ಲ, ಎನ್ನಲಾಗುತ್ತದೆ. "ರಂಜನೆ" ಎಂದರೇನು? ಅದೊಂದು ಲಾಂಛನದಂತೆ ಆಗಿಬಿಟ್ಟಿದೆ. ಬೇಜಾರು ಮತ್ತು ತವಕ ನಿವಾರಿಸಿಕೊಳ್ಳಲು ಒಂದು ಸಾಧನ ಎಂಬಂತೆ ಅದನ್ನು ಅರ್ಥೈಸಲಾಗಿದೆ. ಆದರೆ ಅದು ಅಷ್ಟಕ್ಕೆ ಸೀಮಿತವಾಗಿಲ್ಲ: ನಮ್ಮ ಆಶಯಗಳು ಈಡೇರದೆ ಹತಾಶೆಯುಂಟಾದಾಗ ಆ ಹತಾಶೆಯನ್ನು ಶುದ್ಧೀಕರಿಸಲು ಅಥವಾ ಉತ್ತಮಗೊಳಿಸಲು ಸಹ ಇದೇ "ರಂಜನೆ" ಸಾಧನವಾಗುತ್ತದೆ. ನಿಮಗೆ ಥಳಥಳಿಸುವ ಮನೆಯಲ್ಲಿ ವಾಸಿಸುವ ಇಚ್ಛೆ; ಆದರೆ ನಿಮಗಿರುವುದು ಒಂದು ಮುರುಕಲು ಗುಡಿಸಲು. ಸಿನೆಮಾದಲ್ಲಿ ಥಳಥಳಿಸುವ ಮನೆ ನೋಡಿ ಒಂದಷ್ಟು ಹತಾಶೆ ನೀಗಿಕೊಳ್ಳಬಹುದು, ಆಸೆಯನ್ನು ಕುದುರಿಸಿಕೊಳ್ಳುತ್ತಿರಬಹುದು. ಅಂದರೆ ಕ್ಷಣಕಾಲದ ಸಂತುಷ್ಟಿ, ಕ್ಷಣಕಾಲದ ಮನೋವಿಲಾಸ, ವಾಸ್ತವವನ್ನು ಕ್ಷಣಕಾಲ ಮೀರಿ ನಿಲ್ಲುವ ಅವಕಾಶ. ಹೀಗೆ ರಂಜಿಸುವ ಸಿನೆಮಾ ಏನನ್ನಾದರೂ ಬೋಧಿಸುತ್ತದೆಯೆ? ಸಾಮಾನ್ಯವಾಗಿ ಕೊಡುವ ಉತ್ತರ 'ಇಲ್ಲ, ಅದು ಕೇವಲ ರಂಜನೆ ನೀಡುವಂಥದು' ಎಂದು. ಇದೊಂದು ದೊಡ್ಡ ಸುಳ್ಳು. ಸಿನೆಮಾ ನೋಡುತ್ತಾ ನೋಡುತ್ತಾ ಜನ ಒಂದು ಜೀವನ ತತ್ವವನ್ನೇ ಬೆಳೆಸಿಕೊಂಡುಬಿಟ್ಟಿರುತ್ತಾರೆ. ಉದಾಹರಣೆಗೆ, ವಯಸ್ಸಾದವರಿಗೆ ಸೌಂದರ್ಯ ಇರುವುದಿಲ್ಲ ಅಥವಾ ಬುದ್ಧಿವಂತ ಎಲ್ಲರನ್ನೂ ಜಯಿಸುತ್ತಾನೆ (ಅಥವಾ ಅವನು ಜಯಿಸುತ್ತಾನಾದ್ದರಿಂದ ಬುದ್ಧಿವಂತ), ಅಥವಾ ನೀವೇನೇ ಮಾಡಿ ನಿಮ್ಮ ಬಾಳು ನಿಮ್ಮ ಕೈಯ್ಯಲಿಲ್ಲ, ಅಥವಾ ಪ್ರಾಮಾಣಿಕತೆ ಯಾವಾಗಲೂ ವಿಜಯಿಯಾಗುತ್ತದೆ, ಇತ್ಯಾದಿ. ಹೆಣ್ಣನ್ನು ಹೇಗೆ ತೋರಿಸಬೇಕೆಂಬ ಅಪ್ರಕಟಿತ ಸೂತ್ರವೂ ಸಿನೆಮಾದಲ್ಲಿ ಅಡಗಿರುತ್ತದೆ. ಠಾಕೋಠೀಕಾಗಿ ಅಲಂಕಾರ ಮಾಡಿಕೊಂಡಿರುವವರು ಮಾತ್ರ (ಪುರುಷರು ಹಾಗೂ ಸ್ತ್ರೀಯರು) ಸಂಪರ್ಕ ಯೋಗ್ಯರು ಎಂಬ "ನೀತಿ" ಬೋಧನೆಯೂ ಸಾಧ್ಯ. ಒಂದೇ ಮಾತಿನಲ್ಲಿ ಹೇಳುವುದಾದರೆ ಸಿನೆಮಾದ ಅದ್ಭುತ ಸಂದೇಶ ಇದು: ಭಗವಂತ ಮೇಲೆ ಕೂತು ನೋಡುತ್ತಿದ್ದಾನೆ, ಸಮಾಜದಲ್ಲಿ ಎಲ್ಲಾ ಅಚ್ಚುಕಟ್ಟಾಗಿದೆ, ಹಾಗೇ ಸದಾ ನಡೆದಿದೆ ಮತ್ತು ನಡೆಯುತ್ತಿರಲಿ!

ಸಿನೆಮಾಕ್ಕೆ 'ಸೆನ್ಸಾರ್' ಇದೆ. ಹಾಗೆ ಅಲ್ಲಿಯ ಧೀಮಂತರ ಒಪ್ಪಿಗೆ ಪಡೆದುಬಂದ ಸಿನೆಮಾ ಶುದ್ಧವೇ ಇರಬೇಕು! ಆದ್ದರಿಂದ ಸಮಾಜವನ್ನೂ ಅದು ಶುದ್ಧೀಕರಿಸುತ್ತದೆ. ದೇವರಿಗೆ ಮಂಗಳಾರತಿ ಮಾಡಿಸಿ ನಮ್ಮ ಭವಿಷ್ಯ ತಿಳಿದುಕೊಳ್ಳುವುದು, ಹಿಂದಿನ ಜನ್ಮದ ಪ್ರೇಯಸಿಯನ್ನು ಈ ಜನ್ಮದಲ್ಲಿ ಪಡೆಯುವುದು, ಜಾತಿಕಟ್ಟಳೆಯನ್ನು ಮೀರಿ ಆಮೇಲೆ ಸಂತಾಪಕ್ಕೆ ಗುರಿಯಾಗುವುದು, ತಾಯಿಗೋ ತಂಗಿಗೋ ಮಡದಿಗೋ ವಚನ ನೀಡಿರುವುದರಿಂದ ಛಲಬಿಡದೆ ದುಷ್ಟರನ್ನು ನಿಗ್ರಹಿಸಿ ಸುಖದಿಂದ ಬಾಳುವುದು, ಸಮಾಜದ ಪ್ರತಿಷ್ಠಿತ ವ್ಯಕ್ತಿಗಳ ವಿರುದ್ಧ ತಿರುಗಿಬೀಳದಿರುವುದು, ಹೀಗೆ ಸಿನೆಮಾದಲ್ಲಿ ಏನೆಲ್ಲಾ ಸಾಧ್ಯ! ಒಟ್ಟಿನಲ್ಲಿ, ಯಾವುದು ಹೇಗೆ ನಡೆಯುತ್ತಿದೆಯೋ ಮತ್ತು ನಡೆಯಬೇಕೋ ಹಾಗೆ ನಡೆಯಲು ಬಿಡಿ; ಅದಕ್ಕಾಗಿ ಮನಸ್ಸನ್ನು ಬೆಳೆಸಿಕೊಳ್ಳಿ. ಅಮೆರಿಕಾದ ಸಿನಿಮಾದಲ್ಲಾದರೆ ಕರಿಯವನು ಸೋಮಾರಿ, ಬಿಳಿಯವನು ಪಾದರಸ, ಪೊಲೀಸರು ನ್ಯಾಯಪರರು; ಸರ್ಕಾರ ಸರ್ವಶಕ್ತ ಸಂಸ್ಥೆಯಾದ್ದರಿಂದ ಮಂಗಳ ಗ್ರಹದಿಂದ ಬರುವ ಗೂಢಚಾರರನ್ನು ಸೋಲಿಸುತ್ತದೆ, ಕಮ್ಯುನಿಸ್ಟ್ ಅಧಿಕಾರವನ್ನು ಸುಲಭವಾಗಿ ಮೂರಾಬಟ್ಟೆ ಮಾಡುತ್ತದೆ, ಹೀಗೆ ಎಂತೆಂಥವೊ ಐತಿಹ್ಯಗಳು. ಯಾವ ಮೌಲ್ಯಗಳನ್ನು ಮಾನ್ಯ ಮಾಡಬೇಕೆಂಬ ಬೋಧನೆಯು ರಂಜನೆಯ ಜೊತೆ ಬೆರೆತುಹೋಗುತ್ತದೆ. ದುರಂತವೆಂದರೆ, ಆ ಮೌಲ್ಯಗಳು ಬಹುವೇಳೆ ಮಾನವ ವಿರೋಧಿ ಮೌಲ್ಯಗಳು.

ಜೀವನದ ಬಗ್ಗೆ ನೈಜವಾಗಿ ವೈರಾಗ್ಯ ತಾಳುವುದು ಅಪರೂಪದ ಮತ್ತು ಕಷ್ಟದ ಸಂಗತಿ ಎಂಬುದು ಯಾವುದೇ ಕಲಾಪ್ರಕಾರದ ಒಳಹೊಕ್ಕು ನೋಡಿದರೆ ತಿಳಿಯುತ್ತದೆ. ಕಲಾವಿದನೆಂದೂ ಮಾತಿಲ್ಲದ ಮೂಕನಲ್ಲ, ಅವನು ಏನನ್ನಾದರೂ ಹೇಳುತ್ತಲೇ ಇರುತ್ತಾನೆ. ಹೇಳುವಾಗ ಸಹಜವಾಗಿಯೇ ತನ್ನ ಅನಿಸಿಕೆಗಳನ್ನು ಸೇರಿಸಿಯೇ ತೀರುತ್ತಾನೆ. ಅದು ಪ್ರಚಾರವೋ ಅಲ್ಲವೋ ಹೇಗೆ ಹೇಳುವುದು? ಅದನ್ನು ವಿಶ್ಲೇಷಣಾ ಪ್ರತಿಭೆ ಇರುವವರು ಗುರುತಿಸುತ್ತಾರೋ ಏನೋ! ಹೀಗಿದ್ದೂ ಕೆಲವು ಕಲಾವಿದರು ತಾವು ಯಾವ ವ್ಯಾಖ್ಯಾನವನ್ನೂ ನೀಡುತ್ತಿಲ್ಲ, ನೀಡಬಾರದು, ಎಂದೇಕೆ ತಿಳಿಯುತ್ತಾರೆಂಬುದು ಅಚ್ಚರಿ ಉಂಟುಮಾಡುತ್ತದೆ. ಅವರ ಪ್ರಕಾರ ಅದು ಸಾಧ್ಯ ಮತ್ತು ಪಾಲಿಸಬೇಕಾದ ಆದರ್ಶ. ಕೆಲವರಿಗೆ ಅದು ನುಣುಚಿಕೊಳ್ಳಲು ಒಂದು ನೆಪ, ಇನ್ನು ಕೆಲವರಿಗೆ ಒಂದು ನಂಬಿಕೆ. ಅದೆಲ್ಲಾ ಕೇವಲ ಭ್ರಮೆಯೆಂದು ತಳ್ಳಿಹಾಕಲಾಗದು. ಈ ರೀತಿಯ ಮಾತು ಬಂದಿದ್ದು ಈಚೆಗೆ ಮಾತ್ರ. ವ್ಯಾಸ–ವಾಲ್ಮೀಕಿಗಳು ಹಾಗೆನ್ನುವ ಪ್ರಸಂಗವಿರಲಿಲ್ಲ. ವಿಷ್ಣುವಿನ ಮೂರ್ತಿ ಕೆತ್ತಿದರೆ ಅವನ ಭಕ್ತರ ಪೂಜೆಗೆ ಗೌರವ ಬಂದುಬಿಡುತ್ತದೆಂಬ ಕಾರಣಕ್ಕೆ ಶಿಲ್ಪಿಯು ಕೆತ್ತನೆಯ ಕೈಬಿಟ್ಟಿದ್ದೆಂದೂ ಇಲ್ಲ. ಮೈಕೇಲ್ ಎಂಜೆಲೊ ಜೂಲಿಯಸ್‌ನೊಡನೆ ಸೆಣಸುತ್ತಿದ್ದ, ಆದರೆ ಸಿಸ್ಟೀನ್ ಚಾಪೆಲ್‌ನಲ್ಲಿ ಕಲಾಚಿತ್ರ ಬಿಡಿಸಲು ನಿರಾಕರಿಸಲಿಲ್ಲ. ತನ್ನ ಮತಧರ್ಮದ ಕಾವ್ಯಕ್ಕೆ ರಾಜಕೀಯ ಆಯಾಮವಿದ್ದಿತೆಂಬ ಕಾರಣಕ್ಕೆ ಪಂಪ ಕಾವ್ಯರಚನೆಯನ್ನು ಕೈಗೆತ್ತಿಕೊಳ್ಳದಿರಲಿಲ್ಲ. ಕಲಾವಿದನು ಯಾವ ಅನಿಸಿಕೆಯನ್ನೂ ವ್ಯಕ್ತಮಾಡಬಾರದೆಂದು ಇವರಾರೂ ಎಣಿಸಿರಲಿಲ್ಲ. ಹೇಳಿದ್ದನ್ನೆಲ್ಲಾ ಅವರು ಅದ್ಭುತವಾಗಿಯೇ ಹೇಳಿ ಸಂತಸ ಪಡೆದವರು.

ಆಧುನಿಕ ಸಮಾಜದಲ್ಲಿ, ಸಮಕಾಲೀನ ಸಂದರ್ಭದಲ್ಲಿ, ಹುಟ್ಟಿಕೊಂಡ ಪ್ರತಿಪಾದನೆ ಇದು. ಪ್ರಪಂಚ ಮತ್ತದರ ವಿದ್ಯಮಾನಗಳು ಸಂತೋಷಕರವಲ್ಲ, ಅವನ್ನು

ದೂರವಿಡಬೇಕು, ಎಂಬ ಭಾವನೆಗೆ ಒಳಗಾಗಿ ವಿಷಯದ ಪ್ರತಿಪಾದನೆಯು ಕಲೆಗೆ ಹೊರತಾದ್ದು ಎಂಬ ಪುಕಾರು ಎಬ್ಬಿಸಿದ್ದಾರೆ. ಅವರ ಪ್ರಕಾರ ನಮ್ಮ ಯುಗವು ಬಿಕ್ಕಟ್ಟಿನ ಯುಗ, ಅವನತಿಯ ಯುಗ. ನಮ್ಮ ಆಧುನಿಕ ಸಮಾಜದಲ್ಲಿ ಕಲಾವಿದರು, ಸಂಗೀತಕಾರರು (ಅವರನ್ನು ವಾಗ್ಗೇಯಕಾರರು ಎನ್ನುತ್ತಾರೆ) ಮತ್ತು ಸಾಹಿತಿಗಳು ತಮ್ಮ ಪಾತ್ರವನ್ನು ನಿರ್ಧರಿಸಿಕೊಳ್ಳಲು ಅಸಮರ್ಥರಾಗಿದ್ದಾರೆ. ನಮ್ಮ ಹಿಂದಿನ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಅವರಿಗೆ ಇಂತಹ ಪೇಚು ಇರಲಿಲ್ಲ. ಬಂಡವಾಳಶಾಹಿಯಡಿ ಬಂಡವಳಿಗ ಮತ್ತು ದುಡಿಮೆಗಾರ ಸರಕುಗಳ ಉತ್ಪಾದನೆಯಲ್ಲಿ ತಮ್ಮ ನಿರ್ದಿಷ್ಟ ಪಾತ್ರವೇನೆಂದು ತಿಳಿದಿದ್ದಾರೆ. ವಿಜ್ಞಾನಿಗಳ ಅಗತ್ಯವನ್ನು ಬಂಡವಳಿಗ ಚೆನ್ನಾಗಿ ಅರಿತಿದ್ದಾನೆ. ಆದರೆ ಕಲಾವಿದರದು ತ್ರಿಶಂಕು ಸ್ಥಿತಿ: ಸಮಾಜದ ಅರ್ಥವ್ಯವಸ್ಥೆಯಲ್ಲಿ ತಮ್ಮ ಸ್ಥಾನ ಅವರಿಗೆ ತಿಳಿಯದಾಗಿದೆ. ಈ ಅರ್ಥದಲ್ಲಿ ಕಲಾವಿದರು "ಸ್ವತಂತ್ರ" ಉತ್ಪಾದಕರು. ಅವರು ಸೌಂದರ್ಯವೆಂಬ ಸರಕಿನ ಮಾರಾಟ ಮಾಡುತ್ತಾರೆ. ಅವರ ಮಾರುಕಟ್ಟೆ ತೀರಾ ಅನಿಶ್ಚಿತವಾದ್ದು. ಅಲ್ಲಿ ಕೊಳ್ಳುಗ ಮಹಾನ್ ಶಕ್ತಿಶಾಲಿ; ಉತ್ಪಾದಕನ ಆಶಯಗಳಿಗೆ ಅವನು ಎಲ್ಲೆಗಳನ್ನು ವಿಧಿಸುತ್ತಾನೆ. ಒಳ್ಳೆಯ ಪಾದರಕ್ಷೆ ಎಂದರೇನು? ಇದು ಪಾದರಕ್ಷೆಗಳ ತಯಾರಿಕನಿಗೆ ಹಾಗೂ ಗ್ರಾಹಕನಿಗೆ ಗೊತ್ತು. ಆದರೆ ಕಲಾಕೃತಿ, ಪುಸ್ತಕ ಮತ್ತು ಸಂಗೀತ "ಮಾಡುವವರಿಗೆ" ಹಾಗೂ ಕೊಳ್ಳುವವರಿಗೆ ಅವುಗಳಲ್ಲಿ "ಒಳ್ಳೆಯದು" ಯಾವುದೆಂದು ನಿಖರವಾಗಿ ಗುರುತಿಸಲಾಗುತ್ತಿಲ್ಲ. ತಾನು ಯಾವುದನ್ನು ಸುಂದರವಾದ್ದೆಂದು ಬಗೆಯಬಹುದೋ ಅದನ್ನು "ಮಾಡಲು" ಕಲಾವಿದ ಮುಂದಾಗುತ್ತಿಲ್ಲ, ಬದಲಾಗಿ ತನ್ನ ಗ್ರಾಹಕ ಯಾವುದನ್ನು ಸುಂದರವೆಂದು ತಿಳಿಯಬಹುದೋ ಅದನ್ನು ಮಾಡಬೇಕಾದ ಪರಿಸ್ಥಿತಿಯಲ್ಲಿ ಅವನಿದ್ದಾನೆ. ತನಗೆ ಬೇಕಾದ್ದನ್ನು ಅವನು ಅಭಿವ್ಯಕ್ತಿಸುತ್ತಿಲ್ಲ. ಅವನ ಸ್ಫೂರ್ತಿ ಅಥವಾ "ನವನವೋನ್ಮೇಷಶಾಲಿನೀ ಪ್ರತಿಭೆ" ಇಂಗಿಹೋಗಿದೆ. ನಾಳೆ ತಾನಿನ್ನೇನಾಗಿಬಿಡುತ್ತೇನೋ ಎಂಬ ಆತಂಕ ಅವನಿಗೆ.

ಇನ್ನು ಶ್ರೀಮಂತ ಗ್ರಾಹಕ ಕಲಾಕೃತಿಯಲ್ಲಿ ಬಯಸುವುದೇನು? ಮ್ಯಾತ್ಯೂ ಆರ್ನಾಲ್ಡ್ ಯಾವುದನ್ನು "ಶುಷ್ಕ ಹೃದಯಿಗಳ ಆಸ್ವಾದ" (ಫ್ಲಿಲಿಸ್ಟಿನಿಸಂ) ಎಂದು ಕರೆದನೋ ಅದನ್ನು ಸವಿಯುವ ಜನ ಇವರು. ಅವರು ಹೊಸ ಮೇಧಾಶಕ್ತಿಯನ್ನು ಪೋಷಿಸುವುದರಿಂದ ವಿಮುಖರು. ಕಲಾಕೃತಿಯನ್ನು ಆಯ್ಕೆಮಾಡಿಕೊಳ್ಳುವಾಗ ಯಾವುದು ಅತಿಹೆಚ್ಚಿನ ಬೆಲೆಯದು ಎಂಬುದಕ್ಕೆ ಪ್ರಾಧಾನ್ಯ ನೀಡುವ ಶ್ರೀಮಂತಿಕೆ ಅವರದು. ಪಾಶ್ಚಿಮಾತ್ಯ ದೇಶಗಳಲ್ಲಿ ಹೊಸ ಕಲಾವಿದನ ಕೃತಿಗೆ ಸಾವಿರ ಡಾಲರ್ ನೀಡಿ ಕೊಂಡರೆ ಅದು ಪ್ರದರ್ಶನ ಯೋಗ್ಯವಲ್ಲ; ಲಕ್ಷ ಡಾಲರ್ ಕೊಟ್ಟು ರೆಂಬ್ರಾಂಟ್‌ನ ಕೃತಿ ಕೊಂಡು ಪ್ರದರ್ಶಿಸಿದರೇನೇ ಸೊಗಸು. ಬೇರೆ ಕಲಾವಿದರಿಗಿಂತ ಹೆಚ್ಚು ಪೆಟ್ಟು ಬಿದ್ದದ್ದು ಚಿತ್ರಕಲಾ ಕ್ಷೇತ್ರದವರಿಗೆ. ಆದರೆ ಎಲ್ಲ ಕಲಾ ವಿಭಾಗಗಳಲ್ಲೂ ಬಂಡಾಯ ಮತ್ತು ಹೊಸ ಪ್ರಯೋಗ ಇದರಿಂದಾಗಿ ಚಾಲ್ತಿಗೆ ಬಂದಿತು. ಛಾಯಾಚಿತ್ರಗ್ರಹಣ ವಿಶೇಷವಾಗಿ ಬೆಳೆದಾಗ ಚಿತ್ರಕಲೆಯನ್ನು ದಾಖಲೆಗಳ ನಿರ್ಮಿತಿಗಾಗಿ ಬಳಸುವ ವಿಧಾನ ಬಹುಮಟ್ಟಿಗೆ ಕೊನೆಗೊಂಡಿತು. ಬಂಡವಾಳಶಾಹಿಯಡಿ ದಮನವು ಅತಿಹೆಚ್ಚಿನ ಮಟ್ಟ ತಲುಪಿದಾಗ ಕಲೆಗೆ ಹೊಸದೊಂದು ಅನಿರೀಕ್ಷಿತ ವಿಮೋಚನೆ ದೊರಕಿತು; ಕಲಾವಿದನು ಕೇವಲ ವಿನ್ಯಾಸಕ್ಕಾಗಿ ಕಲೆ ನಿರ್ಮಿಸಲು ಸಾಧ್ಯವಾಯಿತು; ಪ್ರಪಂಚ ಗೌಣವಾಗುತ್ತಾ ಬಂತು.

ಸಂಗೀತ ಮತ್ತು ಸಾಹಿತ್ಯದ ಕ್ಷೇತ್ರಗಳಲ್ಲಿ ಇಂಥದೇ ಪ್ರವೃತ್ತಿ ಕಾಣಬರತೊಡಗಿತು, ಬುದ್ಧಿವಂತಿಕೆಯು ಅಸ್ಪಷ್ಟ ವಿಚಿತ್ರ ಕಲ್ಪನೆಗಳ ರೂಪದಲ್ಲಿ ಪ್ರಕಟಗೊಳ್ಳತೊಡಗಿತು.

ಕಲೆಯ ಕ್ಷೇತ್ರದಲ್ಲಿ ಪ್ರಯೋಗವು ಸಿದ್ಧಾಂತದ ಜನಕ, ಹೊಸ ತಂತ್ರಗಾರಿಕೆಯು ಹೊಸ ಸೌಂದರ್ಯ ಮೀಮಾಂಸೆಗೆ ಜನಕ. ಪಾಶ್ಚಿಮಾತ್ಯರಲ್ಲಿ 19ನೆಯ ಶತಮಾನದ ಆದಿಯಲ್ಲಿ ರೊಮ್ಯಾಂಟಿಕ್ ಯುಗ ಆರಂಭವಾಯಿತು. ಸಮಾಜದಲ್ಲಿ ತಮ್ಮ ಸ್ಥಾನವನ್ನು ಸ್ಥಿರಗೊಳಿಸಿಕೊಳ್ಳಲು ಮಾನವ ಜನಾಂಗಕ್ಕೆ ತಮ್ಮನ್ನು ಅರ್ಪಿಸಿಕೊಂಡುಬಿಡುವ ವಿಚಾರ ಈ ರೊಮ್ಯಾಂಟಿಕ್ ಯುಗದವರದು. ಆ ಶತಮಾನ ಮುಕ್ತಾಯವಾಗುವ ಮೊದಲೇ ಕಲಾವಿದರು ಈ ಪಂಥವನ್ನು ಹಿಂದಕ್ಕಿಕ್ಕಿಬಿಟ್ಟರು. ಅದರ ಸ್ಥಾನದಲ್ಲಿ ಬಂದಿದ್ದೇನು? ಸುತ್ತಣ ಪ್ರಪಂಚವನ್ನು ಅಪ್ರಸ್ತುತವೆನ್ನುವಂತೆ ನೋಡುವುದು, ನೈತಿಕತೆಯ ಕಟ್ಟುಪಾಡನ್ನು ನಿರಾಕರಿಸುವುದು, ಇತ್ಯಾದಿ. ನೀಶೆಯಂಥ ತತ್ವಶಾಸ್ತ್ರಜ್ಞರು ಇದಕ್ಕೆ ಇಂಬು ಕೊಟ್ಟರು. ಆಗ ಕಲಾವಿದರು ಮನುಕುಲವನ್ನು ಪರಿಗಣಿಸುವ ವಿಧಾನವೇ ವಿಚಿತ್ರ: ತಮಗಾಗಿ ಮನುಕುಲ ಪರಿತಪಿಸಬೇಕೆಂಬ ವಿಚಾರ ಅವರದು! ಅವರಿಗೆ ಆತ್ಮಗೌರವ, ಧೀಮಂತಿಕೆ, ಸ್ವಾತಂತ್ರ್ಯಾಕಾಂಕ್ಷೆ, ಇರಲಿಲ್ಲವೆಂದಲ್ಲ. ಅಂಥವರು ಸರಪಳಿಯ ಬಂಧನದಲ್ಲಿ ಉಳಿಯುವಂಥವರಂತೂ ಅಲ್ಲವೇ ಅಲ್ಲ. ಹೊಸಯುಗದ ನಾಂದಿ ಹಾಡಿದವನು ಬೆನೆಡೆಟ್ಟೊ ಕ್ರೋಚೆ. ಇಟಲಿಯ ಒಬ್ಬ ದಾರ್ಶನಿಕ. ಅವನು ವಿಮುಕ್ತಿಯ ಘೋಷಣೆ ಮಾಡಿದ: ಕಲೆಗೆ ನಿಯಮ, ಗುಣಮಟ್ಟ, ನೈತಿಕ ಸೂತ್ರ, ಪ್ರಯೋಜನ, ಮುಂತಾದ ಯಾವ ಬಂಧನವೂ ಇಲ್ಲ, ಎಂದು. ಅದು ಕೇವಲ ಅಭಿವ್ಯಕ್ತಿ. ನಿಮ್ಮ ಮನಸ್ಸಿಗೆ ಬಂದುದನ್ನು ಅಭಿವ್ಯಕ್ತಿಸುವುದು, ಅಷ್ಟೆ. ಬಹಳ ಸಕಾಲಿಕ ಘೋಷಣೆ. ಎಷ್ಟು ಅಮೋಘವೆಂದು ಕಲಾವಿದರು ಅದನ್ನು ಬಾಚಿ ತುಂಬಿಕೊಂಡರು. ಯಾವುದು ಕಟ್ಟುನಿಟ್ಟು ಸೂತ್ರವೆಂದು ಬಗೆಯಲಾಗಿತ್ತೋ ಅದನ್ನು ಕಿತ್ತೊಗೆಯಲು ಆತುರವೋ ಆತುರ. ಕ್ರೋಚೆ ಮುಂತಾದವರು ಎಡವಿದ್ದು ಎಲ್ಲೆಂದರೆ ಅಂದಂದಿನ ಸೂತ್ರಗಳನ್ನು ಸಾರ್ವಕಾಲಿಕ, ಪರಿಪೂರ್ಣ, ಎಂದು ಭಾವಿಸಿದುದರಲ್ಲಿ. ವಿಮುಕ್ತಿಗೆ ಹಾತೊರೆದರು, ಸರಿ; ಆದರೆ ನಿರೀಕ್ಷಿಸಿದ್ದಷ್ಟು ಅದು ದಕ್ಕಲಿಲ್ಲ. ದ್ವಂದ್ವ ಉಂಟಾದ್ದು ಬೇರೊಂದು ಕಾರಣಕ್ಕೆ: ಕಲೆಯು ಕೇವಲ ಅಭಿವ್ಯಕ್ತಿಯಾದರೆ, ಅದಕ್ಕೆ ಭಿನ್ನವಾಗಿ ಕಲೆಯ ಮುಖೇನ ಪ್ರಪಂಚವನ್ನು ಕುರಿತು ಏನನ್ನೋ ಹೇಳಬೇಕೆಂದಿರುವವರಿದ್ದಾರಲ್ಲ, ಅವರ ಕತೆ ಏನು? ಅವರಿಗೆ ಸಾಮಾಜಿಕ ತುಡಿತವಿದೆ; ಕ್ರಾಂತಿಕಾರಿ ಒಲವು ಸಹ ಇರಬಹುದು. ಅದನ್ನು ಹೊಂದಲು ಕ್ರೋಚೆಯ ಸಮ್ಮತಿ ಪಡೆಯಬೇಕಿಲ್ಲವಷ್ಟೆ? ಕ್ರೋಚೆಯು ಸಾಮಾಜಿಕ ಕಳಕಳಿಯನ್ನು ನಿಷೇಧಿಸಿರಲಿಲ್ಲವಲ್ಲ! ಅದು ಅನಿವಾರ್ಯವಲ್ಲ ಎಂದಷ್ಟೇ ಅವನು ಹೇಳಿದ್ದುದು. ಕಲಾವಿದನು ಸಂಪೂರ್ಣವಾಗಿ ನಿರ್ಲಿಪ್ತನಾಗಿರಬೇಕೆಂದೇನೂ ಅವನು ಆಗ್ರಹಿಸಿರಲಿಲ್ಲ. ಅವನ ಈ "ಕೊರತೆ"ಯನ್ನು 1910ರಲ್ಲಿ ಕ್ಲೈವ್ ಬೆಲ್ ಮತ್ತು ರೋಜರ್ ಫ್ರೈ ಎಂಬ ಬ್ರಿಟಿಷರು ತುಂಬಿಕೊಟ್ಟರು. ಅವರಿಬ್ಬರೂ ಕಲೆಯಲ್ಲಿ ರಸಾಸ್ವಾದಕ್ಕೆ ಸ್ವರೂಪವೇ ಏಕೈಕ ಕಾರಣವೆಂದು ಹೇಳಿ ಕಲೆಯ ಹೂರಣವು ಅಪ್ರಸ್ತುತವೆಂದರು. ಜೀವನಕ್ಕೆ ಹೋಲಿಕೆ ಇರುವಂಥದೇನಾದರೂ ಕಲೆಯಲ್ಲಿ ಇದ್ದರೆ ಅದು ತೀರ ಗೌಣವೆನ್ನುವುದು ಅವರ ವಾದ. "ವರ್ಣರಂಜಿತ ಆಕಾರವು" ಸಂಗೀತದಲ್ಲಿ ಪ್ರಧಾನವೆಂದ ಬೆಲ್ ಒಂದೆಡೆ ಹೇಳುತ್ತಾನೆ: "ಸೌಂದರ್ಯಾನುಭವದ

ಮೇರುಶಿಖರವನ್ನು ತಲುಪಿದ್ದ ನಾನು ಕೆಳಕ್ಕೆ ಧುಮುಕಿ ಆತ್ಮೀಯ ಜನರ ನಡುವಿಗೆ ಸೇರಿಕೊಂಡೆ. ಎಲ್ಲಾ ಸಭ್ಯ ಜನ. ಅವರ ನಡುವೆ ಆನಂದದಿಂದಿರಲು ಸಂಕೋಚಪಡಬೇಕಾಗಿಲ್ಲ. ಆದರೆ ಶಿಖರವನ್ನು ಏರಿದವರು ಕೆಳಗಿನ ಕಣಿವೆಗೆ ಬಂದಾಗ ಸ್ವಲ್ಪ ಮಂಕಾಗುವುದು ಸಹಜ. ಸೌಖ್ಯ ನೀಡುವ ಕಣಿವೆಯಲ್ಲಿ ಬೆಚ್ಚನೆಯ ಅನುಭವ ನೀಡುವ ತಾಣಗಳಿವೆ, ನಿಜ; ಆದರೆ ಕಲೆಯ ಶ್ವೇತ ಶಿಖರಕ್ಕೇರಿದವರ ಪುಲಕಿತ ಅನುಭವದ ಮುಂದೆ ಇದು ತೀರಾ ತಣ್ಣಗಿನ ಅನುಭವ, ಅಷ್ಟೆ."

ಹೀಗೆಲ್ಲಾ ಹುಯಿಲೆಬ್ಬಿಸಿದ ಬೆಲ್ ಕೇವಲ ಮೂವತ್ತು ವರ್ಷಗಳಲ್ಲಿ ಹೆಸರಿಲ್ಲದಂತೆ ಕರಗಿಹೋದ. ಆ ಅವಧಿಯಲ್ಲಿ ಕವಿಗಳು-ಕಲಾವಿದರು ಕ್ಯೂಬಿಸಂನಲ್ಲಿ ಮುಳುಗಿ ಹೋಗಿದ್ದರು. ಇದನ್ನುಳಿದು ಸ್ವರ್ಗದಲ್ಲಿ ಬೇರೆ ಚಂದ್ರ-ತಾರೆಯರಿಲ್ಲವೆಂಬ ಭಾವನೆ ಸಾಂದ್ರವಾಗಿತ್ತು. ಮೂರ್ತ ಅವಶ್ಯಕತೆಗಳನ್ನು ಪೂರೈಸಲು ಅಮೂರ್ತ ತತ್ವಗಳ ಆಧಾರ ಪಡೆದು ಸೃಜನಶೀಲ ಕಲಾವಿದರು ಅಪೂರ್ವ ಸಾಧನೆಗಳನ್ನು ಮಾಡಿದರು ಮತ್ತು ಹೊರ ತೋರ್ಕೆಗೆ ಮರ್ಯಾದೆ ನೀಡುವ ಮಂದಿಗೆ ಅದೊಂದು ಶಾಶ್ವತ ಸ್ವರ್ಗ ಆಗಿಹೋಯಿತು. ಪಿಕಾಸೋನಂತಹ ಕಲಾವಿದ ಅಜ್ಞಾತ ಲೋಕದಿಂದ ವಿಮೋಚನೆಗೊಂಡ ಹೊಸ ಲೋಕಗಳನ್ನು ಸೃಷ್ಟಿಸಿದ. ಅದೇ ಕಾಲದಲ್ಲಿ ಬೆಲ್ ಸ್ವಮುದದಿಂದ ಬೊಬ್ಬಿರಿದ: "ಸಾರ್ವಜನಿಕರನ್ನು ಆಘಾತಗೊಳಿಸಲು ಯತ್ನಿಸುವುದು ಎಷ್ಟೇ ಪಾಪದ ಕೃತ್ಯವಾದರೂ ಅವರನ್ನು ಸಂಪ್ರೀತರನ್ನಾಗಿಸಲು ಯತ್ನಿಸುವುದಕ್ಕಿಂತಲೂ ಕೀಳಿನದಲ್ಲ."

ಕಲೆಯಲ್ಲಿ ವಿನ್ಯಾಸವು ಸ್ವಯಂ ದೋಷಪೂರ್ಣವಾದುದಲ್ಲ. ಆ ಮಾದರಿಯಲ್ಲಿ ಫ್ರಾನ್ಸಿನ ಅನೇಕ ಕಲಾವಿದರು ಅದ್ಭುತವಾದ ಕೃತಿಗಳನ್ನು ನೀಡಿದ್ದಾರೆ. ಆದರೆ ಇದನ್ನಾಧರಿಸಿದ ಸೌಂದರ್ಯ ಮೀಮಾಂಸೆಯನ್ನು ಪ್ರತಿಗಾಮಿಗಳು ಬೇರೆಯದೇ ನೆಲೆಗೆ ಎಳೆದೊಯ್ದು ದುರುಪಯೋಗಕ್ಕೆ ಗುರಿಮಾಡಿದರು. ಅದನ್ನೆಷ್ಟು ತಿರುಚಿ ಅತಾರ್ಕಿಕವಾಗಿಸಿದರೆಂದರೆ ಅವರ ಹಾದಿಯಲ್ಲಿ ನಡೆಯದವರೆಲ್ಲಾ ತುಚ್ಛರೆಂದು ನಾಮಾಂಕಿತರಾದರು! ವಿಮೋಚನೆಗಾಗಿ ಹೋರಾಟ ನಡೆಸಿ ನೀವು ವಿಜಯಿಗಳಾಗುತ್ತೀರಿ; ಮರುಕ್ಷಣದಲ್ಲೇ ನಿಮ್ಮ ತತ್ವವನ್ನು ಬಂಧನದ ಗುರಿ ಸಾಧಿಸಲು ಬಳಸಿಬಿಡುತ್ತಾರೆ. ಚರಿತ್ರೆಯಲ್ಲಿ ಹೀಗೆ ಅನೇಕ ವೇಳೆ ನಡೆದಿದೆ. ಈ ರೀತಿಯ ದುರಂತದಿಂದ ಸೌಂದರ್ಯ ಸಿದ್ಧಾಂತವನ್ನು ಪಾರುಮಾಡಬೇಕಾದರೆ ಕಲಾವಿದರು ಪ್ರಾಯೋಗಿಕವಾಗಿ ತಮ್ಮ ಕೃತಿಗಳಲ್ಲಿ ವಿನ್ಯಾಸ ಮತ್ತು ವ್ಯಾಖ್ಯಾನ, ಎರಡಕ್ಕೂ ಅವಿನಾಭಾವ ಸಂಬಂಧವಿರುವಂತೆ ಚಿತ್ರಿಸಬೇಕಾಗುತ್ತದೆ.

ತನಗೆ ಹಿತವಲ್ಲದ ವಿಚಾರ – ವ್ಯಾಖ್ಯಾನಗಳನ್ನು ಕಲೆಯ ಪರಿಧಿಯಿಂದ ಹೊರಗಿಡಲು ಒಬ್ಬ ವ್ಯಕ್ತಿ ಎಂತಹ ಕೋಟೆ ಕಟ್ಟುತ್ತಾನೆ? ಆ ಮೂಲಕ ಸಾಮಾಜಿಕ ತಿಳಿವನ್ನು ಕಲೆಯಿಂದ ಹೇಗೆ ಬಹಿಷ್ಕರಿಸುತ್ತಾನೆ? ಅಂದರೆ, ಸಾಮಾಜಿಕ ಅರಿವನ್ನು ಅವನು ನೇರನುಡಿಯಲ್ಲಿ ಅನೈತಿಕವೆಂದು ಹೇಳುವುದಿಲ್ಲ, ಆದರೆ ಅಂಥದೇನಾದರೂ ಇದ್ದರೆ ಕಲೆಯು ಕಳಪೆಯದಾಗುತ್ತದೆಂದು ತೀರ್ಮಾನಿಸುತ್ತಾನೆ. ಹಾಗೆ ಮಾಡಲು ಮೊದಲಿಗೆ ಬೆಲ್ ಮತ್ತು ಫ್ರೈ ಹೇಳಿದ್ದಂತೆ ಕಲೆಯ ಸೌಂದರ್ಯಕ್ಕೆ ವಿನ್ಯಾಸ ಅಥವಾ ಸ್ವರೂಪವೊಂದೇ ಕಾರಣ, ಅದಕ್ಕೆ ಹೂರಣ ತುಂಬಿದರೆ ಕಲಾಕೃತಿಯು ಅಪ್ರಸ್ತುತವಾಗಿಬಿಡುತ್ತದೆ, ಎಂದು ವಾದಿಸಬೇಕು. ಇಲ್ಲಿ ಮುಖ್ಯವಾದ ಪ್ರಶ್ನೆಯೊಂದಿದೆ:

ಒಂದು ಕಲಾಕೃತಿಯಲ್ಲಿ ವಿನ್ಯಾಸ ಯಾವುದು, ಹೂರಣ ಯಾವುದು? ಅವೆರಡೂ ಪ್ರತ್ಯೇಕವೆ? ಅವು ಎಷ್ಟು ಪ್ರತ್ಯೇಕವಾಗಿರಬೇಕೆಂದರೆ ಕೇವಲ ವಿನ್ಯಾಸ ಅಥವಾ ಕೇವಲ ಹೂರಣವಿರುವಂತಹ ಕಲಾಕೃತಿಗಳನ್ನು ನಿರ್ಮಿಸುವಂತಿರಬೇಕು. ಇಲ್ಲವೆ, ಎರಡೂ ಇರುವೆಡೆಗಳಲ್ಲಿ ಹೂರಣವನ್ನು ನಿರ್ಲಕ್ಷಿಸಿ ಕೇವಲ ವಿನ್ಯಾಸವನ್ನು ಗಮನಿಸಿ ಕೃತಿಯ ಸೌಂದರ್ಯವನ್ನು ಅನುಭವಿಸುವಂತಿರಬೇಕು. ಇಲ್ಲಿ ಮೊದಲ ಮಾದರಿಯಲ್ಲಿ ಕಲಾವಿದನು ಸರ್ವಥಾ ಏನನ್ನೂ ಹೇಳಬಾರದು; ಹಾಗೆ ಏನನ್ನೂ ಹೇಳದಿರುವುದು ಇನ್ನಾವುದೋ ವಿಷಯವನ್ನು ವ್ಯಂಜಿಸುವಂತೆಯೂ ಇರಕೂಡದು. ಅಂದರೆ, ಕಲಾವಿದನ ಮೌನವು ಏನನ್ನೋ ಸೂಚಿಸಿಬಿಡುವಂತೆ ಇರಕೂಡದು. ಅಮೂರ್ತ ಕಲಾಕೃತಿಗಳನ್ನು ರಚಿಸಿರುವ ಆಧುನಿಕ ಕಲಾವಿದರ ಪೈಕಿ ಎಷ್ಟು ಮಂದಿ ಯಾವ ವಿಚಾರದ ಬಗೆಗೂ ಏನೂ ಹೇಳದೆ ಇದ್ದಾರೋ ಅನ್ವೇಷಿಸಿ ನೋಡಿ. ನಿಜಕ್ಕೂ ಅವರು ಮೌನಿಗಳಲ್ಲ; ಭೌತಿಕ ಪ್ರಪಂಚವನ್ನು ಯಾವ ಹೊಸ ರೀತಿಗಳಲ್ಲಿ ನೋಡಬಹುದೆಂಬುದನ್ನು ಅವರು ತಮ್ಮ ಕಲಾಕೃತಿಗಳಲ್ಲಿ ಅಡಕಗೊಳಿಸಿದ್ದಾರೆ. ಲೇಗೆರ್ ಮತ್ತು ಪಿಕಾಸೊ ಅಂಥವರು ಪ್ರಜ್ಞಾಪೂರ್ವಕವಾಗಿಯೇ ಇದನ್ನು ಮಾಡಿದ್ದಾರೆ. "ನಾವು ಇಂದು ಜೀವನ ನೂಕುತ್ತಿರುವ ರೀತಿಯಲ್ಲಿ ಜೀವನವು ಏನನ್ನು ಸೂಚಿಸುತ್ತದೆ?" ಎಂಬುದು ಈ ಕಲಾವಿದರ ವಸ್ತು. ಎರಡನೆಯ ಮಾದರಿಯಲ್ಲಿ, ನಮ್ಮ ಹಿಂದಿನ ಸಾಹಿತ್ಯ-ಸಂಗೀತ-ಶಿಲ್ಪ-ಕಲಾಕೃತಿ, ಎಲ್ಲವೂ ಸೇರುತ್ತವೆ. ಅಲ್ಲಿ ವಿನ್ಯಾಸ ಮತ್ತು ವಿಷಯ ಎರಡೂ ಇವೆ. ಅವುಗಳಲ್ಲಿ ಹೂರಣವನ್ನು ನಿರ್ಲಕ್ಷಿಸುವುದು ಹೇಗೆ? ಶೇಕ್ಸ್‌ಪಿಯರನ ನಾಟಕಗಳಲ್ಲಿ ಸ್ವಗತಗಳನ್ನು ತೆಗೆದುಹಾಕುವುದರ ಮೂಲಕವೇ? ಸಂಗೀತ ಮತ್ತು ಕಲಾಕೃತಿಗಳಲ್ಲಿ ಏನನ್ನು ಹೇಗೆ ತೆಗೆದುಹಾಕುವುದು? ಇಲ್ಲೆಲ್ಲಾ ರಸಾಸ್ವಾದಕ್ಕೆ ವಿಷಯವು ವಿನ್ಯಾಸಕ್ಕಿಂತಲೂ ಹೆಚ್ಚು ಗೌಣವಲ್ಲ. ಹ್ಯಾಮ್ಲೆಟನ ಸ್ವಗತದಲ್ಲಿ ಕೇವಲ ಶಬ್ದದ ಅನುರಣನವಿದೆಯೆಂದು ಅದನ್ನು ಮೆಚ್ಚಬೇಕೇನು? ವಿಷಯ ಅಪ್ರಸ್ತುತವೆಂದಾಗ ನಾವು ಹಾಗೆ ಮಾಡಬೇಕಲ್ಲ! ರವಿವರ್ಮನ ಶಕುಂತಲೆಯ ಕೃತಿಯಲ್ಲಿ ಕೇವಲ ವಿನ್ಯಾಸದಿಂದ ರಸಗ್ರಹಣ ಮಾಡಬೇಕೆಂದರೆ ಹೇಗೆ ಮಾಡಬೇಕು? ವಿಷಯಗಳು ಸೌಂದರ್ಯಾನುಭವಕ್ಕೆ ಸಾಮಗ್ರಿಯಲ್ಲ ಎಂದು ಹೇಳಿದರೆ ಗತಕಾಲದ ಹತ್ತಾರು ಕಲಾಕೃತಿಗಳು ಈವರೆಗೆ ಅಂತಹ ಅನುಭೂತಿ ನೀಡಿವೆಯಲ್ಲ, ಏನು ಮಾಡೋಣ? ವಿಷಯ, ಚಿಂತನೆ, ಅನಿಸಿಕೆ, ಇವನ್ನು ಅಷ್ಟೊಂದು ದ್ವೇಷಿಸುವ ಪ್ರಮೇಯ ಏಕೆ? ಪ್ಲೇಟೋ "ತರ್ಕವಿರೋಧಿ"ಗಳನ್ನು ಹಂಗಿಸುತ್ತಿದ್ದ. ವಿಷಯರಹಿತ ಕಲೆಯ ಮಾತನಾಡುವವರನ್ನು ನಾವು ಹಾಗೆ ಪರಿಗಣಿಸಬೇಕೋ ಏನೋ!

ವಿನ್ಯಾಸವೊಂದೇ ಕಲೆ ಎಂಬುವವರ ಹೊರಗಣ ಕೋಟೆ ಅಭೇದ್ಯವಲ್ಲ, ನಾವದನ್ನು ಭೇದಿಸಿದ್ದೇವೆ. ಇನ್ನು ಒಳಗಣ ರಕ್ಷಣಾ ಕೋಟೆ ಎಷ್ಟು ಸುಭದ್ರವೋ ನೋಡೋಣ. ಈಗ ಆ ಚಿಂತಕನ ತಿದ್ದಿದ ನಿಲುವು ಇದು: ಕಲಾಕೃತಿಗಳಲ್ಲಿ ವಿಷಯ ಅಥವಾ ಹೂರಣ ಇರುತ್ತದೆ, ಆದರೆ ಅದು ಕಲೆಯನ್ನು ನುಂಗಿಹಾಕದಂತಹ ಪ್ರಮಾಣದಲ್ಲಿ ಮಾತ್ರ ಇರುತ್ತದೆ. ಅಕಸ್ಮಾತ್ ಆ ವಿಷಯವು ನಮ್ಮ ಮೇಲೆ ಪ್ರಭಾವ ಬೀರಿ ನಮ್ಮನ್ನು ಕ್ರಿಯೆಗೆ ಪ್ರೇರೇಪಿಸುವಂತಿದ್ದರೆ ಅದು ಕೇವಲ ಸುಂದರವಾಗಿರುವುದನ್ನು ಬಿಟ್ಟು ಏನೋ ಒಂದು ಉಪಯೋಗವನ್ನು ಅಂತರ್ಗತಗೊಳಿಸಿಕೊಂಡಿದೆ ಎಂದರ್ಥ. ಎಮರ್ಸನ್ ಹೇಳಿದ್ದ,

"ಸೌಂದರ್ಯವು ಇರುವುದಕ್ಕೆ ಬೇರಾವುದೋ ಒಂದು ಕಾರಣ ಬೇಕಿಲ್ಲ", ಎಂದು. ಆದರೆ ಬೇರೇನೋ ಒಂದು ಉಪಯೋಗವನ್ನು ಕೂಡಿಸಿಕೊಂಡಿರುವುದರಿಂದ ಕಲಾಕೃತಿಯು ಕಲಾಹೀನವಾಗಿಬಿಟ್ಟಿತಲ್ಲ! ಅವನ ಪ್ರಕಾರ ಸುಂದರವಾದ್ದು ಉಪಯುಕ್ತವೂ ಆಗಿರುವಂತೆ ಇರಬಾರದು. ಇಂತಹ ನಿಲುವನ್ನು ಸಮರ್ಥಿಸುವುದಕ್ಕಿಂತ ತಿರಸ್ಕರಿಸುವುದೇ ಹೆಚ್ಚು ಸುಲಭ.

ಉಪಯುಕ್ತವಾದುದು ಯಾವುದೂ ಕಲೆಯಲ್ಲವೆಂದು ಹೇಳಿದರೆ ವಾಸ್ತುಶಿಲ್ಪವು ಸೌಂದರ್ಯಾನುಭವ ನೀಡಲಾರದೆಂದು ಹೇಳಿದಂತಾಗುತ್ತದೆ. ಯಾವೊಂದು ಕಟ್ಟಡವನ್ನೂ ಕೇವಲ ಸೌಂದರ್ಯಕ್ಕಾಗಿ ಕಟ್ಟಿರುವುದಿಲ್ಲ. ದೇವಸ್ಥಾನಗಳು, ಗೋರಿಗಳು, ಚರ್ಚುಗಳು, ಮನೆಗಳು, ಕಛೇರಿ ಕಟ್ಟಡಗಳು, ಎಲ್ಲವೂ ಏನೋ ಒಂದು ಉಪಯೋಗ ಉಳ್ಳವು. ಅದೇನು ಕಲೆಯ ಪ್ರಭಾವವೋ ಅಥವಾ ಅರ್ಥಶಾಸ್ತ್ರದ ಒತ್ತಾಯವೋ, ಅಂತೂ ಎಂತಹ ದುಂದುಗಾರನೂ ಉದ್ದೇಶವೇ ಇಲ್ಲದ ಕಟ್ಟಡ ಕಟ್ಟಿಸಿಲ್ಲ. ಸುಂದರವಾದ್ದು ಯಾವುದೂ ಉಪಯುಕ್ತವಾಗಿರಬಾರದೆಂದು ಆಗ್ರಹಿಸಿದರೆ ವ್ಯವಹಾರಕ್ಕೆ ವಿರುದ್ಧವಾದ ಮಾತಾಗುತ್ತದೆ. ಎಷ್ಟೋ ವಸ್ತುಗಳು ತಮ್ಮ ಉಪಯೋಗದಿಂದಾಗಿಯೇ ತಮ್ಮ ಸೌಂದರ್ಯವನ್ನು ತೋರ್ಪಡಿಸುತ್ತವೆ. ವಾಸ್ತುಶಿಲ್ಪದ ಸಿದ್ಧಾಂತವೇ ಅದು: ವಾಸಯೋಗ್ಯವಾದ ಮನೆ ಕಟ್ಟಬೇಕು, ಎಂದು. ಮನೆಯ ಕಲಾತ್ಮಕ ಮುಖಭಾಗವು ಮನೆಯನ್ನೇ ಮುಚ್ಚಿಬಿಡುವುದಿಲ್ಲವಲ್ಲ! ಪ್ರಯೋಜನವು ಸೌಂದರ್ಯಕ್ಕೆ ಭಗ್ನ ತಂದೇತರುತ್ತದೆಂದೇನೂ ಇಲ್ಲ. ಕಲಾಕೃತಿಯೊಂದು ಕ್ರಿಯೆಗೆ ಪ್ರೇರಣೆ ಒದಗಿಸಿದರೆ ಅದು ಕಲೆಯಾಗುವುದಿಲ್ಲವೆಂಬ ಪ್ರಮೇಯವನ್ನು ಪರೀಕ್ಷಿಸಿ. ಒಂದು ನಾಟಕವಿದೆ, ಅದರಲ್ಲಿ ಯಾವುದೋ ಸಾಮಾಜಿಕ ಅನ್ಯಾಯವನ್ನು ವಿವರಿಸಲಾಗಿದೆ, ಅದರಿಂದ ಕ್ರಿಯೆಗೆ ಪ್ರಚೋದನೆ ಸಿಕ್ಕಿದೆ, ಎನ್ನೋಣ. ಅಲ್ಲಿ "ಸಂದೇಶವು" ಕಲಾತ್ಮಕ ಪರಿಣಾಮಕ್ಕೆ ಧಕ್ಕೆ ತಂದಿದೆಯೆ? ಹೌದೆಂದು ಕೆಲವರು ತಲೆದೂಗುವುದುಂಟು. ಕಲೆ ಮತ್ತು ರಾಜಕೀಯದ ಮಿಶ್ರಣ ಕೂಡದೆಂಬುವವರ ವಾದವೇ ಅದು. ಅವರ ಪ್ರಕಾರ ಶೇಕ್ಸ್‌ಪಿಯರ್ ಅನೇಕ ಸಮಸ್ಯೆಗಳನ್ನು ಚರ್ಚಿಸಿದ್ದಾನೆ, ಆದರೆ ಯಾವಾಗಲೂ ಇಂಥದೇ ನಿಲುವಿಗೆ ತನ್ನ ಬೆಂಬಲವೆಂದು ಸೂಚಿಸಿಲ್ಲ. ಹಾಗೆನ್ನುವವರು ಅವನ ಇತಿಹಾಸದ ವಸ್ತುವುಳ್ಳ ನಾಟಕಗಳಲ್ಲಿ ತನ್ನ ದೇಶಭಕ್ತಿ ಪ್ರದರ್ಶಿಸಿರುವುದನ್ನು ಮರೆತಿದ್ದಾರೆ. ಹೋಗಲಿ, ಇಬ್ಸೆನ್ನನ ನಾಟಕಗಳಿವೆಯಲ್ಲ, ಅವನು ಸ್ಪಷ್ಟ ನಿಲುವು ತಾಳಿದ್ದಾನಲ್ಲ, ಏನು ಹೇಳುವುದು?

ಸೌಂದರ್ಯಾನುಭವ ಎನ್ನುವುದು ಒಂದು ಕ್ಷಣದ್ದಲ್ಲ, ಅದು ಕಾಲಕ್ರಮೇಣ ಹೊರಹೊಮ್ಮುವಂಥದು. ಅದು ಹುಟ್ಟುತ್ತದೆ, ಮುಂದುವರಿಯುತ್ತದೆ, ಕೊನೆಗೊಳ್ಳುತ್ತದೆ. ಆ ಇಡೀ ಕಾಲದ ವ್ಯಾಪ್ತಿಯಲ್ಲಿ ಸೌಂದರ್ಯಾನುಭವ ಮೂಡುತ್ತದೆ. ಸಂಗೀತವನ್ನು ಒಂದು ಕ್ಷಣದ್ದೆಂದು ಸವಿಯುತ್ತಾರೇನು? ಆ ಅನುಭವದ ನಂತರ ಮತ್ತೇನೂ ಇಲ್ಲವೆಂಬುದು ಪ್ರಯೋಜನವಾದಿಗಳ ಅಭಿಪ್ರಾಯ. ಅದು ಸರಿಯೇ, ಇಲ್ಲವೇ, ಎಂಬುದು ಸಹ ಅನುಭವದ ವಿಷಯವೇ. ಸೌಂದರ್ಯಾನುಭವದ ಎಷ್ಟೋ ಕಾಲದ ನಂತರ ಕ್ರಿಯೆಗೆ ಪ್ರೇರಣೆ ಒದಗುವ ಸಂಭವವೂ ಇದೆಯಲ್ಲವೆ? ನಾನೀಗ ಬರೆಯುತ್ತಿರುವುದು 1947ರಲ್ಲಿ, ಯುದ್ಧದ ತರುವಾಯದಲ್ಲಿ. ಮನುಕುಲ ಈ ಘಟ್ಟದಲ್ಲಿ ಎಷ್ಟು ಅಸಾಧಾರಣ ನೋವು ಕಂಡಿದೆ! ಈ ಕಾಲದಲ್ಲೆಲ್ಲಾ ನಾನು ಮಿಲ್ಟನ್ನನ 'ಲಿಸಿಡಾಸ್'

ಕವನವನ್ನು ಮತ್ತೆ ಮತ್ತೆ ಓದಿಕೊಳ್ಳುತ್ತಾ ಬಂದಿದ್ದೇನೆ. ನನ್ನ ರಕ್ತ ನೀರಾಗುತ್ತಿದ್ದಂತೆ, ಮೂಳೆಗಳು ಮುದ್ದೆಯಾಗುತ್ತಿದ್ದಂತೆ, 'ಲಿಸಿಡಾಸ್' ನನ್ನ ಬೆನ್ನಹುರಿಗೆ ಅಗಾಧ ಶಕ್ತಿ ನೀಡಿದೆ, ನೇರವಾಗಿ ನಿಂತು ಭವಿಷ್ಯದತ್ತ ಕೈಚಾಚಲು ಸಮರ್ಥನನ್ನಾಗಿಸಿದೆ. ಅಂದರೆ, ಆ ಕವನದಿಂದ ಪ್ರಯೋಜನ ಪಡೆದಿದ್ದೇನೆ. ನೆಮ್ಮದಿ ಕಳೆದುಕೊಂಡಿರುವಾಗ ಸಾಮರ್ಥ್ಯವನ್ನು ತುಂಬಿಕೊಳ್ಳುವುದು ಒಂದು ಪ್ರಾಯೋಗಿಕ ಉದ್ದೇಶ. ಗತಾನುಗತಿಕವಾಗಿ ಕಾವ್ಯಕ್ಕೆ ಅಂತಹ ವಿಶೇಷ ಶಕ್ತಿ ಇದೆಯೆಂದು ಗುರುತಿಸಲಾಗುತ್ತಾ ಬಂದಿರುವುದು ವಾಸ್ತವ. 'ಲಿಸಿಡಾಸ್' ಕವನದ ಸೌಂದರ್ಯವನ್ನು ಈ ಪ್ರಯೋಜನವು ಮುಕ್ಕುಗೊಳಿಸಿದೆಯೆ? ಹಾಗೇನೂ ಆಗಿಲ್ಲ. ಪದೇಪದೇ ಅಂತಹ ಸುಖ ಪಡೆದಿರುವುದು ಆ ಕವನವನ್ನು ಅಪ್ರಸ್ತುತವಾಗಿಸಿಲ್ಲ. ರಾಮಾಯಣದ ಪಾರಾಯಣವು ಅದರ ಕಾವ್ಯತ್ವವನ್ನು ಧ್ವಂಸ ಮಾಡಿಲ್ಲ, ಅಲ್ಲವೆ? 'ಲಿಸಿಡಾಸ್' ನನಗೆ ಶಕ್ತಿ ತುಂಬಿದೆಯೆಂಬ ಕಾರಣಕ್ಕೆ ಸುಂದರವಾದ ಕವನವಾಗಿಲ್ಲ; ಬದಲಾಗಿ, ಸುಂದರವಾಗಿರುವುದರಿಂದ ಶಕ್ತಿ ತುಂಬಿದೆ. ಯಾರೋ ಒಂದು ಕವನ ಸಂಕಲನ ಹೊರತರುತ್ತಾರೆ: ಅದರ ಶೀರ್ಷಿಕೆ 'ಸ್ಫೂರ್ತಿ ಕವನಗಳು' ಎಂದೋ, 'ದಿಟ್ಟತನದ ಪರ್ವಗಳು' ಎಂದೋ ಇರುತ್ತದೆನ್ನಿ. ಆಹಾ, ಇದೋ ಇಲ್ಲಿದೆ ನನ್ನ ಹತಾಶೆಗೆ ಮದ್ದು, ಎಂದು ಅದಕ್ಕೆ ಮುಗಿಬೀಳುತ್ತಾರೇನು? ಅವು ನೀಡಬಹುದಾದ ಸ್ಫೂರ್ತಿ ಶೂನ್ಯವೇ ಇರಬಹುದು! ಕಾರಣವೇನು? ಅವುಗಳಲ್ಲಿ ನೈಜ ಸೌಂದರ್ಯ ಇಲ್ಲದಿರುವುದು. ಶೆಲ್ಲಿ ಹೇಳಿದ್ದ ಮಾತುಗಳಿವೆಯಲ್ಲಾ, ಅದರ ಅರ್ಥ ಇದೇ: "ಕವಿಗಳು ಹಾಗೆಂದು ಮಾನ್ಯತೆ ಪಡೆದಿಲ್ಲದ ವಿಶ್ವ ಶಾಸಕರು." ಇದೆಲ್ಲದರಿಂದ ಹೊಮ್ಮುವ ನಿರ್ಣಯ ಇದು: ಕಲಾಕೃತಿಯೊಂದರ ಸೌಂದರ್ಯದ ಬಗೆಗಿನ ತೀರ್ಮಾನವೇ ಬೇರೆ, ಅದು ಸುಂದರವಾಗಿರುವುದರಿಂದ ಅದರ ಪರಿಣಾಮವೇನು ಎಂಬುದರ ತೀರ್ಮಾನವೇ ಬೇರೆ. ಸಮಾಜದ ಬಗೆಗಿನ ವ್ಯಾಖ್ಯಾನವು ಕಲೆಯಾಗುವುದು ಅದು ಮೂಲತಃ ಕಲೆಯೆಂಬ ಅರ್ಹತೆ ಪಡೆದಿದ್ದಾಗಲೇ. ಅದು ಕೇವಲ ವ್ಯಾಖ್ಯಾನವಾಗಿದ್ದರೆ ಅದು ಕಲೆಯಲ್ಲ. ಪ್ರೇರಣೆ ನೀಡುವ ಸಾಮಗ್ರಿಯಾಗಿಯೂ ಅದು ಕಳಪೆಯದೇ ಆಗಿರಲು ಸಾಧ್ಯ.

ಇದನ್ನು ಸಹ ವೈಯ್ಯಕ್ತಿಕ ಅನುಭವದಿಂದ ತಿಳಿಯಬಹುದು. ಯಾವುದೋ ಅಭಿಪ್ರಾಯದ ಸತ್ಯತೆಯ ಬಗ್ಗೆ ನನಗೆ ಗಾಢವಾದ ನಂಬಿಕೆ ಇದೆಯೆಂಬುದು ಸಾಲದು. ಕೆಲವು ವರ್ಷಗಳ ಹಿಂದೆ ಇದರ ನೇರ ತಿಳಿವಳಿಕೆ ನನಗುಂಟಾಯಿತು. ಪ್ರಪಂಚ ಎಷ್ಟು ಕೆಟ್ಟಿದೆ ಎಂಬ ತವಕದಿಂದ ಒಂದಷ್ಟು ಪದ್ಯಗಳನ್ನು ಬರೆದುಬಿಟ್ಟೆ. ಸಂಖ್ಯೆಯಲ್ಲಿ ಅಪಾರ, ಆದರೆ ಸಂಖ್ಯೆಯಲ್ಲಿ ಮಾತ್ರ. ಬರೆದಾಗ ಆಹಾ! ಎನಿಸಿತು. ಆದ್ದರಿಂದ ಅಪಾರ ಸಂಖ್ಯೆಯಲ್ಲಿ ಬರೆದೆ. ಸಂಪಾದಕರೊಬ್ಬರಿಗೆ ತೋರಿಸಿದಾಗ ಅವರೆಂದರು: "ಇದರಲ್ಲಿ ಬಗೆದು ಬಿಸುಡಬೇಕಾದ್ದು ಸಾಕಷ್ಟಿದೆ" ಎಂದು. ಆತ ಹೇಳಿದ್ದು ಸರ್ವಥಾ ಸರಿ. ನಾನು ಕವಿಯಲ್ಲವೆಂಬ ನಿರಾಶೆಯನ್ನು ನಾನೀಗ ನುಂಗಿಕೊಂಡಿದ್ದೇನೆ. ಆದರೂ ಆಗಾಗ್ಗೆ ನನ್ನನ್ನು ಬಾಧಿಸುವ ಪ್ರಶ್ನೆಯೊಂದಿದೆ: ಟಿ.ಎಸ್.ಎಲಿಯಟ್‌ಗೆ ಪ್ರಪಂಚದ ಇರವಿನ ಬಗ್ಗೆ ತವಕವಿದ್ದಿತು (ಅದು ತಪ್ಪು ಗ್ರಹಿಕೆಯ ತವಕವೆಂಬುದು ಬೇರೆ ವಿಚಾರ), ಆತ ಶ್ರೇಷ್ಠ ಕವಿಯಾದ; ನನಗೂ ಗಾಢವಾದ ತವಕವಿತ್ತು, ಆದರೆ ನಾನೇಕೆ ಕವಿಯಾಗಲಿಲ್ಲ?

ಇಂತಹ ಪ್ರಸಂಗಗಳನ್ನು ಬಿಡಿ. ಕಲೆಯಲ್ಲಿ ಸಾಮಾಜಿಕ ಕಳಕಳಿ ವ್ಯಕ್ತವಾಗ ಬಹುದೆಂಬುದು ಶತಸ್ಸಿದ್ಧ. ಆ ಕಳಕಳಿ ಶುದ್ಧವಾಗಿದ್ದರೆ, ನೈಜವಾಗಿದ್ದರೆ, ಕಲೆಗೆ ಧಕ್ಕೆಯುಂಟಾಗುವುದಿಲ್ಲ. ಸಾಮಾಜಿಕ ವ್ಯಾಖ್ಯಾನವು ಪಕ್ಷಪಾತದ್ದಾದರೆ, ಪ್ರಾಯೋಜಿತ ವಾಗಿದ್ದರೆ, ಪೂರ್ತಿ ಅನೃತವಾಗಿದ್ದರೆ, ಆಗ ಕಲಾಕೃತಿಯ ಮಾಪನ ಬೇರೆಯೇ ಇರುತ್ತದೆ. ಅದನ್ನು ಕಲ್ಪಿತ ಕಳಕಳಿ ಎನ್ನಬೇಕು. ಅಥವಾ ಅದೆಷ್ಟು ಸುಳ್ಳಿನ ಕಂತೆಯೆಂಬ ಭಾವನೆ ಬಂದು ಅದರ ಕಲಾತ್ಮಕತೆ ಪ್ರಶ್ನಾರ್ಹವಾಗುತ್ತದೆ. ಯಾವ ಸಂಭಾವಿತನೂ ಅಂಥದರಲ್ಲಿ ಸೌಂದರ್ಯಾನುಭವ ಪಡೆಯಲಾರ. ಬೇಕಾದರೆ ಕಲಾವಿದನಿಗೆ ಸ್ವಲ್ಪ ರಿಯಾಯಿತಿ ನೀಡಿ; ಆದರೆ ನಮ್ಮ ಮೇಲೆ ಯಾರೋ ಪ್ರಚಾರದ ಹಲ್ಲೆ ನಡೆಸುತ್ತಿದ್ದಾರೆಂಬ ಭೀತಿಯಿಂದ ಅಂಥವರ ಮನಸ್ಸಿನಲ್ಲೇನಿದೆ ಎಂಬುದನ್ನು ತಿಳಿಯುವುದರಿಂದ ವಿಮುಖರಾಗಬೇಕಿಲ್ಲ. ಇಷ್ಟೆಲ್ಲಾ ಹೇಳಿಯೂ ಕಡೆಗೆ ಕಲೆಯ ಸಮರ್ಥನೆ ಕಲಾವಿದರಿಂದಲೇ ಬರಬೇಕೆಂದು ನಾನು ಬಯಸುತ್ತೇನೆ. ನನ್ನ ವಾದವು ತನ್ನ ಮಿತಿಯಲ್ಲಿ ಏನನ್ನೋ ಸಾಧಿಸುತ್ತದೆಂದು ಭಾವಿಸುತ್ತೇನೆ. ಆದರೆ ಕಲೆಯ ಸಾಮಾಜಿಕ ಕಳಕಳಿಯ ವಿರುದ್ಧದ ಮೂಢನಂಬಿಕೆ ಪರಿಹಾರವಾಗಬೇಕಾದರೆ ಕಲಾವಿದರು ತಮ್ಮ ಕೌಶಲ್ಯದಿಂದ ಮಧ್ಯಪ್ರವೇಶ ಮಾಡಬೇಕು. ಅವರಿಗೆ ಆಯಾಯ ಕಾಲದ ಸಮಸ್ಯೆಗಳ ಅರಿವಿದೆ, ಅವನ್ನು ನಿಭಾಯಿಸುತ್ತಾರೆ. ಹಾಗೆಯೇ ಕಲೆಯ ಸಮರ್ಥನೆಯೂ ಅವರಿಂದ ಬಂದರೆ ಚೆನ್ನ. ಸಮಕಾಲೀನ ಮಿಲ್ಟನ್ ಒಬ್ಬ ಬಂದರೆ ಪತ್ರಿಕಾಸ್ವಾಮ್ಯ ಹೊಂದಿರುವ ಒಂದು ವ್ಯಾಪಾರೀ ಸಂಸ್ಥೆ ಅವನನ್ನು ಕವಿತ್ವ ಶಕ್ತಿ ಇಲ್ಲದ ಕವಿ ಎಂದು ಹೇಳಲಾರದು. ಸ್ಥಾಪಿತ ಶಕ್ತಿಯನ್ನು ಬುಡಮೇಲು ಮಾಡ ಬಯಸುವ ತೀವ್ರಗಾಮಿಯೆಂದು ಬೇಕಾದರೆ ಹೇಳಿಕೊಳ್ಳಲಿ ಬಿಡಿ, ಅದರಿಂದೇನು? ಪ್ರಬಲ ಕಲಾಕೃತಿಗಳ ಮಹಾಪೂರ ಬಂದಾಗ, ತೆಗಳಿಕೆಗೆ ಪಾತ್ರವಾಗಲು ಸಾಧ್ಯವಿಲ್ಲದಂತಹ ಕೃತಿಗಳು ಹೊರಬಂದಾಗ, ಕಲೆ ಮತ್ತು ರಾಜಕೀಯದ ಬೆರಕೆ ಸಾಧುವಿಲ್ಲವೆಂಬ ಬಾಲಿಶ ಮಾತುಗಳು ಕೊಚ್ಚಿಹೋಗುತ್ತವೆ. ಅಂತಹ ಸನ್ನಿವೇಶವು ಅನತಿಕಾಲದಲ್ಲೇ ಬರುತ್ತದೆಂಬ ಆಸೆ ಇರಿಸಿಕೊಂಡಿದ್ದೇನೆ. ಆ ಸನ್ನಿವೇಶ ಒದಗಿಬಂದಾಗ ನನ್ನ ಈ ಪ್ರಬಂಧವನ್ನು ಮರೆತುಬಿಡಬಹುದು, ಬಿಸುಡಬಹುದು. ಕಲಾವಿದರಿಗೆ ಧ್ವನಿಯಿದೆ ಎಂಬುದನ್ನು ಆಗ ಸಾಬೀತುಗೊಳಿಸುವ ಅವಶ್ಯಕತೆ ಇರುವುದಿಲ್ಲ, ಅವರಿಗೆ ತಿಳಿಯ ಹೇಳುವ ಪ್ರಸಂಗವಿರುವುದಿಲ್ಲ, ಅವರ ವಾಣಿಯು ಮನುಕುಲಕ್ಕೆ ಸಾರಭೂತವಾಗಬಲ್ಲುದೆಂದು ಪ್ರತಿಪಾದಿಸಬೇಕಾದ ಪ್ರಸಂಗವೂ ಬರುವುದಿಲ್ಲ. ಯಾವ ಸೃಷ್ಟಿಕರ್ತನಲ್ಲಿ ತಾನೆ ಮಾನವ ಅಂಶ ಇಲ್ಲದಿರಲು ಸಾಧ್ಯ! ಅಂತೆಯೇ, ಯಾವ ಮಾನವನಲ್ಲೂ ಸೃಷ್ಟಿಕ್ರಿಯೆಯ ಲವಲೇಶವೂ ಇಲ್ಲದಿರಲು ಸಾಧ್ಯವಿಲ್ಲ. ಪ್ರತಿಭಾವಂತರ ಅನನ್ಯ ಸಾಧನೆಗಳನ್ನು ನಾವು ಮೆಚ್ಚುತ್ತೇವೆ. ಹಾಗೆ ಮಾಡುತ್ತಲೇ ನಮ್ಮ ಮತ್ತು ಅವರ ನಡುವಣ ಅಂತರವನ್ನು ಕಡಿಮೆಗೊಳಿಸಿಕೊಳ್ಳುತ್ತೇವೆಂದು ಆಶಿಸೋಣ. ಕಲೆ ಮತ್ತು ಜೀವನದ ನಡುವಿನ ಅಂತರ ಆಗ ಕನಿಷ್ಠಮಟ್ಟದ್ದಾಗುತ್ತದೆ, ಏಕೆಂದರೆ ಕಲೆಯ ಬಗೆಗಿನ ಆಸಕ್ತಿ ಸಾರ್ವತ್ರಿಕವಾಗಿರುತ್ತದೆ. ಕಲಾವಿದರು ತಮ್ಮ ಮಾನವತ್ವವನ್ನು ಸಂಪೂರ್ಣವಾಗಿ ಗಳಿಸಿಕೊಂಡಾಗ ಮಾನವ ಜನಾಂಗವು ಕಲೆಯನ್ನು ನಿಜಾರ್ಥದಲ್ಲಿ ಪೂರ್ತಿಯಾಗಿ ಗಳಿಸಿಕೊಂಡಂತಾಗುತ್ತದೆ.

❑❑

8. ಉದ್ಧರೇತ್ ಆತ್ಮನಾ ಆತ್ಮಾನಂ

ಅದನ್ನು ನಾವೆಲ್ಲಾ ಮಾಡುತ್ತಿದ್ದೇವೆ. ನಿಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಲು ಯಾವಾಗಲೂ ಇತರರನ್ನು ಆಶ್ರಯಿಸಿಕೊಂಡಿದ್ದು ನಿಮ್ಮ ಪ್ರಯತ್ನಗಳೇನೂ ಇಲ್ಲವಾಗಿಬಿಟ್ಟರೆ ನೀವು ಶುದ್ಧ ಪರತಂತ್ರ ಜೀವಿಯಾಗುತ್ತೀರಿ. ಅಂಥವರೂ ಇದ್ದಾರೆ, ಅವರಿಗೆ ಯಾವಾಗಲೂ ವಿರಾಮವೇ. ಬೇರೆಯವರ ದುಡಿಮೆ ಅವರಿಗೆ ಆಧಾರ. ದುಡಿಯುವವರ ಮೇಲೆ ತೆರಿಗೆಯನ್ನು ಹೇರಿ ಅವರು ತಮ್ಮ ಚೆಕ್ ಬುಕ್ಕುಗಳನ್ನು ಹರಿಯುತ್ತಲೇ ಇರುತ್ತಾರೆ. ಹೀಗೊಂದು ಸನ್ನಿವೇಶವನ್ನು ಕಲ್ಪಿಸಿಕೊಳ್ಳೋಣ: ತನಗಾಗಿ ಯಾರೂ ಏನನ್ನೂ ಮಾಡಿಕೊಳ್ಳದೆ ಎಲ್ಲವನ್ನೂ ಇತರರಿಗಾಗಿ ಮಾಡುತ್ತಿರುವಂತಹ ಸಂದರ್ಭ; ಆಗ ನಾನು ನಿಮ್ಮ ಬಟ್ಟೆ ಒಗೆದುಕೊಡುತ್ತೇನೆ, ನೀವು ನನ್ನ ಬಟ್ಟೆ ಒಗೆದುಕೊಡುತ್ತೀರಿ. ಎಂಥ ಶ್ರೀಮಂತ ಸಮಾಜ ಅದು!

ಹಾಗಿದ್ದರೆ 'ಉದ್ಧರೇದಾತ್ಮನಾತ್ಮಾನಂ' ಎಂದರೇನು? ಪರತಂತ್ರ ಜೀವಿಯಾಗುವುದಲ್ಲ ಮತ್ತು ಸದಾ ಇತರರಿಗಾಗಿ ದುಡಿಯುತ್ತಿರುವುದೂ ಅಲ್ಲ. ನಿಜಾರ್ಥ ಇದು: ಜೀವನದಲ್ಲಿ ಕ್ಲಿಷ್ಟಕರವಾದ ಹೋರಾಟಗಳಿವೆ; ಪ್ರತಿಯೊಬ್ಬರೂ ತಮ್ಮತಮ್ಮ ಅನುಕೂಲವನ್ನು ನೋಡಿಕೊಳ್ಳಬೇಕು, ಇಲ್ಲವಾದರೆ ನಷ್ಟವಾಗಿಹೋಗಬೇಕು. ಸ್ವಂತದ ಅನುಕೂಲವು ಏಕೈಕ ಗಮನಾರ್ಹ ಒಳಿತು ಮತ್ತು ಸೋಲು ಹಾಗೂ ಸಾವು ಏಕೈಕ ಗಮನಾರ್ಹ ಹೊಲ್ಲತು ಎಂದಂತಾಯಿತು. ಮೊದಲ ಆಶಯವು ಸಿದ್ಧಿಸಬೇಕು, ಎರಡನೆಯದನ್ನು ಹೇಗಾದರೂ ತಪ್ಪಿಸಿಕೊಳ್ಳಬೇಕು: ಅದಕ್ಕಾಗಿ ಮಾಡುವ ಕೆಲಸಗಳೆಲ್ಲಾ ಸಮರ್ಥನೀಯ ಎಂದರ್ಥ. ಅಂದರೆ, ನನ್ನ ಸುಖವನ್ನು ಕಟ್ಟಿಕೊಳ್ಳಲು ನಿಮ್ಮ ಬಿದ್ದುಹೋದ ಮನೆಯ ಇಟ್ಟಿಗೆಗಳನ್ನು ಆಯ್ದುಕೊಳ್ಳುತ್ತೇನೆ!

ಇದು ಸರಿಯೇ ಎಂಬ ಪ್ರಶ್ನೆಯನ್ನು 2500 ವರ್ಷಗಳಿಂದ ಹಾಕಿಕೊಳ್ಳುತ್ತಲೇ ಬಂದಿದ್ದೇವೆ. ಒಂದಂತೂ ನಿಜ: ಬಿಚ್ಚುಮನಸ್ಸಿನಿಂದ ಇರುವ ಸಂಗತಿಯನ್ನು ಹೇಳಿಬಿಟ್ಟರೆ ಬೇರೆಯವರ ಬಳಿ ಇನ್ನಾವ ಅಸ್ತ್ರವೂ ಇರುವುದಿಲ್ಲ. ಎಂಥ ಸಾಧು ಜನ, ಅವರೇನನ್ನೂ ಮುಚ್ಚಿಡುವುದಿಲ್ಲ, ಎಂದು ನಂಬುವಂತೆ ಆ ನಿಲುವಿನ ದೇವವಾಣಿ ನುಡಿಯುತ್ತಾ ಬಂದಿದೆ. ಅದೊಂದು ರೀತಿಯ ಎಚ್ಚರಿಕೆಯ ಗಂಟೆ. ಅದನ್ನು ಕೇಳಿಸಿಕೊಳ್ಳದಿದ್ದರೆ ತಪ್ಪು ನಮ್ಮದೇ.

ಎಷ್ಟೋ ಅಮಾಯಕರ ಮನಸ್ಸುಗಳಲ್ಲಿ ಇದು ಅಚ್ಚೊತ್ತಿ ನಿಂತಿದೆ. ಹಲವು ವರ್ಷಗಳ ಕಾಲ ನಾನು ವಿಶ್ವವಿದ್ಯಾನಿಲಯಗಳಲ್ಲಿ ನೀತಿಶಾಸ್ತ್ರದ ಪಾಠ ಹೇಳಿದ್ದೇನೆ. ನನ್ನ ಅನೇಕ ವಿದ್ಯಾರ್ಥಿಗಳು ಈ ಸಿದ್ಧಾಂತವನ್ನು ಮಾನ್ಯ ಮಾಡಿದ್ದಾರೆ, ಅದರಲ್ಲಿ ಅವರಿಗೆ ಅಳುಕೇನೂ ಇರಲಿಲ್ಲ. ಅಂಥವರಲ್ಲಿ ಒಬ್ಬನ ನೆನಪು ನನಗಿದೆ. ವಿದ್ಯಾರ್ಥಿಯಾಗಿದ್ದಾಗ ಅವಕಾಶ ಮಾಡಿಕೊಂಡು ಒಂದು ಹೊಟೇಲಿನ ಕೊಠಡಿಗಳ ಉಸ್ತುವಾರಿ ಕೆಲಸ ಮಾಡಿ

ಸ್ವಲ್ಪ ಹಣ ಗಳಿಸಿಕೊಳ್ಳುತ್ತಿದ್ದ. ಅಲ್ಲಿದ್ದದ್ದನ್ನು ಕದಿಯಬಹುದಿತ್ತು. ಅವನು ಹೇಳುತ್ತಿದ್ದ: "ಪೊಲೀಸರ ಭಯವಿಲ್ಲದಿದ್ದರೆ ನಾನದನ್ನು ಮಾಡುತ್ತಿದ್ದೆ" ಎಂದು. ನಿಜ ಇರಬಹುದೇನೊ, ಆದರೆ ಅವನು ಶುದ್ಧ ಮನಸ್ಸಿನವನೆಂದು ನಾನು ಪೂರ್ತಿ ನಂಬಿದ್ದೆ. ಮಾತನಾಡುವಾಗ ಸ್ವಾರ್ಥದ ಚಿಹ್ನೆ ತೋರುತ್ತಾರೆ, ಆದರೆ ನಿಜಕ್ಕೂ ಅವರು ನಂಬಿಕಸ್ಥರು, ಕರುಣಿಗಳು. ಹಾಗೆ ಬಹಿರಂಗವಾಗಿ ಹೇಳಿಕೊಳ್ಳದಿದ್ದವರು ನಂತರದ ಜೀವನದಲ್ಲಿ ನಡೆದುಕೊಂಡುದಕ್ಕಿಂತ ಈ ಹುಡುಗರು ಉತ್ತಮರೆನಿಸಿಕೊಂಡಿದ್ದು ವಾಸ್ತವ.

ಯುವಕರಲ್ಲಿ ಹೇಗಾದರೂ ಮಾಡಿ ಯಶಸ್ಸು ಗಳಿಸಬೇಕೆಂಬ ವಾಂಛೆಯೇನಾದರೂ ಇದ್ದರೆ ಅದು ಸರ್ವರ ಗುಣವೇನೂ ಅಲ್ಲ. ಬಾಯಲ್ಲಿ ಅಂತಹ ಆಶಯ ವ್ಯಕ್ತಪಡಿಸದವರು ನಿಜಕ್ಕೂ ಪಟಿಂಗರಾಗುವ ಸಾಧ್ಯತೆಯುಂಟು. ನಾನು ಅಧ್ಯಾಪಕನಾಗಿದ್ದಾಗ ಮೇಲಿನ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿದ್ದವರು ಆಗಾಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕಾಗುತ್ತಿತ್ತು. ಉದಾಹರಣೆಗೆ, "ಕಳೆದ ನಾಲ್ಕು ವರ್ಷಗಳಲ್ಲಿ ನೀವು ಗಳಿಸಿದ 'ವಿದ್ಯೆ' ಅಥವಾ 'ಸಂಪರ್ಕಗಳು' ಬೇರೆಲ್ಲದಕ್ಕಿಂತಲೂ ಹೆಚ್ಚು ಮೌಲ್ಯಯುತವಾಗಿತ್ತೆ?" ವಿದ್ಯೆಗಿಂತಲೂ ಸಂಪರ್ಕಗಳಿಗೆ ಅವರು ಹೆಚ್ಚು ಒತ್ತು ಕೊಡುತ್ತಿದ್ದರು. ಅಂದರೆ, ಅವರಿಗೆ ವಿದ್ಯೆಯ ಗಳಿಕೆ ಗೌಣವಾಗಿತ್ತು, ಸಂಪರ್ಕಗಳು ಮಹತ್ವದ್ದಾಗಿದ್ದವು. ಏಕೆಂದರೆ, ಮುಂದಿನ ದಿನಗಳಲ್ಲಿ ಆ ಮಂದಿ ಒಂದಲ್ಲ ಒಂದು ರೀತಿಯಲ್ಲಿ ಇವರ ಗಿರಾಕಿಗಳಾಗಬಹುದಿತ್ತಲ್ಲ. ಜೀವವಿಮೆಯೋ, ಬಡ್ಡಿ ವ್ಯವಹಾರವೋ, ಯಾವುದರಲ್ಲಾದರೂ ಆ ಸಂಪರ್ಕಗಳಿಂದ ಲಾಭದ ನಿರೀಕ್ಷೆ ಇರುತ್ತಿತ್ತು. ಶತಮಾನಗಳ ವಿವೇಕ ಒಂದು ಕಡೆ, ಇಂದಿನ ಸ್ನೇಹಿತ ನಾಳಿನ ಗಿರಾಕಿ ಎಂಬುದು ಇನ್ನೊಂದು ಕಡೆ. ಎರಡನೆಯದೇ ಗೆಲ್ಲುತ್ತಿತ್ತು. ಅದನ್ನು ಬೇರೆ ರೀತಿ ನೋಡಿ: ಇಂದಿನ ಗಿರಾಕಿ ನಾಳಿನ ಸ್ನೇಹಿತ ಆಗಬಹುದೆ?

ಅಚಾತುರ್ಯದ ಮಾತಿರಬಹುದು, ಆದರೆ ವಿದ್ಯಾರ್ಥಿಗಳ ತೀರ್ಮಾನವು ಯಾಮಾರಿಸುವಂಥದು. ನಮಗೆ ಎಚ್ಚರದಿಂದಿರಿ ಎಂದು ಹೇಳುತ್ತಲೆ ಎಚ್ಚರ ತಪ್ಪಿಸುವಂತಹ ಮಾತದು. ಎರಡು ನಾಲಿಗೆಯವರು ಅಷ್ಟು ಸಲೀಸಾಗಿ ಮಾತನಾಡುವುದಿಲ್ಲ, ಅಲ್ಲವೆ? ಅಂತಹ ವಿದ್ಯಾರ್ಥಿಗಳಲ್ಲಿ ನಮ್ಮ ನಂಬಿಕೆ ಹೆಚ್ಚುತ್ತದೆ. ನಾನು ಅಪ್ರಾಮಾಣಿಕನಾಗುತ್ತೇನೆಂದು ಬಹಿರಂಗವಾಗಿ ಘೋಷಿಸಿಕೊಳ್ಳುವವರು ಹಾಗಾಗುವ ಸಾಧ್ಯತೆ ಕಡಿಮೆ. ಅವನ ಹೇಳಿಕೆಯಲ್ಲಿ ಅಪ್ರಾಮಾಣಿಕತೆ ಇದ್ದರೆ ಅದು ಅವನಲ್ಲಿ ಹಾಗೇ ಉಳಿಯಬಹುದು ಕೂಡ. ನಮ್ಮ ನಡತೆಯಲ್ಲಿ ಸ್ಥಿರತೆಯು ಇತರರಲ್ಲಿ ನಂಬಿಕೆ ಮೂಡಿಸಿದರೆ ಅದೊಂದು ಉತ್ತಮ ಗುಣ ಎನ್ನಬಹುದು. ಅದೊಂದು ಸಾಮಾಜಿಕ ಸದ್ಗುಣ. ಸ್ವಾರ್ಥವೆಂಬುದಿದ್ದರೆ ಅದು ಎಲ್ಲ ಸಾಮಾಜಿಕ ಸದ್ಗುಣಗಳನ್ನೂ ಹಾಳುಗೆಡಹುತ್ತದೆ.

ನಮ್ಮ ಸಿದ್ಧಾಂತದಲ್ಲಿ ಅನೇಕ ವೈರುಧ್ಯಗಳಿವೆಯಲ್ಲವೆ? ಕಳಂಕರಹಿತನೆಂದು ತೋರಿಸಿಕೊಳ್ಳಲು ಸದಾ ಹವಣಿಸುತ್ತಿರುವವನು ಯಾವಾಗಲೋ ತಿರುಗಿಬೀಳುವಂಥವನೇ ಆಗಬಹುದು. ಅಷ್ಟು ಕಳಂಕರಹಿತನಲ್ಲದವನು ಹಾಗೆಯೇ ನಡೆದುಕೊಳ್ಳಬಹುದು. ಅವನ ಹಿರಿಯರು ಮುಚ್ಚಿಡುವುದನ್ನು ಅವನು ಬಹಿರಂಗವಾಗಿ ತೋರ್ಪಡಿಸುತ್ತಾನೆ. ಯಾರೊಬ್ಬರೇ ಆಗಲಿ, ಅವರು ಹೇಳಿದ್ದು ಯಥಾರ್ಥವೇ ಎಂದು ತಿಳಿಯುವುದಾದರೂ

ಹೇಗೆ? ಒಟ್ಟಿನಲ್ಲಿ ಈ ಸಿದ್ಧಾಂತವು ಒಂದಲ್ಲ ಒಂದು ರೀತಿಯಲ್ಲಿ ನಮ್ಮನ್ನು ಕಂಗೆಡಿಸುವುದರಲ್ಲಿ ಅನುಮಾನವಿಲ್ಲ.

ಇತರರ ದುಡಿಮೆಯ ಫಲವಾಗಿ ನಿಮಗೆ ಅಧಿಕ ಲಾಭ ಅಥವಾ ವರಮಾನ ಗಿಟ್ಟುತ್ತಿದೆಯೆಂದಿಟ್ಟುಕೊಳ್ಳಿ. ಅದರರ್ಥವೇನು? ನಿಮ್ಮ ವರಮಾನದ ಮೂಲವು ಹಲವರ ದುಡಿಮೆಯಲ್ಲಿದೆ, ಮತ್ತು ನಿಮ್ಮ ವರಮಾನವು ಅಧಿಕವಾಗಿರಬೇಕಾದರೆ ಆ ದುಡಿಮೆಗಾರರ ಸರಾಸರಿ ವರಮಾನವು ಕಡಿಮೆಯೇ ಇರಬೇಕು. ನಿಮ್ಮಂತೆ ವರಮಾನವನ್ನು ಪಡೆಯುತ್ತಿರುವವರು ಸಾವಿರಾರು ಮಂದಿ ಇದ್ದಾರೆಂಬುದೂ ನಿಮಗೆ ತಿಳಿದಿದೆ. ಅದರಿಂದೇನು ತಿಳಿಯುತ್ತದೆ? ಅಂಥವರೆದುರು ನೀವು ಸದಾ ಸ್ಪರ್ಧಿಸುತ್ತಿರುತ್ತೀರಿ. ನೀವೊಬ್ಬರೇ ಶೋಷಕರಲ್ಲವಾದ್ದರಿಂದ ನಿಮ್ಮ ಸ್ಥಾನವನ್ನು ಸದಾ ರಕ್ಷಿಸಿಕೊಳ್ಳುವುದರಲ್ಲಿ ನೀವು ನಿರತರಾಗಿರಬೇಕು. ಇಲ್ಲವಾದರೆ ಬೇರಾರೋ ನಿಮ್ಮಿಂದ ಕಸಿದುಕೊಂಡು ನಿಮ್ಮನ್ನು ಬೀದಿಗೆ ನೂಕುತ್ತಾರೆ. ನಿಮ್ಮ ವರಮಾನದ ಮೂಲ ಮತ್ತು ಆ ಮೂಲಕ್ಕೆ ನಿಮ್ಮ ಲಗ್ಗೆಯನ್ನು ಕಾಪಿಟ್ಟುಕೊಳ್ಳಬೇಕು. ಆನರು ನಿಮಗಾಗಿ ದುಡಿಯಬೇಕು ಮತ್ತು ಬೇರಾರೂ ಅವರನ್ನು ನಿಮ್ಮಿಂದ ಕಸಿದುಕೊಳ್ಳುವಂತಿರಬಾರದು.

ಇದೆಂತಹ ಪ್ರಪಂಚವಪ್ಪ ಎನ್ನುತ್ತೀರಾ? ಸುತ್ತಲೂ ವೈರಿಗಳೇ ತುಂಬಿದ್ದಾರಲ್ಲ! ಸರ್ಕಾರ, ಕಾರ್ಮಿಕ ಸಂಘಗಳು, ಏಕಸ್ವಾಮ್ಯಗಳು, ದೊಡ್ಡ ಮತ್ತು ಸಣ್ಣ ವರ್ತಕರು, ಎಲ್ಲಾ ನಿಮ್ಮ ವಿರುದ್ಧ ಟೊಂಕ ಕಟ್ಟಿ ನಿಂತಿದ್ದಾರೆ. ನಿಮ್ಮೆಲ್ಲ ಆಯುಧಗಳನ್ನೂ ಬಳಸಿ ನಿಮ್ಮನ್ನು ನೀವು ಕಾಯ್ದುಕೊಳ್ಳಬೇಕು. ಅಂತಹ ಆಯುಧಗಳಲ್ಲಿ ನೈತಿಕ ಸಿದ್ಧಾಂತವು ಮಹತ್ವದ್ದಾಗುತ್ತದೆ. ನೈತಿಕತೆಯು ಪ್ರಾಬಲ್ಯಕ್ಕೆ ಒಂದು ಸಾಧನ; ಏಕೆಂದರೆ, ನಿಮ್ಮ ಸಮರ್ಥನೆಗೆ ಮತ್ತು ಬೇರೆಯವರನ್ನು ನಂಬಿಸಲು ಅದು ಒಳ್ಳೆಯ ಸಾಧನ. ಆದ್ದರಿಂದ ನೀವೇನು ಹೇಳುತ್ತೀರಿ? "ನನ್ನ ಎಲ್ಲ ಕ್ರಿಯೆಗಳಿಗೂ ಇರುವುದೊಂದೇ ಉದ್ದೇಶ; 'ಅಸಮರ್ಥರನ್ನು' ಕಳೆಯೆಂದು ಕಿತ್ತುಹಾಕಲು ಪ್ರಕೃತಿಮಾತೆಗೆ ಸಹಾಯ ಮಾಡುತ್ತಿದ್ದೇನೆ, ಅಷ್ಟೆ. ಕೆಲವರು ಇತರರಿಗಿಂತಲೂ ಕಳಪೆಯ ಜನ, ಅದು ಅವರ ಸಹಜ ಗುಣ. ಆದ್ದರಿಂದ ಅವರನ್ನು ಹಾಗೆಯೇ ನಡೆಸಿಕೊಳ್ಳಬೇಕು. ಮಾನವ ಸ್ವಭಾವವನ್ನು ಗುರುತಿಸಿ ತಾರತಮ್ಯವೆಸಗುವುದು ಅನಿವಾರ್ಯ."

ಇಂತಹ ಸಮರ್ಥನೆಯು ನಿರಾಕರಣೆಗೆ ಗುರಿಯಾದರೆ ಏನು ಮಾಡಬೇಕು? ನಿಮ್ಮ "ಉದಾತ್ತ ಸಿದ್ಧಾಂತ" ಕುಸಿದುಹೋಯಿತಲ್ಲ, ನಿಮ್ಮ ಸ್ಥಾನ ಮತ್ತು ಮಾನಕ್ಕೆ ಕುತ್ತುಂಟಾಯಿತಲ್ಲ! ಆರ್ಥಿಕ ಸತ್ಯದೆದುರು ನೀವೇನು ಮಾಡಬಲ್ಲಿರಿ, ಪಾಪ. ಮಾನ ಮುಚ್ಚಿಕೊಳ್ಳಲು ಉಳಿದಿರುವುದೊಂದೇ ವಸ್ತ್ರ, ಅದನ್ನು ಒಪ್ಪಿಕೊಳ್ಳಬಾರದೇಕೆ? ಪರದೆಯು ಹರಿದುಹೋದಾಗ ಕಪಟದಿಂದೇನು ಪ್ರಯೋಜನ! ಆಗ ನೀವು ಹೇಳುವುದಿದು: "ಅರೆ, ಇದು ಮಾನವನ ಹಾದಿ; ನಾನೂ ಅದೇ ಹಾದಿ ಹಿಡಿದಿದ್ದೇನೆ. ಯಾರುಯಾರಿಗೆ ಎಷ್ಟು ಹಿರಿದುಕೊಳ್ಳಲು ಸಾಧ್ಯವೋ ಅಷ್ಟನ್ನು ಹಿರಿದುಕೊಳ್ಳುತ್ತಾರೆ, ಬಿಡಿ." ಓಹೋ, ಮೃಗಗಳ ವರ್ತನೆಯನ್ನು ರಂಗುರಂಗಾಗಿ ಬಿಡಿಸಿಡಲು ಆಗದಿದ್ದರೆ, ಅದು ಸಂತೋಷಪ್ರದವಾದ್ದು – ಸ್ವಾಭಾವಿಕವಾದ್ದು – ಲಾಭಕರವಾದ್ದು – ನ್ಯಾಯಯುತವಾದ್ದು – ಅನಿವಾರ್ಯವಾದ್ದು ಎಂದು ಏನೇನೋ ಲಪಲಪಿಸಿ ಸೋತಾಗ ಉಳಿಯುವುದು ಒಂದೇ ಮಾತು: "ಅಯ್ಯೋ ಬಿಡ್ರೀ ನೀವೇನು ಹೇಳೋದು, ನಾನು ನಡೆಯುವುದು ಆ ಹಾದಿಯಲ್ಲೇ." ಸ್ವಾರ್ಥದ

ನೈತಿಕತೆಯ ಕೆಲಸ ಇಷ್ಟೇ, ಈ ನಿಲುವನ್ನು ಪೋಷಿಸುವುದು. ಅದು ವೈದ್ಯಕೀಯ ನಿಲುವೋ ಅಥವಾ ಹೆಣಕ್ಕೆ ಗುಂಡಿ ಅಗೆಯುವ ಕೆಲಸವೋ ತಿಳಿಯದಾಗಿದೆ.

ಈ ಸಿದ್ಧಾಂತದ ಸಾಮಾಜಿಕ ಪ್ರಯೋಜನ ಅದೇ. ಅದು ಕಡೆಯ ಅಸ್ತ್ರ, ಆದರೆ ಅದೊಂದು ಪ್ರಮುಖ ನೈತಿಕ ಪ್ರಶ್ನೆಗೆ ಎಡೆಮಾಡಿಕೊಡುತ್ತದೆ. ಯಾರೂ ಬೇರೆ ಯಾರ ಕಲ್ಯಾಣಕ್ಕೂ ಮನಸ್ಸು ಕೊಡಬೇಕೆಂಬ ಅಗತ್ಯವಿಲ್ಲವೆಂದು ಹೇಳಿಬಿಟ್ಟಾಗ ಅಂತಹ ಕಾಳಜಿಗೇನಾದರೂ ಸಮರ್ಥನೆಯುಂಟೇ ಎಂಬ ಪ್ರಶ್ನೆ ಏಳುತ್ತದೆ. ಆದರೆ ನಮಗೆ ದೊರಕಿರುವ ನೀತಿಬೋಧೆ ಏನು? “ಇತರರ ಕಲ್ಯಾಣವು ನಮ್ಮ ಮೂಲಭೂತ ಕಾಳಜಿಯಾಗಿರಬೇಕು. ಧೈರ್ಯ, ಸ್ವಯಂ–ನಿಯಂತ್ರಣ, ನಿಷ್ಠೆ, ತ್ಯಾಗ ಮನೋಭಾವ, ಇತ್ಯಾದಿ ಸದ್ಗುಣಗಳನ್ನು ಮೆಚ್ಚಿಕೊಳ್ಳಬೇಕು.” ಈ ಗುಣಗಳನ್ನು ಸ್ಪರ್ಧಾತ್ಮಕ ಸಮಾಜಗಳು ಮತ್ತು ಸಂಪತ್ತಿನ ಶೇಖರಣೆಯನ್ನು ಉತ್ತೇಜಿಸುವ ಸಮಾಜಗಳು ಸಹ ಮೆಚ್ಚಿವೆ. ಏಕಿರಬಹುದು? ಜನಸಾಮಾನ್ಯರು ಸಂಪತ್ತಿನ ಶೇಖರಣೆಯ ಗೀಳು ಹಚ್ಚಿಕೊಳ್ಳದಿದ್ದರೆ ಸಂಪತ್ತು ಅಧಿಕಗೊಳಿಸಿಕೊಳ್ಳುವವರಿಗೆ ಅನುಕೂಲವಾಗುತ್ತದೆಂದೇ ಇರಬೇಕು. ಆದ್ದರಿಂದ ಈ ಸದ್ಗುಣಗಳಿಗೆ ಯಾವ ಬೆಲೆಯೂ ಇಲ್ಲವೆಂಬ ಸಿದ್ಧಾಂತದೊಡನೆ ಮುಖಾಮುಖಿಯಾದರೆ, ಆ ಸದ್ಗುಣಗಳಿಗೆ ಯಾವ ಕಿಮ್ಮತ್ತೂ ಅಗತ್ಯವಿಲ್ಲವೆಂದಾದರೆ, ಅವು ಮೂರ್ಖತನದ ಅಪಾಯಕಾರಿ ಮೌಲ್ಯಗಳೆಂದು ಬಗೆಯುವಂತಾದರೆ ನಮ್ಮ ನೀತಿಶಾಸ್ತ್ರದ ಮೂಲಪಾಠಗಳನ್ನೆಲ್ಲಾ ಒಳಹೊಕ್ಕು ಗಂಭೀರವಾಗಿ ಪರಾಮರ್ಶೆ ಮಾಡಿಕೊಳ್ಳಬೇಕಾಗುತ್ತದೆ. ಸ್ವಾರ್ಥ ಮನೋಭಾವಕ್ಕಿಂತಲೂ ಸಾಮಾಜಿಕ ಒಳಿತನ್ನು ಆದರಿಸುವುದು ಹೆಚ್ಚು ಹಿತಕರವೆಂಬುದನ್ನು ಅರಿತುಕೊಳ್ಳಬೇಕಾಗುತ್ತದೆ.

ಆಗ ಉದ್ಭವಿಸುವ ಪ್ರಶ್ನೆಗಳಿವು: ಇತರರನ್ನು ಕಡೆಗಾಣಿಸಿ ನನ್ನ ಒಳಿತನ್ನು ಸಾಧಿಸಿಕೊಳ್ಳಲೇ ಅಥವಾ ನನ್ನನ್ನು ದೂರೀಕರಿಸಿ ಇತರರ ಒಳಿತನ್ನು ಸಾಧಿಸಲೆ? ಇವೆರಡೂ ಪರಸ್ಪರ ವಿರೋಧ ನೆಲೆಯವಲ್ಲದ್ದರಿಂದ ಎರಡನ್ನೂ ಸಾಧಿಸಲು ಯತ್ನಿಸಲೆ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾದ್ದು ಅತಿಮುಖ್ಯ. ಉತ್ತರ ಕಂಡುಕೊಳ್ಳಲು ನಾವು ಎಷ್ಟೆಲ್ಲ ಕ್ಷೇತ್ರಗಳ ಪರಿಗಣನೆ ಮಾಡಿಕೊಳ್ಳಬೇಕು! ರಾಜಕೀಯ, ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮತ್ತು ವೈಯ್ಯಕ್ತಿಕ ಜೀವನದ ಅತಿಸೂಕ್ಷ್ಮ ವಿವರಗಳು, ಎಲ್ಲಾ ಗಣನೆಗೆ ಬರುತ್ತವೆ. ಹಾಗೆ ಉತ್ತರ ಕೊಟ್ಟುಕೊಂಡೆವೋ ನಮ್ಮ ಆಯ್ಕೆಯ ರಾಜಕೀಯ ಪಕ್ಷಗಳು, ನಾವು ಬೆಂಬಲಿಸುವ ನೀತಿಗಳು ಮತ್ತು ಶಾಸನಗಳು, ಔದ್ಯಮಿಕ ಸಂಬಂಧಗಳ ಬಗೆಗಿನ ನಿಲುವುಗಳು, ಮುಂತಾದುವೆಲ್ಲಾ ಎದುರಾಗುತ್ತವೆ. ಕಡೆಗೆ, ನಾವು ಈ ಉತ್ಸವಕ್ಕೆ ಹೋಗಬೇಕೆ ಇಲ್ಲವೇ, ಆ ಮದುವೆಗೆ ಹೋಗಬಹುದೋ – ಇಲ್ಲವೋ ಎಂಬ ಸೂಕ್ಷ್ಮ ವಿಷಯಗಳು ಸಹ ಮುಖ್ಯವಾಗುತ್ತವೆ. ಈ ಎಲ್ಲ ಪ್ರಶ್ನೆಗಳನ್ನೂ ಒಳಗೊಳ್ಳುವಂತಹ ಒಂದು ಸಮಗ್ರ ಪ್ರಶ್ನೆ ಹಾಕಿಕೊಳ್ಳುವುದು ಶ್ರೇಯಸ್ಕರ ಮಾರ್ಗ; ನಾವು ಜನಪರವೋ ಅಥವಾ ಜನವಿರೋಧಿಗಳೋ?

ಮಾನವಜನಾಂಗದ ಪರ ಮತ್ತು ವಿರೋಧ:

“ನಾನು ಅವರ ವಿರೋಧಿ” ಎಂದುಬಿಡುವುದು ಮುಚ್ಚುಮರೆಯಿಲ್ಲದ, ಸರಳವಾದ ಉತ್ತರ. ಇಡೀ ಮನುಕುಲವನ್ನು ಮನಸ್ಸಿಗೆ ತಂದುಕೊಳ್ಳುವ ಗೋಜಿಗೇಕೆ ಹೋಗಬೇಕು!

ಯಾವ ವ್ಯವಸ್ಥೆಯಡಿ ಜನರು ಬಾಳುತ್ತಿದ್ದಾರೆಂಬುದನ್ನು ಕಟ್ಟಿಕೊಂಡು ಏನಾಗಬೇಕು? ಒಂದು ಗೂಡಿದೆ, ಅದನ್ನೊಂದನ್ನು ಆತುಕೊಂಡರೆ ಸಾಕು. ನಮಗೆ ಪ್ರೀತಿಪಾತ್ರರಾದ "ನಾವು" ಸಾಕು, ಬೇರೆ ಗೊಂದಲಗಳೇಕೆ ಬೇಕು! ಸದ್ಯದ ಸುಖ ಮತ್ತು ಮುಂದಿನ ಸುಲಭ ಹಾದಿ, ಇವೆರಡಾದರೆ ಸಾಕು. ನಾನೆಷ್ಟೋ ವ್ಯಾಪಾರಿಗಳನ್ನು, ಉದ್ಯಮಿಗಳನ್ನು, ಕಂಡಿದ್ದೇನೆ. ಅವರವರ ವ್ಯವಹಾರಗಳಲ್ಲಿ ಅವರೆಷ್ಟು ಮುಳುಗಿದ್ದಾರೆಂದರೆ ಯಾವುದೋ ಒಂದು "ವ್ಯವಸ್ಥೆಯಡಿ ಇದ್ದೇವೆ" ಎಂಬ ಅರಿವು ಸಹ ಅವರಿಗಿಲ್ಲ. ಒಬ್ಬರು ಹೇಳಿದ್ದರು: "ಏನಪ್ಪಾ ಇದು ನಿನ್ನ ಜಂಜಾಟ ಮತ್ತು ಖಿನ್ನತೆ? ಬಂಡವಾಳಶಾಹಿ ಎಂಬುದೇನೂ ಇಲ್ಲವೇ ಇಲ್ಲವಲ್ಲ!"

ಇದು ದಿವ್ಯ ಸರಳತೆಯೇ ಹೌದೇನೊ, ಆದರೆ ಅದಕ್ಕಿಂತಲೂ ವಿಪರೀತ ಸಂಕೀರ್ಣವಾದ ಬೇರೊಂದು ಉತ್ತರವೂ ಇದೆ. ನಮ್ಮ ಸಂಕಷ್ಟಗಳ ಜೊತೆ ಬೇರೆ ನಮ್ಮ ಸಹ–ನಾಗರಿಕರ ಆತಂಕಗಳನ್ನೂ ಹೇರಿಕೊಂಡು ಈ ಪ್ರಪಂಚದಲ್ಲಿ ಜೀವಿಸಬೇಕೆ? ಜನತೆಯ ಪರವಾಗಿರುವುದೆಂದರೆ ಅವರ ಹೊಟ್ಟೆ, ಬಟ್ಟೆ, ಸೂರು, ಇವನ್ನೆಲ್ಲಾ ಪರಿಗಣಿಸಬೇಕಾಗುತ್ತದೆ. ಅದು ನೇರವಾದ ಸಂಕಷ್ಟವಲ್ಲ, ಆದಾಗ್ಯೂ ಅವರ ಪ್ರತಿಯೊಂದು ಸಮಸ್ಯೆಯೂ ನಮ್ಮದಾಗುತ್ತದೆ. ಕನಿಕರ ತೋರುವುದಕ್ಕೆ ಮಿತಿಯನ್ನು ವಿಧಿಸಲು ಸಹ ಬರುವುದಿಲ್ಲ. ಸಾಮಾಜಿಕ ಸ್ತರಗಳನ್ನು ಗಮನಿಸುತ್ತಾ ಹೋದಷ್ಟೂ ಒಬ್ಬ ಪ್ರಜಾಪ್ರಭುತ್ವವಾದಿ ಜನಪರ ವ್ಯಕ್ತಿಗೆ ಸಾಂತ್ವನದ ಭಾವವು ಹೆಚ್ಚುತ್ತಾ ಹೋಗುತ್ತದೆ. ಜನರು ಹೆಚ್ಚು ಮರ್ದನಕ್ಕೆ ಗುರಿಯಾಗಿರುವುದನ್ನು ನೋಡಿದಾಗೆಲ್ಲಾ ಅವರ ಬಗೆಗಿನ ಪ್ರೀತಿಯು ಹೆಚ್ಚು ಉಕ್ಕುತ್ತಿರುತ್ತದೆ. "ಪ್ರತಿಯೊಬ್ಬರೂ ಎಷ್ಟು ಕಾಳಜಿಗೆ ಅರ್ಹರು?" ಎಂಬ ಲೆಕ್ಕಾಚಾರ ಸರಿಹೊಂದುವುದಿಲ್ಲ, ಬದಲಾಗಿ ಅವರೆಲ್ಲರ ದುಸ್ಥಿತಿಗೆ ಯಾವ ಸಾಮಾಜಿಕ ಶಕ್ತಿಗಳು ಕಾರಣ ಎಂಬ ತಿಳಿವಳಿಕೆ ಮುಂದೆಬರುತ್ತದೆ.

ತೊಡಕುಗಳು ಅಷ್ಟಕ್ಕೆ ಮುಗಿಯುವುದಿಲ್ಲ. ಜನಪರವಾಗಿರುವುದನ್ನು ಆಯ್ಕೆ ಮಾಡಿಕೊಂಡಾಗ ಕೇವಲ ಭಾವನಾತ್ಮಕತೆಯ ಕ್ಷೇತ್ರ ಮತ್ತು ತೀವ್ರತೆ ಹೆಚ್ಚಾಗುವುದಿಲ್ಲ. ಅದು ಕ್ರಿಯೆಯತ್ತ ವ್ಯಕ್ತಿಯನ್ನು ಕೊಂಡೊಯ್ಯುತ್ತದೆ. ಚಳುವಳಿಗಳು ಆರಂಭವಾಗುತ್ತವೆ. ಅವರಿವರ ಮನೆಗಳನ್ನು ಎಡತಾಕುವುದು, ಕರಪತ್ರಗಳನ್ನು ಹಂಚುವುದು, ಖ್ಯಾತನಾಮರನ್ನು ಸಂದರ್ಶಿಸುವುದು, ಮಾನವ ಹಕ್ಕುಗಳನ್ನು ಅಗತ್ಯವಿದ್ದಾಗ ಶಾಸಕರಿಗೆ ಮನವರಿಕೆ ಮಾಡಿಕೊಡುವುದು, ಇವೆಲ್ಲಾ ಆರಂಭಗೊಳ್ಳುತ್ತವೆ. ಬೀದಿಬೀದಿಗಳಲ್ಲಿ ಮತ್ತು ಸಭಾಂಗಣಗಳಲ್ಲಿ ಸಭೆಗಳನ್ನು ನಡೆಸುವುದು, ಮಾಧ್ಯಮಗಳಲ್ಲಿ ಸಮಾಚಾರವು ಪ್ರಸಾರಗೊಳ್ಳುವಂತೆ ಮಾಡುವುದು, ಸಂಪಾದಕರಿಗೆ ಪತ್ರಗಳನ್ನು ಬರೆದು ಪ್ರಕಟಿಸುವುದು, ಇವು ಮುಂದಿನ ಕಾರ್ಯಭಾರಗಳು, ಆಮೇಲೆ ವಿವಿಧ ಉದ್ದೇಶಗಳಿಗಾಗಿ ಸಮಿತಿಗಳ ರಚನೆ. ಜೊತೆಜೊತೆಯಲ್ಲಿ ಅವರ ಮನೆ, ಇವರ ಕೋಣೆ, ಸಭಾಂಗಣಗಳು, ಮುಂತಾದೆಡೆಗಳಲ್ಲಿ ಸೇರಿ ಬಿಸಿಬಿಸಿ ಚರ್ಚೆಗಳು, ಧೂಮಪಾನದಿಂದ ಹೊಗೆ ತುಂಬುವುದು, ಹುಮ್ಮಸ್ಸನ್ನು ಹೆಚ್ಚಿಸಿಕೊಳ್ಳುವುದು, ಇವೆಲ್ಲಾ ನಡೆಯಬೇಕು. ಶಾಂತವಾದ ಆನೆಯಂತೆ ಸಮಾಜವು ಎಂದಿನಂತೆ ಮುಂದುವರಿಯುತ್ತಿರುತ್ತದೆ, ಕೆಲವೊಮ್ಮೆ ಸರಿದಿಕ್ಕಿನಲ್ಲಿ.

ಇವೆಲ್ಲಕ್ಕೂ ಸಮಯ ಎಲ್ಲಿಂದ ಸಿಕ್ಕುತ್ತದೆಂಬುದನ್ನು ಯಾವ ಪ್ರಜಾಪ್ರಭುತ್ವವಾದಿಯೂ ತಿಳಿಯುವುದಿಲ್ಲ. ಅವರಿಗೆ ದಿನಕ್ಕೆ ಬೇರೆಯವರಿಗಿರುವಷ್ಟೇ ಗಂಟೆಗಳು, ಗಡಿಯಾರ

ನಿಧಾನವಾಗಿ ಚಲಿಸುತ್ತಿರುತ್ತದೆ. ಸಾಮಾನ್ಯವಾಗಿ ಈ ವೇಳೆಗೆ ಇಂತಹ ಕೆಲಸ ಎಂಬುದಿರುತ್ತದೆ, ಆದರೆ ಅದೇ ಸಮಯದಲ್ಲಿ ಕಾರ್ಯಕರ್ತರಾಗಿ ವಿವಿಧ ಕೆಲಸಗಳಲ್ಲಿ ಮುಳುಗುವವರಿಗೆ ಊಟದ ವೇಳೆಯಲ್ಲಿ ವ್ಯತ್ಯಯ, ಮನರಂಜನೆಯ ಹೆಸರಿಲ್ಲ, ನಿದ್ದೆಯೂ ಅಷ್ಟಕ್ಕಷ್ಟೆ. ವಿಷಮ ಸ್ಥಿತಿ ತಮ್ಮ ತಲೆಯ ಮೇಲೆ ಹೇರಿದೆಯೆಂಬಂತೆ ಯಾವುದೋ ನಿಯತಿಯ ಅಪ್ಪಣೆಯ ಪ್ರಕಾರ ಸೆಣೆಸಾಟದಲ್ಲಿ ಅವರು ಮುಳುಗಿಹೋಗಿರುತ್ತಾರೆ. ಅವರ ಜೀವನ ಪರಿಪೂರ್ಣ, ದುಡಿಮೆಗೆ ಎಣೆಯಿಲ್ಲ, ಗೆಲುವು ದೊರೆತಾಗ ಸಂತಸ, ಸೋಲನ್ನು ಸಹನೆಯಿಂದ ಸ್ವೀಕರಿಸುವುದು, ಎಲ್ಲಾ ಯಥಾಪ್ರಕಾರ. ಹೀಗೆ ದಿನಗಳು ಉರುಳುತ್ತಿರುತ್ತವೆ.

ಸಾಮಾಜಿಕ ಕಾಳಜಿ ಇರುವವರೆಲ್ಲಾ ಹೀಗೆ ಬಿರುಸಿನಿಂದ ಮುನ್ನುಗ್ಗುತ್ತಿರುತ್ತಾರೆ, ಎಲ್ಲೆಲ್ಲೂ ಅಲೆಗಳನ್ನೆಬ್ಬಿಸುತ್ತಿರುತ್ತಾರೆ, ಎಂದರ್ಥವಲ್ಲ. ಹೊರಗೆ ಅಂತಹ ಅಭಿವ್ಯಕ್ತಿ ಇಲ್ಲದೆಯೂ ನಿರಂತರ ಕ್ರಿಯಾಶೀಲತೆ ಇರಬಲ್ಲದು. ಆದರೆ ಮಾನವರ ಬಗೆಗಿನ ಪ್ರೀತಿ ಮತ್ತು ಕಾಳಜಿ ಸುವ್ಯಕ್ತ. ಹೊಡೆತ ನೀಡುವುದರಿಂದ ಸಾಧಿಸಲಾಗದ್ದನ್ನೂ ಈ ಕ್ರಿಯಾಶೀಲತೆಯು ಸಾಧಿಸಬಲ್ಲದು. ತನಗೆ ದೊರೆತಿರುವ ಸೌಲಭ್ಯ ಇತರರಿಗೆ ಇನ್ನೂ ದೊರೆತಿಲ್ಲವಲ್ಲಾ ಎಂಬ ತುಡಿತವಂತೂ ಅಗಾಧವಾಗಿರುತ್ತದೆ.

ಇದನ್ನೆಲ್ಲಾ ಗಮನಿಸಿದರೆ ಸಾಮಾಜಿಕ ಕಾಳಜಿ ಇರುವ ಮನಸ್ಸು ಯಾವ ಚಿಂತನೆ, ಭಾವನೆ ಮತ್ತು ಕ್ರಿಯೆಗಳಲ್ಲಿ ಮಗ್ನವಾಗಿರುತ್ತದೆ, ಅದೆಷ್ಟು ಗುರುತರ ಜವಾಬ್ದಾರಿಯನ್ನು ಹೊರುತ್ತದೆ, ಎಂಬುದು ಅರಿವಿಗೆ ಬರುತ್ತದೆ. ತನ್ನಲ್ಲಿ ತಾನು ಮುಳುಗಿರುವವನು, ತನ್ನ ಹಿತಕ್ಕಿಂತ ಅನ್ಯವಾದುದೇನೂ ಇಲ್ಲವೆಂದು ತೃಪ್ತಿಯಿಂದ ಇರುವವನು, ತನ್ನ ಏಳಿಗೆ, ತನ್ನ ಸಂಪತ್ತು, ಎಲ್ಲಾ ಬೇರೆಲ್ಲದಕ್ಕಿಂತಲೂ ಹೆಚ್ಚು ಆದ್ಯತೆ ಪಡೆಯುವಂತೆ ಜೀವಿಸುವವನು, ಹೇಗಿರಬಹುದು? ಇಡೀ ವಿಶ್ವವು ಅವನ ಕೈದೋಟ, ಅವನ ಹಸಿವನ್ನುಳಿದು ಬೇರೇನೂ ಇಲ್ಲ, ಕಡೆಗೆ ಆರಡಿಯ ಗುಂಡಿಯಲ್ಲಿ ಹೂತುಹೋಗಿ ಪ್ರಪಂಚದಿಂದ ನಿರ್ಗಮಿಸುವುದು, ಅಷ್ಟೆ. ಇದು ಹೆಚ್ಚು ಸುಲಭ, ಹೆಚ್ಚು ಕ್ಷೇಮ, ನಿಜ. ಅದೇನೇ ಇರಲಿ ಮತ್ತು ಸ್ವಾರ್ಥವು ಅದೆಷ್ಟೇ ಆಕರ್ಷಕವಾಗಿರಲಿ, ಸ್ವಾರ್ಥವು ಒಂದು ದೊಡ್ಡ ಮಿಥ್ಯೆಯೆಂಬುದನ್ನು ನೋಡಹೊರಡೋಣ.

ಥ್ರಾಸಿಮ್ಯಾಕಸ್:

ನಾವೀಗ ಸಿದ್ಧಾಂತದ ವಾದ–ಪ್ರತಿವಾದಗಳು ಹಾಗೂ ಸಂದೇಶದತ್ತ ಹೊರಳೋಣ. ಅದಕ್ಕೆ ನಾವು ಯಾವ ಮಾನವನ ಅಥವಾ ದೈವತ್ವದ ಕಾನೂನಿನ ಮೊರೆ ಹೋಗುವುದು ಬೇಡ. ನಿಗೂಢವಾದ ವಿನಂತಿಗಳೂ ಬೇಡ, ಬೇರೊಂದು ಪ್ರಪಂಚದಲ್ಲಿ ಪ್ರತಿಫಲದ ನಿರೀಕ್ಷೆಯಾಗಲಿ ಶಿಕ್ಷೆಯ ಬೆದರಿಕೆಯಾಗಲಿ, ಯಾವುದೂ ಬೇಡ. ಸಿದ್ಧಾಂತವನ್ನು ಅದರ ನೆಲೆಯಲ್ಲಷ್ಟೇ ಎದುರಿಸಬೇಕು ಮತ್ತು ವಿಜಯಿಗಳಾಗಬೇಕು. ಅದನ್ನು ಮಾಡಲಾಗದಿದ್ದರೆ ಒಂದಂಶವನ್ನು ನೆನೆಯೋಣ: ಸಿದ್ಧಾಂತದ ಪ್ರತಿಪಾದನೆಯಲ್ಲಿ ಎಷ್ಟೇ ತೊಡಕುಗಳಿರಲಿ, ಸಿದ್ಧಾಂತವನ್ನಂತೂ ನುಚ್ಚುನೂರು ಮಾಡಲು ಯಾರಿಗೂ ಸಾಧ್ಯವಿಲ್ಲ.

ಸ್ವಾರ್ಥದ ನೈತಿಕತೆಯನ್ನು ಕುರಿತು ಎರಡು ಅಭಿಜಾತ ಪ್ರತಿಪಾದನೆಗಳಿವೆ. ಮಾನವನ ಚಿಂತನಾ ಸಾಮ್ರಾಜ್ಯದಲ್ಲಿ ಇವು ಗಮನಾರ್ಹವಾದವು. ಅವುಗಳಲ್ಲಿ ಒಂದು

ಪ್ರಾಚೀನ ಕಾಲದ್ದು, ಇನ್ನೊಂದು ಪುನರುಜ್ಜೀವನ ಅಥವಾ ರೆನೇಸ್ಸಾನ್ಸ್ ಕಾಲದ್ದು. ಮೊದಲಿನದು ಪ್ಲೇಟೋ ತನ್ನ "ರಿಪಬ್ಲಿಕ್" ಎಂಬ ಗ್ರಂಥದ ಮೊದಲ ಭಾಗದಲ್ಲಿ ಥ್ರಾಸಿಮ್ಯಾಕಸ್ ಎಂಬುವವನ ಬಾಯಲ್ಲಿ ಹೇಳಿಸಿದ್ದು. ಪ್ರಭುತ್ವ ಮತ್ತು ಸರ್ಕಾರಗಳಿಗೆ ಸಂಬಂಧಿಸಿದ ಇನ್ನೊಂದು ಗ್ರಂಥ "ದ ಪ್ರಿನ್ಸ್" ಎಂಬುದು. ಅದನ್ನು 1513ರಲ್ಲಿ ಮ್ಯಾಕಿಯಾವೆಲಿ ಎಂಬುವನು ಬರೆದಿದ್ದ. ಎರಡೂ ಪ್ರತಿಪಾದನೆಗಳು ಅದ್ಭುತವಾಗಿವೆ. ಪ್ಲೇಟೋ ಪ್ರತಿಪಾದನೆಯು ವಿಶಿಷ್ಟವಾದ್ದು; ಏಕೆಂದರೆ ತಾನು ಬಹುವಾಗಿ ಅಸಹ್ಯಪಟ್ಟುಕೊಳ್ಳುವ ಒಂದು ನಿಲುವನ್ನು ಸಾರವತ್ತಾಗಿ ಪ್ರತಿಪಾದಿಸುವಾಗ ಅವನು ಅಪಾರವಾದ ಬೌದ್ಧಿಕ ಸಮತೋಲನವನ್ನು ಕಾಯ್ದುಕೊಂಡಿದ್ದಾನೆ. ಅದಕ್ಕೆ ಅವನಿಗೆ ಪ್ರಶಂಸೆಯು ಸಲ್ಲಬೇಕು. ಅವನು ಅದನ್ನೆಷ್ಟು ಚೆನ್ನಾಗಿ ಬರೆದಿದ್ದಾನೆಂದರೆ ತನ್ನ ಇನ್ನುಳಿದ ಒಂಭತ್ತು ಭಾಗಗಳಲ್ಲಿ ಆ ವಿಚಾರವನ್ನು ಖಂಡಿಸಲು ಮರೆತುಬಿಟ್ಟನೋ ಏನೋ ಎನಿಸುತ್ತದೆ.

ಗ್ರೀಸ್ ದೇಶದ ಪೈರೀಯಸ್‌ನಲ್ಲಿ ದೇವಿ ಬೆಂದಿಸ್ ಗೌರವಾರ್ಥ ನಡೆಯುವ ಜಾತ್ರೆಯ ಸಮಯದಲ್ಲಿ ಒಂದು ಔತಣಕೂಟದಲ್ಲಿದ್ದೇವೆಂದು ಭಾವಿಸಿಕೊಳ್ಳೋಣ. ಆ ಕಾಲದ ಗ್ರೀಸಿನ ಜನ ಮಹಾ ಮಾತುಗಾರರು; ಅದರಲ್ಲೂ ಗಂಡಸರು ಹಾಗೆ. ಅವರಿಗೆ ಬೇರೇನು ಕೆಲಸವಿತ್ತು! ಅವರ ಮಾತಿನ ಓಘ ಬಹುತೇಕ ತತ್ವಶಾಸ್ತ್ರವನ್ನು ಕುರಿತಾದದ್ದು. ವಿರಾಮದ ವೇಳೆಯನ್ನು ಸುಂದರವಾಗಿ ಕಳೆದರೆನ್ನಲು ಅಡ್ಡಿಯಿಲ್ಲ. ಸದ್ಯದಲ್ಲಿ ಅವರು ನ್ಯಾಯವನ್ನು ಕುರಿತು ಸಂಭಾಷಿಸುತ್ತಿದ್ದಾರೆ. ಅದರ ಎರಡು ಲಕ್ಷಣಗಳನ್ನು ಹೇಳಿದ್ದೇ ತಡ, ಸಾಕ್ರೆಟೀಸ್ ಅವನ್ನು ಖಂಡಿಸಿಹಾಕಿದ್ದಾನೆ. ಆದರೆ ಆ ಗುಂಪಿನಲ್ಲೊಬ್ಬ ಪ್ರತಿಭಾನ್ವಿತ ಯುವಕನಿದ್ದಾನೆ, ಉಜ್ವಲ ತಾರ್ಕಿಕ ಅವನು. ಸಾಕ್ರೆಟೀಸನ ಮಾತು ಬಹಳ ಹಗುರವೆನಿಸುತ್ತದೆ ಅವನಿಗೆ. ಅವನೇ ಥ್ರಾಸಿಮ್ಯಾಕಸ್. ಬಹುಶಃ ಪ್ಲೇಟೋಗೆ ಅವನು ಹಿಡಿಸಿದ್ದಿರಬೇಕು. ಈಗೀಗ 'ಕಾರ್ಯನಿರತ' ಎನ್ನುತ್ತೇವಲ್ಲ, ಅಂಥವನು. ಇತಿಹಾಸದಲ್ಲಿ ಆಗಾಗ್ಗೆ ತುಮುಲಗಳನ್ನೆಬ್ಬಿಸುತ್ತಾ ಬಂದಿರುವವರು ಅಂಥವರೇ. ಚರ್ಚೆಯಲ್ಲಿ ಈ ಯುವಕ ಜೇಡರ ಬಲೆಯ ಗೋಜಲನ್ನು ಬಿಡಿಸಲು ನೈತಿಕತೆಯ ಅಮೂರ್ತ ಪ್ರಶ್ನೆಯನ್ನು ಪಕ್ಕಕ್ಕಿಟ್ಟು ನೇರವಾಗಿ ಗಟ್ಟಿ ನೆಲೆಗೆ ಬಂದುಬಿಡುತ್ತಾನೆ. "ನ್ಯಾಯವೆಂದರೇನೆಂದು ತಿಳಿದಿದೆಯೇ ಮಹನೀಯರೆ? ಬಲಶಾಲಿಯ ಹಿತಾಸಕ್ತಿಯು ನ್ಯಾಯ. ಅಥವಾ, ಸ್ಥಾಪಿತ ಪ್ರಭುತ್ವದ ಹಿತಾಸಕ್ತಿ ಎಂದು ಬೇಕಾದರೂ ತಿಳಿಯಿರಿ," ಎನ್ನುತ್ತಾನವನು.

ಎಲ್ಲಾದರೂ ಉಂಟೆ? ಸಾಕ್ರೆಟೀಸ್ ಅದನ್ನು ಕೇಳಿ ಸುಮ್ಮನಿರಲಾರ. ಅವನೆನ್ನುತ್ತಾನೆ: "ಪ್ರಭುತ್ವ ಇರುವುದು ನಾಗರಿಕರ ಹಿತ ಕಾಯಲು; ಕುರುಬನು ಕುರಿಗಳನ್ನು ಕಾಯುವುದಿಲ್ಲವೇ, ಹಾಗೆ." ಅವನು ನೀಡಿದ ಉಪಮೆ ತೀರಾ ದುರದೃಷ್ಟವಾದ್ದು. ಥ್ರಾಸಿಮ್ಯಾಕಸ್ ಹುರುಪಿನಿಂದ ತಿರುಗಿಬೀಳುತ್ತಾನೆ: "ಕುರಿ ಕಾಯುವವನು ಅವನ್ನೇಕೆ ಸಾಕಿ ಸಲಹುತ್ತಾನೆ? ತುಪ್ಪಟಕ್ಕಾಗಿ, ಇಲ್ಲವೆ ತಿಂದುಹಾಕಲು ತಾನೆ?" ಈ ವಾದವನ್ನು ತುಂಡರಿಸ ಹೋಗಿ ಸಾಕ್ರೆಟೀಸ್ ಅದನ್ನು ಖಂಡಿಸುವ ಬದಲು ಮಾನ್ಯ ಮಾಡಿಬಿಟ್ಟಿದ್ದಾನೆ, ಪಾಪ. ಥ್ರಾಸಿಮ್ಯಾಕಸ್‌ಗೆ ಖುಷಿಯೋ ಖುಷಿ. ಸರಿ, ತನ್ನ ಪ್ರತಿಪಾದನೆಯನ್ನು ಸೊಗಸಾಗಿ ಮತ್ತು ಸಂಕ್ಷೇಪವಾಗಿ ಮುಂದಿಟ್ಟ:

"ಪ್ರಿಯ ಸಾಕ್ರೆಟೀಸ್, ನಾನು ನಿದರ್ಶನಗಳನ್ನು ನೀಡಿ ಹೇಳುತ್ತೇನೆ ಕೇಳು. ಯಾರು ಸಭ್ಯನೋ, ನ್ಯಾಯಪರನೋ, ಅವನು ಅಸಭ್ಯ – ಅನ್ಯಾಯಪರನಿಗಿಂತ ಸದಾ ಹೆಚ್ಚು ಪೆಟ್ಟು ತಿನ್ನುತ್ತಿರುತ್ತಾನೆ. ಮೊದಲನೆಯದಾಗಿ, ನ್ಯಾಯಪರನು ಅನ್ಯಾಯಪರನೊಂದಿಗೆ ವ್ಯವಹಾರವೊಂದರಲ್ಲಿ ಪಾಲುಗಾರನಾಗುತ್ತಾನೆ ಎಂದಿಟ್ಟುಕೊ. ಪಾಲುಗಾರಿಕೆಯನ್ನು ಮುಕ್ತಾಯಗೊಳಿಸಿದಾಗ ನ್ಯಾಯಪರನಿಗೆ ಇನ್ನೊಬ್ಬನಿಗಿಂತ ಕಡಿಮೆಯೇ ದಕ್ಕುತ್ತದೆಯಲ್ಲವೆ? ಇನ್ನು, ಅವರಿಬ್ಬರೂ ಪ್ರಭುತ್ವದ ಜೊತೆ ವ್ಯವಹರಿಸುವಾಗ ಏನಾಗುತ್ತದೆ ನೋಡು: ಆಸ್ತಿಯಮೇಲಿನ ತೆರಿಗೆ ಪಾವತಿಸುವಾಗ ಹೆಚ್ಚು ಪಾವತಿಸುವವರು ಯಾರು? ಒಂದೇ ಪ್ರಮಾಣದ ಆಸ್ತಿಯ ಮೇಲೆ ನ್ಯಾಯಪರನು ಇನ್ನೊಬ್ಬನಿಗಿಂತಲೂ ಹೆಚ್ಚು ಪಾವತಿಸುತ್ತಾನೆ. ಅದೇ, ಪ್ರಭುತ್ವದಿಂದ ಏನನ್ನಾದರೂ ಪಡೆದುಕೊಳ್ಳುವಂತಿದ್ದಾಗ ನ್ಯಾಯಪರನಿಗೆ ಸಿಕ್ಕುವುದು ಸೊನ್ನೆ, ಆದರೆ ಆ ಇನ್ನೊಬ್ಬ ಪಟಿಂಗ ಬೇಕಾದಷ್ಟು ಬಾಚಿಕೊಳ್ಳುತ್ತಾನೆ."

ಇಪ್ಪತ್ತಮೂರು ಶತಮಾನಗಳ ಹಿಂದಿನ ಮಾತು. ಆಗಿನ್ನೂ ಜನ ತಮ್ಮ ಕುಟುಂಬಗಳನ್ನು ಕಾರ್ಪೊರೇಟುಗಳನ್ನಾಗಿ ಪರಿವರ್ತಿಸಿಕೊಂಡಿರಲಿಲ್ಲ ಮತ್ತು ತೆರಿಗೆಯನ್ನು ತಪ್ಪಿಸಿಕೊಳ್ಳಲು ಮೋಜಿನ ದೋಣಿಗಳನ್ನು ಲೆಕ್ಕದಲ್ಲಿ ತೋರಿಸುತ್ತಿರಲಿಲ್ಲ. ಈಗ ಯೋಚಿಸಿ: ಒಬ್ಬ ನ್ಯಾಯಪರ ನಾಗರಿಕ ಮತ್ತು ಇನ್ನೊಬ್ಬ ಕಾರ್ಪೊರೇಟ್ ಚಕ್ರವರ್ತಿ; ಅವರಿಬ್ಬರೂ ಪ್ರಭುತ್ವದಲ್ಲಿ ಅಧಿಕಾರಸ್ಥಾನಕ್ಕೆ ಬಂದರೆನ್ನಿ. ನ್ಯಾಯಪರನು ನಷ್ಟವನ್ನೇನೂ ಅನುಭವಿಸುವುದಿಲ್ಲ ಎಂದೇ ಭಾವಿಸೋಣ. ಆದರೆ ಅವನ ಖಾಸಗಿ ವ್ಯವಹಾರಗಳು ಮೂಲೆಗುಂಪಾಗಿರುತ್ತವೆ. ಅವಕ್ಕೆ ಗಮನ ನೀಡಲು ಇವನಿಗೆ ಪುರಸೊತ್ತೆಲ್ಲಿ! ಅಲ್ಲದೆ, ಸಾರ್ವಜನಿಕ ಖಜಾನೆಯಿಂದ ಹಣವನ್ನು ಸೆಳೆದುಕೊಳ್ಳಲು ಅವನ ನಿಯಮಗಳು ಅಡ್ಡಿಯುಂಟುಮಾಡುತ್ತವೆ. ಜೊತೆಗೆ, ಅವನ ಖಾಸಾ ನೆಂಟರು ಮತ್ತು ಸ್ನೇಹಿತರು ಅವನಿಂದ ಸಹಾಯ ಬಯಸುತ್ತಾರೆ. ಇವನಿಗೆ ಸಾರ್ವಜನಿಕ ಆಸ್ತಿಯು ಪವಿತ್ರವಾದ್ದು, ಅದರಿಂದ ಅನ್ಯಾಯವಾಗಿ ಏನನ್ನೂ ಪಡೆಯಲು ನಿಯಮವು ಅಡ್ಡಬರುತ್ತದೆ. ಅದರಿಂದಾಗಿ ನೆಂಟರಿಷ್ಟರು ಅತೃಪ್ತರಾಗುತ್ತಾರೆ.

ನಮ್ಮ ಸುತ್ತಮುತ್ತಿನ ದೊಡ್ಡ ಮತ್ತು ಸಣ್ಣ ರಾಜಕೀಯ ಪ್ರಭೃತಿಗಳನ್ನು ನೋಡಿ: ನೆಂಟರಿಷ್ಟರಿಗೆ ಒಂದಿಷ್ಟು ಉಪ್ಪು–ಖಾರ ತಿನ್ನಿಸುವುದೋ, ಎಂಥದೋ ವ್ಯಾಪಾರ ಪರವಾನಗಿ ಕೊಡಿಸುವುದೋ ಇಲ್ಲದಿದ್ದರೆ ಅವರ ಬಾಳೆಂತಹದು? ಕಡೇಪಕ್ಷ, ಪೊಲೀಸರು ವಿಧಿಸುವ ಜುಲ್ಮಾನೆಗಳಿಂದಾದರೂ ನೆಂಟರಿಷ್ಟರಿಗೆ ವಿನಾಯಿತಿ ಕೊಡಿಸಬೇಕಲ್ಲ!

ಅದಕ್ಕೇ ಥ್ರಾಸಿಮ್ಯಾಕಸ್ ಹೇಳಿದ್ದು: "ನ್ಯಾಯನಿಷ್ಠೆ ಇಲ್ಲದವನದು ಎಲ್ಲಾ ತಿರುಗುಮುರುಗು. ಈಗ ತಾನೆ ಹೇಳಿದೆನಲ್ಲ, ಆ ನ್ಯಾಯಪರವಲ್ಲದವನ ಸಾಮರ್ಥ್ಯವು ಎಲ್ಲವನ್ನೂ ಹೇರಳವಾಗಿ ಹಿರಿದುಕೊಳ್ಳುವಂಥದು. ನ್ಯಾಯನಿಷ್ಠೆಗೆ ಜೋತುಬೀಳುವುದಕ್ಕಿಂತಲೂ ಅದನ್ನು ನಿಕೃಷ್ಟವಾಗಿ ಕಾಣುವುದು ಸ್ವಾರ್ಥಸಾಧನೆಗೆ ಉತ್ಕೃಷ್ಟವೆಂಬುದನ್ನು ನೀನು ಪರಿಕ್ಷಿಸಿ ನೋಡು, ಬಹುಸುಲಭವಾಗಿ ಸತ್ಯವು ನಿನಗೆ ಗೋಚರಿಸುತ್ತದೆ. ಅನ್ಯಾಯದ ಪರಾಕಾಷ್ಠೆಯನ್ನು ಗಮನಿಸು: ತೆಪ್ಪೆಸಗುವವನು ಅತ್ಯಂತ ಸುಖಿ; ಯಾರಿಗೆ ತಪ್ಪೆಸಗಲಾಯಿತೋ ಅವರು ತೊಳಲಾಡುತ್ತಾರೆ ಮತ್ತು ಅವರು ಎದುರೇಟು ನೀಡುವುದೂ ಇಲ್ಲ. ಇದನ್ನೇ ನಾನು ದಬ್ಬಾಳಿಕೆ ಎನ್ನುವುದು. ಅದು ಸ್ವಲ್ಪಸ್ವಲ್ಪವಾಗಿ

ಹೆಚ್ಚುವುದಿಲ್ಲ, ಸಾರಾಸಗಟಾಗಿ ಹೆಚ್ಚುತ್ತದೆ. ಇತರರ ಸಂಪತ್ತನ್ನು ಕಿತ್ತುಕೊಳ್ಳಲು ಅದು ಎಳ್ಳಷ್ಟೂ ಹೇಸುವುದಿಲ್ಲ. ಅದಕ್ಕೆ ಪವಿತ್ರ – ಅಪವಿತ್ರ ಎಂಬುದೇನೂ ಇಲ್ಲ, ಸಾರ್ವಜನಿಕ – ಖಾಸಗಿ ಎಂಬ ಭೇದವೂ ಇಲ್ಲ. ಎಂತಹ ಅಪರಾಧವೆಸಗಲೂ ಅದಕ್ಕೆ ಸಂಕೋಚವಿಲ್ಲ. ಹಾಗೆ ಮಾಡಿದ್ದು ಲೋಕಕ್ಕೆ ತಿಳಿಯಿತೋ, ಅದಕ್ಕೆ ಶಿಕ್ಷೆಯನ್ನು ನಿರೀಕ್ಷಿಸುತ್ತೇವೆ; ನಾಚಿಕೆಯಾದರೂ ಆಗಬೇಕಲ್ಲ. ಇಂತಹ ಅಪರಾಧಗಳನ್ನು ಸಣ್ಣಮಟ್ಟದಲ್ಲಿ ಎಸಗಿದವರನ್ನು ಧರ್ಮಾತೀತರು, ಕಳ್ಳರು, ದರೋಡೆಕೋರರು, ಎಂದೆಲ್ಲಾ ಕರೆಯುತ್ತೇವೆ. ವಿಪರ್ಯಾಸ ನೋಡಿ ಹೇಗಿದೆ: ತನ್ನ ಸಹಜೀವಿಗಳ ಆಸ್ತಿಯನ್ನಲ್ಲದೆ ಜೀವಿಗಳನ್ನೇ ಸೆರೆಹಿಡಿದು ಅವರನ್ನು ಗುಲಾಮರನ್ನಾಗಿ ಮಾಡಿಕೊಳ್ಳುವ ವ್ಯಕ್ತಿ ಇದ್ದರೆ ಅವನನ್ನು ಕಳ್ಳನೆಂದು ನಿಂದಿಸುವುದಿಲ್ಲ; ಬದಲಾಗಿ ಅವನನ್ನು ಪರಮಸುಖಿಯೆಂದು ಆದರಿಸಲಾಗುತ್ತದೆ. ಅವನ ಊರಿನವರು ಮಾತ್ರವಲ್ಲ, ಅವನು ಎಸಗಿರುವ ನೀಚ ಅನ್ಯಾಯದ ವಿವರಗಳನ್ನೆಲ್ಲಾ ತಿಳಿದಿರುವ ಹೊರಗಿನವರು ಸಹ ಅವನನ್ನು ಆದರಿಸುತ್ತಾರೆ. ಅನ್ಯಾಯಗಳನ್ನು ತೆಗಳುವವರಿದ್ದಾರಲ್ಲ, ಅವರಿಗೆ ಅನ್ಯಾಯವು ಅಪಥ್ಯವಲ್ಲ, ಅದನ್ನೆಸಗುವುದಕ್ಕೆ ಭಯ, ಅಷ್ಟೆ. ಅದರಿಂದ ಇನ್ನೇನು ತೊಂದರೆಯೋ ಎಂಬ ಭಯ. ಆದ್ದರಿಂದಲೇ ನಾನು ಹೇಳುತ್ತೇನೆ, ಸಾಕ್ರೆಟೀಸ್, ಅನ್ಯಾಯವನ್ನು ಯಥಾವತ್ತಾಗಿ ಅರ್ಥಮಾಡಿಕೊಳ್ಳುವುದು ನಿಜವಾಗಿಯೂ ಬಲವಾದ, ಉದಾರವಾದ ಹಾಗೂ ಹೆಮ್ಮೆಯ ಸಂಗತಿ. ನ್ಯಾಯವು ಹಾಗಲ್ಲ; ಅದು ಬಲಶಾಲಿಗಳ ಹಿತ ಕಾಯುವಂಥದು. ಅನ್ಯಾಯವು ಹೆಚ್ಚೆಂದರೆ ಸ್ವಂತಕ್ಕೆ ಲಾಭದಾಯಕ ಮತ್ತು ಅನುಕೂಲಕರ, ಅಷ್ಟೆ." (ಇದು ಪ್ಲೇಟೋನ 'ರಿಪಬ್ಲಿಕ್' ಗ್ರಂಥದ ಮೊದಲ ಭಾಗದಲ್ಲಿ ಬರುವ ಪ್ರಸಂಗ).

ಕೇಡನ್ನು ಇಷ್ಟು ಸೊಗಸಾಗಿ ಸಮರ್ಥಿಸುವುದನ್ನು ನೋಡಿದಾಗ ಕೆಲವು ಅಂಶಗಳು ಮುಖ್ಯವಾಗಿ ಗಮನಕ್ಕೆ ಬರುತ್ತವೆ: (ಅ) ಆಳುವ ವರ್ಗವು ತನ್ನ ಅನುಕೂಲಕ್ಕಾಗಿ ಏರ್ಪಾಟು ಮಾಡಿಕೊಂಡಿರುವ ಕಾನೂನು ಮತ್ತು ಆಚರಣೆಗಳನ್ನು ಸಾಮಾಜಿಕ ನ್ಯಾಯ ಎಂದು ಬಿಂಬಿಸುತ್ತದೆ; (ಆ) ಒಂದು ನೈತಿಕ ನಿಯಮವಾಗಿ ನ್ಯಾಯ ಎಂಬುದು ಶುದ್ಧ ಭ್ರಾಂತಿ; ಬಲಶಾಲಿಗಳ ವಿರುದ್ಧ ತಮ್ಮ ರಕ್ಷಣೆಗಾಗಿ ಶಕ್ತಿಹೀನರು ಅದಕ್ಕೆ ಶರಣುಹೋಗುತ್ತಾರೆ. ಅವಕಾಶವಿದ್ದಿದ್ದರೆ ಶಕ್ತಿಹೀನರು ಬಲಶಾಲಿಗಳಂತೆಯೇ ನಡೆದುಕೊಳ್ಳುತ್ತಿದ್ದರು; (ಇ) ಸ್ವಾರ್ಥದ ನಡೆ ಅಥವಾ ಅನ್ಯಾಯ ಎಂಬುದು ವೈಯ್ಯಕ್ತಿಕ ಲಾಭಕ್ಕೆ ನಿಖರವಾದ ಆಕರ; (ಈ) ಅನ್ಯಾಯದ ಪಾಲನೆಗೆ ಇರುವುದೊಂದೇ ಷರತ್ತು. ಅದೇನೆಂದರೆ ಅದು 'ಪೂರ್ಣರೂಪ'ದಲ್ಲಿರಬೇಕು, 'ಯಥೋಚಿತ'ವಾಗಿ ಅದನ್ನು ಆಚರಣೆಗೆ ತರಬೇಕು. ಕಡಿಮೆ ಪ್ರಮಾಣದ ಅನ್ಯಾಯವು ಅಪಾಯಕರ; ಶಿಕ್ಷೆ ಮತ್ತು ಅವಮರ್ಯಾದೆ ಎಷ್ಟು ಖಚಿತವೆಂದರೆ ಅಷ್ಟು ಕಡಿಮೆ ಪ್ರಮಾಣದಲ್ಲಿ ಅನ್ಯಾಯವೆಸಗುವುದು ಸ್ವಂತ ತನ್ನ ಬುಡಕ್ಕೇ ಬಂದುಬಿಡುತ್ತದೆ.

ಕಡೆಯ ವಿಚಾರವಿದೆಯಲ್ಲಾ ಅದು ಶೇಕಡ 99ರಷ್ಟು ಮಂದಿಗೆ ಸ್ವಾರ್ಥದ ಅನೈತಿಕತೆಯನ್ನು ಅಸಾಧ್ಯವಾಗಿಸಿಬಿಡುತ್ತದೆ. "ದೊಡ್ಡ ಪ್ರಮಾಣದಲ್ಲಿ ಅನ್ಯಾಯವನ್ನು ಮುಷ್ಟಿಯಲ್ಲಿ ಹಿಡಿಯಲು" ಅವರಿಗೆ ಸಾಧ್ಯವಿಲ್ಲ. ಬೇರೆಯವರ ಆಸ್ತಿಯನ್ನು ಅವರು ಕಬಳಿಸಿದಾಗ ಅಥವಾ ಅಂಥವರನ್ನು ಅಪಹರಿಸಿದಾಗ ಅವರಿಗೆ ಕಾರಾಗೃಹ ವಾಸವು

ಕಟ್ಟಿಟ್ಟ ಬುತ್ತಿ. ಹಾಗೆ ಸಿಕ್ಕಿಹಾಕಿಕೊಳ್ಳದಿದ್ದರೆ ಅಪಾಯ ಮತ್ತು ಅಭದ್ರತೆ ಅವರನ್ನು ಸದಾ ಕಾಡುತ್ತಿರುತ್ತವೆ. ಕೆಲವರಿದ್ದಾರೆ, ಅವರನ್ನು ಅದೃಷ್ಟವಂತರು ಎನ್ನುವುದು ಬೇಡ; ಅನ್ಯಾಯವೆಸಗುವುದು ಅವರಿಗೆ ಕಾದಿರಿಸಿದ ಕೆಲಸ, ಬೇರೆಯವರ ಆಸ್ತಿಯನ್ನು ಹಾಗೂ ಜೀವಗಳನ್ನು ಸುಲಿದು ಅವರು ಹಂದಿಗಳಂತೆ ಕೊಬ್ಬಬಲ್ಲರು. ಕಾರಾಗೃಹದ ಭಯ ಅವರಿಗೆ ತಟ್ಟುವುದಿಲ್ಲ. ಸುಭದ್ರತೆ ಮತ್ತು ಗೌರವಗಳಿಗೆ ಅವರಿಗೆಂದೂ ಕೊರತೆಯಿಲ್ಲ. ಹೇಗಿದೆ ನೋಡಿ: ಯಾವುದೋ ದ್ವೀಪದ ಸಾಮ್ರಾಜ್ಯದಲ್ಲಿ ಕೂತ ಹಿಡಿ ಮಂದಿ, ಸಾವಿರಾರು ಮೈಲಿಗಳಾಚೆ ಇರುವ ಮೂವತ್ತೈದು ಕೋಟಿ ಜನರ ಬೆವರಿನ ದುಡಿಮೆಯ ಫಲವನ್ನು ಸುಖವಾಗಿ ಉಣ್ಣಬಹುದು; ಜೊತೆಗೆ ಆ ದೇಶದ ಜನರ ಶೇಕಡ 95ರಷ್ಟು ಮಂದಿಯನ್ನು ಅನಕ್ಷರಸ್ಥರನ್ನಾಗಿ ಇರಿಸಬಹುದು ಮತ್ತು ಆ ಜನರ ಸರಾಸರಿ ಆಯುಸ್ಸು ಪ್ರಮಾಣವನ್ನು ಇಪ್ಪತ್ತಮೂರು ವರ್ಷಗಳಿಗೆ ಸೀಮಿತಗೊಳಿಸಬಹುದು. ಆ ಜನರ ಸಂಪತ್ತು ಅಗಾಧವೇ ಇರುತ್ತದೆ, ಆದರೆ ಅದನ್ನು ಬೇರೆ ಯಾರೋ ಸುಲಿಗೆ ಮಾಡಿ ಭೋಗಿಸುತ್ತಾರೆ. ನೋಡಿದಿರಾ, ಥ್ರಾಸಿಮ್ಯಾಕಸ್‌ನ ತರ್ಕ ಅವನ ಬೆನ್ನಿಗಿದೆಯಲ್ಲವೇ? ಅನ್ಯಾಯದಿಂದ ದಕ್ಕಿದ ಫಲದ ಪರಿಮಾಣವು ಹೆಚ್ಚಿದಷ್ಟೂ ಸುಲಿಗೆಕೋರನ ಸುಭದ್ರತೆ ಮತ್ತು ಕ್ಷೇಮ ಹೆಚ್ಚುತ್ತಿರುತ್ತದೆ.

ಮ್ಯಾಕಿಯಾವೆಲಿ:

ಈತನು ಬರೆದ ಪುಸ್ತಕದ ಹೆಸರು "ರಾಜಕುಮಾರ". ಹೆಸರೇ ಸೂಚಿಸುವಂತೆ ಸ್ವಾರ್ಥದ ಅನೈತಿಕತೆಯು ಕೆಲವರಿಗೆ ಮಾತ್ರ ಕಾರ್ಯಸಾಧುವಾದದ್ದು. ತನ್ನ ಕಾಲದ ರಾಜಕೀಯ ಆಗುಹೋಗುಗಳನ್ನು ಮ್ಯಾಕೆಯಾವೆಲಿ ಬಹುಚೆನ್ನಾಗಿ ಸಾಮಾನ್ಯೀಕರಿಸಿ ಹೇಳಿದ್ದಾನೆ. ಅವನದು ಇಟಲಿಯ ಪುನರುತ್ಥಾನದ ಕಾಲ. ಕಲೆ ಮತ್ತು ಕೇಡುಗತನವನ್ನು ಚಿತ್ರಿಸುವ ಶ್ರೇಷ್ಠ ಕಲಾಕೃತಿಗಳು ಆ ಕಾಲದಲ್ಲಿ ನೂರಾರು ಬಂದಿದ್ದವು. ಆಗಿನ ಆಡಳಿತವು ಧಾರ್ಮಿಕ ಮತ್ತು ಜಾತ್ಯತೀತ, ಹೀಗೆ ಎರಡೂ ವಿಧಗಳದ್ದಾಗಿತ್ತು. ಪೋಪರು, ರಾಜಕುಮಾರರು, ದಳಪತಿಗಳು, ಎಲ್ಲರೂ ಆಳ್ವಿಕೆಯಲ್ಲಿ ಯಾವ ಕೇಡನ್ನೂ ದೂರವಿಡಲಿಲ್ಲ, ಎಂತಹ ಕ್ರೌರ್ಯಕ್ಕೂ ಹೇಸಲಿಲ್ಲ. ದುಷ್ಟತನ ಮತ್ತು ಅಸಹ್ಯ ನಡತೆ ಅಪಾರವಾಗಿ ಕಾಣಬರುತ್ತಿತ್ತು. ಇದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ, ಅದು ಅಕ್ಷರಶಃ ಸತ್ಯ. ಆರನೆಯ ಅಲೆಕ್ಸಾಂಡರನ ದುರುಳತನದ ಪಟ್ಟಿ ಮಾಡಿದರೆ ಅದರಲ್ಲಿ ಎಲ್ಲವೂ ಇರುತ್ತವೆ: ದಬ್ಬಾಳಿಕೆ, ಕೊಲೆ, ಕಾಮುಕತೆ, ಇತ್ಯಾದಿ. ಜಾನ್ ಅಡಿಂಗ್ಟನ್ ಸಿಮಂಡ್ಸ್ ಬರೆದ ಪುಸ್ತಕ ಬೇಕಾದರೆ ನೋಡಿ, ಎಲ್ಲಾ ದಾಖಲಾಗಿದೆ.

ಸ್ವಾರ್ಥವನ್ನು ಸಮರ್ಥಿಸುವ ನೈತಿಕ(?) ಸಿದ್ಧಾಂತದೊಡನೆ ಮ್ಯಾಕಿಯಾವೆಲಿಯ ಹೆಸರು ಲಗತ್ತಾಗಿರುವುದು ಅಷ್ಟೇನೂ ಸರಿಯಲ್ಲ. ರಾಜಕುಮಾರರು ಹಾಗೆ ಆಳ್ವಿಕೆ ನಡೆಸಬೇಕೆಂದು ಅವನೆಲ್ಲೂ ಪ್ರತಿಪಾದಿಸಿಲ್ಲ. ಅಧಿಕಾರವನ್ನು ಪಡೆದು ಅದನ್ನು ಉಳಿಸಿಕೊಳ್ಳಬೇಕಾದರೆ ರಾಜಕುಮಾರರು ಹಾಗೆ ವರ್ತಿಸಬೇಕಾಗುತ್ತದೆಂದಷ್ಟೇ ಅವನು ಹೇಳಿದ್ದು. ಅವನ ಚಿಂತನೆಯಲ್ಲಿ ಪ್ರಗತಿಪರವಾದ ಹಲವು ಅಂಶಗಳಿವೆ; ಉದಾಹರಣೆಗೆ, ಇಟಲಿಯನ್ನು ಒಗ್ಗೂಡಿಸುವುದು, ಕೂಲಿ ಸಿಪಾಯಿಗಳ ಸೈನ್ಯದ ಖಂಡನೆ, ಅಚ್ಚರಿಯೆನಿಸುವ ಪ್ರಜಾಪ್ರಭುತ್ವವಾದಿ ನಿಲುವು, ಇತ್ಯಾದಿ. ಅವನ ಪುಸ್ತಕದ 9ನೆಯ

ಅಧ್ಯಾಯದಲ್ಲಿ ಇವೆಲ್ಲಾ ಸೇರಿವೆ. ಕ್ರೈಸ್ತ ಪರಂಪರೆಯು ಅಂದಿನ ಬಹಿಷ್ಕಾರ ಯೋಗ್ಯವಾದ ಪುಸ್ತಕಗಳ ಪಟ್ಟಿಯಲ್ಲಿ ಇದನ್ನು ಸೇರಿಸಿದ್ದೇಕೋ ತಿಳಿಯದು: ಕ್ರೈಸ್ತ ವಿರೋಧಿ ನೈತಿಕತೆಯೋ ಇಲ್ಲವೇ ಊಳಿಗಮಾನ್ಯ ಪ್ರಭುತ್ವ ವಿರೋಧಿ ಧೋರಣೆಗಳೋ!

ಏನೇ ಇರಲಿ, ಮ್ಯಾಕಿಯಾವೆಲಿ ತನ್ನ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದ್ದಾನೆ ಮತ್ತು ಸಾಮಾನ್ಯೀಕರಿಸುವಾಗ ಸಿದ್ಧಹಸ್ತನಾಗಿದ್ದಾನೆ. ಅವನ ನಂತರದ ಎಲ್ಲಾ ಕ್ರೂರ ಆಡಳಿತಗಾರರೂ ಅವನ ಬುದ್ಧಿವಾದದಂತೆ ನಡೆದಿದ್ದಾರೆ. ಅವರನ್ನವನು ಹಂಗಿಸಿದ್ದಾನೆಂಬ ಪರಿವೆಯೇ ಅವರಿಗೆ ಬರಲಿಲ್ಲ. ಉದಾಹರಣೆಗೆ, ಮುಸ್ಸೋಲಿನಿ ತಾನು ಮ್ಯಾಕಿಯಾವೆಲಿಯ ಶಿಷ್ಯನೆಂದು ಮುಕ್ತವಾಗಿ ಘೋಷಿಸಿಕೊಂಡಿದ್ದ. ಪುರಸೊತ್ತಿಲ್ಲದ ಅವನ ಸರ್ವಾಧಿಕಾರಿ ಉಪಟಳಗಳ ನಡುವೆಯೇ ಅವನ ಗುರುವಿನ ಕುರಿತಾದ ಮಹಾಪ್ರಬಂಧ ಬರೆಯಲು ಸ್ವಲ್ಪ ಸಮಯವನ್ನವನು ತೆಗೆದಿರಿಸಿದ್ದ. ಅದಕ್ಕೆ ಬಲೋನ್ಯ ವಿಶ್ವವಿದ್ಯಾನಿಲಯವು ಸೂಕ್ತವಾದ ಪದವಿಯನ್ನೂ ಅನುಗ್ರಹಿಸಿತ್ತು! ತನ್ನನ್ನು ತಾನು 'ಡ್ಯೂಚೆ' ಎಂದು ಕರೆದುಕೊಂಡ ಮುಸ್ಸೋಲಿನಿ, ಮ್ಯಾಕಿಯಾವೆಲಿ ಸೂಚಿಸಿದ ನಿಯಮಗಳ ಸ್ವಭಾವ ಮತ್ತು ಲಾಭಗಳನ್ನು ಚೆನ್ನಾಗಿ ಪ್ರತಿನಿಧಿಸುತ್ತಾನೆ.

ಮ್ಯಾಕಿಯಾವೆಲಿಯ ನಿರೂಪಣೆಗಳನ್ನೆಲ್ಲಾ ಯಥಾವತ್ತಾಗಿ ವಿಸ್ತರಿಸುವುದು ಬೇಡ, ಅವನ ಸಿದ್ಧಾಂತದ ತಾರ್ಕಿಕ ಆಧಾರವನ್ನಷ್ಟೇ ನೋಡೋಣ: ಅವನ ಪ್ರಕಾರ ರಾಜಕೀಯ ಸ್ಪರ್ಧೆ ಎರಡು ಮಾದರಿಗಳನ್ನು ಹೊಂದಿದೆ; ಒಂದು, ಕಾನೂನುರೀತ್ಯಾ ಸ್ಪರ್ಧೆ ಮತ್ತು ಇನ್ನೊಂದು ಬಲಾತ್ಕಾರದ ಪ್ರಯೋಗವಿರುವ ಸ್ಪರ್ಧೆ. "ಮೊದಲನೆಯ ವಿಧಾನವು ಮಾನವಯೋಗ್ಯವಾದ್ದು, ಎರಡನೆಯದು ಮೃಗಗಳಿಗೆ ಯೋಗ್ಯವಾದ್ದು" ಎನ್ನುವಾಗ ತನ್ನ ನೈಜ ಇಂಗಿತವನ್ನು ಅವನು ವ್ಯಕ್ತಪಡಿಸುತ್ತಿದ್ದಾನೆಂದು ತೋರುತ್ತದೆ. ರಾಜಕುಮಾರರಿಗೆ ಮೊದಲ ಪದ್ಧತಿ ಏನೇನೂ ಸಾಲದು, ಆದ್ದರಿಂದ ಎರಡನ್ನೂ ಬಳಸುವುದನ್ನವರು ಕಲಿಯಬೇಕು. ಮೃಗಗಳಲ್ಲಿ ಅವರು ಸಿಂಹ ಮತ್ತು ನರಿಗಳ ಆಯ್ಕೆ ಮಾಡಿಕೊಳ್ಳಬೇಕು. "ಎಲ್ಲೆಲ್ಲಿ ಬಲೆಗಳಿವೆ ಎಂಬುದನ್ನರಿಯಲು ನರಿಯಾಗಿರಬೇಕು ಮತ್ತು ತೋಳಗಳನ್ನು ಬೆದರಿಸಿ ಅಟ್ಟಲು ಸಿಂಹವಾಗಿರಬೇಕು." ಅಂದರೆ, ರಾಜಕುಮಾರನಿಗೆ ಎರಡು ಪ್ರಮುಖ ಆಯುಧಗಳಿವೆ: ಕೌಶಲ್ಯ ಮತ್ತು ಬಲಾತ್ಕಾರ.

ಎಲ್ಲಿಯವರೆಗೆ ಅದು ಕಾರ್ಯಸಾಧುವೋ ಅಲ್ಲಿಯವರೆಗೆ ಮೊದಲನೆಯದು ಉತ್ತಮ, ಏಕೆಂದರೆ ಅದು ವೈರಿಗಳನ್ನು ಹುಟ್ಟಿಹಾಕುವುದಿಲ್ಲ ಮತ್ತು ನಿಜವಾದ ಉದ್ದೇಶವನ್ನು ಮುಚ್ಚಿಡುತ್ತದೆ. ರಾಜಕುಮಾರನು ಎಷ್ಟೋ ವಂಚನೆಗಳನ್ನು ಯೋಜಿಸಿಕೊಳ್ಳಬೇಕು, ಅವುಗಳಲ್ಲಿ ತಾನು ಅಪ್ಪಟ ಸದ್ಗುಣಿಯೆಂದು ತೋರಿಸಿಕೊಳ್ಳುವುದು ಬಹುಮುಖ್ಯ. ಆದರೆ ಇದು ಸುಲಭವಲ್ಲ, ಏಕೆಂದರೆ ತನ್ನಲ್ಲಿದೆಯೆಂದು ನಂಬಿಸಬೇಕಾದ ಸದ್ಗುಣ ಅವನಲ್ಲಿರುವುದಿಲ್ಲ. ಅವನೇನಾದರೂ ಅದನ್ನು ತುಂಬಿಕೊಂಡರೆ ಅದರ ಭಾರದಲ್ಲಿ ಅವನು ಕುಸಿದುಹೋಗುತ್ತಾನೆ.

"..... ಆದ್ದರಿಂದ, ನಾನು ಉಲ್ಲೇಖಿಸಿರುವ ಒಳ್ಳೆಯ ಗುಣಗಳನ್ನೆಲ್ಲಾ ರಾಜಕುಮಾರನು ಹೊಂದಿರಬೇಕಾಗಿಲ್ಲ, ಆದರೆ ಅವೆಲ್ಲಾ ಅವನಲ್ಲಿವೆಯೆಂಬಂತೆ ನಟಿಸಬೇಕು. .... ಕನಿಕರ, ನಿಷ್ಠೆ, ಮಾನವೀಯತೆ, ಧಾರ್ಮಿಕತೆ, ನೇರನಡೆ, ಇವೆಲ್ಲಾ ತನ್ನಲ್ಲಿವೆಯೆಂದು ತೋರ್ಪಡಬೇಕು, ಆದರೆ ಅವೆಲ್ಲಾ ಅನಗತ್ಯವೆಂದು ತೋರಿದಾಗ

ಅವುಗಳ ವಿರುದ್ಧ ದಿಕ್ಕಿನಲ್ಲಿ ನಡೆಯುವುದನ್ನು ತಿಳಿದಿರಬೇಕು. ... ನೀನು ಏನಾಗಿರುವೆಯೆಂದು ತೋರ್ಪಡಿಸುತ್ತೀಯೋ ಅದು ಎಲ್ಲರಿಗೂ ಗೊತ್ತು, ಆದರೆ ನೀನೇನಾಗಿದ್ದೀಯೋ ಅದು ಕೆಲವರಿಗೆ ಮಾತ್ರ ತಿಳಿದಿದೆ. ಆ ಕೆಲವರು ನಿನ್ನನ್ನು ಎದುರುಹಾಕಿಕೊಳ್ಳುವ ಧೈರ್ಯ ಇಲ್ಲದವರು, ಏಕೆಂದರೆ ಬಹುಜನರು ನಿನ್ನ ಬಗೆಗೆ ತಾಳಿರುವ ಅಭಿಪ್ರಾಯವನ್ನು ಅವರು ವಿರೋಧಿಸಲಾರರು."

ಒಂದು ಉದಾಹರಣೆಯಾಗಿ ಮ್ಯಾಕಿಯಾವೆಲಿ ನೀಡಿರುವ ದೃಷ್ಟಾಂತವೊಂದನ್ನು ನೋಡಬಹುದು. ರಾಮಿರೊ ದೋರ್ಕೊ ಎಂಬುವವನಿಗೆ ಸೆಝಾರ್ ಬೋರ್ಗಿಯ ಎಂಬುವನು ರೋಮಾನ್ಯ ಎಂಬ ಭಾಗದ ನಿರ್ವಹಣೆಯನ್ನು ವಹಿಸಿದ. ಜನರನ್ನು ಸುಧಾರಿಸುವ ಬದಲು ಅವರ ಮೇಲೆ ಕ್ರೌರ್ಯದ ಕಾಲುವೆ ಹರಿಸಿದ ರಾಮಿರೊ. ಕಡೆಗೆ ಅದು ಸೆಝಾರ್‌ನ ಬುಡಕ್ಕೇ ಬಂತು. ಆಗ ಅವನು ರಾಮಿರೋಗೆ ಮರಣದಂಡನೆ ನೀಡಿದ. ನ್ಯಾಯದ ಪರಿಪಾಲನೆ ಅಂಥದು ಮತ್ತು ಜನರಿಗೆ ಸಂತುಷ್ಟಿ ಆ ರೀತಿಯದು. ಇಪ್ಪತ್ತನೆಯ ಶತಮಾನದತ್ತ ದೃಷ್ಟಿ ಹಾಯಿಸಿದರೆ ಸೆಝಾರ್‌ನಂತಹ ಪಾತಕಿಗಳು ಬಹಳ ಸಾಮಾನ್ಯರೆನಿಸುತ್ತಾರೆ. ಮ್ಯಾಕಿಯಾವೆಲಿಗೆ ತನ್ನ ಸಮಕಾಲೀನ ವಿಷಯಗಳು ಆಪ್ತವಾಗಿದ್ದವು, ಆದ್ದರಿಂದ ನಾವೂ ಒಬ್ಬ ಸಮಕಾಲೀನ ಜನಹಂತಕನ ಹೆಸರನ್ನು ತೆಗೆದುಕೊಳ್ಳೋಣ. ವಂಚನೆಗೆ ಹೆಸರಾದ ಅಡಾಲ್ಫ್ ಹಿಟ್ಲರನನ್ನು ನೋಡಿ. ಅವನೊಂದು ವದಂತಿ ಹಬ್ಬಿಸಿದ. ಜರ್ಮನಿಯನ್ನು ರಕ್ಷಿಸಲು ದೇವರು ಅವನನ್ನು ಕಳಿಸಿದ್ದ; ಏಕೆಂದರೆ ಭೂಭಾಗದಲ್ಲಿ ಜರ್ಮನಿ ಅತಿಶ್ರೇಷ್ಠವಾದ ನಾಡು, ಎಂದು. ಭಗವಂತನಿಗೆ ಅದೇಕೋ ಈ ಭೂಭಾಗದ ಮೇಲೆ ವಿಶೇಷವಾದ ಕನಿಕರ ಉಕ್ಕಿಬಂದಿತ್ತು! ಜನರು ಆ ವದಂತಿಯನ್ನು ನಂಬಿದರು; ಎಲ್ಲೋ ಸ್ವಲ್ಪ ವಿರೋಧ ವ್ಯಕ್ತವಾಯಿತು, ಅಷ್ಟೆ. ಇಂತಹ ಮಾತುಗಳನ್ನು ನಾವು ಸ್ವತಃ ಕೇಳಿದ್ದುದುಂಟು.

ದೇವರ ಅವತಾರವೇನು ಸಾಮಾನ್ಯವೆ? ಸದ್ಗುಣಕ್ಕೆ ಅದಕ್ಕಿಂತಲೂ ದೊಡ್ಡ ಅರ್ಹತಾಪತ್ರ ಉಂಟೆ! ಪ್ರಾಚೀನ ರೋಮ್‌ನ ಅಧಿಪತಿಗಳು ಅಪರಾಧಗಳಿಗೆ ಮುಕ್ತವಾಗಿ ತೆರೆದುಕೊಂಡಿದ್ದವರು, ಅವರಿಗೆ ತಂತ್ರಗಳೆಲ್ಲಾ ಸಿದ್ಧಿಸಿದ್ದವು. ಜಪಾನಿನ ಸಾಮ್ರಾಟನು ಅದನ್ನು ಕರಗತ ಮಾಡಿಕೊಂಡಿದ್ದುದಾಗಿ ಭಾವಿಸಿ ಎಡವಿಬಿದ್ದ. ಇವರೆಲ್ಲಾ ಅವತಾರಗಳೆ? ಎಲ್ಲರೂ ಹುಟ್ಟಿದ್ದು ಬೇರೆಲ್ಲರಂತೆಯೇ: ಆದರೆ ಎಲ್ಲೋ ದಿವ್ಯವಾದ ಮೋಡಗಳಿಂದ ಇಳಿದುಬಂದವರಂತೆ ತಮ್ಮನ್ನು ಬಿಂಬಿಸಿಕೊಂಡರು. ಜಪಾನಿನ ಅಧಿಪತಿಯು ನೇರವಾಗಿ ಸೂರ್ಯನ ವಂಶದವನೆಂಬ ಪ್ರತೀತಿ ಇದೆ. ಭಗವಂತನ ಆಶಯವು ಸದಾ ಒಳ್ಳೆಯದೇ ಎಂಬ ನಂಬಿಕೆಯಿಂದಾಗಿ ಇಂಥವರೆಲ್ಲಾ ತಪ್ಪು ಎಸಗಲಾರರೆಂಬ ಭಾವನೆ ಜನರಲ್ಲಿ ಮೂಡಿತ್ತು. ಅವರು ಯಾರನ್ನಾದರೂ ಕೊಂದರೆ ಅವರೆಲ್ಲಾ ಹೇಗೂ "ಕೀಳು" ಜನಾಂಗದವರಾಗಿರುತ್ತಾರಲ್ಲವೆ!

ದೈವದ ಲಕ್ಷಣಗಳನ್ನು ಆವಾಹಿಸಿಕೊಳ್ಳುವ ಜೊತೆಗೆ ಈ ದೈವ ಪ್ರತಿನಿಧಿಗಳು ಇನ್ನೂ ಕೆಲವು ಸದ್ಗುಣಗಳನ್ನು ಆರೋಪಿಸಿಕೊಳ್ಳುತ್ತಾರೆ. ಹಿಟ್ಲರ್ ಒಬ್ಬ ಆಜನ್ಮ ಬ್ರಹ್ಮಚಾರಿಯೆಂಬ ಮಿಥ್ಯೆಯು ಬಹುಕಾಲ ಪ್ರಚಾರದಲ್ಲಿತ್ತು. ಅಲ್ಲದೆ, ಅವನು ಶಾಂತಸ್ವಭಾವದವನೆಂಬ ಮಾತು ಪ್ರಸಿದ್ಧವಾಗಿತ್ತು. ಸಂಧಾನ ನಡೆಸುವವರಿಗೆ ಈ ಸದ್ಗುಣಗಳು ಭಾರಿ ಬಂಡವಾಳವಲ್ಲವೆ! ಹಿಟ್ಲರನ ಆಶಯವು ಅಖಂಡ ಜರ್ಮನಿಯಾಗಿದ್ದಿತಂತೆ, ಅದರಲ್ಲಿ

ಇಡೀ ವಿಶ್ವವನ್ನು ಒಳಗೊಳ್ಳುವಂತಹ ಪ್ರೀತಿಯು ಮಡುಕಟ್ಟಿದ್ದಿತಂತೆ. ಫ್ರಾಯ್ಡ್ ಹೇಳುವ ಮಾನವ ಸಹಜ ಆಕಾಂಕ್ಷೆಗಳನ್ನು ಹಿಟ್ಲರ್ ಪಾವಿತ್ರ್ಯದ ಮಟ್ಟಕ್ಕೇರಿಸಿದ್ದ ಮತ್ತು ಯುಂಗ್ ವಿಧೇಯತೆಯಿಂದ ಕಂಡುಹಿಡಿದಿದ್ದ ಜನಾಂಗೀಯ ಅಂತಃಪ್ರಜ್ಞೆ ಇವನಲ್ಲಿ ಮೂರ್ತೀಭವಿಸಿತ್ತು ಎಂದೆಲ್ಲಾ ಪ್ರಚಾರ ಮಾಡಿದ್ದವರುಂಟು.

ಮ್ಯಾಕಿವೆಲಿಯ ಶಿಷ್ಯ ಬೆನಿಟೊ ಮುಸ್ಸೋಲಿನಿ ಇಷ್ಟು ಪ್ರಗಲ್ಭನಾಗಿರಲಿಲ್ಲ, ಆದರೆ ಅವನ ಅಹಮಿಕೆಗೆ ಮಿತಿಯೇನೂ ಇರಲಿಲ್ಲ. ಅವನ ಆತ್ಮಕತೆಯಲ್ಲಿ ಯಾವುದು ಹೆಚ್ಚು ತುಚ್ಛವೆಂದು ಹೇಳುವುದು ಕಷ್ಟ: ಅವನು ಕೊಚ್ಚಿಕೊಳ್ಳುವ ಸನ್ನಡತೆಯೋ ಅಥವಾ ಮುಚ್ಚಿಹಾಕುವ ದುರ್ನಡತೆಗಳೋ? ಅವನ ಮಾತು ಗಮನಿಸಿ:

"ನನಗೆ ಎಲ್ಲ ಆಟಪಾಟಗಳೂ ಇಷ್ಟ; ಕಾರು ಓಡಿಸುವುದರಲ್ಲಿ ನಾನು ಸಮರ್ಥ; ಅತಿವೇಗದಿಂದ ಕಾರು ಓಡಿಸಿ ಅದೆಷ್ಟೋ ಪ್ರವಾಸಗಳನ್ನು ಮಾಡಿದ್ದೇನೆ. ನನ್ನ ಸ್ನೇಹಿತರು ಮಾತ್ರವಲ್ಲ, ಅನುಭವೀ ಚಾಲಕರು ಸಹ ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದಾರೆ. ಏರೋಪ್ಲೇನ್ ನನಗೆ ಇಷ್ಟ, ಬೇಕಾದಷ್ಟು ಬಾರಿ ನಾನು ಹಾರಾಟ ನಡೆಸಿದ್ದೇನೆ. ... ಪಿಟೀಲು ನುಡಿಸುವುದು ನನಗೆ ಅತ್ಯಂತ ಸಂತಸವನ್ನು ನೀಡಿರುವ ಕ್ಷಣಗಳು ಅನಂತ. ಡಾಂಟೆಯಂತಹ ಮಹಾಕವಿಗಳು, ಪ್ಲೇಟೋನಂತಹ ದಾರ್ಶನಿಕರು ನನಗೆ ಬಹಳ ಉಲ್ಲಾಸದ ಧ್ಯಾನಸ್ಥ ಅನುಭವ ನೀಡಿದ್ದಾರೆ. ನನಗೆ ಬೇರಿನ್ನಾವ ವಿನೋದಗಳಲ್ಲೂ ಆಸಕ್ತಿಯಿಲ್ಲ. ಕುಡಿತ, ಧೂಮಪಾನ, ಇಸ್ಪೀಟು, ಇತ್ಯಾದಿಗಳಲ್ಲಿ ನನಗೆ ಆಸಕ್ತಿ ಎಳ್ಳಷ್ಟೂ ಇಲ್ಲ."

ಮ್ಯಾಕಿಯಾವೆಲಿಗೆ ಎಂತಹ ಪರಮಶಿಷ್ಯ, ಬೊಲೋನ್ಯ ವಿಶ್ವವಿದ್ಯಾನಿಲಯದ ಎಂತಹ ಪ್ರಬುದ್ಧ ವಿದ್ವಾಂಸ, ನವ ರೋಮ್ ಚಕ್ರಾಧಿಪತ್ಯದ ಅದ್ಭುತ ನಾಯಕ ಇವನು. ನನಗನಿಸುವಂತೆ ಇವನು ಎಲ್ಲ ವಿಧಗಳಲ್ಲೂ ಒಂದು ಕತ್ತೆಯೇ ಸರಿ. "ನನ್ನ ಆಂತರ್ಯದ ನೈತಿಕ ಎಳೆ ಅಜೇಯವಾದುದು" ಎನ್ನುತ್ತಾನವನು. ಸಮಕಾಲೀನನಾದ ಮತ್ತೋರ್ವ ನನಗೆ ನೆನಪಿಗೆ ಬರುತ್ತಾನೆ. ಅವನ ಅಸಹ್ಯ ಅಪರಾಧಗಳಿಗಾಗಿ ಅವನನ್ನು ಮರಣದಂಡನೆಗೆ ಗುರಿಮಾಡಲಾಗಿತ್ತು. ಅವನ ಹೆಸರು ಇಂಗ್ಲಿಷ್ ಭಾಷೆಯಲ್ಲಿ ಹೀನತನಕ್ಕೆ ಪ್ರತೀಕವಾಗಿದೆ. ಅವನ ಹೆಸರು ವಿಡ್ಕುನ್ ಕ್ವಿಜ್ಲಿಂಗ್ ಎಂದು. ಅವನೊಮ್ಮೆ ಬೊಗಳಿದ್ದ: "ಮಾನವ ಜನಾಂಗಕ್ಕೆ ನಾನು ಸಲ್ಲಿಸಿರುವ ಸೇವೆಗೆ ಸಮನಾದ್ದನ್ನು ನೀಡಿರುವವರು ಅತಿಕಡಿಮೆ" ಎಂದು. ಇದಕ್ಕಿಂತಲೂ ಘೋರವಾದ ಜಂಭದ ಮಾತು ಇನ್ನೊಂದಿಲ್ಲ. ಮ್ಯಾಕಿಯಾವೆಲಿಯ ಗ್ರಂಥದಲ್ಲಿ ಕೂಡ ಇಂತಹ ವ್ಯಕ್ತಿ ಸಿಗಲಾರ: ತೋರಿಕೆಗೆ ಅತ್ಯಂತ ಸದ್ಗುಣಿ, ಆದರೆ ಅಸಾಧ್ಯ ಹಾಲಾಹಲದಂತಹ ಕೇಡುಗ.

ಪ್ರಚಾರ ತಂತ್ರಕ್ಕೆ ಒಳ್ಳೆಯ ಉದಾಹರಣೆಗಳು, ಆದರೆ ಮಹಾನ್ ಸುಳ್ಳುಗಳನ್ನೂ ಪಾತಕಗಳನ್ನೂ ಮುಚ್ಚಿಹಾಕಲು ಕೌಶಲ್ಯವೊಂದೇ ಸಾಲುವುದಿಲ್ಲ. ಮ್ಯಾಕಿಯಾವೆಲಿ ಹೇಳುತ್ತಾನೆ: "... ಶಸ್ತ್ರಧಾರಿ ಪ್ರವಾದಿಗಳು ವಿಜಯ ಸಾಧಿಸಿದ್ದಾರೆ, ಶಸ್ತ್ರರಹಿತರು ಮಣ್ಣುಮುಕ್ಕಿದ್ದಾರೆ. ಅದಕ್ಕೆ ಹಲವು ಕಾರಣಗಳಿವೆ. ಜನರ ಓಲಾಡುವ ಸ್ವಭಾವ ಅಚ್ಚರಿಯುಂಟುಮಾಡುತ್ತದೆ. ಜನರಿಗೆ ಪ್ರೇರಣೆ ನೀಡಬಹುದು, ಆದರೆ ಅವರನ್ನು ಅದರಲ್ಲಿ ಸ್ಥಿರಗೊಳಿಸುವುದು ಕಷ್ಟ. ಆದ್ದರಿಂದ ಕೆಲವೇಳೆ, ಅಂದರೆ ಹೇಳಿದ್ದನ್ನು ಸುಮ್ಮನೆ ಕೇಳದಿದ್ದಾಗ, ಬಲಪ್ರಯೋಗದಿಂದ ಅವರನ್ನು ಮಣಿಸಲು ಸಾಧ್ಯವಾಗಬಹುದು."

ಲಿಂಕನ್ ಅಮೆರಿಕಾದಲ್ಲಿ ಪ್ರಸಿದ್ಧಗೊಳಿಸಿದ ಮಾತೊಂದಿದೆ: "ಎಲ್ಲ ಜನರನ್ನೂ ಎಲ್ಲ ಕಾಲಗಳಲ್ಲೂ ಮೂರ್ಖರನ್ನಾಗಿಸಲು ಸಾಧ್ಯವಿಲ್ಲ." ಮ್ಯಾಕಿಯಾವೆಲಿ ಅದನ್ನು ಒಪ್ಪಬೇಕಾಗಿದೆ. ಏಕೆಂದರೆ, ಅವನೇ ಹೇಳುವಂತೆ ಜನರ ಸ್ವಭಾವವು ಚರವಾದುದು. ಅದು ಹುಟ್ಟಿನಿಂದ ಚಂಚಲ ಸ್ವಭಾವದ ಸೂಚಕವಲ್ಲ. ಆಳುವ ಮಂದಿಯ ಕುತಂತ್ರಗಳು ಅವನಿಗೆ ಅರ್ಥವಾಗುತ್ತದೆ ಎಂದರ್ಥ. ತನ್ನ ಶಿಷ್ಯರಿಗೆ ಮ್ಯಾಕಿಯಾವೆಲಿ ಇದನ್ನು ಮನದಟ್ಟು ಮಾಡಿಕೊಡಬೇಕಾಗಿತ್ತು; ಶಿಷ್ಯರು ಮರೆತಿರುವ ಪಾಠ ಅದೇ. ಆಳುವ ಶಿಷ್ಟವರ್ಗಕ್ಕೆ ಕುರುಡುತನಗಳಿವೆ, ಅವುಗಳಲ್ಲಿ ಅತಿಹೆಚ್ಚು ಅಪಾಯಕಾರಿಯಾದ್ದು ಜನತೆಯೆಂದೂ ಪಾಠ ಕಲಿಯದೆಂಬ ಮೂರ್ಖ ನಂಬಿಕೆ. ಪುಸ್ತಕ, ಶಿಕ್ಷಣ, ಯಾವುದೂ ಇಲ್ಲದೆಯೂ ಜನತೆಗೆ ಕಲಿಕೆಯುಂಟು. ಅಂತೆಯೇ ಸುಳ್ಳಿನ ಕಂತೆಗಳಿರುವ ಪುಸ್ತಕಗಳನ್ನು ಹಾಗೂ ಮಂಕು ಕವಿಸುವ ಶಿಕ್ಷಣವನ್ನು ಮೀರಿ ತಿಳಿವಳಿಕೆ ಪಡೆಯಲು ಜನರು ಸಮರ್ಥರಿದ್ದಾರೆ. ಎಷ್ಟೇ ಮೋಸಗಾರಿಕೆಯ ಷಡ್ಯಂತ್ರವಿದ್ದರೂ ಹಸಿದ ಹೊಟ್ಟೆಯು ಅದನ್ನು ಸೆಣಸಿ ವಿಜಯಿಯಾಗುತ್ತದೆ.

ಗುರು ಮ್ಯಾಕಿಯಾವೆಲಿ ಉಪದೇಶಿಸುತ್ತಾನೆ: ಕೌಶಲ್ಯದಿಂದ ಸಾಧಿಸಲಾಗದಿದ್ದಾಗ ಹಿಂಸೆಯನ್ನು ಪ್ರಯೋಗಿಸಬೇಕು, ಎಂದು. ಆದರೆ ಹಿಂಸೆಯ ಪ್ರಯೋಗದಲ್ಲಿ ಕೌಶಲವಿರಬೇಕು; ನಿಷ್ಕೃಷ್ಟತೆ ಮತ್ತು ವೇಗದಿಂದ ಹಿಂಸೆಯನ್ನು ಪ್ರಯೋಗಿಸಬೇಕು. ಅವನ ಉಪದೇಶ ನೋಡಿ: "ಹೊಡೆತವನ್ನು ಹಠಾತ್ತನೆ ನೀಡಬೇಕು. ಹೊಡೆತ ತಿಂದು ಅಭ್ಯಾಸವಿಲ್ಲದವರಿಗೆ ಅದು ಆಘಾತವೆನಿಸುವುದಿಲ್ಲ. ಸೌಲಭ್ಯ ನೀಡುವಾಗ ಸ್ವಲ್ಪಸ್ವಲ್ಪವಾಗಿ ನೀಡಬೇಕು; ಆಗ ಅದರ ರುಚಿ ದೀರ್ಘಕಾಲ ಉಳಿದಿರುತ್ತದೆ."

ಹಠಾತ್ತನೆ ನೀಡುವ ಹೊಡೆತವು ವಿರೋಧಿಗಳನ್ನು ಕಂಗಾಲಾಗಿಸುತ್ತದೆ, ಸಂಘಟನಾತ್ಮಕ ಯೋಜನೆಯು ಕುಸಿದುಬೀಳುತ್ತದೆ. ಅದರಿಂದ ಚೇತರಿಸಿಕೊಳ್ಳುವ ವೇಳೆಗೆ ಹಿಂಸೆಯು ಕೊನೆಗೊಂಡಿರುತ್ತದೆ, ಕೌಶಲ್ಯದ ಪ್ರಭಾವ ದಟ್ಟವಾಗಿರುತ್ತದೆ, ಪ್ರತಿಹಿಂಸೆಗೆ ಸಾಕಷ್ಟು ಸಮರ್ಥನೆ ಉಳಿದಿರುವುದಿಲ್ಲ. ಹಿಟ್ಲರ್ ಹೇಳುತ್ತಿದ್ದನಂತೆ, "ಸರಿಯಾದ ಕ್ಷಣಕ್ಕಾಗಿ ನಾನು ಕಾಯುತ್ತೇನೆ, ಆಮೇಲೆ ಮಿಂಚಿನಂತೆ ಎರಗುತ್ತೇನೆ" ಎಂದು. ಮ್ಯಾಕಿಯಾವೆಲಿಯ ಆದೇಶದ ನಿಷ್ಠಾವಂತ ಪಾಲನೆ ಇದು. ತಕ್ಕಮಟ್ಟಿಗೆ ಅದು ಹಿಟ್ಲರನಿಗೆ ನಿರೀಕ್ಷಿಸಿದ್ದ ಫಲ ನೀಡಿತ್ತು.

ಮೂಲಭೂತ ತತ್ವಗಳನ್ನು ಪರಿಚಯಿಸಿಕೊಂಡ ತರುವಾಯ "ರಾಜಕುಮಾರ" ಎಂಬ ಗ್ರಂಥವನ್ನು ದೀರ್ಘವಾಗಿ ಪರಿಶೀಲಿಸಬೇಕಾಗಿಲ್ಲ. ಅದರ ಅಧ್ಯಯನವು ಉಪಯುಕ್ತವೇನೋ ಹೌದು. ಬಲ ಪ್ರಯೋಗದ ತಂತ್ರವಿದೆಯಲ್ಲಾ, ಅದರ ಸಾರವನ್ನು ತಿಳಿಯಲು ಅದು ಸಾಕು. ಆರ್ಥಿಕ ಮತ್ತು ರಾಜಕೀಯ, ಎರಡರಲ್ಲೂ ಅದರ ಅರಿವು ಅವಶ್ಯಕ. ಅದರ ವಿಸ್ತಾರವಾದ ಚರ್ಚೆಗೆ ಹೋಗುವುದು ಬೇಡ. ಯಾವ ಆಳುವ ವ್ಯಕ್ತಿಯನ್ನೂ ಪ್ರತ್ಯೇಕವಾಗಿ ವಿವರಿಸಿಕೊಳ್ಳಬೇಕಾಗಿಲ್ಲ. ಆಳ್ವಿಕೆಯ ನಿಯಮಗಳನ್ನು ಪಾಲಿಸುವವರಲ್ಲಿ ಎಂತಹ ಸಂಚು ಇದೆಯೆಂದು ತಿಳಿದರೆ ಸಾಕು. ಸರ್ವಸ್ವವೂ ಸ್ವಾರ್ಥಸಾಧನೆಗೆ, ಸಂಪತ್ತು ಸೆಳೆದುಕೊಳ್ಳುವುದಕ್ಕೆ, ಎಂದು ನಂಬುವ ವ್ಯಕ್ತಿಯ ಅಥವಾ ವ್ಯಕ್ತಿಗಳ ಸಮೂಹಕ್ಕೆ ಕೌಶಲ ಮತ್ತು ಹಿಂಸೆ ಸದಾ ಪ್ರಮುಖ ಸಾಧನ. ಹೀಗಿರುವಾಗ ನಾವು ಆ ಉದ್ದೇಶಗಳನ್ನು ಮತ್ತು ವಿಧಾನಗಳನ್ನು ಅಂಗೀಕರಿಸಬೇಕೆ? ನಾನು ಮತ್ತು ನನಗೆ ಎಂಬುವು ನಮಗೆ ನಿರ್ದೇಶಕ ಸೂತ್ರಗಳಾಗಬೇಕೆ?

ಸ್ವಾರ್ಥವು ಫಲಕಾರಿಯೆ?

ಪ್ರತಿಯೊಬ್ಬರಿಗೂ ಎರಡು ಸ್ತರಗಳ ಜೀವನವಿದೆ: ಸಾಮಾನ್ಯ ಸ್ತರದಲ್ಲಿ ದಿನನಿತ್ಯ ನಮ್ಮ ಒಡನಾಟ ಇರುವಂಥವರು ಇರುತ್ತಾರೆ. – ನಮ್ಮ ಕುಟುಂಬ, ಸ್ನೇಹಿತರು, ಪರಿಚಯಸ್ಥರು, ಜೊತೆಗಾರರು. ವಿಶಾಲ ಸ್ತರದಲ್ಲಿ ನಾವು ಜೀವಿಸುವ ಇಡೀ ರಾಷ್ಟ್ರೀಯ ಸಮಾಜವಿರುತ್ತದೆ. ಎರಡೂ ಜೊತೆಗೂಡಿವೆ ಆದರೆ ಪ್ರತ್ಯೇಕವೂ ಆಗಿವೆ. ಒಂದೊಂದರಲ್ಲೂ ನಮ್ಮ ನಡವಳಿಕೆ ಭಿನ್ನವಾಗಿರುತ್ತದೆ. ಇಡೀ ಸಮಾಜದೊಡನೆ ನಮ್ಮ ಸಂಬಂಧವು ಕುಟುಂಬ ಮತ್ತು ಸ್ನೇಹಿತರ ಸಂಬಂಧದಂತಲ್ಲ. ಸಮಾಜದ ಒಳಿತಿನ ಬಗ್ಗೆ ಯೋಚಿಸುವಾಗ ಆರ್ಥಿಕ ಮತ್ತು ರಾಜಕೀಯ ಸಂಗತಿಗಳಿರುತ್ತವೆ; ಕುಟುಂಬ ಮತ್ತು ಸ್ನೇಹಿತರ ಬಗೆಗಿನ ಸಂಬಂಧವು ವೈಯ್ಯಕ್ತಿಕವಾದ್ದು.

ಈ ಎರಡು ಸ್ತರಗಳಲ್ಲಿನ ಜೀವನವು ತೀರಾ ಪ್ರತ್ಯೇಕವಲ್ಲ; ಒಂದು ಸ್ತರದ ಜೀವನವು ಇನ್ನೊಂದನ್ನು ಪ್ರಭಾವಿಸುತ್ತಿರುತ್ತದೆ. ಒಂದು ಬೃಹತ್ ಸಾಮಾಜಿಕ ಸಮಸ್ಯೆಯ ಬಗೆಗಿನ ನಿಲುವು ಕುಟುಂಬ ಮತ್ತು ಸ್ನೇಹಿತರ ವಲಯವನ್ನು ದೂರ ಮಾಡಿಬಿಡಬಹುದು. ಆದರೆ ಸ್ವಾರ್ಥದ ಅನೈತಿಕತೆಯನ್ನು ಕುರಿತು ಚರ್ಚಿಸಲು ಈ ಎರಡು ಸ್ತರಗಳ ನಡುವಿನ ವ್ಯತ್ಯಾಸವನ್ನು ಗಮನಿಸುವುದು ಅನುಕೂಲಕರ. ಏಕೆಂದರೆ, ಈ ನೈತಿಕತೆಯು ವಾಸ್ತವಿಕ ಮತ್ತು ಪ್ರಯೋಗಯೋಗ್ಯ ಮಾತ್ರವಲ್ಲದೆ, ಅದೊಂದೇ ಆ ಲಕ್ಷಣಗಳನ್ನುಳ್ಳದ್ದು ಎಂದು ಹೇಳಲಾಗುತ್ತದೆ. ಮ್ಯಾಕಿಯಾವಿಲೆಯ ಅನುಯಾಯಿಗಳ ಪ್ರಕಾರ ಇದನ್ನು ಬಿಟ್ಟು ಬೇರೆಯವೆಲ್ಲಾ ಭ್ರಾಮಕವಾದುವೇ ಆಗಿವೆ.

ಸ್ವಾರ್ಥಪರತೆಯು ಎಲ್ಲೂ ಗೆಲುವು ಸಾಧಿಸುವುದಿಲ್ಲವೆಂಬ ವಾದ ಬೇಡ, ಏಕೆಂದರೆ ಇತಿಹಾಸದಲ್ಲಿ ಅದು ಮೇಲುಗೈ ಪಡೆದ ಸಂದರ್ಭಗಳಿವೆ. ಆದರೆ ಅದೇ ಇತಿಹಾಸದಲ್ಲಿ ಅದರ ಸೋಲಿನ ದಾಖಲೆಗಳೂ ಇವೆ. ಮ್ಯಾಕಿಯಾವೆಲಿ ಸಿದ್ಧಾಂತವನ್ನು ಪ್ರಯೋಗಿಸ ಹೋಗಿ ಕೈಸುಟ್ಟುಕೊಂಡವರು ಹೇರಳವಾಗಿದ್ದಾರೆ. ಇದನ್ನು ಎದುರಿಸಲು ಮ್ಯಾಕಿಯಾವೆಲಿ ತತ್ವದವರದು ಒಂದು ರಾಮಬಾಣವಿದೆ: ಸಿದ್ಧಾಂತದಲ್ಲಿ ನ್ಯೂನತೆ ಇಲ್ಲ, ಅದನ್ನು ಅನುಷ್ಠಾನಕ್ಕೆ ತರುವುದರಲ್ಲಿ ವೈಯ್ಯಕ್ತಿಕ ತಪ್ಪುಗಳಿಂದಾಗಿ ಸೋಲುಂಟಾಗಿರ ಬಹುದು, ಎಂದುಬಿಡುತ್ತಾರೆ. ಕೆಲವೇಳೆ ಅದೂ ನಿಜವೇ ಇರಬಹುದು, ಆದರೆ ನೈತಿಕತೆಯ ಸಿದ್ಧಾಂತದಲ್ಲೇ ಅವರಲ್ಲಿ ಹುಳುಕುಗಳಿರುವುದು ಸೋಲಿಗೆ ಕಾರಣವೆಂಬುದು ನಿತ್ಯಸತ್ಯ.

ಸ್ನೇಹಿತರ ಮತ್ತು ಪರಿಚಿತರ ಸೀಮಿತ ವಲಯದಲ್ಲಿ ಸ್ವಾರ್ಥದ ಆಚರಣೆಯನ್ನು ಮೊದಲು ಪರಿಶೀಲಿಸೋಣ: ಇಲ್ಲಿ ಗೆಲುವಿನ ಸಾಧ್ಯತೆ ತೀರಾ ಕಡಿಮೆ. ಏಕೆಂದರೆ, ಇಲ್ಲಿ ಪ್ರತಿಕ್ಷಣದಲ್ಲೂ ವ್ಯಕ್ತಿಯ ಕ್ರಿಯೆಗಳು ಇತರರ ಗಮನಕ್ಕೆ ಬರುತ್ತಿರುತ್ತವೆ, ಅವುಗಳ ಮಾಪನ ನಡೆಯುತ್ತಿರುತ್ತದೆ. ಏನನ್ನೂ ಬಹುಕಾಲ ಮುಚ್ಚಿಡಲು ಆಗುವುದಿಲ್ಲ. ಜೊತೆಗೆ, ಇಲ್ಲಿ ಹಿಂಸೆಯ ಪ್ರಯೋಗಕ್ಕೆ ಹೆಚ್ಚು ಆಸ್ಪದವಿರುವುದಿಲ್ಲ. ಯಾರ ವಂಚನೆಗೆ ಷಡ್ಯಂತ್ರ ಹೂಡಲಾಗುತ್ತದೋ ಅವರು ತಂತ್ರ ಹೂಡುವವನನ್ನು ಬೇಗನೆ ಸುತ್ತುವರಿದು ನಿಲ್ಲುತ್ತಾರೆ. ಅವನನ್ನು ಅವರ ಪರಿಧಿಯಿಂದ ಹೊರದೂಡಲಾಗುತ್ತದೆ. ಹಾಗಾದಾಗ ತಂತ್ರವು ಯಶಸ್ವಿಯಾಗುವುದಾದರೂ ಹೇಗೆ! ಸ್ವಾರ್ಥಪರತೆಯಿಂದ ತಾನು

ಕಳೆದುಕೊಂಡ ಮೌಲ್ಯಗಳು ಪುನಃ ಸ್ಥಾಪನೆಗೊಳ್ಳಬೇಕಾದರೆ ತನ್ನ ನಡವಳಿಕೆಯನ್ನು ಕೈಬಿಟ್ಟು ಅದಕ್ಕೆ ಪ್ರತಿಯಾದ ನೈತಿಕತೆಯನ್ನು ಅನುಸರಿಸಬೇಕಾಗುತ್ತದೆ.

ಪ್ರಜ್ಞಾಪೂರ್ವಕವಾಗಿ ಸ್ವಾರ್ಥಪರತೆ ಇರುವಾಗ ಅನ್ವಯವಾಗುವ ಸೂತ್ರ ಇದು. ಎಲ್ಲೋ ಒಮ್ಮೆ ಅದನ್ನು ಅನುಸರಿಸುವವರು ಯಾರಿಗೂ ತಿಳಿಯದಂತೆ ಗೆದ್ದುಬಿಡಬಹುದು. ಮೂಲತಃ ಸ್ವಾರ್ಥಪರತೆಯು ಇತರರ ನಷ್ಟದಿಂದ ಕೂಡಿಬರುವ ಲಾಭ. ಇವನು ಲಾಭ ಪಡೆದರೆ ಅವರಿಗೆ ನಷ್ಟ ಅನಿವಾರ್ಯ. ಎಲ್ಲರೂ ಯಾವುದೋ ಸಂದರ್ಭದಲ್ಲಿ ಸ್ವಾರ್ಥದಿಂದ ಲಾಭ ಗಳಿಸಿಕೊಂಡಿರುವುದು ಶಕ್ಯ, ಆದರೆ ಮ್ಯಾಕಿಯಾವೆಲಿಯ ನಿಷ್ಠಾವಂತ ಶಿಷ್ಯನೆನಿಸಿಕೊಳ್ಳಬೇಕಾದರೆ ಅದನ್ನು ಸದಾ ಮಾಡುತ್ತಲೇ ಇರಬೇಕು. ಕುಟುಂಬ ಮತ್ತು ಸ್ನೇಹಿತರ ವಲಯದಲ್ಲಿ ಅದನ್ನು ನಿರಂತರವಾಗಿ ಮಾಡುತ್ತಿದ್ದರೆ ಅಲ್ಲಿಂದ ಹೊರದೂಡಲ್ಪಡುವುದು ಅನಿವಾರ್ಯ. ತಮ್ಮ ವೈಯ್ಯಕ್ತಿಕ ನಷ್ಟವನ್ನು ತಿಳಿಯದಿರುವಷ್ಟು ಬೆಪ್ಪರು ಯಾರೂ ಇರುವುದಿಲ್ಲವೇನೊ!

ಸ್ವಾರ್ಥಪರತೆಯನ್ನು ಇನ್ನೂ ವಿಶಾಲವಾದ ವಲಯದಲ್ಲಿ ಪ್ರಯೋಗಿಸಿದಾಗ ಸನ್ನಿವೇಶವು ಸ್ವಲ್ಪ ಭಿನ್ನವಾಗಿರುತ್ತದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ವಂಚನೆ ಅದಾಗಿರಬೇಕು. ಕುತಂತ್ರ ಮತ್ತು ಹಿಂಸೆ ಲಾಭದಾಯಕವಾಗಲು ಅಂತಹ ವಿಶಾಲ ಕ್ಷೇತ್ರ ಬೇಕು. ಇಡೀ ಸಮಾಜವನ್ನು ದೃಷ್ಟಿಯಲ್ಲಿರಿಸಿಕೊಂಡಾಗ ತಂತಾನೆ ವೈಶಾಲ್ಯವು ಕೂಡಿಬರುತ್ತದೆ. ಉದಾಹರಣೆಗೆ, ಶೋಷಕರ ಮತ್ತು ಶೋಷಿತರ ನಡುವೆ ಸಮಾಜದಲ್ಲಿ ಗಮನಾರ್ಹವಾದಷ್ಟು ಕಂದರವಿರುತ್ತದೆ. ಇನ್ನೊಂದು ಮುಗ್ಗಟ್ಟು ಸಹ ಇದಕ್ಕೆ ಪೂರಕವಾದ್ದು: ಶೋಷಿತರು ತಮ್ಮ ತಕ್ಷಣದ ಬವಣೆಗಳನ್ನು ನಿವಾರಿಸಿಕೊಳ್ಳುವುದರಲ್ಲೇ ತಲ್ಲೀನರಾಗಿದ್ದಾಗ ಶೋಷಕರ ಎಲ್ಲಾ ಚಟುವಟಿಕೆಗಳನ್ನೂ ಗಮನಿಸಲು ಅವರಿಗೆ ವ್ಯವಧಾನವೆಲ್ಲಿ! ಅಲ್ಲದೆ, ಆ ಎರಡು ಗುಂಪುಗಳ ನಡುವೆ ಅವೆಷ್ಟೋ ಪರದೆಗಳು ಮತ್ತು ತಡೆಗಳು ಇರುತ್ತವೆ. ಅಧಿಕಾರದ ಪ್ರಯೋಗವು ನೇರ ಅವಲೋಕನಕ್ಕೆ ಸಿಗುವುದಿಲ್ಲವಾದ್ದರಿಂದ ಶೋಷಕರ ತಂತ್ರವು ಫಲ ನೀಡಲು ಅಡ್ಡಿಯಿಲ್ಲ. ಇದಕ್ಕೆ ಅತಿಸೂಕ್ತ ನಿದರ್ಶನವು ಹಿಟ್ಲರನ ನಾಝಿ ಪಂಥ ಮತ್ತು ಅದಕ್ಕೆ ಹತ್ತಿರ ಬರುವಂತಹ ಬೇರೆ ಪಂಥಗಳ ಆಚರಣೆಯಲ್ಲಿ ಸ್ಪಷ್ಟವಾಗಿ ಕಾಣಸಿಗುತ್ತದೆ. ಸಮುದಾಯದ ಎಲ್ಲ ಸಾಂಸ್ಥಿಕ ರೂಪಗಳಲ್ಲೂ ಅವರ ಆಚರಣೆ ಸಾಂದ್ರವಾಗಿರುತ್ತದೆ. ಶಿಕ್ಷಣ, ನಾಗರಿಕ ಜೀವನ, ಮತಧಾರ್ಮಿಕ ನಂಬುಗೆ, ಇತ್ಯಾದಿಗಳಲ್ಲೆಲ್ಲಾ ಅಧಿಕಾರದ ಚಲಾವಣೆ ಮತ್ತು ಅಧಿಕಾರಕ್ಕೆ ತುತ್ತಾದವರ ಬವಣೆ, ಇವೆರಡರ ನಡುವೆ ದೊಡ್ಡ ಕಂದರವಿರುತ್ತದೆ. ಸೀಮಿತ ವಲಯವಾದರೆ ಒಂದು ಸುಳ್ಳನ್ನು ಬಹುಕಾಲ ಮುಚ್ಚಿಡಲಾಗುವುದಿಲ್ಲ; ಆದರೆ ವಿಶಾಲ ವಲಯದಲ್ಲಿ ಎಂತಹ ಸಾಮಾಜಿಕ ಮೌಢ್ಯವನ್ನಾದರೂ ಒಂದು ಶತಮಾನದ ಕಾಲ ಬೇಕಾದರೂ ಕಾಪಿಡಬಹುದು.

ಇದು ಹಿಂಸೆಗೂ ಅನ್ವಯವಾಗುತ್ತದೆ. ಹಿಂದಿನ ಕಾಲದ ಸನ್ನಿವೇಶವು ಈಗಿಲ್ಲ. 14ನೆಯ ಶತಮಾನದ ಫ್ಲಾರೆನ್ಸ್‌ನಲ್ಲಿ ವೈಯ್ಯಕ್ತಿಕ ನೆಲೆಯಲ್ಲಿ ಇರುತ್ತಿದ್ದ ಹಿಂಸೆಗೆ ಇಂದು ಅವಕಾಶವಿಲ್ಲ. ಆಗ್ಗೆ ಒಂದೊಂದು ಮನೆಯೂ ಒಂದೊಂದು ಕೋಟೆ, ಪ್ರತಿ ಕೋಟೆಗೂ ತನ್ನದೇ ಆರಕ್ಷಕ ದಳ, ಯಾವುದರ ಮೇಲಾದರೂ ಧಾಳಿ ನಡೆಯಬಹುದಿತ್ತು. ನಾಗರಿಕ ಸಮಾಜವು ಹೋರಾಟ ನಡೆಸಿ ಅಂತಹ ಹಿಂಸೆಯನ್ನು ಇಲ್ಲವಾಗಿಸಿದೆ ಇಲ್ಲವೆ ಕಡಿಮೆಗೊಳಿಸಿದೆ. ಹಿಂಸೆಯು ಅನೈತಿಕವೆಂಬ ಕಾರಣದಿಂದ ಅದು ನಶಿಸಲಿಲ್ಲ;

ಹಿಂಸೆಯು ಅಯಶಸ್ವಿಯೆಂಬ ಕಾರಣಕ್ಕೆ ಅದು ಮುದುರಿಬಿತ್ತು. ಸಾಮಾಜಿಕ ನೆಲೆಯಲ್ಲಿ ಕಾನೂನು ಕ್ರಮದ ಇಲ್ಲವೇ ರಾಷ್ಟ್ರೀಯ ಸಂರಕ್ಷಣೆಯ ಹೆಸರಲ್ಲಿ ಈಗಲೂ ಹಿಂಸೆಯನ್ನು ಹರಿಯಬಿಡಲು ಸಾಧ್ಯ. ಅದು ಪೂರ್ತಿ ಅಸಮರ್ಥನೀಯವೂ ಅಲ್ಲ, ನಿಜ; ಆದರೆ ಅವುಗಳ ನೆಪದಲ್ಲಿ ಅಪಾರ ಮೋಸಕೃತ್ಯಗಳು ನಡೆದಿರುವುದೂ ನಿಜ. ದುಡಿಯುವ ಜನರ ಮೇಲೆ ಪೊಲೀಸ್ ಶಕ್ತಿಯ ಪ್ರಯೋಗವು ಅಂತಹ ಒಂದು ಉದಾಹರಣೆ. ಆಕ್ರಮಣಗಳಿಂದ ವಸಾಹತುಗಳನ್ನು ಸ್ಥಾಪಿಸಿಕೊಂಡದ್ದು ಇನ್ನೂ ದೊಡ್ಡ ಉದಾಹರಣೆ. 19ನೆಯ ಶತಮಾನದಲ್ಲಿ ಈ ಕಾರಣಕ್ಕಾಗಿ ಅವೆಷ್ಟು ಯುದ್ಧಗಳು ನಡೆದವು! ಅಂದರೆ, ರಾಷ್ಟ್ರೀಯ ಸಂರಕ್ಷಣೆಯ ಹೆಸರಲ್ಲಿ ಏನೆಲ್ಲಾ ಜರುಗಿಬಿಡಬಹುದಲ್ಲವೆ?

ಈ ವಿಧದ ವಿಶಾಲ ನೆಲೆಯಲ್ಲಿ ಸ್ವಾರ್ಥಪರತೆಗೆ ವಿಜಯದ ಸಾಧ್ಯತೆ ಹೇರಳವಾಗಿದೆ. ಮ್ಯಾಕಿಯಾವೆಲಿಯ ಅನುಯಾಯಿಗೆ ಇಂತಹ ಸಂದರ್ಭದಲ್ಲಿ "ಸಮಗ್ರ ನ್ಯಾಯ" ನೀಡುವ ಅವಕಾಶವು ವಿಪುಲವಾಗಿರುತ್ತದೆ, ಏಕೆಂದರೆ ಪ್ರಭುತ್ವದ ಅಧಿಕಾರ ಯಂತ್ರವು ಅವನ ಕೈಯ್ಯಲಿರುತ್ತದೆ ಮತ್ತು ಸಂವಹನ ಸಾಧನಗಳೂ ಅವನಲ್ಲಿ ಕೇಂದ್ರೀಕೃತವಾಗಿರುತ್ತವೆ. ಅಷ್ಟು ಭೂತಾಕಾರದ ಶಕ್ತಿಯನ್ನು ವಿರೋಧಿಸುವುದಾಗಲಿ, ಸೋಲಿಸುವುದಾಗಲಿ, ಸುಲಭಸಾಧ್ಯವಲ್ಲ. ತನ್ನ ಬಲಿಪಶುಗಳನ್ನು ಪ್ರಭುತ್ವವು ವಿಘಟಿಸಿ ಪರಸ್ಪರ ಕಿತ್ತಾಡುವಂತೆ ಮಾಡಿಬಿಟ್ಟರಂತೂ ಹೇಳುವುದೇ ಬೇಡ. ಎಂಥದೋ ಕಲ್ಪಿತ ಅಸಮಾಧಾನವೇ ಸಾಕು, ಬಲಿಪಶುಗಳ ಅನೈಕ್ಯತೆಯನ್ನು ಪ್ರಭುತ್ವವು ಸುಲಭವಾಗಿ ಸಾಧಿಸಿಬಿಡುತ್ತದೆ. ಅಧಿಕಾರವನ್ನು ಗಟ್ಟಿಗೊಳಿಸಿಕೊಳ್ಳಲು ಅಷ್ಟು ಸಾಕು. ಆದರೆ ಅದು ಸಹ ನಿರಂತರವಾಗಿ ಸಾಗಲಾರದು, ಅಂತಿಮವಾಗಿ ಸೋಲು ಅನಿವಾರ್ಯ. ಪ್ರಸ್ತುತ ಲೇಖಕ 1924ರಲ್ಲಿ ಇಟಲಿಗೆ ಹೋಗಿದ್ದಾಗ ಆಗ ತಾನೆ ಮ್ಯಾತ್ತೆಯೋತ್ತಿಯ ಹತ್ಯೆ ನಡೆದಿತ್ತು ಮತ್ತು ಅಂದಿನ ಫ್ಯಾಸಿಸ್ಟ್ ಆಡಳಿತವು ಅತಂತ್ರ ಸ್ಥಿತಿಯಲ್ಲಿತ್ತು. ಆದಗೆ ಅದರ ಸಮರ್ಥಕರು ತಮ್ಮ ಆಡಳಿತ ನೂರ್ಕಾಲ ಬಾಳುವುದೆಂದು ಭವಿಷ್ಯ ನುಡಿಯುತ್ತಿದ್ದರು. ಹಿಟ್ಲರ್ ಮಾಡಿದ್ದೂ ಅದನ್ನೇ; ಅವನು ತನ್ನ ವ್ಯವಸ್ಥೆಗೆ ಒಂದು ಸಾವಿರ ವರ್ಷ ಕೊಟ್ಟುಕೊಂಡಿದ್ದ. ಇಟಲಿಯಲ್ಲಿ ಸ್ಥಿರತೆಯ ಸೂಚನೆ ಸ್ವಲ್ಪ ಕಾಲವಿತ್ತು. ಆದರೆ ಒಂದು ದಿನ ನ್ಯಾಯವು ಪುನರವತರಿಸಿತು: ಮಿಲಾನಿನ ಒಂದು ಚೌಕದಲ್ಲಿ ಏಪ್ರಿಲ್‌ನ ಒಂದು ದಿನ ಡೂಚೆ ಮುಸ್ಸೋಲಿನಿಯ ಶರೀರವು ನೇಣುಗಂಬದಲ್ಲಿ ಗಾಳಿಗೆ ಅತ್ತಿಂದಿತ್ತ ವಾಲಾಡುತ್ತಿತ್ತು.

ಮ್ಯಾಕಿಯಾವೆಲಿಯ ಅನುಯಾಯಿಗಳು ಕೆಲವೇಳೆ ಹೇಗೋ ತಪ್ಪಿಸಿಕೊಂಡು ವಿಜೃಂಭಿಸುತ್ತಿರುತ್ತಾರೆ; ಅಂದರೆ ಹೊಲ್ಲತಿನ ತರ್ಕವು ಸೋಲು ಉಣ್ಣುವುದಿಲ್ಲ. ಆದಾಗ್ಯೂ, ದುರುಳತನದಿಂದ ಗಳಿಸಿದ ಲಾಭವು ವ್ಯಕ್ತಿತ್ವದ ನಾಶವನ್ನು ತಡೆಯಲಾರದು. ಸದ್ಗುಣಿಯೆಂದು ಹೇಳಿಕೊಳ್ಳುತ್ತಾ ದುರ್ಗುಣಗಳನ್ನು ಪ್ರದರ್ಶಿಸುವುದು ವ್ಯಕ್ತಿತ್ವದ ಅಡಿಪಾಯವನ್ನು ಅಲ್ಲಾಡಿಸುತ್ತದೆ, ವೈಯ್ಯಕ್ತಿಕ ಅಸ್ಥಿರತೆಯು ಹೆಚ್ಚುತ್ತದೆ. ಎಣೆಯಿಲ್ಲದ ಆಸೆಗಳು, ಶಿಸ್ತಿಲ್ಲದ ಜೀವನ, ಎರಡೂ ಸೇರಿ ಜೀವನವನ್ನು ಬಿರುಗಾಳಿಗೆ ಒಡ್ಡುತ್ತವೆ. ನಾಝಿ ನಾಯಕರಾಗಿರಲಿ, ಉಕ್ಕಿನ ಕಾರ್ಖಾನೆಯ ಮಾಲೀಕರಾಗಿರಲಿ, ಮೊದಲು ವ್ಯಕ್ತಿಯೇ ಆಗಿರಬೇಕಲ್ಲವೆ? ಅಂದರೆ, ವ್ಯಕ್ತಿತ್ವವೊಂದಿರಬೇಕು. ಒಂದು ಕಡೆ ಸಾವಿನ ಮನೆಗಳನ್ನು ಕಟ್ಟುವುದು, ಇನ್ನೊಂದು ಕಡೆ ಚಿನ್ನದ ಆಭರಣ ತೊಡುವುದು! ಅದೂ ಒಂದು ಜೀವನವೆ?

ಸ್ವಾರ್ಥಪರತೆಯ ಅನೈತಿಕತೆಯ ಕಟು ವ್ಯಂಗ್ಯವೇನೆಂದರೆ ವಾಸ್ತವ ಮತ್ತು ಕಾರ್ಯಸಾಧುತ್ವದ ಜಾಗದಲ್ಲಿ ಆದರ್ಶ ಮತ್ತು ಪರಿಪೂರ್ಣತೆಯನ್ನು ಆರೋಪಿಸಿಕೊಳ್ಳುವುದು. ಅಮೂರ್ತ ನೈತಿಕ ಸೂತ್ರಗಳನ್ನು ಘೋಷಿಸಿಕೊಳ್ಳುವವರ ಪಾಡೇ ಇದು: ಪರಸ್ಪರ ವಿರೋಧಿ ಸೂತ್ರಗಳು ಘಟನೆಗಳ ಮಹಾಪೂರದಲ್ಲಿ ಕೊಚ್ಚಿಹೋಗುತ್ತವೆ. ಮ್ಯಾಕಿಯಾವೆಲಿ ಹೇಳುತ್ತಾನೆ, "ಬೇರೆಯವರು ಬಲಶಾಲಿಗಳಾಗಲು ಕಾರಣಕರ್ತನಾದವನು ನಾಶವಾಗುತ್ತಾನೆ" ಎಂದು. ಏಕೆ ಹಾಗೆ? ಪ್ರಾಬಲ್ಯ ಗಳಿಸಿಕೊಡುವುದು ಚಾತುರ್ಯ ಇಲ್ಲವೇ ಬಲಾತ್ಕಾರದ ಮೂಲಕ. ಪ್ರಾಬಲ್ಯ ಗಳಿಸಿದವನು ಇವೆರಡನ್ನೂ ಸಂಶಯದಿಂದಲೇ ನೋಡುತ್ತಾನೆ. ಒಂದು ದೃಷ್ಟಾಂತ ನೋಡಿ: ಮುಸ್ಸೋಲಿನಿಯು ಜರ್ಮನಿಯ ಫ್ಯಾಸಿಸ್ಟ್ ಅಧಿಕಾರವನ್ನು ಸುಭದ್ರಗೊಳಿಸಲು ಸಹಕಾರ ನೀಡಿದ. ಮ್ಯಾಕಿಯಾವೆಲಿ ಹೇಳಿದ್ದ ದುರ್ಗತಿಯೇ ಅವನದಾಯಿತು. ಶಿಷ್ಯನು ತನ್ನ ಗುರುವಿನ ಉಪದೇಶವನ್ನು ಮರೆತುಬಿಟ್ಟನೆ? ಅದರಿಂದ ಅವನು ನಾಶವಾದನೆ? ಖಂಡಿತ ಅಲ್ಲ. ಅಧಿಕಾರದ ರಾಜಕೀಯದಲ್ಲಿ ಅಗತ್ಯವೆನಿಸಿದ ಮತ್ತು ಪ್ರಜಾಪ್ರಭುತ್ವ ವಿರೋಧಿ ಫ್ಯಾಸಿಸಂಗೆ ತಕ್ಕುದಾದ ನೀತಿಯನ್ನು ರೂಪಿಸಿಕೊಳ್ಳುವ ಅಗತ್ಯವಿತ್ತು. ಮ್ಯಾಕಿಯಾವೆಲಿ ಹೇಳಿದ್ದು ಒಂದೇ, ಎರಡೇ! ಒಂದನ್ನು ಸರಿದೂಗಿಸಲು ಇನ್ನೊಂದನ್ನು ಬಿಡಬೇಕಾಯಿತು. ಅವು ಪರಸ್ಪರ ವಿರೋಧಿ ನೀತಿಗಳು, ಅವುಗಳಲ್ಲಿ ಒಂದರ ಆಯ್ಕೆ ಮಾಡಿಕೊಳ್ಳಬೇಕಾಗಿತ್ತು. ಬೇರೆ ರೀತಿಯ ಆಯ್ಕೆ ಮಾಡಿಕೊಂಡಿದ್ದರೆ ಅವನು ಬೇರೊಂದು ಅವಗಢಕ್ಕೆ ಸಿಕ್ಕಿಬೀಳುತ್ತಿದ್ದ, ಅಷ್ಟೆ. ಅಂದರೆ, ಮ್ಯಾಕಿಯಾವೆಲಿಯ ಎಲ್ಲ ನೀತಿಗಳನ್ನೂ ಏಕಕಾಲಕ್ಕೆ ಅನುಸರಿಸಲಾಗುವುದಿಲ್ಲ. ಏನೋ ಮಾಡಬೇಕು, ಆದರೆ ಪೀಡಕ ಸರ್ವಾಧಿಕಾರಿಯಾಗಿ ಉಳಿಯಲು ಅದನ್ನು ಮಾಡಲಾಗದು. ಅದೇ ಇಬ್ಬಂದಿ. ಸ್ವತಃ ಮ್ಯಾಕಿಯಾವೆಲಿಯೇ ಹೇಳಿದ್ದ: "ಎದುರಿಸಬೇಕಾಗಿರುವ ಕಷ್ಟಗಳನ್ನು ಭಿನ್ನೈಸಿ ನೋಡಲು ಬುದ್ಧಿವಂತಿಕೆ ಬೇಕು ಮತ್ತು ಕೆಡುಕುಗಳಲ್ಲಿ ಯಾವುದು ಕಡಿಮೆ ಮಟ್ಟದ್ದೋ ಅದನ್ನು ಆರಿಸಿಕೊಳ್ಳಬೇಕು." ಕಡಿಮೆ ಮಟ್ಟದ ಕೆಡುಕು ಮತ್ತು ನಿಶ್ಚಿತವಾದ ಒಳಿತು, ಇವುಗಳಲ್ಲಿ ಮೊದಲನೆಯದನ್ನು ಆಯ್ಕೆ ಮಾಡಿಕೊಂಡರೆ ಅದಕ್ಕೆ ಕಾರಣ ತಕ್ಷಣದ ವಿಪತ್ತಿನಿಂದ ಪಾರಾಗುವುದೇ ಆಗಿರುತ್ತದೆ. ವಿಪತ್ತಿನ ನಿರ್ಮಾತೃವು ಸ್ವತಃ ಆ ವ್ಯಕ್ತಿಯೇ. ಅವನ ಕುತಂತ್ರ ಮತ್ತು ಪ್ರಾಬಲ್ಯದಿಂದ ರೋಸಿಹೋದವರೆಲ್ಲಾ ಅವನನ್ನು ಉಚ್ಚಾಟಿಸಲು ಜೊತೆಗೂಡಿರುತ್ತಾರೆ. ನಾಜ಼ಿಗಳೆಂದೂ ಬ್ರಿಟನ್ – ಅಮೆರಿಕಾ – ಸೋವಿಯೆತ್ ಒಕ್ಕೂಟ ಕೂಡಿಬರಬಹುದೆಂಬುದನ್ನು ನಿರೀಕ್ಷಿಸಿರಲಿಲ್ಲ. ಅವರ ನಡುವಿನ ಸೈದ್ಧಾಂತಿಕ ಭಿನ್ನತೆ ಅಷ್ಟು ತೀವ್ರವಾಗಿತ್ತು. ಆದರೆ ಹಿಟ್ಲರನ ಪಾತಕಗಳು ಅಂಥವರನ್ನೂ ಒಗ್ಗೂಡಿಸಿತು. ನಾಜ಼ಿ ನೀತಿಗಳು ನಾಜ಼ಿ ಆಡಳಿತದ ವಿರುದ್ಧ ಸಾಮೂಹಿಕ ರಕ್ಷಣೆಗಾಗಿ ಒಕ್ಕೂಟವನ್ನು ಪ್ರೇರೇಪಿಸಿತು. ಯುದ್ಧಕ್ಕೆ ಮುನ್ನ ಅಂತಹ ಸಾಧ್ಯತೆಯನ್ನು ಯಾರೂ ಮನಗಂಡಿರಲಿಲ್ಲ.

ಸಮಸ್ಯೆಯ ಕೊನೆ:

ಸ್ವಾರ್ಥಪರತೆಯ ಕಾರ್ಯಸಾಧುತ್ವವನ್ನು ಈವರೆಗೆ ಪರಿಶೀಲಿಸಿದ್ದೇವೆ. ಅದನ್ನು ಸಾಧಿಸಿದವರು ಅತಿವಿರಳ; ಅಲ್ಲದೆ, ಸಾಧನೆಯು ಚಿರವಾದುದೂ ಅಲ್ಲ. ಸ್ವಾರ್ಥದ

ಸಿದ್ಧಾಂತದಲ್ಲಿ ಆಂತರಿಕ ವೈರುಧ್ಯವಿರುವುದರಿಂದ ಎಲ್ಲೆಲ್ಲೂ ಅದರ ಅನ್ವಯವು ಸಾಧ್ಯವಿಲ್ಲ; ಅನ್ವಯಿಸ ಹೊರಟವರ ವ್ಯಕ್ತಿತ್ವವು ಛಿದ್ರಗೊಳ್ಳುವುದು ಖಚಿತ. ಮುಸ್ಸೋಲಿನಿ ಅರಚುತ್ತಿದ್ದ: "ಶತಮಾನದ ಕಾಲ ಕುರಿಯಾಗಿರುವುದಕ್ಕಿಂತ ಒಂದು ದಿನದ ಮಟ್ಟಿಗೆ ಸಿಂಹವಾಗಿರುವುದು ಮೇಲು", ಎಂದು. ಕೋಮೋ ಬೆಟ್ಟಗಳಲ್ಲಿ ಅವನ ಹಂತಕನನ್ನು ಎದುರಾದಾಗ ಅವನು ಕುರಿಯಾಗಿ ಶೀಘ್ರ ಪರಿವರ್ತನೆ ಹೊಂದಲು ಅಂಜಲಿಲ್ಲ.

ಕಾರ್ಯಸಾಧುತ್ವವೊಂದೇ ಸಾಮಾಜಿಕ ಪ್ರಜ್ಞಾವಂತಿಕೆ ಮತ್ತು ಸ್ವಾರ್ಥಪರತೆಯ ನಿರ್ಣಾಯಕ ಅಂಶವಲ್ಲ. ಎರಡನ್ನೂ ಸಾಧಿಸುವುದಂತೂ ಸಾಧ್ಯವಿಲ್ಲ. ಆದ್ದರಿಂದ ನಮ್ಮೆದುರಿನ ಪ್ರಶ್ನೆ ಇದು: ಒಂದು ಇನ್ನೊಂದಕ್ಕಿಂತಲೂ ಏಕೆ ಉತ್ತಮ? ಕರ್ತೃವಿಗೆ ಅದರಿಂದ ಸ್ವಲ್ಪ ಹಿನ್ನಡೆ ಉಂಟಾಗುವುದಾದರೂ ಸಾಮಾಜಿಕ ಒಳಿತನ್ನು ಉಂಟುಮಾಡುವ ಕ್ರಿಯೆಯು ಉತ್ತಮ. ಇದೊಂದು ವಿಚಿತ್ರ ಸಮಸ್ಯೆ. ನೈತಿಕತೆಯ ಸಿದ್ಧಾಂತಗಳು ಹಲವು ಶತಮಾನಗಳಿಂದ ಪ್ರಚಲಿತವಾಗಿವೆ. (ಭಾರತಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಋಗ್ವೇದದ ವರುಣನ ಕಾಲದಿಂದ ಇದು ಚರ್ಚೆಯ ವಿಷಯವಾಗಿದೆ. –ಅನು.) ಆದರೆ ಇಷ್ಟು ಶತಮಾನಗಳಲ್ಲಿ ಯಾರೊಬ್ಬರೂ ಒಳಿತಿನ ಬಗೆಗಿನ ತಮ್ಮ ಸಿದ್ಧಾಂತವೇ ಅತಿಮಾನ್ಯವೆಂದು ಸಾಧಿಸಿ ತೋರಿಸಲು ಸಾಧ್ಯವಾಗಿಲ್ಲ. ಅಂದರೆ, ಸಮಸ್ಯೆಯನ್ನು ಹಳೆಯ ಹಾದಿಯಲ್ಲಿ ಸಾಗಿ ಪರಿಹರಿಸಲು ಸಾಧ್ಯವಿಲ್ಲ; ಹೊಸದೊಂದು ಹಾದಿಯನ್ನು ಹುಡುಕಿಕೊಳ್ಳಬೇಕು. ನಾವು ಅದಕ್ಕೆ ಯತ್ನಿಸಬಹುದೇನೋ!

ಮೊದಲ ಪ್ರಶ್ನೆ, ಸಮಸ್ಯೆ ಉದ್ಭವಿಸುವುದೆಂತು ಎಂಬುದು. ಅದು ತಮಾಷೆಯ ವಿಷಯವಲ್ಲ. ತನ್ನ ಲಾಭವೋ ಅಥವಾ ತನ್ನ ಸಹಜೀವಿಗಳ ಲಾಭವೋ, ಯಾವುದನ್ನು ಅರಸಬೇಕು? ಎರಡನ್ನೂ ಸಾಧಿಸಲು ಸನ್ನಿವೇಶವು ಸಜ್ಜಾಗಿಲ್ಲ ಎಂಬ ಕಾರಣಕ್ಕೆ ಈ ದ್ವಂದ್ವ ಏರ್ಪಟ್ಟಿದೆ. ಎರಡನ್ನೂ ಮಾಡಲು ಸಾಧ್ಯವಾಗುವುದಾದರೆ, ಎರಡೂ ಪರಸ್ಪರ ವಿರೋಧವಲ್ಲದಿದ್ದರೆ, ಸಮಸ್ಯೆಯು ಉದ್ಭವಿಸುವುದಿಲ್ಲ. ಬೇರೆ ಯಾರಿಗೂ ತೊಂದರೆ ಉಂಟಾಗುವುದಿಲ್ಲವೆಂಬ ದೃಢ ಭಾವನೆಯಿಂದ ತನ್ನ ಆಶಯಗಳನ್ನು ವ್ಯಕ್ತಿಯು ಪೂರೈಸಿಕೊಳ್ಳಲು ಅಡ್ಡಿಯಿಲ್ಲ. ತನ್ನಿಂದ ಇತರರಿಗೆ ಸಹಾಯವಾಗುತ್ತಿದೆಯೆಂಬ ಭಾವನೆಯೂ ಸಾಧ್ಯ. ಹಾಗಿದ್ದರೆ, ಒಬ್ಬರ ಲಾಭವು ಇತರರಿಗೆ ನಷ್ಟ ಉಂಟಾಗಲು ಕಾರಣವಾಗುವುದು ಕೆಲವು ನಿರ್ದಿಷ್ಟ ಸಾಮಾಜಿಕ ಸನ್ನಿವೇಶಗಳಿಂದಲೇ ಇರಬೇಕು. ಅಂತಹ ಸನ್ನಿವೇಶಗಳು ಎರಡು: (ಅ) ಸರಕುಗಳು ಮತ್ತು ಸೇವೆಗಳ ಕೊರತೆ, ಮತ್ತು (ಆ) ಒಂದು ಗುಂಪಿನ ಜನರಿಂದ ಇನ್ನೊಂದು ಗುಂಪಿನವರ ಶೋಷಣೆ. ಇವನ್ನು ಇನ್ನೂ ಸ್ವಲ್ಪ ಪರಿಶೀಲಿಸೋಣ.

(ಅ) ಕೊರತೆ ಎಂದರೆ ಸಮಾಜ ಎಲ್ಲ ಮಂದಿಗೂ ತೃಪ್ತಿ ನೀಡುವಷ್ಟು ಸರಕುಗಳು ಮತ್ತು ಸೇವೆಗಳು ಲಭ್ಯವಿಲ್ಲವೆಂದರ್ಥ. ಮನೆ, ಬಟ್ಟೆ, ಆಹಾರ, ವೈದ್ಯಕೀಯ ಸೌಲಭ್ಯ, ಶಿಕ್ಷಣ, ಇತ್ಯಾದಿಗಳು ಸಾಕಷ್ಟಿಲ್ಲದಾಗ ಎಲ್ಲರಿಗೂ ಎಷ್ಟು ಬೇಕೋ ಅಥವಾ ಅವಶ್ಯಕವೋ ಅಷ್ಟು ದೊರೆಯಲಾರದು. ಈ ಕೊರತೆಯನ್ನು ಇನ್ನೊಂದು ರೀತಿ ಹೇಳಬಹುದು: ಈ ಸರಕು ಮತ್ತು ಸೇವೆಗಳು ಕೆಲವರ ಸ್ವಾಧೀನದಲ್ಲಿರುವುದರಿಂದ ಬೇರೆಯವರಿಗೆ ಅವು ಇಲ್ಲವಾಗಿವೆ. ಅವನ್ನು ಹೊಂದಿರುವವರು ಯಾವತ್ತೂ

ಅವನ್ನು ತಮ್ಮಲ್ಲಿರಿಸಿಕೊಳ್ಳಲು ಸಹಜವಾಗಿಯೇ ಬಯಸುತ್ತಾರೆ; ಹೊಂದಿಲ್ಲದವರು ಅಷ್ಟೇ ಸಹಜವಾಗಿ ಅವನ್ನು ಪಡೆಯಲು ಆಶಿಸುತ್ತಾರೆ. ಇದರಿಂದ ಸ್ಪರ್ಧೆಯುಂಟಾಗುತ್ತದೆ; ಕೆಲವೇಳೆ ತೀವ್ರವಾಗಿ, ಇನ್ನು ಕೆಲವೇಳೆ ಹಿಂಸಾತ್ಮಕವಾಗಿ. ಸರಕು ಮತ್ತು ಸೇವೆ ಹೇರಳವಾಗಿದ್ದರೆ ತೀವ್ರತೆ ಇಲ್ಲವೇ ಹಿಂಸೆ ಅನಗತ್ಯ. ಬೇಕಾಗುವಷ್ಟು ಆಹಾರ ಒಬ್ಬನಲ್ಲಿದ್ದರೆ ಬೇರೆಯವರ ಆಹಾರವನ್ನು ಕಸಿಯುವ ಪ್ರಮೇಯವಿಲ್ಲ. ಅಗತ್ಯವಿದ್ದಾಗೆಲ್ಲಾ ಸಂಗ್ರಹ ಮಾಡಿಕೊಳ್ಳಲು ಅಡ್ಡಿಯಿಲ್ಲ.

ಆದರೆ ಇಂದು ಪರಿಸ್ಥಿತಿ ಹಾಗಿಲ್ಲ. ಅಗತ್ಯವಿರುವುದೆಲ್ಲಾ ಎಲ್ಲರಿಗೂ ದೊರೆಯುವುದಿಲ್ಲ; ಹಾಗಿರುವಾಗ ಆಶಿಸಿದ್ದನ್ನೆಲ್ಲಾ ಪಡೆಯುವುದು ದೂರದ ಮಾತು. ಏಕೆ ತಾನೆ ಕೆಲವರು ಭೋಗಿಸಬೇಕು, ಇತರರು ನೋಡುತ್ತಿರಬೇಕು? ಹೆಚ್ಚು ಪಡೆದವರನ್ನು ಕಂಡು "ಇದೆಲ್ಲಾ ಮಾನವ ಸಹಜವಾದ್ದು" ಎನ್ನುತ್ತಾರೋ ಅಥವಾ ಮುನ್ನುಗ್ಗಿ ತಾವೂ ಬಾಚಿಕೊಳ್ಳುತ್ತಾರೋ? ಈ ಬಗ್ಗೆ ಚಿಂತನೆ ನಡೆಸ ಹೊರಟರೆ ಮ್ಯಾಕಿಯಾವಿಲೆಯ ಮಾತು ನೆನಪಿಗೆ ಬರುತ್ತದೆ: "ಹೊಂದಲು ಆಶಿಸುವುದು ನಿಜಕ್ಕೂ ಸಹಜ ಮತ್ತು ಸಾಮಾನ್ಯ; ಸಾಧ್ಯವಾದಾಗಲೆಲ್ಲ ಮಾನವ ಹಾಗೆ ತನಗೆ ಬೇಕಾದ್ದನ್ನು ಹೊಂದುತ್ತಿರುತ್ತಾನೆ." ಯಶಸ್ವಿಯಾದರೆ ಸಂರಕ್ಷಣೆಯ ಭಾವ, ಸೋತರೆ ಬಡತನ, ಕಾಯಿಲೆ ಮತ್ತು ಸಾವು. ಹೀಗಿದ್ದರೆ ಸಾಮಾಜಿಕ ಪ್ರಜ್ಞೆಯನ್ನು ಪ್ರೇರೇಪಿಸಲು ಎಂತಹ ವಾದ ಸಾಧ್ಯ? ಲಿಂಕನ್ ಸ್ಟಿಫೆನ್ಸ್ ಹೇಳಿದ್ದ: "ಮನುಷ್ಯನನ್ನು ಭ್ರಷ್ಟನಾಗಿಸಿದ್ದು ಸರ್ಪವಲ್ಲ, ಬದಲಾಗಿ ಸೇಬುಹಣ್ಣು." (ಸ್ವರ್ಗದಲ್ಲಿ ಆಡಮ್ ಮತ್ತು ಈವ್ ಸುಖವಾಗಿ ಬಾಳುವೆ ನಡೆಸುತ್ತಿದ್ದಾಗ ಆದಿಮಾನವ ಆಡಂ, ಹೊಲ್ಲತಿನ ಪ್ರತಿನಿಧಿಯಾದ ಸರ್ಪದ ಪ್ರೇರಣೆಯಿಂದ ಕೀಳಬಾರದಿದ್ದ ಸೇಬು ಕಿತ್ತು ಪಾಪವನ್ನು ಮಾನವ ಜನಾಂಗಕ್ಕೆ ಹೊರಿಸಿದನೆಂಬುದು ಕ್ರೈಸ್ತಮತದ ಒಂದು ಪುರಾಣ ಕತೆ. –ಅನು.)

(ಆ) ಎರಡನೆಯ ವಿಷಯ ಶೋಷಣೆ. ಬೇರೆಯವರ ದುಡಿಮೆಯ ಫಲವನ್ನು ದುಡಿಮೆಗೆ ಸರಿಯಾದ ಸರಿದೂಗಿಸುವಿಕೆ ಇಲ್ಲದೆ ಪಡೆಯುವುದನ್ನು ಶೋಷಣೆ ಎನ್ನುತ್ತೇವೆ. ಶೋಷಿತ ವ್ಯಕ್ತಿಯು ದುಡಿಮೆಯ ಸ್ವಲ್ಪ ಸಮಯವನ್ನು ತನಗಾಗಿ ಮೀಸಲಿಡುತ್ತಾನೆ, ಉಳಿದ ಸಮಯದಲ್ಲಿ ಇತರರಿಗಾಗಿ ದುಡಿಯುತ್ತಾನೆ. ಆ 'ಇತರ' ಎಂಬುವನು ಇಡೀ ಸಮಾಜವಾಗುವ ಬದಲು ಒಬ್ಬ ಯಜಮಾನ ಆಗಿಬಿಟ್ಟಿರುತ್ತಾನೆ. ಪ್ರಾಚೀನ ಪ್ರಪಂಚದಲ್ಲಿ ಗುಲಾಮರ ದುಡಿಮೆಯಿಂದ ಗುಲಾಮರ ಮಾಲೀಕರು ಶ್ರೀಮಂತರಾದರು. 18–19ನೆಯ ಶತಮಾನಗಳಲ್ಲಿ ಅಮೆರಿಕಾದ ದಕ್ಷಿಣ ರಾಜ್ಯಗಳಲ್ಲಿ ಕೂಡ ಅದೇ ನಡೆದಿತ್ತು. ಮಧ್ಯಕಾಲೀನ ಯುಗದಲ್ಲಿ ಜಮೀನ್ದಾರರು ಊಳಿಗದವರ ದುಡಿಮೆಯಿಂದ ಶ್ರೀಮಂತರಾದರು. ಆಧುನಿಕ ಸಮಾಜದಲ್ಲಿ ಉದ್ಯಮಿಗಳು ತಮ್ಮ ನೌಕರರ ದುಡಿಮೆಯಿಂದಾಗಿ ಲಾಭ ಮಾಡಿಕೊಳ್ಳುತ್ತಾರೆ.

ಇಲ್ಲೆಲ್ಲಾ ಎರಡು ಬಣಗಳ ಹಿತಾಸಕ್ತಿಗಳಲ್ಲಿ ವೈರುಧ್ಯವಿದೆ. ಲಾಭವನ್ನು ಮಾಡಿಕೊಳ್ಳದೆ ಉದ್ಯಮಿಗೆ ಅಸ್ತಿತ್ವವಿರುವುದಿಲ್ಲ ಮತ್ತು ದೊಡ್ಡ ಪ್ರಮಾಣದಲ್ಲಿ ಲಾಭ ಪಡೆಯದಿದ್ದರೆ ಭದ್ರತೆ ಇಲ್ಲ. ಲಾಭ ಹೆಚ್ಚಿಸಿಕೊಳ್ಳಲು ಎರಡು ಮಾರ್ಗಗಳಿವೆ: ಕೂಲಿಯನ್ನು ಕಡಿಮೆ ಮಾಡುವುದು ಮತ್ತು ಸರಕುಗಳ ದರ ಹೆಚ್ಚಿಸುವುದು. ಎರಡರಲ್ಲಿ ಯಾವ ಕ್ರಮ

ಅನುಸರಿಸಿದರೂ ಪರಿಣಾಮವು ದುಡಿಯುವವರ ಜೀವನಕ್ಕೆ ಹಾನಿಯೇ. ದುಡಿಯುವವರ ಜೀವನವು ಉತ್ತಮವಾಯಿತೆಂದರೆ ಉದ್ಯಮಿಯ ಲಾಭ ಕಡಿಮೆಯಾಗಿರಲೇಬೇಕು. ಈ ಎರಡು ಗುಂಪುಗಳು ಕೇವಲ ವೈಯ್ಯಕ್ತಿಕ ದುರಾಸೆಯಿಂದ ಸೆಣಸುತ್ತವೆಂಬುದು ತಪ್ಪು ಗ್ರಹಿಕೆ. ವ್ಯವಸ್ಥೆ ಹಾಗಿದೆ, ಅದರಲ್ಲಿ ಉದ್ಯಮಿ ಮಾಡಬೇಕಾದ್ದನ್ನು ಮಾಡುತ್ತಾನೆ, ಅಷ್ಟೆ. ಹಾಗೆ ಮಾಡದಿದ್ದರೆ ಅವನಿಗೆ ಉದ್ಯಮಿಯಾಗಿ ಉಳಿಗಾಲವಿಲ್ಲ. ದುಡಿಮೆಗಾರನೂ ಅಷ್ಟೆ. ತಾನು ಮಾಡಬೇಕಾದ್ದನ್ನು ಮಾಡದಿದ್ದರೆ ಅವನ ಅಸ್ತಿತ್ವಕ್ಕೆ ಚ್ಯುತಿ ಬರುತ್ತದೆ. ಉದ್ಯಮಿಗೆ ತನ್ನ ಸಾಮಾಜಿಕ ಪಾತ್ರದ ಕಾಳಜಿ, ದುಡಿಮೆಗಾರನಿಗೆ ಅಸ್ತಿತ್ವದಲ್ಲಿದ್ದು ಜೀವನ ಹೊರೆಯುವ ಕಾಳಜಿ.

ಇಂತಹ ಆರ್ಥಿಕ ಸನ್ನಿವೇಶದಲ್ಲಿ ಸಾಮಾಜಿಕ ಪ್ರಜ್ಞೆಯ ಔನ್ನತ್ಯವನ್ನು ಸಾರುವುದು ಬಹಳ ಕಷ್ಟ. ಮಾನವಿಕ ಕಳಕಳಿ, ವೈಯ್ಯಕ್ತಿಕ ಸುಧಾರಣೆ, ಅಂತಃಪ್ರಜ್ಞೆಯ ಮೂಡುವಿಕೆ, ಇವೆಲ್ಲಾ ಸಂಘರ್ಷವನ್ನು ಸ್ವಲ್ಪ ಕಡಿಮೆಗೊಳಿಸಬಹುದು; ಆದರೆ ಸಂಘರ್ಷವೇ ಇಲ್ಲವಾಗುವುದಿಲ್ಲ. ಸಂಘರ್ಷವು ಇಲ್ಲವಾಗಬೇಕಾದರೆ ಸಂಘರ್ಷವನ್ನು ಹುಟ್ಟುಹಾಕಿದ ಸನ್ನಿವೇಶಗಳನ್ನು ರದ್ದುಮಾಡಬೇಕು.

ಹಾಗಿದ್ದರೆ ಸಮಸ್ಯೆಯ ಪರಿಹಾರ ಹೇಗೆ? ಸಮಸ್ಯೆಯು ಕೇವಲ ಸೈದ್ಧಾಂತಿಕವಾಗಿದ್ದರೆ ಅದನ್ನು ಅದರ ಭಾಗಗಳಾಗಿ ವಿಭಜಿಸಿ, ಒಂದು ನಿರ್ದಿಷ್ಟ ವ್ಯವಸ್ಥೆಯನ್ನಾಗಿ ಮತ್ತೆ ಕೂಡಿಸಬಹುದಿತ್ತು. ಆದರೆ ಇದು ಪ್ರಯೋಗಾತ್ಮಕ ಸಮಸ್ಯೆ; ಆದ್ದರಿಂದ ಸಮಸ್ಯೆಯನ್ನು ಇಲ್ಲವಾಗಿಸುವುದೊಂದೇ ಅದಕ್ಕಿರುವ ಪರಿಹಾರ. ನಾನು ನ್ಯೂಯಾರ್ಕಿಗೆ ಹೋಗಬೇಕೆಂಬ "ಸಮಸ್ಯೆ" ಎದುರುಬಂದರೆ ನಾನು ಬಸ್ಸು, ಕಾರು, ರೈಲು, ಕಾಲ್ನಡಿಗೆ, ಹೀಗೆ ಯಾವುದಾದರೊಂದನ್ನು ಅಥವಾ ಎಲ್ಲವನ್ನೂ ಆಶ್ರಯಿಸಬೇಕು; ಇಲ್ಲದಿದ್ದರೆ ನ್ಯೂಯಾರ್ಕಿಗೆ ಹೋಗದೆ ಉಳಿಯಬೇಕು.

ಈಗ ಎರಡುಸಾವಿರದ ಐನೂರು ವರ್ಷಗಳಿಂದ ಸ್ವಾರ್ಥಪರತೆ ಮತ್ತು ಸಾಮಾಜಿಕ ಪ್ರಜ್ಞೆ ಎಂಬುವನ್ನು ಅವು ಕೇವಲ ಸೈದ್ಧಾಂತಿಕ ಸಮಸ್ಯೆಗಳೆಂಬಂತೆ ಪರಿಗಣಿಸುತ್ತಾ ಬರಲಾಗಿದೆ. ಉತ್ತರವಿನ್ನೂ ದೊರೆತಿಲ್ಲ. ಸೋಲು ಒಪ್ಪಿಕೊಳ್ಳಬೇಕಾಗಿದೆ. ಸೋತಿರುವುದಕ್ಕೆ ಕಾರಣ ಸಮಸ್ಯೆಯು ಕೇವಲ ಸೈದ್ಧಾಂತಿಕವಾಗಿರದೆ ಅದು ಪ್ರಯೋಗಾತ್ಮಕವಾಗಿರುವುದು. ಹೊಸಹೊಸ ನೈತಿಕ ತತ್ತ್ವಶಾಸ್ತ್ರಗಳನ್ನು ನಿರ್ಮಿಸುವುದರಿಂದ ಪರಿಹಾರ ದೊರೆಯುವುದಿಲ್ಲ; ಪರಿಹಾರ ದೊರೆಯುವುದು ನವ ಸಮಾಜದ ನಿರ್ಮಾಣದ ಮೂಲಕವೇ. ಪ್ರತಿಯೊಂದು ಕಾರ್ಯಕ್ರಮ, ಪ್ರತಿಯೊಂದು ನೀತಿ, ಪ್ರತಿಯೊಂದು ಕ್ರಿಯೆ ಆ ನವ ಸಮಾಜದ ನಿರ್ಮಾಣವನ್ನು ಕೇಂದ್ರವಾಗಿಟ್ಟುಕೊಳ್ಳಬೇಕು. ಸಮಸ್ಯೆಯ ಪರಿಹಾರಕ್ಕೆ ಇವೆಲ್ಲಾ ಒಂದೊಂದೂ ಮಹತ್ವದ ಕಾಣಿಕೆಗಳಾಗುತ್ತವೆ.

ಸರಕುಗಳು ಮತ್ತು ಸೇವೆಗಳು ಸಮೃದ್ಧವಾಗಿ ದೊರಕುವಂತಹ ಸ್ಥಿತಿಗೆ ಮನುಕುಲವು ತಲುಪಿದಾಗ ಮತ್ತು ಶೋಷಣೆಯು ಅಂತ್ಯವಾದಾಗ ಪರಸ್ಪರರ ಕಲ್ಯಾಣವು ವೈರುಧ್ಯಗಳಿಂದ ಕೂಡಿರಬೇಕಾಗಿಲ್ಲ. ಹಾಗಾದಾಗ ಸ್ವಾರ್ಥಪರತೆಗೆ ಇನ್ನೇನು ಕೆಲಸ ಉಳಿದಿರುತ್ತದೆ! ಕೆಲಸವಿಲ್ಲದಾಗ ಅದು ನಮ್ಮ ಸಮಸ್ಯೆಯನ್ನೂ ಜೊತೆಮಾಡಿಕೊಂಡು ನಶಿಸಿಹೋಗುತ್ತದೆ. ಸಮಾಜ ಪರವಾದ ಕಾಳಜಿಗೆ ಅಂತಿಮವಾಗಿ ತತ್ತ್ವಶಾಸ್ತ್ರೀಯ ಸಮರ್ಥನೆ ಏನೆಂದರೆ ಅದು ಮಾತ್ರವೇ ಇಡೀ ಸಮಸ್ಯೆಗೆ ಪರಿಹಾರ ಒದಗಿಸುತ್ತದೆ

ಎಂಬುದು. ಅಂತೆಯೇ, ಸ್ವಾರ್ಥಪರತೆಯ ಅಂತಿಮ ಖಂಡನೆ ಏನೆಂದರೆ ಅದು ಸಮಸ್ಯೆಯನ್ನು ಪರಿಹರಿಸಲು ಎಂದೆಂದಿಗೂ ಸಮರ್ಥವಲ್ಲವೆಂಬುದು.

ನಾವು ಗುರಿಯನ್ನು ಮುಟ್ಟಬಲ್ಲೆವೆ? ನಾವು ಮತ್ತು ನೀವು ಇಂದು ಅಥವಾ ನಾಳೆ ಮುಟ್ಟಲಾರೆವೇನೊ; ಅದಕ್ಕೆ ಇಂದಿನ ನಮ್ಮ ಜಗತ್ತಿನ ದ್ವಂದ್ವಗಳು ಕಾರಣ. ಈ ಹೆಣಭಾರವನ್ನು ಸ್ವಲ್ಪ ಕಡಿಮೆಗೊಳಿಸುವುದು ನಮ್ಮ ಸಾಮರ್ಥ್ಯಕ್ಕೆ ಎಟಕುವಂಥದು. ಅದರಿಂದ ಕ್ರಮೇಣ ನಮ್ಮ ಮುಂದಿನ ಪೀಳಿಗೆಯವರು ಬೆಳಕನ್ನು ಕಾಣುವಂತಾಗುತ್ತದೆ. ನಾವು ಗುರಿಯನ್ನು ಮುಟ್ಟದಿದ್ದರೂ ಮನುಕುಲವು ಖಂಡಿತವಾಗಿಯೂ ಮುಟ್ಟುತ್ತದೆ. ಪರಮಾಣು ಶಕ್ತಿಯನ್ನು ಅಳವಡಿಸುವ ಮುನ್ನವೂ ಸಮೃದ್ಧಿಯು ಅಸಾಧ್ಯವಾದುದೇನೂ ಆಗಿರಲಿಲ್ಲ; ಈಗಂತೂ ಸಮೃದ್ಧಿಯ ಸಾಧ್ಯತೆಗಳು ಎಣೆಯಿಲ್ಲದಷ್ಟು ವಿಪುಲವಾಗಿವೆ. ಶೋಷಣೆಯು ಸದಾಕಾಲಕ್ಕೂ ಜೀವಂತವಾಗಿರಬೇಕಾಗಿಲ್ಲ. ಮನುಕುಲವು ಗುಲಾಮಗಿರಿಯನ್ನು, ಊಳಿಗಮಾನ್ಯತೆಯನ್ನು, ತೊಡೆದುಹಾಕಿದೆ; ರಾಜಕೀಯ ಪ್ರಜಾಪ್ರಭುತ್ವವನ್ನು ಆಚರಣೆಗೆ ತರಲು ಕಲಿತಿದೆ, ಪ್ರಾಯೋಗಿಕವಾಗಿ ಮಾಡಿ ತೋರಿಸಿದೆ. ಹಾಗಿರುವಾಗ ಮನುಕುಲವು ತನ್ನ ಸಾಮಾಜಿಕ ಗುರಿಯನ್ನು ತಲುಪಲು ಅಡೆತಡೆಗಳನ್ನು ನಿವಾರಿಸಿಕೊಳ್ಳದೆ ಹೋಗಬೇಕೇಕೆ? ಅದೊಂದು ಕಾಲ್ಪನಿಕ ಕನಸು, ಕಟ್ಟುಕತೆ ಎಂದು ತೋರಬಹುದು, ಆದರೆ ಇದಕ್ಕಿಂತಲೂ ಹೆಚ್ಚು ಕಾಲ್ಪನಿಕವಾಗಿದ್ದ ಕಟ್ಟುಕತೆಗಳು ನಿಜಕ್ಕೂ ವಾಸ್ತವವಾಗಿ ಜೀವ ಪಡೆದಿವೆ. ಮನುಕುಲದ ಅಪ್ರತಿಮ ಸಾಹಸದ ಇತಿಹಾಸ ಅದು.

ನಿದ್ದೆಯಲ್ಲಿ ಜನ ಕಾಣುವ ಕನಸುಗಳು ಕೇವಲ ಮಂಜು ಮತ್ತು ನೆರಳು. ಎಚ್ಚೆತ್ತಿರುವಾಗ ಜನ ಕಾಣುವ ಕನಸುಗಳು ಪ್ರಪಂಚದ ವಾಸ್ತವ ಸಂಗತಿಗಳಾಗಬಲ್ಲವು.

❑❑

9. ಸಮಸ್ಯೆಗಳು ಎಂಬುವೆಲ್ಲಾ ಬಾಯಿಮಾತು ಅಷ್ಟೇ!

ಯೂರೋಪಿನ ಚರಿತ್ರೆಯಲ್ಲಿ 1930ರ ದಶಕವು ಆರಂಭವಾದ್ದು ಹಸಿವಿನಲ್ಲಿ ಮತ್ತು ಕೊನೆಗೊಂಡದ್ದು ಯುದ್ಧದಲ್ಲಿ. ಮೊದಲು, ಜನ ಸಾಲಿನಲ್ಲಿ ನಿಂತು ಸರದಿ ಪ್ರಕಾರ ಹೊಟ್ಟೆಗೆ ಹಿಟ್ಟು ಪಡೆದುಕೊಂಡರು, ಆಮೇಲೆ ಕಾರ್ಖಾನೆಗಳು ಮತ್ತು ದೊಡ್ಡ ಮಾರಾಟ ಮಳಿಗೆಗಳೆದುರು ಪ್ರತಿಭಟನೆ ನಡೆಸಿದರು; ಕಡೆಗೆ ಟ್ರಕ್ಕುಗಳನ್ನೇರಿ ಯುದ್ಧಭೂಮಿಗಳ ಕಡೆಗೆ ಸಾಗಿದರು. 1930ರ ದಶಕವು ಸಾಮಾಜಿಕ ಬದಲಾವಣೆಗಳ ಯುಗ; ಅದಕ್ಕೆ ಮುಂಚೆಯೂ ಬದಲಾವಣೆ ಇತ್ತು. ನಂತರವೂ ಇದೆ. ಆಯಾಕಾಲಕ್ಕೆ ತಕ್ಕಂಥ ತತ್ವಗಳು ಹುಟ್ಟಿಕೊಂಡವು. ಅವುಗಳಲ್ಲಿ ಒಂದು ಇದು: ಸಮಸ್ಯೆಗಳು ಎಂಬುವೆಲ್ಲಾ ಕೇವಲ ಬಾಯಿಮಾತು, ಅಷ್ಟೇ. ಇಡೀ ಜನತೆ ಅದನ್ನು ಹಾಗೆ ಭಾವಿಸಿರಲಿಲ್ಲ, ಅಂತಹ ಧೋರಣೆಯಿಂದ ಜೀವನ ಸಾಗುವಂತಿರಲಿಲ್ಲ. ಆದರೆ ಬೌದ್ಧಿಕ ವರ್ಗದಲ್ಲಿ ಇದು ಜನಜನಿತವಾಗಿತ್ತು. ಆ ವರ್ಗಕ್ಕೆ ಸೇರಿದವರು ಸ್ವಯಂಪ್ರೇರಣೆಯಿಂದ ಸೇರಿರುತ್ತಾರೆ ಮತ್ತು ಸ್ವಯಂಘೋಷಣೆ ಮಾಡಿಕೊಂಡಿರುತ್ತಾರೆ. ನಮ್ಮ ಓದುಗರು ಆ ವರ್ಗಕ್ಕೆ ಹೊರಗಿನವರಾದರೆ ಮುಂದಕ್ಕೆ ಓದದಿದ್ದರೂ ಆದೀತು: ಅದರಿಂದ ಒಂದು ಲಾಭವಿದೆ. ಸಾಮಾಜಿಕ ಮೂಢನಂಬಿಕೆಗಳಲ್ಲಿ ಕನಿಷ್ಠ ಒಂದರಿಂದಾದರೂ ಅವರು ಹೊರಗೆ ಉಳಿಯಬಹುದು. ಅಕಸ್ಮಾತ್ ಅವರೇನಾದರೂ ಆ ಬೌದ್ಧಿಕ ವರ್ಗಕ್ಕೆ ಸೇರಿದ್ದರೆ ಮುಂದಕ್ಕೆ ಓದುವುದು ಅತ್ಯಗತ್ಯ, ಚರ್ಚೆಯು ಅವರಿಗೆ ಬಹಳ ಪ್ರಸ್ತುತ ಎನಿಸಬಹುದು.

1938ರಲ್ಲಿ ಹಿಟ್ಲರ್ ಆಸ್ಟ್ರಿಯಾಕ್ಕೆ ನುಗ್ಗಿದ, ಅನೇಕರನ್ನು ದೇಶದಿಂದ ಹೊರದಬ್ಬಿದ. ಆ ಪೈಕಿ "ವಿಯೆನ್ನಾ ಬಣದವರು" ಎನ್ನಲಾಗಿದ್ದ ತತ್ವಶಾಸ್ತ್ರ ಚಿಂತಕರೂ ಸೇರಿದ್ದರು. ಅದು 1925ರ ಸುಮಾರಿನಲ್ಲಿ ಅಸ್ತಿತ್ವಕ್ಕೆ ಬಂದಿತ್ತು. ಅದರ ಮೇಧಾವಿ ನಾಯಕ ಅರ್ನೆಸ್ಟ್ ಮಾಖ್. ಇನ್ನೊಬ್ಬ ಮಾರ್ಗದರ್ಶಿ 19ನೆಯ ಶತಮಾನದ ಹ್ಯೂಮ್. ಈ ಬಣದವರು ತರ್ಕಶಾಸ್ತ್ರ ಮತ್ತು ವೈಜ್ಞಾನಿಕ ಪದ್ಧತಿ ಎರಡರಲ್ಲೂ ನಂಬುಗೆ ಇದ್ದವರು. ಅವರ ಪ್ರಕಾರ ಬಹುತೇಕ ತತ್ವಶಾಸ್ತ್ರದ ಸಮಸ್ಯೆಗಳು ಭಾಷೆಯ ನಿಷ್ಕೃಷ್ಟವಲ್ಲದ ಬಳಕೆಯಿಂದ ಉದ್ಭವವಾಗಿರುವಂಥವು. ಆದ್ದರಿಂದ ಭಾಷೆಯ ಸಂದಿಗ್ಧತೆ ಮತ್ತು ವಾಕ್ಯರಚನಾ ಕ್ರಮವನ್ನು ತತ್ವಶಾಸ್ತ್ರದ ಕ್ಷೇತ್ರದಿಂದ ಹೊರದೂಡಲು ಮುಂದಾದರು. ಅದರಿಂದ ಹುಟ್ಟಿಕೊಂಡದ್ದು "ತಾರ್ಕಿಕ ಪ್ರತ್ಯಕ್ಷ ಪ್ರಮಾಣವಾದ." (ಅದನ್ನು ಆಂಗ್ಲಭಾಷೆಯಲ್ಲಿ ಲಾಜಿಕಲ್ ಪಾಸಿಟಿವಿಸಂ ಎನ್ನುತ್ತಾರೆ). ಇನ್ನು ಮುಂದೆ ಅದನ್ನು ತಾರ್ಕಿಕ ಪ್ರತ್ಯಕ್ಷವಾದವೆಂದಷ್ಟೇ ಕರೆಯೋಣ.

ಈ ಶಾಖೆಯ ಸ್ಥಾಪಕರ ಜೀವನ ಕಠಿಣವಾಗಿತ್ತು. ಮೋರಿಟ್ಸ್ ಶ್ಲಿಕ್ ಒಬ್ಬ ವಿದ್ಯಾರ್ಥಿಯಿಂದ ಹತನಾದ. ನಂತರ ಎರಡನೆಯ ಮಹಾಯುದ್ಧದ ಕಾಲದಲ್ಲಿ ವಿಟ್ಗೆನ್‌ಸ್ಟೈನ್ ಇಂಗ್ಲೆಂಡ್‌ಗೂ ಕಾರ್ನಾಪ್ ಅಮೆರಿಕಾಕ್ಕೂ ಹೋಗಬೇಕಾಯಿತು.

ಅವರಲ್ಲಿಗೆ ಹೋಗುವ ಮೊದಲೇ ಅವರ ಧೋರಣೆಗಳು ಅಲ್ಲಿ ಪ್ರಸಿದ್ಧವಾಗಿದ್ದವು. ಆದರೆ ಅವರು ನಿರೀಕ್ಷಿಸಿರದಿದ್ದ ದಿಕ್ಕಿನಲ್ಲಿ ಅವು ಬೆಳೆಯುತ್ತಿದ್ದವು. ಈ ತತ್ವದ ಹೊಸ ಶಿಷ್ಯರು ಸಾಮಾಜಿಕ ಸಮಸ್ಯೆಗಳೆಲ್ಲಾ ಕೇವಲ ಬಾಯಿಮಾತೆಂಬ ನೆಲೆಗೆ ಬಂದು ನಿಂತಿದ್ದರು. ಅಂದರೆ, ಫ್ಯಾಸಿಸಂ ವಿರುದ್ಧದ ಹೋರಾಟವೆಂದರೆ ಪದಗಳ ನಿಷ್ಕರ್ಷೆ ಮಾಡುವುದಷ್ಟೆ ಎಂದಾಗಿತ್ತು. ಊರು ಹತ್ತಿ ಉರಿಯುತ್ತಿದ್ದರೆ ಇವರು "ಉರಿ" ಎಂಬ ಪದದ ನಿಜಾರ್ಥವನ್ನು ಕುರಿತು ಚರ್ಚಿಸುತ್ತಾರೆ! "ವಿಶ್ವದ ತಾರ್ಕಿಕ ಸ್ವರೂಪ" ಎನ್ನುವುದು ಅವರ ಪರಿಭಾಷೆ. ಅಂತಹ ಚರ್ಚೆ ಬೇಕಿಲ್ಲವೆಂದಲ್ಲ; ಆ ಚರ್ಚೆಯು ಬೇರೆ ಸಮಸ್ಯೆಗಳನ್ನು ತಿಳಿಯುವುದಕ್ಕೆ ಸಹಾಯಕವಾದೀತು, ನಿಜ. ಆದರೆ ತತ್ವಶಾಸ್ತ್ರವು ಆ ಪರಿಧಿಯಲ್ಲಿ ಉಳಿದುಬಿಟ್ಟರೆ ಸಾಕೆ? ಅದು ಕೇವಲ "ಭಾಷೆಯ ವಿಮರ್ಶೆ" ಆಗಿರಬೇಕೆ? ಒಂದು ಅಗಾಧ ಹಿಂಸಾತ್ಮಕ ವಾತಾವರಣದಲ್ಲಿ (ಅಂದರೆ, 1930ರ ಸಂದರ್ಭದಲ್ಲಿ) ಇಷ್ಟು ಕ್ಷೀಣವಾದ ಸೈದ್ಧಾಂತಿಕ ನಿಲುವು ಸಾಧುವೆ?

ಅದಕ್ಕೆ ಬಹುಶಃ ಇಂಥ ಉತ್ತರ ಸಾಧ್ಯ; ಇಡೀ ಸಮುದಾಯವು ಭೀಕರ ಸನ್ನಿವೇಶವನ್ನೆದುರಿಸುತ್ತಿರುವಾಗ ಹಲವು ರೀತಿಯ ಪ್ರತಿಕ್ರಿಯೆಗಳಿರಬಹುದು. ಕೆಲವು ಹೀಗಿರುತ್ತವೆ: ಸಮಾಜವು ತನ್ನ ನಷ್ಟವನ್ನು ತುಂಬಿಕೊಳ್ಳಲು ಸಮರ್ಥವಿದೆ; ಅದಕ್ಕೆ ಕೆಲವು ತತ್ವಶಾಸ್ತ್ರೀಯ ಪ್ರಮೇಯಗಳಿಗೆ ಬದ್ಧವಾಗಿರಬೇಕಾಗುತ್ತದೆ. ವಿಶ್ವವು ಸ್ಥಗಿತಗೊಂಡಿಲ್ಲವಾದ್ದರಿಂದ ಸಾಮಾಜಿಕ ಬದಲಾವಣೆಗೆ ಅವಕಾಶವಿದೆ, ಸಮಾಜವು ತಿಳಿದುಕೊಳ್ಳಬಹುದಾದ ಒಂದು ಘಟಕ, ಆ ತಿಳುವಳಿಕೆಯಿಂದ ಸಮಾಜವನ್ನು ನಿಯಂತ್ರಿಸಬಹುದು. (ಸಮಾಜವನ್ನು ರಿಪೇರಿ ಮಾಡಲು ಸಾಧ್ಯವಿಲ್ಲವೆಂದು ಬಗೆದರೆ ಆಗ ತತ್ವಶಾಸ್ತ್ರೀಯ ನಿರೂಪಣೆ ಬೇರೆಯೇ ಇರುತ್ತದೆ) : (ಅ) ಪರಿಸ್ಥಿತಿಯನ್ನು ಸಹನೆಯಿಂದ ಸ್ವೀಕರಿಸೋಣ, ಮನಸ್ಸನ್ನು ಕಲ್ಲು ಮಾಡಿಕೊಳ್ಳೋಣ; (ಆ) ಇದ್ದಿದ್ದರಲ್ಲಿ ಎಷ್ಟು ಸಾಧ್ಯವೋ ಅಷ್ಟು ಸುಖ ಅನುಭವಿಸೋಣ; (ಇ) ಒಪ್ಪಿತ ಮೌಲ್ಯಗಳೆಲ್ಲಾ ಹುಸಿಯಾದವು, ಅವನ್ನು ಗಣನೆಗೆ ತೆಗೆದುಕೊಳ್ಳುವುದು ನಿರರ್ಥಕ; (ಈ) ತಿಳಿವಳಿಕೆ ಎಂಬುದೊಂದು ಮರೀಚಿಕೆ, ಅದನ್ನು ಪಡೆಯಲಾಗದು. ನಾವು ಅಸುಖಿಗಳೆಂದು ತಿಳಿಯುವುದು ಸಹ ಖಚಿತವಲ್ಲ.

ಈ ನಾಲ್ಕು ನಿಲುವುಗಳನ್ನು ಪ್ರಾಚೀನ ಗ್ರೀಸಿನ ತತ್ವಶಾಸ್ತ್ರಜ್ಞರು ಪ್ರತಿಪಾದಿಸಿದ್ದರು. ಆ ಶಾಖೆಗಳನ್ನು ಕ್ರಮವಾಗಿ ಅನುದ್ವೇಗ ಅಥವಾ ಸಂಯಮದ ವಾದ (ಸ್ಟೋಯಿಸಿಸಂ), ಸುಖಭೋಗದ ವಾದ (ಎಪಿಕ್ಯೂರಿಯನಿಸಂ), ಸಿನಿಕತನ (ಸಿನಿಸಿಸಂ) ಮತ್ತು ಸಂದೇಹವಾದ (ಸ್ಕೆಪ್ಟಿಸಿಸಂ) ಎನ್ನುತ್ತಾರೆ. ಗ್ರೀಸಿನ ಆಕ್ರಮಣವಾಗಿದ್ದಾಗ ಹುಟ್ಟಿದ ತತ್ವಗಳಿವು ಮತ್ತು ಎಲ್ಲ ಸಂಕಷ್ಟದ ಸಂದರ್ಭಗಳಲ್ಲೂ ಈ ಸೈದ್ಧಾಂತಿಕ ಆಲಂಬನೆಗಳು ಕಾಣಬರುತ್ತವೆ.

ಸಮಾಜವು ಹೇಗೋ ಸುಧಾರಿಸಿತೆನ್ನಿ, ಈ ತತ್ವಶಾಸ್ತ್ರಗಳು ಅದೃಶ್ಯವಾಗಲು ಆರಂಭವಾಗುತ್ತದೆ; ಏಕೆಂದರೆ ಅವು ಅಪ್ರಸ್ತುತ, ಅಥವಾ ಜನರ ದಿನನಿತ್ಯದ ಅನುಭವವು ಆ ವಾದಗಳಿಗೆ ಪುಷ್ಟಿ ನೀಡಿರುವಂತಿರುವುದಿಲ್ಲ. ಸಮಸ್ಯೆಗಳು ಬಗೆಹರಿದರೆ ಜ್ಞಾನವು ಸಾಧ್ಯವೆಂದಾಯಿತು, ಆದ್ದರಿಂದ ಸಂದೇಹವಾದದ ಕೈಬಿಡಬಹುದು. ಸಮಸ್ಯೆಗೆ ಪರಿಹಾರವೆಂದರೆ ಸರಕುಗಳ ಉತ್ಪಾದನೆ ಮತ್ತು ವಿತರಣೆಯ ಹೆಚ್ಚಳ; ಅಂದರೆ, ಸುಖದ ಸಾಧ್ಯತೆ ಜಾಸ್ತಿಯಾಯಿತು, ಬಾಧೆ ಕಡಿಮೆಯಾಯಿತು, ಒಪ್ಪಿತ ಮೌಲ್ಯಗಳಿಗೆ ಜೀವ ತುಂಬಿದಂತಾಯಿತು. ವಿಸ್ತರಣೆಯ ಪರ್ವಕಾಲಗಳು ವಿಶ್ವಾಸವನ್ನು ವೃದ್ಧಿಗೊಳಿಸುತ್ತವೆ,

ಹೊಸ ವಿಚಾರ ಸರಣಿಗಳನ್ನು ಬೆಳೆಸುತ್ತವೆ. ಸಂದೇಹವಾದಿಗಳಿಗೆ ಭಂಗವುಂಟಾಗುವುದು ಇಂತಹ ಬೆಳವಣಿಗೆಗಳಿಂದ. ಗೆಲುವು ಸಿನಿಕರನ್ನು ಹೊಡೆದೆಬ್ಬಿಸುತ್ತದೆ. ಸುಖಲಾಲಸೆ ಉಳ್ಳವರು ನಿಸೂರಾಗಿ ಉಸಿರಾಡಬಹುದು ಮತ್ತು ಸಂಯಮವಾದಿಗಳು ಸಹನೆಯ ಬದಲು ಭರವಸೆಯ ಭಾವವನ್ನು ತಾಳುತ್ತಾರೆ. ಎಲ್ಲೆಡೆ ಬೆಳಕಿನ ಸಂಭ್ರಮ. ಅದೊಂದು ತತ್ವಶಾಸ್ತ್ರದ ನವಯುಗವೇ ಆಗಿಹೋಗುತ್ತದೆ.

ಬೇರೊಂದು ಸಾಧ್ಯತೆಯೂ ಇದೆ: ಸಮಾಜದ ಚೇತರಿಕೆಯು ತಡವಾದರೆ ಮತ್ತು ಸುಸೂತ್ರವಾಗಿ ನಿರೀಕ್ಷಿತ ಫಲ ದೊರೆಯದಿದ್ದರೆ ಅಥವಾ ಇನ್ನೂ ಹೆಚ್ಚಿನ ಕ್ಷೀಣತೆ ತಲೆದೋರಿದರೆ, ತತ್ವಶಾಸ್ತ್ರವು ಬೇರೊಂದು ದಿಕ್ಕಿನಲ್ಲಿ ಚಲಿಸಿಬಿಡುತ್ತದೆ. ಒಂದು ಕಡೆ ಸಾಮಾಜಿಕ ಬಿಕ್ಕಟ್ಟು, ಅದು ಎಲ್ಲರಿಗೂ ಅಪಾಯಕಾರಿ; ಇನ್ನೊಂದೆಡೆ ಏನು ಮಾಡಬೇಕೆಂದು ತೋಚದ ವಿಷಣ್ಣತೆ, ಪರಿಹಾರವೇ ಕಾಣದಂತಹ ಸ್ಥಿತಿ; ಅದಕ್ಕೆ ನಮ್ಮ ಅರಸುವಿಕೆಯಲ್ಲಿನ ನ್ಯೂನತೆಯೂ ಕಾರಣವಿರಬಹುದು. ಆದರೂ ಸೋಲಂತೂ ಅನುಭವಕ್ಕೆ ಬಂದಿದೆ. ನಾವು ತಪ್ಪು ಪರಿಹಾರ ಹುಡುಕುತ್ತಿದ್ದೇವೋ ಎಂಬ ಗುಮಾನಿ. ಅಂತೂ ಎಲ್ಲಾ ಗೊಂದಲಮಯ. ನಮ್ಮ ಅಸಂತೋಷಕ್ಕೆ ಪಾರವಿಲ್ಲ. "ಅಸಂತೋಷ"ವೆಂದರೇನೆಂಬುದನ್ನು ತಿಳಿಯದೆ ಹೋದೆವೇನೋ ಎಂಬ ಆತಂಕ. ಅಥವಾ, ನಾವು ಸಂತೋಷದಿಂದಿದ್ದು ಅದನ್ನು ಸಂತೋಷವೆಂದು ತಿಳಿಯಲಿಲ್ಲವೋ! ಆ ನಮ್ಮ ಬ್ಯಾಂಕಿನ ಖಾತೆಯಲ್ಲಿ ಹಣವಿಲ್ಲ. "ಆ ನಮ್ಮ" ಎಂಬುದನ್ನು ಸರಿಯಾಗಿ ತಿಳಿದಿದ್ದರೆ ಮತ್ತು "ಇಲ್ಲ" ಎಂಬ ನಕಾರಾತ್ಮಕ ಅರ್ಥ ಗೊತ್ತಿದ್ದರೆ ನಾವು ಶ್ರೀಮಂತರಾಗಿರುತ್ತಿದ್ದೇವೇನೋ! ಗೊಂದಲವೆಲ್ಲಾ ಆಶಾಭಂಗದ ಮಾತಿನ ಪರಿಣಾಮವೇ ಇರಬೇಕು. ಅರ್ಥಾತ್, ಸಮಸ್ಯೆಗಳೆಲ್ಲಾ ಕೇವಲ ಬಾಯಿಮಾತು, ಅಷ್ಟೆ.

ಇದೊಳ್ಳೆಯ ಸುಲಭ ಪರಿಹಾರವಾಯಿತಲ್ಲ. ಸ್ವಲ್ಪ ಬುದ್ಧಿಮತ್ತೆ ಇದ್ದರೆ ಸಾಕು, ಇದೆಲ್ಲಾ ಅರ್ಥವಾಗಿಬಿಡುತ್ತದೆ. ಬೃಹತ್ ಗಾತ್ರದ ನಿಘಂಟುಗಳನ್ನು ತಿರುವಿಹಾಕಿ, ವ್ಯಾಕರಣವನ್ನು ಜೀರ್ಣಿಸಿಕೊಂಡು, "ಸುಲಭವಾಗಿ ಕಲಿಯಿರಿ" ಮಾಲಿಕೆಯ ಯಾವುದಾದರೂ ಪುಸ್ತಕ ಓದಿ ಅಥವಾ "ಸುಖವಾಗಿರುವುದು ಹೇಗೆ?" ಎಂಬ ಮನೋವೈಜ್ಞಾನಿಕ ಗ್ರಂಥ ಪಠಿಸಿ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಲ್ಲವೆ? ಇದೆಲ್ಲಾ ಹೇಗಿದೆಯೆಂದರೆ ಒಂಟಿತನ ಪರಿಹರಿಸಿಕೊಳ್ಳಲು ಟೆಲಿಫೋನ್ ಡೈರೆಕ್ಟರಿಯಲ್ಲಿ ಹೆಸರುಗಳನ್ನು ಲೆಕ್ಕಮಾಡಿ ಸ್ನೇಹಿತರನ್ನು ಹುಡುಕಿಕೊಳ್ಳುವಂತಹ ಪ್ರಸಂಗ.

ಕಗ್ಗಂಟಾಗಿರುವ ಸಮಸ್ಯೆಗೆ ಎಷ್ಟು ಸರಳ ಪರಿಹಾರ, ಅಲ್ಲವೆ? ಸಾಮಾಜಿಕ ಆಘಾತಗಳು ಅತಿ ತೀಕ್ಷ್ಣವಾದವು, ಆದರೆ ವಾಕ್ಯರಚನಾ ಸೂತ್ರಗಳು ಬಹಳ ಶಾಂತ. ಇದೆಂತಹ ಜನ, ವಾಕ್ಯರಚನೆಯಲ್ಲಿ ತಪ್ಪುಮಾಡಿ ಸಮಾಜದಲ್ಲಿ ಸಾವು ನೋವು ಉಂಟುಮಾಡುವುದು ಹುಚ್ಚಲ್ಲವೆ? ವಾಕ್ಯರಚನಾ ಪ್ರವೀಣನು ಅಸಂಗತಗಳ ಸಮುದ್ರದಲ್ಲಿ ಒಬ್ಬ ಭಾರಿ ಜಾಣನಿದ್ದಂತೆ. ಎಷ್ಟು ಒಳ್ಳೆಯ ವಾಕ್ಯ, ಎಷ್ಟು ಲಲಿತವಾದ ಅರ್ಥವಿದೆ ಪದಗಳಿಗೆ! ಅವನ ಸುತ್ತ ಹಿಂಸಾಕಾಂಡಗಳು ಜರುಗಿದರೆ, ಪಾಪ, ಅವನೇನು ಮಾಡಿಯಾನು! ತೆಪ್ಪಗಿರುವುದು ಅವನು ಗಳಿಸಿರುವ ಸೌಲಭ್ಯ. ಅವನ ತತ್ವಶಾಸ್ತ್ರ ಅವನಿಗದನ್ನೇ ಬೋಧಿಸಿದೆ. ಪಲಾಯನ ಮಾಡೆಂದು ಅವನಿಗೆ ಆಜ್ಞೆ ನೀಡಲಾಗಿದೆ.

ವಿಟ್ಗೆನ್‌ಸ್ಟೈನನ ಪಾಂಡಿತ್ಯಪೂರ್ಣ ತತ್ವಶಾಸ್ತ್ರಕ್ಕೆ ಎಂತಹ ಗತಿ ಬಂತು. ಅವನು

ಭಾಷೆಯ ಬಗ್ಗೆ ಹೇಳಿದ, ಅದನ್ನು ಸಾಮಾಜಿಕ ಕಾರ್ಯಕ್ರಮಕ್ಕೆ ಅನ್ವಯಿಸಿಬಿಟ್ಟರು. ಈ ಗುರುವಿನ ಶಿಷ್ಯ ಚೇಸ್ ಎಂಬಾತ. ಅವನು ಸ್ಪೇನಿನ ಅಂತರ್ಯುದ್ಧದ ಚರ್ಚೆಗೆ ಇದನ್ನು ಅನ್ವಯಿಸಿದ. ಆ ಯುದ್ಧದ ಬೆಂಕಿ ಎಲ್ಲರಿಗೂ ಎಚ್ಚರಿಕೆಯ ಗಂಟೆಯಾಗಿತ್ತು. 1937ರ ಮಾರ್ಚ್ 27ರಂದು ಆ ಬಗ್ಗೆ "ನೇಶನ್" ಪತ್ರಿಕೆಯಲ್ಲಿ ಲೂಯಿ ಫಿಶರ್ ಬರೆದಿದ್ದ: "ಸ್ಪೇನ್ ಕ್ರೂರ ಆಕ್ರಮಣಕ್ಕೊಳಗಾಗಿದೆ. ಫ್ಯಾಸಿಸ್ಟರು ತಮ್ಮ ಹಿಂದಿನ ಆಶ್ವಾಸನೆಗಳನ್ನೆಲ್ಲಾ ಗಾಳಿಗೆ ತೂರಿ ಅಂತರರಾಷ್ಟ್ರೀಯ ಕಾನೂನಿನ ಎಲ್ಲ ನಿಯಮಗಳನ್ನೂ ಉಲ್ಲಂಘಿಸಿದ್ದಾರೆ. ಸ್ಪೇನಿನ ಜನರನ್ನು ಮತ್ತು ಅವರು ಪ್ರಜಾಪ್ರಭುತ್ವವಾದಿ ಕ್ರಮದಲ್ಲಿ ಆಯ್ಕೆ ಮಾಡಿ ಕೊಂಡಿದ್ದ ಸರ್ಕಾರವನ್ನು, ನುಚ್ಚುನೂರು ಮಾಡುತ್ತಿದ್ದಾರೆ. ಅದೆಲ್ಲಾ ನಡೆಯುತ್ತಿರುವಾಗ ಅದು ನಮಗೆ ಸಂಬಂಧಿಸಿಲ್ಲ ಎಂಬಂತೆ ತೃಪ್ತರಾಗಿ ಸುಮ್ಮನೆ ಕುಳಿತಿದ್ದೇವೆ. ಸ್ಪೇನಿನ ಜನರ ಪ್ರಜಾಪ್ರಭುತ್ವದ ರಕ್ಷಣೆಗೆ ಆಸಕ್ತಿ ತೋರುತ್ತಿಲ್ಲ. ಇಂತಹ ತಟಸ್ಥ ಮನೋಭಾವವು ಅಮೆರಿಕಾವನ್ನು ಫ್ಯಾಸಿಸ್ಟರ ಪರವಾದ್ದು ಎಂದು ಎತ್ತಿತೋರಿಸಿದೆ."

ನಮ್ಮ ಚೇಸ್ ಎಂಬ ವಿಡ್ಗನ್‌ಸ್ಟೈನನ ಶಿಷ್ಯ ಇದನ್ನು ಉದ್ಧರಿಸಿ ತನ್ನ ಭಾಷ್ಯ ಬರೆದಿದ್ದಾನೆ: "1919ರ ಘೋಷಣೆಗಳು, ಅಂದಿನ ಪ್ರಜಾಪ್ರಭುತ್ವದ ಆಕಾಂಕ್ಷೆ, ಎಲ್ಲವೂ ಭಾವನಾತ್ಮಕವಾಗಿ ಫ್ಲಿಶರ್ ಬರಹದಲ್ಲಿ ಕಾಣಬರುತ್ತವೆ. ಬಹುಶಃ ಫ್ಲಿಶರ್ ರಷ್ಯಾದ ಪರವಾಗಿ ಹೋರಾಡಲು ಸಿದ್ಧನಿದ್ದಾನೆ ಎನಿಸುತ್ತದೆ. ನಾನು ಹಾಗೆ ಮಾಡಲು ಸಿದ್ಧನಿಲ್ಲ. ನೀವು ಕಂಡಿರುವ ಸೋಮಾರಿಗಳಲ್ಲಿ ಅತಿಸೋಮಾರಿ ನಾನು, ತೃಪ್ತರಲ್ಲಿ ಅತಿತೃಪ್ತ ನಾನು."

ಅಂದಿನ ಚಾರಿತ್ರಿಕ ಸಂಗತಿಯಾದರೂ ಏನು? ಜರ್ಮನಿ ಮತ್ತು ಇಟಲಿಯ ಸೇನೆಗಳು ಸ್ಪೇನ್ ಒಳಗೆ ಪ್ರವೇಶಿಸಿದ್ದವು, ತಮ್ಮ ಹೊಸ ಆಯುಧಗಳನ್ನು ಪರೀಕ್ಷೆಗೆ ಒಡ್ಡಿದ್ದವು, ಹೊಸ ತಂತ್ರಗಳ ಮಾಪನ ಮಾಡಿಕೊಳ್ಳುತ್ತಿದ್ದವು, ಮುಂದಿನ ಮಹಾಯುದ್ಧಕ್ಕೆ ತರಬೇತಿ ಪಡೆಯುತ್ತಿದ್ದವು. ಮಾಡ್ರಿಡ್ ಪತನದ ಒಂದು ವರ್ಷದ ನಂತರ ಪ್ಯಾರಿಸ್ ಪತನಗೊಂಡಿತ್ತು. ಒಂದು ವರ್ಷದ ನಂತರ ರಷ್ಯಾದ ಮೇಲೆ ಆಕ್ರಮಣ. ಆರು ತಿಂಗಳ ನಂತರ ಅಮೆರಿಕಾದ ಪರ್ಲ್ ಹಾರ್ಬರ್ ಮೇಲೆ ಜಪಾನಿನ ಧಾಳಿ. ವಿಶ್ವವನ್ನು ಫ್ಯಾಸಿಸ್ಟ್ ಶಕ್ತಿಗಳು ಕಬಳಿಸುವ ಕಾಲ ಸನ್ನಿಹಿತವಾಗುತ್ತಿತ್ತು. ಸ್ಪೇನ್ ಮೊದಲ ಸಾಲಿನಲ್ಲಿತ್ತು, ಅದರ ಸಂರಕ್ಷಣೆಗೆ ಫ್ಲಿಶರ್ ಆಗ್ರಹಿಸಿದ್ದ. ಆದರೆ ಚೇಸ್‌ಗೆ ಅದರಲ್ಲಿ 1919ರ ಭಾವನಾತ್ಮಕ ಅಂಶ ಗೋಚರಿಸಿತ್ತು! ಅವನು ಸಂತೃಪ್ತನಾಗಿದ್ದ ಕೂಡ. ಎಲ್ಲ ಸಮಸ್ಯೆಗಳೂ ಕೇವಲ ಮಾತಿನ ಬುಟ್ಟಿ ಎಂದು ಭಾವಿಸುವುದರ ಪರಿಣಾಮ ಇದು. ಅಂಥವರಿಗೆ ಸುಮ್ಮನೆ ಕುಳಿತಿರುವುದಷ್ಟೇ ಸಾಮಾಜಿಕ ಕಾರ್ಯಕ್ರಮ. ನಂತರದ ವರ್ಷಗಳಲ್ಲಿ ಜರುಗಿದ ಮಾರಣ ಹೋಮಗಳಿಗೆ ಇಂತಹ ನಂಬಿಕೆ ಮತ್ತು ನಿಷ್ಕ್ರಿಯತೆಯೂ ಒಂದು ಕಾರಣ. ಕಾಯಿಲೆಗೆ ಮಾಟಗಾತಿ ನೀಡುವ ಉಪಚಾರಕ್ಕೆ ಸಮ ಇದು. ಮಾಟಗಾತಿಯು ಮಂತ್ರ ಉಸುರುತ್ತಾಳೆ, ಕಾಯಿಲೆ ನಿವಾರಣೆಯಾಗದಿದ್ದಾಗ ತಾನು ಮಂತ್ರವನ್ನು ಸರಿಯಾಗಿ ಪಠಿಸಲಿಲ್ಲ ಎಂದು ಭಾವಿಸುತ್ತಾಳೆ. ರೋಗ ನಿವಾರಣೆಗೆ ತಾನು ಶುದ್ಧವಾಗಿ ಮಂತ್ರವನ್ನು ಹೇಳಿದರೆ ಸಾಕು ಎಂದುಕೊಳ್ಳುತ್ತಾಳೆ ಅವಳು. ಆದರೆ ಕಾಯಿಲೆಗೆ ಕಾರಣವಾದ ಬ್ಯಾಕ್ಟೀರಿಯ ಅಲ್ಲೇ ಇದೆ, ಹಾಗೇ ಇದೆ. ಅದಿನ್ನೂ ಪ್ರಬಲವಾಗುತ್ತಿದೆ, ಕಾಯಿಲೆ ಉಲ್ಬಣಗೊಳ್ಳುತ್ತಿದೆ. ಆಮೇಲೆ ನೈಜ ವೈದ್ಯಕೀಯ ಮಧ್ಯಪ್ರವೇಶವೂ ಪ್ರಯೋಜನಕ್ಕೆ ಬಾರದು. "ಫ್ಯಾಸಿಸಂ" ಎಂಬ ಪದದ ನಿರ್ವಚನೆ

ಮತ್ತು ವ್ಯುತ್ಪತ್ತಿ ಎಷ್ಟೇ ಚೆನ್ನಾಗಿ ತಿಳಿದರೂ, ಇಲ್ಲವೇ ಅದನ್ನು ಎಷ್ಟೇ ಅರ್ಥರಹಿತವೆಂದು ವ್ಯಾಖ್ಯಾನಿಸಿದರೂ ಅದರ ಬೇನೆ ಹೋಗದು, ಜರ್ಮನಿ ಮತ್ತು ಇಟಲಿಯ ಫ್ಯಾಸಿಸಂ ಅಳಿಸಿಹೋಗದು. ಅದನ್ನು ಅರ್ಥರಹಿತವೆಂದು ಹೆಚ್ಚು ಹೇಳಿದಷ್ಟೂ ಅದು ಹೆಚ್ಚಾಗಿ ಬೆಳೆಯಿತು; ಏಕೆಂದರೆ, ಅಸ್ತಿತ್ವದಲ್ಲಿಲ್ಲವೆಂದು ಹೇಳಲಾದ ಶತ್ರುವಿನ ವಿರುದ್ಧ ಜನರನ್ನು ಸಂಘಟಿಸಲಾಗುವುದಿಲ್ಲ. ಫ್ಯಾಸಿಸ್ಟರು ಎಂಬ ಹೆಸರಿಗೆ ಅನ್ವರ್ಥರಾದವರು ಯಾರೂ ಇಲ್ಲವೆಂದು ಹೇಳುತ್ತಾ ಹೋದರೆ ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಅಳಿದುಳಿದ ಫ್ಯಾಸಿಸ್ಟರು ಮತ್ತೆ ಚಿಗುರಿಕೊಳ್ಳುತ್ತಾರೆ.

ಇದು ಈಗಾಗಲೆ ಗೋಚರವಾಗುತ್ತಿದೆ. ಒಬ್ಬ ವ್ಯಕ್ತಿ ಅಥವಾ ಒಂದು ಚಳುವಳಿ ಅತಿರೇಕದ ಲಕ್ಷಣಗಳನ್ನು ಪ್ರದರ್ಶಿಸಿದಾಗ ಯಾರೋ ಪದವಿಶ್ಲೇಷಣಾ ನಿಪುಣನು ಕೂದಲು ಸೀಳಿ ಅವಕ್ಕೆ ಫ್ಯಾಸಿಸಂ ಎಂಬ ಹೆಸರು ಒಗ್ಗುವುದಿಲ್ಲವೆಂದು ಹೇಳುತ್ತಾನೆ. ಎಡ-ಬಲ ಎರಡೂ ಬಣಗಳಲ್ಲಿ ಅಂತಹ ಉದ್ರೇಕಕಾರಿ ಲಕ್ಷಣಗಳುಂಟು ಎಂದು ವ್ಯಾಖ್ಯಾನಿಸುತ್ತಾ ತನ್ನ "ನಿಷ್ಪಕ್ಷಪಾತ" ದೃಷ್ಟಿಯನ್ನು ಪ್ರದರ್ಶಿಸುತ್ತಾನೆ. ಅದರಿಂದ ಪ್ರಯೋಜನ ಫ್ಯಾಸಿಸ್ಟರಿಗೆ, ಏಕೆಂದರೆ ಸಾರ್ವಜನಿಕರ ದೃಷ್ಟಿಯಿಂದ ತಪ್ಪಿಸಿಕೊಳ್ಳಲು ಅದರಿಂದ ಅವರಿಗೆ ಸಾಧ್ಯವಾಗುತ್ತದೆ ಮತ್ತು ವಿನಾಕಾರಣ ಕೆಲವರ ದೂಷಣೆ ಮಾಡಲಾಯಿತೆಂದು ಫ್ಯಾಸಿಸಂ ವಿರೋಧಿಗಳ ಮೇಲೆ ಗೂಬೆ ಕೂರಿಸಲಾಗುತ್ತದೆ. ಯಾವುದೇ ಮಾನವ ಕಲ್ಯಾಣದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಹೋದರೂ ಯಾರೋ ಬಂದು ಅದಕ್ಕೆ ತಡೆಯೊಡ್ಡುತ್ತಾರೆ. ಅವರ ತಕರಾರು "ಕಲ್ಯಾಣ" ಎಂಬುದರಲ್ಲೇನೋ ಪದಬಳಕೆಯ ಗೊಂದಲವಿದೆ ಎಂಬುದು. ಹೀಗಾಗಿ ಕಾರ್ಯಕ್ರಮವನ್ನು ಸಂಘಟಿಸುವುದು ಕಷ್ಟಕರವಾಗುತ್ತಿದೆ. ಪದಗಳ ಅರ್ಥದ ಬಗ್ಗೆ ನೈಪುಣ್ಯವುಳ್ಳ ತತ್ವಶಾಸ್ತ್ರಕಾರರನ್ನು ನಾವು ಒತ್ತಾಯಿಸಬೇಕು, ಹೇಗೂ ನೀವು ಅರ್ಥವು ಯಥಾರ್ಥವೇ ಅಲ್ಲವೇ ಎಂದು ತೀರ್ಮಾನಿಸಲು ಕಾರ್ಯಕಾರಿತ್ವದ ಮೊರೆ ಹೋಗುತ್ತೀರಲ್ಲ, ಅದರ ಪ್ರಕಾರ ನೀವು ಯಥಾಸ್ಥಿತಿಯ ರಕ್ಷಕರಾಗುತ್ತೀರಲ್ಲವೇ, ಎಂದು.

ಒಟ್ಟಿನಲ್ಲಿ ಪದಗಳ ಅರ್ಥದ ಬಲೆಯಲ್ಲಿ ಸಿಲುಕಿಕೊಳ್ಳುವುದು ನಿಷ್ಕ್ರಿಯೆಗೆ ಕಾರಣವಾಗುತ್ತಿದೆ. ಅದು ಸರ್ವವ್ಯಾಪಿಯಾಗುವ ಸೂಚನೆಗಳಿವೆ. ಮೂಲತಃ ಈ ಚಿಂತನೆಯು ತರ್ಕಕ್ಕೆ ಪೆಟ್ಟು ನೀಡಹೊರಟಿದೆ, ತಿಳುವಳಿಕೆಯನ್ನು ಪಡೆಯುವ ವಿಧಾನಕ್ಕೆ ಮಾರಕವಾಗಿದೆ. ನೈತಿಕತೆಯನ್ನು ವ್ಯಾಖ್ಯಾನಿಸುವುದರಲ್ಲಿ ಇಂತಹ ಇಬ್ಬಂದಿಯುಂಟಾದರೆ ಜನರು ಸರಿಯಾದ ಆಯ್ಕೆ ಮಾಡಿಕೊಳ್ಳುವುದರಲ್ಲಿ ಎಡವುತ್ತಾರೆ. ಯಾವಾಗ ಮತ್ತು ಯಾವ ಮೌಲ್ಯಗಳಿಗಾಗಿ ಕ್ರಿಯಾವಂತರಾಗಬೇಕೆಂಬ ವಿಷಯದಲ್ಲಿ ಸಂದಿಗ್ಧತೆ ಇದ್ದರೆ ಕ್ರಿಯಾಶೀಲತೆ ಹೇಗೆ ಬರುತ್ತದೆ? ಆದ್ದರಿಂದ ನಿಷ್ಕ್ರಿಯೆಯನ್ನು ದೂರಮಾಡಲು ಸಂದಿಗ್ಧತೆಯನ್ನು ಮೂಡಿಸುವ ವ್ಯಾಖ್ಯಾನಗಳನ್ನು ಪ್ರಶ್ನಿಸಬೇಕಾಗುತ್ತದೆ.

ತರ್ಕದ ಮೇಲಿನ ಹಲ್ಲೆ

ಈವರೆಗೆ ನಾವು ಗಮನಿಸಿದ "ಪದಗಳ ಅರ್ಥ" ಎಂಬ ಹೆಸರಿನಲ್ಲಿ ಉದ್ಭವಿಸಿರುವ ಗೊಂದಲಕ್ಕೆ ತರ್ಕಶಾಸ್ತ್ರದ ಪಿತಾಮಹನೆನ್ನಲಾದ ಅರಿಸ್ಟಾಟಲ್ ಸ್ವತಃ ಕಾರಣನಾಗಿದ್ದಾನೆ. ಅವನ ಹಿರಿಮೆಯನ್ನು ದುರ್ಬಳಕೆ ಮಾಡಿಕೊಳ್ಳುವ ವಿದ್ವಾಂಸರಿಗೇನೂ ಕೊರತೆಯಿಲ್ಲ.

ಮಧ್ಯಕಾಲೀನ ಯುಗದಲ್ಲಿ ಅರಿಸ್ಟಾಟಲನ "ಶುದ್ಧೀಕರಣ" ನಡೆದು ಅವನದಲ್ಲದ ಚಿಂತನಾವಿಧಾನವನ್ನು ಅವನ ಮೇಲೆ ಹೇರಲಾಯಿತು. ಅವನು ಅತ್ಯಂತ ಹೆಚ್ಚು ಆದ್ಯತೆ ನೀಡಿದ್ದು ಅವಲೋಕನಕ್ಕೆ, ಆದರೆ ಅದನ್ನು ಅವನು ಪೂರ್ತಿಯಾಗಿ ಅವಗಣಿಸಿದನೆಂಬ ಅಪಕೀರ್ತಿ ಅವನದಾಯಿತು. ಪ್ರಯೋಗಮೂಲ ವಿಜ್ಞಾನದ ಪರವಾಗಿ ಬೇಕನ್, ಅರಿಸ್ಟಾಟಲನ ವಿರುದ್ಧ 17ನೆಯ ಶತಮಾನದಲ್ಲಿ ಒಂದು ಚಳುವಳಿಯನ್ನು ಆರಂಭಿಸಿದ; ವೈಜ್ಞಾನಿಕ ಪದ್ಧತಿಯ ಮೂಲ ನಿಯಮಗಳನ್ನು ಸ್ವತಃ ಅರಿಸ್ಟಾಟಲನೇ ಪ್ರತಿಪಾದಿಸಿದ್ದನೆಂಬುದು ಪಕ್ಕಕ್ಕೆ ಸರಿಸಲ್ಪಟ್ಟಿತು. 20ನೆಯ ಶತಮಾನದಲ್ಲಿ ವಿಜ್ಞಾನದ ಮರುಹುಟ್ಟು ಎಂಬ ಘೋಷಣೆಯಡಿ ಕೋರ್ಸಿಬ್‌ಸ್ಕಿ ಎಂಬಾತ "ಅರಿಸ್ಟಾಟಲನದಲ್ಲದ ಚಿಂತನಾಪದ್ಧತಿಗಳು" ಎಂಬ ಸೂತ್ರವನ್ನು ಹೆಣೆದಿದ್ದಾನೆ. ಅವನ ದೃಷ್ಟಿಯಲ್ಲಿ ಅರಿಸ್ಟಾಟಲನ ಗ್ರಹಿಕೆಯು ಮೂಲದಲ್ಲೇ ತಪ್ಪಾಗಿದೆ. "ಯಾವುವೆಲ್ಲಾ ಇವೆಯೋ ಅವಕ್ಕೆ ಅಸ್ತಿತ್ವವಿದೆ" ಎಂಬುದು ಅರಿಸ್ಟಾಟಲನ ನಿಲುವು. ಕೋರ್ಸಿಬ್‌ಸ್ಕಿ ಮತ್ತು ನಂತರ ಚೇಸ್ ಹೇಳುತ್ತಾರೆ, ಪ್ರಪಂಚದಲ್ಲಿ ಯಾವುದೂ ಇಲ್ಲ, ಇರುವುದೆಲ್ಲಾ ಆಗುವುದರ ಪ್ರಕ್ರಿಯೆ, ಎಂದು. ಎಲ್ಲವೂ ಏನೋ ಆಗುವುದರಲ್ಲಿವೆ ಎಂದರೆ ಅವನ್ನು ಇವೆ ಎನ್ನಲಾಗದು. ಯಾವೊಂದು ಕ್ಷಣದಲ್ಲೂ ಎಲ್ಲವೂ ಆಗುವುದರತ್ತ ಹೋಗುತ್ತಿರುತ್ತವೆಯೇ ಹೊರತು ಯಾವುದೂ ಸ್ಥಿರವಾಗಿ ಇಲ್ಲ. ಇದಕ್ಕೆ ಚೇಸ್ ಕೊಡುವ ದೃಷ್ಟಾಂತ ಚಿರಪರಿಚಿತವಾದ್ದು:

"ರಾಕೆಟ್ ಇದೆ, ಅದರ ಉಡಾವಣೆ ಆಗುತ್ತದೆ. ರಾಕೆಟ್ ಯಾವಾಗಲೂ ರಾಕೆಟ್ಟೇ ಎಂಬುದು ಸರಿ, ಆದರೆ ಕೇವಲ ಪದಪ್ರಯೋಗದಲ್ಲಿ. ಅದು ಉಡಾವಣೆಗೊಂಡು ಕಡೆಗೆಲ್ಲೋ ಉರಿದು ಬಿದ್ದ ಕೊರಡಾಗುತ್ತದೆ. ಇಂದು ಭೂಮಿಯ ಮೇಲೆ ಬಂದಿರುವ ಹಣಬೆ ನಿನ್ನೆ ಎಲ್ಲಿದ್ದಿತು? ವಾರದ ಹಿಂದೆ ಕಂಗೊಳಿಸುತ್ತಿದ್ದ ಕಮಲ ಈಗ ನೆಲದ ಮೇಲೆ ಒಣಗಿ ಬಿದ್ದಿದೆ. ಐದು ನಿಮಿಷದ ಹಿಂದಿನ ಐಸ್ಕ್ರೀಮ್ ಸೂರ್ಯನ ಝಳದಿಂದ ಈಗೇನಾಗಿ ಹೋಗಿದೆ ನೋಡಿ."

ಎಲ್ಲೆಲ್ಲೂ ಬದಲಾವಣೆ ಮತ್ತು ನಶಿಸುವಿಕೆ. ದೇಶ ಮತ್ತು ಕಾಲದ ದೃಷ್ಟಿಯಿಂದ ಇದು ನಿಜ. ಅದನ್ನು ಅಲ್ಲಗಳೆದ ಚಿಂತಕರು ಯಾರಾದರೂ ಉಂಟೆ? ಅಬ್ಬಾ ಎಂದರೆ ಪ್ರಾಚೀನ ಗ್ರೀಕರಲ್ಲಿ ಪಾರ್ಮಿನೈಡಿಸ್ ಮತ್ತು ಝೀನೋ ಅವರ ಪ್ರಕಾರ ಇಂದ್ರಿಯಗಳು ನಮಗೆ ಸದ್ಯದ ಸತ್ಯದ ತಿಳುವಳಿಕೆ ನೀಡುತ್ತವೆಯೇ ವಿನಾ ಜ್ಞಾನವನ್ನಲ್ಲ. ಅಂತಹ ಚಿಂತಕರು ಪ್ರಾಚೀನ ಭಾರತದಲ್ಲೂ ಇದ್ದರು. ಅವರನ್ನು ಬಿಟ್ಟರೆ ಈಚಿನ ಹೆಗೆಲ್ ಅನುಯಾಯಿಗಳಿದ್ದಾರೆ. ಅವರು ತೋರಿಕೆ ಮತ್ತು ಇರುವಿಕೆಗಳನ್ನು ಭಿನ್ನೈಸಿ ನೋಡುತ್ತಾರೆ. ಪಾರ್ಮಿನೈಡಿಸ್ ತರ್ಕದಿಂದ ಸತ್ಯದತ್ತ ಹೊರಳುತ್ತಾನೆಂದು ಬೇಕಾದರೆ ಆಪಾದಿಸಬಹುದು. ಏಕೆಂದರೆ ಅವನು ಯೋಚನೆ ಮತ್ತು ಇರುವಿಕೆಗಳೆರಡೂ ಒಂದೇ ಎನ್ನುತ್ತಾನೆ. ಪಾರ್ಮಿನೈಡಿಸ್ ನಂತರ ಅವನನ್ನು ವಿರೋಧಿಸಿದವನು ಹೆರಾಕ್ಲಿಟಸ್. ಅವನೂ ಬದಲಾವಣೆಯ ವಿಧಾನದ ಬಗ್ಗೆ ಜಿಜ್ಞಾಸೆ ಮಾಡಿದ್ದಾನೆ ಮತ್ತು ಅದು ಚೇಸ್ ಮುಂತಾದವರ ನಿರೂಪಣೆಗಿಂತಲೂ ಹೆಚ್ಚು ಉತ್ತಮ ಮಟ್ಟದ್ದು. ಕಾಲದ ವಿಚಾರಕ್ಕೆ ಬಂದರೆ ಪಾರ್ಮಿನೈಡಿಸ್ ಮತ್ತು ಹೆರಾಕ್ಲಿಟಸ್ ಕ್ರಿ.ಪೂ. 4ನೆಯ ಶತಮಾನದವರು. ಗ್ರೀಸಿನ ತತ್ವಶಾಸ್ತ್ರ ವಿಕಾಸಗೊಂಡಿದ್ದು ಆ ನಡುವಿನ ಕಾಲದಲ್ಲಿ. ಆಗ ಪ್ರೊಟಾಗೊರಸ್ ಎಂಬ ಇನ್ನೊಬ್ಬನಿದ್ದ. ಇಂದಿನ ಪದಜಿಜ್ಞಾಸಾ ತತ್ವಶಾಸ್ತ್ರಕ್ಕೆ ಅವನೊಬ್ಬ ಮೂಲಪುರುಷ

ಎನ್ನಬಹುದು. ಹೀಗಿರುವಾಗ ಹುರುಪಿನಿಂದ ಹೊಚ್ಚ ಹೊಸದು ಎಂದು ಕೋರ್ಸಿಬ್‌ಸ್ಕಿ ಮತ್ತು ನಂತರ ಚೇಸ್ ಹೇಳಿಕೊಳ್ಳುವುದೇನಿದೆ! ಪ್ರಾಚೀನ ತತ್ವಶಾಸ್ತ್ರದ ಅಜ್ಞಾನ ಹೆಚ್ಚಿದಷ್ಟೂ ಹೊಸ ತತ್ವಶಾಸ್ತ್ರದ ಬಗೆಗಿನ ಹುರುಪು ಅತಿಯಾಗಿರುತ್ತದೆಯೇನೋ.

ಆದಿಕಾಲದ ತತ್ವಶಾಸ್ತ್ರಜ್ಞರ ಜಿಜ್ಞಾಸೆಗಳಲ್ಲಿ ತಪ್ಪುಗಳಿದ್ದಿರಬಹುದು, ಆದರೆ ಅಸ್ಮಿತೆಯ ನಿಯಮವು ಇಂದು ಕೋರ್ಸಿಬ್‌ಸ್ಕಿ ಹೇಳುತ್ತಿರುವುದಂತೂ ಅಲ್ಲ ಮತ್ತು ಅರಿಸ್ಟಾಟಲ್ ಆ ಅರ್ಥದಲ್ಲಿ ಅದನ್ನು ನಿರೂಪಿಸಿರಲಿಲ್ಲ. ನಿಯಮ ಹೇಳುವುದಿದು: ಪದಗಳಾಗಲಿ ಹೇಳಿಕೆಗಳಾಗಲಿ ಒಂದು ತಾರ್ಕಿಕ ಪ್ರತಿಪಾದನೆಯುದ್ದಕ್ಕೂ ಒಂದೇ ಅರ್ಥವನ್ನು ಹೊಂದಿರುತ್ತವೆ. ಅದರ ಅಗತ್ಯ ಬಹಳವೇ ಇದೆ, ಇಲ್ಲದಿದ್ದರೆ ಎಲ್ಲಾ ಗೋಜಲಾಗಿಬಿಡುತ್ತದೆ. ಒಂದೇ ಪರಿಕಲ್ಪನೆಗೆ ಒಂದೊಂದು ಅಧ್ಯಾಯದಲ್ಲಿ ಒಂದೊಂದು ಅರ್ಥ ಕೊಡುತ್ತಾ ಹೋದರೆ ಯಾವ ತೀರ್ಮಾನ ಸಾಧ್ಯ?

ಈಗ ನೋಡಿ: ಇಂತಹ ತಾರ್ಕಿಕ ಅಗತ್ಯದ ಇರುವಿಕೆಯನ್ನು ಪ್ರಕೃತಿಯಲ್ಲಿ ಕಾಣುತ್ತೇವೆಯೆ? ಹೌದು, ಹಾಗಿರಲೇಬೇಕು; ಇಲ್ಲದಿದ್ದರೆ ಪ್ರಪಂಚದ ಸಂಗತಿಗಳನ್ನು ನಾವು ಪ್ರತಿಪಾದಿಸಲು ಸಾಧ್ಯವಿರುತ್ತಿತ್ತೆ? ರಾಕೆಟ್ಟು, ಹಣಬೆ, ಗುಲಾಬಿ, ಐಸ್‌ಕ್ರೀಂ, ಎಲ್ಲವೂ ಪ್ರಕ್ರಿಯೆಗಳೇ; ಆದರೆ ಎಲ್ಲವೂ ತಮ್ಮದೇ ಪ್ರಕ್ರಿಯೆ ಹೊಂದಿವೆ, ತಮ್ಮದೇ ವೈಶಿಷ್ಟ್ಯ ಮತ್ತು ಚರಿತ್ರೆ ಹೊಂದಿವೆ. ಅದೇನಾಗಿದೆಯೋ ಅದಕ್ಕಿಂತ ಅದು ಬೇರೆಯಲ್ಲ. ಅಷ್ಟೇ ಅಸ್ಮಿತೆಯ ನಿಯಮದ ಚೌಕಟ್ಟು. ಯಾವ ಶಬ್ದಬ್ರಹ್ಮನೂ ಅದನ್ನು ಮೆಟ್ಟಿ ನಿಲ್ಲಲಾರ.

ವೈರುಧ್ಯದ ನಿಯಮವನ್ನು ಸಹ ಇದೇ ರೀತಿ ತಿಳಿದುಕೊಳ್ಳಬೇಕು, ಅದನ್ನು ಸುಮ್ಮನೆ ತಳ್ಳಿಹಾಕುವುದಲ್ಲ. ಪರಸ್ಪರ ವಿರೋಧವಾದ ಎರಡು ಹೇಳಿಕೆಗಳಿದ್ದರೆ ಎರಡೂ ಸರಿ ಅಥವಾ ತಪ್ಪು ಆಗಿರಲಾರವು. "ನನ್ನ ತೋಟದಲ್ಲಿ ಗುಲಾಬಿ ಇಲ್ಲ" ಮತ್ತು "ನನ್ನ ತೋಟದಲ್ಲಿ ಒಂದಾದರೂ ಗುಲಾಬಿ ಇದೆ" ಎಂಬ ಎರಡು ಹೇಳಿಕೆಗಳಲ್ಲಿ ಎರಡೂ ನಿಜವಾಗಿರಲಾರದು. ಆದರೆ ಒಂದಾದರೂ ನಿಜ ಇರಬೇಕು. "ನನ್ನ ತೋಟದಲ್ಲಿ ಗುಲಾಬಿ ಇಲ್ಲ" ಎಂಬುದು ನಿಜವಲ್ಲವಾದರೆ ಅಲ್ಲಿ ಕನಿಷ್ಠ ಒಂದಾದರೂ ಗುಲಾಬಿ ಇರಲೇಬೇಕು; "ನನ್ನ ತೋಟದಲ್ಲಿ ಒಂದಾದರೂ ಗುಲಾಬಿ ಇದೆ" ಎಂಬುದು ನಿಜವಲ್ಲವಾದರೆ ಅಲ್ಲಿ ಗುಲಾಬಿ ಇಲ್ಲವೇ ಇಲ್ಲವೆಂದೇ ಅರ್ಥ. ಅಂತಹ ಜೊತೆಜೊತೆಯಾದ ಹೇಳಿಕೆಗಳೇ ಇಲ್ಲವೆಂದು ಹೇಳಿ ವೈರುಧ್ಯದ ನಿಯಮವನ್ನು ಅಲ್ಲಗಳೆಯಬಹುದು. ಆಗ ನಮ್ಮ ಪದಬ್ರಹ್ಮರು ಏನು ಹೇಳಿದಂತಾಗುತ್ತದೆ ಗೊತ್ತೆ? ಯಾವುದನ್ನೋ ಅರಿಸ್ಟಾಟಲನ ಸಿದ್ಧಾಂತವೆಂದು ಹೇಳಿ ಅದನ್ನು ಅಲ್ಲಗಳೆದಂತಾಗುತ್ತದೆ. ಅವರ ಪ್ರಕಾರ ಈ ಸಿದ್ಧಾಂತ ಸರಿಯಲ್ಲ. ಬೇರೆ ಯಾರೋ ಅದು ಸರಿ ಎನ್ನುತ್ತಾರೆ ಎಂದಿಟ್ಟುಕೊಳ್ಳಿ. ಕೋರ್ಸಿಬ್‌ಸ್ಕಿ ಮತ್ತು ಚೇಸ್ ಅದನ್ನು ನಿರಾಕರಿಸಲೇಬೇಕು. ವೈರುಧ್ಯದ ನಿಯಮವು ಸರಿಯಲ್ಲವಾದರೆ ಇವರ ಪ್ರಯತ್ನ ವ್ಯರ್ಥ. "ಈ ಸಿದ್ಧಾಂತವು ಸರಿ" ಎಂಬುದನ್ನು ನಿಜಕ್ಕೂ "ಈ ಸಿದ್ಧಾಂತವು ತಪ್ಪು" ಎಂಬುದು ವಿರೋಧಿಸದಿದ್ದರೆ ಚರ್ಚೆ ಏಕೆ ಬೇಕು? ವಿರೋಧವೇ ಇಲ್ಲದಾಗ ಅದರ ನಿರಾಕರಣೆಗೆ ಏನರ್ಥವಿದೆ? ನಿರಾಕರಣೆಯು ಸಾಧ್ಯ ಎಂಬುದನ್ನು ಹೇಗೆ ನಿರಾಕರಿಸಲು ಸಾಧ್ಯ?

ಈ ಪರಿಣತರು ಮತ್ತೇನು ಹೇಳಬಹುದು? ಮಾತು ಅಥವಾ ಪದದಲ್ಲಿ ವೈರುಧ್ಯ ಕಾಣಬಹುದು, ಆದರೆ ನಿಜವಾದ ವೈರುಧ್ಯವಿಲ್ಲ, ಎಂದು. ಅಂದರೆ, ದೇಶ – ಕಾಲ

ಪರಿಮಿತಿಯಲ್ಲಿ ಪ್ರಪಂಚದಲ್ಲಿ ವೈರುಧ್ಯವಿಲ್ಲವೆಂದರ್ಥ. ಒಂದು ಸನ್ನಿವೇಶವಿದ್ದರೆ ಅದಕ್ಕೆ ವಿರುದ್ಧವಾದ ಇನ್ನೊಂದು ಸನ್ನಿವೇಶ ಇರಲಾರದೆಂದು ಹೇಳಲಾದೀತೆ? ಒಂದು ಉದಾಹರಣೆ: "ರಂಗನು 1945–46ರಲ್ಲಿ ಯೇಲ್ ವಿಶ್ವವಿದ್ಯಾಲಯದಲ್ಲಿ ಪೂರ್ಣಾವಧಿ ವಿದ್ಯಾರ್ಥಿಯಾಗಿದ್ದ." ಅಂದರೆ, ಆ ವರ್ಷದಲ್ಲಿ ಅವನು ಬೇರೆಲ್ಲೂ ಪೂರ್ಣಾವಧಿ ವಿದ್ಯಾರ್ಥಿಯಾಗಿದ್ದರಲಾರ ಮತ್ತು ಒಂದೆಡೆ ಪೂರ್ಣಾವಧಿ ವಿದ್ಯಾರ್ಥಿಯಾಗಿರದೆಯೂ ಇರಲಾರ. ಒಂದು ಹೇಳಿಕೆಯು ಸ್ಪಷ್ಟವಾಗಿ ಏನನ್ನೋ ಹೇಳಿರುತ್ತದೆ; ಅದಕ್ಕೆ ವಿರೋಧವಾಗಿರುವುದೆಲ್ಲಾ ಆ ಹೇಳಿಕೆಯಿಂದ ನಿರಾಕರಿಸಲ್ಪಟ್ಟಿರುತ್ತದೆ.

ತರ್ಕಶಾಸ್ತ್ರದ ಮುಂದಿನ ವಿಚಾರ ಸಮಾನಾಂಶವನ್ನು ಹೊರಚ್ಚಾಗಿಡುವುದು. ಇದನ್ನು "ಎಕ್ಸ್‌ಕ್ಲೂಡೆಡ್ ಮಿಡ್ಲ್" ಎನ್ನುತ್ತಾರೆ. ಅದು ಹೇಗೆ ಸಾಧ್ಯವೆಂದು ಬೊಬ್ಬೆ ಇಡಬಹುದಲ್ಲ! ವೈರುಧ್ಯವಿರುವ ಹೇಳಿಕೆಗಳ ಎರಡನೆಯ ರೂಪ ಇದು. ಅಂತಹ ಎರಡು ಹೇಳಿಕೆಗಳಿದ್ದರೆ ಎರಡೂ ತಪ್ಪಾಗಿರಲು ಸಾಧ್ಯವಿಲ್ಲ. ಅಂದರೆ, ಎರಡರಲ್ಲಿ ಒಂದಾದರೂ ಸರಿ ಇರಬೇಕು. ಇರುವುದೇ ಎರಡು ಪರ್ಯಾಯಗಳು. ಎರಡನ್ನೂ ಅಂಗೀಕರಿಸಲಾಗದು, ಒಂದು ಮಾತ್ರ ಅಂಗೀಕಾರಾರ್ಹ. ಎರಡನ್ನೂ ಬಿಟ್ಟು ಬೇರೊಂದನ್ನು ಅಂಗೀಕರಿಸ ಬರುವುದಿಲ್ಲ. ಉದಾಹರಣೆಗೆ, "ಅರಿಸ್ಟಾಟಲ್ ತಪ್ಪುಗಳನ್ನೆಸಗಿದ್ದಾನೆ." ಪರ್ಯಾಯವಾಗಿ "ಅರಿಸ್ಟಾಟಲ್ ತಪ್ಪುಗಳನ್ನೆಸಗಿಲ್ಲ."

ಇಂತಹ ಹೇಳಿಕೆಗಳನ್ನು ನಮ್ಮ ಶಬ್ದಬ್ರಹ್ಮದ್ವಯರು "ದ್ವಿ–ಮೌಲ್ಯಯುಕ್ತ" ಎನ್ನುತ್ತಾರೆ. ಚೇಸ್ ಮೂರು ಹೇಳಿಕೆಗಳ ಉದಾಹರಣೆ ಕೊಟ್ಟಿದ್ದಾನೆ: (ಅ) ಅಮೆರಿಕಾದ ಪ್ರಸಕ್ತ ಸನ್ನಿವೇಶವು ಸಾಮ್ಯವಾದವನ್ನು ಅನಿವಾರ್ಯವಾಗಿಸಿದೆ; (ಆ) ಅಮೆರಿಕಾದ ಸನ್ನಿವೇಶವು ಸಾಮ್ಯವಾದ ಇಲ್ಲವೇ ಫ್ಯಾಸಿಸಂಅನ್ನು ಅನಿವಾರ್ಯವಾಗಿಸಿದೆ; (ಇ) ಅಮೆರಿಕಾದ ಸರ್ಕಾರವು ವಿವಿಧ ರಾಜಕೀಯ ಸ್ವರೂಪಗಳನ್ನುಳ್ಳದ್ದಾಗಿ ವಿಕಸಿಸ ಬಹುದು; ಈಗಿನ ಸರ್ಕಾರಕ್ಕಿಂತಲೂ ಹೆಚ್ಚು ಸರ್ವಾಧಿಕಾರಿಯಾಗಬಹುದು, ಇಲ್ಲವೆ ಕಡಿಮೆ ಸರ್ವಾಧಿಕಾರಿಯಾಗಬಹುದು.

ಇಲ್ಲಿ ಎರಡನೆಯ ಉದಾಹರಣೆಯನ್ನು ನೋಡೋಣ: ಅಲ್ಲಿ ನೀಡಿರುವ ಪರ್ಯಾಯಗಳು ಗಾಬರಿ ಹುಟ್ಟಿಸುತ್ತವೆ. ಇರಲಿ, ನಾವು ಕೇವಲ ಹೇಳಿಕೆಗಳ ತರ್ಕವನ್ನು ಪರಿಶೀಲಿಸುತ್ತಿದ್ದೇವೆ. ಸಾಮ್ಯವಾದ ಮತ್ತು ಫ್ಯಾಸಿಸಂ ಪರಸ್ಪರ ಭಿನ್ನ, ಆದರೆ ವೈರುಧ್ಯ ಉಳ್ಳವಲ್ಲ. ಒಂದು ಇನ್ನೊಂದರ ಜೊತೆ ಇರಲಾರದು, ಆದರೆ ಎರಡಕ್ಕೂ ಭಿನ್ನವಾದ ಬೇರೆ ರಾಜಕೀಯ ಸಾಧ್ಯತೆಗಳುಂಟು. ಆದ್ದರಿಂದ ಇದನ್ನಿಟ್ಟುಕೊ ಇಲ್ಲವೆ ಇನ್ನೊಂದನ್ನಿಟ್ಟುಕೊ ಎಂಬ ಬಲವಂತವಿಲ್ಲ. ಇಲ್ಲಿ ತಪ್ಪು ತರ್ಕ ಇರುವುದು "ಇದು ಅಥವಾ ಅದು" ಅನ್ನುವುದರಲ್ಲಿ ಅಲ್ಲ; ಬದಲಾಗಿ ಯಾವ ಎರಡು ಎಂದು ಹೇಳುವುದರಲ್ಲಿ ತಪ್ಪಿದೆ. ಚೇಸ್‌ಗೆ ಭಿನ್ನವಾದ್ದು ಮತ್ತು ವಿರೋಧವಾದ್ದು ಎಂಬವುಗಳ ವ್ಯತ್ಯಾಸದ ಅರಿವಿಲ್ಲ. ಅವನ ಮೂರನೆಯ ಪರ್ಯಾಯವು ಪರ್ಯಾಯವೇ ಅಲ್ಲ, ಏಕೆಂದರೆ ಎರಡೂ ಸರ್ವಾಧಿಕಾರಿಗಳೇ.

ಚೇಸ್ ಫ್ಯಾಸಿಸಂ ಮತ್ತು ಸಾಮ್ಯವಾದಗಳನ್ನು ಪರ್ಯಾಯವಾಗಿ ಇರಿಸಿದ್ದಾನೆ. ಅವನಿಗೆ ಎರಡೂ ಬೇಡ. ಅವನ ಓದುಗರಿಗೆ ಸಹ ಅವೆರಡೂ ಬೇಡವೆಂಬುದು ಅವನ ಭಾವನೆ. ಈ ಎರಡನ್ನಾಧರಿಸಿ ಎಲ್ಲ ಜೋಡಿಗಳನ್ನೂ ನಿರಾಕರಿಸುವ ನೆಲೆಗೆ ಅವನು

ತಲುಪಿದ್ದಾನೆ. ಸಿದ್ಧಾಂತ ಅಂದರೆ ಬೆಚ್ಚಿಬೀಳುವ ಮನೋಭಾವ ಅವನದು. ಫ್ಯಾಸಿಸಂ ಮತ್ತು ಸಾಮ್ಯವಾದವನ್ನು ನಿರಾಕರಿಸುವಾಗ ತರ್ಕಬದ್ಧ ಚಿಂತನೆಯ ಮೂಲತತ್ವಗಳನ್ನೇ ಅವನು ನಿರಾಕರಿಸಿಬಿಟ್ಟಿದ್ದಾನೆ. ತರ್ಕವನ್ನು ಟೀಕಿಸುವುದಕ್ಕೆ ಸಾಮಾಜಿಕ ಕಾರಣಗಳಿರುತ್ತವೆಂಬುದು ಇದರಿಂದ ಸಿದ್ಧವಾಗುತ್ತದೆ. ಅನಿಶ್ಚಿತಭಾವದವರು, ಉದಾರವಾದದ ಹೂರಣವನ್ನು ಹೊರಗಿಟ್ಟು ತಾವು ಉದಾರವಾದಿಗಳೆಂದು ತೋರ್ಪಡಿಸಿಕೊಳ್ಳುವವರು "ಇದು ಅಥವಾ ಅದು" ಎನ್ನುವ ಆಯ್ಕೆಯೆಂದರೆ ಕಸಿವಿಸಿಪಡುತ್ತಾರೆ; ಏಕೆಂದರೆ, ನಿಜ ಜೀವನದಲ್ಲಿ ಅಂತಹ ಆಯ್ಕೆಯು ತಪ್ಪಿಸಿಕೊಳ್ಳಲಾಗದ ಸಮಸ್ಯೆಗಳನ್ನು ಅವರೆದುರು ಧುತ್ತೆಂದು ತಂದಿಡುತ್ತದೆ; ಎರಡೂ ವರ್ಜ್ಯವೆನ್ನುವವರಿಗೆ ಇದು ಅಸಹ್ಯ. ಆದ್ದರಿಂದ ಬೇರಿನ್ನೇನೋ ಸಾಧ್ಯತೆಗಳನ್ನು ಕಲ್ಪಿಸಿಕೊಳ್ಳುತ್ತಾರೆ. ಅವೂ ಮಸುಕಾಗಿ ಕಂಡಾಗ ದೊಡ್ಡ ದಾರ್ಶನಿಕರಂತೆ ಯೋಚಿಸಲಾರಂಭಿಸುತ್ತಾರೆ; ನಿಜಕ್ಕೂ ಯಾವುದೂ ಇದು ಅಥವಾ ಅದು ಆಗಿರುವುದಿಲ್ಲ, ಎಂದು.

ರಾಜಕೀಯ ಅಗತ್ಯಗಳ ಬಗ್ಗೆ ಇಂತಹ ತರ್ಕ ಹೂಡುವುದು ವಿನಾಶಕ್ಕೆ ಹಾದಿ. ಆದರೆ ಪರ್ಯಾಯಗಳ ಸಾಧ್ಯತೆಯನ್ನು ಮನಗಾಣದಿದ್ದರೆ ಆಯ್ಕೆಗೆ ಅವಕಾಶವೇ ಇಲ್ಲ. ತಟ್ಟೆಯಲ್ಲಿ ಅದೇ ಹಿಟ್ಟಿನ ಮುದ್ದೆ; ಹೇಗೆಹೇಗೆ ತಿರುಗಿಸಿ ನೋಡಿದರೂ ಅದೇ ಮುದ್ದೆ . ವೈರುಧ್ಯದ ನಿಯಮವನ್ನು ಅಲ್ಲಗಳೆದರೆ ಎಲ್ಲ ಹೇಳಿಕೆಗಳೂ ಸಮಾನವಾಗಿ ಸತ್ಯವೆಂದು ಭಾಸವಾಗುತ್ತವೆ; ಯಾವುದು ಸರಿ, ಯಾವುದು ತಪ್ಪು ಎಂಬ ವಿವೇಚನೆಗೆ ಅವಕಾಶವಿರುವುದಿಲ್ಲ. ಚಿಂತನೆಯೂ ಇಲ್ಲ, ಚಿಂತನಾ ವಿಧಾನವೂ ಇಲ್ಲ; ಕೇವಲ ಭಾವಗಳ ಸರಮಾಲೆ. ಫ್ಯಾಸಿಸ್ಟ್ ಸಿದ್ಧಾಂತವನ್ನು ಅಪ್ಪಿಕೊಳ್ಳಲು ವೇಗವಾಗಿ ಹೆಜ್ಜೆ ಹಾಕಲು ಸಿದ್ಧವಾಗಿರಬೇಕು. ಸ್ಪೇನಿನ ಅಂತರ್ಯುದ್ಧದ ಸನ್ನಿವೇಶದಲ್ಲಿ ಶಬ್ದಬ್ರಹ್ಮರು ನಿಶ್ಯಬ್ದವಾಗಿ ಉಳಿದುದರ ರಹಸ್ಯ ಅರ್ಥವಾಯಿತಲ್ಲವೆ?

ನೈತಿಕತೆಯ ಮೇಲಿನ ಹಲ್ಲೆ

ಇದನ್ನು ಮಾಡುವುದು ಸರಿಯೇ, ಇದು ಒಳ್ಳೆಯದೇ, ಇದನ್ನು ಮಾಡಬಾರದೇ, ಇವರ ನೀತಿಗಳು ಸಮರ್ಥನೀಯವೇ, ಇವು ಮತ್ತು ಇಂತಹ ಪ್ರಶ್ನೆಗಳನ್ನು ಜೀವನದುದ್ದಕ್ಕೂ ನಾವು ಎದುರಿಸುತ್ತಿರುತ್ತೇವೆ. ಇವೆಲ್ಲಾ ನೈತಿಕತೆಯ ಪ್ರಶ್ನೆಗಳು. ಒಳ್ಳೆಯದು, ಕೆಟ್ಟದ್ದು, ಸರಿ, ತಪ್ಪು, ಮಾಡಬೇಕಿತ್ತು, ಮಾಡಕೂಡದು, ಎಂಬ ಪದಗಳು ಅಂತಹ ಪ್ರಶ್ನೆಗಳ ಸೂಚಕಗಳು. ಆ ಪದಗಳು ವಾಸ್ತವವನ್ನು ಸೂಚಿಸುವ ಪ್ರಶ್ನೆಗಳಲ್ಲದೆ ಮಾಪನ ಮತ್ತು ತೀರ್ಮಾನಗಳೂ ಆಗಿರುತ್ತವೆ. "ಒಂದು ಅಣ್ವಸ್ತ್ರವು 50 ಸಾವಿರ ಜನಗಳನ್ನು ಕೊಲ್ಲುತ್ತದೆ" ಎಂಬುದು ವಾಸ್ತವವನ್ನು ಹೇಳುತ್ತದೆ; "50 ಸಾವಿರ ಜನಗಳನ್ನು ಕೊಲ್ಲಬಾರದು" ಎಂಬುದು ಮಾಪನದ ವಿಚಾರ. ಹಾಗೆ ತೀರ್ಮಾನಿಸಲು ಏನೋ ಕಟ್ಟಳೆಗಳಿರುತ್ತವೆ.

ಮಾನವನ ಅನುಭವದಿಂದ ಹೇಳುವುದಾದರೆ ನೈತಿಕ ಜೀವನವು ಒಂದು ರೀತಿಯ ಹೊರೆ. ಬೇರೆಯವರಿಗೆ ಸಂಹಿತೆಯನ್ನು ಬೋಧಿಸುವ, ಆದರೆ ಅದನ್ನು ತಾವು ಅನುಸರಿಸಬೇಕಾಗಿಲ್ಲದ, ಸ್ಥಾನಗಳಲ್ಲಿ ಕೆಲವರು ಕೂತುಬಿಡುತ್ತಾರೆ; ಅವರಿಗೆ ನೈತಿಕತೆಯು ಹೊರೆಯಲ್ಲ. ನೈತಿಕತೆಯು ನೇತ್ಯಾತ್ಮಕ ಶಿಸ್ತಲ್ಲ, ಆದರೂ ಅದು ಅತಿಯಾಗಿ

"ಬೇಡ"ಗಳನ್ನು ಬೋಧಿಸುತ್ತದೆ. ನೈತಿಕತೆಯನ್ನು ಸಹಿಸಲಾಗದಷ್ಟು ದೊಡ್ಡ ಹೊರೆಯನ್ನು ಯಾರೋ ಹೊತ್ತಿದ್ದನಂತೆ. ಅವನೊಮ್ಮೆ ಉದ್ಗರಿಸಿದ: "ನಾನು ಇಷ್ಟಪಡುವುದೆಲ್ಲಾ ಕಾನೂನುಬಾಹಿರ, ಇಲ್ಲವೆ ಅನಾರೋಗ್ಯಕರ, ಇಲ್ಲವೆ ಅನೈತಿಕ." ಎಲ್ಲ ಪ್ರಾಮಾಣಿಕರಿಗೂ ಒಂದಲ್ಲ ಒಂದು ವೇಳೆ ಹಾಗನಿಸಿರಬಹುದು.

ನೈತಿಕ ಉಪದೇಶಗಳಿಗೆ ಕೊರತೆಯಿಲ್ಲ, ಆದರೆ ಅವುಗಳಿಂದ ನುಣುಚಿಕೊಳ್ಳಲು ಏನೋ ಮಾರ್ಗ ಹುಡುಕಿಕೊಳ್ಳುವುದೂ ಅಪರೂಪವಲ್ಲ. ಅದರಲ್ಲಿ ಎಲ್ಲರೂ ನಿಪುಣರೇ. ಬುದ್ಧಿವಂತಿಕೆಯನ್ನು ಅಳೆಯಲು ಅದನ್ನು ಸಾಧನ ಮಾಡಿಕೊಂಡರೆ ಟನ್ನುಗಟ್ಟಲೆ ಬುದ್ಧಿವಂತಿಕೆ ನಮ್ಮಲ್ಲಿ ಅಗಾಧವಾಗಿ ತುಂಬಿರುವುದು ಕಾಣಬರುತ್ತದೆ. ಮೌಲ್ಯದ ಬಗೆಗಿನ ತೀರ್ಮಾನಗಳು ವಾಕ್ಯರಚನಾ ನೆಲೆಯಲ್ಲಿ ಗೊಂದಲದಿಂದ ಕೂಡಿವೆಯೆಂಬ ವಿಶಿಷ್ಟವಾದ ವಾದವನ್ನು ಇಪ್ಪತ್ತನೆಯ ಶತಮಾನದವರೆಗೆ ಯಾರೂ ಗಂಭೀರವಾಗಿ ಮಂಡಿಸಿರಲಿಲ್ಲ. ಅದನ್ನು ತಿಳಿಯಲು ಚೇಸ್ ಮತ್ತು ಕೋರ್ಸಿಬ್‌ಸ್ಕಿಗಳಿಗೆ ವಿದಾಯ ಹೇಳಿ ತಾರ್ಕಿಕ ಪ್ರತ್ಯಕ್ಷವಾದದತ್ತ ಹೊರಳಬೇಕು. ಆರಂಭಿಕ ಹಂತದಲ್ಲಿ ಈ ಸಿದ್ಧಾಂತವಾದಿಗಳು ಸೂಚಿಸಿದ್ದ ಸೂತ್ರ ಇದು: ಎಲ್ಲ ಹೇಳಿಕೆಗಳನ್ನೂ ಎರಡು ವರ್ಗಗಳನ್ನಾಗಿ ವಿಂಗಡಿಸಬಹುದು; ಅರ್ಥವತ್ತಾದವು ಮತ್ತು ಅರ್ಥರಹಿತವಾದವು. ಅರ್ಥವತ್ತಾದವು ಎರಡು ವಿಧ: (ಅ) ಹೇಳಿದ್ದನ್ನೇ ಬೇರೆ ಬೇರೆ ಮಾತುಗಳಲ್ಲಿ ಹೇಳುವುದು; ಇಲ್ಲಿ ನಾಮಪದ ಮತ್ತು ಸಂಯೋಜಕ ಪದ ಎರಡೂ ಒಂದೇ. ಉದಾಹರಣೆಗೆ, "ತಲೆಯೆಂಬುದು ಶಿರಸ್ಸು" (ತಲೆಶಿರೋಭಾರ ಇದ್ದಂತೆ). (ಆ) ಯಾವುವನ್ನು ಇಂದ್ರಿಯಾನುಭವದಿಂದ ಪರೀಕ್ಷೆಗೆ ಒಡ್ಡಬಹುದೋ ಅವು. ಉದಾಹರಣೆಗೆ, "ತ್ರಿಕೋಣವು ಮೂರು ಭುಜಗಳನ್ನು ಹೊಂದಿರುತ್ತದೆ;" ಅಥವಾ "ಅವನು ಪಂಚೆ ಉಟ್ಟಿದ್ದಾನೆ." ಇವನ್ನು ಖಚಿತಪಡಿಸಿಕೊಳ್ಳಲು ಸಾಧ್ಯ.

ಇದನ್ನು ನೀತಿಶಾಸ್ತ್ರ ಇಲ್ಲವೇ ದೈವತಾಶಾಸ್ತ್ರಕ್ಕೆ ಅನ್ವಯಿಸಿ ನೋಡಿ: "ದೇವರು ಮೂರು ಅಂಶಗಳನ್ನುಳ್ಳ ದಿವ್ಯಾತ್ಮ." ಇದು ಅರ್ಥವತ್ತಾದ ಮಾತು, ದೇವರ ಲಕ್ಷಣವನ್ನು ಹೇಳುವ ವಾಕ್ಯ. ಅದೇ "ದೇವರು ಇದ್ದಾನೆ" ಎಂಬ ವಾಕ್ಯ ನೋಡಿ. ಅಲ್ಲಿ ಲಕ್ಷಣ ಹೇಳುವ ಅಂಶವೇನೂ ಇಲ್ಲ. ಅದು ಅರ್ಥರಹಿತ ವಾಕ್ಯ, ಏಕೆಂದರೆ ದೇವರು ಎಂಬುವವನು(ಳು) ಇಂದ್ರಿಯಾನುಭವಕ್ಕೆ ದಕ್ಕುವುದಿಲ್ಲ. ದೈವತಾಶಾಸ್ತ್ರಜ್ಞರು ತಮ್ಮ ಮಾತು ಸುಳ್ಳೆಂಬುದನ್ನು ಕೇಳಿ ಕೇಳಿ ಜಡ್ಡಾಗಿಬಿಟ್ಟಿದ್ದರು, ಆದರೆ "ನೀವು ಅರ್ಥವತ್ತಾದುದನ್ನು ಏನನ್ನೂ ಹೇಳುತ್ತಿಲ್ಲ" ಎಂದಾಗ ಅವರು ಮುಗ್ಗಟ್ಟಿಗೆ ಸಿಲುಕಿಬಿದ್ದರು.

ನೀತಿಶಾಸ್ತ್ರಕ್ಕೆ ಅನ್ವಯಿಸಿದರೆ ಅದಿನ್ನೂ ಹೆಚ್ಚು ಅಚ್ಚರಿ ಉಂಟುಮಾಡುತ್ತದೆ. "ಅಣ್ವಸ್ತ್ರವು 50 ಸಾವಿರ ಜನರನ್ನು ಕೊಲ್ಲುತ್ತದೆ" ಎಂಬುದು ವಾಸ್ತವದ ಹೇಳಿಕೆ ಎಂದೆವು. ಅದನ್ನು ಪರೀಕ್ಷೆಗೆ ಒಡ್ಡಿ ತಿಳಿಯಬಹುದು. (ಆದರೆ ಅಂತಹ ಅವಕಾಶ ಬೇಡ). ತಾರ್ಕಿಕ ಪ್ರತ್ಯಕ್ಷವಾದಿಗಳ ಪ್ರಕಾರ ಅದೊಂದು ಅರ್ಥವತ್ತಾದ ಹೇಳಿಕೆ. ಅದೇ ಇನ್ನೊಂದು ವಾಕ್ಯ ನೋಡಿ: "50 ಸಾವಿರ ಜನರನ್ನು ಕೊಲ್ಲುವುದು ಕೆಟ್ಟದ್ದು." ಅದು ವಾಸ್ತವದ ಹೇಳಿಕೆಯಲ್ಲ, ಬದಲಾಗಿ ಮಾಪನದ ಹೇಳಿಕೆ. ಕೊಲ್ಲುವುದನ್ನು ಕಾಣಬಹುದು, ಆದರೆ "ಕೆಟ್ಟದ್ದು" ಎಂಬುದನ್ನು ಕಾಣಲಾರೆವು. ಅಂದರೆ, ನಾವು ಘಟನೆಯ ಬಗೆಗೆ ನಮ್ಮ ದೃಷ್ಟಿಯನ್ನು ಹೇಳುತ್ತಿದ್ದೇವೆ. ಒಂದು ವಾಸ್ತವ ಸಂಗತಿಯ ಹೇಳಿಕೆಗೆ "ಕೆಟ್ಟದು" ಎಂಬ

ಪದವು ಯಾವ ವಾಸ್ತವವನ್ನೂ ಸೇರಿಸುವುದಿಲ್ಲ; ಘಟನೆಯ ಬಗೆಗಿನ ನಮ್ಮ ಭಾವನೆ ವ್ಯಕ್ತವಾಗುತ್ತದೆ, ಅಷ್ಟೇ. ದಿಗಿಲುಗೊಂಡು "ಅಯ್ಯಯ್ಯೋ, ಅಣ್ವಸ್ತ್ರವು 50 ಸಾವಿರ ಜನರನ್ನು ಕೊಲ್ಲಲು ಸಮರ್ಥವಾಗಿದೆ" ಎಂದು ಹೇಳಿದಂತಾಗುತ್ತದೆ.

ಇನ್ನಾವನೋ ಇದ್ದಾನೆ, ನಿರ್ನಾಮ ಮಾಡುವುದು ಪರಮೋತ್ಕೃಷ್ಟ ಎಂಬುದು ಅವನ ಯೋಚನೆ ಎಂದುಕೊಳ್ಳೋಣ. ಅವನು ಸಂತೃಪ್ತನಾಗಿ ಹೇಳಬಲ್ಲ, "ಆಹಾ! ಎಂಥ ಅಸ್ತ್ರ, 50 ಸಾವಿರ ಜನರನ್ನು ಕೊಲ್ಲಲು ಸಮರ್ಥವಾಗಿದೆಯಲ್ಲ." (ನಂತರದ ದಶಕಗಳಲ್ಲಿ ಎಡ್ವರ್ಡ್ ಟೆಲರ್ ಅಂತಹ ಆನಂದವನ್ನು ನ್ಯೂಟ್ರಾನ್ ಬಾಂಬಿನ ಬಗ್ಗೆ ವ್ಯಕ್ತಪಡಿಸಿದ್ದ). ನಾವು ಸಾಮಾನ್ಯವಾಗಿ ತಿಳಿಯುವಂತೆ ಇವರಿಬ್ಬರೂ ನೈತಿಕವಾಗಿ ಪರಸ್ಪರ ವಿರೋಧಿ ನೈತಿಕ ಅಭಿಪ್ರಾಯಗಳನ್ನುಳ್ಳವರು. ಇಬ್ಬರೂ ತಮ್ಮ ನಿಲುವನ್ನು ತರ್ಕಬದ್ಧವಾಗಿ ಮಂಡಿಸಬಲ್ಲರು. ನಾನೇನಾದರೂ ಇವರಿಬ್ಬರಲ್ಲಿ ಮೊದಲನೆಯವನಾದರೆ ಎರಡನೆಯವನನ್ನು ಕೂಡಲೆ ಮನೋರೋಗ ತಜ್ಞನಲ್ಲಿಗೆ ಒಯ್ಯುತ್ತೇನೆ. ಆದರೆ ನವೀನ ಸಿದ್ಧಾಂತಗಳು ಬಂದಿವೆ. ಅದರಂತೆ ಒಬ್ಬನ ಹತಾಶೆಗೂ ಇನ್ನೊಬ್ಬನ ಸಂಭ್ರಮಕ್ಕೂ ಸತ್ಯ ಮತ್ತು ಮಿಥ್ಯೆ ಎಂಬ ನೆಲೆಯಿಲ್ಲ. ಆಕ್ಸ್‌ಫರ್ಡ್‌ನ ಮಹಾಮೇಧಾವಿ ತತ್ವಶಾಸ್ತ್ರಜ್ಞ ಎ.ಜೆ. ಏಯರ್ ಅದನ್ನು ಹೀಗೆ ನಿರೂಪಿಸಿದ್ದಾನೆ:

"ಕದಿಯುವುದು ತಪ್ಪೆಂಬ ನನ್ನ ಅಭಿಪ್ರಾಯವನ್ನು ಬೇರೊಬ್ಬ ಅಂಗೀಕರಿಸದಿರ ಬಹುದು; ಅಂದರೆ ಕಳ್ಳತನದ ಬಗ್ಗೆ ನನಗಿರುವ ಭಾವನೆಯೇ ಅವನದೂ ಅಲ್ಲ. .... ಆದರೆ ಅವನು ನನ್ನ ಮಾತನ್ನು ವಿರೋಧಿಸಲಾರ. ..... ನಮ್ಮಿಬ್ಬರಲ್ಲಿ ಯಾರು ಸರಿಯೆಂಬ ಪ್ರಶ್ನೆ ಅಪ್ರಾಸಂಗಿಕ. ಏಕೆಂದರೆ, ನಮ್ಮಲ್ಲಿ ಯಾರೊಬ್ಬರೂ ಚೊಕ್ಕವಾದ ವಿಚಾರವನ್ನು ಎತ್ತಿ ಹೇಳುತ್ತಿಲ್ಲ."

ಈಗ ತಿಳಿಯಿತೇ ಸಮಾಚಾರ? ರಾಮ ಕದಿಯುವುದು ನೈತಿಕವಾಗಿ ತಪ್ಪು ಎನ್ನುತ್ತಾನೆ, ಕದಿಯುವುದು ನೈತಿಕವಾಗಿ ಶ್ಲಾಘನೀಯವೆಂದು ಕೃಷ್ಣ ಎನ್ನುತ್ತಾನೆ. ಇಬ್ಬರ ವಾಕ್ ಶಬ್ದಗಳಿಗೂ ಬಹಳ ಸೀಮಿತ ಅರ್ಥವಿದೆ. 'ಕದಿಯುವುದು' ಎಂಬ ಉದಾಹರಣೆ ಬೋಧನಾ ವೃತ್ತಿಯವರದು, ಬಿಡಿ. ಒಬ್ಬರು ಬರೆದಿದ್ದುದನ್ನು ಇನ್ನೊಬ್ಬರು ಕದಿಯುವುದು ಅವರಲ್ಲಿ ಆಗಾಗ್ಗೆ ನಡೆಯುವ ಪ್ರಸಂಗ. ಆದ್ದರಿಂದ ಅಷ್ಟು ಸ್ಫುಟವೂ ಗಡುಸಿನದೂ ಅಲ್ಲದ ಬೇರೊಂದು ಉದಾಹರಣೆ ನೋಡೋಣ. ಎಲಾ ವಿಂಟರ್ ಎಂಬಾಕೆ ಆಸ್ಪತ್ರೆಯಲ್ಲಿ ದಾದಿ. ಹತ್ತು ವರ್ಷದ ಬಾಲಕನೊಬ್ಬ ಚಿಕಿತ್ಸೆ ಪಡೆಯಲು ಬಂದ. ಅವನು ರಷ್ಯಾದವನು. ಅವನಿಗೆ ಮಂಪರು ಬರಿಸಲಾಯಿತು. ಕೂಡಲೆ ಮೂರು ವರ್ಷದ ಹಿಂದಿನ ಅನುಭವ ಅವನ ಮಾತುಗಳಲ್ಲಿ ಹೊರಬಿದ್ದಿತು. ಹಳ್ಳಿಯಲ್ಲಿ ಅವನ ಚಿಕ್ಕಪ್ಪನನ್ನು ನಾಜ಼ಿಗಳು ನೇಣು ಹಾಕಿದ್ದರು. ಅವನೆಂದೂ ಹೇಳಿರದಿದ್ದ ಮಾತುಗಳು ಹೊರಬಿದ್ದವು:

"ಅಳುತ್ತಾ ಅವನೆಂದ: 'ಅಳಬೇಡ ಅಜ್ಜಿ, ಹೊರಟುಹೋಗು. ವಾಸ್ಯ ಚಿಕ್ಕಪ್ಪನಿಗೆ ಹಾಗಾಗುವುದು ನನಗೆ ಬೇಡ. ಆ ಜರ್ಮನರು ಏನು ಮಾಡಿದ್ದಾರೆ ನೋಡು! ಅವನ ತಲೆಯನ್ನು ಪೂರ್ತಿ ಸಿಗಿದುಹಾಕಿದ್ದಾರೆ......ದೇವರು ಎಲ್ಲವನ್ನೂ ನೋಡುತ್ತಾನೆ .....

"ವಾಸ್ಯನನ್ನು ಕೆಳಗಿಳಿಸಿ ಹೂಳಲು ಹೋದಾಗ, ನೋಡು, ಅವನೆಷ್ಟು ಬಿಗಿ ಆಗಿದ್ದಾನೆ. ಶವ ಪೆಟ್ಟಿಗೆಯಲ್ಲಿ ನಾನೂ ಅವನೊಡನೆ ಮಲಗುತ್ತೇನೆ. ನೋಡು, ವಾಸ್ಯ ಚಿಕ್ಕಪ್ಪ ಎಷ್ಟು ಒಳ್ಳೆಯವನು.

"ಚಿಕ್ಕಪ್ಪ ವಾಸ್ಯನನ್ನು ನಾನೆಂದೂ ಮರೆಯಲಾರೆ (ಹಾಗೆನ್ನುತ್ತಾ ಅಳಲಾರಂಭಿಸಿದ) .... ಆ ಜರ್ಮನನನ್ನು ನಾನು ಕೊಲ್ಲುತ್ತೇನೆ. ಹೇ, ರಷ್ಯಾದವರೇ, ಹೋಗಿ ಜರ್ಮನರನ್ನು ಕೊಲ್ಲಿ. ಚಿಕ್ಕಪ್ಪ ವಾಸ್ಯ ಜೀವಂತವಾಗಿರಬೇಕು. ದೇವರು ಅವನನ್ನು ಸ್ಮಶಾನದಿಂದ ಹಿಂದಕ್ಕೆ ತರಬೇಕು. ಅಜ್ಜಿ, ಅಳಬೇಡ; ಅತ್ತರೆ ಜರ್ಮನ್ನರು ನಿನ್ನನ್ನು ಸಾಯಿಸುತ್ತಾರೆ. ಅಜ್ಜಿ, ದುಃಖದಿಂದ ನಿನ್ನ ಎದೆ ಒಡೆದುಹೋಗುತ್ತದೆ."

ವಾಸ್ಯನ 'ಅಪರಾಧ' ರಷ್ಯದ ಒಬ್ಬ ಸೈನಿಕನನ್ನು ಪಾರುಮಾಡಿದ್ದುದು. ಅವನಿಗೆ ನಾಝಿಗಳು ಏನು ಮಾಡಿದರೆಂಬುದು ಒತ್ತಟ್ಟಿಗಿರಲಿ. ಬೇರೆ ಮಕ್ಕಳಿಗೆ ಅವರು ಮಾಡಿದ್ದೇನು? ನಾಲಿಗೆಗಳನ್ನು ಕತ್ತರಿಸಿದರು, ಕಿವಿಗಳನ್ನು ಕತ್ತರಿಸಿದರು, ಶರೀರಗಳನ್ನು ಗುಂಡಿನ ಗುರಿ ಹೊಡೆಯುವುದನ್ನು ಅಭ್ಯಾಸ ಮಾಡಿಕೊಳ್ಳಲು ಬಳಸಿಕೊಂಡರು. ಮೈದಾನೆಕ್ ಸಾವಿನ ಶಿಬಿರದಲ್ಲಿ ಮಕ್ಕಳ ಪಾದರಕ್ಷೆಗಳು ರಾಶಿ ರಾಶಿ ಬಿದ್ದಿರುವುದನ್ನು ಹೇಳಹೋಗುವುದಿಲ್ಲ. ಆ ತತ್ವಶಾಸ್ತ್ರ ಪಂಡಿತರಿದ್ದಾರಲ್ಲ, ಅವರ ನಿಲುವನ್ನು ನೋಡೋಣ. ಅವರ ಪ್ರಕಾರ ನೈತಿಕ ತೀರ್ಮಾನಗಳು ಕೇವಲ ವೈಯ್ಯಕ್ತಿಕ ಭಾವನೆಗಳ ಅಭಿವ್ಯಕ್ತಿ. ಆ ಬಾಲಕ ವಿತ್ಯಾ ಜೋರಾಗಿ ಅಳುತ್ತಾ ಅಜ್ಜಿಗೆ ಹೇಳಿದನಲ್ಲ, "ಅಳಬೇಡ, ದುಃಖದಿಂದ ನಿನ್ನ ಎದೆ ಒಡೆದುಹೋಗುತ್ತದೆ" ಎಂದು. ಅದರ ಬಗ್ಗೆ ಈ ತತ್ವಶಾಸ್ತ್ರಿಗಳು ಪರಿಶೀಲನೆ ನಡೆಸಲಿ. ಈ ಅಂಜುಬುರುಕರನ್ನು ನಾನು ಕೇಳುವೆ: "ಮಾನ್ಯರೇ, ಮಕ್ಕಳನ್ನು ಹೀಗೆ ಬಳಸಿಕೊಳ್ಳುವುದು ಪಾತಕ, ಮಹಾಪಾತಕ. ಈ ನನ್ನ ಹೇಳಿಕೆಯು ಚೊಕ್ಕವಾದ ವಿಚಾರವನ್ನು ಹೇಳುತ್ತಿದೆಯೇ?" ನಮ್ಮ ನೈತಿಕ ಶಿಖಾಮಣಿಗಳು "ಇಲ್ಲ, ಅದೇನೂ ಚೊಕ್ಕ ವಿಚಾರದ ಹೇಳಿಕೆಯಲ್ಲ" ಎನ್ನುತ್ತಾರೆ. ನಾನವರಿಗೆ ಹೇಳುವೆ: "ಮಾನ್ಯರೆ, ವಿತ್ಯಾನ ವಯಸ್ಸಿನ ಮಗನೊಬ್ಬ ನನಗಿದ್ದಾನೆ. ಅದೇ ವಯಸ್ಸಿನ ಸ್ನೇಹಿತರು ಅವನಿಗಿದ್ದಾರೆ. ನನ್ನ ಅನೇಕ ಸ್ನೇಹಿತರಿಗೆ ಆ ವಯಸ್ಸಿನ ಮಕ್ಕಳಿದ್ದಾರೆ. ನಾನು ಹೇಳುತ್ತೇನೆ ಕೇಳಿ, ಮಕ್ಕಳ ಕಲ್ಯಾಣವು ವೈಯ್ಯಕ್ತಿಕ ಇಚ್ಛಾನಿಚ್ಛೆಯ ಪ್ರಶ್ನೆಯಾಗುವುದಿಲ್ಲ."

ಇದೆಂತಹ ವಿಪರ್ಯಾಸ, ನೋಡಿ. ಏಕಕಾಲಕ್ಕೆ ಅದು ಅಸಂಗತವೂ ಹೌದು, ನಿರೀಕ್ಷಿತವೂ ಹೌದು: ಜನರಿಗೆ ಅತ್ಯಂತ ಕರಾಳವಾದ ಯಾತನೆಯನ್ನು ಉಗ್ರವಾಗಿ ನೀಡುತ್ತಿರುವ ಸಂದರ್ಭದಲ್ಲೇ ನೈತಿಕ ತೀರ್ಮಾನಗಳಿಗೆ ಯಾವ ಪುರಾವೆಯೂ ಇಲ್ಲವೆಂದು ಸಾರುವ ತತ್ವಶಾಸ್ತ್ರ ನಮ್ಮ ಮುಂದಿದೆ. ತಮ್ಮ ಸಿದ್ಧಾಂತಗಳ ಪರಿಣಾಮ ಎಷ್ಟು ಜೀವವಿರೋಧಿಯೆಂದು ತಿಳಿದು ಅದರಿಂದ ಹಿಂದಕ್ಕೆ ಸರಿಯುತ್ತಾರೆಂದೂ ಮತ್ತು ಅದನ್ನು ಪುನರ್ವಿಮರ್ಶೆಗೆ ಒಡ್ಡುತ್ತಾರೆಂದೂ ಆಶಿಸಬೇಕಾಗಿದೆ. ಸಾವಿನ ಮನೆಗಳು ಮತ್ತು ಬಿಡುಗಡೆ, ಇವುಗಳ ನಡುವೆ ತರ್ಕಬದ್ಧವಾಗಿ ಯಾವುದನ್ನೂ ಆಯ್ಕೆ ಮಾಡಿಕೊಳ್ಳಲಾಗದಂತಹ ಪರಿಣಾಮ ಅವರ ಸಿದ್ಧಾಂತದ್ದು. ಒಪ್ಪಿಗೆ ಇಲ್ಲವೇ ತಿರಸ್ಕಾರವನ್ನು ಸೂಚಿಸಬಹುದೇ ವಿನಾ ಆ ಸಿದ್ಧಾಂತದಡಿ 'ಫ್ಯಾಸಿಸ್ಟ್ ದುರಾಚಾರಗಳು ಹೊಲ್ಲತು' ಎನ್ನುವಂತಿಲ್ಲ; ಬೇಕಾದರೆ ವೈಯ್ಯಕ್ತಿಕವಾಗಿ ಅವನ್ನು ಅನಿಷ್ಟವೆಂದು ಭಾವಿಸಬಹುದು. ಇಂತಹ ತತ್ವಶಾಸ್ತ್ರವು ಫ್ಯಾಸಿಸ್ಟರಿಗೆ ಪ್ರಿಯವಾದ್ದು, ಏಕೆಂದರೆ ಇದರಡಿ ನೈತಿಕ ಪ್ರಶ್ನೆಗಳನ್ನು ಸುಮ್ಮನೆ ಪೊಲೀಸರಿಗೆ ಬಿಟ್ಟುಬಿಡಬಹುದು.

ಈ ಅಸಂಗತತೆಯು ಉಂಟಾಗುವುದು ಒಂದು ತತ್ವಶಾಸ್ತ್ರೀಯ ಪಕ್ಷಪಾತದಿಂದ. ಏಯರ್ ಪ್ರಕಾರ ವಾಸ್ತವವನ್ನು ತಿಳಿಸುವ ಮತ್ತು ನಾಮಪದ ಹಾಗೂ ಸಂಯೋಜಕ

ಪದ ಒಂದೇ ಆಗಿರುವ (ಇದನ್ನು 'ಟಾಟಾಲಜಿ'ಎನ್ನುತ್ತಾರೆ) ಹೇಳಿಕೆಗಳು ಮಾತ್ರ ಅರ್ಥವತ್ತಾದವು. ಆದ್ದರಿಂದ ನೈತಿಕತೆಯನ್ನು ಸೂಚಿಸುವ ಹೇಳಿಕೆಗಳಿಗೇನಾದರೂ ಅರ್ಥವಿದ್ದರೆ ಅದು ಮನೋವೈಜ್ಞಾನಿಕವಾದ್ದು, ಅಷ್ಟೆ. ಅದಕ್ಕೆ ಈ ಸಿದ್ಧಾಂತಗಳೇನೂ ಕಾರಣ ನೀಡುವುದಿಲ್ಲ; ಅದು ಅವರ ಭಾವನೆ ಅಷ್ಟೆ. ಅವರಿಗೆ ವಿಜ್ಞಾನ ಮತ್ತು ಗಣಿತಶಾಸ್ತ್ರ ಗಂಭೀರವಾದ ಶಿಸ್ತುಗಳು. ಆದರೆ ನೀತಿಶಾಸ್ತ್ರವೆಂದರೆ ಏನೋ ತೀವ್ರ ಅಸಡ್ಡೆ. ಆದ್ದರಿಂದಲೇ ನೈತಿಕತೆಯನ್ನು ಕೇವಲ ವೈಯ್ಯಕ್ತಿಕ ಭಾವನೆಯ ಮಟ್ಟಕ್ಕೆ ಇಳಿಸುತ್ತಾರೆ. ಏನಿರಬೇಕು, ಹೇಗಿರಬೇಕು ಎಂಬುವು ಗೌಣ, ಆದರೆ ಏನಿದೆ ಮತ್ತು ಹೇಗಿದೆ ಎಂಬುವು ನಿರ್ಣಾಯಕ.

ಏಯರ್ ಅಂಥವರಿಗೆ ನೀತಿಶಾಸ್ತ್ರವು ತಿರುಳಿಲ್ಲದ ಸಂಗತಿ. ವೈಯ್ಯಕ್ತಿಕವಾಗಿ ಅವರು ನೈತಿಕತೆಯನ್ನು ಹಾಗೆ ಕಡೆಗಣಿಸುವಂತಿಲ್ಲ. ಅತಿಥಿಯಾಗಿ ಅವರು ನಿಮ್ಮ ಮನೆಗೆ ಬಂದರೆ ಚಮಚಗಳನ್ನು ಜೇಬಿಗೆ ಹಾಕಿಕೊಂಡು ಹೋಗುವುದಿಲ್ಲ; ಆದರೆ ತತ್ವಶಾಸ್ತ್ರದ ನೆಲೆಯಲ್ಲಿ ಅವರು ನೈತಿಕತೆಯನ್ನು ಹಗುರವಾಗಿ ಕಾಣುತ್ತಾರೆ. "ನಾಝಿಗಳು ಮಕ್ಕಳಿಗೆ ತೀವ್ರ ಹಿಂಸೆ ನೀಡುವುದು ಹೊಲ್ಲತು" ಎಂದಾಗ ಅದು ಕೇವಲ ಒಂದು ಹೇಳಿಕೆಯಲ್ಲ; ಅದರ ಜೊತೆ ಒಂದು ಮೌಲಿಕ ತೀರ್ಮಾನವಿದೆ. ಏಯರ್ ಅಲ್ಲಗಳೆಯುವುದು ಅದನ್ನೇ. ಅವನ ಪ್ರಕಾರ ನೈತಿಕ ತೀರ್ಮಾನವು ಕೇವಲ ಅಸಮ್ಮತಿಯ ಸೂಚಕ. ಆದರೆ ಯಾವುದನ್ನೋ 'ಹೊಲ್ಲತು' ಎಂದು ನಾವೆಂದಾಗ ಅದನ್ನು ಯಾರೂ ಆಚರಣೆಗೆ ತರಬಾರದೆಂಬ ಸೂಚನೆಯೂ ಅಡಗಿದೆ; ಜೊತೆಗೆ, ಎಲ್ಲರೂ ಅದನ್ನು ಹಾಗೆ ಪರಿಗಣಿಸಬೇಕೆಂಬುದೂ ಇದೆ. ನೈತಿಕ ನಿಯಮವು ಎಲ್ಲರಿಗೂ ಅನ್ವಯವಾಗುತ್ತದೆಂಬುದೇ ಅದರ ವೈಶಿಷ್ಟ್ಯ. ಯಾರೋ ಒಬ್ಬರು ಅಸಮ್ಮತಿ ಸೂಚಿಸುವ ವಿಚಾರವಲ್ಲ ಅದು. ಅದಕ್ಕೊಂದು ವಾದದ ತಳಹದಿ ಇದೆ, ಪರೀಕ್ಷೆಗೊಳಗಾಗುವ ಲಕ್ಷಣವಿದೆ.

ಕಡೆಯ ಮಾತು: ಏಯರ್‌ನ ತಾರ್ಕಿಕ ಪ್ರತ್ಯಕ್ಷವಾದವನ್ನು ಆತನ ಸಿದ್ಧಾಂತಕ್ಕೇ ಅನ್ವಯಿಸಿದರೆ ಅದರ ಮೂಲಸೂತ್ರಗಳೇ ಅರ್ಥರಹಿತವಾಗುತ್ತವೆ. ಏಕೆಂದರೆ ಆತನ ಹೇಳಿಕೆಗಳು ಲಕ್ಷಣ ಸೂಚಕಗಳಲ್ಲ. ಅವು ಅರ್ಥವತ್ತಾಗಬೇಕಾದರೆ ಅವನೇ ಹೇಳಿರುವಂತೆ ಅವನ್ನು ಯಾವುದಾದರೂ ಇಂದ್ರಿಯಾನುಭವದ ಪರೀಕ್ಷೆಗೆ ಒರೆ ಹಚ್ಚುವಂತಿರಬೇಕು. ಎಲ್ಲ ಅರ್ಥವತ್ತಾದ ಹೇಳಿಕೆಗಳನ್ನೂ ಹೇಗೆ ತಾನೆ ಇಂದ್ರಿಯಾನುಭವದ ಪರೀಕ್ಷೆಗೆ ಒರೆಹಚ್ಚಲು ಶಕ್ಯ? ಸಾಧ್ಯವಿಲ್ಲದ ಮಾತು. ಕೇವಲ ಇಂದ್ರಿಯಾನುಭವವು ಯಾವುದೇ ಹೇಳಿಕೆಯ ಸರ್ವಸ್ವವನ್ನೂ ತಿಳಿಸಲು ಸಮರ್ಥವಲ್ಲ; ಏಕೆಂದರೆ ಆ ಇಂದ್ರಿಯಾನುಭವವನ್ನು ಸಹ ಹೇಳಿಕೆಯೊಡನೆ ತುಲನೆ ಮಾಡಬೇಕಾಗುತ್ತದೆ. ಹಾಗೆ ಮಾಡುವ ಮುನ್ನವೇ ಹೇಳಿಕೆಯ ಅರ್ಥ ತಿಳಿದಿರಬೇಕಲ್ಲ! ಒಟ್ಟಿನಲ್ಲಿ ತನ್ನ ಸಿದ್ಧಾಂತದ ಪ್ರಕಾರವೇ ಈ ಸಿದ್ಧಾಂತವು ಅರ್ಥರಹಿತವಾಗಿಬಿಟ್ಟಿದೆ. ಹಾಗಿರುವಾಗ ಅದರಡಿ ನಾವು ಹೇಗೆ ತಾನೆ ನೈತಿಕ ತೀರ್ಮಾನಗಳನ್ನು ಮತ್ತು ತಾರ್ಕಿಕ ಸಾಧನಗಳನ್ನು ಬಿಟ್ಟುಕೊಡಲು ಸಾಧ್ಯ? ಒಳಿತನ್ನು ಸ್ವೀಕರಿಸಿ ಹೊಲ್ಲತನ್ನು ನಿರಾಕರಿಸುವುದೇ ಆ ಸಾಧನಗಳಿಂದ. ಮನುಕುಲದ ಭವಿಷ್ಯದ ಬಗ್ಗೆ ಕಾಳಜಿ ಇರುವವರ ಹಾದಿ ಏಯರ್ ಮತ್ತು ಇತರ ಪದಬ್ರಹ್ಮರು ಸೂಚಿಸಿರುವುದಂತೂ ಅಲ್ಲ.

ಸಾಮಾಜಿಕ ಪ್ರತಿಪಾದನೆಗಳ ಮೇಲೆ ಹಲ್ಲೆ

ಅಪರಿಚಿತ ದಾರ್ಶನಿಕ ಲೋಕದಿಂದ ನಮ್ಮ ಅನುಭವದ ಪ್ರಪಂಚಕ್ಕೆ ಹಿಂದಿರುಗೋಣ. ತರ್ಕ ಮತ್ತು ನೀತಿಶಾಸ್ತ್ರದ ಮೇಲಿನ ಹಲ್ಲೆಯ ವಿಷಮ ಪರಿಣಾಮ ತಕ್ಷಣ ಕಣ್ಣಿಗೆ ಬೀಳುವುದಿಲ್ಲ; ಸಾಮಾಜಿಕ ಪ್ರತಿಪಾದನೆಗಳ ಮೇಲಿನ ಹಲ್ಲೆ ಕೂಡಲೆ ಕಣ್ಣಿಗೆ ರಾಚುತ್ತದೆ. ವಿಜ್ಞಾನವು ವಿಶ್ವದ ಬಗ್ಗೆ ವ್ಯವಸ್ಥಿತವಾದಂತಹ ಸಾಮಾನ್ಯ ಹೇಳಿಕೆಗಳನ್ನು ನೀಡುತ್ತದೆ. ಗುರುತ್ವಾಕರ್ಷಣದ ಉದಾಹರಣೆ ನೋಡಿ: ಪೀಸಾ ಗೋಪುರದಿಂದ ಗೆಲಿಲಿಯೊ ಎರಡು ಚೆಂಡುಗಳನ್ನು ಕೆಳಕ್ಕೆ ಬೀಳಿಸಿದ, ಆದರೆ ಅದು ಮುಖ್ಯವಲ್ಲ. ಮುಖ್ಯವಾದ್ದು ನಿಯಮ ನಿರೂಪಣೆ. "ನಿರ್ವಾತದಲ್ಲಿ ಎಲ್ಲ ವಸ್ತುಗಳೂ ಒಂದೇ ವೇಗದಲ್ಲಿ ಕೆಳಗೆ ಬೀಳುತ್ತವೆ" ಎಂಬುದು. ಅಂದರೆ, ವಿಜ್ಞಾನವು ಕೇವಲ ವ್ಯಕ್ತಿಗಳನ್ನಾಧರಿಸುವುದಿಲ್ಲ, ಬದಲಾಗಿ ಅದು ವರ್ಗಗಳನ್ನು ಮತ್ತು ವಿಧಗಳನ್ನು ಕುರಿತು ಹೇಳುತ್ತದೆ.

ಎರಡನೆಯದಾಗಿ, ವಿಜ್ಞಾನವು ಪದಾರ್ಥಗಳ ವ್ಯವಸ್ಥೆ ಮತ್ತು ಅವುಗಳ ಸಂಘಟನೆಯನ್ನು ಕುರಿತಾದದ್ದು. ವ್ಯವಸ್ಥೆಯಲ್ಲಿ ಒಬ್ಬ ವ್ಯಕ್ತಿಯ ನಡತೆಯ ಬಗ್ಗೆ ವಿವರಣೆ ನೀಡಬೇಕಾದರೆ ಮೊದಲಿಗೆ ವ್ಯವಸ್ಥೆಯ, ಮತ್ತು ವ್ಯವಸ್ಥೆ ಹಾಗೂ ವ್ಯಕ್ತಿಯ ನಡುವಣ ಸಂಬಂಧದ ಬಗ್ಗೆ ವಿವರಣೆ ನೀಡಬೇಕು. ಹೃದಯವನ್ನು ಶ್ವಾಸಕೋಶಗಳಿಂದ ಹಾಗೂ ರಕ್ತಪರಿಚಲನೆಯಿಂದ ಬೇರ್ಪಡಿಸಿ ನೋಡಹೋದರೆ ಹೃದಯದ ಬಗ್ಗೆ ತಿಳಿಯುವುದು ಅಲ್ಪವೇ ಆಗಿರುತ್ತದೆ.

ವಿಜ್ಞಾನವು ತನ್ನ ಲಕ್ಷಣವನ್ನು ಉಳಿಸಿಕೊಳ್ಳಬೇಕಾದರೆ, ಅದು ಯಾವುದನ್ನು ನಿರೂಪಿಸಹೊರಡುತ್ತದೆಯೋ ಅದರ ನಿಖರತೆಗೆ ಬದ್ಧವಾಗಿರಬೇಕು. ಪ್ರಪಂಚದಲ್ಲಿ ವರ್ಗಗಳು ಅಥವಾ ಗುಂಪುಗಳು ಹಾಗೂ ವ್ಯವಸ್ಥೆಗಳು ಇಲ್ಲದಿದ್ದಲ್ಲಿ ವಿಜ್ಞಾನದ ಹೇಳಿಕೆಗಳಿಗೆ ಅಗತ್ಯವಿರುವುದಿಲ್ಲ. ಅದು ಕೇವಲ ಕಲ್ಪನೆ ಮತ್ತು ಕೃತಕತೆಗಳ ಬೀಡಾಗಿಬಿಡುತ್ತದೆ. ವ್ಯಕ್ತಿಗಳಷ್ಟೇ ಮೂರ್ತವಾದವು ವರ್ಗಗಳು ಮತ್ತು ವ್ಯವಸ್ಥೆಗಳು ಎಂಬುದು ವಿಜ್ಞಾನದ ಗೃಹೀತ ಅಂಶ. ಪದಬ್ರಹ್ಮರಿಗೆ ಇದು ಮಾನ್ಯವಲ್ಲ. ಅವರ ಪ್ರಕಾರ ವ್ಯಕ್ತಿಗಳು ವಾಸ್ತವ, ಆದರೆ ವರ್ಗ ಹಾಗೂ ವ್ಯವಸ್ಥೆ ಎಂಬುವು ಅಮೂರ್ತ. ಇಂತಹ ಹರುಕು ನಿರೂಪಣೆಯಿಂದ ಪಾರಾಗಲು ಅವರು ಏನೇನೋ ಕಸರತ್ತು ನಡೆಸುತ್ತಾರೆ. ಮತ್ತೆ ಕೋರ್ಝಿಬ್‌ಸ್ಕಿಯ ಮಾತನ್ನೇ ಉದ್ಧರಿಸಬೇಕು: " ನಾವು ನಿರಪೇಕ್ಷ ವ್ಯಕ್ತಿಗಳ ಬಗೆಗಷ್ಟೇ ವ್ಯವಹರಿಸುತ್ತೇವೆ; ಅಂದರೆ, ವ್ಯಕ್ತಿಗಳು ಒಂದೇ ಅಲ್ಲ ಎಂಬ ದೃಷ್ಟಿಯಿಂದ." ನಿರಪೇಕ್ಷ ವ್ಯಕ್ತಿಗಳು ಎಂದರೆ ಪರಸ್ಪರ ಸಂಬಂಧಗಳನ್ನು ಹೊಂದಿಲ್ಲದವರು ಎಂದು ತಾನೆ? ಹಾಗಿದ್ದರೆ, ಅವರು ಪೂರ್ತಿಯಾಗಿ ಪ್ರತ್ಯೇಕ ಎಂದರ್ಥ. ಭಾಷೆಯ ಕಸರತ್ತು ಎಷ್ಟೇ ನಡೆಸಿದರೂ ಇದರರ್ಥ ಒಂದೇ: ಒಬ್ಬ ವ್ಯಕ್ತಿ ಅಥವಾ ಒಂದು ವಸ್ತು ಆ ಮಾದರಿಯ ಬೇರೆಯವಕ್ಕೆ ಸರ್ವಸಮ ಅಲ್ಲ, ಎಂದು. ಸರ್ವಸಮ ಅಲ್ಲ ನಿಜ, ಅದನ್ನು ಯಾರೂ ನಿರಾಕರಿಸುವುದಿಲ್ಲ. ಆದರೆ ಸರ್ವಸಮವಲ್ಲ ಎಂಬ ಮಾತು ಕೋಟೆಯಲ್ಲಿ ಅಡಗುವ ಪದಬ್ರಹ್ಮರಿಗೆ ರಕ್ಷಣೆ ನೀಡುವುದಿಲ್ಲ! ಒಂದು ಗುದ್ದು ಗುದ್ದಿದರೆ ಕೋಟೆ ಭಗ್ನವಾಗುತ್ತದೆ. ಅವರಿಗೆ ಹಾಕಬೇಕಾದ ಮೂಲಭೂತ ಪ್ರಶ್ನೆ ಇದು: ವ್ಯಕ್ತಿಗಳು ಪರಸ್ಪರ ಭಿನ್ನರು ಎಂಬುದು ಸರಿ, ಆದರೆ ಅವರಲ್ಲಿರುವ ಸಮಾನ ಲಕ್ಷಣಗಳಿಂದಾಗಿ ಅವರು

ವಾಸ್ತವವಾಗಿ ವರ್ಗಗಳಿಗೆ ಸೇರುತ್ತಾರೆಯೋ ಇಲ್ಲವೋ? ಪದಬ್ರಹ್ಮರನ್ನು ಬಿಡಿ, ಅವರ ಪ್ರಕಾರ ವ್ಯವಸ್ಥೆಗಳು ಸಹ ಇಲ್ಲ. ಅದಕ್ಕೆ 'ಪ್ಲೀನಂ' ಎಂಬ ವಿವರಣೆ ಕೊಟ್ಟು ತೃಪ್ತರಾಗುತ್ತಾರೆ. ಅದರ ಬಗೆಗಿನ ವೃಥಾ ಚರ್ಚೆಗೆ ಕೈಹಾಕುವುದು ಅನವಶ್ಯಕ. ಮುಖ್ಯವಾದ ವಿಷಯ ಸರಳವಾಗಿದೆ: ಪರಸ್ಪರ ಸಂಬಂಧ ಮತ್ತು ಪ್ರತಿಕ್ರಿಯೆಗಳು ವಾಸ್ತವ. ಅದನ್ನು ತಿರಸ್ಕರಿಸಿದರೆ ಪ್ರಪಂಚದ ಬಗೆಗಿನ ಜ್ಞಾನವು ಸಾಧ್ಯವಿಲ್ಲವೆಂಬ ನೆಲೆಯನ್ನು ತಲುಪುತ್ತೇವೆ; ಅಂದರೆ, ತೋರಿಕೆ ಮತ್ತು ವಾಸ್ತವವೆಂಬ ದಾರ್ಶನಿಕ ಕಗ್ಗಂಟಿಗೆ ಮರಳುತ್ತೇವೆ. (ಭಾರತೀಯ ದರ್ಶನಗಳಲ್ಲೊಂದಾದ ಅದ್ವೈತವು ಇದನ್ನು ಪ್ರಾತಿಭಾಸಿಕ, ವ್ಯಾವಹಾರಿಕ ಮತ್ತು ಪಾರಮಾರ್ಥಿಕ ಸತ್ಯಗಳೆಂದು ವಿಂಗಡಿಸಿಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು). ಚೇಸ್ ಈ ದಾರ್ಶನಿಕ ಕಗ್ಗಂಟನ್ನು ರಾಜಕೀಯಕ್ಕೆ ಅಳವಡಿಸುವ ಜಾಣ್ಮೆ ತೋರಿದ್ದಾನೆ. ಆತನ ಕೆಲವು ನಿರೂಪಣೆಗಳನ್ನು ಗಮನಿಸೋಣ:

"ಅನುಭವ ಲೋಕದಲ್ಲಿ ನಾಯಿಗಳು ಎಂಬ ಸಾಮಾನ್ಯತೆ ಇಲ್ಲ; ಇರುವುದೆಲ್ಲಾ ರೋಷರ್ ಒಂದು, ರೋಷರ್ ಎರಡು, ರೋಷರ್ ಮೂರು, ಇತ್ಯಾದಿ. ಅವುಗಳಲ್ಲಿ ಕೆಲವು ಸಾಧು ಸ್ವಭಾವದವು, ಇನ್ನು ಕೆಲವು ತಟಸ್ಥ.

"ಮನುಕುಲವೆಂಬುದೇನೂ ಇಲ್ಲ. 'ಹೇ ಮನುಕುಲ, ಬಾ ಇಲ್ಲಿ' ಎಂದು ಎಷ್ಟು ಗಟ್ಟಿಯಾಗಿ ಕೂಗಿದರೂ ಯಾರೂ ಬರುವುದಿಲ್ಲ.

"ಲಾಭ ಗಳಿಸಿಕೊಳ್ಳುವ ವ್ಯವಸ್ಥೆ ಎಂಬುದೇನೂ ಇಲ್ಲ. ಆಡಂ ಒಬ್ಬ, ಆಡಂ ಇನ್ನೊಬ್ಬ, ಮೋರ್ಗನ್ ಒಬ್ಬ, ಮೋರ್ಗನ್ ಇನ್ನೊಬ್ಬ, ಇತ್ಯಾದಿ ಅಭ್ಯಾಸ ಮಾಡಬಹುದು, ಅಷ್ಟೆ.

"ಪದಗಳ ಅರ್ಥದ ನೆಲೆಯಲ್ಲಿ 'ಪಕ್ಷ'ಎಂಬುದು ಒಂದು ವಸ್ತುವೇ ಅಲ್ಲ. ಸಂಬಂಧಪಟ್ಟ ಮತದಾರರು ಮತ್ತು ಅವರ ಮೇಲೆ ಹಿಡಿತ ಸಾಧಿಸಿರುವ ಸ್ಥಳೀಯ ಯಜಮಾನರು ಇರುತ್ತಾರೆ, ಅಷ್ಟೆ.

"ಅಲ್ಲಾ, ಫ್ಯಾಸಿಸಂ ಎಂದರೇನು? ಪದವನ್ನು ಹಾಗೇ ತೆಗೆದುಕೊಂಡರೆ ಅದಕ್ಕೇನೂ ಅರ್ಥವಿಲ್ಲ. ಸಂದರ್ಭೋಚಿತವಾಗಿ ಅದಕ್ಕೆ ಸ್ವಲ್ಪ ಅರ್ಥವಿದೆ. ಅದು ಮುಸ್ಸೋಲಿನಿಯ ಅಂಕಿತ, ಅವನ ರಾಜಕೀಯ ಪಕ್ಷದ ಹೆಸರು ಮತ್ತು ಇಟಲಿಯಲ್ಲಿ ಅವನ ಆಡಳಿತ. ಬೇರೊಂದು ಸಂದರ್ಭದಲ್ಲಿ ಅದು ಹಿಟ್ಲರ್, ಅವನ ಪಕ್ಷ ಮತ್ತು ಜರ್ಮನಿಯಲ್ಲಿ ಅವನ ಆಡಳಿತ, ಎಂಬರ್ಥವಿದೆ. ಈ ಎರಡು ಸಂದರ್ಭಗಳು ಸರ್ವಥಾ ಒಂದೇ ತೆರನಾದುವಲ್ಲ; ಆದ್ದರಿಂದ ಆ ಪದ ಬಳಸುವುದಾದರೆ ಅವನ್ನು ಫ್ಯಾಸಿಸಂ ಒಂದು ಮತ್ತು ಫ್ಯಾಸಿಸಂ ಎರಡು ಎನ್ನಬೇಕು."

ಚೇಸ್‌ನ ಶಿಷ್ಯ ಬರ್ನಾರ್ಡ್ ದಿವೋಟೋಗೆ ಇಷ್ಟು ಸಾಕೆನಿಸಿರಲಿಲ್ಲ. ಅವನು ಇನ್ನೂ ವಿಸ್ತರಿಸಿ ಹೇಳುತ್ತಾನೆ:

"ಅಮೆರಿಕಾದಲ್ಲಿ ಮೂರನೆಯ ಒಂದು ಭಾಗದಷ್ಟು ಜನರಿಗೆ ಊಟವಸತಿಗಳು ಸಮರ್ಪಕವಾಗಿಲ್ಲ, ಬಟ್ಟೆ ಬರೆ ಸಾಲದು, ಎಂದು ಚೇಸ್ ಹೇಳುತ್ತಾನೆ. ಅವನೇನು ಅದನ್ನು ಎಣಿಸಿ ಲೆಕ್ಕ ಹಾಕಿದ್ದನೆ? ಯಾರೂ ಯಾವತ್ತೂ ಅದನ್ನು ಎಣಿಸಿಲ್ಲ. ಅವನ ಮಾತಿಗೆ ಅರ್ಥವಿಲ್ಲ, ಆದರೆ ಭಾವನಾತ್ಮಕವಾಗಿ ಅದಕ್ಕೊಂದು ಉಪಯೋಗವಿದೆ. ಅದೇ ಕ್ರಿಯಾತ್ಮಕವಾಗಿ ಏನನ್ನಾದರೂ ಮಾಡುವುದಿದ್ದರೆ 'ಸಮರ್ಪಕವಾಗಿಲ್ಲ' ಎಂಬುದೊಂದನ್ನು ಪರಿಶೀಲಿಸಬಹುದು. ಆಹಾರದ ತಪಾಸಣೆ ಮಾಡುವ ಪರಿಣತರು

ಪ್ರತಿಶತ ಎಷ್ಟು ಮಂದಿಗೆ ಕೊರತೆ ಇದೆಯೆಂಬುದನ್ನು ಹೇಳಿಯಾರು. (ಅದೂ ಅವರೆಲ್ಲಾ ನಿರ್ದಿಷ್ಟ ಪ್ರಯೋಗಗಳನ್ನು ಒಪ್ಪಿದಲ್ಲಿ ಮಾತ್ರ). ವಸತಿ ಸೌಲಭ್ಯ ಸಾಲದೆಂದರೆ ಅದಕ್ಕೆ ಅಳತೆಗೋಲು ಇಲ್ಲ. ಎಷ್ಟಿದ್ದರೆ ಸಾಕು? ಯಾರಿಗೆಲ್ಲಾ ಸಾಕು? ಬಟ್ಟೆಬರೆ ಸಾಲದು ಎಂಬುದರಲ್ಲೂ ಇದೇ ನ್ಯೂನತೆ ಇದೆ.

"ಒಟ್ಟಿನಲ್ಲಿ 'ಸತ್ಯ'ಎಂಬುದೇನೂ ಇಲ್ಲ. 'ಸಾಮಾಜಿಕ ನ್ಯಾಯ' ಎಂಬುದು ಕೂಡ ಅಷ್ಟೇ."

ಈಗ ಈ ಮಾದರಿ ಅಭಿಪ್ರಾಯಗಳ ಲಕ್ಷಣ ತಿಳಿಯಿತಲ್ಲವೆ? ನಾಯಿಗಳಿಲ್ಲ, ಮನುಕುಲವಿಲ್ಲ, ಲಾಭ ಗಳಿಸುವ ವ್ಯವಸ್ಥೆಯಿಲ್ಲ, ಪಕ್ಷಗಳಿಲ್ಲ, ಫ್ಯಾಸಿಸಂ ಇಲ್ಲ, ಊಟ-ವಸತಿಗಳ ಕೊರತೆಯಿಲ್ಲ, ಸತ್ಯವಿಲ್ಲ, ಸಾಮಾಜಿಕ ನ್ಯಾಯವಿಲ್ಲ. ಹೀಗಿರುವಾಗ ಆರ್ಥಿಕ ಸಮಸ್ಯೆ, ರಾಜಕೀಯ ಸಮಸ್ಯೆ, ಆಹಾರ ಸಮಸ್ಯೆ, ಫ್ಯಾಸಿಸಂ ಸಮಸ್ಯೆ, ವೈಜ್ಞಾನಿಕ ಸಮಸ್ಯೆ, ಸಾಮಾಜಿಕ ಸಮಸ್ಯೆ, ಯಾವುದೂ ಇರಲಾರದು. ಚೇಸ್ ಮತ್ತು ಇತರ ಪಂಡಿತರು ಒಂದೇ ಉಸಿರಿಗೆ ಮಂತ್ರವಾದಿಗಳಾಗಿ ಎಲ್ಲ ದೊಡ್ಡ ಸಮಸ್ಯೆಗಳನ್ನೂ ಪರಿಹರಿಸಿಬಿಟ್ಟರು. ಮಾನವ ಜನಾಂಗಕ್ಕೆ ಇನ್ನೇನು ಬೇಕು! ಶತಮಾನಗಳ ಕಾಲದ ಇತಿಹಾಸದುದ್ದಕ್ಕೂ ಕಾಡುತ್ತಿದ್ದ ಸಮಸ್ಯೆಗಳೆಲ್ಲಾ ಮಾಯ!!

ಚೇಸ್ ಉಲ್ಲೇಖಿಸಿದ 'ಅರ್ಥರಹಿತ' ಪದಗಳಲ್ಲಿ ನಾಯಿ ವರ್ಗದ ಹೆಸರು ಬಿಟ್ಟರೆ ಉಳಿದವೆಲ್ಲಾ ವ್ಯವಸ್ಥೆಯ ತಾತ್ಪರ್ಯ ಇರುವಂಥವು. ಹೆಸರು ಮತ್ತು ವ್ಯವಸ್ಥೆ ಪ್ರತ್ಯೇಕವಾದ್ದರಿಂದ ಅವನ್ನು ಬೇರೆಯಾಗಿ ಪರೀಕ್ಷಿಸೋಣ:

(ಅ) ಚೇಸ್ ನಾಯಿಗಳ ವರ್ಗವನ್ನು ಅಲ್ಲಗಳೆದಿದ್ದಾಗ್ಯೂ ರೋಷರ್ ಒಂದು, ಇತ್ಯಾದಿ ಬಳಕೆಯನ್ನು ಮಾನ್ಯಮಾಡಿದ್ದಾನೆ. ಅಂದರೆ ಅವೆಲ್ಲಾ ಪ್ರತ್ಯೇಕ, ಆದರೆ ಎಲ್ಲಾ ನಾಯಿಗಳೇ. ಅವೆಲ್ಲಾ ನಾಯಿಗಳೇ ಎಂದು ಚೇಸ್‌ಗೆ ತಿಳಿದದ್ದು ಹೇಗೆ? ಅವಕ್ಕೆಲ್ಲಾ ಏಕಪ್ರಕಾರವಾದ ಲಕ್ಷಣಗಳಿರುವುದರಿಂದ ತಾನೆ? ನಾಯಿಗಳ ವರ್ಗವು ಮನಸ್ಸು ನಿರ್ಮಿಸಿದ ಅಮೂರ್ತತೆ ಎನ್ನುವ ಚೇಸ್, ಪ್ರತ್ಯೇಕ ನಾಯಿಗಳಿವೆಯೆಂದು ಹೇಳಿ ಅವುಗಳ ವರ್ಗವಿಲ್ಲವೆಂದರೆ ಏನರ್ಥ? (ಭಾರತೀಯ ತರ್ಕಶಾಸ್ತ್ರದಲ್ಲಿ ವರ್ಗ ಎಂಬುದನ್ನು 'ಸಾಮಾನ್ಯ' ಎಂಬ ಪದಾರ್ಥವನ್ನಾಗಿ ಪರಿಗಣಿಸಲಾಗಿದೆ). ರೋಷರ್‌ಗಳ ನಡುವೆ ಸಾಮ್ಯತೆ ಇದೆ; ಚೇಸ್‌ಗೆ ಮನಸ್ಸಿಲ್ಲದಿದ್ದರೂ ಆ ಸಾಮ್ಯತೆ ಇರುತ್ತದೆ. ನಾಯಿ ಮತ್ತು ನಾಯಿವರ್ಗ ಒಂದರೊಳಗೊಂದು ಇದ್ದೇ ತೀರುತ್ತವೆ. ಅಡಿಗೆಮನೆಯಲ್ಲಿ ಉಪ್ಪಿನಕಾಯಿಯ ನಾಲ್ಕು ಜಾಡಿಗಳಿದ್ದರೆ ಉಪ್ಪಿನಕಾಯಿಯಂತೂ ಸತ್ಯ. ಅವಕ್ಕೆ ಸಂಖ್ಯೆ ಕೊಟ್ಟುಕೊಂಡರೆ ಬಾಧಕವಿಲ್ಲ. 'ಉಪ್ಪಿನಕಾಯಿ' ಎಂಬುದು ಅಮೂರ್ತ, ಅದನ್ನು ಬೇರೆ ಹೆಸರಿನಿಂದಲೂ ಕರೆಯಬಹುದಿತ್ತು. ನಾನು ಅಡಿಗೆಮನೆಗೆ ಹೋಗಿ ತರುವುದು 'ಉಪ್ಪಿನಕಾಯಿ' ಎಂದು ಕರೆಯಲಾಗುವ ವಸ್ತುವನ್ನು. ಯಾವ ಪದಬ್ರಹ್ಮನೂ ಅದನ್ನು ಇಲ್ಲವಾಗಿಸಲಾರ.

(ಆ) 'ಮನುಕುಲ' ಇತ್ಯಾದಿ ಪದಗಳು ವ್ಯವಸ್ಥೆಯನ್ನು ಸೂಚಿಸುವಂಥವು. ಆದರೆ 'ಮನುಕುಲ'ಎಂಬುದೇನೂ ಇಲ್ಲವೆನ್ನುತ್ತಾನೆ ಚೇಸ್ ಮಹಾರಾಯ. 'ಹೇ ಮನುಕುಲವೆ, ಇಲ್ಲಿ ಬಾ'ಎಂದರೆ ಯಾರೂ ಬರುವುದಿಲ್ಲವೆಂದು ಅವನ ಪುರಾವೆ. "ಎಲೈ ಅಮೆರಿಕಾದ ಸೈನ್ಯವೇ, ಇರಾಕಿಗೆ ಹೋಗು" ಎಂದರೂ ಸಹ ಯಾರೂ ಹೋಗುವುದಿಲ್ಲ. ಹಾಗಿದ್ದರೆ ಅಮೆರಿಕಾ ಮತ್ತು ಸೈನ್ಯ ಇಲ್ಲವೇನು? ವ್ಯವಸ್ಥೆಯನ್ನು

ಅದರ ಒಂದು ಅಂಗವು ವರ್ತಿಸುವಂತೆ ವರ್ತಿಸುತ್ತದೆಯೆಂದು ಚೇಸ್ ಭಾವಿಸಿದ್ದಾನೆ. ಒಬ್ಬ ವ್ಯಕ್ತಿಯನ್ನು ಕರೆದರೆ ಅವನು ಬಂದಾನು. ಅದೇ ನಡತೆಯನ್ನು ವ್ಯವಸ್ಥೆಯಿಂದಲೂ ನಿರೀಕ್ಷಿಸುತ್ತಾನೆ ಚೇಸ್. ಅದಿಲ್ಲವಾದ್ದರಿಂದ ಮನುಕುಲ, ಇತ್ಯಾದಿ ವ್ಯವಸ್ಥೆಗಳೂ ಇಲ್ಲ! ಇದು ಶುದ್ಧ ತಪ್ಪು. ವ್ಯವಸ್ಥೆಯ ಒಂದು ಅಂಶದ ನಡತೆಯನ್ನು ಇಡೀ ವ್ಯವಸ್ಥೆಯಿಂದಲೂ ನಿರೀಕ್ಷಿಸುವ ಚೇಸ್ ತಾರ್ಕಿಕವಾಗಿ ಮುಗ್ಗರಿಸಿದ್ದಾನೆ. ಅರಿಸ್ಟಾಟಲ್ ಇದನ್ನು "ರಚನೆಗೆ ಸಂಬಂಧಿಸಿದ ಅತಾರ್ಕಿಕತೆ" (ಫ್ಯಾಲಸಿ ಆಫ್ ಕಾಂಪೊಸಿಶನ್ ಎಂದಿದ್ದ). ಈಗ ಹೇಳಿ, ಯಾರು ಬಾಲಿಶ ಎಂದು; ಅತಾರ್ಕಿಕತೆಯನ್ನು ಗುರುತಿಸಿದ್ದವನೋ ಅಥವಾ ಇನ್ನೂ ಈಗಲೂ ಅದೇ ಅತಾರ್ಕಿಕ ಪದ್ಧತಿಯನ್ನು ಅನುಸರಿಸುತ್ತಿರುವವರೋ?

ಇಡೀ ಪ್ರಪಂಚದಲ್ಲಿ ಲಾಭಗಳಿಕೆಯ ವ್ಯವಸ್ಥೆ ಇಲ್ಲ, ಏನಿದ್ದರೂ ಆ್ಯಡಂಗಳು ಮತ್ತು ಮೋರ್ಗನ್‌ಗಳಿದ್ದಾರೆ ಎನ್ನುತ್ತಾನೆ ಚೇಸ್. ಅವರ ನಡತೆಯನ್ನು ಗಮನಿಸಲು ಅಡ್ಡಿಯಿಲ್ಲ. ಒಬ್ಬ ಆ್ಯಡಂ ಕೆಲಸ ಮಾಡಲು ಒಂದು ಕಾರ್ಖಾನೆಗೆ ಹೋಗುತ್ತಾನೆ. ಅಲ್ಲಿ ಅವನ ಸಂಬಂಧಗಳು ವ್ಯಕ್ತವಾಗುತ್ತವೆ. ಕಾರ್ಖಾನೆಯ ಉತ್ಪನ್ನವು ಯಾರೊಬ್ಬನ ಉತ್ಪಾದನೆಯೂ ಅಲ್ಲವೆಂಬ ಒಂದು ಸಂಬಂಧ ಅವನಿಗೆ ಸ್ಪಷ್ಟ. ಏಕೆಂದರೆ, ಉತ್ಪಾದನೆಯು ಅಲ್ಲಿ ನೂರಾರು ಕೆಲಸಗಾರರ ಸಾಮೂಹಿಕ ದುಡಿಮೆಯ ಪರಿಣಾಮ. ಮೋರ್ಗನ್ ಒಬ್ಬ ಉದ್ಯಮಿ; ಬ್ಯಾಂಕರ್ ಅಲ್ಲ. ಒಬ್ಬ ಆ್ಯಡಂನ ಉತ್ಪಾದನೆಯನ್ನು ಅವನು ಮಾರುಕಟ್ಟೆಯಲ್ಲಿ ಮಾರುವುದಿಲ್ಲ; ಅನೇಕ ಆ್ಯಡಂಗಳು ಮಾಡಿದ ಉತ್ಪಾದನೆಯನ್ನು ಮಾರುತ್ತಾನೆ. ಉತ್ಪಾದನೆಗೆ ಆ್ಯಡಂಗಳ ಕೂಲಿಯ ಖರ್ಚೂ ಸೇರಿದೆ. ಉತ್ಪಾದನೆಯ ವೆಚ್ಚಕ್ಕಿಂತಲೂ ಹೆಚ್ಚಿನ ಮೌಲ್ಯಕ್ಕೆ ಮೋರ್ಗನ್ ಉತ್ಪನ್ನಗಳನ್ನು ಮಾರಬೇಕು. ಆ ಒಟ್ಟು ವೆಚ್ಚ ಮತ್ತು ಮಾರಾಟಗಳನ್ನು ನಿಗದಿಗೊಳಿಸಿದ್ದು ಮಾರಿದ್ದರಿಂದ ಬಂದ ಹಣ, ಇವೆರಡರ ನಡುವಿನ ವ್ಯತ್ಯಾಸವು ಮೋರ್ಗನ್‌ನ ಲಾಭ. ಹಾಗೆ ಲಾಭ ಗಳಿಸದಿದ್ದರೆ ಅವನ ಉದ್ಯಮ ನಡೆಯಲಾಗದು, ವ್ಯವಹಾರವು ಕುಸಿಯುತ್ತದೆ. ಆದ್ದರಿಂದ ಆ್ಯಡಂ ಮತ್ತು ಮೋರ್ಗನ್ ವ್ಯವಸ್ಥೆಯೊಂದರ ಸದಸ್ಯರು, ಆ ವ್ಯವಸ್ಥೆಯು ಮುಂದುವರಿಯುವುದು ಲಾಭಗಳಿಕೆ ಇರುವವರೆಗೆ. ಹಾಗಿದ್ದರೆ ಲಾಭಗಳಿಕೆಯ ವ್ಯವಸ್ಥೆ ಇಲ್ಲವೆನ್ನುವ ಚೇಸ್‌ಗೆ ಏನೆನ್ನಬೇಕು? ವ್ಯವಸ್ಥೆಯಲ್ಲಿನ ಕೆಲವು ಜನ ಲಾಭ ಗಳಿಸುತ್ತಾರೆಂದು ಬೇಕಾದರೂ ಹೇಳಿ, ಅಡ್ಡಿಯಿಲ್ಲ.

ಇನ್ನು, "ಪಕ್ಷ" ಮತ್ತು ಫ್ಯಾಸಿಸಂ" ಎಂಬುವನ್ನು ನೋಡಿ. ಅವನ್ನು ಇಲ್ಲವೆಂದು ಚೇಸ್ ಹೇಳಿಯಾನು. ಪ್ರಜಾಪ್ರಭುತ್ವವಾದಿ ವ್ಯಕ್ತಿಗಳಿದ್ದಾರೆಂಬುದರಲ್ಲಿ ಸಂಶಯವಿಲ್ಲ. ಅಷ್ಟೇ ಖಚಿತವಾಗಿ ಪ್ರಜಾಪ್ರಭುತ್ವವಾದಿ ಪಕ್ಷವೂ ಇರಬಲ್ಲದು. ಅದೊಂದು ಸಂಘಟನೆ, ಅದಕ್ಕೆ ಕಾರ್ಯಕರ್ತರಿರುತ್ತಾರೆ, ಅದು ಚಳುವಳಿಗಳನ್ನು ನಡೆಸುತ್ತದೆ. ಅಂತೆಯೇ, ಫ್ಯಾಸಿಸ್ಟ್ ಎನಿಸಿಕೊಳ್ಳುವ ವ್ಯಕ್ತಿಗಳಿರುತ್ತಾರೆ; ಹಾಗೆಯೇ, ನಿರ್ದಿಷ್ಟವಾಗಿ ಫ್ಯಾಸಿಸಂ ಎಂಬುದಿರುತ್ತದೆ. ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯಾಗಿ ಅದಕ್ಕೆ ಕೆಲವು ಲಕ್ಷಣಗಳುಂಟು. ಅದನ್ನು ಅವಗಣಿಸಿ ಫ್ಯಾಸಿಸ್ಟ್ ಒಬ್ಬ, ಫ್ಯಾಸಿಸ್ಟ್ ಇನ್ನೊಬ್ಬ, ಎಂದು ಲೆಕ್ಕವಿಡುತ್ತೀರಾ? ವ್ಯಕ್ತಿಗಳು ಫ್ಯಾಸಿಸ್ಟರಾಗುವುದು ಫ್ಯಾಸಿಸಂ ಎಂಬ ವ್ಯವಸ್ಥೆಯನ್ನು ಜಾರಿಗೊಳಿಸಲು ಮತ್ತು ಅದನ್ನು ಅಸ್ತಿತ್ವದಲ್ಲಿ ಉಳಿಸಿಕೊಳ್ಳಲು. "ಫ್ಯಾಸಿಸಂ" ಎಂಬುದು

ಅರ್ಥವಿಲ್ಲದ್ದು ಎಂದಾದರೆ ನಾವದನ್ನು ಗುರುತಿಸುವುದು ಮತ್ತು ಅದು ಅಸ್ತಿತ್ವಕ್ಕೆ ಬಾರದಂತೆ ಸೆಣಸುವುದು ಹೇಗೆ? ಒಟ್ಟಿನಲ್ಲಿ ಚೇಸ್ ನಮ್ಮ ಶತ್ರುಗಳನ್ನು ನಾವು ಕಾಣಲಾಗದಂತೆ ನಮ್ಮನ್ನು ಕುರುಡರನ್ನಾಗಿಸಲು ತವಕಿಸುತ್ತಾನೆ. ಅದೊಂದು ವ್ಯರ್ಥ ಪ್ರಯತ್ನ, ಅಷ್ಟೆ.

"ಅರ್ಥವಿಲ್ಲದ" ಪದಗಳು ಎಂಬುದೇ ಅರ್ಥವಿಲ್ಲದ ಕಲ್ಪನೆ. "ಊಟ-ವಸತಿ-ಬಟ್ಟೆ ಸಾಕಷ್ಟಿಲ್ಲದವರು" ಎಂಬುದಕ್ಕೆ ಅರ್ಥವಿಲ್ಲವೆಂದು ಪದಬ್ರಹ್ಮ ದವೋತೋ ಹೇಳುತ್ತಾನಲ್ಲ, ಅವನಿಗೆ ವಾರಕ್ಕೆ ಐದು ಡಾಲರುಗಳಷ್ಟು ನಿರುದ್ಯೋಗ ಭತ್ಯೆ ನೀಡಿದರೆ ಹೇಗಿರುತ್ತಾನೆಂದು ನೋಡಬಹುದಲ್ಲ! ನಗುಮುಖದಿಂದ ಉಲ್ಲಸಿತನಾಗಿ ಓಡಾಡಿಕೊಂಡಿರುತ್ತಾನೇನು? ಎರಡು ತಿಂಗಳಲ್ಲಿ ಕೃಶ ಶರೀರಿಯಾಗಿ ಪೌಷ್ಟಿಕತೆ ಇಲ್ಲದೆ ರೋಗಿಯಾಗಿ, ಚಳಿಯಲ್ಲಿ ನಡುಗುತ್ತಾ ನಮ್ಮೆದುರು ಬರುತ್ತಾನೆ. "ಅಂತಹ ಪದಗಳಿಗೆ ಅರ್ಥವಿಲ್ಲವೆಂದು ಹೇಳಿದ್ದು ನೀವೇ ಅಲ್ಲವೆ, ಮಹಾಸ್ವಾಮಿ", ಎಂದು ನಾವವನಿಗೆ ಪ್ರಶ್ನೆ ಹಾಕಬಹುದು. ಆಗಲೂ ನಗುಮುಖದಿಂದಲೇ ಹೋಗಬೇಕು ಆತ! ಬೇರೆಯವರ ಬಗ್ಗೆ ಹೇಳುವಾಗ ಆ ಪದಗಳಿಗೆ ಅರ್ಥವಿಲ್ಲವೆಂದು ಸಾರುವುದು ಸುಲಭ; ಆದ್ದರಿಂದ ಅವರಿಗೇ ದೀನಸ್ಥಿತಿ ಬರುವವರೆಗೆ "ಅರ್ಥರಹಿತ ಪದಗಳು" ಎಂದು ಬಡಬಡಿಸುತ್ತಲೇ ಇರುತ್ತಾರವರು. ಅಂದರೇನರ್ಥ? ಬಡತನ, ಫ್ಯಾಸಿಸಂನ ಕ್ರೌರ್ಯ, ಎಂಬುವನ್ನು ಅಲಕ್ಷಿಸುವ ಸಾಮಾಜಿಕ ದೃಷ್ಟಿ ಅವರದು. ಕೋರ್ಸ್‌ಬಿಸ್ಕಿ ಹೇಳುವ ನೈತಿಕತೆಯು ಅತಿ ಶ್ರೀಮಂತನ ಧೋರಣೆ; ಕಲೆ, ವಿಜ್ಞಾನ, ಆವಿಷ್ಕಾರ, ಇವನ್ನೆಲ್ಲಾ ಬಂಡವಾಳಶಾಹಿಯು ತುಚ್ಛೀಕರಿಸಿದಾಗ ಅವನಿಗೇನೂ ಆತಂಕವಿರುವುದಿಲ್ಲ. ಅವರ ಸಿದ್ಧಾಂತವನ್ನು ಅವರಿಗೇ ಅನ್ವಯಿಸಿದರೆ ಈ ಮಹಾನ್ ಶಬ್ದಬ್ರಹ್ಮರ ಮಾತುಗಳು ಅರ್ಥವಿಲ್ಲದ ಬಡಾಯಿ ಆಗುವುದು ಅನಿವಾರ್ಯ.

ಇನ್ನೊಂದು ವಿಚಾರವಿದೆ: ಈ ಶಬ್ದಬ್ರಹ್ಮರ ಬರಹಗಳಲ್ಲಿ ಅಷ್ಟು ಸ್ಫುಟವಾಗಿ ಗೋಚರಿಸದ ಜನಾಂಗೀಯ ಭಾವನೆಯೂ ಇದೆ. ಆಗ್ಡೆನ್ ಮತ್ತು ರಿಚರ್ಡ್ಸ್ ಎಂಬಿಬ್ಬರು ಈ "ಅರ್ಥರಹಿತ" ಪಂಥದವರು. ಅವರ ಒಂದು ಪುಸ್ತಕದ ಹೆಸರು "ಅರ್ಥದ ಅರ್ಥ" ಎಂದಿದೆ. ಅರ್ಥವಿಲ್ಲವೆಂಬ ಮೀಮಾಂಸದ ಆದಿಪ್ರವರ್ತಕರು ಅವರು. ಅವರದೊಂದು "ಕಪ್ಪು ಕಥನ" ಇದೆ. ಇಂಗ್ರಹಾಂ ಎಂಬೊಬ್ಬನ ಮಾತನ್ನವರು ಉದ್ಧರಿಸಿ ಹೇಳುವುದನ್ನು ನೋಡಿ:

"ಒಬ್ಬ ಕರಿಯ ನೀಗ್ರೋ ಕಲ್ಲಂಗಡಿ ಹಣ್ಣೊಂದನ್ನು ಕದ್ದು ಕಿತ್ತಿರುತ್ತಾನೆ. ಅದನ್ನು ಬಚ್ಚಿಟ್ಟುಕೊಂಡು ರೈಲಿನ ಹಳಿ ದಾಟುತ್ತಿರುತ್ತಾನೆ. ಚಂದ್ರ ಆಗ ತಾನೆ ಒಂದು ಮೋಡದ ಹಿಂದಕ್ಕೆ ಸರಿದಿರುತ್ತದೆ. ಇಂಥವರ ಬಗ್ಗೆ ಒಂದು ಅವಿಭಜಿತ ಸಮುದಾಯವೆಂದು ಹೇಳುವ ಅವಕಾಶ ನಮಗಿಲ್ಲ."

ಅವನ ಇಂಗಿತ ಸ್ಪಷ್ಟವಾಗಿದೆ: ಕರಿಯರೆಲ್ಲಾ ಕಳ್ಳರು, ಎಂದು. ಕೋರ್ಸ್‌ಬಿಸ್ಕಿ ಅರಿಸ್ಟಾಟಲನ ಜಿಜ್ಞಾಸೆಗಳನ್ನು ಸಹ "ಎರಡು ಸಾವಿರ ವರ್ಷಗಳ ಹಿಂದೆ ಬಿಳಿಯ ಜನಾಂಗವು" ಸಾಧಿಸಿದ ತಿಳಿವಳಿಕೆ ಎನ್ನುತ್ತಾನೆ. ಚಿಂತಕರ ಧೀಶಕ್ತಿಯು ಅವನ ಪ್ರಕಾರ ತೊಗಲಿನ ಬಣ್ಣದಿಂದ ನಿರ್ಧಾರಗೊಳ್ಳುತ್ತದೆ. ಚೇಸ್ ಅಷ್ಟೊಂದು ಜನಾಂಗೀಯ ದುರ್ಭಾವನೆ ತೋರ್ಪಡಿಸುವುದಿಲ್ಲವೆಂಬುದಷ್ಟೇ ಸಮಾಧಾನ. ಈ ಶಾಖೆಯ

ವಿದ್ವಾಂಸರು ಬೇರೆ ಯಾರನ್ನು ಶ್ಲಾಘಿಸುತ್ತಾರೆಂಬುದು ಸಹ ಗಮನಾರ್ಹ. ಕೋರ್ಸ್‌ಬಿಸ್ಕಿ ಬೆಟ್ಟದಷ್ಟು ಶ್ಲಾಘನೆಯನ್ನು ಸ್ಪೆಂಗ್ಲರ್ ಮೇಲೆ ಸುರಿಸಿದ್ದಾನೆ. ಹಿಟ್ಲರನ ನಾಝಿ ಪಕ್ಷವು ಸ್ಪೆಂಗ್ಲರ್‌ನಿಂದ ಅತಿ ಹೆಚ್ಚು ಪ್ರಭಾವಿತವಾಗಿದ್ದಿತು, ನಂತರ ಸ್ವತಃ ಅವನು ಆ ಪಕ್ಷವನ್ನು ಸೇರಿಕೊಂಡಿದ್ದ. ಸ್ಪೆಂಗ್ಲರನನ್ನು ಚೇಸ್ ಸ್ವಲ್ಪ ಟೀಕಿಸಿದ, ಆದರೆ ಅಲೆಕ್ಸಿಸ್ ಕ್ಯಾರೆಲ್‌ನನ್ನು ಎತ್ತಿಹಿಡಿದ. ಕ್ಯಾರೆಲ್‌ನ "ಅಜ್ಞಾತ ಮಾನವ" (ಮ್ಯಾನ್ ದ ಅನ್‌ನೋನ್) ಎಂಬ ಪುಸ್ತಕವು ಅಮೆರಿಕಾದಲ್ಲಿ ಫ್ಯಾಸಿಸ್ಟ್ ಸಿದ್ಧಾಂತಕ್ಕೆ ಒಂದು ಕೊಡುಗೆಯಾಗಿತ್ತು. ಹಾಗೆಂದು ಚೇಸ್ ಮುಂತಾದವರನ್ನು ಫ್ಯಾಸಿಸ್ಟರು ಎನ್ನುವುದು ಬೇಡ, ಆದರೆ ಫ್ಯಾಸಿಸಂ ಎದುರಾದಾಗ ಅದನ್ನವರು ಗುರುತಿಸುವುದಿಲ್ಲವೆಂಬುದು ನಿಜ. ಅದರ ಕೆಲವು ನಿರೂಪಣೆಗಳು ಅವರಿಗೆ ಹಿತವೆಂದು ಕಾಣುತ್ತವೆ ಸಹ. ಒಟ್ಟಿನಲ್ಲಿ ಈ ಎಲ್ಲ ಪದಬ್ರಹ್ಮರ ಚಿಂತನೆಗಳೂ ಫ್ಯಾಸಿಸ್ಟ್ ತತ್ವಕ್ಕೆ ಹತ್ತಿರವಾದುವೇ ಆಗಿವೆ.

1930ರ ದಶಕವು ಹಸಿವಿನಿಂದ ಆರಂಭವಾಗಿ ರಕ್ತಪಾತದಿಂದ ಕೊನೆಗೊಂಡಿತು ಎಂದು ಆರಂಭದಲ್ಲಿ ನಾವು ಹೇಳಿದ್ದೆವಲ್ಲವೆ? ಈಗ 1940ರ ದಶಕವು ಮರುಕಳಿಸದಿರುವಂತೆ ನಾವು ಮಾಡಬೇಕಾಗಿದೆ ಎಂಬುದನ್ನು ನೆನಪಿನಲ್ಲಿಡೋಣ. ಆ ದಶಕವು ರಕ್ತಪಾತದಿಂದ ಆರಂಭವಾಗಿ ಹಸಿವಿನಿಂದ ಕೊನೆಗೊಂಡಿತ್ತು. ನಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಮೊದಲಿಗೆ ವಾಸ್ತವ ಪ್ರಪಂಚವು ವಾಸ್ತವ ಸಮಸ್ಯೆಗಳನ್ನು ನಮ್ಮ ಮುಂದಿಟ್ಟಿದೆ ಯೆಂಬುದನ್ನು ಮನಗಾಣಬೇಕು. ವಾಸ್ತವ ಸಮಸ್ಯೆಗಳಿಗೆ ವಾಸ್ತವ ಪರಿಹಾರಗಳೇ ಬೇಕು. ವಿನಾಶಗೊಂಡ ಇಲ್ಲವೇ ವಿನಾಶದ ಹಾದಿಯಲ್ಲಿರುವ ಪ್ರಪಂಚವನ್ನು ದುರಸ್ತಿ ಮಾಡಬೇಕಿದೆ. ಜನರಿಗೆ ಆಹಾರ, ವಸತಿ, ವಸ್ತ್ರ ಒದಗಿಸಬೇಕಾಗಿದೆ; ತುಳಿತಕ್ಕೆ ಸಿಲುಕಿರುವವರ ವಿಮೋಚನೆಯಾಗಬೇಕಿದೆ, ಸುತ್ತಣ ಪ್ರಪಂಚದಲ್ಲಿ ಪ್ರಾಮಾಣಿಕತೆಯನ್ನು ಸುತರಾಂ ಕಂಡಿಲ್ಲದ ಸಂತ್ರಸ್ತರಿಗೆ ನ್ಯಾಯಯುತ ಜೀವನವನ್ನು ಪರಿಚಯಿಸಬೇಕಾಗಿದೆ. ಈ ಆಶಯಗಳೆಲ್ಲಾ ಅರ್ಥರಹಿತವೆಂದು ವಾದಿಸಿ ಅದಕ್ಕೆ ಕಟ್ಟುಬಿದ್ದರೆ ನಮ್ಮ ಜವಾಬ್ದಾರಿಯಲ್ಲಿ ಎಳ್ಳಷ್ಟು ಸಾಧನೆಯೂ ಆಗದು. ಆಶಯಗಳನ್ನು ವ್ಯಕ್ತಪಡಿಸುವ ಈ ಪದಗಳ ಜಾಗದಲ್ಲಿ ಬೇರೆ ಪದಗಳನ್ನು ಬಳಸಿಬಿಟ್ಟರೆ ಎಲ್ಲವೂ ಸುಗಮವಾಗಿಬಿಡುವುದೂ ಇಲ್ಲ.

ಭಾಷೆಯಲ್ಲಿ ಏನೋ ತೊಡಕುಗಳಿವೆಯೆಂಬುದು ನಿಜ. ಆದರೆ ಅದೇ ನಮ್ಮ ಪ್ರಥಮ ಕಾಳಜಿಯಲ್ಲ. ನಿಷ್ಕೃಷ್ಟತೆ ಮತ್ತು ಸ್ಪಷ್ಟತೆಗಳಿಗಾಗಿ ಭಾಷೆಯ ಅಗತ್ಯವಿದೆ, ಆದರೆ ಅದೇ ಮೊದಲ ಗುರಿಯಲ್ಲ. ವಸ್ತುನಿಷ್ಠ ಸಮಸ್ಯೆಗಳು ಕೇವಲ ಮಾತಿನಲ್ಲಿ ಸಮಸ್ಯೆಗಳಲ್ಲ. ಆ ಸಮಸ್ಯೆಗಳನ್ನು ಪರಿಹರಿಸುವತ್ತ ಹೆಜ್ಜೆ ಹಾಕಿದರೆ ಭಾಷೆಯು ತಾನಾಗಿಯೇ ಸುಧಾರಿಸುತ್ತದೆ. ಪರಿಹಾರವನ್ನು ಪಡೆಯದಿದ್ದರೆ ಭಾಷೆಯು ಇನ್ನೂ ಹೆಚ್ಚು ಗೋಜಲಾಗುತ್ತಾ ಹೋಗುತ್ತದೆ. ಆ ಕಾರಣದಿಂದಾಗಿಯೇ ನಮ್ಮ ಪದಬ್ರಹ್ಮರು ತಾವು ಏನು ಹೇಳಬೇಕೋ ಅದನ್ನು ಹೇಳುವುದರಲ್ಲಿ ಸೋಲುತ್ತಿದ್ದಾರೆ. ಇವರನ್ನು ಇಂಗ್ಲಿಷಿನಲ್ಲಿ 'ಸೆಮ್ಯಾಂಟಿಸಿಸ್ಟ್ಸ್' ಎನ್ನುತ್ತಾರೆ. ಅವರ ಗೋಪುರವು ಗೊಂದಲಮಯವಾಗಿದೆ. ಅದರ ಸಂದೇಶವು ಮಾತ್ರ ಬಹಳ ಸ್ಪಷ್ಟವಾಗಿದೆ; ಮಾನವ ಸಂಕುಲದ ಪೋಷಣೆಯನ್ನು ಗೌಣವಾಗಿಸಿ ಯಾಮಾರಿದಾಗ ನಮ್ಮ ಹೃದಯಗಳು ಎಲ್ಲ ಸ್ಪಂದನೆಗಳನ್ನೂ ಕಳೆದುಕೊಳ್ಳುತ್ತವೆ ಮತ್ತು ಕಣ್ಣುಗಳ ದೃಷ್ಟಿಯು ಮಸುಕಾಗುತ್ತದೆ.

❑❑

10. ಹಣೆಪಟ್ಟಿಗೆ ಅಂಜಿದೊಡೆಂತಯ್ಯ

ಮಾನವಕುಲವು ಮೊದಲಿಗೆ ಅಸ್ತಿತ್ವಕ್ಕೆ ಬಂದಾಗ ಪದಗಳಿರಲಿಲ್ಲ. ಇದು ಬೈಬಲ್ಲಿನ ಮಾತು. ಈಗ ನೋಡಿ, ನಮ್ಮ ಭಾಷೆಗಳಲ್ಲಿ ಸ್ವರ, ವ್ಯಂಜನ, ವಿಭಕ್ತಿ, ಕ್ರಿಯಾಪದ, ಎಂದು ಎಷ್ಟೊಂದು ಪರಿಕರಗಳು. ವ್ಯಾಕರಣವೆಂದರೆ ಶಾಲೆಗೆ ಹೋಗುವ ಮಕ್ಕಳು ನಡುಗಿಹೋಗುತ್ತಾರೆ. ಈ ಪರಿಕರಗಳನ್ನೆಲ್ಲಾ ಸೃಷ್ಟಿಸಿಕೊಂಡವನು ಮಾನವನೇ. ಅವನಿಗೆ ಅವನ್ನು ಯಾರೂ ಬಳುವಳಿಯಾಗಿ ನೀಡಲಿಲ್ಲ. ನಮ್ಮ ಮೂಲ ಪುರುಷರು ವಾನರ ಸ್ವರೂಪದವರು. ಅನೇಕ ಪೀಳಿಗೆಗಳ ಪರ್ಯಂತ ಅವರಿಗೆ ಮಾತೆಂಬುದು ಇರಲಿಲ್ಲ. ಅವರು ಹೊಮ್ಮಿಸಿದ್ದ ಶಬ್ದವೇನಿದ್ದರೂ ಮೂಗು ಮತ್ತು ಗಂಟಲುಗಳ ಮುಖಾಂತರ ನಿಶ್ವಾಸದ ಸಮಯದಲ್ಲಿ ತೋರಿಬಂದದ್ದು. ಆ ಶಬ್ದಗಳಲ್ಲಿ ಸ್ವಲ್ಪ ಮಟ್ಟಿನ ಸಾಮ್ಯವಿದ್ದಿರ ಬಹುದು, ಆದರೆ ಅದರಲ್ಲಿ ಸಾಮಯಿಕ ಪದ್ಧತಿಯೇನೂ ಇರಲಿಲ್ಲ. ಅಂದರೆ, ಸಾಮಾಜಿಕವಾಗಿ ಒಪ್ಪಿತವಾದ ಅಂಶವಿರಲಿಲ್ಲವೆಂದರ್ಥ. ಉದಾಹರಣೆಗೆ, 'ಕಲ್ಲು' ಎಂದರೆ ಸಾಮೂಹಿಕ ಒಪ್ಪಂದದಂತೆ ಒಂದರ್ಥವಿದೆ. ಅದನ್ನು ಬೇರೊಂದರ್ಥದಲ್ಲಿ ಬಳಸದಿರಲು ಒಂದು ಸಾಮಯಿಕ ಪದ್ಧತಿ ಇದೆ. ಮಾತು ಆದಿಯಲ್ಲಿರಲಿಲ್ಲವೆಂದರೆ ಇನ್ನು ಲಿಪಿಯ ಪ್ರಾದುರ್ಭಾವ ಎಷ್ಟು ತಡವಾಗಿ ಆಗಿದ್ದಿರಬೇಕು ಎಂಬುದು ಸ್ಪಷ್ಟವಿದೆ.

ಏನೇ ಇರಲಿ, ಅಂತೂ ಭಾಷೆಯ ಆವಿಷ್ಕಾರವಾಯಿತು; ಹೇಗಾಯಿತೆಂಬುದು ಅಷ್ಟು ಖಚಿತವಾಗಿಲ್ಲ, ಆದರೆ ಅದಿಲ್ಲದಿದ್ದಾಗಿನ ನಮ್ಮ ಪುರಾತನರು ಸಾಕಷ್ಟು ಹೆಣಗಿರಬೇಕು. ಪದಾರ್ಥಗಳನ್ನು ಗುರುತಿಸುತ್ತಿದ್ದರು ಸರಿ, ಆದರೆ ಅವುಗಳ ಪರಸ್ಪರ ಸಂಬಂಧವನ್ನು ವ್ಯಕ್ತಪಡಿಸುವ ಸಾಧ್ಯತೆ ಇರಲಿಲ್ಲ. ತೋರ್ಬೆರಳಿನಿಂದ ಈ ಮರವನ್ನೋ ಆ ಮರವನ್ನೋ ತೋರಿಸಲು ಸಾಧ್ಯವಿದ್ದಿರಬೇಕು, ಅಷ್ಟೆ. ಕೇವಲ ಶಬ್ದ ಹೊರಡಿಸುವು ದಕ್ಕಿಂತ ಇದು ಉತ್ತಮ, ಆದರೆ ಒಂದು ಮರ ಇನ್ನೊಂದರ ಎಡಕ್ಕೋ ಬಲಕ್ಕೋ ಇದೆಯೆಂಬುದನ್ನು ವ್ಯಕ್ತಮಾಡುವುದು ದುಷ್ಕರ. ಮರಗಳಲ್ಲಿ ಕೆಲವು ಒಂದು ವರ್ಗಕ್ಕೆ ಸೇರಿದುವೆಂಬುದನ್ನು ತಿಳಿಸುವುದಂತೂ ಇನ್ನೂ ಹೆಚ್ಚು ಕಷ್ಟಕರ. ಆಧುನಿಕ ವಿದ್ವಾಂಸರು ಎಷ್ಟೋ ಪ್ರಗಲ್ಭಮತಿಗಳು; ಆದರೆ ಆದಿಮಾನವರ ಕಷ್ಟಗಳ ಬಗ್ಗೆ ಅವರಲ್ಲಿ ಒಮ್ಮತವಿಲ್ಲ.

ಸಂವಹನವಂತೂ ಅತಿ ಸೀಮಿತವಾಗಿತ್ತು; ಮಾತಿನಿಂದ ಮಂಕು ಹಿಡಿಸುವುದು ಸಾಧ್ಯವಿರಲಿಲ್ಲ. 'ಹಾ' ಅಥವಾ 'ಉಸ್' ಎಂದಿರಲು ಸಾಕು. ಅಂತಹ ಉದ್ಗಾರಗಳಿಂದ ಅಸಮಾಧಾನವನ್ನು ವ್ಯಕ್ತಗೊಳಿಸಬಹುದಿತ್ತೆಂದು ಹೇಳಬಹುದು. ಸಂಜ್ಞೆಗಳಿದ್ದಿರಬೇಕು, ಆದರೆ ಅದರಲ್ಲಿ ನಿಖರತೆ ಇದ್ದಿರಲಾರದು. ಭಾಷೆಯು ವ್ಯಾಪಕವಾಗಿ ಬೆಳೆಯುವವರೆಗೆ ತಾರ್ಕಿಕ ಚಮತ್ಕಾರ, ಇಲ್ಲವೆ ಹಾದಿ ತಪ್ಪಿಸುವಂತಹ ಪ್ರೇರೇಪಣೆಗೆ ಅವಕಾಶವಿರಲಿಲ್ಲ. ನಾಗರಿಕತೆ ಊರ್ಜಿತವಾದಂತೆ ಮಾನವ ಒಂದು ವಿಚಿತ್ರ ತೆರಿಗೆಯನ್ನು ತೆರಬೇಕಾಗುತ್ತದೆ:

ಅದು ದುರಾಚಾರ ಎಸಗುವ ಸ್ವರೂಪದ್ದು! ನಾಗರಿಕತೆಯ ಶೈಶವಾವಸ್ಥೆಯಲ್ಲಿ ಅಪರಿಪೂರ್ಣತೆ ಇತ್ತು, ಆದರೆ ಪರಿಪೂರ್ಣತೆಯತ್ತ ಸಾಗಬಹುದೆಂಬ ಸೂಚನೆಯೂ ಇತ್ತು.

ಭಾಷೆಯು ಕಪಟಗಾರಿಕೆಯ ದೃಷ್ಟಿಯಿಂದ ಒಂದು ಅನಾಸಕ್ತ ಸಾಧನವಲ್ಲ; ಅಂತಹ ಉದ್ದೇಶವಿಲ್ಲದಿದ್ದಾಗ ಭಾಷೆಯು ಏನನ್ನೂ ತೆರೆಮರೆಗೆ ಸರಿಸುವುದಿಲ್ಲ. ಭಾಷೆಯನ್ನು ಬಳಸುವವರು ಎಷ್ಟೇ ಪ್ರಾಮಾಣಿಕರಾಗಿದ್ದರೂ ಭಾಷೆಯು ಮೋಸಗೊಳಿಸಲು ಸಾಧ್ಯ. ತಾನು ಹೇಳಬೇಕಾಗಿರುವುದನ್ನು ಏನನ್ನೂ ಮರೆಮಾಚದೆ ಹೇಳಬೇಕೆಂದಿದ್ದರೂ ಎಲ್ಲೋ ಎಡವಲು ಸಾಧ್ಯವೆಂದರ್ಥ. ಪದಗಳು ಮತ್ತು ಅವುಗಳಿಂದ ರಚಿಸಲ್ಪಡುವ ವಾಕ್ಯಗಳು ಮುಗ್ಗಟ್ಟು ತಂದುಬಿಡಲು ಸಾಧ್ಯ. ಎಷ್ಟೋ ವಿದ್ವಾಂಸರು ಇದರಿಂದಾಗಿಯೇ ಶೋಭಿಸಿಬಿಡುತ್ತಾರೆ. ನಾನೀಗ ಬರೆಯುತ್ತಿರುವ ವಾಕ್ಯವು ಓದುಗರಿಗೆ ನಾನೇನು ಸಂವಹನ ಮಾಡಬಯಸಿದ್ದೇನೋ ಅದನ್ನು ಸಮರ್ಪಕವಾಗಿ ಮಾಡಿದ್ದೇನೋ ಇಲ್ಲವೋ ಎಂಬ ಸಂಶಯ ಸದಾ ನನ್ನನ್ನು ಕಾಡುತ್ತದೆ. ಹೇಳಹೊರಟಿದ್ದೇ ಒಂದು ಮತ್ತು ಹೇಳಿದ್ದೇ ಒಂದು ಆಗಿಬಿಡಬಹುದು. ಅದು ನನಗೆ ಭಾಸವಾಗದೆ ಉಳಿಯುವ ಸಾಧ್ಯತೆ ಉಂಟು; ಹೀಗಾಗಿ ಓದುಗ ಎಂಥದೋ ಬೇರೊಂದು ಅರ್ಥ ಗ್ರಹಿಸಿಬಿಡಬಹುದು.

ಭಾಷೆಯ ಪ್ರಮುಖ ಉದ್ದೇಶ ಸಂವಹನ. ಭಾಷೆಯನ್ನು ಪ್ರಜ್ಞಾಪೂರ್ವಕವಾಗಿ ಅಪಪ್ರಯೋಗ ಮಾಡಿದರೆ ಅದರಿಂದ ತೊಂದರೆಯುಂಟು, ಆದರೆ ಬೇಕೆಂದೇ ವಂಚನೆ ಮತ್ತು ದ್ವೇಷಗಳಿಂದ ಪ್ರೇರಿತರಾಗಿದ್ದರೆ ಆಘಾತವು ಇನ್ನೂ ಹೆಚ್ಚು. "ಮಾತಿನಿಂದ ನನಗೇನೂ ಬಾಧೆಯಿಲ್ಲ" ಎಂಬ ಭಾವನೆಯು ವ್ಯಕ್ತಿಯನ್ನು ತೃಪ್ತಿ ತುಂಬಿದ ಸಹನಾಮೂರ್ತಿಯನ್ನಾಗಿಸಬಹುದು, ಆದರೆ ಅವಮಾನವನ್ನು ನಿವಾರಿಸುವುದಿಲ್ಲ. ಹೇಳಿ ಕೇಳಿ ನಮ್ಮದು ಹಿಂಸಾಪೂರಿತ ಕಷ್ಟಕರ ದಿನಗಳು, ಆದ್ದರಿಂದ ದೊಣ್ಣೆಗಳು ಮತ್ತು ಕಲ್ಲುಗಳು ಅವಮಾನದ ಜೊತೆ ಹೊರಬಂದು ಜನರ ಮೂಳೆ ಮುರಿಯಬಹುದು ಕೂಡ. ತಕರಾರೆತ್ತುವ ಮಂದಿ ಮಾತಿನ ತುಪಾಕಿ ಹೊಂದಿರುತ್ತಾರೆ. ಅವರು ತರ್ಕಬದ್ಧ ವಾದದ ಜೊತೆ ಅವಹೇಳನದ ಪದಗುಚ್ಛಗಳನ್ನೂ ಪ್ರಯೋಗಿಸುತ್ತಾರೆ. ಈ ಪದಗುಚ್ಛಗಳು ಮರ್ಯಾದೆಯನ್ನು ಹರಾಜು ಹಾಕುತ್ತವೆ, ಜನರ ಜೀವನಾಧಾರವನ್ನು ಭಗ್ನಗೊಳಿಸುತ್ತವೆ. ಕಡೆಗೆ ದೈಹಿಕ ಹಲ್ಲೆಯೂ ದೂರವಿರುವುದಿಲ್ಲ. ಇದರ ಇನ್ನೊಂದು ಕೆಟ್ಟ ಪರಿಣಾಮ ವೆಂದರೆ ಚರ್ಚೆಗಳ ದಾರಿ ತಪ್ಪಿಸುವುದು, ಅಪ್ರಾಸಂಗಿಕ ವಿಷಯಗಳ ಕಡೆ ಧಾವಿಸುವುದು ಮತ್ತು ಮುಖ್ಯ ವಿಷಯದ ಬಗೆಗೆ ಕ್ರಿಯಾಶಾಲಿತ್ವವನ್ನು ಇಲ್ಲವಾಗಿಸುವುದು. ಆದ್ದರಿಂದ ಭಾಷೆಯ ಅಪಪ್ರಯೋಗ ಹೇಗೆ ನಡೆಯುತ್ತದೆಂಬುದರ ಬಗೆಗೆ ನಾವು ಎಚ್ಚರ ವಹಿಸಬೇಕು. ಅದು ಜ್ಞಾನದ ಗಳಿಕೆ ಮತ್ತು ಸುಕ್ಷೇಮ ಇರವು, ಎರಡಕ್ಕೂ ಅಗತ್ಯ. ಭಾಷೆಯ ದುರುಪಯೋಗವನ್ನು ನಾವು ಮಾಡಹೊರಡಬಾರದು, ಅಂತೆಯೇ ಇತರರೂ ಅದನ್ನು ಮಾಡಲು ಬಿಡಬಾರದು.

ಬಹುಮುಖೀ ಪದ

ಪದಗಳು ನೋಡಬಹುದಾದ ಇಲ್ಲವೇ ಕೇಳಿಸಿಕೊಳ್ಳಬಹುದಾದ ಚಿಹ್ನೆಗಳು. ಅವನ್ನು 'ಚಿಹ್ನೆಗಳು' ಎಂದು ಕರೆಯುವುದೇಕೆಂದರೆ ಅವು ತಮ್ಮ ಬಗೆಗೇನೂ ಹೇಳುವುದಿಲ್ಲ, ಸೂಚಿಸುವುದೆಲ್ಲಾ ಬೇರೇನನ್ನೋ. ಆ ಸೂಚನೆಯು ಅವುಗಳ ಅರ್ಥ. ಪದಾರ್ಥಗಳು,

ಘಟನೆಗಳು, ಸಂಬಂಧಗಳು, ಗುಣಗಳು, ಪರಿಮಾಣಗಳು, ಹೀಗೆ ಹಲವು ಬಗೆಯ ಸೂಚನೆಯ ವ್ಯಾಪ್ತಿ ಪದಗಳಿಗಿದೆ. ಕುರ್ಚಿ, ಸ್ಫೋಟ, ಸೋದರತ್ವ, ಸ್ನೇಹ, ಐದು, ಇವೆಲ್ಲಾ ಈಗ ತಾನೆ ಹೇಳಿದವನ್ನು ಸಂಕೇತಿಸುವ ಪದಗಳು. ಆಧುನಿಕ ವಿಜ್ಞಾನ ಮತ್ತು ತತ್ವಶಾಸ್ತ್ರ 'ಪದಾರ್ಥ' ಮತ್ತು 'ಘಟನೆ' ಇವುಗಳ ನಡುವಿನ ವ್ಯತ್ಯಾಸವನ್ನು ನುಂಗಿಹಾಕಿವೆ. ಆದರೆ ಪ್ರತ್ಯೇಕತೆಯು ಹಾಗೆಯೇ ಉಳಿದಿದೆ; ಯಾವುದಕ್ಕೆ ಒತ್ತುಕೊಡಬಯಸುತ್ತೇವೋ ಅದನ್ನಾಧರಿಸಿ ಅವುಗಳ ಪ್ರತ್ಯೇಕತೆ ಇರುತ್ತದೆ. "ಕುರ್ಚಿ" ಎಂದಾಗ ವಸ್ತುವಿನ ಸ್ಥಿರತೆಯನ್ನೂ "ಸ್ಫೋಟ" ಎಂದಾಗ ಬದಲಾವಣೆಯ ತೀವ್ರಗತಿಯನ್ನೂ ನಾವು ತಿಳಿಯುತ್ತೇವೆ.

ಪದಗಳ ಅರ್ಥವು ಅಂತಿಮವಾಗಿ ನಿರ್ಧಾರವಾಗುವುದು ಸಾಮಾಜಿಕ ರೂಢಿಯಿಂದ. "ಕುರ್ಚಿ" ಎಂದರೆ ಅದೇ ವಸ್ತು ಎಂಬುದಕ್ಕೆ ಶುದ್ಧ ತಾರ್ಕಿಕ ಕಾರಣವೇನೂ ಇಲ್ಲ. ಸಮಾಜದ ವ್ಯಕ್ತಿಗಳು ಒಟ್ಟಾಗಿ ಸೇರಿ ಅದನ್ನು ನಾಳೆಯಿಂದ "ಗರಿ" ಎಂಬರ್ಥದಲ್ಲಿ ಪ್ರಯೋಗಿಸೋಣವೆಂದು ತೀರ್ಮಾನಿಸಿದರೆ ಅದರರ್ಥ ಗರಿ ಎಂದಾಗುತ್ತದೆ; ಆಗ ಗರಿಗೆ ಬೇರೊಂದು ಪದವನ್ನು ಅರಸಬೇಕು, ಅಷ್ಟೆ. ಪದಗಳ ಅರ್ಥವು ಆಯಾ ಭಾಷಿಕರು ಸಾಮೂಹಿಕವಾಗಿ ತೀರ್ಮಾನಿಸಿದಂತೆ ಇರುತ್ತದೆ. ಅದರಲ್ಲಿ ಅನಮ್ಯತೆ ಅಥವಾ ಬಾಗದಿರುವ ಕಟ್ಟುನಿಟ್ಟು ಏನೂ ಇಲ್ಲ. ಭಾಷೆಯೂ ಬದಲಾವಣೆಗೆ ಈಡಾಗಬಲ್ಲದು; ಹೊಸ ಪದಗಳು ಹುಟ್ಟುತ್ತವೆ, ಹಳೆಯವು ಇಲ್ಲವಾಗುತ್ತವೆ. ಹಳೆಯ ಅರ್ಥಗಳ ಜಾಗದಲ್ಲಿ ಪರಿವರ್ತಿತ ಹೊಸ ಅರ್ಥಗಳೂ ಸಾಧ್ಯ. ನಿಘಂಟು ನಿರ್ಮಾಪಕನು ಅರ್ಥಗಳಿಗೆ ಕೊಕ್ಕೆ ಹಾಕಬಹುದು, ಆದರೆ ಬದಲಾವಣೆಯನ್ನು ನಿರ್ಬಂಧಿಸಲಾರ. ಶಬ್ದದ ಅರ್ಥವು ಒಂದು ಸರ್ಕಾರವಿದ್ದಂತೆ; ಅದನ್ನು ಜನತೆ ಉಳಿಸಿಕೊಳ್ಳಬಹುದು ಇಲ್ಲವೇ ಕಿತ್ತುಹಾಕಿ ಬೇರೆಯದನ್ನು ಸ್ಥಾಪಿಸಿಕೊಳ್ಳಬಲ್ಲದು.

ಪದಗಳಿಗೆ ನಿಗದಿತವಾದ ವ್ಯಾಪ್ತಿ ಏನಾದರೂ ಇದ್ದಿದ್ದರೆ ಆ ಪದಗಳ ಅರ್ಥವನ್ನು ಖಚಿತಗೊಳಿಸಬಹುದಿತ್ತು; ಅವುಗಳ ಅರ್ಥದ ಬದಲಾವಣೆಗೆ ವಿಶ್ವದ ಬಗೆಗಿನ ನಮ್ಮ ವಿಕಸಿತ ಜ್ಞಾನವೊಂದೇ ಆಧಾರವಾಗಬಹುದಿತ್ತು. ಪದಗಳಿಗೆ ನಿಘಂಟುವಿನ ಅರ್ಥವಲ್ಲದೆ ಬೇರೇನೇನೋ ಕೂಡಿಕೊಳ್ಳುತ್ತವೆ. ಹಾಗೆ ಕೂಡಿಕೊಂಡವು ಕೆಲವೇಳೆ ಅಸ್ಪಷ್ಟವೋ ಸಂದಿಗ್ಧವೋ ಆಗಿರಲು ಸಾಧ್ಯ. ಅವು ರೂಢಿಗತ ಅರ್ಥವನ್ನು ಮಸುಕು ಮಾಡಿ ತಾವೇ ಮುಂದೆ ಬಂದು ನಿಂತುಬಿಡುತ್ತವೆ. "ವಿದೇಶೀಯ" ಎಂಬ ಪದವನ್ನು ನೋಡಿ: ಅದರ ಅರ್ಥದಲ್ಲಿ ಸಂದಿಗ್ಧತೆಯೇನೂ ಇಲ್ಲ. ಆದರೆ ಸಂಕುಚಿತ ಮನೋಭಾವ ಉಳ್ಳವರಿಗೆ ಆ ಪದವು ಅನಿಷ್ಟವಾದೊಂದು ವ್ಯಾಪ್ತಿಯನ್ನು ಥಟ್ಟನೆ ಸೂಚಿಸಿಬಿಡುತ್ತದೆ; ಏನೋ ಅಪಾಯ ಕಾದಿದೆಯೆಂಬ ತವಕವೂ ಮೂಡಬಹುದು. "ಬೇರೊಂದು ದೇಶದಲ್ಲಿ ಜನಿಸಿದವನು" ಎಂಬುದನ್ನಷ್ಟೇ ಸೂಚಿಸುವ ಬದಲು ಏನೋ ದುರುದ್ದೇಶ ಹೊಂದಿದ ಧೂರ್ತ ಎಂಬರ್ಥವನ್ನು ಪಡೆದುಬಿಡಬಹುದು. "ಎಂತಹ ಪ್ರಮಾದ" ಎಂದು ನಾವು ನಸುನಕ್ಕು ಆ ತಪ್ಪನ್ನು ಮನ್ನಿಸಬಹುದು, ಆದರೆ "ನಮ್ಮದಲ್ಲದ ಹೊರಗಿನ ಸಿದ್ಧಾಂತಗಳು" ಎಂಬುದರ ಬಗ್ಗೆ ಅಂಥದೇ ನಿಲುವು ತಾಳಬಲ್ಲೆವೆ? ಈ ಪದಗುಚ್ಛದ ನೇರವಾದ ಅರ್ಥ ಇದು: "ಬೇರಾವುದೋ ದೇಶದಲ್ಲಿ ಆವಿಷ್ಕಾರಗೊಂಡು ಈಗ ನಮ್ಮಲ್ಲೂ ಪ್ರಚಲಿತವಾಗಿರುವ ತತ್ವ." ಆದರೆ 'ಸಿದ್ಧಾಂತ' ಎಂದಾಕ್ಷಣ ಲೇವಡಿಗೆ ಅರ್ಹವಾದ್ದು, ನಿಂದನೀಯವಾದ್ದು, ಎಂಬ ಭಾವ ನಮ್ಮನ್ನು ತಟ್ಟಬಹುದು. ಇನ್ನು

"ಬೇರೊಂದು ದೇಶದ್ದು" ಎನ್ನುವುದು ಅನಿರ್ದಿಷ್ಟವಾದ ಏನೋ ಭಯ ಮತ್ತು ಅಸಡ್ಡೆಯನ್ನು ಮೂಡಿಸಬಹುದು. ಅಮೆರಿಕಾದಂತಹ ದೇಶಕ್ಕೆ ಇದೆಲ್ಲಾ ಅಸಂಗತ, ಏಕೆಂದರೆ ಅಲ್ಲಿ ಸ್ವದೇಶೀಯವೇ ಆಗಿರುವಂಥ ಚಾರಿತ್ರಿಕ ಸಿದ್ಧಾಂತಗಳೇನೂ ಇಲ್ಲ. ಹಾಗೇನಾದರೂ ಇದ್ದರೆ, "ಮೃಗಬೇಟೆಗೆ ಸೊಗಸಾದ ನೆಲೆ" ಎಂಬ ಪ್ರತಿಪಾದನೆಯು ಅನ್ವರ್ಥವಾಗಿರುತ್ತದೆ. ಅಮೆರಿಕಾದ ಮೂಲನಿವಾಸಿಗಳು ಒಂದರ್ಥದಲ್ಲಿ ಅದನ್ನು ಆವಿಷ್ಕರಿಸಿದ್ದರು, ನಂತರ ಅಲ್ಲಿಗೆ ವಲಸೆ ಬಂದು ನೆಲೆಸಿದವರು ಅದನ್ನು ಕರಾಳ ಯಥಾರ್ಥವನ್ನಾಗಿಸಿದರು!

ಪದಗಳ ವಾಚ್ಯಾರ್ಥಗಳು ತಮ್ಮ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳಲು ಹಲವು ಆಕರಗಳು ಮತ್ತು ಸಂದರ್ಭಗಳು ಉಂಟು. ಪದವು ಸೂಚಿಸುವ ಪದಾರ್ಥದ ಬಗೆಗಿನ ಭಾವನಾತ್ಮಕ ವಿರೋಧವು ಆ ಪದದ ಉಚ್ಚಾರಣೆಯಿಂದಲೇ ಸೂಚಿತವಾಗಲು ಸಾಧ್ಯ. ವೈದ್ಯರು ನಿರ್ದೇಶಿಸುವ ಪಥ್ಯದಿಂದ ರೋಸಿಹೋದ ರೋಗಿಯ ಈ ವಾಕ್ಯವನ್ನು ನೋಡಿ: "ಆ ಹಾಗಲಕಾಯಿಯ ಹೆಸರನ್ನೇ ಹೇಳಬೇಡ." ಆ ತರಕಾರಿಯೆಂದರೆ ಪ್ರಸ್ತುತ ರೋಗಿಯು ಕೆಂಡಾಮಂಡಲವಾಗಿಬಿಡುತ್ತಾನೆ. ಈ ರೀತಿಯ ಅರ್ಥ ಬದಲಾವಣೆ ವೈಯ್ಯಕ್ತಿಕವಾದ್ದು, ಖಾಸಗಿಯಾದ್ದು. ಯಾವುದೋ ವಸ್ತು ಅಥವಾ ಘಟನೆಯ ಬಗ್ಗೆ ಒಂದು ಇಡೀ ಸಮುದಾಯವು ಭಾವನಾತ್ಮಕ ಪ್ರತಿಕ್ರಿಯೆಯನ್ನು ರೂಢಿಸಿಕೊಂಡಿದ್ದರೆ ಆ ನಿಟ್ಟಿನ ಅರ್ಥವು ಸಾಮಾಜಿಕ ಸತ್ಯವೆಂದು ತೋರಿಬಿಡುತ್ತದೆ. ಆಂಗ್ಲಭಾಷೆಯಲ್ಲಿ "ಯೂಫ್ಲಿಮಿಸ಼ಂ" ಎಂಬ ಪದವಿದೆ. ಕನ್ನಡದಲ್ಲಿ ಅದನ್ನು 'ಸೌಮ್ಯೋಕ್ತಿ' ಎನ್ನುತ್ತೇವೆ. ಮಂಗಳವಾರವು ಕೆಲವರ ಸಂಪ್ರದಾಯದಲ್ಲಿ ಅಮಂಗಳವಾದ ದಿನ, ಆದರೆ ಅದನ್ನು ಅಮಂಗಳವಾರವೆಂದು ಕರೆಯದೆ ಮರ್ಯಾದೆಯ ಮಂಗಳವಾರ ಎಂಬ ಹೆಸರನ್ನು ಕೊಡುತ್ತಾರಲ್ಲ, ಹಾಗೆ. ಯಹೂದಿ, ಮುಸಲ್ಮಾನ, ಬೊಮ್ಮನ್ ಮುಂತಾದ ಪದಗಳು ವಿವಿಧ ಮಾನಸಿಕ ಪ್ರವೃತ್ತಿಯವರಿಗೆ ವಿಧವಿಧವಾದ ಛಾಯೆಯಿರುವ ಅರ್ಥಗಳನ್ನು ಸೂಚಿಸುತ್ತವೆ. "ಸತ್ತವರನ್ನು ಸುಟ್ಟುಹಾಕುವ ಸ್ಥಳ" ಎಂಬುದು "ಸುಡುಗಾಡು" ಆಗಿಬಿಟ್ಟಿದೆಯಲ್ಲಾ ಹಾಗೆ. ಅಲ್ಲಿ ಕೆಲಸ ಮಾಡುವವರಿಗೆ ಆ ಪದ ರುಚಿಸುವುದಿಲ್ಲವಾದ್ದರಿಂದ ಗಂಭೀರವಾಗಿ ಅದನ್ನು 'ಮುಕ್ತಿಧಾಮ' ಎಂದು ಕರೆದುಕೊಳ್ಳುತ್ತಾರೆ! ಸುಡುಗಾಡಾದರೂ ಸರಿ, ಮುಕ್ತಿಧಾಮವಾದರೂ ಸರಿ, ಅದಕ್ಕೆ ಮನ್ನಣೆ ಅಷ್ಟಕ್ಕಷ್ಟೆ. ಈಚಿನ ವರ್ಷಗಳಲ್ಲಿ ಕೆಲವು ಪರಂಪರಾಗತ ಉದ್ಯೋಗದವರಿಗೆ ಗೌರವಸೂಚಕ ಹೆಸರುಗಳು ಬಂದಿಲ್ಲವೆ? ಸವಿತಾ ಸಮಾಜದವರು, ವಿಶ್ವಕರ್ಮರು, ಪರಿಶಿಷ್ಟ ಜಾತಿಯವರು, ಶ್ರಾದ್ಧ ಮಾಡಿಸುವವರು, ಇತ್ಯಾದಿ. ಹೊಸ ಹೆಸರುಗಳು ಬಹುಕಾಲ ಸಮಾಧಾನ ನೀಡುವುದಾದರೆ ನಾವದನ್ನು ಸ್ವಾಗತಿಸಬೇಕು.

ಬೈಗುಳವಾಗಿ ಭಾಷೆ

ಪ್ರಚಾರಕರಾಗಿ ಕಾರ್ಯ ನಿರ್ವಹಿಸುವವರಿಗೆ ಭದ್ರವಾದ ನೆಲೆಯಿಲ್ಲ. ಇದ್ದಿದ್ದರೆ ತಮ್ಮ ಅಭಿಪ್ರಾಯಗಳಿಗೆ ಪುರಾವೆ ಮತ್ತು ತರ್ಕವನ್ನು ಒದಗಿಸಬಹುದಿತ್ತು. ಹೋಗಲಿ, ನೇರವಾಗಿ ಅಭಿಪ್ರಾಯವನ್ನು ಸ್ಪಷ್ಟತೆಯಿಂದ ಮಂಡಿಸಬಹುದಿತ್ತು. ಅಭಿಪ್ರಾಯಗಳು ಅಪಥ್ಯ ಮತ್ತು ತರ್ಕವು ಶಿಥಿಲ, ಆದ್ದರಿಂದ ಬೇರೆಯವರನ್ನು ಪ್ರೇರೆಪಿಸಲು ಅವರು

ಅನ್ಯಮಾರ್ಗಗಳನ್ನು ಹುಡುಕಿಕೊಳ್ಳಬೇಕು. ತನ್ನ ಇಂಗಿತವನ್ನು ಸರಿಯಾಗಿ ಗ್ರಹಿಸಲಿಲ್ಲವೆಂದೋ, ಪುರಾವೆಯ ಬದಲಾಗಿ ಡಾಂಭಿಕ ಮಾತುಗಳ ಓಘವನ್ನು ಹರಿಸುವುದರಿಂದಲೋ, ವಿಮರ್ಶಕರನ್ನು ದಂಗುಬಡಿಸಲು ಯತ್ನಿಸುವುದು ಪ್ರಚಾರಕನ ಪದ್ಧತಿ. ವಾದ ಮಂಡಿಸುವವನ ಪ್ರಾಮಾಣಿಕತೆ ಇರುವುದೇ ತನ್ನ ನಿಷ್ಕೃಷ್ಟ ವಾದದಲ್ಲಿಯ ಗಟ್ಟಿತನದಲ್ಲಿ. ಅಂಕಣಗಳನ್ನು ಬರೆಯುವವರು ಮತ್ತು ಭಾಷಣಕಾರರು ಕೆಲವೊಮ್ಮೆ ಇದನ್ನು ಮರೆತುಬಿಡುತ್ತಾರೆ. ಬಿಚ್ಚುಮಾತು ತನ್ನ ಮೂಲಕ್ಕೆ ಬರುವುದೆಂದೋ, ಪುರಾವೆಯು ಲಭ್ಯವಿಲ್ಲವೆಂದೋ ಎಂಬ ಕಾರಣಕ್ಕೆ ಇಂಥವರಿಗೆ ಉಳಿಯುವುದು ಒಂದೇ ಹಾದಿ: ಅದು ಓಲೈಕೆಯ ಕ್ರಮ. ಸಮಾರಂಭ ಏರ್ಪಡಿಸುವುದು, ಝುಗಮಗ ವಿದ್ಯುದ್ದೀಪಗಳನ್ನು ಉರಿಸುವುದು, ಒಂದಷ್ಟು ಹಾಡುಗಳನ್ನು ಹೇಳಿಸುವುದು, ಇವೆಲ್ಲಾ ಆ ಕ್ರಮದ ಭಾಗಗಳು. ಆದರೆ ಕಡೆಯಲ್ಲಿ ಮಾತು ಬರಲೇಬೇಕಲ್ಲ, ಆಗ ಅದರಲ್ಲಿ ಏನಿರುತ್ತದೆ? ಕೇಳುಗರಿಗೆ ಪ್ರಿಯವಾಗಬಹುದಾದ ಮಾತುಗಳನ್ನು ಬಳಸಿ ತನ್ನ ಉದ್ದೇಶ ಈಡೇರುವಂತೆ ಮಾಡಲೆತ್ನಿಸುವುದು. ಕೇಳುಗರು ಹೇಯವೆಂದು ಬಗೆಯಬಹುದಾದ್ದನ್ನು ಹೇಳದಿರುವುದು ಇದರ ಒಂದು ಭಾಗ. ಮುಖ್ಯವಾಗಿ, ಅವನು ಮೂಲಪ್ರಶ್ನೆಯನ್ನು ಹೇಗೋ ದೂರ ಸರಿಸಲಿಚ್ಛಿಸುತ್ತಾನೆ.

ಅಮೆರಿಕಾದ ಒಂದು ಉದಾಹರಣೆ ಗಮನಿಸೋಣ. ಬೇರೆ ದೇಶಗಳಲ್ಲಿ ಅದನ್ನು ಹೋಲುವ ಹತ್ತಾರು ಉದಾಹರಣೆಗಳು ಓದುಗರಿಗೆ ಖಂಡಿತ ಹೊಳೆಯುತ್ತವೆ:

ಅಮೆರಿಕಾದ ಒಂದು ನಗರ, ಅಲ್ಲೊಂದು ಗೃಹಮಂಡಲಿ ಅಥವಾ ಅಭಿವೃದ್ಧಿ ಪ್ರಾಧಿಕಾರ (ನಮ್ಮ ಬಿಡಿಎ, ಮೂಡಾ ಇತ್ಯಾದಿಗಳಂತೆ). ನಗರದ ಒಂದು ಭಾಗದಲ್ಲಿ ಕೊಳೆಗೇರಿಯೊಂದು ತಲೆಯೆತ್ತಿದೆ. ಅದನ್ನು ಇಲ್ಲವಾಗಿಸಿ, ಅಲ್ಲೇ ಕೆಲವು ವಸತಿ ಸಮುಚ್ಚಯಗಳನ್ನು ನಿರ್ಮಿಸಿ ನಿವಾಸಿಗಳಿಗೆ ಕೊಡಬೇಕೆಂದು ಮಂಡಳಿ ತೀರ್ಮಾನಿಸಿದೆ. ಕೊಳೆಗೇರಿಯ ವಸತಿಗಳಿಗೆ ಮಾಲೀಕರಿರುತ್ತಾರೆ, ಅವರು ನಿವಾಸಿಗಳಿಂದ ಬಾಡಿಗೆ ವಸೂಲು ಮಾಡುತ್ತಿರುತ್ತಾರೆ. ವಸತಿ ಸಮುಚ್ಚಯದ ನಿರ್ಮಾಣವಾದರೆ ಅವರ ಜಾಗ ಹೋಗುತ್ತದೆ, ಬಾಡಿಗೆಯೂ ನಿಂತುಹೋಗುತ್ತದೆ. ಜಾಗ ಅವರದಲ್ಲದೆಯೂ ಇರಬಹುದು. ಈ ಮಾಲೀಕರಿಗೆ ಮಂಡಳಿಯ ಯೋಜನೆ ಬೇಡ, ಏಕೆಂದರೆ ಅವರ ಬಾಡಿಗೆ ವಸೂಲಿ ನಿಂತುಹೋಗುತ್ತದೆ. ಇಂಥವರನ್ನು ಎದುರುಹಾಕಿಕೊಂಡು ಮಂಡಳಿಯು ಅವರೊಡನೆ ಸ್ಪರ್ಧಿಗಿಳಿಯಬೇಕಾಗಿದೆ. ಮಾಲೀಕರಿಗೆ ಕೊಳೆಗೇರಿಯೂ ಒಂದು ರಿಯಲ್ ಎಸ್ಟೇಟ್ ದಂಧೆ. ಅಲ್ಲಿನ ನಿವಾಸಿಗಳಿಗೆ ಕೊಳೆಗೇರಿಯಲ್ಲಿ ವಾಸಿಸುವುದಕ್ಕಿಂತ ಒಳ್ಳೆಯ ವಸತಿ ಸಮುಚ್ಚಯದಲ್ಲಿ ವಾಸಿಸುವುದು ಸಹಜವಾದ ಆಸೆ. ಮಾಲೀಕನಿಗೆ ಅವರು ಕೊಳೆಗೇರಿಯಲ್ಲಿ ಉಳಿಯುವುದು ಲಾಭದ ಸಂಗತಿ. ಆದ್ದರಿಂದ ಅವರ ಮನವೊಲಿಸಲು ಮಾಲೀಕನು ಪ್ರಚಾರಕರನ್ನು ಹುಡುಕಿ ಛೂಬಿಡುತ್ತಾನೆ. ಪ್ರಚಾರಕನ ಮುಂದಿರುವ ಸವಾಲು ಕೊಳೆಗೇರಿಯ ನಿವಾಸಿಗಳನ್ನು ಅಲ್ಲೇ ಇರುವಂತೆ ಪ್ರೇರೇಪಿಸುವುದು, ಬಾಡಿಗೆ ಕೊಡುವುದನ್ನು ಮುಂದುವರಿಸುವಂತೆ ಮಾಡುವುದು ಮತ್ತು ವಸತಿ ಸಮುಚ್ಚಯವನ್ನು ವಿರೋಧಿಸುವಂತೆ ಮನಸ್ಸಿನ ಪರಿವರ್ತನೆ ಮಾಡುವುದು. ಅಲ್ಲಿಯ ನಿವಾಸಿಗಳಿಗೆ ಹಾಳು ಮಾಲೀಕರ ಸಹವಾಸ ಬೇಕಿಲ್ಲ, ವಸತಿ ಸಮುಚ್ಚಯ ಬೇಕು. ಪ್ರಚಾರಕ ಮಾಲೀಕರ ಪರವಾಗಿ

ಕಾರ್ಯಕ್ಷೇತ್ರಕ್ಕಿಳಿಯಬೇಕು. ಈ ಸಮಸ್ಯೆಯನ್ನು ಪರಿಹರಿಸಲು ಪ್ರಚಾರಕನು ಎಂತಹ ಸವಿನುಡಿಗಳನ್ನಾಡಬೇಕು?

"ನೋಡಿ, ನಿಮಗೆ ತಿಳಿದಿರುವಂತೆ ನಾನೊಬ್ಬ ಅಮೆರಿಕಾದ ಸತ್ಪ್ರಜೆ. ಸದ್ಧರ್ಮದ ಹಾದಿ ತೋರಿಸುವುದು ನನ್ನ ಜವಾಬ್ದಾರಿ. ಮೂಲತಃ, ಅಮೇರಿಕಾದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ನಿರ್ದಿಷ್ಟ ಸಾಧು ವಿಧಾನಗಳಿವೆ, ಅವನ್ನು ಉಲ್ಲಂಘಿಸುವುದು ನಮಗೆ ಸಮ್ಮತವಲ್ಲ. ತಮಗೆ ಅವಶ್ಯಕವಾದ ವಸತಿಗಳನ್ನು ಹೊಂದುವುದು ಅಮೆರಿಕಾದ ಜನತೆಯ ಹಕ್ಕು. ಅಂತೆಯೇ, ಅವರು ಎಲ್ಲಿ ಮತ್ತು ಎಂತಹ ವಸತಿಗಳಲ್ಲಿರಬೇಕೆಂದು ಆಯ್ಕೆ ಮಾಡಿಕೊಳ್ಳುವುದೂ ಅವರ ಹಕ್ಕು. ಈಗ ಗೃಹಮಂಡಳಿ ಏನು ಮಾಡಹೊರಟಿದೆ ಗೊತ್ತೆ? ಜನರಿಂದ ವಸತಿಗಳನ್ನು ಬಲವಂತವಾಗಿ ಪಡೆದು, ಅಲ್ಲಿ ವಸತಿ ಸಮುಚ್ಚಯವನ್ನು ನಿರ್ಮಿಸಿ, ಅವನ್ನು ನಿವಾಸಿಗಳಿಗೆ ಬಾಡಿಗೆಗೆ ಕೊಡಲು ಯೋಜನೆ ಹಾಕಿಕೊಂಡಿದೆ. ಅದು ಕೊಡುವ ಮನೆಗಳು ಅತಿಚಿಕ್ಕವಾಗಿರುತ್ತವೆ. ನಿಮಗೆ ಸುಮಧುರವಾದ ಪೀಚ್ ಹಣ್ಣು ಕೊಡಲಾಗುತ್ತದೆಂಬ ಭಾವನೆ ಬಿತ್ತಿದ್ದಾರೆ, ಆದರೆ ನಿಮಗೆ ನಿಜಕ್ಕೂ ಸಿಗುವುದು ಒಂದು ನಿಂಬೇಕಾಯಿ. ಈ ಇಡೀ ಯೋಜನೆಯು ಕಮ್ಯುನಿಸ್ಟ್ ಮಾದರಿಯದು. ಅಂದರೆ, ಅಲ್ಲಿ ಕುಟುಂಬಗಳ ಮೇಲೆ ನಿಯಂತ್ರಣ ಹೇರಲಾಗುತ್ತದೆ, ಕುಟುಂಬ ಯೋಜನೆ ಜಾರಿಗೊಳಿಸಲಾಗುತ್ತದೆ."

ಕೊಳೆಗೇರಿಯ ಮನೆಗಳ ಮಾಲೀಕರ ಪರವಾಗಿ ಇದನ್ನೆಲ್ಲಾ ಹೇಳಿದ್ದು ಒಬ್ಬ ಪಾದ್ರಿ. ಅವನು ಹೇಳಿದ ಯಾವುದಕ್ಕೂ ಪುರಾವೆ ಒದಗಿಸಲಾಗಿಲ್ಲ. ನಾವು ಏನನ್ನು ನಿಜಕ್ಕೂ ನಂಬಬೇಕೆಂದು ಅವನು ಬಯಸುತ್ತಾನೋ ಅದನ್ನವನು ಸೂಚಿಸಿದ್ದಾನೆ, ಅಷ್ಟೆ. ಅದನ್ನು ಮಾಡಲು ಅವನು ಅನುಸರಿಸಿರುವ ಹಾದಿಯನ್ನು ನೋಡಿ:

ಅ) ನಾನೊಬ್ಬ ಅಮೆರಿಕಾದ ಸತ್ಪ್ರಜೆ, ಆದ್ದರಿಂದ ನಾನು ನಿಮ್ಮ ಒಳಿತನ್ನು ಬಯಸುವವನು, ನಿಮ್ಮ ಕಡೆಯವನು ಎಂದರ್ಥ. ಅಮೆರಿಕಾದ ಸತ್ಪ್ರಜೆಯಾದವನು ಯಾರೂ ಸುಳ್ಳನ್ನು ಹೇಳುವುದಿಲ್ಲ, ಆದ್ದರಿಂದ ನಿವು ನನ್ನನ್ನು ನಂಬಬೇಕು. ನಾನು ಅಮೆರಿಕಾದ ಸತ್ಪ್ರಜೆ ಎಂಬುದನ್ನು ನೀವು ನಂಬಬೇಕು. (ಇದೆಂತಹ ತರ್ಕ ಎನಿಸುತ್ತದೆಯೆ?)

ಆ) ತಾವು "ಆಯ್ಕೆ ಮಾಡಿಕೊಂಡಿರುವ" ನೆಲೆಯಿಂದ, ಅಂದರೆ ಕೊಳೆಗೇರಿಯ ಗುಡಿಸಿಲಿನಿಂದ, ಯಾರನ್ನಾದರೂ ಹೊರದೂಡುವುದು ಅಮೆರಿಕಾದ ನಡತೆಗೆ ತೀರಾ ವಿರೋಧವಾದದ್ದು.

ಇ) ಈ ಮನೆಗಳು ಬೇರೆಯವರಿಗೆ ಕೊಳೆಗೇರಿಯಂತೆ ಕಾಣಬಹುದು, ಆದರೆ ಅವು ನಿಮ್ಮ "ಗೃಹಗಳು". ನೀವದರ ಮಾಲೀಕರು. ಮಂಡಳಿಯವರು ಅದನ್ನು ಕೆಡವಲು ಹೊರಟಿದ್ದಾರೆ, ಅಲ್ಲಿ ಅತಿಚಿಕ್ಕ ಪಿಗ್ಮಿ ಮನೆಗಳನ್ನು ಕಟ್ಟುತ್ತಾರೆ. ನಿಮ್ಮದೇ ಆದ ತಾಣಗಳಲ್ಲಿರುವಷ್ಟು ವಿಸ್ತಾರ ಆ ಮನೆಗಳಲ್ಲಿರುವುದಿಲ್ಲ.

ಈ) ಸುಮಧುರ ಪೀಚ್ ಹಣ್ಣು ಮತ್ತು ನಿಂಬೇಕಾಯಿ: ಅವು ಚೆನ್ನವೆಂದು ತೋರುತ್ತವೆ. ಆದರೆ ನಿಮಗವು ರುಚಿಸುವುದಿಲ್ಲ.

ಉ) ಇಡೀ ಯೋಜನೆಯು ಕಮ್ಯುನಿಸ್ಟ್ ಮಾದರಿಯದು. ಪೂರ್ತಿ ಕಮ್ಯುನಿಸ್ಟ್ ಅಲ್ಲ, ಆದರೆ ಕಮ್ಯುನಿಸ್ಟ್ ಮಾದರಿಯದು. ಹೆಚ್ಚು ಕಡಿಮೆ ಕಮ್ಯುನಿಸ್ಟ್ ಎಂದೇ ಅರ್ಥ.

(ಕಮ್ಯುನಿಸ್ಟ್ ತತ್ವವನ್ನು ಹೀಗಳೆಯಬೇಕಾದ್ದು ನಮ್ಮ ಧರ್ಮ. ಅಂದರೆ, ಪ್ರಗತಿಯನ್ನು ಮಂತ್ರದಂಡದಿಂದ ಹೊಡೆದೋಡಿಸಬೇಕು).

ಊ) ಆ ಮನೆಗಳು ಅತಿಚಿಕ್ಕವು, ಪಿಗ್ಮಿ ಮನೆಗಳು. ಆದ್ದರಿಂದ ನಿಮ್ಮ ಕುಟುಂಬಗಳನ್ನು ನಿಯಂತ್ರಿಸಿಕೊಳ್ಳಲು ಪ್ರಚೋದನೆ ನೀಡುತ್ತವೆ. ಆದರೆ ಒಂದು ಕೊಠಡಿಯ ಈಗಿನ ನಿಮ್ಮ ಮನೆಗಳಿವೆಯಲ್ಲಾ ಅವು ಸದಾ ಫಲವಂತಿಕೆಯನ್ನು ಆಹ್ವಾನಿಸಿ ತಂದು ನಿಮ್ಮ ಮುಂದಿರಿಸುತ್ತವೆ.

ನೋಡಿದಿರಾ ಎಷ್ಟು ಚಮತ್ಕಾರದ ಮಾತುಗಳಿವು! ಸುಳ್ಳುಗಳ ಕಂತೆಯನ್ನು ಕಟ್ಟಬೇಕಾದರೆ ಹೀಗೆ ಹೇಳಬೇಕು. ಮಾತುಗಳು ಅರ್ಥರಹಿತವಲ್ಲ. ಅರ್ಥರಹಿತವೇನೋ ಎನಿಸಬಹುದು, ಆದರೆ ಹಾಗಲ್ಲ. ಬದಲಾಗಿ, ಇಡೀ ಆಶಯವು ಸಾಕಷ್ಟು ಸ್ಪಷ್ಟವಾಗಿದೆ: ಸಾರ್ವಜನಿಕ ವಸತಿ ಸೌಕರ್ಯವು ಅನಿಷ್ಟ, ಎಂದು. "ಈಗಿನ ವಸತಿ ವ್ಯವಸ್ಥೆಯನ್ನು ಬದಲಾಯಿಸಕೂಡದು" ಎಂಬುದಕ್ಕೆ ಸ್ವಾತಂತ್ರ್ಯದ ಮೆರುಗನ್ನು ನೀಡಲಾಗಿದೆ. "ಕೊಳೆಗೇರಿಗಳ ನಿರ್ಮೂಲನವು ಅಮೆರಿಕಾ ಮೌಲ್ಯಗಳ ವಿರೋಧವಾಗಿಬಿಡುತ್ತದೆ" ಎಂಬ ಭಾವನೆಯನ್ನು ಬಿತ್ತುವುದು ಹೀಗೆ. ಪಿಗ್ಮಿ, ನಿಂಬೇಕಾಯಿ, ಕಮ್ಯುನಿಸ್ಟ್ ಮಾದರಿ, ಕುಟುಂಬ ಯೋಜನೆ, ಇವೆಲ್ಲಾ ಅದಕ್ಕೆ ಪುಷ್ಟಿ ನೀಡುವ ಅಂಶಗಳು. ಪಾದ್ರಿಯ ತಂತ್ರದಲ್ಲಿ ಸ್ವಲ್ಪಮಟ್ಟಿಗೆ ಪ್ರತಿಕೂಲದ ಸಂಭವವೂ ಇದೆ. ಕೊಳೆಗೇರಿಗಳ ನಿರ್ಮೂಲನೆಯನ್ನು ಸ್ವಾಗತಿಸುವ ಮನಸ್ಸುಗಳು ಅದರ ವಿರುದ್ಧ ದನಿಯೆತ್ತಲು ಪಾದ್ರಿಯು ಬಳಸಿರುವ ಅಸ್ತ್ರಗಳನ್ನು (ಉದಾಹರಣೆಗೆ, ಕಮ್ಯುನಿಸ್ಟ್ ಮಾದರಿ) ಸ್ವಾಗತಿಸಲೂಬಹುದು. ಎಷ್ಟೋ ಮಂದಿಗೆ ಯಾವುದು ಒಳ್ಳೆಯ ನೀತಿ ಎಂಬುದಕ್ಕೆ ಇಂತಹ ಖಂಡನೆಯ ಪದಗಳು ಮತ್ತು ವಾಕ್ಯಗಳು ಪುರಾವೆಯಾಗುತ್ತವೆ. "ಪಾದ್ರಿಯು ಅದನ್ನು ಅವಹೇಳನ ಮಾಡಿದ್ದಾನಾದ್ದರಿಂದ ಅದು ಒಳ್ಳೆಯದೇ ಇರಬೇಕು" ಎಂಬ ಭಾವನೆಯೂ ಅಂಕುರಿಸಬಹುದು. (ನಮ್ಮಲ್ಲಿ ತೊಗಾಡಿಯಾ, ಸುಬ್ರಮಣಿ ಸ್ವಾಮಿ, ಪ್ರಮೋದ ಮುತಾಲಿಕ, ಇವರೆಲ್ಲಾ ಯಾವೆಲ್ಲವನ್ನೂ ತುಚ್ಛೀಕರಿಸುತ್ತಾರೋ ಅವೆಲ್ಲಾ ಸಾಮಾಜಿಕವಾಗಿ ಸ್ವಾಗತಾರ್ಹ ಕ್ರಮಗಳು ಎನಿಸುವುದಿಲ್ಲವೇ, ಹಾಗೆ). ಅಂಥವರ ಬಾಯಿಂದ ಬರುವ ಮಾತುಗಳು ಅವರ ಬುಡಕ್ಕೇ ಹಾರೆಯ ಪೆಟ್ಟಾಗಿ ಮಾರ್ಪಾಡಾಗಲು ಸಾಧ್ಯ.

ಇಂತಹ ಸಂಗತಿಗಳೆಲ್ಲಾ ನಾವು ಆರಂಭದಲ್ಲಿ ಎತ್ತಿಕೊಂಡ ಸಮಸ್ಯೆಯ ಲಕ್ಷಣವನ್ನು ಎತ್ತಿ ತೋರಿಸುತ್ತವೆ. ನಾವು ಬೈಗುಳದ ಮಾತನ್ನು ಕುರಿತು ಚಿಂತಿಸುತ್ತಿಲ್ಲ; ವಾದವು ಬಹಳ ಬಿರುಸಾದಾಗ ಕೆಲವರು ಬೈಗುಳ ಭಾಷೆಗೆ ಬಿದ್ದುಬಿಡುತ್ತಾರೆ, ಅದು ಬೇರೆ ವಿಷಯ. ಭೂಮಿಯು ಗೋಲಾಕಾರದಲ್ಲಿದೆಯೆಂದು ನೀವು ಹೇಳುತ್ತೀರೆನ್ನಿ; ಅದಕ್ಕೆ ನಾನು "ಅಯ್ಯೋ ಮೂರ್ಖ, ಅದನ್ನಾರೂ ನಂಬುವುದಿಲ್ಲ" ಎಂದು ಪ್ರತಿಕ್ರಿಯಿಸಿದರೆ ನಾವಿಬ್ಬರೂ ಕೇವಲ ವೈಯ್ಯಕ್ತಿಕ ನೆಲೆಯಲ್ಲಿ ಮಾತನಾಡುತ್ತಿರುತ್ತೇವೆ. ಅಲ್ಲಿ ಎಂಥದೂ ಕಲಹವಿಲ್ಲ, ಘಾಸಿಯೇನಾದರೂ ಇದ್ದರೆ ಅದು ಅತ್ಯಲ್ಪ. ಅದೇ, ನೀವು ಬೇರೊಂದು ಮಾತು ಹೇಳುತ್ತೀರೆನ್ನಿ: "ದುಡಿಮೆಗಾರರ ವೇತನವನ್ನು ಹೆಚ್ಚಿಸಬೇಕು" ಎಂದು. ಅದಕ್ಕೆ ನನ್ನ ಪ್ರತಿಕ್ರಿಯೆ ಹೀಗಿರುತ್ತದೆಂದು ಊಹಿಸಿಕೊಳ್ಳಿ: "ಏ ಕಮ್ಯುನಿಸ್ಟ್, ಹಾಗೆಂದು ಯಾರೂ ಹೇಳಕೂಡದು. ತಿಳಿಯಿತೆ?" ನಾವೀಗ ಸಾಮಾಜಿಕ ಪಾತಳಿಯಲ್ಲಿ

ಸಂಭಾಷಿಸುತ್ತಿದ್ದೇವೆಂದರ್ಥ. ಇಲ್ಲಿ ಕಲಹವೇ ಇಲ್ಲ, ಘಾಸಿಯೇನಾದರೂ ಇದ್ದರೆ ಅದು ಅತ್ಯಲ್ಪ ಎನ್ನಲು ಬರುವುದಿಲ್ಲ. ನಾನೊಬ್ಬ ರಾಜಕೀಯ ವಿಷಯಗಳ ಲೇಖಕನಾಗಿದ್ದರೆ ನಿಮ್ಮನ್ನು "ಕಮ್ಯುನಿಸ್ಟ್" ಎಂದು ಸಂಬೋಧಿಸಿದ್ದು ನಿಮ್ಮ ಮೇಲಿನ ವೈಯ್ಯಕ್ತಿಕ ದ್ವೇಷದಿಂದಲ್ಲ. ನಾನು ಹಾಗೆ ಕರೆದದ್ದು ನಿಮ್ಮ ಅಭಿಪ್ರಾಯವನ್ನು ಒಂಟಿದನಿಯ ಅಭಿಪ್ರಾಯವನ್ನಾಗಿಸಿ ಆ ಅಭಿಪ್ರಾಯವು ಪ್ರಭಾವಿಯಾದುದಾಗದಿರಲಿ ಎಂಬುದನ್ನು ಸೂಚಿಸಲು. ರಾಜಕೀಯದಲ್ಲಿ ಬೈಗುಳ ಮಾತನ್ನು ಬಹಳ ಎಚ್ಚರದಿಂದ ಬಳಸಲಾಗುತ್ತದೆ; ಅದರಲ್ಲಿ ತೋರ್ಪಡಿಸಲಾಗುವ ಕೋಪ ಸಹ ಒಂದು ರೀತಿ ಕೃತಕವಾದ್ದು. ಅಲ್ಲಿ ಮುಖ್ಯೋದ್ದೇಶ ಹರಕೆಯ ಕುರಿಯನ್ನು ಅಥವಾ ಬಲಿಪಶುವನ್ನು ಪ್ರತ್ಯೇಕಿಸುವುದು; ಬಹುಶಃ ಆ ಕುರಿಯ ನೌಕರಿಯನ್ನು ಕಳೆಯುವುದು ಅಥವಾ ಜೀವಹಾನಿ ಮಾಡುವುದು ಕೂಡ. ಅಷ್ಟೊಂದು ಅಲ್ಲದಿದ್ದರೂ ಆ ವ್ಯಕ್ತಿಯನ್ನು ತನ್ನ ಸರೀಕರಿಂದ ಬೇರ್ಪಡಿಸುವ ಉದ್ದೇಶವಂತೂ ಖಂಡಿತ ಇರುತ್ತದೆ.

ಪ್ರತಿಯೊಂದು ಮಾತಿನಲ್ಲಿ ಅಥವಾ ಅಚ್ಚಾದ ಮಾಧ್ಯಮದಲ್ಲಿಯೂ ಸಹ ಇಂತಹ ಉದಾಹರಣೆಗಳು ಹೇರಳವಾಗಿರುತ್ತವೆ. ಅಮೆರಿಕಾದ ಒಂದು ಉದಾಹರಣೆಯನ್ನು ನೋಡೋಣ. ಅಧ್ಯಕ್ಷ ರೂಸ್‌ವೆಲ್ಟ್ ಉದಾರವಾದ, ಸುಧಾರಣೆ, ಇತ್ಯಾದಿ ನೀತಿಗಳನ್ನು ಅನುಷ್ಠಾನಕ್ಕೆ ತರುತ್ತಿದ್ದ ಕಾಲ ಅದು. ಅದನ್ನು ಅಗ್ನಿಪ್ರವೇಶಕ್ಕೆ ಗುರಿಮಾಡಿ ಪರೀಕ್ಷಿಸುವಂತಹ ಒಂದು ವಿಮರ್ಶೆ ಇದು. ವಿಮರ್ಶಕ ಮರ್ವಿನ್ ಹಾರ್ಟ್ ಎಂಬುವನ ಭಾಷಣದ ಒಂದು ತುಕಡಿ ಹೀಗಿತ್ತು:

"ಸಾರಾಂಶ ಹೇಳಿಬಿಡುತ್ತೇನೆ, ಅಮೆರಿಕಾದ ವ್ಯಾಪಾರ ನೌಕೆಯನ್ನು ಹಾಳುಮಾಡಲು ಅನುಮತಿಸಿದ್ದಾನೆ. ಹ್ಯಾರಿ ಬ್ರಿಡ್ಜಸ್ ಎಂಬ ಕಮ್ಯನಿಸ್ಟನು ಅದಕ್ಕೆ ರೂವಾರಿ. ಅವನೋ ಅಥವಾ ಅವನ ತೀವ್ರಗಾಮಿ ಸ್ನೇಹಿತರೋ ಯೋಜನೆಯನ್ನು ಸಿದ್ಧಗೊಳಿಸಿದರು ಮತ್ತು ಹ್ಯಾರಿ ಅದನ್ನು ಹೇರುವುದರಲ್ಲಿ ಹೇಗೋ ಸಫಲನಾದ. ಕಂಪನಿಗಳು ಲಾಭ ಪಡೆದಾಗ ಸ್ವಲ್ಪ ಮೊತ್ತವನ್ನು ಹಂಚದೆ ಉಳಿಸಿಟ್ಟುಕೊಳ್ಳುತ್ತವೆ. ಆ ಮೊತ್ತದ ಮೇಲೆ ತೆರಿಗೆ ವಿಧಿಸುವಂತೆ ಕಮ್ಯುನಿಸ್ಟ್ ಹ್ಯಾರಿ ಅಧ್ಯಕ್ಷರ ಮೇಲೆ ಒತ್ತಡ ಹಾಕಿದ್ದಾನೆ. ಅಂತಹ ತೆರಿಗೆಯ ದುಷ್ಪರಿಣಾಮ ಅಪಾರ. ಆರ್ಥಿಕತೆಯು ಮುಂದೊಂದು ದಿನ ಕುಗ್ಗಿದಾಗ ಖಾಸಗಿ ಕಾರ್ಪೊರೇಟ್ ಉದ್ಯಮಗಳು ತಮ್ಮನ್ನು ತಾವು ಸಂಭಾಳಿಸಿಕೊಳ್ಳಲು ಅಸಮರ್ಥವಾಗಿಬಿಡುತ್ತವೆ. ದುಡಿಮೆಗಾರರ ತಕರಾರು ಸಂಬಂಧಿ ವ್ಯಾಗ್ನರ್ ಶಾಸನವು ಜಾರಿಯಲ್ಲಿದೆ. ಅದನ್ನು ಇವನೇ ಶಾಸನ ಮಾಡಿಸಿದ್ದ. ಅದರ ಪರಿಣಾಮವಾಗಿ ನಿರಾಶೆ, ಆತಂಕ ಮೂಡಿದೆ. ಮಾಲೀಕರಿಗೆ ಮತ್ತು ಕೆಲಸಗಾರರಿಬ್ಬರಿಗೂ ಹೊಡೆತ ಬೀಳಲಿದೆ..... ರೂಸ್‌ವೆಲ್ಟರ ಸಹವರ್ತಿಗಳಲ್ಲಿ ತೀವ್ರವಾದಿಗಳು ತುಂಬಿದ್ದಾರೆ. ಸದ್ಯದಲ್ಲಿ ಕಮ್ಯುನಿಸ್ಟ್ ನಿಲುವಿನ ಪರವಾಗಿರುವವರು ಅನೇಕರಿದ್ದಾರೆ. 1936ರಲ್ಲಿ ಅಧ್ಯಕ್ಷ ಪದವಿಯನ್ನು ಸ್ವೀಕರಿಸುವಾಗ ರೂಸ್‌ವೆಲ್ಟ್ ಮಾಡಿದ್ದ ಭಾಷಣವನ್ನು ಗಮನಿಸಿ: ಆತನ ಯೋಜನೆಗಳಿಗೆಲ್ಲಾ ಕಮ್ಯುನಿಸ್ಟ್ ಮೂಲವಿದೆ. ನಾನು ಯಾವ ಅಂಜಿಕೆಯೂ ಇಲ್ಲದೆ ನಿಮ್ಮ ಮುಂದಿಡುತ್ತಿರುವ ಮಾಹಿತಿಯನ್ನೆಲ್ಲಾ ಪರಿಶೀಲಿಸಿ. ಆಗ ನಿಮಗೆ ತಿಳಿಯುತ್ತದೆ ಈ ಅಧ್ಯಕ್ಷನು ಅಮೆರಿಕಾವನ್ನು ಕಮ್ಯುನಿಸ್ಟ್ ನೆಲೆಗೆ ಕೊಂಡೊಯ್ಯುತ್ತಿದ್ದಾನೆಂದು ತೋರುತ್ತದೆ".

ಈ ಭಾಷಣ ಕೇಳುತ್ತಿದ್ದವರೆಲ್ಲಾ ಅತೀವ ಆತಂಕ ಅನುಭವಿಸಿರಬೇಕು, ನಡುಗಿಹೋಗಿರಬೇಕು. ಹಾರ್ಟ್ ಬಳಸಿದ ಪದಗಳನ್ನು ನೋಡಿ: "ಯಾವ ಅಂಜಿಕೆಯೂ ಇಲ್ಲದೆ." ಹಾಗಿದ್ದರೆ "ತೋರುತ್ತದೆ" ಎಂದೇಕೆ ಹೇಳುತ್ತಾನೆ? ಅವನು ಟೀಕಾಪ್ರಹಾರ ಮಾಡುತ್ತಿರುವುದು ಕೆಲವು ನೀತಿಗಳ ಮೇಲೆ, ಆದರೆ ಆ ನೀತಿಗಳು ಯಾವುವೂ ಜಾರಿಗೊಂಡಿಲ್ಲ. ಅಧ್ಯಕ್ಷರು ಆ ಹಾದಿ ಅನುಸರಿಸಬಹುದೆಂಬ ಗುಮಾನಿ ಇದೆ, ಅಷ್ಟೆ. ಅಮೆರಿಕಾದ ಬಹುಸಂಖ್ಯಾತ ಜನಕ್ಕೆ ಅಂತಹ ಭೀತಿ ಇದ್ದಿದ್ದರೆ ಅವರಿಗೆ ದೊರೆಯಲಿದ್ದ ನಿರುದ್ಯೋಗ ಭತ್ಯೆ ಮತ್ತು ಸಾಮಾಜಿಕ ವಿಮೆಗಳನ್ನು ಕಳೆದು ಕೊಳ್ಳುತ್ತಿದ್ದರು. ಆದರೆ 'ನೂತನ ಕ್ರಮ'ದಿಂದ ಇವಕ್ಕೆ ಬಾಧಕವೇನೂ ಉಂಟಾಗಲಿಲ್ಲ; ಮರ್ವಿನ್ ಹಾರ್ಟ್ ನಿರೀಕ್ಷಿಸಿದ್ದ ಪ್ರತಿಕೂಲ ಉಂಟಾಗಲಿಲ್ಲ. ಏಕೆಂದರೆ, ರಾಷ್ಟ್ರೀಯ ಜಾಣತನವು ಆರ್ಥಿಕತೆಯನ್ನು ನವಿರಾಗಿ ಕಾಪಿಟ್ಟಿತು, "ಕಮ್ಯುನಿಸ್ಟ್" ಎಂಬ ಪದದಿಂದ ಭೀತಿಗೊಂಡು ದೇಶದ ಜನರು ಅಸಹಾಯಕತೆ ಮತ್ತು ಬಡತನಗಳಿಗೆ ಬಲಿಬೀಳಲಿಲ್ಲ.

ಹಾರ್ಟ್ ಮಾಡಿದ್ದುದೇನು? ಒಂದು ಒಳ್ಳೆಯ ನೀತಿಗೆ ಕಪ್ಪುಬಣ್ಣ ಬಳಿದು ಎಲ್ಲರನ್ನೂ ದಿಗ್ಭ್ರಮೆಗೊಳಿಸಲು ಹೊರಟಿದ್ದ. ಹಾಗೆ ಬಣ್ಣ ಬಳಿಯದೆಯೂ ಜನರನ್ನು ದಿಕ್ಕು ತಪ್ಪಿಸುವ ಮಂದಿ ಇದ್ದಾರೆ. ಅವರು ವಿಜ್ಞಾನ, ರಾಜಕೀಯ ಸಿದ್ಧಾಂತ, ಮೊದಲಾದ ದೊಡ್ಡ ಮಾತುಗಳ ಹಿನ್ನೆಲೆಯಿಂದಲೇ ಹಾದಿ ತಪ್ಪಿಸುತ್ತಾರೆ. 1938ರ ನವೆಂಬರ್ 12ರಂದು "ಸೈನ್ಸ್ ನ್ಯೂಸ್‌ಲೆಟರ್" ತನ್ನ ಸಂಚಿಕೆಯಲ್ಲಿ ಆರ್ಥಿಕ ಸಿದ್ಧಾಂತಗಳು ಹೇಗೆ ಆಶ್ಚರ್ಯಕರ ಫಲಿತಾಂಶಗಳನ್ನು ನೀಡುತ್ತವೆಂಬುದನ್ನು ಪ್ರತಿಪಾದಿಸಿತ್ತು:

"ತೆರಿಗೆಗಳನ್ನು ಕ್ರಮೇಣ ಹೆಚ್ಚಿಸುತ್ತಾ ಹೋಗುವುದು ಭಯಂಕರ ಪರಿಣಾಮ ನೀಡುತ್ತದೆ. ನಗುನಗುತ್ತಾ ನಾವು ಕಮ್ಯುನಿಸಂನತ್ತ ಹೋಗಿಬಿಡುತ್ತೇವೆ. ಮಾತಿನಲ್ಲಿ ಆಸ್ತಿಯ ಹಕ್ಕು ಎಂಬ ನಿಯಮವನ್ನು ಘೋಷಿಸುತ್ತಿರುತ್ತೇವೆ ಆದರೆ ಕಮ್ಯುನಿಸಂನತ್ತ ಹೊರಳಿರುತ್ತೇವೆ." ಹೀಗೆಂದವನು ಡಾ॥ ಕೆ.ಜಿ.ಹ್ಯಾಗ್‌ಸ್ಟ್ರಾಮ್. ಅವನು ಸ್ವೀಡನ್ನಿನ ತಜ್ಞ ಮತ್ತು ಇಕನಾಮಿಕ್ ಸೊಸೈಟಿಗೆ ವರದಿ ಸಲ್ಲಿಸಿದ್ದವನು. ಅವನು ಹೇಳಿದ್ದುದಿದು: "ಇದೊಂದು 'ಬೆಂಬಲಿತ ಪಕ್ಷ', ಅದರಲ್ಲಿರುವವರು ಭತ್ಯೆ, ಪರಿಹಾರ, ಪಿಂಚಣಿ, ಕೊಟ್ಟೆ–ಮೊಟ್ಟೆ, ವೃದ್ಧಾಪ್ಯ ಇಲ್ಲವೆ ನಿರುದ್ಯೋಗದ ಸಂಭಾವನೆ ಇತ್ಯಾದಿ ಪುಕ್ಕಟೆ ಹಣ ಪಡೆಯುತ್ತಿರುವಂಥವರು. ಅಂತಹ ಪಕ್ಷವು ಬಹುಮತ ಪಡೆದರೆ ದುಡಿದು ಸಂಪಾದಿಸುವ ಸಮುದಾಯದ ಮೇಲೆ ತೆರಿಗೆಗಳನ್ನು ಹೇರುತ್ತದೆ. ರಕ್ತಪಾತವಿರುವ ಅಥವಾ ಇಲ್ಲದ ಕ್ರಾಂತಿ ಯಾವುದೂ ಇಲ್ಲದೆಯೇ ದೇಶವು ಕಮ್ಯುನಿಸ್ಟ್ ಪ್ರಭುತ್ವವಾಗಿಬಿಡುತ್ತದೆ."

ಇದರ ಲೇಖಕನ ಅಭಿಪ್ರಾಯವು ಸುಲಭಗ್ರಾಹ್ಯ. ಒಂದು ಕಡೆ ಅಂಕಿ–ಸಂಖ್ಯೆಗಳ ಆಧಾರ, ಮತ್ತೊಂದು ಕಡೆ ಸ್ವೀಡನ್ನಿನ ಪಿಎಚ್.ಡಿ. ಪ್ರಾಧ್ಯಾಪಕ: ವೃದ್ಧರಿಗೆ ಪಿಂಚಣಿ ನೀಡುವುದಕ್ಕೆ ವಿರೋಧ, ನಿರುದ್ಯೋಗ ಭತ್ಯೆಗೆ ವಿರೋಧ, ಸಾಮಾಜಿಕ ವಿಮೆಯ ತೆಗಳುವಿಕೆ; ಅಂದರೆ ಜನಸಾಮಾನ್ಯರಿಗೆ ನೀಡುವ ಸವಲತ್ತುಗಳನ್ನು ವಿರೋಧಿಸುವುದು. ಇನ್ನೆಲ್ಲಿ ಇಂತಹ ಸವಲತ್ತುಗಳ ಪ್ರಾಪ್ತಿಯಾಗಿಬಿಡುತ್ತದೋ ಎಂದು ಬೆದರಿ ಕಮ್ಯುನಿಸ್ಟ್ ಬೆಳವಣಿಗೆಯನ್ನು ತಡೆಯಬೇಕು ಮತ್ತು ಆ ಕೆಲಸವನ್ನು ಸವಲತ್ತು ಪಡೆಯುವವರೂ ಸೇರಿ ಮಾಡಿಬಿಡಬೇಕು!!

ತರ್ಕ ಮತ್ತು ಕೆಂಪು ಹೆಸರುಪಟ್ಟಿ

ಕೆಂಪು ಪಟ್ಟಿಯನ್ನು ನಕಾರಾತ್ಮಕವಾಗಿ ಅರ್ಥೈಸುವುದು ರೂಢಿಯಲ್ಲಿದೆ. ಇರುವ ನಾಲ್ಕಕ್ಷರಗಳಲ್ಲಿ ಅದೆಷ್ಟು ದ್ವೇಷದ ಅರ್ಥಗಳನ್ನು ತುಂಬಿಬಿಟ್ಟಿದ್ದಾರೆ ನೋಡಿ. ಅಂದರೆ, ಕೆಂಪೆಂದರೆ ಪಟ್ಟಿ ಮಾಡುವವರಿಗೆ ಅಷ್ಟೊಂದು ಭೀತಿ! ಕಮ್ಯುನಿಸ್ಟ್ ತತ್ವವನ್ನು ನಿರ್ಭಿಡೆಯಿಂದ ಅಂಗೀಕರಿಸುವವರು ಉತ್ಪಾದನಾ ಸಾಧನಗಳನ್ನು (ಭೂಮಿ, ಕಾರ್ಖಾನೆ, ಗಣಿ, ಅರಣ್ಯ, ನೀರು, ಕಚ್ಚಾ ಸಾಮಗ್ರಿ, ಇತ್ಯಾದಿ) ಸಾಮಾಜೀಕರಣ ಮಾಡುವ ಆಕಾಂಕ್ಷೆ ಹೊಂದಿರುತ್ತಾರೆಂಬುದು ಸತ್ಯ. ಅವುಗಳ ಮಾಲೀಕತ್ವ ಹೊಂದಿರುವವರಿಗೆ ಅದಕ್ಕೆಂದೇ ವಿಪರೀತ ಕೋಪ. ಅವರು ಸುಮ್ಮನಿದ್ದಾರೆ? ತಮ್ಮ ಬತ್ತಳಿಕೆಯಲ್ಲಿರುವ ಎಲ್ಲ ಆಯುಧಗಳನ್ನೂ ಕಮ್ಯುನಿಸ್ಟರ ವಿರುದ್ಧ ಬಳಸಿಯೇ ತೀರುತ್ತಾರೆ. "ಕಮ್ಯುನಿಸ್ಟ್" ಎಂದು ಕರೆದುಕೊಳ್ಳುವವರಿಗೆ ಇಂತಹ ಹಲ್ಲೆ ಕಟ್ಟಿಟ್ಟದ್ದು; ಕೆಂಪು ಹೆಸರುಪಟ್ಟಿ ಧರಿಸಿದ್ದರೆ ಅದಕ್ಕೆ ಜುಲ್ಮಾನೆ ಕಟ್ಟಲು ಸದಾ ಸಿದ್ಧರಿರಬೇಕು, ಎಂದರ್ಥ.

ವಿಶಿಷ್ಟ ಹುಮ್ಮಸ್ಸನ್ನು ಹೊಂದಿರುವವರು ಈ ಹೆಸರುಪಟ್ಟಿಗೆ ಅಂಜುವುದಿಲ್ಲ. ವಿರೋಧಿಗಳು 'ಕಮ್ಯುನಿಸ್ಟ್' ಎಂಬ ಪದಕ್ಕೆ ಅಂಟಿಸಿರುವ ಕುಖ್ಯಾತಿಗೆ ಅಂಜದೆ ಆ ಪದವನ್ನು ವಿಜಯ ಮತ್ತು ತ್ಯಾಗ ಎಂಬರ್ಥದಲ್ಲಿ ನೈಜ ಕಮ್ಯುನಿಸ್ಟರು ಸ್ವೀಕರಿಸುತ್ತಾರೆ. ಫ್ರಾನ್ಸಿನ ಕಮ್ಯುನಿಸ್ಟ್ ಪಕ್ಷದ 'ಲೂಮಾನಿತೆ' ಎಂಬ ದಿನಪತ್ರಿಕೆಯ ಸಂಪಾದಕ ಗಾಬ್ರಿಯಲ್ ಪೆರಿ ಅಂಥವನಾಗಿದ್ದ. ಫ್ರಾನ್ಸಿನ ಆಕ್ರಮಣದ ತರುವಾಯ ನಾಝಿ ಸೈನ್ಯವು ದಸ್ತಗಿರಿ ಮಾಡಿದವರಲ್ಲಿ ಅವನು ಮೊದಲಿಗ. ತನ್ನ ಸಂಗಾತಿಗಳ ವಿವರಗಳನ್ನು ನೀಡಿದರೆ ಬಿಡುಗಡೆಯ ಆಶ್ವಾಸನೆಯನ್ನು ಬಂಧನದಲ್ಲಿದ್ದ ವೇಳೆ ಅವನಿಗೆ ಕೊಡಲಾಗಿತ್ತು. ಇಂತಹ ಆಮಿಷವು ಅವನನ್ನು ನಿಸ್ತೇಜ ಮಾಡಲಿಲ್ಲ, ಕಡೆಗೆ ಅವನನ್ನು ಗುಂಡಿಟ್ಟು ಕೊಲ್ಲುವವರೆವಿಗೂ ನಿಶ್ಚಲನಾಗಿಯೇ ಉಳಿದ. ಸಾವಿನ ಮುನ್ನಾದಿನ ಕತ್ತಲೆ ಮತ್ತು ನೋವು ಅವನನ್ನಾವರಿಸಿತ್ತು. ತನ್ನ ಅಂತಃಕರಣವನ್ನು ತಡಕಾಡಿದ: ತಾನು ಯಾವುದಕ್ಕಾಗಿ ಪ್ರಾಣ ಕೊಡುತ್ತಿದ್ದನೋ ಆ ಸಿದ್ಧಾಂತವು ಉದಾತ್ತವಾದುದೇ ಎಂಬ ಪ್ರಶ್ನೆಗೆ ಉತ್ತರ ಬೇಕಾಗಿತ್ತು ಅವನಿಗೆ. ಅಂತಹ ಸಂದರ್ಭದಲ್ಲಿ ಅನುಮಾನಗಳು ಕಾಡುವುದು ಅಸಹಜವಲ್ಲ. ಉತ್ತರವನ್ನು ಅವನು ಕಂಡುಕೊಂಡ ಮತ್ತು ಆ ರಾತ್ರಿಯೇ ದಾಖಲಿಸಿದ:

"ನನ್ನ ಜೀವನದ ಆದರ್ಶಕ್ಕೆ ನಾನು ವಿಧೇಯನಾಗಿದ್ದೇನೆಂದು ನನ್ನ ಸ್ನೇಹಿತರೆಲ್ಲಾ ತಿಳಿಯಲಿ; ನನ್ನ ಫ್ರಾನ್ಸ್ ಉಳಿಯಲೆಂದು ನಾನು ಜೀವ ಕೊಡುತ್ತಿದ್ದೇನೆಂದು ನನ್ನ ದೇಶದ ಜನ ತಿಳಿಯಲಿ. ನನ್ನ ಅಂತಃಪ್ರಜ್ಞೆಯನ್ನು ಪರೀಕ್ಷಿಸಿ ನೋಡಿದ್ದೇನೆ: ಸಕಾರಾತ್ಮಕ ಉತ್ತರವನ್ನು ಅದು ನೀಡಿದೆ...... ನಾನೇನಾದರೂ ಮತ್ತೊಮ್ಮೆ ಜೀವನವನ್ನು ಸಾಗಿಸುವಂತಾದರೆ ನನ್ನ ಹಾದಿಯು ಮತ್ತೆ ಅದೇ ಆಗಿರುತ್ತದೆ. ನನ್ನ ಆತ್ಮೀಯ ಸ್ನೇಹಿತ ವೆಯ್ಯಾಂತ್-ಕುತುರ್ಯೆ ಹೇಳುತ್ತಿದ್ದ, ಕಮ್ಯುನಿಸಂ ಪ್ರಪಂಚದ ಯುವಕಾಲದ ಚಿಹ್ನೆ ಎಂದು; ಅದು ನಾಳಿನ ಸಂಗೀತಕ್ಕೆ ನಾಂದಿ ಎಂದವನು ಹೇಳುತ್ತಿದ್ದ. ಅವನ ಮಾತು ಸರಿ. ಸಾವನ್ನೆದುರಿಸುವಾಗ ನಾನು ಬಲಶಾಲಿಯಾಗಿಯೇ ಇದ್ದೇನೆ. ಹೋಗಿಬರುವೆ, ಫ್ರಾನ್ಸ್ ಚಿರಾಯುವಾಗಲಿ."

ಗಾಬ್ರಿಯೆಲ್ ಪೆರಿ ಯಾವ ತತ್ವಗಳಿಗಾಗಿ ಅಸುನೀಗಿದನೋ ಆ ತತ್ವಗಳ ಬಗ್ಗೆ ಏನೇ ಅಭಿಪ್ರಾಯವಿರಲಿ, ಅವನ ಮಾತಿನ ದನಿಯಲ್ಲಿ ಎಷ್ಟು ಗಮನಾರ್ಹ ವ್ಯತ್ಯಾಸವಿದೆ ಗಮನಿಸಿ. ಈ ಮುಂಚೆ ಉದ್ಧರಿಸಿದವರ ಮಾತಿನ ಧ್ವನಿಗಳಿಗಿಂತ ಅತ್ಯಂತ ಭಿನ್ನವಾಗಿದೆ ಇದು. ಅಂತಿಮ ಘಟ್ಟದಲ್ಲಿ ತನ್ನನ್ನು ತಾನು ಮಾಪನ ಮಾಡಿಕೊಳ್ಳುತ್ತಿದ್ದಾನೆ. ಸುಖ-ಸಂತೋಷಗಳ ಗೊಡವೆಯನ್ನು ಪಕ್ಕಕ್ಕಿಟ್ಟು ಆತ್ಮಾವಲೋಕನ ಮಾಡಿಕೊಳ್ಳುವಾಗ ಮಾತುಗಳನ್ನು ಅವನು ವೃಥಾ ಬಳಸಲಾರ, ಮಾತನ್ನು ಅಪ್ರಸ್ತುತಗೊಳಿಸಲಾರ. ಅವನ ಮನದಾಳದ ಭಾವನೆ ಮತ್ತು ಅಭಿವ್ಯಕ್ತಿಯಲ್ಲಿ ಪ್ರಚಾರಕನ ಸೊಲ್ಲಿಲ್ಲ. ಸಿದ್ಧಾಂತಗಳನ್ನು ಬೇಕಾಬಿಟ್ಟಿ ಹಂಗಿಸುವವರ ಕೊನೆಯ ಮಾತುಗಳು ದಾಖಲಾಗುವುದು ಅಪರೂಪ. ಅವರ ದನಿ ಉಡುಗಿಹೋಗಿರುತ್ತದೆ. ಅಕಸ್ಮಾತ್ ಏನಾದರೂ ಅವರ ಒಡಕಲು ದನಿ ಕೇಳಿಸಿದರೆ ಹುತಾತ್ಮರು ನಗೆಯಾಡಿಯಾರು.

ಪೆರಿಯ ಧೀರೋದಾತ್ತತೆಯು ನಮಗೆ ಎಟುಕದಿದ್ದರೆ, ಅಥವಾ ಅವನ ತತ್ವಗಳು ನಮಗೆ ಹಿಡಿಸದಿರುವುದರಿಂದ ಅಂತಹ ಉದಾತ್ತತೆಯನ್ನು ಮೆರೆಯಲಿಚ್ಛಿಸದಿದ್ದರೆ, ಕನಿಷ್ಠ ನಾವೇನು ಮಾಡಬಹುದು? ಏನಾದರೂ ಮಾಡಬೇಕಲ್ಲವೆ: ಇಲ್ಲದಿದ್ದರೆ ನಮ್ಮನ್ನು ಹಂಗಿಸುವವರ ಶುಷ್ಕ ತರ್ಕಕ್ಕೆ ಅವಕಾಶ ನೀಡಿದಂತಾಗುತ್ತದೆ; ನಮಗೆ ಗರ ಬಡಿಯಲೆಂಬ ಅವರ ಆಸೆ ಪೂರೈಸಿದಂತಾಗುತ್ತದೆ. ಅವರ ಪ್ರತಿ ವಾದಿಸುವಾಗ, ನಮ್ಮ ಮೇಲಿನ ಆಕ್ಷೇಪವನ್ನು ನಿರಾಕರಿಸುವಾಗ, ನಾವು ಸ್ವಲ್ಪ ಕೆರಳುವುದುಂಟು. ಅದು ಸಮಯದ ಹಾಳು, ಅಷ್ಟೆ. ತರ್ಕದೃಷ್ಟಿಯಿಂದ ಅಪ್ರಸ್ತುತವಾದ ವಿಷಯದ ಮೇಲೆ ಹೀಗೆ ಸಮಯವನ್ನು ವ್ಯರ್ಥಮಾಡಬಾರದು. ಅವರನ್ನು ಹಾಗೆ ಒಡಂಬಡಿಸಲಾಗುವುದಿಲ್ಲ. ಕೆಂಪು ಹಣೆಪಟ್ಟಿಯ ಬೈಗುಳಗಳಿಂದ ಪಾರಾಗಲು ಅದು ಕ್ರಮವಲ್ಲ. ಬೈಗುಳದ ಆರ್ಭಟವು ಶಮನವಾಗುವುದು "ಕಮ್ಯುನಿಸ್ಟ್" ಎಂಬ ಪದದ ಯಥಾರ್ಥವನ್ನು ಸಾರ್ವಜನಿಕರು ತಿಳಿದು ಗುರುತಿಸಿದಾಗ ಮಾತ್ರ. ಜನತೆಯು ಕಮ್ಯುನಿಸ್ಟರನ್ನು ಮತ್ತು ಅವರ ಕಾರ್ಯಸೂಚಿಯನ್ನು ಸ್ಪಷ್ಟವಾಗಿ ತಿಳಿಯುವಂತಾಗಬೇಕಾದ್ದು ಅತ್ಯವಶ್ಯಕ.

(ಅ) ಯಾರು ಕಮ್ಯುನಿಸ್ಟರು?

ರಾಜಕೀಯ ವಿಭಜನೆಗೆ ಮಾನದಂಡವೆಂದರೆ ವ್ಯಕ್ತಿಗಳ ಅಭಿಪ್ರಾಯಗಳು. ಒಂದೇ ಬಗೆಯ ಅಭಿಪ್ರಾಯಗಳನ್ನುಳ್ಳವರು ಒಂದು ನಿರ್ದಿಷ್ಟ ವರ್ಗವೆನಿಸಿಕೊಳ್ಳುತ್ತಾರೆ. ಒಂದು ಸಂಘಟನೆಯ ಸದಸ್ಯತ್ವವು ಮಾಪನಕ್ಕೆ ಸಾಲದು, ಏಕೆಂದರೆ ಸಂಘಟನೆಯ ಹೆಸರು ಸೂಚಿಸುವ ಎಲ್ಲ ಅಭಿಪ್ರಾಯಗಳನ್ನೂ ವ್ಯಕ್ತಿಯು ಮಾನ್ಯ ಮಾಡದಿರಬಹುದು, ಇಲ್ಲವೆ ಮಾನ್ಯ ಮಾಡಿಯೂ ನೀತಿಯನ್ನಾಗಿ ಅನುಷ್ಠಾನಕ್ಕೆ ತಾರದಿರಬಹುದು. ಅಭಿಪ್ರಾಯಗಳು ಮತ್ತು ಅನುಷ್ಠಾನ ಎರಡೂ ನಿರ್ಣಾಯಕ.

ಈ ಸೂತ್ರದಂತೆ "ಕಮ್ಯುನಿಸ್ಟ್" ಎಂದರೆ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಅಂಗೀಕರಿಸಿದವನು. ಅದನ್ನು ಹೀಗೆ ಸಂಕ್ಷಿಪ್ತಗೊಳಿಸಬಹುದು:

ಅ) ಪ್ರಸ್ತುತ ಅಸ್ತಿತ್ವದಲ್ಲಿರುವ ಸಮಾಜದಲ್ಲಿನ ವೈರುಧ್ಯಗಳನ್ನು ನೀಗಿಸಲು ಭೂಮಿ ಮತ್ತು ಉತ್ಪಾದನಾ ಸಾಧನಗಳು ಸಾಮಾಜಿಕ ನಿಯಂತ್ರಣಕ್ಕೆ ಒಳಪಡಬೇಕು. ಅಂತಹ ವ್ಯವಸ್ಥೆಯೊಂದೇ ಪರಿಹಾರ.

ಆ) ರೈತರು, ಉದ್ಯೋಗಸ್ಥರು ಹಾಗೂ ಚಿಕ್ಕ ಪ್ರಮಾಣದ ಮಾಲೀಕತ್ವ ಉಳ್ಳವರ ಜೊತೆಯಾಗಿ ದುಡಿಯುವ ವರ್ಗವು ರಾಜಕೀಯ ಅಧಿಕಾರವನ್ನು ಪಡೆಯುವ ಮೂಲಕವಷ್ಟೇ ಅಂತಹ ವ್ಯವಸ್ಥೆಯ ಆವಿಷ್ಕಾರವಾಗಬಲ್ಲದು.

ಇ) ಪ್ರಭುತ್ವದ ಅಧಿಕಾರಯಂತ್ರವನ್ನು ತಮ್ಮದಾಗಿಸಿಕೊಂಡ ದುಡಿಯುವ ಜನ ಬಂಡವಳಿಗರ ಸಾಮಾಜಿಕ ವರ್ಗವನ್ನು ಇಲ್ಲವಾಗಿಸಲು ಅಧಿಕಾರವನ್ನು ಬಳಸಬೇಕು. ಅಂದರೆ, ಬಂಡವಳಿಗರನ್ನು ವೈಯ್ಯಕ್ತಿಕವಾಗಿ ಕೊನೆಗೊಳಿಸುವುದಲ್ಲ.

ಈ) ಇವೆಲ್ಲಾ ಒಂದು ಒಂಟಿ ದೇಶದಲ್ಲಿ ಕೂಡ ಸಂಭವಿಸಬಹುದು. ಅಂದರೆ, ಸಮಾಜವಾದವು ಒಂದೆಡೆ ಅಸ್ತಿತ್ವಕ್ಕೆ ಬರಲು ಎಲ್ಲೆಡೆಯೂ ಅದನ್ನು ಅಸ್ತಿತ್ವಕ್ಕೆ ತರುವ ಅನಿವಾರ್ಯತೆ ಇಲ್ಲ.

ಉದಾರವಾದಿಗಳು ಮತ್ತು ಸಂಪ್ರದಾಯವಾದಿಗಳು ಬಂಡವಾಳಶಾಹಿಯನ್ನು ಬೆಂಬಲಿಸುತ್ತಾರೆ, ಕಮ್ಯುನಿಸ್ಟರು ಹಾಗೆ ಮಾಡುವುದಿಲ್ಲ. ಇದೇ ವ್ಯತ್ಯಾಸ. ಸಮಾಜವಾದಿಗಳೆಂದು ಕರೆದುಕೊಳ್ಳುವವರು ಅಧಿಕಾರವನ್ನು ಸೆಳೆದುಕೊಳ್ಳುವ ಧೋರಣೆಯನ್ನು ಒಪ್ಪುವುದಿಲ್ಲ ಮತ್ತು ಲಿಯಾನ್ ಟ್ರಾಟ್‌ಸ್ಕಿಯ ಅನುಯಾಯಿಗಳು ಯಾವುದೇ ಒಂಟಿ ದೇಶದಲ್ಲಿ ಸಮಾಜವಾದವು ನೆಲೆಯೂರಬಹುದೆಂಬುದನ್ನು ಒಪ್ಪುವುದಿಲ್ಲ. ಮಾರ್ಕ್ಸ್‌ವಾದಿ ಸಿದ್ಧಾಂತವು ಸುಮಾರು 170 ವರ್ಷಗಳಿಂದ ವೃದ್ಧಿಹೊಂದುತ್ತಾ ಬಂದಿದೆ. ಆ ಕಾಲದಲ್ಲಿ ಎಷ್ಟೋ ಚರ್ಚೆಗಳು ಮತ್ತು ಆಂತರಿಕ ಸಂಘರ್ಷಗಳು ಜರುಗಿವೆ. ಅದರಿಂದಾಗಿ ಪ್ರತಿಯೊಂದು ಪ್ರತ್ಯೇಕ ಬಣದ ಲಕ್ಷಣಗಳನ್ನೂ ಕ್ಲುಪ್ತವಾಗಿ ಹೇಳಬರುವುದಿಲ್ಲ. ಇನ್ನೊಂದು ಸೂಕ್ಷ್ಮ ವಿಷಯ ಯಾವೊಂದು ಶಾಸನ ನಿರೂಪಣೆಯನ್ನು "ಕಮ್ಯುನಿಸ್ಟ್" ಎಂದು ವರ್ಗೀಕರಿಸಬಹುದು ಎಂಬುದು. ಈಗ ತಾನೆ ಪರಿಚಯಿಸಿಕೊಂಡ ರಾಜಕೀಯ ಕಾರ್ಯಸೂಚಿಯನ್ನುಳಿದು ಬೇರಾವುದಕ್ಕೆ "ಕಮ್ಯುನಿಸ್ಟ್" ಎಂಬ ಲಕ್ಷಣ ಹೊಂದುತ್ತದೆ? ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಾಗ ಒಂದು ದೇಶವು ಬಹುಮಟ್ಟಿಗೆ ಸಮಾಜವಾದವನ್ನು ಜಾರಿಗೊಳಿಸಿದ್ದರೆ, ಅಥವಾ ಪೂರ್ಣವಾಗಿ ಸಾಧಿಸಿದ್ದರೆ, ನಿಸ್ಸಂಶಯವಾಗಿ ಅದನ್ನು "ಕಮ್ಯುನಿಸ್ಟ್" ಎನ್ನಬಹುದು. ಸಮಾಜವಾದದ ಸನಿಹಕ್ಕೆ ಬರದ ಅಥವಾ ಆ ಉದ್ದೇಶವನ್ನು ಹೊಂದದ ಯಾವ ಕಾರ್ಯಕ್ರಮಗಳನ್ನು "ಕಮ್ಯುನಿಸ್ಟ್" ಎನ್ನಬಹುದು?

ಕಾರ್ಯಕ್ರಮವೊಂದು ಕಮ್ಯುನಿಸ್ಟ್ ಆಗುವುದು ಯಾವ ಸಂದರ್ಭದಲ್ಲಿ?

ಕಮ್ಯುನಿಸ್ಟ್ ಚಿಂತನೆ ಮತ್ತು ಕ್ರಿಯೆಗೆ ಮಸಿ ಬಳಿಯುವವರು ತಮಗೆ ಹಿಡಿಸದ ಎಲ್ಲವನ್ನೂ 'ಕಮ್ಯುನಿಸ್ಟ್' ಎಂದು ಹೆಸರಿಸಿ ಟೀಕಿಸುತ್ತಾರೆ, ತಳ್ಳಿಹಾಕುತ್ತಾರೆ. ಅವರಲ್ಲಿ ಕೆಲವರಾದರೂ ತರ್ಕಕ್ಕೆ ಮಣಿಯುವವರಿರುತ್ತಾರೆ. ಆದರೆ ಅದನ್ನು ಅನ್ವಯಿಸುವಾಗ ಯಾವ ಕಾರ್ಯಕ್ರಮವನ್ನು ಕಮ್ಯುನಿಸ್ಟರು ಬೆಂಬಲಿಸುತ್ತಾರೋ ಅಥವಾ ಎಲ್ಲಿ ಸಾಮುದಾಯಿಕ ಕಾರ್ಯನೀತಿ ಇರುತ್ತದೋ ಅವನ್ನು ತರ್ಕದ ಪರಿಧಿಯಿಂದ ಹೊರಗಿಡುತ್ತಾರೆ. ಅಲ್ಲಿಗೆ ಎರಡೂ ಒಂದೇ ಆದಂತಾಯಿತು.

ಸಮಾಜವಾದಿಯಲ್ಲದ ಕಾರ್ಯಕ್ರಮಗಳ ಬಗ್ಗೆ ಕಮ್ಯುನಿಸ್ಟ್ ನಿಲುವನ್ನು ಸ್ವತಃ ಮಾರ್ಕ್ಸ್ 'ಕಮ್ಯುನಿಸ್ಟ್ ಪ್ರಣಾಲಿಕೆ'ಯಲ್ಲಿ ಪ್ರಸ್ತಾಪಿಸಿದ್ದಾನೆ. "ಕಮ್ಯುನಿಸ್ಟ್ ಚಳುವಳಿಯು

ದುಡಿಯುವ ವರ್ಗದ ತಕ್ಷಣದ ಹಿತಾಸಕ್ತಿಗಳ ಪೂರೈಕೆಗೆ ಹೋರಾಡುತ್ತದೆ. ಆದರೆ ವರ್ತಮಾನದ ಚಳುವಳಿಯನ್ನು ನಡೆಸುವಾಗ ದೀರ್ಘಕಾಲೀನ ಉದ್ದೇಶವನ್ನು ಪ್ರತಿನಿಧಿಸುತ್ತದೆ ಹಾಗೂ ಅದರ ಬಗ್ಗೆ ಆಸಕ್ತಿ ವಹಿಸುತ್ತದೆ."

ಅಂದರೆ, ತಕ್ಷಣದ ಹಿತವನ್ನು ರಕ್ಷಿಸುವ ಶಾಸನವೊಂದನ್ನು ಕಮ್ಯುನಿಸ್ಟರು ಬೆಂಬಲಿಸಿದರೆ ಒಂದಂಶ ಮಾತ್ರ ನಿಶ್ಚಿತ: ದುಡಿಯುವ ಜನರ ಹಿತಾಸಕ್ತಿಗಳಲ್ಲಿ ಅವರಿಗೆ ಶ್ರದ್ಧೆಯಿದೆ, ಎಂದು. ಆದರೆ ಮಸಿ ಬಳಿಯುವ ಪ್ರವೃತ್ತಿಯವರು ಅಂತಹ ಶಾಸನವನ್ನು 'ಸಮಾಜವಾದಿ' ಎಂದು ಭಾವಿಸಿ ವಿರೋಧಿಸಬಹುದು. ಅದಕ್ಕೆ ಅವರ ಕಾರಣ ಶಾಸನವನ್ನು ಕಮ್ಯುನಿಸ್ಟರು ಬೆಂಬಲಿಸಿದ್ದಾರೆಂಬುದು. ಅಮೆರಿಕಾದ ದುಡಿಯುವವರಿಗೆ ಸಂಬಂಧಿಸಿದ ವ್ಯಾಗ್ನರ್ ಶಾಸನವು ಖಂಡಿತ ಸಮಾಜವಾದಿಯಲ್ಲ. ದುಡಿಯುವವರ ಸಂಘಟನೆಗಳಿಗೆ ಸಾಕಷ್ಟು ರಾಜಕೀಯ ಮತ್ತು ಆರ್ಥಿಕ ಶಕ್ತಿಯನ್ನು ನೀಡುವ ಶಾಸನ ಅದು, ಮುಂದೆ ಸಮಾಜವಾದಿ ಆಳ್ವಿಕೆಯಲ್ಲೂ ಅದಕ್ಕೆ ಮಾನ್ಯತೆ ಇರುತ್ತದೆ. ಸಹಜವಾಗಿಯೇ ಕಮ್ಯುನಿಸ್ಟರು ಅದನ್ನು ಬೆಂಬಲಿಸುತ್ತಾರೆ. ಆದರೆ ಮಸಿ ಬಳಿಯುವ ಪ್ರವೃತ್ತಿಯವರು ಭಾವಿಸುವುದೇ ಬೇರೆ: ದುಡಿಯುವವರ ಸಂಘಕ್ಕೆ ರಕ್ಷಣೆ ದೊರೆತರೆ ಅನಿವಾರ್ಯವಾಗಿ ಸಂಘವು ಸಮಾಜವಾದದೆಡೆಗೆ ಹೆಜ್ಜೆ ಹಾಕುತ್ತದೆ, ಆಮೇಲೆ ಮಾರ್ಕ್ಸ್‌ವಾದವನ್ನು ಮಂಡಿಸುತ್ತದೆ, ಎಂಬುದು ಅವರ ತರ್ಕ. ಒಬ್ಬ ಕೆಟ್ಟ ಚಿತ್ರಕಾರನು ಎಲ್ಲೋ ಹಚ್ಚಬೇಕಾದ ಬಣ್ಣವನ್ನು ಮತ್ತೆಲ್ಲೋ ಹಚ್ಚಿಬಿಡುತ್ತಾನಲ್ಲ, ಹೀಗಿದೆ ಇವರ ಕುತರ್ಕ.

ಕಾರ್ಖಾನೆಯಲ್ಲಿ ದುಡಿಯುವವರಷ್ಟೇ ಒಂದು ರಾಜಕೀಯ ಕಾರ್ಯಕ್ರಮವನ್ನು ನಿರ್ಧರಿಸಲಾರರು, ಅವರು ಅದನ್ನು ಬೆಂಬಲಿಸುವವರ ಒಂದು ಭಾಗ, ಅಷ್ಟೇ. ಅದು ಒಂದು ಸಣ್ಣ ವಿಭಾಗ ಕೂಡ. ರೂಸ್‌ವೆಲ್ಟನ ನೂತನ ಪ್ರಕ್ರಿಯೆ (ನ್ಯೂ ಡೀಲ್)ಗೆ ಸ್ಪಂದಿಸುವಾಗ ಇದನ್ನು ಮರೆಯಬಾರದು. ದುಡಿಯುವ ಜನರ ಸಂಘಟನೆಯು ಅದನ್ನು ಸ್ವಾಗತಿಸುವುದು ಅದೊಂದು ಸಮಾಜವಾದಿ ಶಾಸನವೆಂದಲ್ಲ. (ಕರ್ನಾಟಕದ ಸಂದರ್ಭದಲ್ಲಿ ನೋಡಿದರೆ ದೇವರಾಜ ಅರಸು ಕಾಲದ ಭೂಸುಧಾರಣಾ ಮಸೂದೆಯನ್ನು ಕಮ್ಯುನಿಸ್ಟರು ಸ್ವಾಗತಿಸಿದ್ದರಿಂದ ಅದನ್ನು ಸಮಾಜವಾದಿ ಕಾರ್ಯತಂತ್ರವೆಂದು ಕಮ್ಯುನಿಸ್ಟರಲ್ಲದವರು ತಳ್ಳಿಹಾಕಬೇಕಿತ್ತು ಎಂದು ಹೇಳಿದಂತಾಗುತ್ತದೆ.) ರೂಸ್‌ವೆಲ್ಟನ ನೂತನ ಪ್ರಕ್ರಿಯೆಯು ಮಾರ್ಕ್ಸ್‌ವಾದಿ ಚಿಂತನೆಯ ಶಿಶುವಲ್ಲ. ಅದು ರಾಜಕೀಯ ಉದಾರಿತನವನ್ನುಳ್ಳ ಶಾಸನ, ಅಷ್ಟೆ. ಉತ್ಪಾದನಾ ಸಾಧನಗಳು ಖಾಸಗಿ ಮಾಲೀಕತ್ವದಲ್ಲಿದ್ದಾಗಲೂ ಆರ್ಥಿಕ ಅವಕಾಶಗಳು ಎಲ್ಲರಿಗೂ ದೊರಕುವಂತಿರಬೇಕೆಂಬ ಆಶಯವಷ್ಟೆ ಆ ಪ್ರಕ್ರಿಯೆಯ ಸಾರ. ರೂಸ್‌ವೆಲ್ಟ್, ಅವನ ಜೊತೆಗಿದ್ದ ಪ್ರಜಾಪ್ರತಿನಿಧಿಗಳು, ಮತ್ತು ದೇಶದ ಮತದಾರರು ಕಮ್ಯುನಿಸ್ಟರಿಗೆ ಅಥವಾ ಕಮ್ಯುನಿಸ್ಟ್ ಕಾರ್ಯಕ್ರಮಕ್ಕೆ ಮಾರುಹೋಗಿದ್ದಾರೆಂದು ಯಾರೂ ಭಾವಿಸಬೇಕಿಲ್ಲ.

ಇನ್ನುಳಿದದ್ದು ಸಾಮೂಹಿಕ ಕಾರ್ಯಾಚರಣೆಯ ವಿಚಾರ: ಸಾಮೂಹಿಕತೆ ಇರುವುದೆಲ್ಲಾ 'ಕಮ್ಯುನಿಸ್ಟ್' ಸಹ ಆಗಿರುತ್ತದೆಯೇ? ಎಲ್ಲ ಸಮಾಜವಾದಿ ಕಾರ್ಯಾಚರಣೆಗಳಲ್ಲೂ ಸಾಮೂಹಿಕ ಭಾಗವಹಿಸುವಿಕೆ ಇರುತ್ತದೆ; ಏಕೆಂದರೆ, ಸಮಾಜವಾದದಡಿಯಲ್ಲಿ ಸರಕುಗಳ ಉತ್ಪಾದನೆ ಮತ್ತು ವಿತರಣೆಯನ್ನು ಯೋಜಿಸುವುದು ಇಡೀ ರಾಷ್ಟ್ರೀಯ ಸಮುದಾಯ. ಆದರೆ ಎಲ್ಲ ಸಾಮೂಹಿಕ

ಭಾಗವಹಿಸುವಿಕೆಯೂ ಸಮಾಜವಾದವಲ್ಲ. ಎಲ್ಲ ತಿಮಿಂಗಿಲಗಳೂ ಸಸ್ತನಿಗಳು, ಆದರೆ ಎಲ್ಲ ಸಸ್ತನಿಗಳೂ ತಿಮಿಂಗಿಲಗಳಲ್ಲವಲ್ಲ! ಆದರೆ ಕೆಲವರಿಗೆ ಹಾಗೆ ಭಾಸವಾಗಿಬಿಡುತ್ತದೆ. ನಿರುದ್ಯೋಗಿಗಳಿಗೆ ಪರಿಹಾರಕ್ರಮಗಳು, ನಿರ್ಮಾಣ ಯೋಜನೆಗಳು, ಆರೋಗ್ಯ ವಿಮೆ, ಕೂಲಿ ಮತ್ತು ಬೆಲೆಗಳ ಮೇಲೆ ಸರ್ಕಾರಿ ನಿಯಂತ್ರಣ, ಇತ್ಯಾದಿಗಳನ್ನು ಒಂದಲ್ಲ ಒಂದು ವೇಳೆ ಖಂಡಿಸಿರುವುದುಂಟು. ಆದರೆ ಬಂಡವಾಳಶಾಹಿ ದೇಶಗಳು ಸಾಮೂಹಿಕ ಕ್ರಿಯೆಯ ಕಾರ್ಯಕ್ರಮಗಳನ್ನು ಅನುಸರಿಸಿವೆ. ಬಂಡವಾಳಶಾಹಿಯಾಗಿದ್ದುಕೊಂಡೇ ಇದನ್ನು ಮಾಡಲಾಗಿದೆ. ಅಂಚೆ ವ್ಯವಸ್ಥೆ ಒಂದು ಅಗತ್ಯ ಸೇವೆ, ಆದರೆ ಅದರಲ್ಲಿ ಸರ್ಕಾರಕ್ಕೆ ಲಾಭವಿಲ್ಲ, ವೈಯ್ಯಕ್ತಿಕ ಲಾಭಕ್ಕಾಗಿ ಅದನ್ನು ನಡೆಸುವುದಿಲ್ಲ. (ಈಗಿನ ಕೊರಿಯರ್ ವ್ಯವಸ್ಥೆಯು ಸರ್ಕಾರಿ ಅಂಚೆ ವ್ಯವಸ್ಥೆಯಂತಲ್ಲ.) ಅಥವಾ ಯುದ್ಧಗಳ ತುರ್ತು ಸನ್ನಿವೇಶಗಳಲ್ಲಿ ಸಾಮೂಹಿಕ ಭಾಗವಹಿಸುವಿಕೆ ಇಲ್ಲದೆ ವಿಜಯ ದೊರೆಯುತ್ತದೆಯೆ? ಎಲ್ಲ ಸಾಮೂಹಿಕ ಕ್ರಿಯೆಗಳೂ ಸಮಾಜವಾದಿಯೆಂದು ಅಬ್ಬರಿಸುವ ಪ್ರಚಾರಕರು ಒಂದು ಸತ್ಯವನ್ನು ಬಹಿರಂಗಗೊಳಿಸುತ್ತಾರೆ: ಸಮಾಜವಾದದ ನೀತಿಯನ್ನು ಅನುಸರಿಸದೆ ಬಂಡವಾಳಶಾಹಿಯು ತನ್ನ ಪ್ರಧಾನ ಅಗತ್ಯಗಳನ್ನು ಪೂರೈಸಿಕೊಳ್ಳಲಾರದು, ಎಂದು.

ಈ ವಿಶ್ಲೇಷಣೆಯು ಸರಿಯೆನ್ನುವುದಾದರೆ ಸಾಮೂಹಿಕ ಕ್ರಿಯೆಗಳನ್ನು ಕಮ್ಯುನಿಸ್ಟರು ಬೆಂಬಲಿಸುತ್ತಾರೆಂಬ ಒಂದೇ ಕಾರಣಕ್ಕೆ ರಾಜಕೀಯ ಕಾರ್ಯಕ್ರಮ ಇಲ್ಲವೆ ಶಾಸನದ ಅನುಷ್ಠಾನಗಳನ್ನು ಸಾರಾಸಗಟಾಗಿ 'ಕಮ್ಯುನಿಸ್ಟ್' ಎಂದು ಜರಿಯುವುದು ಅತಾರ್ಕಿಕ. ಅಂತಹ ಕ್ರಮಗಳು ಸಮಾಜವಾದಿ ವ್ಯವಸ್ಥೆಗಾಗಿ ನಡೆಯುವ ಬೇರೊಂದು ವಿಶಾಲ ಕಾರ್ಯಕ್ರಮದ ಅಂಗವಾಗಿಯೇ ಬಂದಿದ್ದರೆ ಮತ್ತು ಅದನ್ನು ಜನತೆಯ ಬಹುಭಾಗವು ಬೆಂಬಲಿಸಿದ್ದರೆ ಅದು ನಿಜಕ್ಕೂ ಒಂದು 'ಕಮ್ಯುನಿಸ್ಟ್' ಕಾರ್ಯಕ್ರಮವಾದೀತು. ಹಾಗಲ್ಲದಿದ್ದಾಗ ಅದನ್ನು 'ಕಮ್ಯುನಿಸ್ಟ್' ಎನ್ನುವುದು ತಪ್ಪು, ಅದು ಮಸಿ ಬಳಿಯುವ ಯತ್ನವಷ್ಟೆ. ದುಡಿಯುವ ಜನಕ್ಕೆ ಒದಗಿಸಲಾಗುವ ಎಲ್ಲ ಸೌಲಭ್ಯಗಳೂ 'ಕಮ್ಯುನಿಸ್ಟ್ ಕ್ರಮಗಳು' ಎಂದು ವಾದಿಸುವುದು ಬುಡವಿಲ್ಲದ ಆಕ್ಷೇಪ, ಅಷ್ಟೆ.

ತರ್ಕ ಮತ್ತು ಭಾವೋದ್ವೇಗ

ಏನೇ ಇರಲಿ, ಪೂರ್ತಿಯಾಗಿ ತಟಸ್ಥವಾದ ಭಾಷೆಯೊಂದು ಅಸಾಧ್ಯ; ಇಲ್ಲವೆ ಸುಳ್ಳು ಮತ್ತು ಭಾವನಾತ್ಮಕ ಭಾಷೆಯು ಮೋಸಗೊಳಿಸಿಬಿಡುತ್ತದೆ ಎಂದಾದರೆ ನಾವು ಯಾವ ಭಾಷೆ ಬಳಸಬೇಕು? ಪದಗಳ ನಿಶ್ಚಿತ ಪ್ರಯೋಗ ಯಾವುದು? ಎರಡು ಲಕ್ಷಣಗಳನ್ನು ಹೇಳಬಹುದು: (ಅ) ಪದವು ಯಾವ ವಸ್ತುಗಳನ್ನು ಒಳಗೊಳ್ಳಬೇಕೋ ಅವನ್ನು ಪದಶಃ ಅರ್ಥವು ಒಳಗೊಳ್ಳುವಂತಿರಬೇಕು, ಮತ್ತು (ಆ) ಪದಗಳ ಭಾವನಾತ್ಮಕ ಲಕ್ಷಣವು ಅವು ಸೂಚಿಸುವ ಪದಗಳ ಭಾವಗಳನ್ನು ನಿಷ್ಕೃಷ್ಟವಾಗಿ ಪ್ರತಿಫಲಿಸಬೇಕು. ಅದರಲ್ಲಿ ಪೂರ್ವಗ್ರಹಕ್ಕೆ ಆಸ್ಪದವಿಲ್ಲ.

ಇದನ್ನೆಲ್ಲಾ ಪರಿಶೀಲಿಸಿ ಯಾವ ನೀತಿಯನ್ನು ಅಂಗೀಕರಿಸಬೇಕೆಂಬುದು ಪ್ರಶ್ನೆ. ಜ್ಞಾನದಲ್ಲಾಗಲಿ, ಪದಪ್ರಯೋಗದಲ್ಲಾಗಲಿ, ಸಂಗತಿಗಳ ನಿರಂತರ ವಿಶ್ಲೇಷಣೆಗೆ ಪರ್ಯಾಯವಾದ್ದೇನೂ ಇಲ್ಲ. ಭಾಷೆಯ ದುರುಪಯೋಗವನ್ನು ಮಾಡದಿರುವುದು

ನೀತಿಯುತವಾದ್ದು, ಅದನ್ನು ಕಲಿಯಬೇಕು. ಹಳಸಿದ ವಿಷಯಗಳು, ಹಳಸಿದ ಭಾವನೆಗಳು, ಇವೆಲ್ಲಾ ನಮಗೇಕೆ ಪ್ರಿಯವಾಗಬೇಕು? ಚಿಂತನೆ ಮತ್ತು ಭಾವನೆಗಳನ್ನು ಯಥಾವತ್ತಾಗಿ ಪ್ರತಿಫಲಿಸುವ ಮಾತು ನಮಗೆ ಅಗತ್ಯ. ಅದರತ್ತ ಮುಖಮಾಡದಿದ್ದರೆ ವರ್ತಮಾನದ ಸ್ಫುಟವಾದ ತಿಳಿವಳಿಕೆ ದೊರೆಯುವುದಿಲ್ಲ; ಭವಿಷ್ಯವಂತೂ ಮಸುಕಾಗಿ ಕಾಣುವುದು ಅನಿವಾರ್ಯ. ಸಾರವನ್ನು ಸಂಗ್ರಹವಾಗಿ ಹೇಳುವುದಾದರೆ ನಮ್ಮ ನಡತೆಯು ಭಾವೋದ್ರೇಕದಿಂದ ನಿರ್ಧಾರವಾಗದೆ ವೈಚಾರಿಕತೆಯ ದೃಢ ಆಧಾರವನ್ನು ಹೊಂದಬೇಕು. ಇದನ್ನೇ "ತರ್ಕದ ನಿಶಿತ (ಹರಿತವಾದ) ಮತಿ" ಎನ್ನುವುದು. ಸ್ಪಿನೋಜ಼ ಎಂಬ ತತ್ತ್ವಜ್ಞಾನಿಯು ಹೇಳುತ್ತಿದ್ದ, "ಭಾವನೆಗಳನ್ನು ಮತ್ತು ಪ್ರಪಂಚವನ್ನು ಸರಿಯಾಗಿ ಅರ್ಥೈಸಿಕೊಂಡು ತಿಳಿಯಿರಿ" ಎಂದು. ಆ ಪರಮೌಷಧಿ ಅತ್ಯಂತ ಆರೋಗ್ಯಕರ.

* * *

ಪದಗಳ ಗತಿ ಹೀಗಿದೆ. ನಮ್ಮ ತಿಳಿವಳಿಕೆ ಮತ್ತು ಅದರ ಅಭಾವವನ್ನು ಮಾಪನ ಮಾಡುವುದು ಬಳಕೆಗೆ ಬರುವ ಪದಗಳ ಕೆಲಸ. ಯಾವುದು ಬೆಳಕು, ಯಾವುದು ಕತ್ತಲೆ ಎಂಬುದನ್ನು ಅವು ತೋರಿಸುತ್ತವೆ. ಕೆಲವರ ಉಸಿರಿನ ವಾಸನೆ ಮೂಗಿಗೆ ಹೊಡೆಯುತ್ತದೆ, ಅದರಿಂದ ದೂರವಿರಲು ಬಯಸುತ್ತೇವೆ. ಅಷ್ಟು ತಿಳಿದರೆ ಸಾಕು. ಪ್ರಪಂಚವನ್ನು ಸರಿಯಾಗಿ ತಿಳಿದವರು ಪದಗಳ ಯಜಮಾನರಾಗುತ್ತಾರೆ ಮತ್ತು ಪದಗಳ ಯಜಮಾನರು ಪ್ರಪಂಚದ ಯಜಮಾನಿಕೆಯ ಮೂಲತತ್ವಗಳನ್ನು ತಿಳಿದಿರುತ್ತಾರೆ.

❑❑

11. ಸ್ವಾತಂತ್ರ್ಯ ಮತ್ತು ಕ್ಷೇಮ ಎರಡೂ ಜೊತೆ

ಸಮಾಜ ವಿಜ್ಞಾನದ ಪಂಡಿತರು ಆಗಾಗ್ಗೆ ಹುಟ್ಟುಹಾಕುವ ಪುರಾಣಗಳು ವಿಚಿತ್ರವಾದುವು. ಅದರಲ್ಲೇನೂ ವಿಶೇಷವಿಲ್ಲ. ಅವರು ಹೊಸೆದಿರುವ ಸುಳ್ಳು ಕತೆಗಳು ನಮಗೆ ಚೆನ್ನಾಗಿ ಗೊತ್ತಿವೆ. ಆದರೆ ಆ ಕತೆಗಳ ತರ್ಕಪದ್ಧತಿಯನ್ನು ನೋಡಿದರೆ ಇದೇನು ಹೀಗೆ ಅಸಮಂಜಸವಾಗಿ ಹೇಳುತ್ತಿದ್ದಾರೆ, ಇವರಿಗೇನು ಬಂತು, ಎನಿಸುತ್ತದೆ. ಅವರ ಚಮತ್ಕಾರಗಳನ್ನು ಕಂಡಷ್ಟೂ ಸೋಜಿಗ ಹೆಚ್ಚುತ್ತದೆ. ಬ್ರಾಡ್ಲಿ ಎಂಬ ತತ್ವಶಾಸ್ತ್ರಜ್ಞನ ಒಂದು ಪದಗುಚ್ಛವಿದೆ. "ರಕ್ತ ಹರಿಯದ ತೆರನ ದೆವ್ವದ ನೃತ್ಯನಾಟಕ", ಎಂದು. ಸಮಾಜ ವಿಜ್ಞಾನಿಗಳಲ್ಲಿ ಕೆಲವರ ಬೌದ್ಧಿಕ ಸಾಧನವೆಂದರೆ ಇಂಥದು. ಅದೇನೋ ರಂಜನೀಯವಾದುದೆಂದು ಅದನ್ನು ನಾವು ಚರ್ಚೆಗೆತ್ತಿಕೊಳ್ಳಬೇಕಾಗಿಲ್ಲ. ಆದರೆ ಫ್ರಾನ್ಸಿನ 1789ರ ಕ್ರಾಂತಿಯ ಸಂದರ್ಭದಲ್ಲಿ ಪ್ರಚುರಗೊಂಡ ಮೂರು ಆಪ್ತ ಘೋಷಣೆ ಗಳಿವೆಯಲ್ಲ, ಸ್ವಾತಂತ್ರ್ಯ–ಸಮಾನತೆ–ಭ್ರಾತೃತ್ವ, ಅವುಗಳ ಪ್ರತಿಪಾದನೆಯ ಸೋಗು ಸಾಮಾಜಿಕ ಚಿಂತನೆಯಲ್ಲಿ ಹೇಗೋ ಮಸುಕಾಗಿಬಿಡುತ್ತದೆ. ಅದನ್ನು ತಿಳಿದುಕೊಳ್ಳಲು ಇಂತಹ ಚರ್ಚೆ ಅಗತ್ಯವಾಗಿದೆ. ಈ ಚಿಂತಕರ ದೃಷ್ಟಿಯಲ್ಲಿ ಆ ಮೂರು ಪ್ರತಿಪಾದನೆಗಳು ಪಗಡೆಯಾಟದ ಕಾಯಿಗಳಾಗಿಬಿಟ್ಟುವೇನೋ ಎಂಬ ಆತಂಕ ಮೂಡುತ್ತದೆ.

ಅವು ಅಮೂರ್ತ ಕಲ್ಪನೆಗಳು, ನಿಜ; ಹಾಗೆಂದು ಮನಬಂದಂತೆ ಅವುಗಳನ್ನು ಕುರಿತು ಸುಳ್ಳುಗಳನ್ನು ಪೋಣಿಸಿಬಿಡುವುದು ಯುಕ್ತವೇನಲ್ಲ. ಆದರೆ ಹಾಗೆ ಮಾಡುವ ಪರಿಪಾಠವಿದೆ. ಮೂರನ್ನೂ ಸಾಮಾನ್ಯೀಕರಿಸಲಾಗಿದೆ ಎಂಬ ಕಾರಣಕ್ಕೇನು? ಹಾಗಲ್ಲ, ಏಕೆಂದರೆ ಸಾಮಾನ್ಯೀಕರಣವು ಅವುಗಳ ಉದ್ದೇಶವಲ್ಲ. ಅವು ಅನ್ವಯವಾಗುವುದು ಸಮೂಹದ ಪ್ರತ್ಯೇಕ ವ್ಯಕ್ತಿಗಳಿಗೇ ತಾನೆ! ಅಮೂರ್ತವಾದ್ದರಿಂದ ವಿಷಯಗಳ ಜೊತೆ ನೇರ ಸಂಬಂಧ ಕಡಿದುಹೋಗುತ್ತದೆಂಬ ಭಾವನೆಯಿಂದ ಅವನ್ನು ಕಂತೆಪುರಾಣ ಮಾಡಿಬಿಡುತ್ತಾರೆ. ಹಾಗೆ ಮಾಡಿದಾಗ ಏನಾಗುತ್ತದೆ? ಮೂಲತಃ ಆ ಪ್ರತಿಪಾದನೆಗಳು ಏನನ್ನು ಸೂಚಿಸುತ್ತಿದ್ದವು ಎಂಬುದನ್ನು ಮರೆಮಾಚಲು ಸುಲಭವಾಗುತ್ತದೆ. ನೀವು ಮರೆಮಾಚಿದರೆ ಅವು ಅದೃಶ್ಯವಾಗುತ್ತವೆಯೇ? ಶೀತಕಯಂತ್ರದಲ್ಲಿಟ್ಟರೆ ಮಲ್ಲಿಗೆಯು ತನ್ನ ಪರಿಮಳವನ್ನು ಉಳಿಸಿಕೊಂಡಿರುತ್ತದಲ್ಲಾ, ಹಾಗೆ. ಹೂವಿನ ಸೌಂದರ್ಯವು ಎಂದೂ ಹಾಳಾಗುವುದಿಲ್ಲ. ಅದು ಯಾವ ತೋಟದಿಂದ ಬಂದಿತ್ತೋ ಏನೋ, ಯಾವ ವಾತಾವರಣದಲ್ಲಿ ಅದನ್ನು ಬೆಳೆಸಲಾಗಿತ್ತೋ ಏನೋ, ಆದರೂ ಅದನ್ನು ಆಘ್ರಾಣಿಸಲು ನಮಗೆ ಲಾಲಸೆ ಇದ್ದೇ ತೀರುತ್ತದೆ. ಹೀಗೆ ಯೋಚಿಸಿ: ಯಾವನೋ ಒಬ್ಬ ಹೂವಿನ ವ್ಯಾಪಾರಿ ಬಂದು ಬೊಗಳೆ ಬಿಡುತ್ತಾನೆ. "ಇದನ್ನು ಬೆಳೆದವನು ನಾನು, ನನ್ನ ಅದ್ಭುತ ತೋಟದ ಉತ್ಪನ್ನ ಇದು, ಆ ತೋಟ ಎಷ್ಟು ವಿಶಾಲವಾದ್ದು ಗೊತ್ತೆ" ಎಂದು ಏನೇನೋ

ಬಡಬಡಿಸಿದರೆ "ಅಯ್ಯೋ, ನಿಜಕ್ಕೂ ಇದನ್ನು ಬೆಳೆಸಿದವನೇ ಇವನು" ಎಂದು ನೀವು ಭ್ರಾಂತಿಗೊಳಗಾಗಿಬಿಡಬಹುದು.

ಇದರ ಸಾರಾಂಶ ಸರಳವಾಗಿದೆ: ಸಾಮಾಜಿಕ ಕಲ್ಪನೆಗಳು ಅಥವಾ ಪ್ರತಿಪಾದನೆಗಳು ಅಮೂರ್ತ ನೆಲೆಗೆ ಸರಿದಾಗ ಅವಕ್ಕೆ ಬೇಕಾಬಿಟ್ಟಿ ವ್ಯಾಖ್ಯಾನ ನೀಡಬಹುದು. ಯಾರೋ ಹತ್ತು ಮಂದಿ ಗುಂಪುಗೂಡಿ ಇದು ನಮ್ಮ ಪ್ರತಿಪಾದನೆ ಎಂದು ಬೂಸಿ ಹೊಡೆಯಬಹುದು, ತಮಗೆ ಅನುಕೂಲವಾಗುವಂತಹ ಅರ್ಥವನ್ನು ಅದರ ಮೇಲೆ ಹೇರಬಹುದು ಮತ್ತು ಪ್ರತಿಯೊಂದು ಮಾತಿನಲ್ಲೂ ಹಾಗೆ ಹೇರಲ್ಪಟ್ಟ ಹೊಸ ಅರ್ಥವನ್ನು ಪ್ರಚಾರ ಮಾಡುತ್ತಿರಬಹುದು. ಆ ಬಣವು ಹಾಗೆ ಮಾಡಿದಾಕ್ಷಣ ಆ ಪ್ರತಿಪಾದನೆಗಳ ಸಾಮಾಜಿಕ ಸತ್ವ ಕಳೆಗುಂದುವುದಿಲ್ಲ. ಆ ಸತ್ವವು, ತಿರುಚಿದ ಹೊಸ ಅರ್ಥದೊಡನೆ ಬೆರೆತುಹೋದಾಗ ಜನರಲ್ಲಿ ಒಂದು ತಪ್ಪು ಭಾವನೆ ಮೂಡುತ್ತದೆ: ಯಾವುದೋ ಒಂದು ನಿರ್ದಿಷ್ಟ ಬಣವು ತನ್ನ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು ಆ ಪರಿಕಲ್ಪನೆಗಳಿಗೆ ಹೇರುವ ಅರ್ಥವು ಇಡೀ ಸಮಾಜಕ್ಕೆ ಅನ್ವಯವಾಗುವ ಸತ್ಯವೆಂಬುದು ಆ ತಪ್ಪು ಭಾವನೆ. ಒಂದು ಉದಾಹರಣೆ ತೆಗೆದುಕೊಳ್ಳುವುದಾದರೆ, ಭಾರಿ ಭೂಮಾಲೀಕನೊಬ್ಬ ಸ್ವಾರ್ಥಸಾಧನೆಗಾಗಿ "ಒಳಿತು ಎಂದರೆ ಇದು" ಎಂದು ಹೇಳಿದ್ದನ್ನು ನಿಜವೆಂದು ಎಲ್ಲರೂ ಭಾವಿಸಿಕೊಳ್ಳುವುದು.

ಇಂತಹ ತಪ್ಪು ಕಲ್ಪನೆಯು ಸ್ವಾತಂತ್ರ್ಯದ ಪರಿಕಲ್ಪನೆಯಲ್ಲಿ ಹೇರಳವಾಗಿ ತುಂಬಿಕೊಂಡಿದೆ. ಸಮಾಜದಲ್ಲಿ ಆಳುವ ಗುಂಪೊಂದಿದೆ; ಅದಕ್ಕೆ ಹಿತವಾಗುವುದನ್ನು ಸ್ವಾತಂತ್ರ್ಯದ ನಿಜಾರ್ಥವೆಂದು ಅದು ಬಿಂಬಿಸುವುದರಲ್ಲಿ ಆಶ್ಚರ್ಯವೇನಿದೆ? ಈ ಅರ್ಥವನ್ನು ಸಮಾಜದ ಬೇರೆ ಭಾಗಗಳು ಒಪ್ಪಿಕೊಳ್ಳುವಂತೆ ಪ್ರೇರೇಪಿಸಿದರೆ ಮತ್ತು ಅದನ್ನೇ ಒಳ್ಳೆಯ ಸ್ವಾತಂತ್ರ್ಯವೆಂದು ಅವರು ಭಾವಿಸಿಕೊಳ್ಳುವಂತಾದರೆ ಆಳುವ ಗುಂಪಿಗೆ ಇನ್ನೇನು ಬೇಕು? ಆ ಆಳ್ವಿಕೆಗೆ ಸಾರ್ವಜನಿಕ ಸಮರ್ಥನೆ ದೊರಕಿಸಿಕೊಂಡಂತೆ ಆಯಿತಲ್ಲ, ಅಷ್ಟೇ ಸಾಕು. ದೊಡ್ಡ ಬಂಡವಳಿಗರು, ಕಾರ್ಪೊರೇಟ್ ಸಂಸ್ಥೆಗಳು ಮತ್ತು ಏಕಸ್ವಾಮ್ಯ ಹೊಂದಿದ ವ್ಯಾಪಾರಿ ಸಂಸ್ಥೆಗಳು ಮಾಡಿರುವುದು ಇದನ್ನೇ. ತಮ್ಮ ಕರಾಳ ಆರ್ಥಿಕ ವಹಿವಾಟುಗಳನ್ನು ಅವರೆಲ್ಲಾ "ಮುಕ್ತ (ಅಥವಾ ಸ್ವತಂತ್ರ) ಉದ್ಯಮ" ಎಂದು ವ್ಯಾಖ್ಯಾನಿಸುತ್ತಾರೆ. ಅದಕ್ಕೆ ಬೇರೇನೇನೋ ಥಳುಕಿನ ಹೆಸರುಗಳನ್ನು ಕೊಟ್ಟಿದ್ದಾರೆ, ಆದರೆ ಹಳಸಿದ ಬುತ್ತಿಯ ದುರ್ವಾಸನೆ ಇಲ್ಲವಾಗುತ್ತದೆಯೇ? ಈ ಮಾತನ್ನು ಅವರೆಲ್ಲಾ ಪದೇ ಪದೇ ಹೇಳುತ್ತಲೇ ಇರುವುದರಿಂದ ಹಾಗೆ ಹೇಳುವುದು ಯಾಂತ್ರಿಕವಾಗಿಬಿಟ್ಟಿದೆ. ಹತ್ತೋ ಹನ್ನೆರಡೋ ನುಡಿಗಟ್ಟುಗಳನ್ನು ಬಿಟ್ಟರೆ ಅವರಿಗೆ ಹೇಳಲೂ ಏನೂ ಉಳಿದಿರುವುದಿಲ್ಲ. ಹೇಳಿದ್ದೆ ಹೇಳೋ ಕಿಸಬಾಯಿದಾಸ ಎನ್ನುವಂತಾದಾಗ ಕೆಲವರಿಗೆ ಅದು ಬೋರು ಹೊಡೆಯುತ್ತದೆ, ಆದರೆ ಬೇರೆ ಕೆಲವರಿಗೆ ಅದೇ ಪರಮಸತ್ಯದಂತೆ ಕಂಡು ಬರುವಂತಾಗುತ್ತದೆ. ಗೋಡೆ ಕಟ್ಟುವಾಗ ಒಂದೊಂದೇ ಕಲ್ಲನ್ನು ಪೇರಿಸುತ್ತಾ ಹೋಗುತ್ತೀರಲ್ಲವೆ, ಹಾಗೆ ಇದು. ಹೊರಗಿನವರಿಗೆ ಸ್ವಾತಂತ್ರ್ಯದ ಪ್ರತಿಪಾದನೆಯ ನಿಜಾರ್ಥ ಮುಚ್ಚಿಹೋಗುತ್ತದೆ.

ಆಳುವವರಿಗೆ ಇದು ಖುಷಿಯೇನೋ ಹೌದು, ಆದರೆ ಪ್ರತಿಪಾದನೆಗಳನ್ನು ಅಮೂರ್ತಗೊಳಿಸುವುದು ಅಪಾಯಕ್ಕೂ ಹಾದಿ ಮಾಡಿಕೊಡುತ್ತದೆ. ಅವರು ಅವಕ್ಕೆ ಅನಿಶ್ಚತವಾದ ಅರ್ಥವೊಂದನ್ನು ಹೇರುತ್ತಾರೆ, ಅವುಗಳ ಮೂಲವನ್ನು ಮರೆಮಾಚುತ್ತಾರೆ.

ಆಳಿಸಿಕೊಳ್ಳುವವರು ಸಹ ಅವೇ ಪ್ರತಿಪಾದನೆಗಳನ್ನು ಆತುಕೊಳ್ಳುತ್ತಾರೆ, ತಮ್ಮ ಹಿತದ ದೃಷ್ಟಿಯಿಂದ ವ್ಯಾಖ್ಯಾನಿಸಿಕೊಳ್ಳುತ್ತಾರೆ. ಅಂದರೆ, ಸಮಾಜದ ಎಲ್ಲರೂ ತಮ್ಮದೇ ಅನುಭವಗಳ ಆಧಾರದ ಮೇಲೆ 'ಸ್ವಾತಂತ್ರ್ಯ' ಎಂದರೇನು ಎಂಬುದನ್ನು ನಿರ್ವಚಿಸಿಕೊಳ್ಳುತ್ತಾರೆ. ಉದಾಹರಣೆಗೆ, ಆಳುವವರ ಅರ್ಥೈಸುವಿಕೆಗೆ ಭಿನ್ನವಾಗಿ, ಆಳ್ವಿಕೆಗೆ ಒಳಗಾದವರು ರಾಷ್ಟ್ರೀಯ ಆರ್ಥಿಕತೆ ಎಂದರೆ ತಾವು ಅದನ್ನು ತಮ್ಮ ಹತೋಟಿಯಲ್ಲಿ ಇರಿಸಿಕೊಳ್ಳುವ ಸ್ವಾತಂತ್ರ್ಯ ಎಂದು ಬಗೆಯುತ್ತಾರೆ. ಆಳುವವರಿಗೆ ಇದೊಂದು ಆಘಾತ. ತಾವು ಸ್ವಾತಂತ್ರ್ಯಕ್ಕೆ ಕೊಟ್ಟಿದ್ದ ಅರ್ಥವು ತನ್ನ ಹೆಮ್ಮೆಯನ್ನು ಕಳಚಿಕೊಂಡು, ಜನಸಮುದಾಯವು ಅದಕ್ಕೆ ತನ್ನ ಪರವಾಗಿ ಕೊಟ್ಟುಕೊಂಡ ಅರ್ಥವು ಕಡೆಗೆ ಸಾಮುದಾಯಿಕ ಹೋರಾಟಕ್ಕೆ ಪ್ರಖರ ಆಯುಧವಾಗಿಬಿಡುತ್ತದೆ. ಅಂದರೆ, ಆಳುವವರು ತಮ್ಮ ವಿರುದ್ಧ ಶತ್ರುಗಳನ್ನು ತಾವೇ ಸೃಷ್ಟಿಸಿಕೊಂಡಂತಾಯಿತು. ಆ ಶತ್ರುಗಳು ಸಂಘಟಿತರಾಗುತ್ತಾರೆ, ಹೊಸ ಘೋಷಣೆಗಳನ್ನು ಕಟ್ಟಿಕೊಳ್ಳುತ್ತಾರೆ.

ಆಳುವವರು ಈಗೇನು ಮಾಡಬೇಕು? ಇನ್ನೂ ಹೆಚ್ಚು ಚುರುಕಾಗಿ ಮತ್ತು ಬಿರುಸಾಗಿ ಪ್ರತಿಪಾದನೆಗಳನ್ನು ಚಳಕದಿಂದ ತಿರುಚಬೇಕು. ತಮ್ಮ ತಕ್ಷಣದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಯಾವುದೋ ಪ್ರತಿಪಾದನೆಯು ಅನುವು ನೀಡುವಂತಿದ್ದು ಅದನ್ನು ಸಮುದಾಯವು ಬಲವಾಗಿ ತಬ್ಬಿದರೆ ಆಗ ಅದಕ್ಕೆ ಪರ್ಯಾಯವಾಗಿ ಬೇರೊಂದು ಪ್ರತಿಪಾದನೆಯನ್ನು ಮುಂದುಮಾಡುವುದು ಆಳುವವರ ಕೆಲಸ. ಸಮಾನತೆ ಎಂಬ ಕಲ್ಪನೆಯು ಜನರ ಇಚ್ಛೆಯನ್ನು ಅಭಿವ್ಯಕ್ತಿಸುವಂತಿದ್ದರೆ ಆಳುವವರು ಅದನ್ನು ಗೌಣವಾಗಿಸಿ ಅದರ ಜಾಗದಲ್ಲಿ ಬೇರೊಂದನ್ನು ಮಂಡಿಸಬಯಸುತ್ತಾರೆ. 18ನೇ ಶತಮಾನದ ಅಂತ್ಯಭಾಗದಲ್ಲಿ ಯೂರೋಪಿನಲ್ಲಿ ಜರುಗಿದ್ದು ಅದೇ. ಆ ಇನ್ನೊಂದು ಅಷ್ಟೇ ಶ್ಲಾಘನೀಯವಾಗಿರುತ್ತದೆ, ಆದರೆ ಮೊದಲಿನದರಷ್ಟು ಪ್ರಜಾಪ್ರಭುತ್ವದ ಹೂರಣವನ್ನು ಹೊಂದಿರುವುದಿಲ್ಲ. ಜೆರೆಮಿ ಬೆಂಥಾಮ್ ಎಂಬ ತತ್ತ್ವಶಾಸ್ತ್ರಜ್ಞ ತಣ್ಣನೆಯ ದನಿಯಲ್ಲಿ ಹೇಳಿದ್ದ: "ಸಮಾನತೆಯನ್ನು ಪೋಷಿಸಬೇಕು, ಆದರೆ ಸುಭದ್ರತೆಗೆ ಪೆಟ್ಟು ಬೀಳದಿದ್ದಾಗ ಮಾತ್ರ. ಕಾನೂನು ಹುಟ್ಟಿಕೊಂಡಿರುವುದು ಕೆಲವು ಆಶಯಗಳನ್ನು ಪೂರೈಸಲು; ಅಂತಹ ಆಶಯಗಳನ್ನು ಸಮಾನತೆಯ ಕಲ್ಪನೆಯು ಕದಡಬಾರದು. ಸಮಾಜದಲ್ಲಿ ಒಂದು ಸ್ಥಿರವಾದ ವಿಲೇವಾರಿ ಪದ್ಧತಿ ಇದೆ, ಸಮಾನತೆಯು ಅದನ್ನು ಅಸ್ಥಿರಗೊಳಿಸಬಾರದು." ಅದು ಅವನ ಅಪರಾಧ ಸಂಹಿತೆಯ ಭಾಗ. ಅಂದರೆ, ಬೆಂಥಾಮ್‌ನ ಇಂಗಿತವೇನು? ಸಮಾನತೆಯು ಶ್ಲಾಘನೀಯವಾದ್ದು, ಆದರೆ ಸದ್ಯದಲ್ಲಿ ಆಸ್ತಿಯ ವಿಂಗಡಣೆ ಹೇಗಿದೆಯೋ ಅದನ್ನು ಸಮಾನತೆಯು ಅಲುಗಾಡಿಸುವಂತಿರಕೂಡದು, ಎಂದು.

ಹಾಗಿದ್ದರೆ ಅದೆಂಥ ಸಮಾನತೆ? ಈಗ ದುಡಿಮೆಗಾರರ ಕೂಲಿಯ ಪ್ರಬಂಧವಿದೆಯಲ್ಲ ಅಂತಹ ಸಮಾನತೆ! ಅದು ಸ್ಪರ್ಧೆಯಲ್ಲಿ ತೊಡಗಿರುವ ಉದ್ಯಮಿಗಳಿಗೆ ಅನ್ವಯಿಸುವುದಿಲ್ಲ. ಏಕೆಂದರೆ, ಅವರ ನಿಯಮ 'ಸಿಕ್ಕಿದವರಿಗೆ ಸೀರುಂಡೆ, ಎಷ್ಟು ಸಾಧ್ಯವೋ ಅಷ್ಟನ್ನು ಬಾಚಿಕೊ' ಎಂಬುದು. ಹೀಗಿರುವಾಗ ಉದ್ಯಮಿಗಳ ಮತ್ತು ದುಡಿಮೆಗಾರರ ನಡುವೆ ಸಮಾನತೆಯನ್ನವರು ಒಪ್ಪಿಯಾರೆ! ಬೆಂಥಾಮ್ ಮುಂದುವರಿದು ಹೇಳುತ್ತಾನೆ: "ದುಡಿಮೆಯಲ್ಲಿ ತತ್ಪರನಾಗುವವನ ಸ್ಥಿತಿಯು ಸೋಮಾರಿಯ ಸ್ಥಿತಿಗಿಂತಲೂ ಉತ್ತಮವಾಗಿರುವುದಿಲ್ಲವಾದರೆ ದುಡಿಮೆಯಲ್ಲಿ ತತ್ಪರತೆ ಏಕೆ ಬೇಕು?" ಇದು ಅವನ

ಕಾಲಕ್ಕೇ ಹಳೆಯ ರಾಗವಾಗಿತ್ತು. ಆದಾಗ್ಗ್ಯೂ ಬೆಂಥಾಮ್ ಹೊಸ ಪ್ರಯೋಜನಕತಾವಾದಿ ಎನಿಸಿಕೊಂಡಿದ್ದ! ಆಂಗ್ಲಭಾಷೆಯಲ್ಲಿ ಅದನ್ನು 'ಯುಟಿಲಿಟೇರಿಯನಿಸಂ' ಎನ್ನುತ್ತಾರೆ.

ಬಾಚಿಕೊಳ್ಳುವುದಕ್ಕೆ ಏನಾದರೂ ಪ್ರೋತ್ಸಾಹಕ ಸಂಗತಿ ಇರಬೇಕು, ಬಾಚಿಕೊಂಡ ಆಸ್ತಿಗೆ ಸಂರಕ್ಷಣೆ ಇರಬೇಕು. ಅವಿದ್ದರೆ ಮಾತ್ರ ಸಮಾಜವು ಚಲನಶೀಲವಾಗಿರುತ್ತದೆ ಎಂಬುದು ಇಂಥವರ ಮೂಲವಾದ. ಬೆಂಥಾಮ್ ಹೇಳುತ್ತಾನೆ, ದುಡಿಯುವುದಕ್ಕೆ ಸಹಜವಾದ ಅಸಡ್ಡೆ ಇರುತ್ತದೆ, ಎಂದು. ಅಂತಹ ಅಸಡ್ಡೆಯನ್ನು ನೀಗಿಸಲು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಎಂಬ ಪ್ರಬಲ ತಾಯಿತವು ಸಮರ್ಥವಲ್ಲ, ಎನ್ನುತ್ತಾನವನು. ಹಾಗಿದ್ದರೆ ಯಾವುದು ಸಮರ್ಥ? ಆಸ್ತಿಯ ಹಕ್ಕು ಮಾತ್ರ ಸಮರ್ಥವಾದ್ದು ಎಂಬುದು ಅವನ ಅಂಬೋಣ. ಅದು ಬೆಂಥಾಮ್ ಪ್ರಕಾರ "ಸಂತಸ, ಹೇರಳತೆ ಮತ್ತು ಸಂರಕ್ಷಣೆ" ಒದಗಿಸುತ್ತದೆ. ಅವನ ವೇಳೆಗಾಗಲೆ ಬ್ರಿಟನ್, ಫ್ರಾನ್ಸ್ ಮತ್ತು ಅಮೆರಿಕಾಗಳಲ್ಲಿ ಕ್ರಾಂತಿಯಾಗಿತ್ತು. ಆ ಕ್ರಾಂತಿಗಳ ಕಾಂತಿಯುತ ಗುರಿಗಳ ಜಾಗದಲ್ಲಿ ತನ್ನ ಕಾಲಕ್ಕೆ ಸೂಕ್ತವೆಂದು ಬೇರೆ ಗುರಿಗಳನ್ನು ಬೆಂಥಾಮ್ ತಂದಿಟ್ಟ. ಜನರು ಕಡಿಮೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಭಾವನೆಗಳನ್ನು ಹೊಂದಬೇಕು; ಹಿಂದಿನ ಆಕಾಂಕ್ಷೆಯನ್ನು ಕೈಬಿಡಬೇಕು; ಆಗ ಹೊಸ ಹಸಿವು ಹರಿತವಾಗುತ್ತದೆ, ಸಂರಕ್ಷಣಾ ಭಾವವು ಕೆಲಸಕ್ಕೆ ಕಿರೀಟಪ್ರಾಯವಾಗುತ್ತದೆ. ಅದಲ್ಲವೆ ಸಿಹಿಸಿಹಿ ವ್ಯಾಪಾರ ವಹಿವಾಟು! ಅದಲ್ಲವೆ ಲಾಭದ ಹಸಿವು!!

ಹೋಗಲಿ, ಏನಿದು ಸಂರಕ್ಷಣೆ? ಅದೂ ಅಮೂರ್ತವಾದ್ದೆ, ಅದರ ಹಿಂದಿನ ಬೇರೆಯವುಗಳಂತೆ. ಅವುಗಳ ಗತಿಯೇ ಇದರ ಗತಿ ಕೂಡ. ಉದ್ದಿಮೆದಾರರಂತೆ ಜನಸಮುದಾಯವೂ ಅದಕ್ಕೆ ಹಾತೊರೆಯುತ್ತಿದೆ. 1930ರ ದಶಕದ ಅಮೆರಿಕಾ ಕಡೆ ದೃಷ್ಟಿ ಹರಿಸಿ. ಆರ್ಥಿಕ ಹಿಂಜರಿತ ಮತ್ತು ಯುದ್ಧದ ಹಿನ್ನೆಲೆಯಲ್ಲಿ ಜನಸಮುದಾಯವು ತಹತಹಿಸಿದ್ದು ತನ್ನ ಸಂರಕ್ಷಣೆಗೇ ಅಲ್ಲವೆ? ಯಾವುದರ ವಿರುದ್ಧ ಸಂರಕ್ಷಣೆ? ನಿರುದ್ಯೋಗ, ಪಿಂಚಣಿಯ ಮುಟ್ಟುಗೋಲು, ವೈದ್ಯಕೀಯ ಸೌಲಭ್ಯದ ಚ್ಯುತಿ, ಇತ್ಯಾದಿಗಳ ವಿರುದ್ಧ ಸಮಾಜವನ್ನು ಸ್ವಲ್ಪಮಟ್ಟಿಗಾದರೂ ಮರುಸಂಘಟನೆಗೆ ಗುರಿಯಾಗಿಸಬೇಕು, ಸಮಾಜದ ಎಲ್ಲರಿಗೂ ಅದು ಸಹಾಯಕವಾಗಬೇಕು; ಹಿಂದಿನಂತೆ ಕೆಲವರಿಗೆ ಮಾತ್ರ ಸೌಲಭ್ಯಗಳು ಸೀಮಿತವಾಗಬಾರದು: ಇವು ಸಂರಕ್ಷಣೆಯ ಸೂತ್ರಗಳಾದವು. ಬೆಂಥಾಮ್ ಬಂಡವಳಿಗರ ಪರವಾಗಿ ದುಡಿಮೆಗಾರರ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿ ಉದ್ಯಮಿಗಳ ಸಂರಕ್ಷಣೆಗೆ ಒತ್ತುಕೊಟ್ಟ; ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿ ಬಂಡವಳಿಗರು ಸ್ವಾತಂತ್ರ್ಯವನ್ನು ತುಂಡರಿಸಿ ಸಂರಕ್ಷಣೆಗೆ ಒತ್ತುಕೊಡಬೇಕಾಗಿಬಂತು. "ಸಮಾಜವು ನಮ್ಮ ಲಾಭಕ್ಕಾಗಿಯೇ ಸಂಘಟಿತವಾಗಬೇಕಾದ್ದು ಸರಿ ಮತ್ತು ಅವಶ್ಯಕ" ಎಂದು ಮಾನಬಿಟ್ಟು ಹೇಳಲು ಅವರಿಗೆ ಸಾಧ್ಯವಿತ್ತೆ? ಆಗ ಅವರ ಪರವಾಗಿ ವಕಾಲತ್ತು ವಹಿಸುತ್ತಿದ್ದವರು ಮಾತಿನ ಧಾಟಿಯನ್ನು ಬದಲಿಸಬೇಕಾಯಿತು: "ಸಮಾಜವು ಸುಗಮ ಮಾದರಿಯಲ್ಲಿ ಸಂಘಟಿತಗೊಳ್ಳಬೇಕು. ಅದರಂತೆ ನೀವು ಏಕಕಾಲದಲ್ಲಿ ಸ್ವತಂತ್ರರೂ ಸಂರಕ್ಷಿತರೂ ಆಗಿರಲು ಸಾಧ್ಯವಿಲ್ಲ. ಅವೆರಡರಲ್ಲಿ ಸ್ವಾತಂತ್ರ್ಯವೇ ಹೆಚ್ಚು ಉತ್ತಮ." ಹೌದೇ ಸ್ವಾಮಿ, ಆದರೆ ಯಾರಿಗೆ ಉತ್ತಮ, ಎಂದು ಕೇಳಿದರೆ ಅವರ ಗಂಟಲು ಕಟ್ಟಿಬಿಡುತ್ತದೆ.

ಸಾಹಸ ಕಾರ್ಯಗಳ ಆಕರ್ಷಣೆ:

ಹೀಗೆ ಸಮಜಾಯಿಷಿ ಕೊಡುವವರಿದ್ದಾರಲ್ಲ, ಅವರು ಯಾರು? ಉದ್ಯಮಿಗಳು ಅವರಿಗೆಲ್ಲಾ ಋಣಿಗಳಾಗಿರಬೇಕಲ್ಲವೆ! ಅವರೆಲ್ಲಾ ಲೇಖಕರು, ಭಾಷಣಕಾರರು ಮಾತ್ರ ಆಗಿರಬೇಕೆಂದಿಲ್ಲ. ಶಿಕ್ಷಕರಲ್ಲೂ ಅಂಥವರಿರಲು ಸಾಧ್ಯ. ಯುವಕರಿಗೆ ಅವರೂ ಮಾರ್ಗದರ್ಶಕರೇ ತಾನೆ. ಆಗಾಗ್ಗೆ ಅಗತ್ಯವಾಗುವ ಸಮಜಾಯಿಷಿಗಳು ಹೆಚ್ಚು ತಾತ್ವಿಕವಾದಷ್ಟೂ ಸಮಜಾಯಿಷಿ ನೀಡಲು ಶಿಕ್ಷಕ ವೃಂದಕ್ಕೆ ಕರೆ ಬರುತ್ತದೆ. ಏಕೆಂದರೆ, ಅವರು ಸಂಯಮಿಗಳು, ಬೆಳೆಯದ ಮತ್ತು ನಶಿಸದ ಬುದ್ಧಿವಂತಿಕೆ ಅವರದು. ಜೀವನವನ್ನು ಸದಾ ಗಮನಿಸುತ್ತಿರುವ ಈ ಪ್ರಾಣಿ ಎಲ್ಲವನ್ನೂ ಇಡಿಯಾಗಿ ನೋಡುತ್ತಾನೆ. ಹಾಗಿರುತ್ತಾರೋ ಇಲ್ಲವೋ ಅದು ಬೇರೆ ವಿಷಯ; ಆದರೆ ಅವರು ಹಾಗಿರಬೇಕೆಂದು ಮ್ಯಾತ್ಯೂ ಆರ್ನಾಲ್ಡ್ ಬಯಸಿದ. 19ನೆಯ ಶತಮಾನದ ಇಂಗ್ಲೆಂಡಿನ ಕವಿ ಮತ್ತು ಶಿಕ್ಷಕನಾಗಿದ್ದವನು ಅವನು. ಗದ್ಯದಲ್ಲಿ ಅವನು ನಿಷ್ಣಾತ. ಯಾವುದನ್ನು ಹೇಗೆ ಹೇಳಬೇಕೆಂದು ಅವನು ತಿಳಿದಿದ್ದ. ಅವನನ್ನು ಅನುಸರಿಸುವ ಡಾ॥ ಕಾರ್ಮೈಕೇಲ್ ಅಮೆರಿಕಾದ ನ್ಯೂಯಾರ್ಕಿನ ಬಾರ್ಟ್‌ಲೆಟ್ ಎಂಬಲ್ಲಿ 1938ರಲ್ಲಿ ಅಮೆರಿಕಾದ ಬ್ಯಾಂಕರುಗಳ ಸಂಘವನ್ನುದ್ದೇಶಿಸಿ ಮಾಡಿದ ಒಂದು ಭಾಷಣದ ಭಾಗ ಹೀಗಿದೆ: "ವ್ಯಕ್ತಿಯ ಜವಾಬ್ದಾರಿಗಳನ್ನು ಒತ್ತುಕೊಟ್ಟು ಹೇಳದೆ ಕೇವಲ ಹಕ್ಕುಗಳು ಮತ್ತು ಸವಲತ್ತುಗಳಗೆ ನಾವು ಹೆಚ್ಚು ಆದ್ಯತೆ ನೀಡುತ್ತಾ ಬಂದಿದ್ದೇವೆ. ಅದರಿಂದಾಗಿ ನಾವು ಸ್ವಾತಂತ್ರ್ಯದ ಬದಲು ಸಂರಕ್ಷಣೆಯನ್ನು ಸಾಮಾಜಿಕ ಪ್ರಯತ್ನದ ಉದ್ದೇಶವಾಗಿಸಿದ್ದೇವೆ. ನಮ್ಮ ಮತ್ತು ಮುಂದಿನ ಪೀಳಿಗೆಗಳು ಜವಾಬ್ದಾರಿಯ ಪ್ರಜ್ಞೆಯನ್ನು ಮತ್ತೆ ಪಡೆಯುವಂತಾಗಬೇಕು, ವ್ಯಕ್ತಿಯ ನೈಜ ಮಾಪನ ಮತ್ತು ಪ್ರಾಮುಖ್ಯಗಳಲ್ಲಿ ನಮ್ಮ ನಂಬಿಕೆಯನ್ನು ಮರುಕಳಿಸಿಕೊಳ್ಳಬೇಕು, ಅಮೆರಿಕಾದ ಜೀವನದಲ್ಲಿ ಈ ಮೌಲ್ಯಗಳನ್ನು ಉಳಿಸಲು ನಿರ್ಣಯಿಸಬೇಕು. ಅಮೆರಿಕಾದ ಗಣರಾಜ್ಯವು ಸ್ಥಾಪನೆಗೊಂಡದ್ದು ಮತ್ತು ಬೆಳೆದಿದ್ದು ಈ ತತ್ವಗಳ ಆಧಾರದಲ್ಲಿ. ಆ ತತ್ವಗಳ ಮುಂದುವರಿಕೆ ಅಗತ್ಯ.... ಒಂದು ದೇಶದ ಹಾಗೂ ವ್ಯಕ್ತಿಯ ಜೀವನದಲ್ಲಿ ಸಂರಕ್ಷಣೆ ಎಂಬುದು ಸುವ್ಯವಸ್ಥಿತ ಜೀವನದ ಪರಿಣಾಮ. ಅದನ್ನು ಉದ್ದೇಶ ಅಥವ ಗುರಿ ಎಂಬ ರೀತಿಯಲ್ಲಿ ಅರ್ಥೈಸುವವರಿಗೆ ಇದು ಅರಿವಾಗುವುದಿಲ್ಲ.

"....ಸುಖ-ಸಂತೋಷಗಳು ಪರಿಣಾಮಕಾರಿ ರೀತಿಯಲ್ಲಿ ಜೀವನ ನಡೆಸುವವರಿಗೆ ಲಭಿಸುತ್ತವೆಯೇ ವಿನಾ ಅವನ್ನು ಗುರಿಯನ್ನಾಗಿಸಿಕೊಳ್ಳುವವರಿಗಲ್ಲ.... ದೇಶಗಳ ಮತ್ತು ವ್ಯಕ್ತಿಗಳ ಜೀವನದಲ್ಲಿ ಸಂರಕ್ಷಣೆ ಎಂಬುದನ್ನು ಕೇಂದ್ರೀಕರಿಸಿದಾಗ, ಅದೇ ಅತ್ಯಂತ ಪ್ರಮುಖವೆಂದು ಭಾವಿಸಿಕೊಂಡಾಗ, ಸೋಲು ಮತ್ತು ಸ್ಥಗಿತತೆಗಳು ಖಚಿತ....... ಉದ್ಯಮಗಳಲ್ಲಿ ಲಾಭದ ವಿಚಾರವನ್ನೇ ನೋಡಿ: ಅದನ್ನು ಪಡೆಯುವುದೇ ಪರಮೋದ್ದೇಶವೆಂದು ಅತಿ ಎಚ್ಚರಿಕೆ ವಹಿಸಿ ಅದಕ್ಕಾಗಿ ಪ್ರಯತ್ನಿಸಿದರೆ ವ್ಯಾಪಾರ ಮತ್ತು ಉದ್ದಿಮೆಗಳಲ್ಲಿ ಸ್ಥಗಿತತೆ ಉಂಟಾಗುತ್ತದೆ. ಅಂತೆಯೇ ದುಡಿಮೆಗಾರರು ತಮ್ಮ ಹಕ್ಕುಗಳನ್ನು ಕೇಂದ್ರೀಕರಿಸಿ ಸಾಮೂಹಿಕ ಚೌಕಾಶಿಗೆ ಮುಂದಾಗಿ ದುಡಿಮೆಯ ಅವಧಿ, ಕೂಲಿಯ ಮೊತ್ತ, ನೌಕರಿಯ ಸ್ವರೂಪ ಮತ್ತು ನಿಗದಿ, ಇವುಗಳ ಬಗ್ಗೆ ಮಾತನಾಡಿದರೆ ಅಭಿವೃದ್ಧಿಯ ಚಕ್ರವು ಉರುಳುವುದು ನಿಧಾನಗತಿಯದಾಗುತ್ತದೆ."

ನೋಡಿದಿರಾ ಹೇಗಿದೆ: ಔತಣಕೂಟದಲ್ಲಿ ನೇರವಾಗಿ ಮಾಂಸದ ತಟ್ಟೆಗೆ ಕೈಹಾಕುವಂತೆ ವಿಚಾರಗಳನ್ನು ಜೀರ್ಣಿಸಿಕೊಂಡುಬಿಡುತ್ತಾರೆ. ಹಾಗೆ ಮಾಡದೆ ನಿಧಾನವಾಗಿ ಕಾಫಿ ಕುಡಿದು ವೇಳೆ ಕಳೆದರೆ ನಿದ್ರಾದೇವಿಯ ಆವಾಹನೆ ಆಗಿಬಿಡುತ್ತದೆ. ಡಾ॥ ಕಾರ್ಮೈಕೇಲ್‌ನ ಭಾಷಣ ಕೇಳಿದವರು ವಿಷಯ ಗ್ರಹಿಸಿದರು, ತಮ್ಮ ತಮ್ಮ ಮಾಪನ ಮಾಡಿಕೊಂಡು ಪ್ರಭಾವದ ಆಳ ಅಳೆದುನೋಡಿಕೊಂಡರು! ಎಷ್ಟು ಅಮೋಘವಾದ ಪ್ರತಿಭೆ, ಅಲ್ಲವೆ? ಭಾಷಣಕಾರ ಹೇಳಿದ್ದು ಅವರಿಗೆ ಆಪ್ಯಾಯಮಾನವಾಗಿತ್ತು: ವ್ಯಕ್ತಿಯ ಮಾಪನ ಮತ್ತು ಪ್ರಭಾವಗಳು ಸಾಮೂಹಿಕ ಚೌಕಾಶಿಗಿಂತ ಭಿನ್ನವಾದ್ದು, ವಿರುದ್ಧವಾದ್ದು. ದುಡಿಮೆಯ ಅವಧಿ, ಕೂಲಿಯ ಹೆಚ್ಚಳ, ಇವನ್ನೆಲ್ಲಾ ಕುರಿತು ಮಾತನಾಡುವುದು ಎಷ್ಟು ಮೂರ್ಖತನ!! "ನಾವೆಷ್ಟು ಒಳ್ಳೆಯವರು" ಎಂದು ಉದ್ದಿಮೆದಾರರು ಬೀಗಿರಬೇಕು.

ಅವರಿಗೆ ಇನ್ನೊಂದು ವಿಚಾರ ಸಮಾಧಾನ ತಂದಿರಬೇಕು: ಯೋಜಿತ ಪ್ರಯತ್ನಗಳಿಂದ ಸಂರಕ್ಷಣೆ ಲಭಿಸಲಾರದು ಎಂಬ ಅಮೋಘ ವಾದವು ಅವರಿಗೆ ತಂಗಾಳಿಯಂತಿತ್ತು. ಸುಖ, ಸಂರಕ್ಷಣೆ, ಇವನ್ನು ಎಂದೂ ಗುರಿಯಾಗಿಟ್ಟುಕೊಳ್ಳಬಾರದು; ಏನಿದ್ದರೂ ಅವು ತಾವಾಗೇ ಸನ್ನಿವೇಶದಿಂದ ಉದ್ಭವವಾಗುತ್ತವೆ. ಈ ಸಿದ್ಧಾಂತಕ್ಕೆ ಹೀಗೆ ಪ್ರತಿಕ್ರಿಯಿಸೋಣ: 'ಕ' ಎಂಬುದು 'ಪ' ಜೊತೆಯಲ್ಲಿ ಬರುತ್ತದೆ; ಆದ್ದರಿಂದ 'ಪ' ಪಡೆಯಹೊರಟು ಅದನ್ನು ಪಡೆದರೆ 'ಕ' ಸಹ ದೊರೆತಂತೆ ಆಗುತ್ತದಲ್ಲವೆ? ಪಡೆದದ್ದು 'ಕ' ಮತ್ತು 'ಪ' ಎರಡೂ ಒಟ್ಟಾಗಿಯೇ ಆದರೆ, ಅವುಗಳಲ್ಲಿ ನಮಗೆ 'ಕ' ನಲ್ಲಿ ಹೆಚ್ಚು ಆಸಕ್ತಿ ಇದೆಯೆಂದರೆ ತಪ್ಪೇನು? 'ಪ' ಜೊತೆ 'ಕ' ಹೇಗೂ ಬರುತ್ತದಾದ್ದರಿಂದ 'ಪ' ಗಾಗಿ ಹೋರಾಡುವುದರಲ್ಲಿ ಅಸಂಗತವಾದ್ದೇನೂ ಇಲ್ಲ. ಕಾರ್ಮೈಕೇಲ್ ವಾದದಲ್ಲಿ ನಾವು ತೀರ್ಮಾನವನ್ನು ನೆನಪಿಟ್ಟುಕೊಳ್ಳುತ್ತೇವೆ, ಅದರ ಆಧಾರವನ್ನು ಮರೆತುಬಿಡುತ್ತೇವೆ ಎಂದು ಅವನು ಭ್ರಮಿಸಿದ್ದಾನೆ. ಸಂರಕ್ಷಣೆ (ಸೆಕ್ಯುರಿಟಿ) ಗುರಿಯಾಗಲಾರದು ಎಂದು ಒಪ್ಪಿಸಿದರೆ, ಜನರು ಅದಕ್ಕಾಗಿ ಹೋರಾಡುವುದಿಲ್ಲವೆಂದು ಅವನ ಅನಿಸಿಕೆ.

ಅವನ ಭಾಷಣದ ಕಡೆಯ ಭಾಗ ನೋಡಿ: ಸ್ವಾತಂತ್ರ್ಯ ಮತ್ತು ಸಂರಕ್ಷಣೆ ಜೊತೆಜೊತೆಯಾಗಿ ಹೋಗಲಾರವೆಂಬ ವಾದ ಅಲ್ಲಿದೆ. ಅವನ ಪ್ರಕಾರ ಸಂರಕ್ಷಣೆ ಇದ್ದೆಡೆ ಸ್ಥಗಿತತೆ ಬರುತ್ತದೆ. ಅಂದರೆ ದುಡಿಮೆಗಾರಳ ನೌಕರಿಗೆ ಸುಭದ್ರತೆ ಇದ್ದರೆ ಅವಳು ಕೆಲಸ ಮಾಡುವುದಿಲ್ಲ, ಉತ್ಪಾದನೆ ಕುಂಠಿತವಾಗುತ್ತದೆ, ಎಂಬುದು ವಾದ. ಸುಭದ್ರತೆಯು ಸೋಮಾರಿತನಕ್ಕೆ ಸೋಪಾನ, ಸುಭದ್ರತೆಯ ಹಂಸತೂಲಿಕಾತಲ್ಪದಲ್ಲಿ ನೌಕರಳು ಸುಮಧುರ ಕನಸು ಕಾಣುತ್ತಾ ವಿರಮಿಸಿಬಿಡುತ್ತಾಳೆ, ಎಂದರ್ಥ. ಸಂರಕ್ಷಣೆ ಇದ್ದಾಗ ದುಡಿಮೆಗೆ ಪ್ರೇರಣೆ ಇಲ್ಲ, ಆದ್ದರಿಂದ ದೊಣ್ಣೆಯಿಂದ ಪ್ರೇರಣೆ ನೀಡಬೇಕು!

ಕಾರ್ಮೈಕೇಲ್ ಮತ್ತು ಬೆಂಥಾಮ್ ಇವರ ಮಾತುಗಳಲ್ಲಿ ವೈರುಧ್ಯ ಗಮನಿಸಿ: ಸಂರಕ್ಷಣೆಯ ವಿರುದ್ಧ ಕಾರ್ಮೈಕೇಲ್ ದನಿಯೆತ್ತಿದ, ಅದೇ ದನಿಯನ್ನು ಬೆಂಥಾಮ್ ಅದರ ಪರವಾಗಿ ಎತ್ತಿದ್ದಾನೆ. ಆಸ್ತಿಯ ಸಂರಕ್ಷಣೆ ಇಲ್ಲದಿದ್ದರೆ ಆಸ್ತಿಯನ್ನು ಹೆಚ್ಚಿಸಿಕೊಳ್ಳಲು ಪ್ರೇರಣೆ ಇಲ್ಲವೆಂದವನು ಬೆಂಥಾಮ್. ಅದರಿಂದಾಗಿ, ದುಡಿಮೆಗೆ ಯಾರೂ ಒಗ್ಗಿಕೊಳ್ಳುವುದಿಲ್ಲ ಎಂಬುದು ಅವನ ವಾದ. ಆದರೆ ಕಾರ್ಮೈಕೇಲ್ ಪ್ರಕಾರ ಆಸ್ತಿಯ ಸಂರಕ್ಷಣೆ ಖಚಿತವಾದಾಗ ಪ್ರೇರಣೆ ಇಲ್ಲವಾಗಿ ದುಡಿಮೆ ಸೊರಗುತ್ತದೆ. ಇಬ್ಬರೂ ಸೇರಿ ಎಂತಹ ಸಂದಿಗ್ಧತೆ ಸೃಷ್ಟಿಸಿಬಿಟ್ಟಿದ್ದಾರೆ! ಸಂರಕ್ಷಣೆ ಮತ್ತು ಅದರ ಅಭಾವ, ಇವೆರಡೇ

ಪರ್ಯಾಯಗಳು. ಎರಡರ ಪರಿಣಾಮವೂ ಒಂದೇ: ಸಾರ್ವತ್ರಿಕ ಸೋಮಾರಿತನ, ಮೈಗಳ್ಳತನ. ನಮ್ಮ ಸಮಾಜದಲ್ಲಿ ಇದು ತೀರಾ ಅಸಂಗತ, ಏಕೆಂದರೆ ಹೆಚ್ಚೋ ಕಡಿಮೆಯೋ, ಅಂತೂ ತಾಂತ್ರಿಕ ಅಭಿವೃದ್ಧಿ ಜರುಗುತ್ತಲೇ ಇರುತ್ತದೆಂಬುದು ಸತ್ಯ.

ಒಂದೇ ವಾದವನ್ನು ಅತ್ತಕಡೆ ಮತ್ತು ಇತ್ತಕಡೆ ಎರಡಕ್ಕೂ ನೀಡುವುದು ಸಮಂಜಸವಲ್ಲ. ದುಡಿಯುವವರನ್ನು ಹುರಿದುಂಬಿಸಲು ಸಂರಕ್ಷಣೆ ನಿಜಕ್ಕೂ ಅಗತ್ಯವಿದ್ದರೆ (ಮತ್ತು ಹಾಗೆ ಹುರಿದುಂಬಿಸುವುದು ಯೋಗ್ಯವೆನಿಸಿದರೆ), ಅದು ಸಾಮಾಜಿಕ ಒಳಿತಿಗೆ ಸಾಧನ ಎಂದು ಖಂಡಿತ ಅನಿಸಿಕೊಳ್ಳುತ್ತದೆ. ಸಂರಕ್ಷಣೆ ಅಥವಾ ಸುಭದ್ರತೆಯು ಜನರನ್ನು ದುಡಿಮೆಗೆ ವಿಮುಖರನ್ನಾಗಿಸುತ್ತದೆ ಎಂದಾದರೆ (ಮತ್ತು ದುಡಿಮೆಗಾರರನ್ನು ಉತ್ತೇಜಿಸುವುದು ಉತ್ತಮವೆಂದಾದರೆ) ಸುಭದ್ರತೆಯನ್ನು ಕಲ್ಪಿಸುವುದು ಸಾಮಾಜಿಕ ಒಳಿತು ಅನಿಸಿಕೊಳ್ಳದು. ಇವೆರಡರಲ್ಲಿ ನಮ್ಮ ಆಯ್ಕೆ ಇರಬೇಕು. ಕಾರ್ಮೈಕೇಲ್ ಮತ್ತು ಬೆಂಥಾಮ್ ಇಬ್ಬರೂ ಸರಿಯಾಗಿರಲಾರರು. ಒಂದೊಂದು ಕಾಲಕ್ಕೆ ಒಂದೊಂದು ಆಯ್ಕೆ ಸರಿ ಎಂದು ಹೊಸ ವಾದ ಹೂಡಿದರೆ ತನ್ನ ಕಾಲಕ್ಕೆ ಬೆಂಥಾಮ್ ಏಕೆ ಸರಿಯಾಗಿದ್ದ ಮತ್ತು ಈಗ ಕಾರ್ಮೈಕೇಲ್ ಏಕೆ ಸರಿ ಎಂಬುದನ್ನು ಸ್ಪಷ್ಟಪಡಿಸಬೇಕು. (ಬೆಂಥಾಮ್ ಇಂದು ಸರಿಯಾಗಲಾರ ಮತ್ತು ಕಾರ್ಮೈಕೇಲ್ ಅಂದು ಸರಿಯಾಗುತ್ತಿರಲಿಲ್ಲವೇಕೆ ಎಂಬುದನ್ನು ವಿವರಿಸಬೇಕು).

ಸಮನ್ವಯಕ್ಕೆ ಬೇರೊಂದು ವಿಧಾನವಿದೆ: ಸುಭದ್ರತೆ ಎಂದರೆ ಇಬ್ಬರೂ ಬೇರೆಬೇರೆ ಅರ್ಥಗಳನ್ನಿಟ್ಟುಕೊಂಡಿದ್ದಾರೆ ಎಂದು ಹೇಳುವುದು. ಸುಭದ್ರತೆಯು ಆಸ್ತಿವಂತನಿಗೆ ರಕ್ಷಣೆ ನೀಡುವುದರಿಂದ ಅದು ಒಳ್ಳೆಯದು ಎಂದು ಬೆಂಥಾಮ್ ಹೇಳಿದಾಗ ಬಂಡವಳಿಗರಿಗೆ ಅದು ಒಳ್ಳೆಯದು ಎಂಬರ್ಥವಿದೆ. ಸುಭದ್ರತೆಯು ಒಳ್ಳೆಯದಲ್ಲ, ಏಕೆಂದರೆ ಅದು ಸಾಮೂಹಿಕ ಚೌಕಾಶಿಗೆ, ಕಡಿಮೆ ದುಡಿಮೆಯ ಅವಧಿಗೆ, ಹೆಚ್ಚಿನ ಕೂಲಿಗೆ ಒತ್ತಾಯಿಸುತ್ತದೆ ಎಂದು ಹೇಳಿದಾಗ ಕಾರ್ಮೈಕೇಲ್ ಇಂತಹ ಸುಭದ್ರತೆಯು ಬಂಡವಳಿಗರಿಗೆ ಅನುಕೂಲಕರವಲ್ಲ ಎಂದು ಸೂಚಿಸುತ್ತಿದ್ದಾನೆ. ಅಂದರೆ, ಇಬ್ಬರ ನಡುವಣ ವೈರುಧ್ಯ ಇಲ್ಲವಾಗುತ್ತದೆ. "ಸುಭದ್ರತೆ" ಎಂಬುದರ ವ್ಯಾಪ್ತಿಯಲ್ಲಿ ವ್ಯತ್ಯಾಸವಿಲ್ಲದಿದ್ದರೆ ಅವರಲ್ಲಿ ಅಭಿಪ್ರಾಯ ಭೇದ ಬರುತ್ತಿರಲಿಲ್ಲ.

ಇದೇ ವಾದದ ಇನ್ನೊಂದು ವಿಧಾನವನ್ನು ಗಮನಿಸೋಣ: ಅಮೆರಿಕಾದ ಜನರಲ್ ಇಲೆಕ್ಟ್ರಿಕ್ ಕಂಪನಿಯ ಸಂಶೋಧನಾ ಪ್ರಯೋಗಾಲಯಗಳ ನಿರ್ದೇಶಕ ಡಾ॥ ಅರ್ವಿಂಗ್ ಲ್ಯಾಂಗ್‌ಮೂಯಿರ್ ಸೆನೆಟ್‌ನ ಉಪಸಮಿತಿಯ ಮುಂದೆ ಹಾಜರಾಗಿದ್ದ. ವೈಜ್ಞಾನಿಕ ಸಂಶೋಧನೆಗೆ ಕೇಂದ್ರ ಸರ್ಕಾರವು ಅನುದಾನ ನೀಡುವ ಶಾಸನವು ಅಗತ್ಯವೇ ಎಂಬುದು ವಿಚಾರ. ಲ್ಯಾಂಗ್‌ಮೂಯಿರ್ ಪ್ರಕಾರ ಅಂತಹ ಅನುದಾನದಿಂದ ಸರ್ಕಾರದ ವಿಧಿವಿಧಾನಗಳಿಂದಾಗಿ ಸಂಶೋಧಕರ ಕೆಲಸವು ಮೊಂಡಾಗಿಬಿಡುತ್ತದೆ. ಅವನ ಹೇಳಿಕೆ ಇದು: "ಮುಂಚಿನಿಂದಲೂ ನಮಗೆ ಕೆಲವು ಪ್ರೇರಣಾ ಸಾಧನಗಳಿವೆ: ವೈಯ್ಯಕ್ತಿಕ ಸ್ವಾತಂತ್ರ್ಯ, ಚಿಂತನಾ ಸ್ವಾತಂತ್ರ್ಯ, ಮುಕ್ತವಹಿವಾಟು, ಪೇಟೆಂಟ್‌ಗಳು, ಇತ್ಯಾದಿ. ಅಂತಹ ಪ್ರೇರಣೆಗಳು ಬೇರಾವ ದೇಶದಲ್ಲೂ ಇಲ್ಲ. ನಮ್ಮ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅಗತ್ಯವಾಗಿ ಸರ್ಕಾರದ ಹಿಡಿತವು ಕೆಲವು ವಿಭಾಗಗಳಲ್ಲಿ ಇದ್ದೇ ಇರುತ್ತದೆ. ಆದರೆ ಆ ಹಿಡಿತವು ಆಗಾಗ್ಗೆ ನಮ್ಮ ವ್ಯವಸ್ಥೆಗೆ ಧಕ್ಕೆಯುಂಟುಮಾಡಿದೆ. ಅದು ವ್ಯವಸ್ಥೆಯ ಒಳ್ಳೆಯ

ಮತ್ತು ಕೆಟ್ಟ ಪದ್ಧತಿಗಳೆರಡರ ಮೇಲೂ ಪ್ರಭಾವ ಬೀರಿದೆ". ಹೀಗೆಂದು ಹೇಳಿ ಆತ ಅನುಕೂಲ ಮತ್ತು ಪ್ರತಿಕೂಲ ಮಧ್ಯಪ್ರವೇಶದ ಪಟ್ಟಿಯನ್ನು ನೀಡಿದ. ಅದರಲ್ಲಿದ್ದ ಅಂಶಗಳಿವು: ಟ್ರಸ್ಟ್‌ಗಳ ವಿರುದ್ಧದ ಕಾನೂನುಗಳು, ತೆರಿಗೆ, ನಾಗರಿಕ ಸೇವೆಯ ನಿಯಮಗಳು, ನೌಕರಿಯಲ್ಲಿ ಯುದ್ಧದಲ್ಲಿ ಹೆಸರುಗಳಿಸಿದವರಿಗೆ ಆದ್ಯತೆ, ಸಾಮಾಜಿಕ ಭದ್ರತೆಯ ಕಾನೂನುಗಳು, ಪೇಟೆಂಟ್ ವ್ಯವಸ್ಥೆಯ ಮೇಲೆ ಹಲ್ಲೆಗಳು. ಅವನ ಎಲ್ಲ ಆದ್ಯತೆಗಳೂ ಏಕಸ್ವಾಮ್ಯ ಬಂಡವಾಳಶಾಹಿಯ ಮೇಲುಗೈಯನ್ನು ಮೊಟಕು ಗೊಳಿಸುವಂತಹ ಶಾಸನಗಳ ವಿರುದ್ಧವೇ ಇದ್ದವು, ಸಾಮಾನ್ಯರಿಗೆ ದಕ್ಕಬಹುದಾದ ಲಾಭಗಳು ಅವನಿಗೆ ಅರುಚಿಕರವಾಗಿ ತೋರಿದವು. ಅಂದರೆ, ವೈಜ್ಞಾನಿಕ ಸಂಶೋಧನೆಗಳಿಗೆ ಏಕಸ್ವಾಮ್ಯ ಬಂಡವಾಳಶಾಹಿಯು ಅನಿವಾರ್ಯವೆಂಬುದು ಅವನ ವಾದ. ಹೀಗೆ ಸಂಶೋಧನೆಯ ಮುಂಚೂಣಿಯಲ್ಲಿದ್ದ ಅಮೆರಿಕಾಕ್ಕೆ ಅಡೆತಡೆಗಳು ಉಂಟಾಗುತ್ತಿವೆ ಎಂಬುದು ಅವನ ಆತಂಕ. ವಾರಕ್ಕೆ 24 ಗಂಟೆಯ ಕೆಲಸ, ನೌಕರಿಯ ಹಕ್ಕು, ಇಂಥವು ಅವನಿಗೆ ಒಪ್ಪಿತವಲ್ಲ. "ಅವಕಾಶದ ಅಗಾಧ ವ್ಯಾಪ್ತಿಯನ್ನು ಕುಗ್ಗಿಸಿ ಸುಭದ್ರತೆಯ ಮಾತನ್ನು ಹೆಚ್ಚು ಆಡುತ್ತಿದ್ದೇವೆ" ಎಂಬುದು ಅವನ ದೂರು.

ಈ ವಾದವನ್ನು ಕೇಳಿದರೆ ಆದ್ಯಪ್ರವರ್ತಕರೆಲ್ಲಾ ಕೇವಲ ಬೆಡಗಿನ ಸಾಹಸ ಪ್ರವೃತ್ತಿಯಿಂದ ಪ್ರೇರಿತರಾದರೆಂಬ ಮಿಥ್ಯಾಕಲ್ಪನೆ ಬರುತ್ತದೆ. ನಿಜಾಂಶವು ಬೇರೆಯೇ ಇದೆ: ಈ ಆದ್ಯಪ್ರವರ್ತಕರು ಬುದ್ಧಿವಂತರು. ಆರ್ಥಿಕ ಸೋಲು ಇಲ್ಲವೇ ಏನೋ ಬೃಹತ್ತಾದ ಲಾಭವಿದೆ ಎಂದಾಗ ಮಾತ್ರ ಅವರು ಸ್ವಸ್ಥಾನ ಬಿಟ್ಟು ಕದಲುತ್ತಿದ್ದುದು. ಸಾಹಸ ಪ್ರವೃತ್ತಿಯನ್ನು ಏನೂ ಕಾರಣವಿಲ್ಲದೆ ಮೆರೆಯುವ ಗುಂಗು ಅವರಲ್ಲಿರಲಿಲ್ಲ. ದುಡಿಮೆ ಇರಲಿ, ಗಂಡಾಂತರ ಇರಲಿ, ಏನೋ ಒಂದು ಗುರಿ ಇಲ್ಲದೆ ಅವರು ಮುನ್ನುಗ್ಗುತ್ತಿರಲಿಲ್ಲ. ತೆವಲಿಗಾಗಿ ಏನನ್ನಾದರೂ ಮಾಡುವ ಪ್ರವೃತ್ತಿ ಅವರಲ್ಲಿರಲಿಲ್ಲ. ಅವರು ಯೂರೋಪಿನಿಂದ ಕಂಬಿಕಿತ್ತು ಬಂದವರು. ಅಲ್ಲಿ ಅವರಿಗೆ ಸುಭದ್ರತೆ ಇರಲಿಲ್ಲ, ಅಮೆರಿಕಾದಲ್ಲಿ ಅದರ ನಿರೀಕ್ಷೆ ತೀವ್ರವಾಗಿತ್ತು.

ಈಗ ಹೇಗಿದೆ ನೋಡಿ ಸ್ವಾರಸ್ಯ: ಆದ್ಯಪ್ರವರ್ತಕರು ಸುಭದ್ರತೆ ಪಡೆಯಲು ಹೆಣಗಿದರು, ನಾವೀಗ ಅದನ್ನು ನಿರಾಕರಿಸಬೇಕಂತೆ ಮತ್ತು ಸುಭದ್ರತೆ ಇಲ್ಲದೆ ಆದ್ಯಪ್ರವರ್ತಕರಂತೆ ಮತ್ತೆ ದುಡಿಮೆಗೆ ಒಗ್ಗಿಕೊಳ್ಳಬೇಕಂತೆ. ನಮ್ಮ ಹಿಂದಿನವರು ಕಷ್ಟದ ಸನ್ನಿವೇಶಗಳನ್ನೆದುರಿಸಿದ್ದು ಅವರ ಮಕ್ಕಳು ಕ್ಷೇಮವಾಗಿರಲಿ, ಎಂದು. ಅವರ ಮಕ್ಕಳಾದ ನಾವು ಕ್ಷೇಮವನ್ನು ನಿರಾಕರಿಸಬೇಕು ಮತ್ತು ಅನಗತ್ಯ ಕಷ್ಟ ಸನ್ನಿವೇಶಗಳನ್ನು ನಿರ್ಮಿಸಿಕೊಳ್ಳಬೇಕು! ಯಾವುದನ್ನು ಗಳಿಸಲು ಅವರು ಹಾತೊರೆದರೋ ಅದನ್ನು ನಾವಿಂದು ತೊರೆದು ಕುತ್ತಿಗೆ ಮಟ್ಟದ ನೀರಿಗೆ ಧುಮುಕಬೇಕು ಎನ್ನುತ್ತಿದ್ದಾರೆ. ಇದೇನು ತಲೆಯ ಮೇಲೆ ನಿಲ್ಲುವ ಪ್ರಯಾಸವೋ ಕಾಣೆ.

ಸುಭದ್ರತೆ ಮತ್ತು ಮೈಗಳ್ಳತನ

ಇವರೆಲ್ಲಾ ಏನು ಹೇಳುತ್ತಿದ್ದಾರೆ? ಸುಭದ್ರತೆಯು ಸ್ವಾತಂತ್ರ್ಯಕ್ಕೆ ಕುತ್ತು ತರುತ್ತದೆ, ಪ್ರೋತ್ಸಾಹ ನೀಡುವಂತಹ ಅಂಶಗಳನ್ನು ತುಳಿದುಹಾಕಿಬಿಡುತ್ತದೆ ಎಂದಲ್ಲವೆ? ಆದರೆ ನೋಡಿ, ಈ ಸುಭದ್ರತೆಯನ್ನು ನಿರೀಕ್ಷಿಸುವವರು ಯಾವಾಗಲೂ ದುಡಿಮೆಗಾರರು,

ಗೇಯುವವರು ಮತ್ತು ಚಿಕ್ಕ ಪುಟ್ಟ ವ್ಯಾಪಾರಿಗಳು. ಸದಾ ಲಾಭವನ್ನು ತುಂಬಿಕೊಳ್ಳುವ ಉದ್ಯಮಗಳು, ಕಾರ್ಪೊರೇಟ್‌ಗಳು, ಸ್ವಾತಂತ್ರ್ಯವು ಅಭದ್ರತೆಗೆ ಕಾರಣವೆಂದು ಹೇಳುವುದೇ ಇಲ್ಲ! ವಾರಕ್ಕೆ ಗರಿಷ್ಠ 34 ಗಂಟೆ ಕೆಲಸ, ಪೂರ್ಣ ಉದ್ಯೋಗಾವಕಾಶ ಎಂಬ ಮಾತು ಹೊರಬಿದ್ದರೆ ಸಾಕು, ಸ್ವಾತಂತ್ರ್ಯಕ್ಕೆ ಧಕ್ಕೆ ಬಂತೆಂದು ಒರಲು ಆರಂಭವಾಗುತ್ತದೆ. ಯಾರ ಸ್ವಾತಂತ್ರ್ಯ? ದುಡಿಮೆಗಾರರದಲ್ಲ, ಏಕೆಂದರೆ ಇವು ಅವರ ಸ್ವಾತಂತ್ರ್ಯವನ್ನು ಹಿಗ್ಗಿಸುತ್ತವೆ; ಕೃಷಿಕರ ಮತ್ತು ಸಣ್ಣ ವ್ಯಾಪಾರಿಗಳದೂ ಅಲ್ಲ, ಏಕೆಂದರೆ ಕೂಲಿಗಾರರಿಗೆಲ್ಲಾ ಉದ್ಯೋಗವಿದ್ದರೆ ಅವರ ಉತ್ಪನ್ನಗಳಿಗೆ ಮತ್ತು ಸರಕುಗಳಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇರುತ್ತದೆ. ಏನಿದ್ದರೂ 'ಸ್ವಾತಂತ್ರ್ಯ' ಮೊಟಕಾಗುವುದು ದೊಡ್ಡ ಉದ್ಯಮಿಗಳಿಗೆ, ಏಕೆಂದರೆ 'ನೇಮಿಸಿಕೊ ಮತ್ತು ಹೊರಹಾಕು' ಎಂಬ ಸೂತ್ರವನ್ನು ಮನಬಂದಂತೆ ಅನ್ವಯಿಸಲಾಗುವುದಿಲ್ಲ, ದುಡಿಮೆಯ ಅವಧಿಯನ್ನು ಬೇಕಾಬಿಟ್ಟಿ ಹೆಚ್ಚಿಸಲಾಗುವುದಿಲ್ಲ. ಈ ಕೆಲವು ಉದ್ಯಮಿಗಳ ನಷ್ಟವು ಸಮಾಜದ ಬಹುಭಾಗಕ್ಕೆ ಲಾಭವೇ.

ಸುಭದ್ರತೆಯೆಂದರೆ ಬಹುಸಂಖ್ಯಾತ ಜನರ ಸಾಮಾಜಿಕ ಲಾಭವೆಂದು ಡಾ॥ ಲ್ಯಾಂಗ್‌ಮೂಯಿರ್‌ನಂತೆ ವ್ಯಾಖ್ಯಾನಿಸಿದರೆ ಯಾರ ಸ್ವಾತಂತ್ರ್ಯವನ್ನು ವಿರೋಧಿಸಿದಂತಾಗುತ್ತದೆ? ಬಹುಸಂಖ್ಯಾತರ ಲಾಭದಿಂದ ಯಾರಿಗೆ ನಷ್ಟವಾಗುತ್ತದೋ ಅಂಥವರ ವಿಚಿತ್ರ ಸ್ವಾತಂತ್ರ್ಯಕ್ಕೆ ಮಾತ್ರ ಧಕ್ಕೆ ಉಂಟಾಗುತ್ತದೆ. ಇದೇನು ಹೀಗಾಯಿತಲ್ಲ! "ಸ್ವಾತಂತ್ರ್ಯ" ಎಂದರೆ ಈ ಚಿಕ್ಕ ಶೋಷಕ ವರ್ಗದ ವಿಶೇಷ ಆಸಕ್ತಿಗೆ ಮುಸುಕು ಎಂದಾಯಿತು. ಇದೊಂದು ವಿಷಯ ಸ್ಪಷ್ಟವಾದರೆ, ಕೆಲವರ ವಿಶೇಷ ಆಸಕ್ತಿಗಳು ಮತ್ತು ಸಮಾಜದ ಸಾಮಾನ್ಯ ಹಿತ, ಎರಡೂ ಒಂದೇ ಅಲ್ಲವೆಂಬುದು ಸ್ಪಷ್ಟವಾಗುತ್ತದೆ. ಸ್ವಾತಂತ್ರ್ಯದ ಪರಿಕಲ್ಪನೆಯು ಅದನ್ನು ಒಳಗೊಂಡಿದೆ. ಏಕೆಂದರೆ, ಅವೆರಡೂ ಒಂದೇ ಅಲ್ಲ. ಸ್ವಾತಂತ್ರ್ಯ ಎಂದರೆ ಲಂಗುಲಗಾಮಿಲ್ಲದಂತೆ ಲಾಭದ ಗಳಿಕೆ ಎಂದಾದರೆ ಪೂರ್ಣಾವಧಿ ಉದ್ಯೋಗ, ವಾರಕ್ಕೆ 34 ಗಂಟೆ ದುಡಿಮೆ ಎಂಬ ಸುಭದ್ರತೆಗೆ ಖಂಡಿತ ಅದು ವಿರೋಧವಾಗುತ್ತದೆ. ಇಡೀ ಸಮಾಜಕ್ಕೆ ಅಂತಹ ಸ್ವಾತಂತ್ರ್ಯ ಇರಬೇಕೆಂದು ಯಾರು ಹೇಳುತ್ತಾರೆ?

ಕಡೆಯ ಇನ್ನೊಂದು ವಾದವಿದೆ: ಸಾಮಾಜಿಕ ನೆಲೆಯಲ್ಲಿ ಬಂಡವಳಿಗರ ಸ್ವಾತಂತ್ರ್ಯವು ಇತರರೆಲ್ಲರ ಸುಭದ್ರತೆಗಿಂತಲೂ ಹೆಚ್ಚು ಪ್ರಾಮುಖ್ಯ ಪಡೆದಿದೆ ಎಂದು ಸ್ಥಾಪಿಸಲು ಅದನ್ನು ಬಳಸಬಹುದು. ಕಾರ್ಮೈಕೇಲ್ ಮತ್ತು ಲ್ಯಾಂಗ್‌ಮೂಯಿರ್ ಇಬ್ಬರೂ ಅದನ್ನು ಪ್ರಸ್ತಾಪಿಸಿದ್ದಾರೆ. ಪ್ರೋತ್ಸಾಹವನ್ನು ನೀಡುವ ಅಂಶಗಳನ್ನು ಕಿತ್ತುಹಾಕಿದರೆ ಸುಭದ್ರತೆಯು ಕ್ರಿಯೆಗೆ ಪಾರ್ಶ್ವವಾಯುವಂತಾಗುತ್ತದೆ ಎಂಬುದದು. ಆರ್ಥಿಕ ಸೂತ್ರದ ಮುಖೇನ ಹೇಳುವುದಾದರೆ ಅದರ ಅರ್ಥ ಇದು: ಪದಾರ್ಥಗಳ ಉತ್ಪಾದನೆಗೆ ಏನಾದರೊಂದು ಪ್ರೋತ್ಸಾಹ ಇಲ್ಲದಿದ್ದರೆ ಜನರು ಉತ್ಪಾದನೆ ಮಾಡಹೋಗುವುದಿಲ್ಲ; ಸುಭದ್ರತೆಯ ಸ್ಥಿತಿಯು ಅಂತಹ ಪ್ರೋತ್ಸಾಹಕ ಅಂಶಗಳನ್ನು ಇಲ್ಲವಾಗಿಸುತ್ತದೆ. ಆದ್ದರಿಂದ ಸುಭದ್ರತೆಯನ್ನು ಕಲ್ಪಿಸುವುದು ಪದಾರ್ಥಗಳ ಉತ್ಪಾದನೆಗೆ ಪೆಟ್ಟು ನೀಡುತ್ತದೆ.

ಇದೊಂದು ಅಸಾಧಾರಣವಾದ ಬಾಲಿಶತ್ವದ ಸೂಚನೆ, ಏಕೆಂದರೆ ಮಗುಮ್ಮಾಗಿ ಇದು ಏನು ಹೇಳಹೊರಟಿದೆ ಎಂದರೆ ಪದಾರ್ಥಗಳ ಉತ್ಪಾದನೆಗೆ ಬಂಡವಳಿಗರಿಗೆ ಇರುವ ಪ್ರೇರಣೆಗಳಷ್ಟೇ ಉತ್ಪಾದನೆಗಿರುವ ಪ್ರೇರಣೆಗಳು, ಎಂದು. ಒಂದು ಮಾತು ನಿಜ: ಬಂಡವಳಿಗರು ಲಾಭಕ್ಕಲ್ಲದೆ ಬೇರಾವ ಉದ್ದೇಶದಿಂದಲೂ ಪದಾರ್ಥಗಳ ಉತ್ಪಾದನೆಗೆ

ಮುಂದಾಗುವುದಿಲ್ಲ. ಅದು ಅವರ ಸ್ವಭಾವ. ಲಾಭದ ಗಳಿಕೆಯನ್ನು ರದ್ದುಮಾಡಿ ನೋಡಿ, ಬಂಡವಳಿಗರಿಗೆ ಉತ್ಪಾದನೆ ಮಾಡಲು ಯಾವ ಕಾರಣವೂ ಉಳಿಯುವುದಿಲ್ಲ. ಇದು ಹುಟ್ಟಿನಿಂದ ಬಂದಿರುವ ಕುರುಡುತನವಲ್ಲ: ಅವರ ನಿರ್ದಿಷ್ಟ ಸಾಮಾಜಿಕ ಪಾತ್ರವು ಅವರನ್ನು ಅಂಧರನ್ನಾಗಿಸಿದೆ. ಬೇಕಾದರೆ ಅದನ್ನು ಅವರ ವಿಚಿತ್ರ ಔದ್ಯಮಿಕ ವ್ಯಾಧಿಯೆಂದು ಕರೆಯಿರಿ. ಬಂಡವಳಿಗರು ಗಿಣಿಯ ಮಾತನ್ನಾಡುತ್ತಲೇ ಇರುತ್ತಾರೆ: ತಾವು ಉತ್ಪಾದಿಸಿರುವ ಪದಾರ್ಥಗಳನ್ನು ತಮ್ಮಲ್ಲೇ ಇಟ್ಟುಕೊಳ್ಳಲು ಉತ್ಪಾದನೆ ಮಾಡುವಂತೆ ಯಾರನ್ನೂ ಪ್ರೇರೇಪಿಸಲು ಸಾಧ್ಯವಿಲ್ಲ, ಎಂದು. ಉತ್ಪಾದನೆಗೆ ಬೇರೊಂದು ಪ್ರೇರಣೆಯ ಅಗತ್ಯವಿದೆ; ಅದೇನೆಂದರೆ, ತಕ್ಷಣದ ಅಥವಾ ನಾಳೆಯ ಲಾಭ, ಪ್ರಪಂಚದಲ್ಲಿ ಎತ್ತರಕ್ಕೆ ಏರುತ್ತಿರಬೇಕೆಂಬ ವ್ಯಾಮೋಹ, ಪ್ರಖ್ಯಾತರಾಗುವ ಲಾಲಸೆ. ಇವೆಂಥ ಕಷ್ಟದ ಪ್ರಭಾವಿ ಪ್ರೇರಣೆಗಳೆಂದು ನೋಡಿ: ದಿನವಿಡೀ ಶ್ರಮಿಸುತ್ತಿರುವುದು, ಪ್ರಾಮಾಣಿಕ ಶ್ರಮದ ಪ್ರತಿಫಲವೆಂಬ ಮೋಜು, ಕಡೆಗೆ ಪ್ರಖ್ಯಾತಿ. ಶ್ರಮಿಸಿ ಸುಸ್ತಾಗಿರುವವನು ಆ ಪ್ರಖ್ಯಾತಿಯ ಶಿಖರದಲ್ಲಿ ಸುಖಿಸುತ್ತಾನೆ; ಆದರೆ ತಾನು ಗಳಿಸಿದ ಶ್ಲಾಘನೀಯ ಬಹುಮಾನದ ಸುಖ ಅನುಭವಿಸಲು ಅವನ ಮೂಳೆಗಳೆಲ್ಲ ಸವೆದು ಹಾಳಾಗಿರುತ್ತವೆ. ಇನ್ನೊಬ್ಬನಿದ್ದಾನಲ್ಲ, ದುಡಿಮೆಗಾರ, ಅವನನ್ನು ಇವನೊಡನೆ ಹೋಲಿಸಿ ನೋಡಿ: ಪೂರ್ಣ ಉದ್ಯೋಗ ಮತ್ತು ವಾರಕ್ಕೆ 30 ಗಂಟೆಗಳ ದುಡಿಮೆ ಇವೆಯಲ್ಲಾ ಅವು ಅವನನ್ನು ಸಂತೃಪ್ತ ಕ್ರಿಯಾಶೀಲನನ್ನಾಗಿಸಿವೆ, ಸೌಖ್ಯ ಮತ್ತು ಲವಲವಿಕೆ ಅವನಲ್ಲಿವೆ. 30 ಗಂಟೆಗಳ ಖುಷಿಯ ಕೆಲಸವು ವಾರದಲ್ಲಿ ಇನ್ನುಳಿದ 138 ಗಂಟೆಗಳನ್ನು ಸವಿಯಲು ಅವಕಾಶ ಕಲ್ಪಿಸಿದೆ. ನಿದ್ದೆ, ಆಟ, ಓದು, ಕಲೆ, ಹೀಗೆ ಯಾವ ಆಸಕ್ತಿಯನ್ನು ಬೇಕಾದರೂ ಬೆಳೆಸಿಕೊಂಡು ನಗುವಿನ ಜೀವನ ನಡೆಸಬಹುದು. ಇಂತಹ ಜೀವನಕ್ಕಾಗಿ ಎಲ್ಲರೂ ಗುಟ್ಟಾಗಿ ಆಸೆ ಪಡುತ್ತಾರೆ, ಅದು ತರ್ಕಬದ್ಧವಾದ್ದು ಕೂಡ. ಆದರೆ ವ್ಯವಸ್ಥೆ ಅದಕ್ಕೆ ಸದ್ಯಕ್ಕಿನ್ನೂ ವಿರುದ್ಧವಾಗಿದೆ. ಎಲ್ಲಿಯವರೆಗೆ ವಾರಕ್ಕೆ 50–60 ಗಂಟೆಗಳ ದುಡಿಮೆಯು ವ್ಯವಸ್ಥೆಯನ್ನು ನಿಯಂತ್ರಿಸುವವರಿಗೆ ಲಾಭದಾಯಕವಾಗಿರುತ್ತದೋ ಅಲ್ಲಿಯವರೆಗೆ ಈ ವೈರುಧ್ಯವಿದ್ದೇ ತೀರುತ್ತದೆ. ಹಿಂದೆ ಒಂದು ಪದ್ಯವನ್ನು ಹೇಳಿಕೊಡುತ್ತಿದ್ದರು; ಯಾವಾಗಲೂ ದುಡಿಮೆ ಮಾಡುತ್ತಲೇ ಇರಬೇಕೆಂದು ಬೋಧಿಸುವ ಸೂಕ್ತಿ ಅದು:

ದುಡಿಯೆಲೋ ಜೀವ, ರಾತ್ರಿಯು ಸನ್ನಿಹಿತವಾಗುತ್ತಿದೆ,
ರಾತ್ರಿಯಲ್ಲಿ ಮಾನವ ದುಡಿಯುವುದಿಲ್ಲವಲ್ಲಾ ಅದಕೆ!

ಅಂದರೆ ದುಡಿಯದೆ ಸತ್ತಂತಿರುವ ವ್ಯಕ್ತಿಯು ಲಾಭದ ಮೂಲವಲ್ಲ. ಯೋಚನೆ ಮಾಡಿ: ಸುಭದ್ರತೆಯೇ ಒಂದು ಪ್ರೋತ್ಸಾಹದಾಯಕ ಅಂಶ ಎಂದು ತಿಳಿದಾಗ ಸುಭದ್ರತೆ ಮತ್ತು ಪ್ರೋತ್ಸಾಹಗಳ ನಡುವೆ ಏನೋ ವೈರುಧ್ಯವಿದೆಯೆಂದು ಹೇಳುತ್ತಿದ್ದಾರಲ್ಲ, ಅದು ವೈರುಧ್ಯವೇ ಆಗಿರುವುದಿಲ್ಲ. ಸುಭದ್ರತೆ ಎಂಬುದೇನು? ಆರ್ಥಿಕ ಸ್ಥಾನಮಾನಕ್ಕೆ ಚ್ಯುತಿ ಉಂಟಾಗದಿರುವಂತೆ ರಕ್ಷಣೆ, ಜೀವಹಾನಿ ಆಗದಿರುವುದು, ಸುಖ–ಸಂತೋಷಗಳ ಸಾಧ್ಯತೆಯು ಹೆಚ್ಚುತ್ತಿರುವುದು. ಸುರಕ್ಷೆಯಿಂದಿರುವುದೆಂದರೆ ತಾನು ಉತ್ಪಾದಿಸಿದ ಅಥವಾ ಉತ್ಪಾದಿಸುವುದರಲ್ಲಿ ಸಹಾಯ ನೀಡಿದ ಪದಾರ್ಥಗಳ ಮತ್ತು ಸೇವೆಗಳ ಭೋಗದಲ್ಲಿ ಪಾಲುಗಾರಿಕೆ, ಇಂದು ದುಡಿಮೆ ಮಾಡುತ್ತಿರುವಾಗ ನಾಳೆ ನಿರುದ್ಯೋಗಿಯಾಗಬಹುದೆಂಬ ಭಯವಿಲ್ಲದಿರುವುದು, ತನ್ನ ಕುಟುಂಬ ಮತ್ತು ಸ್ನೇಹಿತ

ವರ್ಗವು ಕ್ಷೇಮದಿಂದಿರುವುದು, ಇವೆಲ್ಲಾ ಸೇರಿರುತ್ತವೆ. ಇವು ಪ್ರಬಲ ಪ್ರೋತ್ಸಾಹಕ ಅಂಶಗಳು. ಜನರಿಗೆ ಬೇಕಾದ್ದು ಇವೇ. ಸಾಮಾನ್ಯ ವ್ಯಕ್ತಿಗಳಲ್ಲದವರ ಕತೆ ಬೇರೇಯೇ ಇರಬಹುದು, ಅದು ಇಲ್ಲಿ ಪ್ರಸ್ತುತವಲ್ಲ. ಈ ಗುರಿಗಳು ವ್ಯಕ್ತಿಯ ಹುಮ್ಮಸ್ಸನ್ನು ಮತ್ತು ಕ್ರೀಯಾಶೀಲತೆಯನ್ನು ಹೆಚ್ಚಿಸುತ್ತವೆ. ಕೆಲಸವು ಕಠಿಣವಿರಬಹುದು, ಕೆಲವೊಮ್ಮೆ ಬೇಸರ ತರಿಸಬಹುದು, ಆದರೆ ಹುಮ್ಮಸ್ಸು ಶೂನ್ಯವಾಗುವುದಿಲ್ಲ. ಮಾನವತೆಯ ಉದಾತ್ತ ಪ್ರತೀಕಗಳು ಇವು. ಇವೆಲ್ಲಾ ನಿಜವಲ್ಲವೆಂದು ಒಂದು ಕ್ಷಣ ಭಾವಿಸಿಕೊಳ್ಳಿ, ಸುಭದ್ರತೆಯು ಪ್ರೋತ್ಸಾಹಕ ಅಂಶವಲ್ಲವೆಂದಿಟ್ಟುಕೊಳ್ಳಿ, ಹಾಗಿದ್ದರೆ ಜೀವವಿಮಾ ಪಾಲಿಸಿಗಳನ್ನು ಮಾರಲು ನಿಮ್ಮ ಬಳಿ ಏಜೆಂಟರು ಬರುತ್ತಾರಲ್ಲ ಏಕೆ, ಎಂದು ಯೋಚಿಸಿ.

ಇನ್ನೊಂದು ವಿಷಯವಿದೆ: ಸುಭದ್ರತೆಯು ಸ್ಥಗಿತವಾದ ಸ್ಥಿತಿಯಲ್ಲ. ಅದು ದೊರೆತ ಮೇಲೆ ನಾವು ಮಾಡಬೇಕಾದ್ದೇನೂ ಇಲ್ಲವೆಂಬ ಭಾವ ಬರುವುದಿಲ್ಲ. ಬದಲಾಗಿ, ಅದನ್ನು ಉಳಿಸಿಕೊಳ್ಳಲು ಇಡೀ ಸಮಾಜದ ಐಕ್ಯ ದುಡಿಮೆಯ ಅಗತ್ಯವಿರುತ್ತದೆ. ಸಾಕಷ್ಟು ಜನ ಇಂತಹ ಐಕ್ಯ ದುಡಿಮೆಗೆ ವಿಮುಖರಾದರೆ ಸುಭದ್ರತೆಯು ಮಾಯವಾಗುತ್ತದೆ. ಇದು ವೈಯ್ಯಕ್ತಿಕ ನೆಲೆಯಲ್ಲೂ ನಿಜ. ಮೇಲ್ಕಾಣಿಸಿದ ಲ್ಯಾಂಗ್‌ಮೂಯಿರ್ ಮತ್ತು ಕಾರ್ಮೈಕೇಲ್ ಎಂಬಿಬ್ಬರು ಮೇಧಾವಿಗಳನ್ನೇ ತೆಗೆದುಕೊಳ್ಳಿ: ಅವರಿಗೆ ಸುಭದ್ರತೆಯ ಗೋಜೇನೂ ಇಲ್ಲವೆ? ಅದನ್ನು ಪಡೆದೇ ಅವರು ಮಾತನಾಡುವುದು! ಅದರ ಸ್ವರೂಪವೇನು? ಸಂಬಳದ ಒಪ್ಪಂದ ಇದ್ದೇ ಇರುತ್ತದೆ, ಅದನ್ನು ಕೊನೆಗೊಳಿಸಲು ಎರಡು ಪಕ್ಷಗಳಿಗೂ ಸಾಧ್ಯ. ಅವರಿಗೆ ಸುಭದ್ರತೆ ದೊರೆಯಬೇಕಾದರೆ ಅವರನ್ನು ಕೆಲಸದಿಂದ ಕಿತ್ತುಹಾಕದಂತಿರಬೇಕು, ಅದಕ್ಕಾಗಿ ಇವರು ಶ್ರದ್ಧೆಯಿಂದ ಕೆಲಸ ಮಾಡಬೇಕು. ಅಂದರೆ, ಮಾಲೀಕನಿಗೆ ಸೇವೆ ಒದಗಿಸಬೇಕು. ಆದರೆ ಪಾಪ, ಎಂತಹ ಹೀನಾಯ ಸೇವೆ! ಸೇವೆ ಒದಗಿಸಲಿಲ್ಲವೋ, ಸುಭದ್ರತೆ ಕಳಚಿಬಿತ್ತೆಂದೇ ಅರ್ಥ. ಬೇರೆಲ್ಲೋ ಹೋಗಿ ಸೇವೆ ಸಲ್ಲಿಸುತ್ತಾ ಸುಭದ್ರತೆ ಪಡೆದುಕೊಳ್ಳಬೇಕು! ಆದ್ದರಿಂದ ಇಂದು ಮತ್ತು ನಾಳೆ ಸುಭದ್ರತೆ ಇರುತ್ತದೆಂಬುದು ದುಡಿಮೆ ಮಾಡಲು ಪ್ರೇರಿಸುತ್ತಲೇ ಇರುತ್ತದೆ.

ಈಗ ಮುಂದಿನ ಹಂತಕ್ಕೆ ಹೋಗೋಣ: ಸುಭದ್ರತೆಯು ಒಂದು ಪ್ರೋತ್ಸಾಹಕ ಅಂಶ, ಅದನ್ನು ಹಾಗೆಯೇ ಉಳಿಸಬೇಕು, ಎಂಬುದು ನಿಜವಾದರೆ ಅದನ್ನು ಪಡೆಯಲು ನಾವು ಯತ್ನಿಸಬಹುದು ಮತ್ತು ಪಡೆದಾದ ಮೇಲೆ ಅದನ್ನು ಉಳಿಸಿಕೊಳ್ಳಲು ಮುಂದಾಗಬಹುದು ಎಂದರ್ಥ. ಇದು ನಿಜವಾದರೆ, ಸುಭದ್ರತೆಯು ಪ್ರೋತ್ಸಾಹಕ ಅಂಶಕ್ಕೆ ಕುತ್ತುಂಟುಮಾಡುತ್ತದೆಂಬ ಮಾತು, ಅದು ಸಾರ್ವತ್ರಿಕ ಮೈಗಳ್ಳತನಕ್ಕೆ ಕಾರಣವಾಗುತ್ತದೆಂಬ ಮಾತು, ಹೇಗೆ ತಾನೆ ಸರಿಯಾದೀತು? ಪೂರ್ಣಪ್ರಮಾಣದ ಉದ್ಯೋಗ ಮತ್ತು ವಾರಕ್ಕೆ 34 ಗಂಟೆಗಳ ದುಡಿಮೆ ಎಂಬುದು ದುಡಿಮೆಗೆ ಹಚ್ಚುತ್ತವೆಯೇ ಹೊರತು ದುಡಿಮೆಯನ್ನು ಹೀಗಳೆಯುವುದಿಲ್ಲ. ಅಲ್ಲದೆ, ಅಂತಹ ಗುರಿಗಳು ಸಾಮುದಾಯಕವಾಗಬಲ್ಲವು. ಆಗ ಅವಕ್ಕೆ ಇನ್ನೂ ಹೆಚ್ಚು ಶಕ್ತಿ ತುಂಬಿಬರುತ್ತದೆ, ಇನ್ನೂ ಹೆಚ್ಚು ಸಾರ್ವತ್ರಿಕ ಪ್ರೋತ್ಸಾಹದಾಯಕ ಅಂಶಗಳಾಗುತ್ತವೆ. ಉಚ್ಚಸ್ಥಾನ ಮತ್ತು ಶ್ರೇಯಸ್ಸು ಗಳಿಸಲು "ಕೊಚ್ಚೆಯಿಂದ ಎದ್ದುಬರುವ" ಪ್ರಮೇಯ ಯಾರಿಗೂ ಇರುವುದಿಲ್ಲ.

ಹೀಗಿರುವಾಗ, ಸುಭದ್ರತೆಯು ಮೈಗಳ್ಳತನಕ್ಕೆ ನಮ್ಮನ್ನು ಕೊಂಡೊಯ್ಯುತ್ತದೆಂಬ ವಾದ ಹುಟ್ಟಿಕೊಂಡದ್ದಾದರೂ ಹೇಗೆ? ಅದು ಭಾಗಶಃ ಯಾರೋ ಹುಟ್ಟುಹಾಕಿದ ಕಲ್ಪನೆ,

ಆದರೆ ಆ ಕಲ್ಪನೆಗೆ ಸಂವಾದಿಯಾದೊಂದು ಸಾಮಾಜಿಕ ಸಂಗತಿ ನಮ್ಮಲ್ಲಿದೆ. ಮೈಗಳ್ಳತನ ಮತ್ತು ಸುಭದ್ರತೆಗಳೆರಡೂ ಜೊತೆಜೊತೆಯಾಗಿ ನಮ್ಮ ಸಮಾಜದಲ್ಲಿರುವುದೆಲ್ಲಿ? ಉತ್ತರ ಸರಳ: ವಿರಾಮದಿಂದಿರುವ ವರ್ಗವಿದೆಯಲ್ಲ, ಅಲ್ಲಿ ಮಾತ್ರ ಇವೆರಡೂ ಉಂಟು. ಈ ವರ್ಗದವರು ಹತ್ತಾರು ವಾಣಿಜ್ಯೋದ್ದಿಮೆಗಳಲ್ಲಿ ಸಾಕಷ್ಟು ಹಣವನ್ನು ಹೂಡಿದ್ದಾರೆ, ಅದರಿಂದ ಆರಾಮದಿಂದ ಜೀವನ ಸಾಗಿಸುತ್ತಾರೆ. ಅಥವಾ ಹೂಡಿಕೆಯ ಮೇಲಿನ ಬಡ್ಡಿಯೇ ಅವರಿಗೆ ಸಾಕು. ಅವರ ಆದಾಯವು "ಸಂಪಾದನೆ ಮಾಡಿಲ್ಲದ ಆದಾಯ". ಅಂದರೆ, ಅದನ್ನು ಪಡೆಯುವವರು ಅದಕ್ಕಾಗಿ ದುಡಿಯಬೇಕಿಲ್ಲ. ಅವರಲ್ಲಿ ಸುಭದ್ರತೆ ಮತ್ತು ಮೈಗಳ್ಳತನ ಚೆನ್ನಾಗಿ ಮೈಗೂಡಿವೆ. ಆದರೆ ಅದು ಬೇರೆಯವರ ಮೈಗಳ್ಳತನದ ಸನ್ನಿವೇಶದಲ್ಲಿ ಹೊಂದಬಹುದಾದ ಸವಲತ್ತಲ್ಲ. ಆ ಬೇರೆಯವರು ತಮ್ಮ ಜೀವನ ಹೊರೆಯಲು ಮತ್ತು ಭಾಗಶಃ ಚೆಕ್‌ಗಳಿಗೆ ಸಹಿ ಮಾಡುವ ಒಂದೇ ಉದ್ಯೋಗ ಹೊಂದಿದ್ದಾರಲ್ಲ ಅವರ ಜೀವನ ಹೊರೆಯಲು ದುಡಿಯಬೇಕು.

ಆದ್ದರಿಂದ ಸುಭದ್ರತೆಯು ಮೈಗಳ್ಳತನಕ್ಕೆ ಕಾರಣವಾಗಬಹುದಾದಂತಹ ಒಂದು ಸನ್ನಿವೇಶವಿದೆ, ಅದು ಒಂದು ಸಾಮಾಜಿಕ ವರ್ಗದ್ದು. ಈ ಐತಿಹ್ಯವಿದೆಯಲ್ಲ, ಸುಭದ್ರತೆಯು ಒಳ್ಳೆಯದಲ್ಲ, ಅದು ಜನರನ್ನು ಸೋಮಾರಿಗಳನ್ನಾಗಿಸುತ್ತದೆ, ಎಂಬುದು, ಅದನ್ನು ನೀಗಿಸಲು ಒಂದು ತುರ್ತು ಕ್ರಮ ಅಗತ್ಯವಿದೆ: ಚೆಕ್‌ಗಳಿಗೆ ಸಹಿ ಮಾಡಿಕೊಳ್ಳುವ ಒಂದೇ ಉದ್ಯೋಗ ಹೊಂದಿರುವವರ ಸುಭದ್ರತೆಯನ್ನು ಕದಡಿ ಅವರೂ ಸ್ವಲ್ಪ ದುಡಿಮೆಯಲ್ಲಿ ತೊಡಗುವಂತೆ ಮಾಡುವುದು. ಅತಿಸಾಮಾನ್ಯರು ಬೇಯಿಸಿಕೊಳ್ಳುವ ಕೂಳನ್ನು ಅವರೂ ಸ್ವಲ್ಪ ಬೇಯಿಸಿಕೊಳ್ಳಲಿ: ದುಡಿಯುವವರಿಗೆ ಪೂರ್ಣರೂಪದ ಉದ್ಯೋಗ ಮತ್ತು ವಾರಕ್ಕೆ 34 ಗಂಟೆಯ ದುಡಿಮೆ ಪ್ರೋತ್ಸಾಹದಾಯಕ ಅಂಶಗಳಾಗಿರುವುದು ಬೇಡ, ಅಂತಹ ಸುಭದ್ರತೆಯು ಹಾನಿಕಾರಕ ಎನ್ನುವುದಾದರೆ, ಮೊಟ್ಟಮೊದಲು ನಾವು ಅಭದ್ರತೆಯ ಸೌಭಾಗ್ಯವನ್ನು ಈ ವಿರಾಮದ ವರ್ಗಕ್ಕೆ ಕಲ್ಪಿಸಿಕೊಡೋಣ. ದುಡಿಮೆ ಮಾಡಿ ಸಂಪಾದನೆ ಮಾಡಿಲ್ಲದ ಅವರ ಆದಾಯದ ಮೇಲೆ ತೆರಿಗೆಯ ಭಾರ ಹೊರಿಸೋಣ. ಬೇರೆಯವರ ಪ್ರಾಮಾಣಿಕ ದುಡಿಮೆಯನ್ನು ಅಷ್ಟು ಶ್ಲಾಘಿಸುತ್ತಾರಲ್ಲ, ಅವರಿಗೂ ಪ್ರಾಮಾಣಿಕ ದುಡಿಮೆಯ ರುಚಿಯನ್ನು ತೋರಿಸೋಣ; ಅದೆಷ್ಟು ಚೆನ್ನಾಗಿ ಬಾಳುತ್ತಾರೋ ನೋಡೋಣವಂತೆ. ನಾವು ಹೀಗೆ ಮಾಡಿದೆವೆನ್ನಿ, ಹಿಂದೆಂದೂ ಕಾಣದಂತಹ ಹುಯಿಲನ್ನು ಈ ವಿರಾಮದ ವರ್ಗ ಎಬ್ಬಿಸುವುದು ಖಂಡಿತ: ಅವರ ಪರವಾಗಿ ಬರೆದು ತತ್ವ ಹೇಳುವ ಪತ್ರಿಕೆಗಳ ಸಂಪಾದಕರು, ವ್ಯಾಖ್ಯಾನಕಾರರು, ಅಂಕಣಕಾರರು, ಎಲ್ಲಾ ಒಂದೇ ದಿನದಲ್ಲಿ ಸುಭದ್ರತೆಯ ಮಹತ್ವವನ್ನು ಸಾರಲು ಮುಂದಾಗುತ್ತಾರೆ, ಅದು ಸ್ವಾತಂತ್ರ್ಯಕ್ಕಿಂತಲೂ ಹೆಚ್ಚು ಮುಖ್ಯವಾದದ್ದೆಂದು ಘೋಷಿಸುತ್ತಾರೆ, ಮತ್ತು ಕೆಲವರಲ್ಲಿಯಾದರೂ ಮೈಗಳ್ಳತನವು ಇರಬೇಕಾದ್ದು ಸಮಾಜಕ್ಕೆ ಭೂಷಣ ತರುವ ಆಭರಣವೆಂದು ಹೇಳಲಾರಂಭಿಸುತ್ತಾರೆ; ತನ್ನ ಹಿಟ್ಟು ತಾನೇ ತೊಳೆಸಿಕೊಳ್ಳುವುದು ಒಳ್ಳೆಯ ಆಟವೆಂದು ಅವರಿಗೆ ಆಗ ತಿಳಿಯುತ್ತದೆ.

ಉದ್ದಕ್ಕೂ ನಾವು ಹಲವು ಐತಿಹ್ಯಗಳನ್ನು ಪರಾಮರ್ಶೆ ಮಾಡುತ್ತಾ ಬಂದಿದ್ದೇವೆ. ಅವುಗಳಲ್ಲಿ ವಿಶೇಷವಾಗಿ ಉಪಯುಕ್ತವಾದಂತಹ ಒಂದನ್ನು ಆಳುವ ಜನ ಸೃಷ್ಟಿಸಿಕೊಂಡಿದ್ದಾರೆ. ಸ್ವಾತಂತ್ರ್ಯ ಮತ್ತು ಸುಕ್ಷೇಮಗಳೆರಡೂ ಒಟ್ಟಿಗೆ ನಮಗೆ

ಸಿಗಲಾರವೆಂಬುದೇ ಅದು. ಸಮಾಜವನ್ನು ಆಳುವವರು ತಮ್ಮ ಸ್ವಾತಂತ್ರ್ಯ ಮತ್ತು ಸುಭದ್ರತೆಗಳನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದಾರೆ, ನಮ್ಮವನ್ನಲ್ಲ. ನಾವು ಸ್ವತಂತ್ರರಾಗಿರಲು ಇಚ್ಛಿಸುತ್ತೇವೆಂದು ಹೇಳಿದರೆ ಅವರ ಉತ್ತರ 'ನಾವು ಸುಕ್ಷೇಮದಿಂದಿರಲು ಆಶಿಸುತ್ತೇವೆ' ಎಂಬುದು; ನಾವು ಸುಕ್ಷೇಮದಿಂದಿರಲು ಇಚ್ಛಿಸುತ್ತೇವೆಂದು ಹೇಳಿದರೆ ಅವರ ಉತ್ತರ 'ನಾವು ಸ್ವತಂತ್ರರಾಗಿರಲು ಆಶಿಸುತ್ತೇವೆ' ಎಂಬುದು. ಅಂದರೆ, ಅವರ ಸ್ವಾತಂತ್ರ್ಯ ಮತ್ತು ಅವರ ಸುಭದ್ರತೆ ಜೊತೆಜೊತೆಯಲ್ಲಿ ಹೊಂದಿಕೊಂಡು ಸಾಗಬಹುದು, ಆದರೆ ನಮ್ಮ ಸ್ವಾತಂತ್ರ್ಯ ಮತ್ತು ನಮ್ಮ ಸುಭದ್ರತೆ ಜೊತೆಜೊತೆಯಲ್ಲಿ ಹೊಂದಿಕೊಂಡು ಸಾಗಲಾರವು. ಅದು ನಿಜವೇ ಇರಬೇಕೆಂದು ತೋರುತ್ತದೆ. ಹಾಗಿದ್ದರೆ, ಇಂತಹ ಸಿದ್ಧಾಂತವನ್ನು ಪ್ರಚಾರಮಾಡುವ 'ಮೇಧಾವಿಗಳು', ವರ್ಗಗಳ ನಡುವೆ ಸಂಘರ್ಷವನ್ನು ಹತ್ತಿಕ್ಕುತ್ತಿದ್ದಾರೆಂದು ಬೇರೆಯವರ ಮೇಲೆ ಆಪಾದನೆ ಹೊರಿಸುವುದು ಬೇಡ. ಈ ಸಂಘರ್ಷವು ಅವರೇ ಹಾಡುವ ಹಾಡಿನ ಪಲ್ಲವಿಯಾಗಿದೆ. ಅದಕ್ಕೇನೋ ಒಳ್ಳೆಯ ರಾಗ ಸಂಯೋಜನೆ ಮಾಡಿಬಿಟ್ಟರೆ ಎಲ್ಲವನ್ನೂ ಮುಚ್ಚಿಹಾಕಬಹುದೆಂಬುದು ಅವರ ಭ್ರಾಂತಿ. ವರ್ಗ ಸಂಘರ್ಷಕ್ಕೆ ಕಾರಣವಿದೆ, ಆದ್ದರಿಂದ ಸಂಘರ್ಷವಿರುತ್ತದೆ. ತಮ್ಮ ಹಿತಕ್ಕಾಗಿ ಸಂಘರ್ಷವು ಅವರು ಬೇಡವೆಂದು ಪ್ರಚಾರ ಮಾಡಿದರೆ ದುಡಿಯುವ ಜನ ಮಂಕುಬೂದಿಗೆ ಶರಣಾಗುವುದಿಲ್ಲ.

* * *

ಈ ಅಧ್ಯಾಯದ ಆರಂಭದಲ್ಲಿ ಹೇಳಿದ ಮಾತು ನೆನೆಸಿಕೊಳ್ಳೋಣ: ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವ, ಇವು ತ್ರಿಮೂರ್ತಿಗಳಂತಿರುವ ಒಂದು ಅಂಗ. ಹಾಗಿರುವಾಗ ಸುರಕ್ಷತೆ ಎಂಬುದು ಆ ಮೂರನ್ನೂ ಒಳಗೊಂಡಿರುವಂತಿರಬೇಕು. ಅದನ್ನು ಸುಲಭವಾಗಿ ತಿಳಿಯಲು ಸುರಕ್ಷತೆ ಇಲ್ಲದ ಸ್ಥಿತಿಗಳನ್ನೆಲ್ಲಾ ಮೆಲುಕು ಹಾಕಿ ನೋಡಿ. ಅವು ಮೂರು ವಿಧಗಳಾಗಿ ವಿಂಗಡಣೆಯಾಗುತ್ತವೆ: (ಅ) ವೈಚಾರಿಕವಾಗಿ ಸ್ವತಂತ್ರವಾಗಿರುವ ಬದಲು ಅವೈಚಾರಿಕತೆಯಿಂದ ಸೀಮಿತಗೊಂಡಾಗ ಜನರು ಸುರಕ್ಷತೆ ಕಳೆದುಕೊಳ್ಳುತ್ತಾರೆ; (ಆ) ಜೀವನದ ಸನ್ನಿವೇಶಗಳು ವಿಪರೀತ ಅಸಮಾನತೆಯಿಂದ ಕೂಡಿದ್ದಾಗ, ಮತ್ತು (ಇ) ಸಾರ್ವತ್ರಿಕ ಸೋದರತ್ವದ ಅಭಾವದಿಂದಾಗಿ ಪಂಗಡಗಳ ನಡುವಣ ಸಂಘರ್ಷಗಳು ಜೀವಕ್ಕೆ ಹಾನಿಯುಂಟುಮಾಡುವಂತಿದ್ದಾಗ ಹಾಗೂ ಇವೆಲ್ಲಾ ಜೀವನದ ಸಾಧನೆಗಳನ್ನು ಹಾಳುಗೆಡಹುವಂತಿದ್ದಾಗ ಸುರಕ್ಷತೆಯನ್ನು ಕಳೆದುಕೊಳ್ಳುತ್ತಾರೆ. ಎಂದಾದರೂ ಜನರು ಸ್ವತಂತ್ರರಾಗಿರಲು, ಸಮಾನತೆಯಿಂದ ಬಾಳಲು, ಮತ್ತು ಸೋದರ-ಸೋದರಿಯರಂತೆ ಜೀವಿಸಲು ಸಾಧ್ಯವಾಗುವುದಾದರೆ ಅಂದು ಸುರಕ್ಷತೆಯಿಂದ ಇರುವುದೆಂದರೆ ಏನೆಂದು ತಿಳಿದಾರು.

ಈ ತ್ರಿಮೂರ್ತಿವರ್ಗವು ಶ್ಲಾಘನೀಯವಾದ್ದು. ಅದರ ಪ್ರತಿಪಾದನೆಗಳನ್ನು ಕುತಂತ್ರಗಳಿಂದ ತಿರುಚುವುದು ಸಾಕಷ್ಟು ನಡೆದಿದೆ; ಆದರೆ ಆ ಸಾರ್ವಭೌಮ ಸಾಮಾಜಿಕ ಆದರ್ಶಗಳ ರಮ್ಯತೆಯು ಕಡಿಮೆಯಾಗಿಲ್ಲ. ಅವುಗಳ ಪ್ರಮುಖ ಸಾರವು ಮಹತ್ತರವಾದ್ದು, ಗಟ್ಟಿಯಾದ್ದು ಮತ್ತು ಹುಚ್ಚಾಪಟ್ಟೆ ಬದಲಿಸಲು ಸಾಧ್ಯವಿಲ್ಲದಂಥದು. ನಮ್ಮ ನಡುವೆ ಅವು ಕಡಿಮೆಯಾದಷ್ಟೂ ಅವುಗಳ ಮೌಲಿಕತೆಯ ಅರಿವು ಹೆಚ್ಚುತ್ತದೆ. ಸಿನಿಕತನವು ಆ ಆದರ್ಶ ಮೌಲ್ಯಗಳ ಹೊಳಪನ್ನು ಮಾಸಲು ಬಿಡಬಾರದು.

ಮೌಲ್ಯಗಳನ್ನು ತುಳಿದುಹಾಕುವವರ ಬಾಯಲ್ಲಿ ಅವುಗಳ ಹೆಸರುಗಳು ನಿರರ್ಗಳವಾಗಿ ಹೊರಬರುತ್ತಿರುವುದುಂಟು, ಆದರೆ ಅವನ್ನು ನೈಜವಾಗಿ ನಂಬುವವರು ಮೌನವಾಗಿ ಅವನ್ನು ಪಾಲಿಸಲು ಯತ್ನಿಸುತ್ತಾರೆ. ಅವರ ಹೃದಯಗಳಲ್ಲಿ ಅವು ಸ್ಥಿರವಾಗಿ ನೆಲೆಗೊಂಡಿವೆ. ಅವಕ್ಕೆ ಬಾಯುಪಚಾರ ಹೇಳುವವರಿದ್ದಾರಲ್ಲಾ ಏಕೆ? ಅವಕ್ಕೆ ಎರಡು ಬಗೆಯುವವರಿದ್ದಾರಲ್ಲಾ, ಏಕೆ? ಏಕೆಂದರೆ, ಎರಡು ಬಣಗಳಿವೆ: ಶೋಷಕರು ಮತ್ತು ಶೋಷಿತರು. ಅವು ಸಂಘರ್ಷ ನಡೆಸುತ್ತಿವೆ. ಶೋಷಣೆಯನ್ನು ಅಂತ್ಯಗೊಳಿಸುವುದರಿಂದ ಮಾತ್ರವೇ ಸಂಘರ್ಷವು ಅಂತ್ಯಗೊಳ್ಳುತ್ತದೆ. ಶೋಷಣೆಯು ಅಂತ್ಯಗೊಳ್ಳುವುದರ ಆರಂಭವು ನೈಜ ಸೋದರತ್ವವು ಆರಂಭವಾಗುವ ಕಾಲವೂ ಆಗುತ್ತದೆ; ಅಸಮಾನ ಅಧಿಕಾರದ ಅಂತ್ಯವು ಸಮಾನತೆಯ ಆರಂಭದ ಕಾಲವಾಗುತ್ತದೆ ಮತ್ತು ಕೆಲವೇ ಜನರ ಅಸೀಮಿತ ಸೌಲಭ್ಯಗಳ ಅಂತ್ಯವು ಸಮಸ್ತರ ನೈಜ ಸ್ವಾತಂತ್ರ್ಯದ ಗಳಿಕೆಯ ಕಾಲವಾಗುತ್ತದೆ.

ಈ ಮೂರು ಆದರ್ಶಗಳ ಶತ್ರುಗಳು ಅವನ್ನು ಮುಚ್ಚಿಹಾಕಲು ಅಥವಾ ತಪ್ಪಾಗಿ ಅರ್ಥೈಸಲು ಎಷ್ಟೇ ಹೆಣಗಿದರೂ ಅವು ನಿಜಕ್ಕೂ ಏನಾಗಿವೆಯೆಂಬುದನ್ನು ನಮ್ಮ ಮನಸ್ಸಿನಿಂದ ಅಳಿಸಿಹಾಕಲಾರರು. ಆ ಆದರ್ಶಗಳನ್ನು ಕೆಲವೇಳೆ ನಾವು ತಪ್ಪಾಗಿ ಅರ್ಥೈಸಿಕೊಂಡರೂ ತಕ್ಷಣ ಆ ತಪ್ಪು ನಮಗೆ ಅರ್ಥವಾಗಿಬಿಡುತ್ತದೆ, ಏಕೆಂದರೆ ನಮ್ಮ ಆಶಯಗಳೇ ತಾರ್ಕಿಕವಾಗಿ ನಮಗೆ ಹಾದಿ ತೋರುತ್ತವೆ. ಇದೊಂದು ಬಹಳ ಆಪ್ತವಾದ ವಿರೋಧಾಭಾಸ: ಅಂತಿಮ ಸಾಮಾಜಿಕ ಸತ್ಯಗಳನ್ನು ನಾವು ತಪ್ಪಾಗಿ ತಿಳಿದಷ್ಟೂ ಅವನ್ನು ನಾವು ನೈಜವಾಗಿ ತಿಳಿಯಲು ಉದ್ಯುಕ್ತರಾಗುತ್ತೇವೆ; ಆಳುವ ಮಂದಿ ಹೆಚ್ಚೆಚ್ಚು ವಂಚಿಸಿದಷ್ಟೂ ನಾವು ವಂಚನೆಯಿಂದ ಮುಕ್ತರಾಗಲು ಎಳಸುತ್ತೇವೆ. ಹಾಗಾಗದಿರುವ ಸಂಭವ ಕಡಿಮೆ, ಆದರೆ ಇಲ್ಲವೇ ಇಲ್ಲವೆನ್ನಲಾಗದು. ಉದಾಹರಣೆಗೆ, ತರ್ಕಮತಿಗೆ ಪಾರ್ಶ್ವವಾಯು ತಗುಲಿತೆನ್ನಿ, ಆಗ ಮುಕ್ತಗೊಳ್ಳುವ ಸಂಭವ ಕಡಿಮೆ. ಜರ್ಮನಿಯಲ್ಲಿ ನಾಜ಼ಿಗಳ ಆಡಳಿತವು ಅಂತಹ ಪರಿಸ್ಥಿತಿಯನ್ನು ಉಂಟುಮಾಡಿತ್ತು.

ಈ ಮೂರು ಆದರ್ಶಗಳ ಬಗೆಗೆ ಇನ್ನೊಂದಂಶವನ್ನು ಗುರುತಿಸಬೇಕು: ಅವು ಸದಾ ಒಟ್ಟಾಗಿರುತ್ತವೆ; ಒಂದು ಇನ್ನೊಂದಕ್ಕೆ ಲಗತ್ತಿಸಿಕೊಂಡಿರುತ್ತದೆ. ಒಂದರ ಅರ್ಥದ ವ್ಯಾಪ್ತಿಯು ಇನ್ನೊಂದನ್ನು ಒಳಗೊಳ್ಳುತ್ತದೆ. ಅವುಗಳಲ್ಲಿ ಯಾವೊಂದನ್ನೂ ಬೇರೆಯದರಿಂದ ಸಂಪೂರ್ಣವಾಗಿ ಪ್ರತ್ಯೇಕಿಸಲಾಗುವುದಿಲ್ಲ. ಅವೆಲ್ಲವನ್ನೂ ಒಟ್ಟಾಗಿಯೇ ಗ್ರಹಿಸುವುದು ಸಹಜ ಮತ್ತು ಅನಿವಾರ್ಯ. ಒಂದು ಉದಾಹರಣೆಯನ್ನು ನೋಡೋಣ: ಒಂದು ಮುಕ್ತ ಸಮಾಜವಿದೆಯೆನ್ನೋಣ; ಅದರಲ್ಲಿ ಕೆಲವರೋ ಹಲವರೋ ಸ್ವಾತಂತ್ರ್ಯದ ಕನಿಷ್ಠ ಅವಕಾಶ ಮತ್ತು ಸೌಲಭ್ಯ ಹೊಂದಿರದೆ ಇರಲು ಸಾಧ್ಯವೆ? ಖಂಡಿತ ಸಾಧ್ಯವಿಲ್ಲ. ಅಂದರೆ, ಮುಕ್ತ ಸಮಾಜವೊಂದರಲ್ಲಿ ಎಲ್ಲರೂ ಸ್ವಾತಂತ್ರ್ಯದ ಕನಿಷ್ಠ ಸವಲತ್ತು ಹೊಂದಿದ್ದರೆ ಆ ಸವಲತ್ತು ಹೊಂದಿರುವುದರಲ್ಲಿ ಎಲ್ಲರೂ ಸಮಾನರಾಗಿರುತ್ತಾರೆಂದರ್ಥ. ಹಾಗೆ ಸಮಾನವಾಗಿ ಸವಲತ್ತು ಹೊಂದಿರುವುದು ಅದೊಂದು ಮುಕ್ತ ಸಮಾಜವೆಂಬುದರ ದ್ಯೋತಕ. ಬೇರೊಂದು ಸಾಮ್ಯತೆಯನ್ನು ಪರೀಕ್ಷಿಸೋಣ: ಸಮಾಜದ ಒಂದಿಷ್ಟು ಮಂದಿಯ ಚಟುವಟಿಕೆ ಮತ್ತು ವ್ಯವಹಾರಗಳು ಬೇರೆಷ್ಟೋ ಮಂದಿಯ ಆಂತರಿಕ ಅಗತ್ಯಗಳ ಪೂರೈಕೆಗೆ ಪ್ರತಿಬಂಧಕ ಒಡ್ಡುವಂತಿದ್ದರೆ ಅದು ಮುಕ್ತ ಸಮಾಜವೆನಿಸಿಕೊಳ್ಳುತ್ತದೆಯೇ? ಖಂಡಿತ ಇಲ್ಲ. ಹಾಗಿದ್ದರೆ ನಿಜವಾದ

ಮುಕ್ತ ಸಮಾಜದ ಲಕ್ಷಣಗಳೇನು? ಸಮಾಜದಲ್ಲಿ ಎಲ್ಲರೂ ತಮ್ಮತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವಂತಿರಬೇಕು, ಅದಕ್ಕೆ ಇತರರು ಯಾರೂ ಭಂಗ ತರುವಂತಿರಕೂಡದು; ಬದಲಾಗಿ, ಇತರರು ಸಹ ಅದಕ್ಕೆ ಸಹಾಯ ನೀಡುವಂತಿರಬೇಕು. ಪೂರ್ಣಪ್ರಮಾಣದಲ್ಲಿ ಸಹಕಾರವೆಂಬುದು ಅದೇ. ಆಗಲೇ ಅಲ್ಲಿ ಭ್ರಾತೃತ್ವವಿದೆ ಎನ್ನಲು ಯೋಗ್ಯ. ಅಂತಹ ಸೋದರತ್ವವಿರುವುದೇ ಅದು ಮುಕ್ತ ಸಮಾಜವೆನ್ನಲು ಪುರಾವೆ. ಸಮಾನತೆ ಮತ್ತು ಭ್ರಾತೃತ್ವಗಳ ಬಗ್ಗೆ ಹೇಳುವುದಾದರೆ, ಅವುಗಳ ಪರಸ್ಪರ ಸಂಬಂಧವು ಅತಿಸ್ಪಷ್ಟವಾಗಿದೆ, ಅದಕ್ಕೆ ವಿವರಣೆಯೇ ಬೇಕಿಲ್ಲ. ಏಕೆಂದರೆ, ಮೂಲಭೂತವಾಗಿ ಅಸಮಾನ ಜನರಿದ್ದರೆ ಅವರ ನಡತೆ ಭ್ರಾತೃತ್ವವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ ಮತ್ತು ಸಮಾನತೆ ಇರುವ ಜನರ ನಡುವೆ ಭ್ರಾತೃತ್ವವಿಲ್ಲದ ಸಂಭವವೂ ಇಲ್ಲ.

ಹೀಗೆ ಈ ಮೂರು ಅದರ್ಶಗಳು ನಿಕಟವಾಗಿ ಪರಸ್ಪರ ಸಂಬಂಧಿಸಿವೆಯಾದರೂ ಔದ್ಯಮಿಕ ಸಮಾಜದ ಬೆಳವಣಿಗೆಯು ಅವನ್ನು ತುಂಡರಿಸಿದೆ. ಆ ಆದರ್ಶಗಳನ್ನು ತಿಳಿಯಹೊರಟರೆ ಅವುಗಳ ಸಾರವು ಸುಲಭಗ್ರಾಹ್ಯ; ಆದರೆ ಔದ್ಯಮಿಕ ಸಮಾಜದ ಬೆಳವಣಿಗೆಯು ಅವನ್ನು ಪೇಲವಗೊಳಿಸಿದೆ. ಈ ಸಮಾಜದಲ್ಲಿ ಒಂದು ವಿಭಾಗದ ಜನರ ಸಾಮಾಜಿಕ ಪಾತ್ರವೇನಿದ್ದರೂ ಬೇರೆಯವರ ದುಡಿಮೆಯಿಂದ ಬರುವ ಲಾಭವನ್ನು ತಮ್ಮದಾಗಿಸಿಕೊಳ್ಳುವುದಷ್ಟೇ ಆಗಿರುತ್ತದೆ. ಅಂಥವರಿಗೆ ಸಮಾನತೆ ಮತ್ತು ಭ್ರಾತೃತ್ವ ಎಂಬುದು ಸ್ವಾಗತಾರ್ಹ ಆದರ್ಶಗಳೆನಿಸಿಯಾವೆ? ಅಂತಹ ನಂಬಿಕೆ ಅವರಲ್ಲಿ ಮೂಡುವುದು ಆಗದ ಮಾತು. ಏಕೆಂದರೆ ಆ ವಿಭಾಗದ ಅಸ್ತಿತ್ವಕ್ಕೆ ಆರ್ಥಿಕ ಸ್ಥಿತಿಯಲ್ಲಿ ಅಸಮಾನತೆಯ ಅಡಿಪಾಯವೇ ಆಧಾರ ಮತ್ತು ಅಸಮಾನತೆಗಳಲ್ಲಿ ಆರ್ಥಿಕ ಅಸಮಾನತೆಯು ಅತಿ ಮುಖ್ಯವಾದ ಅಸಮಾನತೆ. ಲಾಭಕ್ಕಾಗಿ ಸದಾ ಹೊಂಚು ಹಾಕುವ ಈ ಮಂದಿ ಪರಸ್ಪರವಾಗಿ ಸ್ಪರ್ಧೆಗಿಳಿಯುತ್ತಾರೆ. ಅಂತೆಯೇ, ಲಾಭ ಪಡೆಯಲು ಯಾರ ದುಡಿಮೆಯು ಅಗತ್ಯವೋ ಅಂಥವರೊಡನೆಯೂ ಸ್ಪರ್ಧೆಗಿಳಿಯುತ್ತಾರೆ. ಹೀಗಾಗಿ, ಲಾಭಾಕಾಂಕ್ಷಿಗಳಿಗೆ ಸಹಕಾರವೆಂಬುದು ಆನುಷಂಗಿಕ ಮಾತ್ರ; ಅದೇನೂ ಅಷ್ಟು ಪ್ರಮುಖವಾದುದಲ್ಲ. ಅಂತಹ ಸನ್ನಿವೇಶದಲ್ಲಿ ಭ್ರಾತೃತ್ವವು ಅವರಿಗೆ ಒಂದು ಆದರ್ಶವಾಗುವುದಿಲ್ಲ.

ಇಂಥವರ ಮನಃಸ್ಥಿತಿಗೆ ಮರುಕ ಉಂಟಾಗುತ್ತದೆ. ಏಕೆಂದರೆ ಅವರ ಕ್ರಾಂತಿಕಾರಿ ಪ್ರಾಚೀನರು ಇವೇ ಆದರ್ಶಗಳ ಸಾಕ್ಷಾತ್ಕಾರಕ್ಕಾಗಿ ಹೋರಾಟ ನಡೆಸಿದ್ದರು. ಅದಕ್ಕೆ ಆ ಪ್ರಾಚೀನರನ್ನೇ ಮೂದಲಿಸುತ್ತಾರೇನೋ! ಆದರೆ ಆ ಪ್ರಾಚೀನರಿಗೆ "ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ" ಎಂಬ ಘೋಷಣೆಯು ಅದ್ಭುತವಾದ ಅರಿವಿನಿಂದ ಮೂಡಿತ್ತು. ಅಂದಿನ ಊಳಿಗಮಾನ್ಯ ವ್ಯವಸ್ಥೆಯ ಸಮಾಜದ ಶ್ರೀಮಂತರನ್ನು ಉತ್ಪಾಟಿಸಲು ಜನರನ್ನು ಸಂಘಟಿಸುವಾಗ ಈ ಘೋಷಣೆಯು ಪ್ರಭಾವಶಾಲಿಯಾಗಿತ್ತು. ಆ ವ್ಯವಸ್ಥೆಯಡಿ ನಲುಗಿದ್ದವರನ್ನು ಮತ್ತು ಅವರ ಸಂಕಷ್ಟಗಳನ್ನು ಇಡಿಯಾಗಿ ಕ್ರೋಢೀಕರಿಸಿ ಶ್ರೀಮಂತರನ್ನು ಮೂಲೆಗುಂಪು ಮಾಡಿ ಕೇವಲ ನಿಸ್ಸಹಾಯಕರನ್ನಾಗಿಸಲು ಈ ಘೋಷಣೆಯು ಸಮರ್ಥವಾಗಿತ್ತು. ಹಲವು ಕ್ರಾಂತಿಕಾರಿ ಘಟನೆಗಳು ಜರುಗಿದವು ಮತ್ತು ಕಾಲವು ಸಂದಾಗ ಜನಸಾಮಾನ್ಯರು ಮುಯ್ಯಿ ತೀರಿಸಬೇಕಾಯಿತು. ವಿಜಯೀ ಮಧ್ಯಮ ವರ್ಗವು ಮುಯ್ಯನ್ನು ಗುಂಡು ಮತ್ತು ತುಪಾಕಿಗಳಿಂದ ತೀರಿಸಿತು, ಏಕೆಂದರೆ ಸಾಮಾನ್ಯ ನೋಟಿನ ಕಂತೆಗಳು ನಿಷ್ಪ್ರಯೋಜಕವಾಗಿದ್ದವು. ಬ್ರಿಟನ್ನಿನ ಶಿಖರದ ಮೇಲೆ

ತಂಪಾಗಿ ಕೂತು ಟೆನಿಸನ್ ಎಂಬ ಆಂಗ್ಲಕವಿ ಫ್ರಾನ್ಸಿನ ವಿದ್ಯಮಾನಗಳನ್ನು ಕವಿತೆಗಳಲ್ಲಿ ಛೇಡಿಸಿದ್ದ: "ಸೇನ್ ನದಿಯ ಆಸುಪಾಸಿನ ಕೆಂಪು ಮೂರ್ಖ–ಸಿಟ್ಟು" ಎಂದು. ಆದರೆ ಅದು ಮೂರ್ಖತನವೂ ಆಗಿರಲಿಲ್ಲ, ಸಿಟ್ಟೂ ಆಗಿರಲಿಲ್ಲ. ಜನರು ತಮಗೆ ಸಂದಾಯವಾಗಬೇಕಾದ್ದನ್ನು ಪಡೆದುಕೊಳ್ಳಲು ಯತ್ನಿಸಿದರು, ಆದರೆ ಸಾಲಗಾರರು ಅದನ್ನು ಕೊಡಲು ನಿರಾಕರಿಸಿದ್ದರು, ಅಷ್ಟೆ.

ಇಂದಿಗೂ ಆ ಸಾಲಗಾರರು ನಮಗೆ ಸಂದಾಯವಾಗಬೇಕಿದ್ದನ್ನು ಇನ್ನೂ ನೀಡಿಲ್ಲ. ಕೈಗಾರಿಕೋದ್ಯಮ ಬಂಡವಾಳಶಾಹಿಯು ಸುಮಾರು ನೂರೈವತ್ತು ವರ್ಷಗಳಿಂದ ಅಸ್ತಿತ್ವದಲ್ಲಿದೆ. ಮಾನವನ ಉತ್ಪಾದನಾ ಸಾಮರ್ಥ್ಯವನ್ನು ಅದು ಅಗಾಧವಾಗಿ ಹೆಚ್ಚಿಸಿದೆ ಮತ್ತು ಹಿಂದಿನ ಸಾಹಸಗಳನ್ನೆಲ್ಲಾ ಕುಬ್ಜಗೊಳಿಸುವಷ್ಟರ ಮಟ್ಟಿಗೆ ಈಗ ಪರಮಾಣು ಇಂಧನವನ್ನು ಸ್ವಾಧೀನಗೊಳಿಸಿಕೊಂಡಿದೆ. ಇಷ್ಟೆಲ್ಲಾ ಉತ್ಪಾದನಾ ಶಕ್ತಿಯ ವೃದ್ಧಿಯಾಗಿದ್ದಾಗ್ಯೂ, ಪ್ರಪಂಚದ ಸ್ಥಿತಿಗತಿ ಇಂದೇನಾಗಿದೆ? ಯೂರೋಪು ಆ ಕಡೆ ಎಲ್ಲಾ ಧ್ವಂಸವಾಗಿದೆ (1947 ರಲ್ಲಿ ಬರೆದದ್ದು). ಏಷ್ಯಾದ ಬಹುಭಾಗ ಪಾಳುಬಿದ್ದಿದೆ. ಕೋಟಿಗಟ್ಟಲೆ ಜನ ಹಸಿವಿನಿಂದ ಬಳಲುತ್ತಿದ್ದಾರೆ. ಬೇರೆಡೆಯಲ್ಲೂ ಎಷ್ಟೋ ಜನಕ್ಕೆ ಒಪ್ಪತ್ತಿನ ಊಟ ಸಿಕ್ಕಿದರೆ ಸಾಕಾಗಿದೆ. ಔದ್ಯಮಿಕ ಬಂಡವಾಳಶಾಹಿಯು ತನ್ನ 150 ವರ್ಷಗಳ (ಈಗ 200 ವರ್ಷಗಳ) ಚರಿತ್ರೆಯಲ್ಲಿ ಇದೇ ಏನು ಸಾಧಿಸಿದ್ದು! ಅದು ಆರಂಭಗೊಂಡಾಗ ಮಾನವನ ಉತ್ಪಾದನಾ ಸಾಮರ್ಥ್ಯವು ಆವರೆಗಿನ ಮುಂಚಿನ ಸಾಮರ್ಥ್ಯಕ್ಕಿಂತ ಎಷ್ಟೋ ಪಟ್ಟು ಜಾಸ್ತಿ ಆಗಿತ್ತು. ಅದೇ ಈಗ ನೋಡಿದರೆ, ಭೂಮಿಯ ಮೇಲಿನ ಜನರ ಬಹುಭಾಗವು ತನ್ನ ಕನಿಷ್ಠ ಅಗತ್ಯಗಳನ್ನು ಸಹ ಪೂರೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಇಷ್ಟು ಸಾಲದೆಂಬಂತೆ, ಇತ್ತೀಚೆಗಷ್ಟೆ ಮುಕ್ತಾಯವಾದ ಯುದ್ಧದಿಂದುಂಟಾದ ವಿನಾಶದ ಮಧ್ಯೆ ನಾವಿದ್ದೇವೆ. ಮತ್ತೊಮ್ಮೆ ಎಲ್ಲಿ ಯುದ್ಧ ಸಂಭವಿಸಿಬಿಡುತ್ತದೋ ಎಂಬ ಭೀತಿ ನಮ್ಮನ್ನಾವರಿಸುತ್ತಿದೆ. ಮಾರುಕಟ್ಟೆಗಳಿಗಾಗಿ ಹುಡುಕಾಟ, ಕಚ್ಚಾ ಸಾಮಗ್ರಿಗಳಿಗಾಗಿ ಕಚ್ಚಾಟ, ಇವು ಬಂಡವಾಳಶಾಹಿ ರಾಷ್ಟ್ರಗಳನ್ನು ಒಂದು ಶತಮಾನದ ಪರ್ಯಂತ ಪರಸ್ಪರ ಕಾದಾಟದಲ್ಲಿ ತೊಡಗಿಸಿವೆ. ಈಗಲೂ ಕಾದಾಟದ ಕಾರಣಗಳು ಅಂತೆಯೇ ಜೀವಂತವಾಗಿವೆ. ವಸಾಹತುಶಾಹಿಗೆ ತುತ್ತಾದ ದೇಶಗಳಲ್ಲಿ ಈಗ ನವವಸಾಹತುಶಾಹಿಯಡಿಯಲ್ಲಿ ವಿದೇಶಿ ಬಂಡವಾಳದ ಹೂಡಿಕೆ ಮತ್ತು ಲಾಭವನ್ನು ರಕ್ಷಿಸಿಕೊಳ್ಳಲು ಅಲ್ಲಿಯ ಜನಗಳ ಮೇಲಿನ ದಬ್ಬಾಳಿಕೆ ನಿರಂತರವಾಗಿ ನಡೆಯುತ್ತಿದೆ. ಒಂದು ಕಾಲದಲ್ಲಿ ವಸಾಹತುಗಳನ್ನು ಹೊಂದಿದ್ದ ಕೆಲವು ದೇಶಗಳು ಈಗ ತಾವೇ ವಸಾಹತುಗಳ ಮಟ್ಟಕ್ಕಿಳಿದಿವೆ.

ಇತಿಹಾಸದ ಚಲನೆಯು ಸಮತಟ್ಟಾದುದಲ್ಲ. ಆದ್ದರಿಂದ ಸಮಕಾಲೀನ ಇತಿಹಾಸವು ಕಳೆದುಹೋದ ಕಾಲದ ಇತಿಹಾಸದ ಕೆಲವು ಭಾಗಗಳನ್ನು ಹಾಗೆಯೇ ಉಳಿಸಿಕೊಂಡಿದೆ. ಹೀಗಾಗಿ ಇತಿಹಾಸದಲ್ಲಿ ದೊರಕುವ ಕೆಲವು ಸ್ವಾಗತಾರ್ಹ ಸಂಗತಿಗಳನ್ನು ನಾಶಗೈದಿದೆ. ಅದೇ ಫ್ಯಾಸಿಸಂ ದೈತ್ಯಕೂಟ. ಅದೇ ಸಮಯದಲ್ಲಿ, ಕೆಲವು ದೇಶಗಳಲ್ಲಿ (ಭಾರತವೂ ಸೇರಿದಂತೆ) ವಿದೇಶಿ ಬಂಡವಾಳದ ಕಪಿಮುಷ್ಟಿಯನ್ನು ನುಚ್ಚುನೂರು ಮಾಡಲಾಗಿದೆ. ಅಂದು ನುಚ್ಚುನೂರಾದ ಕಪಿಮುಷ್ಟಿಯು ಸದಾಕಾಲಕ್ಕೂ ನಾಶವಾಯಿತೆಂದು

ಭಾವಿಸುವಂತಿಲ್ಲ. ಆ ಅರ್ಥದಲ್ಲಿ, ಆರಾಧ್ಯವಾದ ತ್ರಿಮೂರ್ತಿಗಳ ಆದರ್ಶದ ಸಾಧನೆಯಲ್ಲಿ (ಅಂದರೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳನ್ನು ನೆಲೆಗೊಳಿಸುವಲ್ಲಿ) ಸ್ಪಷ್ಟವಾದ ಮುನ್ನಡೆ ಗಳಿಸಿದ್ದೇವೆ. ಪ್ರಗತಿಯು ಕಷ್ಟಕರವಾಗಿತ್ತು, ಕೆಲವೊಮ್ಮೆ ಹಿಂಸಾತ್ಮಕವಾಗಿತ್ತು; ಆದಾಗ್ಯೂ ಅದು ಪ್ರಗತಿಯೇ ಆಗಿತ್ತು. ನಮ್ಮ ಈ ಕಾಲದ ಜನ ತೊಳಲಿದ್ದೇವೆ, ಬಳಲಿದ್ದೇವೆ. ಆದರೆ ಅದರಿಂದ ನಮ್ಮ ಮುಂದಿನವರಿಗೆ ಲಾಭವೇನೂ ಆಗಿಲ್ಲವೆಂಬುದು ಹುಸಿ ಮಾತಾಗುತ್ತದೆ. ಭವಿಷ್ಯಕ್ಕೆ ನಮ್ಮ ಕಾಣಿಕೆ ನೀಡಿದ್ದೇವೆಂಬ ತೃಪ್ತಿ ಸ್ವಲ್ಪಮಟ್ಟಿಗಾದರೂ ಇದೆ.

ಭರವಸೆ ಎಂಬುದು ಇತಿಹಾಸದಲ್ಲಿ ನಿತ್ಯಸತ್ಯ. ಅದರಿಂದ ಹೊಸ ಭರವಸೆಗಳು ಮೂಡುತ್ತವೆ. ರಾಜರು, ಚಕ್ರವರ್ತಿಗಳು, ಧರ್ಮಾಧ್ಯಕ್ಷರು, ಶ್ರೀಮಂತ ಕುಲೀನರು, ಏಕಸ್ವಾಮ್ಯ ಹೊಂದಿದ್ದವರು, ವಿದೇಶಗಳಲ್ಲಿ ಉಪಟಳ ಉಂಟುಮಾಡಿದ ಮಹಾಸಚಿವರು, ಇಂತಹವರು ಹುಚ್ಚೆದ್ದು ರಭಸದಿಂದ ಆಳ್ವಿಕೆಗಳನ್ನು ನಡೆಸಿದ ಕಾಲದ ಹೆಗ್ಗಳಿಕೆಗಳಿಂದಲ್ಲ ನಮಗೆ ಭರವಸೆ ಮೂಡುವುದು. ಅವರೆಲ್ಲಾ ಮಾಡಿದ್ದು ನಮ್ಮ ಕಣ್ಣಮುಂದಿದೆ: ಅವರ ಪಾಲಿಗೆ ಬಂದ ಕಾಲದಲ್ಲಿ ಸಾಮಾಜಿಕ ನಿಷ್ಫಲತೆ ಕಣ್ಣಿಗೆ ರಾಚುವಂತಿದೆ; ಇನ್ನೆಲ್ಲಿ ವಿಸ್ಮೃತಿಗೆ ಸರಿಯುತ್ತೇವೋ ಎಂಬ ಆತಂಕದ ಬಾಧೆಯನ್ನೆದುರಿಸುವುದರಲ್ಲೇ ಅವರ ಕಾಲ ಕಳೆದು ಹೋಯಿತು. ಮಾನವ ನಾಗರಿಕತೆಯು ಪ್ರವರ್ಧಮಾನಕ್ಕೆ ಬರಲು ಅಪ್ರಜ್ಞಾಪೂರ್ವಕವಾಗಿ ಅವರು ಸಹ ಅಲ್ಪಸ್ವಲ್ಪ ಕಾಣಿಕೆಗಳನ್ನು ನೀಡಿದ್ದಾರೆ; ಆದರೆ ಮೂಲತಃ ತಮ್ಮ ಸ್ವಂತದ ಸುಖವನ್ನು ಪಡೆದುಕೊಳ್ಳುವುದರಲ್ಲಿ ಸಾಂದರ್ಭಿಕವಾಗಿ ನಡೆದದ್ದು ಅದು.

ಇದಕ್ಕೆ ಪ್ರತಿಯಾಗಿ, ಇಂದಿನ ಭರವಸೆ ಮೂಡುವುದು ತುಳಿತಕ್ಕೆ ಸಿಲುಕಿದ್ದ ಮತ್ತು ಸಿಲುಕಿರುವ ವರ್ಗಗಳಿಂದ ಹಾಗೂ ಜನಸಮುದಾಯಗಳಿಂದ. ಅಂಥವರು ಮಾನವ ಜನಾಂಗಕ್ಕೆ ಕೊಟ್ಟ ನಾಯಕರ ಸಾಧನೆಗಳು ಅಪಾರ. ಇತ್ತೀಚಿನ ನಾಝಿಗಳ ಪತನವು ಅದಕ್ಕೊಂದು ಸಾಕ್ಷಿ. ಮಾನವನ ಭವಿಷ್ಯವು ನಾಝಿ ತತ್ವದ ಮೂಸೆಯಲ್ಲಿಲ್ಲ, ಅದಿರುವುದು ನಾಝಿಗಳನ್ನೆದುರಿಸಿದ ಜನರ ತತ್ವಗಳಲ್ಲಿ ಎಂಬುದು ಸಾಬೀತಾಗಿಹೋಗಿದೆ. ನಾಝಿಗಳ ಉಪದ್ರವಗಳಿಂದ ತತ್ತರಿಸಿಹೋದವರ ಮತ್ತು ನಾಝಿಗಳು ತಮ್ಮ ಅಧೀನಕ್ಕೆ ಇನ್ನೂ ಗುರಿಪಡಿಸಿಕೊಳ್ಳಬೇಕೆಂದಿದ್ದ ಜನಸ್ತೋಮ, ಅವರ ಇಂದಿನ ಭವಿಷ್ಯವನ್ನು ರೂಪಿಸುವವರಿದ್ದಾರೆ. ಅಂದರೆ, ಸಾಮ್ರಾಜ್ಯಗಳನ್ನು ಕಟ್ಟಬೇಕೆಂಬ ಹಂಬಲ ಉಳ್ಳವರು ಮುಂದಿನ ಭವಿಷ್ಯವನ್ನು ರೂಪಿಸಲಾರರು; ಬದಲಾಗಿ, ಅದನ್ನು ರೂಪಿಸುವ ಜನಸಮುದಾಯವು ಸಾಮ್ರಾಜ್ಯಗಳನ್ನು ಕಟ್ಟುವುದಕ್ಕೆ ಪ್ರತಿರೋಧ ಒಡ್ಡುವಂಥದು. ಒಮ್ಮೆ ಸ್ವಾತಂತ್ರ್ಯವನ್ನು ಸವಿದಿರುವ ಆ ಜನ ಇಡೀ ವಿಶ್ವವನ್ನು ಸ್ವಾತಂತ್ರ್ಯದತ್ತ ಕೊಂಡೊಯ್ಯುತ್ತಾರೆ; ಅವರು ನಿರ್ಮಾಣ ಮಾಡುವ ಸಮಾನತೆ ಮತ್ತು ಭ್ರಾತೃತ್ವವು ನಮ್ಮನ್ನೆಲ್ಲಾ ಒಂದಾಗಿಸುತ್ತದೆ.

ಈಗೊಮ್ಮೆ ಹಿಂದಕ್ಕೆ ತಿರುಗಿ ನೋಡಿ: ಕೆಲವು ಜನಾಂಗಗಳು "ಸಹಜವಾಗಿಯೇ ಕೀಳುಮಟ್ಟದವು" ಎಂಬ ಮಾತಿನ ಹಿಂದಿನ ಅಗಾಧ ಕುಹಕ ಮತ್ತು ಮೋಸ ಏಷ್ಟು ಢಾಳಾಗಿ ಕಾಣುತ್ತದಲ್ಲವೆ? "ಸಹಜವಾಗಿಯೇ ಕೀಳು" ಎಂಬ ನಂಬಿಕೆಯು ಕೀಳೆನ್ನಲಾದವರಿಂದ ಕಲಿಯಬಹುದಾದ್ದನ್ನು ನಮಗೆ ತಪ್ಪಿಸಿಬಿಡುತ್ತದೆ. ಇದರಲ್ಲಿ ಒಂದು ಅಪಾಯವಿದೆ: ಯಾರಿಂದ ನಾವು ಕಲಿಯಬಹುದಾದ್ದೇನೂ ಇಲ್ಲವೆಂದು ಬಗೆಯುತ್ತೇವೋ ಅವರು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವೆಂಬ ಮೌಲ್ಯಗಳನ್ನು

ಸಾಕಾರಗೊಳಿಸುವತ್ತ ಮುನ್ನಡೆಯುತ್ತಾರೆ ಮತ್ತು ನಾವು ಆದರ್ಶಗಳ ಬಗೆಗೆ ಹತಾಶೆಯ ಭಾವವನ್ನು ತುಂಬಿಕೊಡು ಕುಳಿತಿರುತ್ತೇವೆ. ತಮ್ಮ ಅಪ್ರತಿಮ ಹೋರಾಟಗಳಿಂದ ಅವರು ಹೊಸತನ್ನು ಕಲಿಯುತ್ತಾರೆ, ಹೆಚ್ಚಿನ ಪ್ರಮಾಣದಲ್ಲಿ ಸತ್ಯವನ್ನು ಕಂಡುಕೊಳ್ಳುತ್ತಾರೆ; ನಾವು ನಮ್ಮ ಭ್ರಮೆಗಳ ಕೂಪದಲ್ಲಿ ಹೆಚ್ಚುಹೆಚ್ಚು ಮುಳುಗಿಹೋಗುತ್ತೇವೆ. ಭ್ರಮೆಗಳಲ್ಲೆಲ್ಲಾ ಅತ್ಯಂತ ಸಾಂದ್ರವಾದ್ದು ಮತ್ತು ಅಶಕ್ತತೆಯನ್ನುಂಟುಮಾಡುವಂಥದು ಹತಾಶೆಯೇ ಅಲ್ಲವೆ?

ಹದಿನಾರನೆಯ ಶತಮಾನದಲ್ಲಿ ಇಂದಿನ ದಕ್ಷಿಣ ಅಮೆರಿಕಾದ ಒಂದು ಭಾಗದಲ್ಲಿ ಅರೌಕ ಎಂಬ ಇಂಡಿಯನ್ನರ ಪಂಗಡವೊಂದಿದ್ದಿತು. ಅದೊಂದು ಬುಡಕಟ್ಟು ಜನಾಂಗ. ಈಗೀಗ ಅದು ಸ್ಮೃತಿಯಲ್ಲಿ ಉಳಿದಿರುವುದೇ ಅಪರೂಪ. ಸ್ಪೇನಿನ ಆಕ್ರಮಣಕಾರರು ಅವರನ್ನು ಬಗ್ಗುಬಡಿಯಲು ಹೋದಾಗ ಅತ್ಯಂತ ವೀರೋಚಿತವಾದ ಪ್ರತಿರೋಧವನ್ನವರು ಒಡ್ಡಿದ್ದರು. ಅವರ ನಾಯಕನೊಬ್ಬ ಸ್ಪೇನಿನ ಆಕ್ರಮಣಕಾರರಿಗೆ ಸೆರೆಸಿಕ್ಕಿದ. ಸೆಣಸಲು ಪೂರ್ತಿ ಅಸಮರ್ಥನನ್ನಾಗಿಸುವ ಉದ್ದೇಶದಿಂದ ಆಕ್ರಮಣಕಾರರು ಅವನ ಕೈಗಳನ್ನು ಕತ್ತರಿಸಿಹಾಕಿದರು. ಅಂತಹ ಭೀಕರ 'ನಾಗರಿಕ'ರಾಗಿದ್ದರು ಸ್ಪೇನಿನ ವಸಾಹತು ಆಡಳಿತಗಾರರು. ಆ ಸ್ಥಿತಿಯಲ್ಲಿ ಅರೌಕಾದ ವ್ಯಕ್ತಿ ತನ್ನ ಪಂಗಡದವರನ್ನು ಸೇರಿಕೊಂಡ. ಸ್ಪೇನಿನ ಆಕ್ರಮಣಕಾರರು ಅವನ ಅಂಗಗಳನ್ನೇಕೆ ಕತ್ತರಿಸಿದ್ದರೆಂಬುದನ್ನು ಅವನ ಜನಗಳಿಗೆ ತಿಳಿಹೇಳಿದ: "ಭಯ, ನಡುಗಿಸುವ ಭಯ, ಅವರನ್ನು ಅಂತಹ ಘೋರ ಕ್ರೌರ್ಯದತ್ತ ದೂಡಿತು. ಹೇಡಿತನದ ಜೊತೆಯಲ್ಲೇ ಭಯಂಕರವಾದ ಭಯವು ಸದಾ ಇರುತ್ತದೆ," ಎಂದವನು ಹೇಳಿದ. ರಿಚರ್ಡ್ ಹಾಕಿನ್ಸ್ ಎಂಬುವನು ಅದನ್ನು ದಾಖಲಿಸಿದ್ದಾನೆಂದು ಜೆ.ಎ. ಫ್ರೂದ್ ತನ್ನೊಂದು ಗ್ರಂಥದಲ್ಲಿ ನಮೂದಿಸಿದ್ದಾನೆ. ಆ ಗ್ರಂಥದ ಹೆಸರು "ಅದ್ಭುತ ಸಂಗತಿಗಳ ಕಿರು ಅಧ್ಯಯನಗಳು" ಎಂದು. ಹಾಕಿನ್ಸ್ ದಾಖಲಿಸಿರುವುದು ಹೀಗಿದೆ:

"ಜೀವಗಳು, ಅಂಗಾಂಗಗಳು ಮತ್ತು ಸ್ವಾಂತಂತ್ರ್ಯ, ಇವನ್ನು ರಕ್ಷಿಸಿಕೊಳ್ಳಲು ಅವನ ಜನರನ್ನು ಪ್ರೋತ್ಸಾಹಿಸಿದ, ಅದಕ್ಕಾಗಿ ಹೋರಾಡಿರೆಂದು ಹುರಿದುಂಬಿಸಿದ. ಹೋರಾಡುತ್ತಾ ಗೌರವಯುತವಾಗಿ ಮಡಿಯುವುದು ಸಮುದಾಯದ ಅಪ್ರಯೋಜಕ ಸದಸ್ಯನಾಗಿ ಬಾಳುವುದಕ್ಕಿಂತಲೂ ಮೇಲು, ದಾಸ್ಯದ ಜೀವನಕ್ಕಿಂತಲೂ ಶ್ರೇಷ್ಠ ಎಂದು ಹೇಳಿದ. ತುಂಡರಿಸಲ್ಪಟ್ಟಿದ್ದ ಅವನ ಕೈಗಳ ಮೇಲೆ ಬಾಣಗಳ ಕಂತೆಗಳನ್ನಿರಿಸಿಕೊಂಡು, ಬೇರೊಬ್ಬ ಬಿಲ್ಲುವಿದ್ಯೆ ಪಾರಂಗತನ ಜೊತೆ ರಣರಂಗವನ್ನು ಹೊಕ್ಕ, ಶತ್ರು ಪಾಳೆಯದ ಮೇಲೆ ಬಾಣಗಳನ್ನು ಸುರಿಸಲು ಅನುವಾದ, ಆ ಪಾಳೆಯದಲ್ಲಿ ಶೇಖರಿಸಲ್ಪಟ್ಟಿದ್ದ ಆಯುಧಗಳನ್ನು ನಾಶಗೈಯ್ಯುವುದರಲ್ಲಿ ಪಾಲ್ಗೊಂಡ. ತನ್ನ ಬುಡಕಟ್ಟಿನವರು ಸೆಣಸುತ್ತಿದ್ದಲ್ಲೆಲ್ಲಾ ಮಿಂಚಿನಂತೆ ಸಂಚರಿಸಿದ, ಅವರನ್ನು ಅಸೀಮಿತವಾಗಿ ಉತ್ತೇಜಿಸಿದ, ಅವರಲ್ಲಿ ಜೀವ ತುಂಬಿದ. ಅವನ ಮಾತುಗಳು ಏಷ್ಟು ಸಮ್ಮೋಹಕವಾಗಿ ಪ್ರೇರಣೆ ನೀಡಿದುವೆಂದರೆ ಅವನೊಬ್ಬ ದಂತಕತೆಯಾದ. ಅವನನ್ನು ಕುರಿತು ಹೇಳುತ್ತಾರೆ ಮತ್ತದನ್ನು ಜನ ನಂಬಿದ್ದಾರೆ: ಏನೆಂದರೆ, ಕೈಗಳಿಲ್ಲದ ಅವನ ಉಪಸ್ಥಿತಿ ಮತ್ತು ಮಾತುಗಳು ಅದ್ಭುತವಾಗಿದ್ದವು; ಒಂದೇ ಒಂದು ಬಾಣವನ್ನು ಸಹ ಹೂಡಲು ಅವನಿಂದಾಗುತ್ತಿರಲಿಲ್ಲವಾದರೂ ತನ್ನ ಬುಡಕಟ್ಟಿನ ಸೈನ್ಯದ ಪರಾಕ್ರಮಕ್ಕೆ ಅವನೇ ಮೂಲ ಕಾರಣನಾದ, ಎಂದು."

ಇಪ್ಪತ್ತನೆಯ ಶತಮಾನದಲ್ಲಿ ಇಂತಹ ವೀರಾವೇಶದ ಮಾತುಗಳನ್ನು ಅನುರಣಿಸಲಾದ್ದು ನೆನಪಿದೆಯಲ್ಲವೆ? ಜನಾಂಗೀಯ ಶ್ರೇಷ್ಠತೆಯ ಬಾಲಿಶ ಮಾತುಗಳನ್ನಾಡುತ್ತಿದ್ದ ಫ್ಯಾಸಿಸ್ಟರು ಅಂತಹ ದಿಟ್ಟತನದ ಹೋರಾಟವನ್ನು "ಕೀಳು ಜನಾಂಗದವರ ಮದ್ದಿಲ್ಲದ ದಂಗೆಕೋರತನ" ಎಂದು ಜರಿದರು. ಆದರೆ ಅಂದಿನ ಹೋರಾಟಗಳಿಂದ ಕಲಿಯಬಹುದಾದ್ದು ಅಪಾರವಾಗಿದೆ.

"ಭೀಕರ ಭಯವು ಘೋರ ಕ್ರೌರ್ಯದ ಉಗಮಸ್ಥಾನ, ಅದು ಹೇಡಿತನದ ಸಹಚರ." ಫ್ಯಾಸಿಸ್ಟರ ಅನಾಗರಿಕ ದೌರ್ಜನ್ಯದ ಗುಟ್ಟು ಇದೇ. ಪ್ರಪಂಚದ ನಾನಾಭಾಗಗಳಲ್ಲಿ ಇಂದಿಗೂ ಗೋಚರಿಸುವ ಅಂಥವೇ ವಿಪತ್ಕಾರಿ ಘಟನೆಗಳ ಗುಟ್ಟು ಸಹ ಇದೇ. ವಿನಾಶದ ಹಾದಿಯಲ್ಲಿರುವ ನಿರಂಕುಶ ಆಡಳಿತಗಳು ಹರಡುವ ಸಾಂಕ್ರಾಮಿಕ ರೋಗವೇ ಕ್ರೌರ್ಯ. ಆ ಆಡಳಿತಗಳು ದೊಡ್ಡವಿರಲಿ, ಚಿಕ್ಕವಿರಲಿ, ರೋಗ ಮಾತ್ರ ಅದೇ. ತನ್ನ ವಿನಾಶದೊಂದಿಗೆ ಸರ್ವಸ್ವವೂ ವಿನಾಶವಾಗಬೇಕೆಂಬುದು ಅದರ ನೀತಿ! ಅಧಿಕಾರವು ಕೈತಪ್ಪಿಹೋಗುತ್ತದೆಂಬ ಭೀತಿಯು ಕ್ರೌರ್ಯಕ್ಕೆ ಹಾದಿ ಮಾಡಿಕೊಡುತ್ತದೆ. ಕ್ರೌರ್ಯದ ಜೊತೆ ಹೇಡಿತನ ಯಾವಾಗಲೂ ಸಹಚರ. ಆ ಹೇಡಿತನಕ್ಕೆ ಕಾರಣ ಇಂದಿಗಿಂತಲೂ ಉತ್ತಮವಾದ ವಿಶ್ವದೆದುರು ಕಂಪಿಸುವುದು. ಹಳೆಯ ಜಾಡನ್ನು ಕ್ರೌರ್ಯದಿಂದ ಸಂರಕ್ಷಿಸಿಕೊಳ್ಳಲು ಮುಂದಾಗುವವರಿಗೆ ಹೊಸ ಜಾಡನ್ನು ತುಳಿಯಲು ಎಲ್ಲಿಲ್ಲದ ಆತಂಕ.

ನಮಗಾದರೋ ಭೀತಿಯಿಂದ ಕಂಗಾಲಾಗುವ ಪ್ರಶ್ನೆಯೇ ಇಲ್ಲ. ಭಯವೇನಾದರೂ ಇದ್ದರೆ ಅದು ಹಳೆಯ ಜಾಡಿಗೆ, ಅಸಹನೆಗಳಿಗೆ ಮತ್ತು ತಿಳಿಗೇಡಿತನದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ್ದು. ನಮ್ಮ ದೃಷ್ಟಿಯನ್ನು ಮಂದಗೊಳಿಸಬಹುದಾದ ಹಳೆಯ ಐತಿಹ್ಯಗಳ ಬಗ್ಗೆ ನಾವು ಎಚ್ಚರದಿಂದಿರಬೇಕು, ಅಷ್ಟೆ. ಭವಿಷ್ಯಕ್ಕಾಗಿ ಯಾವ ಅಳುಕೂ ಇಲ್ಲದೆ ನಮ್ಮನ್ನು ನಾವು ರೂಪಿಸಿಕೊಳ್ಳಬೇಕು, ನಮ್ಮ ಆಶಯಗಳ ಪೂರೈಕೆ ಆ ಭವಿಷ್ಯದಲ್ಲಿದೆಯೆಂಬುದನ್ನು ಯಾವ ಸಂಕೋಚವೂ ಇಲ್ಲದೆ ಒಪ್ಪಿಕೊಳ್ಳಬೇಕು. ಇಂದು ಭೂಮಿಯಲ್ಲಿ ಆಳ್ವಿಕೆ ನಡೆಸುತ್ತಿರುವವರನ್ನು ಶಾಂತಿ ಮತ್ತು ಸೋದರತ್ವಗಳತ್ತ ಒಲಿಸಿಕೊಳ್ಳಲು ಸಾಧ್ಯವಾಗುವುದಾದರೆ ನಮ್ಮೆಲ್ಲ ಯತ್ನಗಳನ್ನು ಅದಕ್ಕಾಗಿ ಮುಡಿಪಾಗಿಡೋಣ. ಆದರೆ ನಮಗೆ ಅವರ ಬಳುವಳಿ ಕೇವಲ ಕಣ್ಣೀರೇ ಆಗುವುದಾದರೆ ನಾವು, ಅದರಂತೆ ವಿಶ್ವದ ಮಹಾಜನತೆ, ವಿಶ್ವವನ್ನು ನಮ್ಮದಾಗಿಸಿಕೊಂಡು ಅದಕ್ಕೆ ನಮ್ಮ ಆಶಯದಂತೆ ರೂಪು ಕೊಡೋಣ. ಈ ಎರಡು ಹಾದಿಗಳಲ್ಲಿ ಯಾವುದರ ಆಯ್ಕೆ ಮಾಡಿಕೊಂಡರೂ ನಾವು ಸುರಕ್ಷಿತತೆಯ ಸನ್ನಿವೇಶಕ್ಕೆ ಹತ್ತಿರವಾಗುತ್ತಾ ಸಾಗುತ್ತೇವೆ. ಮಾನವ ತನ್ನ ಇಡೀ ಸಾಮಾಜಿಕ ಗುರಿಯನ್ನು ಸಾಮೂಹಿಕ ಸಮಾನತೆಯಿಂದ ತನ್ನದಾಗಿಸಿಕೊಳ್ಳುತ್ತಾನೆ. ನಮ್ಮೆಲ್ಲ ಧೀಮಂತಿಕೆ ಮತ್ತು ಕ್ರಿಯಾಶಕ್ತಿ ಅಸಮಾನ ಸೌಲಭ್ಯಗಳು ಒಡ್ಡುವ ಅಡೆತಡೆಗಳನ್ನು ಭೇದಿಸಲು ಪ್ರಯೋಗವಾಗುತ್ತವೆ ಮತ್ತು ಬಹುಕಾಲ ಬಾಳುವಂತಹ ಭ್ರಾತೃತ್ವದ ಸಮಾಜದಲ್ಲಿ ನಾವು ಒಂದಾಗುತ್ತೇವೆ.

ಇಂದಿನ ಸಂದರ್ಭದಲ್ಲಿ ಹೋರಾಟವು ತೀವ್ರಗೊಳ್ಳುತ್ತಿದೆ, ಏಕೆಂದರೆ ಕೆಡುಕು ಜೀವಂತವಾಗಿದೆ ಮತ್ತು ಒಳಿತಿನ ಏಳಿಗೆಯ ಕಾಲವಿನ್ನೂ ಸಂದಿಲ್ಲ. ಆದ್ದರಿಂದ ನಮ್ಮಲ್ಲಿರುವ ಶಕ್ತಿಯನ್ನೆಲ್ಲಾ ಏಕೀಭವಿಸೋಣ, ನಮ್ಮ ಭರವಸೆ ಮತ್ತು ಧೈರ್ಯವನ್ನು ಪ್ರದರ್ಶಿಸೋಣ. ನಮ್ಮ ಅಂದಂದಿನ ಚಿಕ್ಕಪುಟ್ಟ ಗೆಲುವುಗಳು ಅಂತಿಮ ವಿಕ್ರಮದಲ್ಲಿ ಕೊನೆಗೊಳ್ಳುತ್ತವೆ; ನಾವು ನಿರೀಕ್ಷಿಸುತ್ತಿರುವ ವಿಶ್ವವು ನಮ್ಮ ತೆಕ್ಕೆಗೆ ಬರುತ್ತದೆ. ❑❑

ಡಾ॥ ಜಿ. ರಾಮಕೃಷ್ಣ ಅವರ ಬೇರೆ ಕೆಲವು ಕೃತಿಗಳು

1. ಋಗ್ವೇದ ಪ್ರವೇಶಿಕೆ – ಐತಿಹ್ಯ ಮತ್ತು ವಾಸ್ತವ
2. ಮುನ್ನೋಟ (2 ಮುದ್ರಣಗಳು)
3. ಆಯತನ
4. ಭಗತ್ ಸಿಂಗ್ (14 ಮುದ್ರಣಗಳು)
5. ಭಾರತೀಯ ವಿಜ್ಞಾನದ ಹಾದಿ (3 ಮುದ್ರಣಗಳು)
6. ವೈಚಾರಿಕ ಜಾಗೃತಿ (3 ಮುದ್ರಣಗಳು)
7. ಫ್ರೆಡರಿಕ್ ಏಂಗೆಲ್ಸ್
8. ಎಂದಿಗೂ ಸಲ್ಲುವ ಮಾರ್ಕ್ಸ್
9. ಯುಗದರಿವು
10. ನುಡಿಬಿಂಬ
11. ದೇವಿಪ್ರಸಾದ್ ಮತ್ತು ಲೋಕಾಯತ ದರ್ಶನ
12. ಯೋಗಪ್ರವೇಶ (5 ಮುದ್ರಣಗಳು)
13. ಯುಗಪುರುಷ ಲೆನಿನ್
14. ಚೆ ಗೆವಾರ
15. ಭೂಪೇಶ್ ಗುಪ್ತ
16. ಹಿಂದುತ್ವದ ಹಿಂದೆ – ಮುಂದೆ
17. The Living Marx
18. Philosophy in China
19. The Gorbachev Phenomenon
20. The Strange Culture of M. S. Golwalkar

ಅನುವಾದಗಳು

21. ಚೀಣಾದಲ್ಲಿ ತತ್ತ್ವಶಾಸ್ತ್ರ (ಡಾ॥ ಜಿ. ರಾಮಕೃಷ್ಣ)
22. ಲೋಕಾಯತ (ದೇವಿಪ್ರಸಾದ್ ಚಟ್ಟೋಪಾಧ್ಯಾಯ)
23. ದರ್ಶನ (ದೇವಿಪ್ರಸಾದ್ ಚಟ್ಟೋಪಾಧ್ಯಾಯ)
24. ಕೂಲಿ ಕೆಲಸ ಮತ್ತು ಬಂಡವಾಳ (ಮಾರ್ಕ್ಸ್)
25. ವಾನರನಿಂದ ಮಾನವನವರೆಗೆ (ಏಂಗೆಲ್ಸ್)
26. ಬಾ ನೊಣವೆ ಬಾ ನೊಣವೆ (ವಿಲ್‌ಹೆಲ್ಮ್ ಲೀಬ್‌ನೆಕ್ಟ್)

ಸಂಪಾದಿತ ಕೃತಿಗಳು


27. An Encyclopaedia of South Indian Culture (with Debiprasad Chattopadhyaya and N. Gayathri)
28. Studies in Indian Culture
29. Towards a Redefintion of the Eduation Policy
30. Vision and Wisdom
31. Mahatma Gandhi's Message to the Indian Youth
32. ವೈಜ್ಞಾನಿಕ ಮನೋಭಾವ
33. Some Thoughts on Marxism (with Dr. Sanjay Biswas)
34. Musings in Ideology (with Dr. Sanjay Biswas)
35. ಸುವರ್ಣ ಸ್ವಾತಂತ್ರ್ಯ ಮಾಲಿಕೆ (14 ಪುಸ್ತಕಗಳು)

ಮಾ - ಲೆ ಪ್ರಕಾಶನದ ಕೆಲವು ಪುಸ್ತಕಗಳು

1. **ಮುನ್ನೋಟ** *- ಡಾ॥ ಜಿ. ರಾಮಕೃಷ್ಣ*
2. **ಆಯತನ** *- ಡಾ। ಜಿ. ರಾಮಕೃಷ್ಣ*
3. **ಭಗತ್ ಸಿಂಗ್** *- ಡಾ॥ ಜಿ. ರಾಮಕೃಷ್ಣ*
4. **ಸಂಚಲ** *- ಡಾ॥ ಎನ್. ಗಾಯತ್ರಿ*
5. **ಮತಧರ್ಮ ಒಂದು ಪ್ರಬಂಧ** *- ಜಾರ್ಜ್ ಥಾಮ್ಸನ್*
   (ಅನು: ಪ್ರೊ॥ ಎಚ್. ಕೆ. ರಾಮಚಂದ್ರ ಮೂರ್ತಿ)
6. **ಚಿಂತಕರು ಮತ್ತು ಖಜಾಂಚಿಗಳು** *- ಬ್ಯಾರೋಸ್ ಡನ್‌ಹ್ಯಾಮ್*
   (ಅನು: ಪ್ರೊ॥ ಎಚ್. ಕೆ. ರಾಮಚಂದ್ರ ಮೂರ್ತಿ)
7. **ದೇವಿಪ್ರಸಾದ ಚಟ್ಟೋಪಾಧ್ಯಾಯ : ಒಂದು ಕಿರು ಪರಿಚಯ**
   - ಡಾ॥ ರಾಮಕೃಷ್ಣ ಭಟ್ಟಾಚಾರ್ಯ ಮತ್ತು ಡಾ॥ ಜಿ. ರಾಮಕೃಷ್ಣ
8. **ಬಾ ನೊಣವೆ ಬಾ ನೊಣವೆ ಬಾ ನನ್ನ ಮನೆಗೆ**
   - ವಿಲ್ಹೆಲ್ಮ್ ಲೀಬ್ನೆಕ್ಟ್ (ಅನು: ಎ. ಉಷಾ ಮತ್ತು ಜಿ. ರಾಮಕೃಷ್ಣ)
9. **ನಾನು ಸಾಯಲೂ ಸಿದ್ಧ**
   - ನೆಲ್ಸನ್ ಮಂಡೇಲಾ (ಅನು. ನಾ. ದಿವಾಕರ)
10. **The Living Marx** *- Dr. G. Ramakrishna*
11. **Religion and Society** *- Debiprasad Chattopadhyaya*
12. **Why Read Marx Now** *- Dr. N. Jayaram*
13. **Some Thoughts on Marxism** *– Debiprasad Chattopadhyaya*
    (Ed. Dr. G. Ramakrishna & Dr. Sanjay Biswas)
14. **The Importance of Value** *- Dr. K.K. Theckedath*
15. **The Gorbachev Phenomenon** *- Dr. G. Ramakrishna*
16. **The Struggle against Khoti** *-Chandrakant Adhikari*
    (Translation : Shriprakash Adhikari)

ಡನ್‌ಹ್ಯಾಮ್‌ರೊಡನೆ
ಜಿ. ಆರ್. – ಐನ್‌ಸ್ಟೈನ್‌ರ
ಒಕ್ಕಣೆಯನ್ನು
ಓದುತ್ತಿರುವುದು

ಛಾಯಾಗ್ರಾಹಕ :
ರೇಮಂಡ್



ಬ್ಯಾರೋಸ್ ಡನ್‌ಹ್ಯಾಮ್ (1905–1995) ಅಮೆರಿಕಾದ ಪ್ರಸಿದ್ಧ ತತ್ತ್ವಶಾಸ್ತ್ರಜ್ಞ ಮತ್ತು ಲೇಖಕ. ಮೆಕಾರ್ತಿ ಉಪಟಳದಿಂದಾಗಿ ಟೆಂಪಲ್ ವಿಶ್ವವಿದ್ಯಾನಿಲಯದಿಂದ ಹೊರದೂಡಲ್ಪಟ್ಟಿದ್ದ ಡನ್‌ಹ್ಯಾಮ್ 28 ವರ್ಷಗಳ ಕಾಲ ಗ್ರಂಥರಚನೆ ಮತ್ತು ಉಪನ್ಯಾಸಗಳಿಂದ ಜೀವನ ಸಾಗಿಸಿದ್ದು, ಮತ್ತೆ ಟೆಂಪಲ್‌ನಲ್ಲಿ ಮರುನೇಮಕಗೊಂಡವರು. ಪ್ರಸ್ತುತ ಗ್ರಂಥಕ್ಕೆ ಬೆನ್ನುಡಿ ಬರೆದುಕೊಡಬೇಕೆಂದು ತನ್ನ ಸ್ನೇಹಿತ ಆಲ್ಬರ್ಟ್ ಐನ್‌ಸ್ಟೈನ್‌ರನ್ನು ಕೇಳಿದಾಗ ಅವರೆಂದರು, 'ನಿಮ್ಮ ಹಸ್ತಪ್ರತಿಯಲ್ಲಿ ಒಂದು ಸಂಗತಿ ತಪ್ಪಾಗಿ ನಮೂದಾಗಿದೆ ಯಾದ್ದರಿಂದ ಬೆನ್ನುಡಿ ಬರೆಯಲಾರೆ' ಎಂದು. ಅಷ್ಟು ನಿಷ್ಕೃಷ್ಟವಾದ ಬರವಣಿಗೆ ಡನ್‌ಹ್ಯಾಮ್‌ದು. ಆ ನಂತರ ಒಂದು ತಿದ್ದುಪಡಿ ಮಾಡಿಕೊಟ್ಟ ಮೇಲೆ ಐನ್‌ಸ್ಟೈನ್ ಬರೆದ ಬೆನ್ನುಡಿಯ ಒಂದು ಭಾಗ ಇದು : "ಬೋಧಪ್ರದವಾದ ಈ ಗ್ರಂಥವು ಮನೋಜ್ಞವಾಗಿದೆ; ಲೇಖಕ ಮಹಾಧೈರ್ಯಶಾಲಿ. ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಈ ಗ್ರಂಥವು ಯಶಸ್ವಿಯಾಗಬೇಕಾದ್ದು ಬಹಳ ಅವಶ್ಯಕ."

ನಮ್ಮ ಸಂದರ್ಭದಲ್ಲಿ ಸಹ ಐನ್‌ಸ್ಟೈನರ ಆಶಯದಂತೆ ಈ ಗ್ರಂಥಕ್ಕೆ ಮಹತ್ವವಿದೆ. ಮಿಥ್ಯೆಗಳ ಮಹಾ ಪ್ರವಾಹವೇ ಮನಸ್ಸುಗಳನ್ನು ಆಕ್ರಮಿಸುತ್ತಿರುವಾಗ ಬೌದ್ಧಿಕ ಮತ್ತು ಕ್ರಿಯಾತ್ಮಕ ತಡೆಗೋಡೆಗಳ ಅವಶ್ಯಕತೆ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಐನ್‌ಸ್ಟೈನ್, ಚಾರ್ಲಿ ಚಾಪ್ಲಿನ್, ಪಾಲ್ ರೋಬ್ಸನ್, ಕ್ವಾಮೆ ಎನ್‌ಕ್ರುಮಾ, ಸೀನ್ ಓ ಕೇಸಿ, ಮುಂತಾದ ಶ್ರೇಷ್ಠರ ಆತ್ಮೀಯರಾಗಿದ್ದ ಡನ್‌ಹ್ಯಾಮ್ 1947ರಲ್ಲಿ ಮೊದಲಿಗೆ ಪ್ರಕಟವಾದ ಈ ಗ್ರಂಥದಿಂದಾಗಿಯೇ ಬಹುಶಃ ಮೆಕಾರ್ತಿ ಕೆಂಗಣ್ಣಿಗೆ ಬಿದ್ದು ತಲೆಬೇಟೆಗೆ ಗುರಿಯಾದದ್ದು. ಮಿಥ್ಯೆಗಳ ತರಗೆಲೆಗಳನ್ನು ಗುಡಿಸಿಹಾಕಿ ಸಮುದಾಯದ ಸಮಾನ ಸಂಸ್ಕೃತಿಯತ್ತ ಹೆಜ್ಜೆ ಹಾಕಲು ಇನ್ನು ನಾವು ಸಮಯ ವ್ಯರ್ಥಮಾಡುವಂತಿಲ್ಲ. ಆ ದಿಕ್ಕಿನಲ್ಲಿ ಅಮೆರಿಕಾದ ಚಿಂತಕ ಮತ್ತು ಕಮ್ಯುನಿಸ್ಟ್ ಕಾರ್ಯಕರ್ತ ಡನ್‌ಹ್ಯಾಮ್ ನಮ್ಮನ್ನು ಆಳವಾದ ಮತ್ತು ಗಂಭೀರವಾದ ಅವಲೋಕನೆಗಳಿಗೆ ಪ್ರೇರೇಪಿಸುತ್ತಾರೆ.

* * *

ಡನ್‌ಹ್ಯಾಮ್‌ರನ್ನು 1994ರಲ್ಲಿ ಭೇಟಿಯಾಗಿದ್ದ ಡಾ॥ ಜಿ. ರಾಮಕೃಷ್ಣ ನಿವೃತ್ತ ಕಾಲೇಜು ಅಧ್ಯಾಪಕರು ಮತ್ತು ಹತ್ತಾರು ಗ್ರಂಥಗಳ ಕರ್ತೃ. ದೇವಿಪ್ರಸಾದ ಚಟ್ಟೋಪಾಧ್ಯಾಯರ 'ಲೋಕಾಯತ'ದ ಅನುವಾದಕ ಹಾಗೂ ಅವರು ಸಂಪಾದಿಸಿದ್ದ 'ಲೋಕ ತತ್ತ್ವಶಾಸ್ತ್ರ ಪ್ರವೇಶಿಕೆ'ಯ ಎಂಟು ಕನ್ನಡ ಸಂಪುಟಗಳ ಸಂಪಾದಕರಾದ ಜಿ. ಆರ್. 'ಋಗ್ವೇದ ಪ್ರವೇಶಿಕೆ : ಐತಿಹ್ಯ ಮತ್ತು ವಾಸ್ತವ' ಎಂಬ ಗ್ರಂಥದ ಲೇಖಕ. ಅವರ 'ಭಾರತೀಯ ವಿಜ್ಞಾನದ ಹಾದಿ', 'ಮುನ್ನೋಟ' ಮತ್ತು 'ಆಯತನ' ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದಿವೆ; 'ಭಗತ್‌ಸಿಂಗ್' (ಜೀವನ ಚರಿತ್ರೆ) ಹದಿನಾಲ್ಕು ಮುದ್ರಣಗಳನ್ನು ಕಂಡಿದೆ.

ಬೆಲೆ : ₹ 160